ಆದಿಲಶಾಹಿ ಸಾಹಿತ್ಯ ಸಂಪುಟ : ೧೬

ನೂರುಲ್ಲಾ ಇಬ್ನ ಕಾಜೀ ಸಯ್ಯದ ಅಲಿ ಮುಹಮ್ಮದ ಹುಸೇನಿ
ವಿರಚಿತ

ತಾರೀಖೆ ಅಲಿ ಆದಿಲಶಾಹ

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೧೬

ನೂರುಲ್ಲಾ ಇಬ್ನ ಕಾಜೀ ಸಯ್ಯದ ಅಲಿ ಮುಹಮ್ಮದ ಹುಸೇನಿ

ವಿರಚಿತ

ತಾರೀಖೆ ಅಲಿ ಆದಿಲಶಾಹ

ಆದಿಲಶಾಹಿ ಸಾಹಿತ್ಯ ಸಂಪುಟ : ೧೬

ನೂರುಲ್ಲಾ ಇಬ್ನ ಕಾಜೀ ಸಯ್ಯದ ಅಲಿ ಮುಹಮ್ಮದ ಹುಸೇನಿ
ವಿರಚಿತ

ತಾರೀಖೆ ಅಲಿ ಆದಿಲಶಾಹ

ಅನುವಾದಕರು
ಶ್ರೀಮತಿ ಬಾನು ಮುಷ್ತಾಕ್

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

TareeKh-e-Ali Adil Shah TareeKh-e-Ali Adil Shah Persian work by **Noorulla Ibn Quadri** Urdu Translation by : **Dr. Mir Murturja Alishah Quadri** Hyderabad. From Urdu to Kannada Translation by **Shrimati Banu Mustak**, Hasan.

Published by : Dr. P.G.Halakatti Research Centre, B.L.D.E. Association, Vijayapur, Karnataka

Edition : **2017**

Pages : **xxvi + 252 = 278**

Copies : **1000**

Price : **Rs. 200.00**

Typeset : **Dr. P. G. Halakatti Research Centre**, Vijayapur

Printed : **Print Point**, Bengaluru-40, Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ನೂರುಲ್ಲಾ ಇಬ್ನ ಕಾಜೀ ಸಯ್ಯದ ಅಲಿ ಮುಹಮ್ಮದ ಹುಸೇನಿ ವಿರಚಿತ ಪರ್ಶಿಯನ್ ಕೃತಿ ತಾರೀಖೆ ಅಲಿ ಆದಿಲಶಾಹ– ಉರ್ದು ಅನುವಾದ– ಡಾ. ಮೀರ ಮುರ್ತುಜ ಅಲಿಶಾಹ ಕಾದ್ರಿ ಹೈದರಬಾದ. ಉರ್ದುವಿನಿಂದ ಕನ್ನಡಕ್ಕೆ ಅನುವಾದ – **ಶ್ರೀಮತಿ ಬಾನು ಮುಷ್ತಾಕ**, ಹಾಸನ.

ಪ್ರಕಾಶಕರು : **ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ**, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಆವೃತ್ತಿ : **ಪ್ರಥಮ ೨೦೧೭**

ಪುಟಗಳು : **xxvi + ೨೫೨ = ೨೭೮**

ಪ್ರತಿಗಳು : ೧೦೦೦

ಬೆಲೆ : ರೂ. ೨೦೦.೦೦

ಡಿ.ಟಿ.ಪಿ. : **ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ**, ವಿಜಯಪುರ

ಮುದ್ರಣ : **ಪ್ರಿಂಟ್ ಪಾಯಿಂಟ್**, ಬೆಂಗಳೂರು–೪೦. ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

(ದಿನಾಂಕ : ೩೦–೮–೨೦೧೫ರ ವರೆಗೆ)

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ವಿಜಯಪುರ

ಸಹಾಯಕ ನಿರ್ದೇಶಕರು,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಯಪುರದ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು-ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಯಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ-ಸಮನ್ವಯದಿಂದ ೧೪೮೯-೧೬೮೬ರವರೆಗೆ ರಾಜ್ಯಭಾರ ಮಾಡಿದ ರಾಜಮನೆತನವಿದು. 'ದೀನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕ್ಬರ್‌ನಂತೆ 'ದಾದ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಷಹನು ಸಮನ್ವಯ ಸಮಾಜಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು-ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ-ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು

ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ-ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ. ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯದ ಖಣಿ, ಉರ್ದು-ಪರ್ಶಿಯನ್ ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಸೂತಕಗಳನ್ನು ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ-ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ-ನೆರವುಗಳಿಗೆ, ಈ ಯೋಜನೆಯ ಸಲಹಾ ಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು.ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿ ವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೋಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ-ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ-ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ-

ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮ ಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು.ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ.ಎಂ.ಎಸ್.ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿ ವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ.೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ಇಲ್ಲಿ ಆಳಿದ ೯ ಜನ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಗುಲ್ಶನೆ–ಇಬ್ರಾಹಿಮಿ ಇತಿಹಾಸದ ಕರ್ತೃ ಮಹಮ್ಮದ ಕಾಸಿಮ ಫರಿಸ್ತಾ, ಎರಡನೆಯ ಇಬ್ರಾಹಿಮ ಆದಿಲಶಹ (ಕ್ರಿ.ಶ. ೧೫೮೦–೧೬೨೭)ನ ಆಸ್ಥಾನದಲ್ಲಿದ್ದುಕೊಂಡು ಆ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖಣಿ ಹಿಂದಿ ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಬಿಜಾಪುರ ಇತಿಹಾಸದ ವಿಷಯದಲ್ಲಿ

ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಮೂಲ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದುರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖಣಿ ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದ ಮೂಲಕ ಪ್ರಕಟಿಸುವ ಪ್ರಯತ್ನವಾಗಿದೆ. 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ ಗು. ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಹ್.ಡಿ. ಪದವಿಗಳನ್ನು ಪಡೆದಿದ್ದಾರೆ. ಇನ್ನು ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯ ಕರಡು ಪ್ರತಿಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ, ಈ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಯೋಜನೆಗೆ ಅನುಮತಿ ನೀಡಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಕಾಲದ ಬಿಜಾಪುರ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಬಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫೆರಿಸ್ತಾ : ತಾರೀಖ–ಇ–ಫೆರಿಸ್ತಾ [ಪರ್ಶಿಯನ್]**
ಇಂಗ್ಲೀಷಿಗೆ ಅನುವಾದಿಸಿದ್ದಾರೆ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ.೧೮೯೧] ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ : ಇಬ್ರಾಹಿಮನಾಮಾ [ದಖಣಿ]**
ಪ್ರಕಟವಾಗಿದೆ. ಮೂಲ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಔಂಧ ಅರ್ಕೀವ್ಸ ಸಾತಾರಾದಲ್ಲಿವೆ.

೩. **ಅಸದಬೇಗ : ವಾಕಾಯತೆ ಅಸದಬೇಗ [ಪರ್ಶಿಯನ್]**

ಚಾಪ್‌ಮನ್‌ನಿಂದ ಇಂಗ್ಲಿಷ್‌ಗೆ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿ ಭಾಗಶಃ ಅನುವಾದವಾಗಿದೆ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖಣಿ]**
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಥುಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ ಹೈದ್ರಾಬಾದಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ : ಮಹಮ್ಮದನಾಮಾ [ಪರ್ಶಿಯನ್]**
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ.ಭಾಗಶಃ ಬಿ.ಡಿ.ವರ್ಮಾರಿಂದ ಇಂಗ್ಲಿಷಿನಲ್ಲಿ ಅನುವಾದ.

೬. **ನುಸ್ರತಿ : ಅಲಿನಾಮಾ [ದಖಣಿ]**
ಪ್ರಕಟವಾಗಿದೆ. ಪ್ರತಿ ದುರ್ಮಿಳ.

೭. **ಬಶೀರುದ್ದೀನ ಅಹ್ಮದ : ವಾಕಾತೆ ಮಾಮಲಕತ್ ಬಿಜಾಪುರ [ಉರ್ದು]**
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ : ಘುತುಹತೆ ಆದಿಲಶಾಹಿ [ಪರ್ಶಿಯನ್]**
ಮುಂಬಯಿ ಅರ್ಕೀವ್ಸ, ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ : ತದ್ಕಿರಾತ–ಅಲ್–ಮುಲ್ಕ [ಪರ್ಶಿಯನ್]**
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್‌ಜೈನುದ್ದೀನ ಅಲ್ ಮಾಬಾರಿ: ತುಹಫತುಲ್ ಮುಜಾಹಿದೀನ [ಪರ್ಶಿಯನ್]**

೧೧. **ಸೈಯದ ಅಲಿ ಬಿಲಗ್ರಾಮಿ : ತಾರೀಖೆ ದಖನ್ ೪ ಸಂಪುಟಗಳು [ಉರ್ದು]**

೧೨. **ಸಯ್ಯದ ಮೊಹಿಯುದ್ದೀನ ಪೀರಜಾದಾ : ಅಹವಾಲೆ ಸಲಾತೀನ ಬಿಜಾಪುರ [ಪರ್ಶಿಯನ್]**
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : ಹಪ್ತ ಕುರ್ಸಿ [ಪರ್ಶಿಯನ್]**
ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದ್ರಾಬಾದ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ : ಕಿತಾಬೆ ನವರಸ [ದಖಣಿ ಹಿಂದಿ]**
ಕರ್ನಾಟಕ ವಿ.ವಿ.ಯಿಂದ ಪುಸ್ತಕ ಪ್ರಕಟವಾಗಿದೆ.

೧೫. **ಜುಬೇರಿ : ರೌಜತ್ ಅಲ್ ಔಲಿಯಾ ಎ ಬಿಜಾಪುರ [ಪರ್ಶಿಯನ್]**
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಹಸ್ತಪ್ರತಿ ಸಂಖ್ಯೆ ೧೪೮೧೩

೧೬. **ಜುಬೇರಿ : ಬುಸಾತಿನೆ ಸಲಾತೀನ [ಪರ್ಶಿಯನ್]**
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಸಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತು ಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿ ಖಾನ: ಗುಲದಸ್ತಾ ಎ ಬಿಜಾಪುರ [ದಖಣಿ]**
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ : ಶಾಹಿಪತ್ ಇ ಹುದಾ [ಬಿಜಾಪುರ ಸೂಫಿ ಸಂತರ ಚರಿತ್ರೆ ೧೭೯೬] [ಪರ್ಶಿಯನ್]**
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು:** ಭಾರತ ಇತಿಹಾಸ ಸಂಶೋಧಕ ಮಂಡಳ [ಸಾವಿರಕ್ಕೂ ಮಿಕ್ಕಿ] **ಮತ್ತು ಸನದುಗಳು** ಪುಣೆ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿ ಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತು ಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ ಈ ಕೇಂದ್ರಗಳಲ್ಲಿ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : **ತಾರೀಖೆ ಅಲಿ ಆದಿಲಶಹ [ದಖಣಿ]**

೨. ಮೀರ್ ರಫೀಯುದ್ದೀನ ಶಿರಾಜಿ : **ತದ್ಕಿರಾತ-ಅಲ್-ಮುಲ್ಕ [ಪರ್ಶಿಯನ್]**

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿಯ : **ಹಪ್ತ ಕುರ್ಸಿ [ಪರ್ಶಿಯನ್]**

೪. ಮೀರ ಅಹಮದ ಅಲಿ ಖಾನ : **ಗುಲದಸ್ತಾ ಎ ಬಿಜಾಪುರ [ದಖಣಿ]**

೫. ಜುಹೂರ್ ಬಿನ್ ಜುಹೂರಿ : **ಮಹಮ್ಮದನಾಮಾ [ಪರ್ಶಿಯನ್]**

ಇದಲ್ಲದೆ, ಫೆರಿಸ್ತಾನ ತಾರೀಖ–ಇ–ಫೆರಿಸ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದ, ಅಬ್ದುಲ್ಲಾ ದೇಹಲವಿ ವಿರಚಿತ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದ, ಕವಿ ನುಸ್ರತಿಯ 'ಅಲಿನಾಮಾ' ಘುತೂಹತ್ ಅಲಂಗೀರದ ಇಂಗ್ಲಿಶ್ ಅನುವಾದ ಮತ್ತು ಹಲವು ನೂರು ಪರ್ಶಿಯನ್ ಮೂಲ ಮತ್ತು ಮರಾಠೀ ಅನುವಾದದ ಆದಿಲಶಾಹೀ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದದ ಕೆಲಸ ಪ್ರಾರಂಭ ಮಾಡಲಾಯಿತು. ಕನ್ನಡ ಭಾಷೆಗೆ ಅನುವಾದ ಮಾಡುವ ಪರ್ಶಿಯನ್, ದಖಣಿ ಮತ್ತು ಉರ್ದು ಭಾಷೆಗಳನ್ನು ಬಲ್ಲ ಈ ಕೆಳಗಿನ ವಿದ್ವಾಂಸರನ್ನು ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಿಬೂಬುರ್ ರಹಮಾನ ಮದನಿ ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ನ್ಯಾಯವಾದಿಗಳು ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್ ನ್ಯಾಯವಾದಿಗಳು ಹಾಸನ.

೪. ಡಾ. ಅಬ್ದುಲ್ ಹಮೀದ, ಶಿಕ್ಷಣ ತಜ್ಞರು, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ.

೬. ಪ್ರೊ ವಸಂತ ಕುಷ್ಟಗಿ, ಸಾಹಿತಿಗಳು ಕಲಬುರಗಿ.

೭. ಶ್ರೀಮತಿ ರತ್ನಾ ಮಣ್ಣೂರ, ಕಲಬುರಗಿ.

೮. ಡಾ. ಅಮೀರುದ್ದೀನ ಕಾಜಿ ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ. ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ.

೧೨. ಡಾ. ಆರ್.ಕೆ.ಕುಲಕರ್ಣಿ, ವಿಜಯಪುರ.

೧೩. ಡಾ. ಮುಹಮ್ಮದ ಸಿಬ್ಘತ್‌ಉಲ್ಲಾಹ್, ಬೆಂಗಳೂರು

೧೪. ಡಾ. ಮಹನೂರ್ ಜಮಾನಿ ಬೇಗಂ, ಬೆಂಗಳೂರು

೧೫. ಪ್ರೊ. ಎ.ಎಚ್. ಮಾಸಾಪತಿ, ಬೆಂಗಳೂರು

೧೬. ಫಕೀರ್ ಮುಹಮ್ಮದ ಕಟ್ಪಾಡಿ, ಬೆಂಗಳೂರು

೧೭. ಮೌಲಾನಾ ಸಯ್ಯದ್ ರಶೀದ್ ಅಲ್ ಖಾಸಿಮಿ, ಬೆಂಗಳೂರು

೧೮. ಶ್ರೀ ಬೋಡೆ ರಿಯಾಜ಼್ ಅಹ್ಮದ್ ತಿಮ್ಮಾಪುರಿ, ಕಲಬುರಗಿ.

ಈ ಮಹನೀಯರು ಅನುವಾದ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಇವರ ಸಹಕಾರದಿಂದ ಮೊದಲ ಹಂತವಾಗಿ ಈ ಕೆಳಗಿನ

೧. ತಾರೀಖ–ಇ–ಫೆರಿಸ್ತಾ: ೪ ಸಂಪುಟಗಳು.

೨. ಬುಸಾತಿನೆ ಸಲಾತೀನ: ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖಣಿ], ಗುಲದಸ್ತಾಯೆ ಬಿಜಾಪುರ [ದಖಣಿ], ಹಪ್ತ ಕುರ್ಸಿ [ಪರ್ಶಿಯನ್], ಭಾಗಶಃ ಫುತುಹತೆ ಅಲಂಗೀರ ಇವೆಲ್ಲ ಸೇರಿ ೬ನೆಯ ಸಂಪುಟ.

೪. ಮೊಹಮ್ಮದನಾಮಾ, ೭ನೆಯ ಸಂಪುಟ

೫. ಅಲಿನಾಮಾ–ತಾರೀಖೇ ಸಿಕಂದರಿ ೮ನೆಯ ಸಂಪುಟ

೬. 'ಊರುಸೇ–ಇರ್ಫಾನ್' (ಮನ್ ಲಗನ್) ೯ನೆಯ ಸಂಪುಟ

೭. 'ತಝ್ಕಿರತುಲ್ ಮುಲೂಕ್(ಬಾದಶಾಹರ ಚರಿತ್ರೆ)' ೧೦ನೆಯ ಸಂಪುಟ

೮. 'ಕಿತಾಬೆ ನವರಸ' ೧೧ನೆಯ ಸಂಪುಟ

೯. ರೌಜತುಲ್ ಔಲಿಯಾಯೆ ಬಿಜಾಪುರ ೧೨ನೆಯ ಸಂಪುಟ.

೧೦. ಕರ್ನಾಟಕದಲ್ಲಿಯ ಅರೇಬಿಕ್, ಪರ್ಶಿಯನ್, ಉರ್ದು ಶಾಸನಗಳ ಸೂಚಿ ೧೩ನೆಯ ಸಂಪುಟ

೧೧. ಫರ್ಮಾನುಗಳು ಭಾಗ ೧, ೧೪ನೆಯ ಸಂಪುಟ

೧೨. ಫರ್ಮಾನುಗಳು, ಸನದುಗಳು ಮತ್ತು ಕೈಫಿಯತ್ತುಗಳು ಭಾಗ ೨, ೧೫ನೆ ಸಂಪುಟ

೧೩. ಹೀಗೆ ೧೫ ಸಂಪುಟಗಳು ಪ್ರಕಟವಾಗಿವೆ. ಇದೀಗ ೧೬ನೆಯ ಸಂಪುಟವಾಗಿ ತಾರೀಖೆ ಅಲಿ ಆದಿಲಶಹ, ಪ್ರಕಟವಾಗುತ್ತಿದೆ. ಇದನ್ನು ಉರ್ದುವಿನಿಂದ

ಕನ್ನಡಕ್ಕೆ ಅನುವಾದ ಮಡಿದವರು, ಹಾಸನದ ಶ್ರೀಮತಿ ಬಾನು ಮುಷ್ತಾಕ್ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ' ಯೋಜನೆಗೆ ಅನುದಾನ ನೀಡಿದ ಕರ್ನಾಟಕ ಸರ್ಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲ ಅವರಿಗೆ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಈ ಹಿಂದೆ ವಿಜಯಪುರ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ, ಶ್ರೀ ಡಿ. ರಂದೀಪ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಕೆ.ಬಿ. ಶಿವಕುಮಾರ ಅವರನ್ನು, ಈ ಯೋಜನೆಯ ಸಮಿತಿಯ ಅಧ್ಯಕ್ಷರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ಹಾಗೂ ಬಿ.ಎಲ್.ಡಿ.ಇ. ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಮತ್ತು ಸಂಯೋಜಕರಾದ ಡಾ. ವಿ.ಡಿ. ಐಹೊಳ್ಳಿ ಅವರ ಶ್ರಮವನ್ನು ಪ್ರೀತಿಯಿಂದ ನೆನೆಯುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಪರ್ಶಿಯನ್ ಭಾಷೆಯಲ್ಲಿ 'ತಾರೀಕೆ ಅಲಿಆದಿಲಶಾಹ' ಚಾರಿತ್ರಿಕ ಕಾವ್ಯವನ್ನು ಆಸ್ಥಾನ ಕವಿ ನೂರುಲ್ಲಾ ಇಬ್ನ ಕಾಜೀ ಸಯ್ಯದ ಅಲಿ ಮುಹಮ್ಮದ ಹುಸೇನಿ ಎಂಬವನು ಬರೆದಿದ್ದಾನೆ. ಅವನು ಎರಡನೆಯ ಅಲಿ ಆದಿಲಶಾಹನ (ಕ್ರಿ.ಶ. ೧೬೫೬–೧೬೭೨) ಆಸ್ಥಾನದಲ್ಲಿಯ ಒಬ್ಬ ಪ್ರಮುಖ ಕವಿಯಾಗಿದ್ದನು. ಪರ್ಶಿಯನ್ ಭಾಷೆಯ ಮೇಲಿನ ತನ್ನ ಹಿಡಿತದಿಂದಾಗಿ ಸಮಕಾಲೀನ ಹಾಗೂ ನಂತರದ ಕವಿ ಇತಿಹಾಸಕಾರರೂ ಆತನನ್ನು ದಾಖಲಿಸುತ್ತಾರೆ.

'ಮುಹಮ್ಮದನಾಮಾ'ದಲ್ಲಿ ಈತನ ಕುರಿತು ಉಲ್ಲೇಖ ಬರುತ್ತದೆ. ಚಂದ್ರಗುತ್ತಿಯ ಹತ್ತಿರ ಮೀರ ಜುಮ್ಲಾನು ಗದ್ದಲ ಪ್ರಾರಂಭಿಸಿದಾಗ, ಆತನನ್ನು ಹತ್ತಿಕ್ಕಲು ಮಹಮ್ಮದ ಆದಿಲಶಾಹನು ಖಾನ ಮಹಮ್ಮದನನ್ನು ಕಳಿಸಿದ್ದನಂತೆ. ಆತನು ಬೇಗ ಬರದಿದ್ದಾಗ ಮಹಮ್ಮದ ಆದಿಲಶಾಹನು ಈ ನೂರುಲ್ಲಾನನ್ನು ಕಳಿಸಿದನು. ಆತ ಅಲ್ಲಿ ಉತ್ತಮ ರೀತಿಯಾಗಿ ಕೆಲಸ ಮಾಡಿದ್ದಕ್ಕಾಗಿ ಅವನಿಗೆ 'ಸರಖೈಲುಲ್–ಮುಮಾಲಿಕ' ಎಂಬ ಬಿರುದನ್ನು ಬಾದಶಹನು ಕೊಟ್ಟನು. ಇದರಿಂದಾಗಿ ನೂರುಲ್ಲಾ ಇಬ್ನ ಕಾಜೀಯು ಮಹಮ್ಮದ ಆದಿಲಶಾಹನ ಆಸ್ಥಾನದಲ್ಲಿ ರಾಯಭಾರಿಯಾಗಿಯೂ ಕೆಲಸ ಮಾಡಿದ್ದನೆಂದು ತಿಳಿದು ಬರುತ್ತದೆ.

ಸಮಕಾಲೀನ ಕವಿ ಮುಲ್ಲಾ ನುಸ್ರತಿಯು ತನ್ನ 'ಅಲಿನಾಮಾ' ಕಾವ್ಯದಲ್ಲಿ 'ಶಾಹ ನೂರುಲ್ಲಾ ಊರ್ಫ ಅಬುಲ್ ಮು ಅಲಿ ಎಂಬವನು ಅಲಿ ಆದಿಲಶಾಹನ ವಿಜಯಗಳ ಕುರಿತು ಒಂದು ಕಾವ್ಯವನ್ನು ಬರೆದಿದ್ದಾನೆ ಎಂದು ಹೇಳುತ್ತಾನೆ. ಬಹುಶಃ ಈ ಕಾವ್ಯದ ಕುರಿತೇ ಹೇಳಿರಬಹುದು. ಆತನಿಗೆ ಶಾಹ ಎಂಬ ಬಿರುದು ಇತ್ತೆಂದು ಕಂಡು ಬರುತ್ತದೆ. ಅನಂತರದ ಮಹಮ್ಮದ ಇಬ್ರಾಹೀಮ ಜುಬೇರಿಯು ತನ್ನ

ಬುಸಾತಿನೆ ಸಲಾತೀನ ದಲ್ಲೂ ಈ ಗ್ರಂಥವನ್ನು 'ಇಸ್ಮಾಯೆ ಸಲಿ ಆದಿಲಶಾಹ' ಎಂದು ಕರೆದಿದ್ದಾನೆ.

'ತಾರೀಖೆ ಅಲಿ' ಕಾವ್ಯವನ್ನು ನೂರುಲ್ಲಾ ಇಬ್ನ ಕಾಜೀಯು ಎರಡನೆಯ ಅಲಿ ಆದಿಲಶಾಹನ ಆಣತಿಯ ಮೇರೆಗೆ, ಕ್ರಿ.ಶ. ೧೬೬೭ರಲ್ಲಿ ರಚಿಸಿದನು. ಕಾವ್ಯದ ಪ್ರಾರಂಭದಲ್ಲಿ ಆತನು ಹೀಗೆ ಹೇಳಿಕೊಂಡಿದ್ದಾನೆ.

'ಬಾದಶಹನು ನನಗೆ ತನ್ನ ಕಾಲಕಿರ್ದಿಯಲ್ಲಿ ಆಗಿ ಹೋದ ವಿಷಯಗಳನ್ನು ಹಾಗೂ ಪರಾಕ್ರಮಗಳನ್ನು ಬರೆದು ಇಡಲು ಆಜ್ಞೆ ಮಾಡಿದನು. ನನಗೆ ಇತರ ಹಲವಾರು ಕೆಲಸಗಳಿದ್ದರೂ ಈ ಕೆಲಸವು ನನ್ನಿಂದ ಆದೀತೋ ಇಲ್ಲವೋ ಎಂದು ಚಿಂತಿಸುತ್ತಿದ್ದೆ. ಕೊನೆಗೆ ನಾನು ಆತನ ಆಜ್ಞೆಯನ್ನು ಶಿರಸಾವಹಿಸಿ ಮಾಡಬೇಕೆಂದು ನಿಶ್ಚಯಿಸಿ ಬರೆಯಲು ಪ್ರಾರಂಭಿಸಿದೆ.'

'ತಾರೀಖೆ ಅಲಿ' ಕಾವ್ಯವು ಎರಡನೆಯ ಅಲಿ ಆದಿಲಶಹನ ಸಂಪೂರ್ಣ ಚರಿತ್ರೆಯನ್ನು ಹೇಳುವುದಿಲ್ಲ. ಪ್ರಾರಂಭದಲ್ಲಿ ಭಗವಂತನ ಸ್ತುತಿ ಪರವಾದ ಭಾಗವನ್ನು ಬಿಟ್ಟರೆ, ಎರಡನೆಯ ಅಲಿ ಆದಿಲಶಹನ ಜನ್ಮ, ಬಾಲ್ಯ, ಮಹಮ್ಮದ ಆದಿಲಶಹನ ಮರಣ, ಅಲಿಯ ರಾಜ್ಯ ಪಟ್ಟಾಭಿಷೇಕ, ಶಿವಾಜಿ ಅಫಜಲಖಾನರ ಘಟನೆ, ಅಫಜಲಖಾನನ ಸಾವು, ಬಡೀ ಸಾಹಿಬಾಳ ಮಕ್ಕಾ ಯಾತ್ರೆ, ಸಿದ್ದೀ ಜೋಹಾರನ ಬಂಡು, ಮಲೆನಾಡು ವಿಜಯ ಹಾಗೂ ಬಿಜಾಪುರ ಮೊಗಲರ ಯುದ್ಧದ ವಿಷಯಗಳ ವಿವರವಾದ ಚಿತ್ರಣವಿದೆ. ಜಯಸಿಂಗ ಹಾಗೂ ಶಿವಾಜಿಗಳ ಬಿಜಾಪುರದ ಮೇಲಿನ ಆಕ್ರಮಣದ ಕಥೆಯೂ ಇದೆ.

ಕಾವ್ಯವು ಕ್ರಿ. ಶ, ೧೬೬೭ರಲ್ಲಿ ರಚಿತವಾದದ್ದು ಎಂದು ಗ್ರಹಿಸಿದರೆ, ಎರಡನೆಯ ಅಲಿ ಆದಿಲಶಹನ ಪಟ್ಟಾಭಿಷೇಕದ ನಂತರದ ಸುಮಾರು ೧೧ ವರುಷಗಳ ಇತಿಹಾಸವನ್ನು ಮಾತ್ರ ದಾಖಲಿಸಿದ್ದಾನೆ ಎಂದು ಹೇಳಬಹುದು. ನಂತರ ಬಾದಶಹನು ೧೨ ವರುಷ ಬದುಕಿದ್ದನು. ಬಹುಶಃ ಈ ಹೊತ್ತಿಗೆ ಕವಿ ಬಿಜಾಪುರವನ್ನು ಬಿಟ್ಟು ಹೋಗಿರಬೇಕು ಅಥವಾ ಸತ್ತಿರಬೇಕು. ಏನಿದ್ದರೂ ಸಮಕಾಲೀನ ಬಿಜಾಪುರದ ಚರಿತ್ರೆಯಲ್ಲಿಯ ವಿಶೇಷವಾಗಿ ಕರ್ನಾಟಕದ ಕಥೆಯನ್ನು ತಿಳಿಸುವಲ್ಲಿ ಕಾವ್ಯವು ಬೆಳಕನ್ನು ಚೆಲ್ಲುತ್ತದೆ.

ನಮಗೆ ದೊರೆತ ಹಸ್ತಪ್ರತಿಯು ಕವಿ ನೂರುಲ್ಲಾ ಇಬ್ನ ಕಾಜೀ ಸಯ್ಯದ್ ಅಲಿಯು ಸ್ವರ್ಗಸ್ಥನಾದ ನಂತರ ಹಿಜರೀ ಶಕ ೧೧೪೩ರ ರಮಜಾನ್ ತಿಂಗಳ ೨೭ ಗುರುವಾರದಂದು ಸಯ್ಯದ ಕರೀಮ ನೆಂಬುವನು, ಬರೆದು ಪೂರ್ಣಗೊಳಿಸಿದ ಹಸ್ತಪ್ರತಿಯಾಗಿದೆ ಹಾಗೆ ಗ್ರಂಥದ ಕೊನೆಯಲ್ಲಿ ನಮೂದಿಸಿದ್ದಾನೆ. ಇದು ಕ್ರಿ.ಶ.

೧೭೩೦ (1730ಕ್ಕೆ) ಸರಿಹೊಂದುತ್ತದೆ. ಅಂದರೆ ಗ್ರಂಥ ರಚನೆಯಾದ ೬೩ ವರುಷಗಳ ನಂತರ ನಕಲು ಮಾಡಿದ ಹಸ್ತಪ್ರತಿ ಇದಾಗಿದೆ.

ತಾರೀಖೆ ಅಲಿ ದಿಲಶಾಹ ಪರ್ಶಿಯನ್ ಕಾವ್ಯವನ್ನು ಡಾ. ಮೀರ ಮುರ್ತುಜ ಅಲಿಶಾಹ ಕಾದ್ರಿ ಹೈದರಬಾದ. ಅವರು ಉರ್ದುವಿನಲ್ಲಿ ಅನುವಾದಿಸಿ ಕೊಟ್ಟರು. ಉರ್ದುವಿನಿಂದ ಕನ್ನಡಕ್ಕೆ ಶ್ರೀಮತಿ ಬಾನು ಮುಷ್ತಾಕ, ಹಾಸನ. ಅವರು ಅನುವಾದಿಸಿದ್ದಾರೆ. ಅವರಿಬ್ಬರಿಗೂ ಕೃತಜ್ಞತೆಗಳು.

ಕರಡು ತಿದ್ದುವಲ್ಲಿ ಸಹಾಯ ಮಾಡಿದ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರದ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ, ಸಹ–ಸಂಯೋಜಕರಾದ ಡಾ. ವಿ.ಡಿ. ಐಹೊಳ್ಳಿ ಅವರನ್ನು ಇಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಅಂದವಾಗಿ ಮುದ್ರಿಸಿದ ಬೆಂಗಳೂರಿನ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಗೆ ಕೃತಜ್ಞತೆಗಳು.

■

*

ಪರಿವಿಡಿ

*

ಅಧ್ಯಾಯ-೧

ತಾರೀಖ್-ಎ-ಅಲಿ ಆದಿಲ್ ಶಾಹಿ

ಪೀಠಿಕೆ

೧) ಎಲ್ಲಾ ವಿಧದ ಕೇಡು ಮತ್ತು ಕೆಡುಕಿನಿಂದ ಮುಕ್ತನಾಗಿರುವ ಮತ್ತು ಭೂಮ್ಯಾಕಾಶಗಳ ಒಡೆಯನಾಗಿರುವ ಜೀವ ಮತ್ತು ಜೀವಾತ್ಮಗಳ ಸೃಷ್ಟಿಕರ್ತನಾದ ಖುದಾನ ಸನ್ನಿಧಿಗೆ ಸಕಲ ಸ್ತೋತ್ರಗಳು. ಏಕೆಂದರೆ ಬುದ್ಧಿವಂತರಿಗೆ ಸೂಕ್ತ ಪ್ರಜ್ಞೆಯ ಮೂಲಕ ಅವನು ತನ್ನ ಅಸ್ತಿತ್ವವನ್ನು ಪ್ರಕಟಪಡಿಸಿದ ಹಾಗೂ ಸೂಕ್ಷ್ಮ ಒಳನೋಟವುಳ್ಳ ಪ್ರಜ್ಞಾವಂತರು ಆತನ ಗುಣಗಾನ ಮಾಡುತ್ತಾರೆ. ಉತ್ತಮ ಯೋಗ್ಯತೆಯನ್ನು ಹೊಂದಿದ ಪಕ್ವಬುದ್ಧಿಮತ್ತೆಯ ವಾಸ್ತವವಾದಿ ಪವಿತ್ರ ವ್ಯಕ್ತಿಗಳಿಗೆ ಅಲ್ಲಾಹನ ಸಂಪನ್ನತೆಯೇ ಕಂಡು ಬರುತ್ತದೆ. ಅಂದರೆ ಕೌಶಲ್ಯಪೂರ್ಣ ದೃಷ್ಟಿಯಿಂದ ಕೂಡಿ ಅವನ ವಿಚಿತ್ರ ಆವಿಷ್ಕಾರಗಳು ಹಾಗೂ ಅಪೂರ್ವ ಸೃಷ್ಟಿಯನ್ನು ಕೊಂಡಾಡುತ್ತಾರೆ. ಅಗಣಿತ ಹಾಗೂ ಲೆಕ್ಕವಿಲ್ಲದಷ್ಟು ಪ್ರಶಂಸೆಯ ಅರಣ್ಯದಲ್ಲಿ ಅಮಿತ ವಂದನೆಗಳ ಪಯಣವನ್ನು ಮುಂದುವರೆಸುತ್ತಾ ಹೈರಾಣಭರಿತ ಹೃದಯದೊಂದಿಗೆ, ವ್ಯಾಕುಲ ಮನೋಭಾವದ ವ್ಯಕ್ತಿಗಳು ಸಾಹಿತ್ಯಲೋಕದಲ್ಲಿ ಪದಾರ್ಪಣೆ ಮಾಡುತ್ತಾರೆ. ಸಾಂಗತ್ಯ ಮತ್ತು ಸಕ್ಷಮತೆಯ ಗುಡಾರಗಳಿಂದ ಫಲ ಪ್ರಾಪ್ತಿಯನ್ನು ಹೊಂದಿದ ಆ ವ್ಯಕ್ತಿಗಳು ಜ್ಞಾನ ಮತ್ತು ದೈವ ಸಾಕ್ಷಾತ್ಕಾರದ ವೇದಿಕೆಯ ಮೇಲೆ ಆಸೀನರಾಗಿರುತ್ತಾರೆ. ಅಪರಿಮಿತ ಸಾಮರ್ಥ್ಯದ ಒಡೆಯ ಮತ್ತು ಅಪಾರ ಮಹಿಮೆಯನ್ನು ಹೊಂದಿದ ಸೃಷ್ಟಿಕರ್ತನ ಸ್ತುತಿ ಮಹಿಮೆಯನ್ನು ಸಾರುತ್ತಾರೆ. ಅವರು ಸರ್ವಶಕ್ತನ ಬಲಿಷ್ಠ ಹಾಗೂ ಉನ್ನತ ಕೊಡುಗೆಗಳತ್ತ ದೃಷ್ಟಿ ಹಾಯಿಸಿದಾಗ ಪ್ರಶಂಸೆಯ ಅಮೂಲ್ಯ ಮುತ್ತು ಹಾಗೂ

ಅನರ್ಘ್ಯ ರತ್ನಗಳನ್ನು ಕಾಣದೆ ಚಕಿತರಾಗಿ, ಲಜ್ಜಿತರಾಗಿ, ಅವಡುಗಚ್ಚಿ ಅವನತವದನರಾಗುತ್ತಾರೆ. ಈ ಕಾರಣದಿಂದಲೇ ನಾನು ಅತ್ಯಾಶ್ಚರ್ಯದಿಂದ ಎಲ್ಲೆಲ್ಲಿ ಅಲ್ಲಾಹನ ಸ್ತುತಿ ಮತ್ತು ವಂದನೆಯ ನುಡಿಗಳನ್ನು ಆಡಲಿ ಎಂದು ಶ್ರದ್ಧಾಪೂರ್ವಕವಾಗಿ ಆಲೋಚಿಸುತ್ತೇನೆ. ಆತನ ಅಪರಿಮಿತ ಸ್ತೋತ್ರದ ಮಹಾಪೂರ ಮತ್ತು ಯುದ್ಧರಂಗದ ಇರಾದೆಯನ್ನು ಮಾಡುವುದು ಸಮುದ್ರದ ನೀರನ್ನು ಅಂಗೈಯಲ್ಲಿ ಹಿಡಿಯುವ ದೃಷ್ಟಾಂತದಂತಿದೆ ಅಥವಾ ಮಳೆಯ ಹನಿಯನ್ನು ಬೆರಳತುದಿಯಲ್ಲಿ ಎಣಿಕೆ ಮಾಡುವಂತಿದೆ. ಈ ಉದಾಹರಣೆಗಳನ್ನು ಅಲೆಗ್ಸಾಂಡರ್‌ನಂತಹ ವ್ಯಕ್ತಿ ಮಾತ್ರ ಅರಿಯಲು ಸಾಧ್ಯ.

ನೆಲ-ಜಲಗಳ ದೊರೆಯಾಗಿರುವ ಮತ್ತು ಹಾಗೂ ದಿವ್ಯಜ್ಞಾನವನ್ನು ಹೊಂದಿರುವ ಅಲೆಕ್ಸಾಂಡರನು ಒಂದು ದಿನ ವಿವೇಕಿ ಮತ್ತು ಜ್ಞಾನಿಗಳಿಂದ ಕೂಡಿದ ತನ್ನ ತಂಡದೊಂದಿಗೆ ಅಮೃತದ ಅನ್ವೇಷಣೆಯಲ್ಲಿ ಹೊರಟ. ಅಮೃತ ದೊರಕುವ ಸಂಭಾವ್ಯ ಸ್ಥಳದಲ್ಲಿ ಆತ ಅಪಾರ ಪರಿಶ್ರಮದಿಂದ ಹುಡುಕಿದರೂ ಫಲಪ್ರದವಾಗಲಿಲ್ಲ. ತನ್ನ ದೌತ್ಯದ ಪತ್ರ ಕಳೆದುಹೋದ ಹರಿಕಾರನಂತೆ ಅಥವಾ ಬಾಯಾರಿದವನಿಗೆ ಎಷ್ಟೇ ಹುಡುಕಿದರೂ ಮಾಡಿದರೂ ಹನಿ ನೀರು ದೊರಕದಂತೆ ಅಲೆಗ್ಸಾಂಡರ್ ಅದೃಷ್ಟದಾಟದಲಿ ಸೋತು ಮರಳಿದ.

ಸೋತ ಕುಂಟ ವ್ಯಕ್ತಿಯ ಆಲೋಚನೆಗೆ ಯಾವ ರೀತಿಯ ನೆರವು ದೊರಕಬಹುದು. ಭಗವಂತನ ಸ್ತುತಿಯ ಮೈದಾನದಲ್ಲಿ ಯಾವ ಮಿತಿ ಅಥವಾ ಪರಿಮಿತಿಯೂ ಇಲ್ಲವಾದಾಗ ಹೇಗೆ ಅನಾಮಧೇಯನ ಗುಣಗಾನ ಮಾಡುವಿರಿ?

ತಮ್ಮ ಚುರುಕು ನಾಲಿಗೆ ಹಾಗೂ ನಿರ್ಜೀವ ಭಾಷೆಯನ್ನು ಭಗವಂತನ ಗುಣಗಾನದ ಬಜಾರಿನಲ್ಲಿ ಮಾರಾಟಕ್ಕೆ ಹೇಗೆ ಇಡುವಿರಿ?

ಎಲ್ಲಿ ಬುದ್ಧಿಮತ್ತೆ ಮತ್ತು ಎಲ್ಲಿ ದೈವ ಪ್ರಜ್ಞೆ
ಅಲ್ಲಾಹನ ಮನೆಯ ದಾರಿ ಹುಡುಕುವಸಾಧ್ಯತೆ ಎಲ್ಲಿ
ಬುದ್ಧಿ ಮತ್ತು ಪ್ರಜ್ಞೆಯಾಚೆ ಅವನಿರುವನು
ವರ್ಣಿಸಲಸದಳದವನ ಸಮ್ಮುಖದಲಿ ನಿಶ್ಯಬ್ದ ಯಾಚನೆ
ಸ್ಥಿತಿ ಪರಿಸ್ಥಿತಿಯು ಆತನ ಪ್ರಕೃತಿಯನ್ನು ಅರ್ಥೈಸದು?
ಅಹಂಕಾರ ಮತ್ತು ಮದ ಅವನ ಹಾದಿಯ ತೊಡಕುಗಳು

ಅವನ ಅಸ್ತಿತ್ವ ಮತ್ತು ಗುಣ ಸ್ವಭಾವದ ಹಕೀಕತ್ತು ಯಾರಿಗೂ ನಿಲುಕದು ಮತ್ತು ಯಾರಿಗೂ ಅರಿವಾಗದಂತಹುದು. ಪ್ರಜ್ಞೆಯ ಕನ್ನಡಿ ಮತ್ತು ಜ್ಞಾನದ ಅಸಲಿ-ನಕಲಿಗಳ ನಡುವಿನ ಸೂಕ್ಷ್ಮತೆಗಳನ್ನು ಸ್ಪಷ್ಟಪಡಿಸುವ ಹಾಗೂ ಅದ್ಭುತ ಕಲೆಗಾರಿಕೆಯ

ಜೀವಂತಿಕೆ ಹೊಂದಿರುವ ದೇಶಗಳ ಪ್ರಭುತ್ವ ಮತ್ತು ಜನಸಾಮಾನ್ಯರ ಸಮೃದ್ಧಭರಿತ ಕೊಡುಗೆಗಳಿಂದ ಸಂಪದ್ಭರಿತವಾಗಿರುವ ಸಿಂಹಾಸನದ ಮೇಲೆ ವಿರಾಜಮಾನರಾಗಿರುವ ವ್ಯಕ್ತಿಗಳ ಸೃಷ್ಟಿಯ ಮೂಲಕ ವಿಚಾರವನ್ನು ಸ್ಫುಟಗೊಳಿಸಿ ಬೆಳಕು ಚೆಲ್ಲಲಿ. ಇದರ ವಾಸ್ತವತೆಯನ್ನು ಎಲ್ಲಾ ಕ್ರಿಯೆಗಳ ಹಕೀಕತ್ತಿನಂತೆ ಹಾಗೂ ಅದರ ಅರ್ಥೈಸುವಿಕೆಯನ್ನು ಎಲ್ಲಾ ಪರಿಚಿತ ವಸ್ತುವಿನ ಕ್ರಮದಂತೆ ವಿವರವಾದ ಲೆಕ್ಕಣಿಕೆಯಿಂದ ದಾಖಲಿಸಲಿ. (ಅವನ ವಾಸ್ತವಿಕತೆ ಮತ್ತು ಗುಣಸ್ವಭಾವಗಳ ಅಸಲಿಯತ್ತು ಯಾರ ಅರಿವಿಗೂ ನಿಲುಕುವಂತಹದಲ್ಲ ಹಾಗೂ ಅರಿವಿಗೆ ನಿಲುಕದ ಸಂಗತಿಗಳಲ್ಲಿ ಸಾಫಲ್ಯ ದೊರಕುವುದಿಲ್ಲ. ಬುದ್ಧಿಶಕ್ತಿಯ ಕನ್ನಡಿ ಮತ್ತು ಅಸಲಿ ನಕಲಿಯ ವಿದ್ಯೆಯ ಸೂಕ್ಷ್ಮತೆಗಳಲ್ಲಿ ಪಾರಂಗತನಾಗಿರುವ ವ್ಯಕ್ತಿಯ ದೃಷ್ಟಾಂತದಂತೆ ಹಾಗೂ ಗುರುವಿಲ್ಲದೆ ವಿದ್ಯೆ ಕಲಿತ ದೇಶಗಳ ಮತ್ತು ಸಾಮಾನ್ಯ ಪ್ರಜೆಗಳ ಹೃದಯ ಸಿಂಹಾಸನದ ಮೇಲೆ ವಿರಾಜಮಾನನಾಗುವುದರ ಮೂಲಕ ಬೆಳಕ ಬೀರುವುದು. ಅದರ ನೈಜತೆಯನ್ನು ಎಲ್ಲ ರೀತಿಯ ಅರಿವು ಮೂಲದ ಅರ್ಥೈಸುವಿಕೆಯ ಮೂಲಕ ಸವಿವರವಾಗಿ ದಾಖಲಿಸಬೇಕಿದೆ.

ಒಟ್ಟಾರೆ ಭೂಮ್ಯಾಕಾಶಗಳಲ್ಲಿ ವಾಸಿಸುತ್ತಿರುವ ಸರ್ವರ ಉಸ್ತಾದರಾಗಿರುವ ಆದಿ ಮತ್ತು ಅಂತ್ಯದ ಶ್ರೇಷ್ಠ ಪ್ರವಾದಿಯವರಾದ ಸಯ್ಯದ್‌ರವರ ವಾಸ್ತವಿಕತೆಯನ್ನು ಅರುಹುವುದಾದಲ್ಲಿ ಭೂಮ್ಯಾಕಾಶಗಳಲ್ಲಿ ನೆಲೆಯೂರಿರುವ ವ್ಯಕ್ತಿಗಳ ಮಾರ್ಗದರ್ಶನದ ನೇತಾರರಾಗಿದ್ದಾರೆ. ಮೋರೆಯ ಮೇಲೆ ಒತ್ತಿದ ಮೌನದ ಮೊಹರು ಅವರ ಶ್ರೇಷ್ಠತೆಯನ್ನು ಸಾರುತ್ತದೆ. ತೀವ್ರಗತಿಯ ಚಾಣಾಕ್ಷ ಮನೋಭಾವದ ತಜ್ಞರಿಗೆ ಇದರ ಅರಿವು ಮತ್ತು ಬದುಕಿನ ಸಾರ ಕೈಗೆಟುಕಿದೆ. ಪಶು-ಪಕ್ಷಿ ಮತ್ತು ಅನೇಕ ಹಸಿರು ಜೀವ ಸಂಕುಲಗಳು ತಮ್ಮ ನೆಲೆಯನ್ನು ಕಂಡುಕೊಂಡಿವೆ ಹಾಗೂ ತಮ್ಮ ಚರ್ಮ, ರೋಮ ಮತ್ತು ರೆಕ್ಕೆಗಳ ನೆರವಿನಿಂದ ತಮ್ಮ ತಾಣಗಳಲ್ಲಿ ವಿಶ್ರಮಿಸಿವೆ. ಸೂರ್ಯ ಚಂದ್ರರ ಸಮಾನ ಪ್ರಖರ ವ್ಯಕ್ತಿತ್ವವನ್ನು ಅಭಿಮಾನಪೂರ್ವಕವಾಗಿ ಹಾಗೂ ಕೃತಜ್ಞತಾಭಾವದಿಂದ ಸ್ಮರಿಸಲು ಮತ್ತು ವರ್ಣಿಸಲು ಈ ಅನಾಮಿಕನ ಬಳಿ ಪದಗಳಿಲ್ಲ.

ದಾರಿಯನ್ನು ಆತ ಹೇಗೆ ಕ್ರಮಿಸುವನೆಂಬುದು ಆಶ್ಚರ್ಯ
ಖಡ್ಗದ ಮೊನೆಯ ಹರಿತದೆದುರು ಪಾದಗಳು ಕಾದ
ಮರಳಿನ ಮೇಲೆ ಗಾಯಗೊಂಡ ಹಿಮ್ಮಡಿ
ಮತ್ತು ರಕ್ತ ಸಿಕ್ತ ಅಂಗೈಗಳೊಂದಿಗೆ
ಅವನು ನನ್ನ ಕಾಡಿನಲಿ ಕಾಲೂರಿದಾಗ
ಸಂಪ್ರದಾಯದ ಸಂಕೋಲೆಯ ಬಂದಿ ಹೇಗೆ ನಡೆಯಲು ಸಾಧ್ಯ?

ಅವನೆಲ್ಲಿ ಮತ್ತು ಬೆಳದಿಂಗಳೆಲ್ಲಿ
ಅವನ ಆಶ್ರಯ ತಾಣವು ಬುದ್ಧಿ ಪರಿಮಿತಿಗಳಾಚೆ
ಅವನ ಬಗ್ಗೆ ಬುದ್ಧಿ ಭಾವಗಳು ಲಜ್ಜಿತವಾಗಿವೆ.

ಮೇಲ್ಕಂಡ ಆರ್ದ್ರ ಭಾವನೆಗಳ ರಾಗಾಲಾಪನೆಯು ಆವೇಶಭರಿತ ಭಾವಗಳಿಂದ ಕೂಡಿ ಸಂಬೋಧಿಸಿದ್ದೇನೆಂದರೆ ರಹಸ್ಯ ಸ್ಥಳದಲ್ಲಿ ಏಕಾಂತದಲ್ಲಿ ವಿಶ್ರಮಿಸುವವನೇ, ಗಾಯಗೊಂಡ ಹೃದಯದಿಂದ ಕೂಡಿದವನೇ, ಆಶ್ಚರ್ಯ ಮತ್ತು ನಾಚಿಕೆಯಿಂದ ಮುದುಡಿ ಹೋಗಿರುವ ಪರ್ವತಗಳಲ್ಲಿ ಏಕಾಂತವಾಗಿ ಅಲೆಯುವವನೇ ಯಾಕೆ ನೀನು ನಿನ್ನ ಸಹಜ ಬುದ್ಧಿಯನ್ನು ಬದಿಗೆ ತಳ್ಳಿ ಮರೆವಿನ ಲೋಕದಲ್ಲಿ ಕಾಣದಾದೆ. ಸ್ತುತಿ ಮತ್ತು ಸ್ತೋತ್ರಗಳು ಭಗವಂತನ ಸನ್ನಿಧಿಯಲ್ಲಿ ಸಲ್ಲಿಸುವ ಕಾಣಿಕೆಯಾಗಿದೆ. ಸಹೃದಯರ ಸಭೆಗಳಲ್ಲಿ ಪ್ರಜ್ಞೆಯ ಬೆಳಕಿನಲ್ಲಿ ವಿವೇಕ ಹಾಗೂ ವಿವೇಚನೆಯ ಆಧಾರದಲ್ಲಿ ದೇವರ ಕರುಣೆಗೆ ಪಾತ್ರವಾಗುವ ಸುಸಂಧಿಯಾಗಿದೆ ಹಾಗೂ ಇದನ್ನು ಆರೋಗ್ಯವಂತ ಮನಃಸ್ಥಿತಿ ಮತ್ತು ಅಪ್ರತಿಮ ವಿವೇಚನಾ ಶಕ್ತಿಯ ಫಲಪ್ರಾಪ್ತಿ ಎಂದು ತಿಳಿಯಲಾಗಿದೆ. ದೈವ ಕೃಪೆಯಿಂದ ಮೇಲೆ ಹೇಳಿದ ಪುಣ್ಯ ಪ್ರಾಪ್ತಿಯೊಂದಿಗೆ ಭೂಮಿಯ ಜೀವಿಗಳು ಮತ್ತು ಜ್ಞಾನ ದೀವಿಗೆಯನ್ನು ಹೊತ್ತು ಸಾಗಿದ ಅಶ್ವಾರೋಹಿಗಳು ಈ ಲೋಕದ ಪ್ರಭುಗಳು ಈ ಸಂದೇಶದಿಂದ ಏನನ್ನೂ ಪಡೆಯಲಾರರು. ಅಂದರೆ 'ಯಾವುದನ್ನು ಸಂಪೂರ್ಣವಾಗಿ ಪ್ರಾಪ್ತಿ ಹೊಂದಲು ಸಾಧ್ಯವಿಲ್ಲವೋ ಅದನ್ನು ಸಂಪೂರ್ಣವಾಗಿ ತೊರೆಯಲು ಕೂಡ ಸಾಧ್ಯವಿಲ್ಲ' ಬುದ್ಧಿವಂತ ವ್ಯಕ್ತಿಗಳ ಬಗ್ಗೆ ಸೂಕ್ಷ್ಮತೆಯ ಮತ್ತು ಗಂಭೀರ ಗ್ರಹಿಕೆಯ ವ್ಯಕ್ತಿಗಳ ಬಗ್ಗೆ ವಿಮರ್ಶಾತ್ಮಕ ದೃಷ್ಟಿಯನ್ನು ಹೊಂದುವುದು ಅವಶ್ಯಕ. ಕೃತಜ್ಞತಾ ಭಾವ ಮತ್ತು ಸ್ತುತಿಯ ಮನಃಸ್ಥಿತಿಯು ಸದ್ಗುಣಿ ಮತ್ತು ವಿನಯವಂತ ವ್ಯಕ್ತಿಗಳ ಹೆಗ್ಗುರುತಾಗಿದೆ.

ಒಡೆಯನ ಎದುರು ಅರ್ಪಣಾ ಭಾವದಿಂದ ಹಣೆಯನ್ನು ಬಾಗಿಸುವುದು ಮತ್ತು ಅವನ ಸೃಷ್ಟಿಯ ವಿಶೇಷ ಹಾಗೂ ಅದ್ಭುತ ಆವಿಷ್ಕಾರಗಳನ್ನು ಗಮನಿಸಬೇಕು. 'ಓ ನನ್ನ ಒಡೆಯನೇ ನೀನು ಪವಿತ್ರ ಮತ್ತು ನಿನ್ನ ಸೃಷ್ಟಿಯನ್ನು ನೀನು ವ್ಯರ್ಥವಾಗಿ ಸೃಷ್ಟಿಸಲಿಲ್ಲ'. ಮಾನವರು ಮತ್ತು ಜಿನ್ನ್‌ಗಳು ಸಮಾವೇಶಗೊಳ್ಳುವ ಮೈದಾನದ ಅಶ್ವಾರೋಹಿಗಳೇ ಮತ್ತು 'ಆ ಪ್ರಳಯದ ದಿನದಂದು ಆದಮ್ ಮತ್ತು ಇತರೆ ಎಲ್ಲರೂ ನನ್ನ ಬಾವುಟದಡಿಯಲ್ಲಿ ಬರುವರು'. ಅವರ ಸ್ತೋತ್ರ 'ನಾನು ಆದಮನ ಸಂತತಿಯ ಸರದಾರನಾಗಿದ್ದೇನೆ ಮತ್ತು ನನಗೆ ಯಾವುದೇ ಅಹಂಕಾರವಿಲ್ಲ' ಎಂಬ ಮಾತನ್ನು ಮನದಟ್ಟು ಮಾಡಿಕೊಂಡು ಆ ಮನೋಧರ್ಮವನ್ನು ಗಟ್ಟಿಗೊಳಿಸತಕ್ಕದ್ದು. ಸರ್ವ ಸ್ತುತಿಗಳಿಗೆ ಅರ್ಹನಾದ ಮತ್ತು ಭೂಮ್ಯಾಕಾಶಗಳ ಒಡೆಯನು ಹಾಗೂ ಬಾದಶಹನು ಆದ ಅಲ್ಲಾಹನ ಬಗ್ಗೆ ಪ್ರವಾದಿತ್ವದ ಶೋಭಾಯಮಾನರಾದ ಮುಖಂಡರು

ಅತ್ಯಂತ ವಿನಯಶೀಲರಾಗಿ ನುಡಿಯುತ್ತಾರೆ, 'ಓ ದೇವರೇ ! ನಾನು ನಿನ್ನ ಸ್ತುತಿ ಸ್ತೋತ್ರಗಳನ್ನು ಲೆಕ್ಕ ಮಾಡುವುದಿಲ್ಲ. ನಿನ್ನ ವರ್ಣನೆಯನ್ನು ನೀನು ಮಾಡಿರುವಂತೆ ನೀನು ಅಗಣಿತ ಗುಣಗಳ ಖನಿಯಾಗಿದ್ದೀಯಾ'

ಅವನ ಸೌಂದರ್ಯದ ಸೂರ್ಯನ ಪ್ರಕಾಶವನ್ನು ಕಂಡವರ ನೋಟವು ಆಶ್ಚರ್ಯದಿಂದ ಕೂಡಿದೆ. ಬುದ್ಧಿ ಹಾಗೂ ಪ್ರಜ್ಞೆಯನ್ನು ಹೊಂದಿದ ವ್ಯಕ್ತಿಗಳು ಅವನ ಲೀಲೆಗಳ ರಹಸ್ಯವನ್ನು ಅರಿಯುವ ಪ್ರಯತ್ನದಲ್ಲಿ ವಿಫಲರಾಗಿದ್ದಾರೆ. ಆ ಹುಡುಕಾಟದ ಕುದುರೆ ಸವಾರರು ನಿರ್ಜನ ಕಾಡುಗಳಲ್ಲಿ ಅಲೆಯುತ್ತಿದ್ದಾರೆ.

ಯುವಕರು ಮತ್ತು ವೃದ್ಧರು ಆ ಅನ್ವೇಷಣೆಯಲ್ಲಿ ತಮ್ಮ ಪಯಣದ ರೆಕ್ಕೆಗಳನ್ನು ಕಳೆದುಕೊಂಡು ನಿರಾಶರಾಗಿದ್ದಾರೆ. ಅವನ ಪ್ರಬುದ್ಧತೆಯ ಪರಿವೀಕ್ಷಣೆಯಲ್ಲಿ ಎಲ್ಲರೂ ಅಂಧರಾಗಿದ್ದಾರೆ. ಸ್ವಸ್ಥ ಕಣ್ಣಿನ ವ್ಯಕ್ತಿಗಳು ತಮ್ಮ ತೀವ್ರ ಕಣ್ಣಿನ ನೋಟದಿಂದ ಅವನ ಬಲಾಢ್ಯ ಪರಿಸರವನ್ನು ಅಳೆಯಲು ವಿಫಲರಾಗಿ ಬೊಬ್ಬೆಯೊಡೆದ ಅಂಗಾಲುಗಳಿಂದ ಕೂಡಿ ಅಂಗವಿಹೀನರಾಗಿದ್ದಾರೆ. ಅವನ ಪ್ರಕೃತಿಯ ಸೂರ್ಯನು ಚಿನ್ನ, ಮುತ್ತು-ರತ್ನ, ವಜ್ರ ವೈಢೂರ್ಯದಿಂದ ಕೂಡಿದ ಸಮುದ್ರದ ಜೀವಾಳವಾಗಿವೆ. ದೈವ ಜ್ಞಾನವುಳ್ಳ ಜನರ ನೋಟದ ಪ್ರೀತಿ ಮತ್ತು ಕರುಣೆಯಾಗಿದ್ದಾನೆ. ಅಖಂಡ ನಂಬಿಕೆಯ ಜನರಿಗೆ ಬೆಳಕನ್ನು ನೀಡುವವನಾಗಿದ್ದಾನೆ. ಅವನ ಪ್ರೀತಿಪಾತ್ರ ಮಾಲಿಗಳು ಸಿಂಬಲ್ ಮರದ ಮತ್ತು ಅತ್ತರಿನ ಸುಗಂಧದೊಂದಿಗೆ ಹೃದಯದ ನಲಿವು, ಸಂತೋಷ ಮತ್ತು ಚೇತೋಹಾರಿ ಆಹ್ಲಾದಕ್ಕೆ ಕಾರಣಕರ್ತರಾಗಿದ್ದಾರೆ. ಕೆಡುಕನ್ನು ಬಯಸುವವರ ಕಣ್ಣಿನಲ್ಲಿ ಒಂದು ಬಿಂದು ಬಿಸಿ ಅಶ್ರು, ಬೇಡುವವರ ಹಾಗೂ ಕಂಗಾಲಾಗಿರುವ ಜನರ ಭರವಸೆಯ ಪೈರಿಗಿಂತ ಹೆಚ್ಚು ಹಸಿರಿನಿಂದ ಕೂಡಿರುತ್ತದೆ. ಅವರ ನೆನಪು ಹೂವು ಹಣ್ಣಿನಿಂದ ವಂಚಿತವಾಗಿ ಬರಡಾಗಿರುವ ಪ್ರದೇಶವನ್ನು ಕೂಡಾ ಜನವಸತಿಭರಿತವನ್ನಾಗಿ ಮಾಡುತ್ತದೆ. ಅವರ ಪ್ರಸ್ತಾಪವು ದೇಹ ದೇಗುಲದ ಅಂಧಕಾರವನ್ನು ತೊಡೆದು ಪ್ರಕಾಶಮಯವಾಗಿ ಮಾಡುವುದಾಗಿದೆ. ಅವರ ಕರುಣೆಯಿಂದ ಜಲದ ಕಣ್ಣು ಮೂಡಿ ಸಂಪದ್ಭರಿತವಾಗುತ್ತದೆ ಮತ್ತು ಅಗ್ನಿಯು ಅವರ ಪ್ರೇಮ ಸಿಂಚನದಲ್ಲಿ ಮಿಂದು ಪವಿತ್ರವಾಗುತ್ತದೆ. ಅವರ ನಿರಂತರ ಪ್ರೇಮಭಾವದಿಂದ ಉದ್ದೀಪನಗೊಂಡ ಅಭಿಮಾನಿ ಹೃದಯಗಳಲ್ಲಿ ಹುಚ್ಚು ಹೊಳೆಯು ಹರಿಯುತ್ತದೆ. ದಿವ್ಯಜ್ಞಾನದ ಸಂಚಾರದಿಂದ ಭಕ್ತರ ಕೊರಳುಬ್ಬಿ ಬರುತ್ತದೆ. ಆಕಾಶದಷ್ಟು ಉನ್ನತಿಯನ್ನು ಸಾಧಿಸಿದರೂ ಆ ಪ್ರೇಮಭಾವದಿಂದ ಹೊರಬರುವುದು ಕ್ಷಣಿಕ ಸುಖವಾಗುತ್ತದೆ.

ಕಂಗೊಳಿಸುವ ಆಕಾಶವು ಅವನ ಪ್ರೌಢಿಮೆ ಹಾಗೂ ಅನಂತತೆಯೆದುರು ಧೂಳಿನಿಂದಾವೃತವಾಗುತ್ತದೆ ಮತ್ತು ಅವನ ನೈಪುಣ್ಯತೆಯಿಂದ ಸ್ಫಟಿಕ ಶುಭ್ರ ಶರಾಬು ಭೂಮಿಯ ಪದರಗಳಲ್ಲಿ ಕುಂದಿ ಹೋಗುತ್ತದೆ. ಅವನ ಸೃಷ್ಟಿ ಅಸದೃಶ್ಯವಾಗಿದೆ.

ಆವಿಷ್ಕಾರದ ಯೋಜನೆಗಳು ಭೂಮಿಯ ಒಳ ಪದರುಗಳಲ್ಲಿ ಹುದುಗಿರುವ ಎಲ್ಲಾ ಸಿಹಿಯನ್ನು ಹೊರದೆಗೆಯಲಾಗಲಿಲ್ಲ. ಅವನ ಕಾರುಣ್ಯದ ಕೊಡುಗೆಯ ದೆಸೆಯಿಂದ ಸಾಖಿಯು ಪ್ರಳಯ ಕಾಲದ ತೀವ್ರ ನೀರಡಿಕೆಗೆ ಗುರಿಯಾದವರಿಗೆ ದೈವ ಪ್ರೇರಣೆಯ ಪೇಯವನ್ನು ಕುಡಿಸುತ್ತದೆ. ಈ ಬಿಸಿ ನಾಲಿಗೆಯವರಿಗೆ ಕೋರಿಕೆಯ ಬಟ್ಟಲಿನಲ್ಲಿ 'ಖಂಡಿತವಾಗಿಯೂ ನಾನೇ ಅಲ್ಲಾಹ್;ಇಡೀ ವಿಶ್ವದ ಪರಿಪಾಲಕ' ಎಂಬ ಜಲದ ಆಕರ್ಷಣೆಯತ್ತ ದೂಡಿದ. ಅವನ ಅಸ್ತಿತ್ವದ ದೈವಜ್ಞಾನವು ಮುತ್ತು ರತ್ನಗಳಿಗಿಂತಲೂ ಉತ್ತಮವಾದ ಪುಷ್ಪಗಳಾಗಿವೆ

ವಿಶ್ವಮಾನ್ಯರಾದ ಪ್ರವಾದಿಯವರ ಪ್ರೇಮಪೂರಿತ ಗುಣವಿಶೇಷಗಳನ್ನು ಬದುಕಿನ ಕೇಂದ್ರಬಿಂದುವನ್ನಾಗಿಸಿಕೊಂಡು ಸಹಸ್ರಾರು ವಿಧದ ಉತ್ಪನ್ನಗಳ ಬೆಳವಣಿಗೆಗೆ ನಾಂದಿಯಾಯಿತು ಮತ್ತು ಆ ಸೃಷ್ಟಿಯ ವರ್ತುಲವನ್ನು ಮಾನವನ ಅಸ್ತಿತ್ವದ ಮೂಲಕ ಕರುಣೆಯ ನೋಟದಿಂದ ವಿಸ್ತರಿಸಲಾಯಿತು ಹಾಗೂ ಮಾನವ ಜನಾಂಗದ ಒಳಿತಿಗೆ ಆಗಮಿಸಿದ ಪ್ರವಾದಿಗಳ ನಿರಂತರ ಸಂಪ್ರದಾಯದ ಅನುಸಾರಕ್ಕೆ ತಕ್ಕಂತೆ ತಮ್ಮನ್ನು ಪ್ರವಾದಿಗಳ ನೇತಾರರನ್ನಾಗಿ ಮಾಡಲಾಯಿತು. ಏಕೆಂದರೆ ಬರ್ಜಖ್ (ಮರಣಾ ನಂತರದಿಂದ ಪ್ರಳಯ ಕಾಲದವರೆಗಿನ ಮಧ್ಯಾವಧಿ) ಎಂಬ ಲೋಕದ ಅರಿವನ್ನು ಪಡೆದು, ವಿವೇಕ ಮತ್ತು ವಿವೇಚನೆಯ ಮೂಲಕ ಧಾರಣಶಕ್ತಿಯನ್ನು ಹೊಂದಿ ಜೀವನದ ಗುರಿಯನ್ನು ತಲುಪಲಿ. ಆ ದಿವ್ಯ ಚೈತನ್ಯದೊಂದಿಗೆ ಆತ್ಮದ ಅನುಸಂಧಾನವನ್ನು ಮಾಡುತ್ತ ನೀಚತನ, ಕಪಟ ಹಾಗೂ ಕ್ರಿಮಿ ಕೀಟಗಳಿಂದಲೂ ಮುಕ್ತಿ ಹೊಂದಿ ಶುಭ್ರವಾಗಲಿ. ಅಭೌತಿಕ ದೇವಚರರಿಂದ ಪ್ರಭಾವಿತರಾಗಿ ದಿವ್ಯ ದರ್ಶನವನ್ನು ಪಡೆಯಲಿ. ಭೌತಿಕವಾಗಿ ಮಾನವ ಸಂಬಂಧಗಳನ್ನು ಉತ್ತಮ ಪಡಿಸಿ ಪರಸ್ಪರ ಮೈತ್ರಿಯ ಸಹಯೋಗವನ್ನು ಪಡೆಯಲಿ. ಮಾರ್ಗದರ್ಶನದ ನಿರಂತರ ಚಿಲುಮೆ ಅಂದರೆ ದೈವ ಸಾಕ್ಷಾತ್ಕಾರದ ಪ್ರೇರಣೆಯೊಂದಿಗೆ ಹಜರತ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರವರ ಪ್ರವಾದಿತ್ವದ ಉದ್ಘೋಷಣೆ ಮಾಡುವಂತಾಗಲಿ.

ವಿಜಯವನ್ನು ಸಾಧನೆ ಮಾಡುವುದು ಹಾಗೂ ಬೇರೆಯವರಿಗೆ ಉಪಕಾರವನ್ನು ಮಾಡುವುದು ಕೂಡ ಕರ್ತವ್ಯವಾಗಿದೆ. ಇಂತಹ ಪ್ರೌಢಿಮೆಯಿಂದ ಕೂಡಿದ ಧರ್ಮವೇತ್ತ ವ್ಯಕ್ತಿಗಳು ತಮ್ಮ ಭಾಷಾ ಸಾಮರ್ಥ್ಯದ ಮೂಲಕ ಮಾನವ ಪ್ರೇಮ, ಜಿನ್ನ್, ಪಶು-ಪಕ್ಷಿ ಮತ್ತು ಪ್ರಾಣಿಗಳ ಜೊತೆಯಲ್ಲಿ ಕರುಣೆಯಿಂದ ಕೂಡಿದ ವರ್ತನೆಯಿಂದ ಹಾಗೂ ಭೂಮ್ಯಾಕಾಶಗಳ ಸೃಷ್ಟಿಕರ್ತನ ಸ್ತುತಿ ಸ್ತೋತ್ರಗಳಿಂದ ಬೆಳಗ ಬೇಕಿದೆ. ಅಪ್ರತಿಮ, ಅಗಾಧ ಸಾಮರ್ಥ್ಯದ ಅವನ ಸಂಶೋಧನೆಗಳು ಮತ್ತು ಉತ್ಪಾದನೆಗಳು ಅವನ ದೈವತ್ವದ ಆಧಾರ ಪ್ರಮಾಣದ ಸಾಕ್ಷಿಗಳಾಗಿವೆ. ದೇಶ ಮತ್ತು ವ್ಯಕ್ತಿಗಳ ವಿಧೇಯತೆ ಹಾಗೂ ದಾಸಾನುದಾಸತೆಯ ವ್ಯವಸ್ಥೆಯು ಪ್ರಮುಖವಾಗಬೇಕಿದೆ.

ಪ್ರವಾದಿತ್ವದ ಸಿಂಹಾಸನವನ್ನು ಅಲಂಕರಿಸುತ್ತ ಮಾನವನನ್ನು ಭ್ರಷ್ಟಗೊಳಿಸಿದ ಸೈತಾನನ ದರ್ಪ ಮತ್ತು ಅಹಂಕಾರದ ದುಷ್ಟತೆಯನ್ನು ನ್ಯಾಯಪರತೆಯ ಶಿಷ್ಟತೆಯಿಂದ ನಿರ್ಮೂಲನ ಮಾಡುವುದು. ಎಲ್ಲಿಯವರೆಗೆ ಆದಮ್ ನಬಿಯವರ ಆಗಮನವಾಗುವುದಿಲ್ಲವೊ ಮತ್ತು ಪಾಪನಾಶದ ಸಂಕಲ್ಪದ ಶಬ್ದಗಳು ಅರ್ಥ ಪಡೆಯುವುದಿಲ್ಲವೊ, ಅಲ್ಲಿಯವರೆಗೆ ಅವನ ಮುಕ್ತಿಯ ಮಾರ್ಗ ದೊರಕುವುದಿಲ್ಲ. ಎಲ್ಲಿಯವರೆಗೆ ಅದಮ್ ನಬಿಯ ಸಂತತಿಯು ತಮ್ಮನ್ನು ಅನುಸರಣೆ ಮಾಡುವ ಕ್ರಮವನ್ನು ಅನುಸರಿಸುವುದಿಲ್ಲವೊ ಅಲ್ಲಿಯವರೆಗೆ ಬಯಕೆ ಕೈಗೂಡುವುದಿಲ್ಲ ಹಾಗೂ ಭೌತಿಕ ಶರೀರಕ್ಕೆ ನರಕದ ಭಯಾನಕ ಶಿಕ್ಷೆಗಳಿಂದ ವಿನಾಯತಿ ದೊರಕುವುದಿಲ್ಲ ಮತ್ತು ಎಲ್ಲಿಯವರೆಗೆ ತನ್ನ ಜೀವಿತಾವಧಿಯಲ್ಲಿ ನಿಗೂಢವಾದ ತಮ್ಮ ಪ್ರಕಾಶದ ಬೆಳಕಿನ ಪ್ರಭೆಯನ್ನು ಕಾಣುವುದಿಲ್ಲವೋ ಅಲ್ಲಿಯವರೆಗೆ ಅತನಿಗೆ ಮುಕ್ತಿ ಇಲ್ಲ. ಸುಬಹಾನಲ್ಲಾ! ಇದೆಂಥ ವಿಶ್ವದ ಮಹಾ ಸಾಗರ ಮತ್ತು ನಾಯಕತ್ವದ ಅನರ್ಘ್ಯ ಮುತ್ತು ಹಾಗೂ ಉನ್ನತ ಮಟ್ಟದ ರತ್ನ. ಯಾವಾತನ ಪದತಲದ ಮಣ್ಣು ಸಪ್ತ ರಾಜ ಸಿಂಹಾಸನಕ್ಕಿಂತಲೂ ಮಿಗಿಲಾದುದು. ತಮ್ಮ ದರಬಾರಿನ ಕಣ ಕಣವೂ ಕೂಡ ಸೂರ್ಯನ ಕಿರಣಗಳ ಮುಖಾಬಿಲೆ ಮಾಡುತ್ತದೆ. ಭೂಮ್ಯಾಕಾಶಗಳ ನಿವಾಸಿಗಳಿಗೆ ತಮ್ಮ ಅಸ್ತಿತ್ವದ ದೆಸೆ ಮಾತ್ರದಿಂದಲೇ ಔನ್ನತ್ಯ ಮತ್ತು ಶ್ರೇಷ್ಠತೆ ಪ್ರಾಪ್ತವಾಗಿದೆ. ತಮ್ಮ ಪೂರ್ಣ ಪ್ರಜ್ವಲ ದೇದೀಪ್ಯಮಾನ ಪ್ರಕಾಶದ ದೆಸೆಯಿಂದ ಮಾನವ ಜೀವಿಗಳು ಹಾಗೂ ಜಿನ್ನ್‌ಗಳಿಗೆ ಕ್ರಿಯಾಶೀಲತೆ, ಗೌರವ ಹಾಗೂ ಶ್ರೇಯಸ್ಸು ಲಭಿಸಿದೆ.

'ಖಂಡಿತವಾಗಿಯೂ ತಮಗೋಸ್ಕರ ಸನ್ನಡತೆ ಉತ್ತಮವಾಗಿದೆ' ದೇಶದ ವಿಶ್ವಾಸಿ ರಾಜಮುಕುಟಗಳಿಗೆ ಅತೀವ ಮೃದುಹೃದಯ ಹೊಂದಿದ ಕರುಣಾಳುವಾಗಿದ್ದಾರೆ. 'ನರಕದಿಂದ ಮುಕ್ತಿ ಹೊಂದುವ ನನ್ನ ಅನುಯಾಯಿಗಳ ಹಕ್ಕು ಇಬ್ರಾಹಿಮ್ ಪ್ರವಾದಿ ಮತ್ತು ಬೆಂಕಿಯ ಬಾಂಧವ್ಯದಂತೆ' ಎಂಬ ಉಕ್ತಿಯಂತೆ. 'ಬೆಳಗು ಮತ್ತು ಬೈಗು ಅಲ್ಲಾಹನ ಸ್ತುತಿಯನ್ನು ಮಾಡಿ' ಎಂಬ ಆದೇಶವನ್ನು ನೀಡಿದರು. 'ಬೇಶಕ್ ತಾವು ಅಲ್ಲಾಹನ ಭಯದ ಬಗ್ಗೆ ತಿಳಿಹೇಳಲಿದ್ದೀರಿ ಹಾಗೂ ಪ್ರತಿ ಜನಾಂಗಕ್ಕೂ ಒಬ್ಬ ಪ್ರವರ್ತಕನಿದ್ದಾನೆ' ಎಂಬ ಹೇಳಿಕೆಗೆ ಬದ್ಧರಾಗಿದ್ದೀರಿ ಹಾಗೂ ಮಾನವೀಯತೆಗೆ ಮಾರ್ಗದರ್ಶನದ ಸಂದೇಶವನ್ನು ನೀಡಿದ್ದೀರಿ. 'ಮತ್ತು ಅಲ್ಲಾಹ್ ಒಳಿತಿನ ಹಾದಿಯ ಮಾರ್ಗದರ್ಶಕನಾಗಿದ್ದಾನೆ' ಎಂಬ ಮಾತನ್ನು ಧೃಡೀಕರಿಸಿದ್ದೀರಿ. ಮತ್ತು ಅಲ್ಲಾಹನೊಡನೆ 'ಯಾವೊಂದು ವಸ್ತು ಇಲ್ಲದಿದ್ದಾಗ್ಯೂ ಆಹೊತ್ತಿನಲ್ಲಿಯೂ ನಾನಿದ್ದೆ' ಎಂಬ ಮಾತಿನ ರಹಸ್ಯವನ್ನು ತಿಳಿಯುವವರಿದ್ದೀರಿ ಮತ್ತು 'ಆ ಹೊತ್ತಿನಲ್ಲಿ ಸೂರ್ಯನಾಗಲೀ ಚಂದ್ರನಾಗಲೀ ಮತ್ತು ನೆರಳಾಗಲೀ ಇರಲಿಲ್ಲ' ಎಂಬ ಸ್ಥಾನವನ್ನು ಅಲಂಕರಿಸಿದ್ದೀರಿ. ಅವನ ಆಸ್ಥಾನದಲ್ಲಿ ಅತೀವ ಪ್ರಭೆಯ ಚೆಹರೆಯಿಂದ ಕೂಡಿದ ಪ್ರಸನ್ನ ಚಿತ್ತತೆಯಿಂದ ಕೂಡಿದ ಗುಂಪನ್ನು 'ಪ್ರಕಾಶಮಯ ಚೆಹರೆ ಮತ್ತು ಮುಗುಳುನಗೆಯಿಂದ ಕೂಡಿ

ಸಂತಸದಿಂದ ಇರುವವರು' ಎಂದು ಗುರುತಿಸುವವರು. ಸದರಿ ಆಸ್ಥಾನದ ದ್ರೋಹಿಗಳು 'ಈ ಲೋಕ ಮತ್ತು ಪರಲೋಕದಲ್ಲಿ ನಷ್ಟವನ್ನು ಅನುಭವಿಸುವವರು' ಎಂಬ ದೃಷ್ಟಾಂತದಂತೆ ಇರುವವರು. 'ಅಲ್ಲಾಹನ ವಿನಃ ಬೇರೆ ಯಾರೂ ಅರಾಧ್ಯರಿಲ್ಲ' ಎಂಬ ಅರಿವಿನ ಬೆಳಕನ್ನು ಬೀರಿದವರಾಗಿರುತ್ತೀರಿ. ಅವಿಧೇಯತೆ ಮತ್ತು ಕುಕರ್ಮಗಳಲ್ಲಿ ಮುಳುಗೇಳುತ್ತಿರುವವರ ಆರ್ತ ಪ್ರಾರ್ಥನೆಗೆ ಓಗೊಡುತ್ತಿರುವುದು ಮೊಹಮ್ಮದ್ ರಸೂಲಲ್ಲಾರವರ ಕರುಣೆಯ ಪ್ರತೀಕವಾಗಿದೆ.

ಪಾಪದ ಕೊಚ್ಚೆಯಲ್ಲಿ ಮುಳುಗೇಳುತ್ತಿರುವವರ ರಕ್ಷಕರಾಗಿರುವ ಪ್ರವಾದಿಯವರು, ಪ್ರವಾದಿತ್ವದ ಹೆಸರಾಂತ ವ್ಯಕ್ತಿಗಳ ಪೈಕಿ ಪ್ರಕಾಶಮಯ ಮೋರೆಯುಳ್ಳವರು. ಸನ್ನಡತೆಯ ಯೋಧ, ದಿವ್ಯಜ್ಞಾನದ ಕ್ಷೇತ್ರದ ಅಸೀಮ ಸವಾರ, ಪ್ರಕಾಶಮಯ ಸಿಂಹಾಸನದಲ್ಲಿ ಆಸೀನರಾಗಿರುವ ಬಾದಶಹ ಮತ್ತು ಪ್ರವಾದಿತ್ವದ ಪಟ್ಟ ಹೊಂದಿರುವವರ ಗುಂಪಿನ ನಾಯಕರಾಗಿದ್ದಾರೆ. ಪ್ರಳಯದ ದಿನದಂದು ಅವರು ಉನ್ನತ ಆಸ್ಥಾನದ ಶ್ರೇಷ್ಠ ಜನಗಳ ಪೈಕಿ ಪರಿಗಣಿಸಲ್ಪಡುತ್ತಾರೆ. ಅಸಹಾಯಕರು ಮತ್ತು ಇಲ್ಲದವರು ಅವರ ಶಿಫಾರಸ್ಸನ್ನು ಬೇಡುವವರಾಗಿದ್ದಾರೆ. ಅವರು ಅಂತಿಮ ದಿನದ ಭಯಾನಕ ತೀರ್ಪಿನ ಸಂದರ್ಭದಲ್ಲಿ ಹಾದಿ ತಪ್ಪಿದ ಜನರ ಮುಕ್ತಿಯ ಸಲುವಾಗಿ ಮರ್ಯಾದೆಯ ಕತ್ತಿಯನ್ನು ಝಳಪಿಸುವವರಾಗಿದ್ದಾರೆ.

ಖೈದಿಗಳಾಗಿ ಜೀವ ಸವೆಸುತ್ತಿರುವವರ ಬಿಡುಗಡೆ ದೊರಕಿಸಿಕೊಡುವವರಾಗಿದ್ದಾರೆ. ಅವರ ಬಗ್ಗೆ ದರೂದ್ ಹೇಳುವುದರ ಮೂಲಕ ಸದಾಶಯವನ್ನು ಕೋರುವುದು ಪ್ರಳಯದ ದಿನದಂದು ಪುಣ್ಯದ ತೂಕವನ್ನು ಹೆಚ್ಚಿಸಿಕೊಳ್ಳುವುದಾಗಿದೆ. ವಿಶ್ವಾಸಿಗಳಾದ ಅನುಯಾಯಿಗಳು ಹಾಗೂ ಪಾಪಾತ್ಮರು ಎಲ್ಲರೂ ತಮ್ಮ ಮೇಲೆ ದರೂದ್ ಹೇಳುವುದು ಅಗತ್ಯವಾಗಿದೆ. ಪ್ರಳಯಕಾಲದಲ್ಲಿ ಎಲ್ಲ ಜನ ಮತ್ತು ಜನಾಂಗಗಳು ಸೇರುವ ಹಶರ್ ಮೈದಾನದಲ್ಲಿ ತಮ್ಮ ಸ್ಥಾನ –ಮಾನ ಹಾಗೂ ದರ್ಜೆಯ ಎದುರಿಗೆ ಭೂಮ್ಯಾಕಾಶಗಳು ಕೀಳಾಗಿ ಕಂಡು ಬರುತ್ತವೆ.ಹಾಗೂ ತಾವು ಹೆಜ್ಜೆಯೂರಿದ ಸೌಭಾಗ್ಯದ ದೆಸೆಯಿಂದ ಭೂಮಿಗೆ ಆಕಾಶಕ್ಕಿಂತ ಹೆಚ್ಚಿನ ಪ್ರಾಶಸ್ತ್ಯ ದೊರಕುವುದು. ತಮ್ಮ ಅನುಯಾಯಿಗಳು ಹಾಗೂ ಸಂಗಾತಿಗಳು ಈ ಲೋಕ ಮತ್ತು ಪರಲೋಕದಲ್ಲಿಯೂ ಪುಷ್ಪ ಸಮಾನ ಬೆಳಗುತ್ತ ಕಂಗೊಳಿಸುತ್ತಾ ಇರುತ್ತಾರೆ ಮತ್ತು ತಮ್ಮ ವಿರೋಧಿಗಳು ಋತುಮಾನಕ್ಕೆ ಅನುಗುಣವಾಗಿ ಉದುರಿ ಬಿದ್ದಿರುವ ಹಳದಿ ಎಲೆಗಳಂತೆ ಕಂಡು ಬರುವರು ಮತ್ತು ತಮ್ಮ ಗೌರವದ ಕುರ್ಚಿ ಎತ್ತರೆತ್ತರಕೆ ಏರುವುದು ಹಾಗೂ ತಮ್ಮ ಹೊಸ್ತಿಲ ಮಣ್ಣು ಅರಬ್‌ನ ಗೌರವ ಮತ್ತು ಸ್ಥಾನವನ್ನು ಹೆಚ್ಚಿಸುವುದು.

ತಮ್ಮ ಧರ್ಮದ ಸೂರ್ಯ ಉದಯವಾದದ್ದರಿಂದ ಇನ್ನಿತರೆ ಪ್ರವಾದಿಗಳ ಧರ್ಮದ ನಕ್ಷತ್ರಗಳು ಮುಳುಗಲಾರಂಭಿಸಿವೆ. ತಮ್ಮ ಶ್ರೇಯಸ್ಸಿನ ಸವಾರರು ಉನ್ನತ

ಮಟ್ಟಕ್ಕೆ ಏರಿದ್ದು, ಸೈತಾನನು ಸಣ್ಣ ತಲೆಯ ಇರುವೆಯಂತೆ ಪಾತಾಳ ಸೇರಿದನು. ತಮ್ಮ ಅಧಿಕಾರ ಹಾಗೂ ಸೇವೆಯ ಮೂಲಕ ಪ್ರಜ್ವಲಿಸುವ ಬೆಂಕಿಯು ನಂಬಿಕೆ ಹಾಗೂ ವಿಶ್ವಾಸದೆದುರು ತಂಪಾದ ನೀರಿನಂತೆ ಆಗಿದೆ. ತಮ್ಮೊಡನೆ ಸಂಘರ್ಷ ಹಾಗೂ ಭಿನ್ನಾಭಿಪ್ರಾಯವನ್ನು ಹೊಂದಿರುವ ಕಪಟ ವಿಶ್ವಾಸಿಗಳ ಮೋರೆಗಳು ಕಳಾಹೀನವಾಗಿವೆ ಮತ್ತು ತಮ್ಮ ಉತ್ತಮ ಚಾರಿತ್ರ್ಯದ ದೆಸೆಯಿಂದ ಕಬ್ಬಿಣದಂತೆ ಗಡುಸು ಹೃದಯವನ್ನು ಹೊಂದಿದ್ದ ವ್ಯಕ್ತಿಗಳು ಮೇಣದಂತಾಗಿದ್ದಾರೆ. ತಮ್ಮ ಹೃದಯಪೂರ್ವಕ ಸಂಭಾಷಣೆಯ ದೆಸೆಯಿಂದ ದುರ್ಮಾರ್ಗಿಗಳು ತಮಗೆ ಶರಣಾದರು. ತಮ್ಮ ಸಫಲವಾದ ಸಂವಾದದ ದೆಸೆಯಿಂದ ಅವಿಧೇಯತೆ ಮತ್ತು ವಕ್ರತೆಯನ್ನು ಹೊಂದಿದ ವ್ಯಕ್ತಿಗಳು ಶರಣಾಗತಿ ಮತ್ತು ರಾಜಿಯ ಸರಪಳಿಯ ಕೊಂಡಿಗಳಾದರು. ಅದಮ್ ಪ್ರವಾದಿಯವರು ಭಕ್ತಿಯ ಪರಾಕಾಷ್ಠತೆಯ ದೆಸೆಯಿಂದ ಉಭಯಲೋಕಗಳಲ್ಲಿಯೂ ಶ್ರೇಯಸ್ಸನ್ನು ಹೊಂದಿದರು. ಹಾಗೂ ಇಬ್ಲೀಸನು (ಶೈತಾನನು) ಪ್ರಕಾಶಮಯವಾದ ಸಜ್‌ದಾ (ಸಾಷ್ಟಾಂಗ)ದಿಂದ ತಿರಸ್ಕಾರ ಮತ್ತು ನಿರಾಕರಣೆ ಮಾಡುವ ಮೂಲಕ ಉಭಯಲೋಕಗಳಲ್ಲಿಯೂ ಅಲ್ಲಾಹನ ಕೃಪೆಯಿಂದ ದೂರವಾದ ಮತ್ತು ತಮ್ಮ ಹೆಜ್ಜೆ ಗುರುತಿನ ಕೃಪೆಯ ಸೌಭಾಗ್ಯದಿಂದ ಆಕಾಶವು ತಲೆ ಎತ್ತಿ ನಿಂತಿತು. ವಿಶ್ವವನ್ನು ಬೆಳಗುವ ರಂಗೇರಿದ ಕೆನ್ನೆಯ ದೃಷ್ಟಾಂತದಂತೆ ನೋಡುಗರ ಕಣ್ಣೋಟದ ಕನ್ನಡಿಯಲ್ಲಿ ಅಲೆಗ್ಸಾಂಡರ್‌ನಂತೆ ಕಂಡು ಬಂದಿತು. ತಮ್ಮ ನಾಮಧೇಯವು ಹೆಸರಾಂತ ಪುಸ್ತಕಗಳ ಮತ್ತು ವ್ಯಾಖ್ಯಾನಗಳ ಒಡವೆಯಂತೆ ರಾರಾಜಿಸಿತು. ಸತ್ಯ ಮತ್ತು ನ್ಯಾಯಪರತೆಯ ತೋಟದ ಬುಲ್ಬುಲ್ ಹಕ್ಕಿ ಕೃತಜ್ಞತೆ ಹಾಗೂ ಪ್ರಾಮಾಣಿಕತೆಯ ತೋಟದ ತೋತಿ ಅಬುಲ್ ಕಾಸಿಮ್ ಮೊಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಆಗಿದಾರೆ.

ಒಂದು ವೇಳೆ ವಸ್ತು ಸ್ಥಿತಿಯ ಅರಿವನ್ನು ಹೊಂದಿರುವ ವ್ಯಕ್ತಿಗಳು ಬಹಿರಂಗವಾಗಿ ಸಾಕ್ಷ್ಯಾಧಾರಗಳ ಮತ್ತು ಅರ್ಥ ತಾತ್ಪರ್ಯಗಳ ನಡುವಿನ ಭೇದವನ್ನು ಬಹು ಮುಖ್ಯ ಎಂದು ಭಾವಿಸಿದಲ್ಲಿ, ರಹಸ್ಯಮಯವಾಗಿ ಪರದೆಯ ಹಿಂದೆ ಅಡಗಿದ ಅರ್ಥ ತಾತ್ಪರ್ಯಗಳನ್ನು ಸಾಕ್ಷ್ಯಾಧಾರಗಳ ನೆರವಿಲ್ಲದೆ ಹುಡುಕುವುದು ದುಸ್ತರವಾಗಿದೆ. ತಜ್ಞ ಮೇಧಾವಿಗಳು ಇದರ ಅನ್ವೇಷಣೆಯಲ್ಲಿ ಸಹಸ್ರ ಸಹಸ್ರ ಪ್ರಯತ್ನಗಳನ್ನು ಮಾಡಿ ಸಾಧನೆಗೈಯುತ್ತಾರೆ. ತದನಂತರ ಅಸಲಿ ಉದ್ದೇಶದತ್ತ ಮುನ್ನುಗ್ಗಿ ಅದರ ಸಾಫಲ್ಯವನ್ನು ಮನಗಾಣುತ್ತಾರೆ ಹಾಗೂ ಅದರ ಬೆಳಕನ್ನು ಪ್ರಜ್ವಲಿಸುವುದು ಮುಖ್ಯ ಕರ್ತವ್ಯವೆಂದು ಭಾವಿಸುತ್ತಾರೆ. ಇದೇ ಆಧಾರದ ಮೇಲೆ ನಬಿ ಸ. ಅ.ಸ ರವರ ಪ್ರಶಂಸೆ ಮತ್ತು ಸೃಷ್ಟಿಕರ್ತನ ಕೀರ್ತನೆಯ ವಿರುದ್ಧ ಉಳಿದವೆಲ್ಲಾ ವಿಷಯಗಳು ಸಾಮಂತರು ಹಾಗೂ ಜನ ಸಾಮಾನ್ಯರಿಗೆ ಅಂಧಾನುಕರಣೆಯಗುತ್ತದೆ.

ಆ ಬೆಳಕಿನ ಪ್ರಭೆಯು "ತಮ್ಮ ಅಸ್ತಿತ್ವ ಇಲ್ಲದೆ ಇದ್ದಲ್ಲಿ ಆಕಾಶಗಳನ್ನು ಸೃಷ್ಟಿಸುತ್ತಿರಲಿಲ್ಲ" ಮತ್ತು "ತಮ್ಮ ಅಸ್ತಿತ್ವ ಇಲ್ಲದೆ ಇದ್ದಲ್ಲಿ ತನ್ನ ಪ್ರಭುತ್ವವನ್ನು ಪ್ರಕಟ ಪಡಿಸುತ್ತಿರಲಿಲ್ಲ" ಎಂಬಂತೆ ವೈಯುಕ್ತಿಕ ಹಾಗೂ ಗುಣಾತ್ಮಕ ಲೀಲೆಯ ಖಜಾನೆಗಳ ಮೂಲಕ ಅಲ್ಲಾಹನ ಹೊರತು ಬೇರೆ ಇನ್ನು ಯಾರು ಕೂಡ ಪ್ರವಾದಿಯವರೊಡನೆ ಯಥೋಚಿತ ಸಂಬಂಧವನ್ನು ಸ್ಥಾಪಿಸುತ್ತಿರಲಿಲ್ಲ ಹಾಗೂ ಅಲ್ಲಾಹನ ವಿನಃ ಇನ್ಯಾರಿಗೂ ಈ ಗೌರವಾನ್ವಿತ ಅಸ್ತಿತ್ವದ ಬಗ್ಗೆ "ಅವರಿಬ್ಬರೂ ಪರಸ್ಪರ ಸಮೀಪಿಸಿದರು ಎರಡು ಕಮಾನುಗಳಂತೆ ಅಥವಾ ಅದಕ್ಕಿಂತಲೂ ಹೆಚ್ಚು" ಎಂಬ ರಹಸ್ಯ ಕಾಪಿಡುವಂತೆ. ಚಾದರವನ್ನು ಹೊದ್ದವರು(ಅಂದರೆ ಪ್ರವಾದಿಯವರು) ಮೃದುಭಾಷಿಯಾಗಿದ್ದಾರೆ. ಸದ್ಗುಣಿಗಳ ಆಗರ ಮತ್ತು ಉನ್ನತ ಸ್ಥಾನದ ತಮ್ಮಂತಹವರ ಹಾಗೂ ತಮ್ಮ ಮನೆತನದ ಮತ್ತು ಆಪ್ತ ಸಂಗಾತಿಗಳ ಗುಣಗಾನ ಮಾಡುವ ಕ್ಷೇತ್ರದಲ್ಲಿ ನನ್ನಂತಹ ಪಾಮರನು ಯಾವ ಲೆಕ್ಕ?

ಅಂತರಂಗದ ದೃಷ್ಟಿಯನ್ನು ಹೊಂದಿರುವ ಅನುಯಾಯಿಗಳ ಹೇಳಿಕೆಯಂತೆ, ಅಮ್ಮಾನ್ ಮಹಾಸಾಗರದ ಈಜುಗಾರರು ಮತ್ತು ಸಾಹಿತ್ಯಲೋಕದ ಪಯಣಿಗರು ಹಾಗೂ ಸೂಕ್ಷ್ಮ ದೃಷ್ಟಿಯುಳ್ಳವರು ಆಯತೆ ಕರೀಮ ಅಂದರೆ 'ಅಲ್ಲಾಹ್ ಮತ್ತು ಆತನ ಫರಿಶ್ತಗಳು ನಬಿ ಸ.ಅ.ಸ ರವರ ಮೇಲೆ ದರೂದ್ ಪಠಿಸುತ್ತಾರೆ. ಓ ವಿಶ್ವಾಸಿಗರೇ ನೀವು ಕೂಡ ನಬಿ ಸ.ಅ.ಸ.ರವರ ಮೇಲೆ ದರೂದನ್ನು ಪಠಿಸಿ ಹಾಗೂ ಪವಿತ್ರ ಮತ್ತು ಉತ್ಕೃಷ್ಟ ದರೂದ್‌ನ ಕಾಣಿಕೆಯನ್ನು ಸಲ್ಲಿಸಿ. ಆ ದರೂದ್ ಪ್ರಳಯ ಕಾಲದ ಇಡುಗಂಟು ಮತ್ತು ಪುಲ್ಸಿರಾತ್ ಎಂಬ ಸೇತುವೆಯ (ಪರಲೋಕದಲ್ಲಿ ಮಾನವನ ಕರ್ಮಗಳ ವಿಚಾರಣೆ ನಡೆದ ಬಳಿಕ ಪುಣ್ಯಶಾಲಿಗಳು ನೇರವಾಗಿ ಸ್ವರ್ಗಕ್ಕೆ ಮತ್ತು ಪಾಪಿಗಳು ನರಕಕ್ಕೆ ಸಾಗುವ ಸೇತುವೆ)ಮಾರ್ಗದ ಮೂಲಕ ತಮ್ಮ ಪವಿತ್ರ ಗೋರಿ ಹಾಗು ಪ್ರಕಾಶಮಯ ಅಂತಿಮ ತಾಣದ ಮೇಲೆ ಸಲಾಮ್ ಹಾಗೂ ದರೂದ್‌ನ ಕಾಣಿಕೆಯನ್ನು ಸಲ್ಲಿಸೋಣ

ಮರಳು ಮತ್ತು ನೀರಿನಿಂದ ಆವೃತವಾದ
ಏಳುನದಿಗಳು ಅಥವ ಕೊರಕಲು
ಧೂಳಿನಿಂದ ತುಂಬಿದ ಮೋರೆಯವರಿಗಾಗಿ
ಮೊದಲ ಅಲೆಯಂತೆ ಚೇತೋಹಾರಿ
ಅವನ ತುಟಿಗಳಿಂದ ಹೊರಬಿದ್ದ ಅಕ್ಷರದಂತೆ ಸ್ಫುಟ
ಅಂದರೆ ಉಭಯಲೋಕಗಳು ಅವನ ಪಾದಗಳ
ಒಳಗಿನ ಆತ್ಮದ ನಕಾಶೆಯಾಗಿವೆ

ತಾವು ನಬಿ ಸ.ಅ.ಸ.ರವರ ಅನುಯಾಯಿ ಹಾಗೂ ವಂಶಸ್ಥರಾಗಿದ್ದು ಹಾದಿ ತಪ್ಪಿದವರ ಮಾರ್ಗದರ್ಶಕರು ಇಸ್ಲಾಮಿನ ಉನ್ನತ ಕಟ್ಟಡದ ಸ್ಥಂಭವಾಗಿದ್ದೀರಿ. ಯಾವಾತನ ಹೆಸರಿನ ಬಲದಿಂದ ಅಲ್ಲಾಹನ ಪ್ರವಾದಿಯವರ ನೆರವು ಪಡೆದ ಅನುಯಾಯಿ ಮತ್ತು ನಾಯಕರ ಕೃಪೆ ಹೊಂದಿದರೋ ಆ ಬಾದಶಹನ ಪ್ರಶಂಸೆಯಿಂದ ಶಕ್ತಿ ಪಡೆದವರಾಗಿರುತ್ತೀರಿ ಮತ್ತು ಸರ್ವಶಕ್ತನ ಆಪ್ತತೆಯ ಸಾಗರದ ವೀರ ಯೋಧನಾಗಿದ್ದು, ಕರುಣಾಳು ಮತು ಅನುಗೃಹಿತರಾಗಿರುತ್ತೀರಿ.'ಅಲಿಯೊಡನೆ ಪ್ರೇಮ ಹೊಂದಿರುವವನೇ ಮೋಮಿನ್; ಅಲಿಯೊಡನೆ ವೈರತ್ವ ಹೊಂದಿರುವವನೇ ಕಪಟ ವಿಶ್ವಾಸಿ'. 'ಅಲಿಗೆ ನೆರವು ನೀಡುವುದು ಉಭಯ ಲೋಕಗಳ ಭಕ್ತಿಭಾವಕಿಂತ ಮಿಗಿಲಾದುದು' ಮತ್ತು 'ಅವರು ಬಡವರು, ಅನಾಥರು ಮತ್ತು ಖೈದಿಗಳಿಗೆ ಉಣ ಬಡಿಸುವರು ಅಲ್ಲಾಹನ ಪ್ರೀತ್ಯರ್ಥವಾಗಿ' ಎಂದ ದರ್ಜೆಯನ್ನು ಹೊಂದಿದವರಾಗಿದ್ದಾರೆ. ಅವರ ಉನ್ನತ ಸ್ಥಾನದ ನಾಲ್ಕು ಗೋಡೆಗಳ ನಡುವೆ ಅವರ ಪ್ರೀತಿಯ ಗುರುತು ಉಭಯ ಲೋಕದ ಶ್ರೇಯಸ್ಸಿನ ದ್ಯೋತಕವಾಗಿದೆ.

ಅವರ ಬಗ್ಗೆ ಅಸೂಯೆ ಪಡುವುದು ದುರದೃಷ್ಟಕಾರಿ ಹಾಗೂ ಉಭಯಲೋಕಗಳಲ್ಲಿ ಮುಖಾಡೆ ಬೀಳುವುದಾಗಿದೆ. 'ತಾವು ನನ್ನ ಪ್ರಪಂಚದ ಮತ್ತು ನನ್ನ ಪರಲೋಕದ ಸರದಾರರಾಗಿರುತ್ತೀರಿ ಎಂದು ನಾನು ಅವರ ಬಗ್ಗೆ ಒಪ್ಪಿಕೊಳ್ಳುತ್ತೇನೆ. 'ಮೂಸಾರವರ ಬಳಿ ಹಾರೂನ್‌ನ ಸ್ಥಾನ ಮಾನವು ಹೇಗಿತ್ತೊ ಅದೇ ರೀತಿಯ ನಿಮ್ಮ ಸ್ಥಾನವು ನನ್ನ ಬಳಿ ಇದೆ'. 'ನಾನು ಯಾರ ಮೌಲಾ ಆಗಿದ್ದೇನೆಯೋ ಅಲಿ ಅವರ ಮೌಲಾ ಆಗಿದ್ದಾರೆ 'ಮತ್ತು ನಬಿ ಸ.ಅ.ಸ. ರವರ ಪ್ರಾರ್ಥನೆ ಹೀಗಿದೆ 'ಓ ಅಲ್ಲಾಹ್ ಯಾವಾತನು ಅಲಿಯ ದೋಸ್ತ್ ಆಗಿದ್ದಾನೋ ಆತನನ್ನು ನಿನ್ನ ದೋಸ್ತ್ ಅಗಿ ಸ್ವೀಕರಿಸು ಮತ್ತು ಅಲಿಯನ್ನು ದ್ವೇಷಿಸುವವನನ್ನು ನಿನ್ನ ಶತ್ರುವನ್ನಾಗಿ ಪರಿಗಣಿಸು'

ಅಲಿಯ ಕರುಣೆಯ ಸುಗಂಧಪೂರಿತ ಅಂಬರ್ ಬೆಳಗಿನ ತಂಗಾಳಿಯ ಗೊಂಚಲಿನ ಮೇಲೆ ಬಿದ್ದಲ್ಲಿ ಕೂಡಲೇ ಅದು ಅರಳುವ ಪುಷ್ಪದಂತೆ ಬೆಳಗಿ ಈ ಲೋಕ ಮತ್ತು ಪರಲೋಕದ ಸುಗಂಧವನ್ನು ಪ್ರಕಟಪಡಿಸುವುದು ಮತ್ತು ತಮ್ಮ ಕ್ರೋಧವು ಒಂದು ವೇಳೆ ಹೊಳೆಯುವ ಪುಷ್ಪದ ಮೇಲೆ ಬಿದ್ದಲ್ಲಿ ಮುದುಡಿ ಹೋದ ಗೊಂಚಲಿನಂತೆ ಮತ್ತು ಬಿಗಿದ ಕೊರಳಿನ ಗೊಂಚಲಿನಂತೆ ಯಮಲೋಕಕ್ಕೆ ಹೋಗಿ ಮಾಯವಾಗಿ ಬಿಡುವುದು. ಅವರ ಕರುಣಾಳುಪೂರಿತ ದೃಷ್ಟಿಯ ದೆಸೆಯಿಂದ ಖಡ್ಗದ ಗಾಯವು ಸಾಗರದಂತೆ ಮುತ್ತುರತ್ನಗಳನ್ನು ಹೊರತೆಗೆಯುವುದು ಮತ್ತು ಅವರ ಹಣೆಯ ಮೇಲಿನ ನೆರಿಗೆಯು ಗಟ್ಟಿ ಲೋಹವನ್ನು ಕೂಡಾ ನೀರಿನೋಪಾದಿಯಲ್ಲಿ ಕರಗಿಸಿಬಿಡುವುದು. ಅವರ ಕೃಪಾದೃಷ್ಟಿಯು ಮೂಕ ಮಂಕು ತಿಮ್ಮನ ಮೇಲೆ ಬಿದ್ದಲ್ಲಿ ಪರಿವೀಕ್ಷಕರ ಮೌಲ್ಯಮಾಪನದಲ್ಲಿ ಅದು ಸೂರ್ಯನಿಗಿಂತಲೂ ಹೆಚ್ಚು

ಅಮೂಲ್ಯವಾಗುವುದು.ತಮ್ಮ ಕ್ರೋಧವು ಸೂರ್ಯನತ್ತ ಹೊರಳಿದಲ್ಲಿ ಅಶ್ಲೀಲ ಮನೋಭಾವದ ಜನರ ನಡುವೆ ದರಿದ್ರ ಮೂಕ ಕತ್ತೆಗಿಂತಲೂ ಹೀನಾಯವಾದ ಪರಿಸ್ಥಿತಿಯೊದಗುತ್ತದೆ. ತಾವು ಮೊಹಮ್ಮದ್ ಸ.ಅ.ಸ.ರವರ ಉಯಿಲಿನ ನಾಮಾಂಕಿತರು. ನನ್ನ ಇಶಾರೆಯು ಅಮೀರುಲ್ ಮೋಮಿನೀನ್ ಪವಿತ್ರಾತ್ಮಗಳ ಸರದಾರರಾದ ಸಯ್ಯದಿನಾ ಅಲಿ ಮುರ್ತಝಾ ಕರಮುಲ್ಲಾವಜಹಿಯಾ ಅವರಾಗಿದ್ದಾರೆ. ಅವರು ತಮ್ಮ ಸಮಕಾಲೀನರು ಮತ್ತು ತಮ್ಮ ಕಾಲದ ಪ್ರಭಾವಿ ವ್ಯಕ್ತಿಗಳ ಪೈಕಿ ಅಸಾಮಾನ್ಯರಾಗಿದ್ದಾರೆ.

ತಮ್ಮ ತೀರ್ಥರೂಪುರವರ ಅಂದರೆ ಮಾವನವರ ಪ್ರವಾದಿಗಳ ಸುಲ್ತಾನರು ಹಾಗೂ ಸನ್ಮಾರ್ಗದ ಪ್ರವರ್ತಕರು. ಏಳು ಆಕಾಶಗಳ ಸೃಷ್ಟಿಗೆ ಕಾರಣಕರ್ತರು ಹಾಗೂ ಈ ಭೂಖಂಡದ ಸೃಷ್ಟಿಗೆ ಮುಖ್ಯ ಉದ್ದೇಶವನ್ನು ಒದಗಿಸಿದವರಾಗಿರುತ್ತಾರೆ.' ರಾತ್ರೋರಾತ್ರಿ ತನ್ನ `ಭಕ್ತನನ್ನು ಕೊಂಡೊಯ್ದ ಆ ಶಕ್ತಿಯು ಪವಿತ್ರವಾಗಿದೆ' ಮೇಲಂಗಿಯನ್ನುಟ್ಟ ಹಾಗೂ ತಮ್ಮ ಪೂರ್ವಜರಾದ ಹಜರತ್ ಇಬ್ರಾಹಿಮ್ ಪ್ರವಾದಿಯವರ ವಾರೀಸುದಾರರಾಗಿರುತ್ತಾರೆ. 'ನಾನು ಕಪಟ ವಿಶ್ವಾಸಿಗಳಿಂದ ಮುಕ್ತನಾಗಿದ್ದೇನೆ' ಎಂಬ ಸಿದ್ಧಾಂತದ ನೇತಾರರಾಗಿದ್ದಾರೆ. ಔನ್ನತ್ಯ ಹಾಗೂ ಅಹಂಕಾರದ ಕಿರೀಟವನ್ನು ತಮ್ಮ ತಲೆಯ ಮೇಲೆ ಏರಿಸಿದ್ದೀರಿ. ಹಾಲಿ ಬಾದಶಹ ರವರು ಆಡಳಿತಾತ್ಮಕವಾಗಿ ಪ್ರವಾದಿ ಸ.ಆ.ಸ. ರವರ ಕ್ರಮಗಳನ್ನು ಪ್ರಮುಖವಾಗಿ ಪಾಲಿಸುತ್ತ, ಹಗಲು ರಾತ್ರಿ ಇಸ್ಲಾಮಿನ ಬಾವುಟವನ್ನು ಎತ್ತರಕ್ಕೆ ಏರಿಸುತ್ತ ಪಾಪದ ಬುನಾದಿಯನ್ನು ಕಿತ್ತೊಗೆಯಲು ಶ್ರಮಿಸುತ್ತ, ಸದರಿ ಉದ್ದೇಶವನ್ನೆ ತಮ್ಮ ಬದುಕಿನ ಮುಖ್ಯ ಕಾಳಜಿಯನ್ನಾಗಿ ಪರಿಗಣಿಸಿದ್ದಾರೆ. ಹಾಗೂ ತಮ್ಮ ಬದುಕನ್ನು ವಿನೋದ ಮತ್ತು ಆಮೋದ ಪ್ರಮೋದಗಳಲ್ಲಿ ವ್ಯರ್ಥವಾಗಿ ಕಳೆದು ಲಜ್ಜಿತರಾಗಲು ಇಷ್ಟಪಡುತ್ತಿಲ್ಲ. ಏಕೆಂದರೆ ಇವೇ ಸದ್ಗುಣಗಳು ಅಲ್ಲಾಹನ ಶ್ರೇಷ್ಠ ಪ್ರವಾದಿಯವರದಾಗಿತ್ತು. ಎಲ್ಲಾ ಬಾದಶಹರ ಬಾದಶಹನಾದ ಮತ್ತು ಪ್ರಭುಗಳ ಪ್ರಭುವಾದ ಅಲ್ಲಾಹನು ಅಪ್ಪಣೆ ಕೊಡಿಸಿರುವುದೇನೆಂದರೆ 'ನಾವು ನಿಮ್ಮನ್ನು ಉಭಯ ಲೋಕಗಳ ಕರುಣಾಳುವಾಗಿ ಕಳಿಸಿದ್ದೇವೆ'. ತಾವು ಆಕಾಶದ ಚಂದಿರನಾಗಿದ್ದೀರಿ' ಅವರು ಅಲ್ಲಾಹನ ನಬಿ ಮತ್ತು ಕೊನೆಯ ಪ್ರವಾದಿಯಾಗಿದ್ದಾರೆ' ಮತ್ತು ಎಲ್ಲಾ ವಿಷಯಗಳಲ್ಲಿಯೂ ತಮ್ಮ ಸಂಪೂರ್ಣ ಅನುಸರಣೆಯನ್ನು ಹೃದಯಪೂರ್ವಕವಾಗಿ ಪಾಲಿಸಬೇಕಿದೆ.

ಭೂಖಂಡದ ಬಾದಶಹ ಉನ್ನತ ದರ್ಜೆಯ ಮಾನವರ ಮತು ಜಿನ್ನ್‌ಗಳ ಸರದಾರರಾದ ಹಾಗೂ ಪುನರುತ್ಥಾನದ ದಿನದಂದು ಶಿಫಾರಸನ್ನು ಮಾಡುವವರಾದ ತಮ್ಮ ಪ್ರಸಂಸೆ ಎಲ್ಲರ ಮನದಲ್ಲಿ ಮೂಡಿದೆ. ನ್ಯಾಯ ಮತ್ತು ಕರುಣೆಯ ಹೊಸ ಅದ್ಯಾಯ ಅವರ ದೆಸೆಯಿಂದ ಆರಂಭವಾಯಿತು.ಹಾಗೂ ಅವರ ಸಂಭಾಷಣೆಯಲ್ಲಿ ಮಾಧುರ್ಯ, ಜೀವಪರತೆ ಮನಮೋಹಕತೆ ಹಾಗೂ ಹೃದ್ಯವಾದ ಮಾರ್ದವತೆ

ತುಂಬಿದೆ. ತಮ್ಮ ವೀರೋಚಿತ ಖಡ್ಗವು ಯುದ್ಧನಿರತ ಯೋಧರ ನಾಸ್ತಿಕತೆ ಹಾಗೂ ಇಸ್ಲಾಮಿನ ಶತ್ರುಗಳ ಪರಾಜಯ ಮತ್ತು ಮರ್ಯಾದೆ ಹಾಗೂ ಲಜ್ಜೆಯನ್ನು ಉಳಿಸುವ ಸಲುವಾಗಿ ವಿನಃ ಬೇರೆ ಉದ್ದೇಶಕ್ಕಾಗಿ ಬಳಸಲಿಲ್ಲ. ತಾವು ಪರಾಕ್ರಮ ಹಾಗೂ ಪೌರುಷದ ಲೋಕದ ಏಕೈಕ ಶೂರರಾಗಿದ್ದೀರಿ. ಪ್ರಜಾ ವಾತ್ಸಲ್ಯ ಮತ್ತು ದಾನಧರ್ಮಗಳಲ್ಲಿ ಎತ್ತಿದ ಕೈಯಾಗಿದ್ದೀರಿ. ತಮ್ಮ ನ್ಯಾಯಪರತೆಯ ದಿವ್ಯತೆಯಿಂದ ಹೃದಯಪುಷ್ಪಗಳಿಗೆ ಸೇಂಚನವಾಗುತ್ತದೆ. ಶೋಷಣೆ ಮತ್ತು ಅನ್ಯಾಯದ ಮರದ ಬುಡ ಕತ್ತರಿಸಲ್ಪಡುವುದು.

ತಮ್ಮ ಆಗಮನದ ನಂತರ ದೌರ್ಜನ್ಯ ಹಾಗೂ ಸಂಚು ಕೊನೆಗೊಂಡಿತು. ದುಃಖಿತ ಮನಗಳು ತಮ್ಮ ಅರಸೊತ್ತಿಗೆಯ ಆಶ್ರಯದಲ್ಲಿ ಸುಖ ಸಂತೋಷವನ್ನು ಅನುಭವಿಸಿದವು. ತಮ್ಮ ಶತ್ರುಗಳು ನಿರ್ನಾಮವಾದರು. ಮಿಲನದ ರಾತ್ರೆಯಂತೆ ತಮ್ಮ ಆಡಳಿತದಲ್ಲಿ ಜನತೆ ನೆಮ್ಮದಿಯನ್ನು ಕಂಡುಕೊಂಡರು. ಎಲ್ಲ ಹಿರಿಯ ಕಿರಿಯರಿಗೆ ಸಂತೋಷ ಮತ್ತು ನೆಮ್ಮದಿಯ ನಿದ್ರೆ ಪ್ರಾಪ್ತಿಯಾಯಿತು. ಕರಾಳ ಮೋರೆಯ ಶತ್ರುಗಳ ನಿದ್ರೆ ಹಾರಿ ಹೋಯಿತು. ತಮ್ಮ ಇರುವಿಕೆಯಿಂದ ಯುವಕರು ಹಾಗೂ ವೃದ್ಧರಿಗೆ ವರ್ಷಗಳು ತಿಂಗಳಿನೋಪಾದಿಯಲ್ಲಿ ಕಂಡು ಬಂದವು. ತಮ್ಮ ಆಪ್ತ ಖಡ್ಗವು ಖೈಬರ್‌ಅನ್ನು ಗೆಲ್ಲುವಂತಹದಾಗಿದೆ ಮತ್ತು ತಮ್ಮ ಪುತ್ರನ ಬಾಣ ಮತ್ತು ಶ್ವೇತದಂಡವು ಮೂಸಾ ಪ್ರವಾದಿಯಂತಿದೆ. ತಮ್ಮ ಪ್ರೀತಿ ತುಂಬಿದ ಹೃದಯವು ಇರಾನಿನ ದೊರೆಯಾದ ಜಮ್‌ಶೀದ್‌ನ ಬಟ್ಟಲಿನಂತಿದೆ.

ತಮ್ಮ ತೀಕ್ಷ್ಣನೋಟದಿಂದ ಪ್ರಕಾಶಮಾನನಾದ ಚಂದಿರನು ಹುಲ್ಲುಕಡ್ಡಿಯಂತೆ ಕಂಡು ಬರುತ್ತಾನೆ. ತಮ್ಮ ಕೃಪಾದೃಷ್ಟಿಯಿಂದ ಕ್ಷುಲ್ಲಕ ಅಣುವು ಸೂರ್ಯನಂತೆ ಬೆಳಗುತ್ತಾನೆ. ತಮ್ಮ ಕೃಪಾದೃಷ್ಟಿ ಇಲ್ಲದಿದ್ದಲ್ಲಿ ಶ್ರಮದಿಂದ ಎಷ್ಟೇ ಪ್ರಯತ್ನಪಟ್ಟರೂ ಮಳೆ ಬೆಳೆ ಸಕಾಲದಲ್ಲಿ ಆಗದೆ ಪೈರು ಒಣಗಿಹೋಗುತ್ತದೆ. ತಮ್ಮ ಕಾಲಾವಧಿಯಲ್ಲಿ ವಿದ್ವಾಂಸರ ಪ್ರೌಢಿಮೆ ಮತ್ತು ಶಿಷ್ಟತೆ ವೃದ್ಧಿಯಾಯಿತು. ತಮ್ಮ ಗಾಂಭೀರ್ಯದಿಂದ ಕೂಡಿದ ಸಭೆಗಳಲ್ಲಿ ಮಾದಕ ಪೇಯಗಳನ್ನು ನಿಷೇಧಿಸಲಾಗಿತ್ತು. ತಮ್ಮ ಗೌರವಾನ್ವಿತ ಸಭೆಗಳಲ್ಲಿ ದುಃಖಿತ, ದಮನಿತ ರಕ್ತ ಸಿಕ್ತ ದೌರ್ಜನ್ಯಕ್ಕೊಳಗಾದವರಿಗೆ ಸಂತೋಷ ಮತ್ತು ನೆಮ್ಮದಿಯ ಬದುಕನ್ನು ನೀಡಲಾಗುತ್ತಿತ್ತು. ತಮ್ಮ ಮಹಾನ್ ಅದೇಶಗಳನ್ನು ಪಾಲಿಸುವವರು ಗೌರವಕ್ಕೆ ಪಾತ್ರರಾಗುತ್ತಿದ್ದರು. ತಮ್ಮ ಅಜ್ಞೆಯನ್ನು ಧಿಕ್ಕರಿಸುವವರು ಅಧಃಪತನಕ್ಕೆ ಒಳಗಾಗುತ್ತಿದ್ದರು. ಸದಿಚ್ಛೆ ಹಾಗೂ ದೈವಭಕ್ತಿಯ ಲೋಕವು ತಮ್ಮ ಕಾಲದಲ್ಲಿ ಪ್ರಕಾಶಮಯವಾಗಿತ್ತು.'ನಾವು ಭೂಖಂಡದಲ್ಲಿ ನಿಮ್ಮನ್ನು ನಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿದೆವು' ಎಂಬ ಮಾತಿಗೆ ಅನುಗುಣವಾಗಿತ್ತು. ಯುವರಾಜನ ನ್ಯಾಯಪರತೆಯ ಚರ್ಚೆಯು ಉತ್ತುಂಗಕ್ಕೇರಿತ್ತು. ತಮ್ಮ ಕಣ್ಣೋಟದ

ಪ್ರಕಾಶದ ಬಿಂಬವು ಸೂರ್ಯನ ಜೀವಂತಿಕೆಯಾಗಿದೆ. ತಮ್ಮ ದರಬಾರಿನ ಅತ್ಯಂತ ಕೀಳು ಮಟ್ಟದ ಭಿಕಾರಿಗಳು ಸೂರ್ಯ ಚಂದ್ರರಾಗಿದ್ದಾರೆ ಮತ್ತು ತಮ್ಮ ದರಬಾರಿನ ತೃಣ ಸಮಾನ ಜಾಡಮಾಲಿಯು ದೊಡ್ಡ ಸೈನ್ಯವುಳ್ಳ ಫರೀದೋನ್ ಝಾ ಆಗಿದ್ದಾನೆ. ಧೃಢವಾದ ಧರ್ಮದ ಶತ್ರುಗಳು ಖಡ್ಗ ಧಾರಣೆ ಮಾಡಿದಾಗ ಅಧಃಪತನ ಹೊಂದುತ್ತಾರೆ ಮತ್ತು ತಮ್ಮ ಖಡ್ಗದ ಸಂಯೋಜಿತ ದಾಳಿಯಿಂದ ದುಷ್ಟ ಕೂಟವು ನಿರ್ನಾಮ ಹೊಂದುತ್ತದೆ.

ತಮ್ಮ ಹಿರಿಯರ ಹೆಸರಿನ ಪ್ರಸ್ತಾಪದಿಂದ ದುಃಖ ಪರಿಹಾರವಾಗುತ್ತದೆ ಹಾಗೂ ಸೈತಾನನ ಸಂಚು ನಾಮಾವಶೇಷವಾಗುತ್ತದೆ ಮತ್ತು ತಮ್ಮ ಹೆಸರಿನ ಬಲದಿಂದ ನಷ್ಟದ ವ್ಯವಹಾರವು ಕೂಡ ಸಫಲವಾಗುತ್ತದೆ. ತಮ್ಮ ಮುಖ ಕಮಲದ ತಾಜಾತನದ ದರ್ಶನದಿಂದ ಪ್ರಾತಃಕಾಲದ ಸೂರ್ಯನು ಮೋರೆ ಮುಚ್ಚಿ ಪಲಾಯನಗೈಯುತ್ತಾನೆ. ಹಾಗೂ ವಿಶ್ವವನ್ನು ಬೆಳಗುವ ಸೂರ್ಯನು ನಿಮ್ಮ ವಿಶಾಲ ಮನೋಭಾವದ ಬೆಳಕಿನಿಂದ ಶಕ್ತಿ ಪಡೆಯುತ್ತಾನೆ. ತಮ್ಮಿಂದ ಶಕ್ತಿ ಪಡೆದ ನರಿಯು ಸಿಂಹವನ್ನು ಎದುರಿಸುವ ಶಕ್ತಿಯನ್ನು ಪಡೆಯುತ್ತದೆ. ತಮ್ಮಿಂದ ನೆರವು ಪಡೆದ ಚಿಕ್ಕ ತಲೆಯ ಇರುವೆಯು ರಣಹದ್ದಿನೊಂದಿಗೆ ಪಂಥಾಹ್ವಾನವನ್ನು ನೀಡುತ್ತದೆ. ತಮ್ಮ ಮೃದುತ್ವದಿಂದ ಹಾಲಾಹಲವು ಅಮೃತವಾಗಿ ಪರಿವರ್ತನೆಯಾಗುತ್ತದೆ. ತಮ್ಮ ಕ್ರೋಧದ ದೆಸೆಯಿಂದ ಜೀವರಕ್ಷಕ ಚಿಲುಮೆಯು ವಿಷಹಾರಿ ಪ್ರತ್ಯೌಷಧದ ಗುಣವನ್ನು ಕಳೆದುಕೊಳ್ಳುತ್ತದೆ. ಫರೀದೋನ್ ಬಾದಶಹನ ಆಡಂಬರವು ತಮ್ಮ ವೈಭವದೆದುರು ನಿಷ್ಪ್ರಯೋಜಕವಾಗುತ್ತದೆ. ತಮ್ಮ ಆಡಳಿತಾತ್ಮಕ ನಿರ್ಧಾರಗಳು ಆಧಾರ ಪ್ರಮಾಣಗಳಿಂದ ಸಾಬೀತುಗೊಳಿಸಲ್ಪಟ್ಟಿವೆ. ಅವರ ಕಾಲದಲ್ಲಿ ದುಃಖದ ಅನುಸಂಧಾನವು ತತ್ವಜ್ಞಾನಿಗಳ ಪ್ರಮುಖ ಚರ್ಚಾ ವಿಷಯವಾಗಿತ್ತು.

ತಮಗೆ ಸಮರ್ಪಿಸಲಾದ ಖಡ್ಗವು ಧರ್ಮ ಸಂರಕ್ಷಣೆಯಲ್ಲಿ ಹೊಳಪು ನೀಡಿದ ಭೂಮಿಕೆಯನ್ನು ನಿರ್ವಹಿಸಿದೆ. ತಮ್ಮ ಸಹೃದಯ ಪ್ರಯತ್ನದಿಂದ ದವಾಖಾನೆಗಳು ಆರೋಗ್ಯಧಾಮಗಳಾದವು. ತಮ್ಮ ದತ್ತಿದಾನಗಳಿಂದ ಯಾಚಕರು ಬದುಕಿನ ಐಶ್ವರ್ಯ ಸುಖ ಸಂತೋಷಗಳನ್ನು ಅನುಭವಿಸಿದರು. ತಮ್ಮ ಅಧಿಕಾರದ ವಿಸ್ತರಣೆಯಿಂದ ಅಧಿಕಾರದ ಅಮಲಿನಿಂದ ಪ್ರೇರಿತ ಅರಸರಿಗೆ ಲಗಾಮು ಹಾಕಿದಂತಾಯಿತು.

ದೀನ ದಲಿತರ ಸಲುವಾಗಿ ಭಂಡಾರದ ಬಾಗಿಲನ್ನು ತೆರೆಯಲಾಯಿತು. 'ಅಲ್ಲಾಹನ ಹಾದಿಯಲ್ಲಿ ಯುದ್ಧ ಮಾಡುವವರಿಗೆ ಅಲ್ಲಾಹನ ಶತ್ರುಗಳ ವಿರುದ್ದ ವಿಜಯ ಪ್ರಾಪ್ತಿಯಾಗಲಿದೆ.'

ಬೆಳಗುವ ಸೂರ್ಯನಂತೆ ಸಿಂಹಾಸನವನೇರಿರುವ
ಅಲಿ ಆದಿಲ್ ಶಾ ಏರುಜವ್ವನದ ಅದೃಷ್ಟಶಾಲಿ
ದಾನವೆಂಬುದು ಅವನ ಸೇವಕರ ಮನೆವಾರ್ತೆ
ಸೌಜನ್ಯವೆಂಬುದು ಅವನ ದರ್ಬಾರಿನ ಕಸಬರಿಕೆ
ಏಳೇಳು ರಾಜರ ತಲೆ ಪರಾಕ್ರಮದಲಿ
ಹೈದರನ ಗುಲಾಮರು
ಅವನ ಕ್ರೋಧದ ಭಯದಿಂದ ರಕ್ತಪಿಪಾಸು

ಮಂಗಳ ಗ್ರಹವು ಬೆಂಕಿಯೆದುರು ಮೇಣ ಕರಗಿದಂತೆ ಕರಗಿತು
ಹೋರಾಟದ ದಿನದಂದು ಖಡ್ಗ ಹಿರಿದಾಗ
ಭಯದ ನೀರು ಸಿಹಿ ವಿಷವಾಗುತ್ತದೆ.

ಅವನ ಅಂಗೈಯ ಮೋಡದಿಂದ ಚಿಪ್ಪು ಮುತ್ತುಭರಿತವಾಗುತ್ತದೆ.
ಮತ್ತು ನೀರಿನಿಂದ ಹೆಪ್ಪುಗಟ್ಟಿದ ಮೋಡವು ಇಳೆಯತ್ತ ಸುರಿಯುತ್ತದೆ.

ಬದುಕಿನ ಉದ್ದೇಶ ಹಾಗೂ ತ್ಯಾಗದ ವಾಸ್ತವಿಕತೆಯನ್ನು ನಾನು ಅರ್ಥ ಮಾಡಿಕೊಂಡೆ. ಅನುಸರಣೆ ಮಾಡಬೇಕಾದ ವ್ಯಕ್ತಿತ್ವವು ಆಕಾಶದ ಕಿರಣಗಳಿಂದ ಸಂಪನ್ನವಾದ ಸೂರ್ಯನ ಆದೇಶಗಳನ್ನು ಪರಿಪಾಲಿಸುವುದಾಗಿದೆ. ಈ ಯಾಚಕ ನೂರುಲ್ಲಾ ಬಿನ್ ಖಾಝಿ ಸಯ್ಯದ್ ಅಲಿ ಮೊಹಮ್ಮದ್ ಹುಸೇನಿಯು ಹಾಸಿದ ಊಟದ ಬಟ್ಟೆಯ ಮೇಲಿನಿಂದ ಚೂರುಪಾರು ಆಯ್ದುಕೊಳ್ಳುವವನ ಅರಿಕೆ ಏನೆಂದರೆ; ಬಾದಶಹನ ಆಡಳಿತಾತ್ಮಕ ಮತ್ತು ಸತ್ಯ ಘಟನೆಗಳ ವರದಿಗಳನ್ನು ನಿಷ್ಠ ಲೇಖನಿಯಿಂದ ದಾಖಲು ಮಾಡುವುದು. ಆ ಹಾದಿಯಲ್ಲಿ ಕೆಲವು ತೊಡಕುಗಳು ಕೆಲವೊಂದು ಅಸಹಾಯಕತೆಗಳು ಹಾಗೂ ಜ್ಞಾನಾರ್ಜನೆಯಲ್ಲಿ ತೊಡಗಿಸುಕೊಳ್ಳುವಿಕೆಗಳು, ಪ್ರಯಾಣದ ಆಯಾಸ ಮೊದಲಾದವನ್ನು ಕಡೆಗಣಿಸಿ ಈ ಪ್ರಮುಖ ಕಾರ್ಯವನ್ನು ಕೈಗೆತ್ತಿಕೊಂಡಾಗಿದೆ. ಸೂಕ್ಷ್ಮತೆಗಳನ್ನು ಅರಿಯುವ ಮನಸ್ಸು ಹಾಗೂ ಸಂಕೇತಗಳನ್ನು ಅರ್ಥ ಮಾಡಿಕೊಳ್ಳುವ ಹೃದಯ ಹಾಗೂ ವಿನಯಪೂರ್ವಕ ಭಾಷೆಯೊಂದಿಗೆ ಸದ್ಗುಣಗಳ ಸಮಗ್ರತೆಯನ್ನು ಕಾಪಾಡಿಕೊಂಡು ಹೋದರೂ ಕೂಡ ಹೃದಯ ಕಂಪಿಸುತ್ತದೆ. ಒಂದು ಪರ್ವತವನ್ನು ಎತ್ತುವ ಪ್ರಯತ್ನವನ್ನು ಒಂದು ಪುಟ್ಟ ಇರುವೆ ಮಾಡಬಹುದೇ ಹಾಗೂ ಮಣಭಾರವನ್ನು ಒಂದು ನೊಣವು ಎತ್ತಿ ಹಿಡಿಯಬಹುದೇ. ಆದರೆ ತಮ್ಮ ಅಜ್ಞೆಯನ್ನು ವಿಧೇಯತೆಯಿಂದ ಪಾಲಿಸುತ್ತ ಬರಹದ ಮೂಲಕ ದಾಖಲಿಸಬೇಕಾದ ಎಲ್ಲಾ ಶಿಷ್ಟಾಚಾರಗಳನ್ನು ಕಡೆಗಣಿಸುತ್ತಾ ಪ್ರಭುತ್ವದ ಪರಿಸ್ಥಿತಿರಾಜ ತೀರ್ಮಾನಗಳು ಸದ್ಗುಣಗಳ ಪ್ರಸ್ತಾಪ ಗೌರವ ಹಾಗೂ ಕೊಡುಗೆಗಳು ಇನಾಮು

ಮಿತ್ರಪ್ರೇಮ ಶತ್ರುಗಳ ಮೇಲೆ ಕರುಣೆ ಮತ್ತು ನಾಸ್ತಿಕತೆಯ ನಿರ್ಮೂಲನದ ವಿವರಗಳು ಇಸ್ಲಾಮಿನ ಪ್ರಚಾರ ಮುಂತಾದವನ್ನು ಹೇಳಲಾಗಿದೆ.

ಲೇಖನಿಯ ಮೊನೆಯಲ್ಲಿ ಅಡಗಿರುವ ಮುತ್ತುಗಳನ್ನು ಮಿಥ್ಯೆ ಹಾಗೂ ಲೋಪಗಳಿಂದ ಮುಕ್ತಗೊಳಿಸಲಾಗಿದೆ. ಇದೊಂದು ಧೈರ್ಯಗೇಡಿ ಹಾಗೂ ಹೊಗಳುಭಟ್ಟರ ಕ್ರಿಯೆಯಾಗಿದೆ ಮತ್ತು ದೋಷಪೂರ್ಣಸ್ವಭಾವದ ವ್ಯಕ್ತಿಗಳ ನಡವಳಿಕೆಯಾಗಿದ್ದು, ಇಂತಹ ಮನೋಭಾವವನ್ನು ವರ್ಜಿಸಲಾಗಿದೆ. ನಾನು ಇಂತಹ ಪ್ರಕ್ರಿಯೆಯಲ್ಲಿ ಭಾಗಿಯಾಗಿಲ್ಲ. ಇಲ್ಲಿಂದ ಮುಖ್ಯ ಉದ್ದೇಶದ ಆರಂಭವನ್ನು ಮಾಡುತ್ತಿದ್ದೇನೆ.

■

*

ಅಧ್ಯಾಯ-೨

ಹಜರತ್ ಬಾದಶಾಹ ಘಾಝಿಯ ಜನ್ಮ ವೃತ್ತಾಂತ ಮತ್ತು ಬಡೀ ಸಾಹಿಬಾರ ವಶಕ್ಕೆ ಕೊಟ್ಟದ್ದು

ನೈಜ ಚಿಂತಕರು ಹಾಗೂ ಬುದ್ಧಿವಂತರ ಆಂತರ್ಯಕ್ಕೆ ಅರಿವಾಗಿರುವ ವಿಷಯವೆಂದರೆ ಮುಕ್ತಿ ಹೊಂದಿದ ಹಜರತ್‌ರವರ ಅಂತಿಮ ತಾಣವು ಭಗವಂತನ ಹೂ ತೋಟದಂತಿರುವ ಸ್ವರ್ಗವಾಗಿದೆ. ಸುಗಂಧದ ಚಿಲುಮೆಯಾಗಿದೆ. ಬೆಳಕಿನ ಸಮುದ್ರದಲ್ಲಿ ಮುಳುಗೇಳುತ್ತಿದೆ. ಕುನ್‌ಫಯಕುನ್ (ಆಗು ಎಂದ ಕೂಡಲೇ ಸಂಭವಿಸುವುದು)ನ ರಹಸ್ಯದ ಅರಿವನ್ನು ಹೊಂದಿರುವ ದೇಶಗಳು ದೈವಭಕ್ತಿಯಿಂದ ವಿಮುಖವಾಗಿರುವ ವ್ಯಕ್ತಿಗಳಿಗೆ ಸನ್ಮಾರ್ಗವನ್ನು ತೋರುವವರಾಗಿದ್ದಾರೆ. ಅಸ್ತವ್ಯಸ್ತವಾಗಿ ಕಾಡಿನಲ್ಲಿ ಕಳೆದುಹೋಗಿರುವ ಜನರ ನೆರವನ್ನು ನೀಡುವವರು ಅಲ್ಲಾಹನ ಏಕ ದೇವತಾವಾದದೊಂದಿಗೆ ಏಕತೆ ಮತ್ತು ಐಕ್ಯತೆಯ ಹಾದಿಯ ಪಯಣಿಗರಾಗಿದ್ದಾರೆ. ಅವರು ಎಲ್ಲಾ ವಸ್ತುಗಳ ನ್ಯಾಯಪರತೆಯನ್ನು ಕಾಣುವವರಾಗಿದ್ದಾರೆ. ಅಲ್ಲಾಹನ ದೈವ ಜ್ಞಾನದ ಆಳವನ್ನು ಅರಿತವರಾಗಿದ್ದಾರೆ. ಚಂಚಲ ಇಂದ್ರಿಯಗಳನ್ನು ಸೋಲಿಸುತ್ತ ಹೈರಾಣ ಮತ್ತು ಆತಂಕಿತ ಹೃದಯಕ್ಕೆ ನೆಮ್ಮದಿಯನ್ನು ಕೊಡುವವರಾಗಿದ್ದು, ದೈವ ಪ್ರೀತಿಯ ವೃಕ್ಷದ ನೆರಳಿನಲ್ಲಿ ಆಸೀನರಾಗಿದ್ದು, ದೇವರ ಕೈದೋಟದಲ್ಲಿ ಪುಷ್ಪಗಳನ್ನು ಆಯ್ದು ಅಂಗೈಯಲ್ಲಿ ಜೋಡಿಸುವವರಾಗಿದ್ದಾರೆ.

ದ್ವೇಷ ಮತ್ತು ಅಸೂಯೆಯನ್ನು ನಾಶಮಾಡುವವರಾಗಿದ್ದಾರೆ. ತಮ್ಮ ಪವಿತ್ರ ಹೃದಯವು ವಿಶ್ವದ ಆರಾಧ್ಯನ ಪ್ರಕಾಶವನ್ನು ಪ್ರತಿಫಲಿಸುವ ಕನ್ನಡಿಯಾಗಿದೆ. ತಾವು ಜಾಗೃತ ಆತ್ಮವನ್ನು ಹೊಂದಿದ್ದು, ಪ್ರೀತಿ ವಿಶ್ವಾಸದ ರಹಸ್ಯಗಳ ನಿರಂತರ ಚಿಲುಮೆಯಾಗಿದ್ದೀರಿ. ತಾವು ಜ್ಞಾನದ ಆಗರವಾಗಿದ್ದು, ದೈವಸಾಕ್ಷಾತ್ಕಾರವನ್ನು

ಹೊಂದಿದವರಾಗಿರುತ್ತೀರಿ. ವೈಯಕ್ತಿಕ ಸಾಧನೆಗಳ ಭಂಡಾರ ಮತ್ತು ಜಮ್‌ಶೀದ್ ಬಾದಶಹನಂತೆ ಪರಾಕ್ರಮಿ ಹಾಗೂ ನ್ಯಾಯಪರಿಪಾಲಕರಾಗಿದ್ದೀರಿ. ಸಂತ ಬಾಯಝೀದ್ ಬಿಸ್ತಾಮಿಯಂತೆ ಸಂಪನ್ನರು ಯೂಸುಫ್‌ಪ್ರವಾದಿಯಂತೆ ಅದೃಷ್ಟವಂತರು ಹಜರತ್ ಇಬ್ರಾಹಿಮ್ ಅಲೈಹಿಸ್ಸಲಾಮ್‌ರವರ ಗುಣಗಳನ್ನು ಹೊಂದಿದವರು ಸತ್ಯ ಮತ್ತು ಕಾಲ್ಪನಿಕ ಮಾರ್ಗದಲ್ಲಿ ನಡೆಯುವ ತಂಡಗಳ ನಾಯಕರು.

ಶರೀಯತ್ ಮತ್ತು ಹೃದಯ ನೈರ್ಮಲ್ಯದ ರಹಸ್ಯಗಳನ್ನು ಹುಡುಕುವ ವ್ಯಕ್ತಿಗಳ ಕೇಂದ್ರ ಬಿಂದುವಾಗಿದ್ದೀರಿ. ಕ್ಷಮೆ ಹಾಗೂ ಪ್ರೀತಿಯ ಕ್ರಮಗಳನ್ನು ಅನುಸರಿಸುವವರು ಸೌಜನ್ಯದ ಚಾದರವನ್ನು ಹಾಸುವವರು ಕ್ರೌರ್ಯ ಹಾಗೂ ಶೋಷಣೆಯ ಬುನಾದಿಯನ್ನು ನಾಶಪಡಿಸುವವರು ನ್ಯಾಯವನ್ನು ಎತ್ತಿ ಹಿಡಿಯುವವರು ಪಾಪ ಮತ್ತು ಕೆಡುಕಿನ ಬಲಗುಂದಿಸುವವರು ಮತ್ತು ಸ್ವರ್ಗದ ಅಪ್ಸರೆಯರಾದ ಹೂರ್‌ಗಳ ಬಯಕೆಯಾಗಿದ್ದೀರಿ. ತಾವು ಪೂರ್ವಿಕರ ಹೆಸರನ್ನು ಉನ್ನತಿಗೇರಿಸುವವರಾಗಿದ್ದೀರಿ. ನ್ಯಾಯ ಹಾಗು ದತ್ತಿದಾನ ನೀಡುವ ಬಾಗಿಲನ್ನು ತೆರೆಯುವ ಭೂಮಿಯ ಮೇಲಿನ ಪ್ರಭುಗಳಿಂದ ತೆರಿಗೆಯನ್ನು ವಸೂಲಿ ಮಾಡುವವರಾಗಿದ್ದೀರಿ. ಈಜಿಪ್ಟಿನ ದೊರೆ ಫ್ಯಾರೋನಂತೆ ದೈವಾಜ್ಞೆಯನ್ನು ವಿರೋಧಿಸುವವರ ಮೇಲೆ ಜಝಿಯಾ ಹೇರುವವರಾಗಿದ್ದೀರಿ. ಭಯ ಮತ್ತು ಆಕ್ರಮಣದ ಪರ್ವತದ ತೋಟದ ಹೂಗೊಂಚಲಾಗಿದ್ದೀರಿ.

ನ್ಯಾಯಪರತೆಯ ತೋಟದ ವೃಕ್ಷಗಳ ಫಲವಾಗಿದ್ದೀರಿ. ಪುರಸ್ಕಾರ ಯೋಗ್ಯರ ಪ್ರತಿಭೆಯನ್ನು ಗುರುತಿಸುವವರಾಗಿದ್ದೀರಿ. ಪ್ರಭುತ್ವ ಹಾಗೂ ದೈವಭೀರು ವ್ಯಕ್ತಿತ್ವದ ಮಿಶ್ರಣವಾಗಿದ್ದೀರಿ. ಸಿದ್ಧಾಂತ ಹಾಗೂ ಖಿಲಾಫತ್ತಿನ ಅಂದರೆ ಇಸ್ಲಾಮೀ ರಾಷ್ಟ್ರದ ಆಡಳಿತಾಧಿಕಾರದ ಅನರ್ಘ್ಯ ರತ್ನಗಳಿಂದ ಕೂಡಿದ ರಾಜದಂಡವಾಗಿದ್ದೀರಿ. ಅಜ್ಞಾನ ಮೌಢ್ಯ ಹಾಗೂ ಪಥಭ್ರಷ್ಟತೆಯ ಸಂಪ್ರದಾಯಗಳನ್ನು ಕಿತ್ತೊಗೆಯುವವರಾಗಿದೀರಿ. ಕಷ್ಟ ಸಹಿಷ್ಣು ಮತ್ತು ಹೃದಯ ವೈಶಾಲ್ಯ ಹಾಗೂ ಪ್ರಬುದ್ಧತೆಯನ್ನು ಹೊಂದಿದವರಾಗಿದ್ದು, ಜಾಯೆ ಪನಾಹ್ ಸುಲೇಮಾನ್‌ನಂತೆ ಅಂತಸ್ತನ್ನು ಹೊಂದಿದವರಾಗಿದ್ದ, ಫರೀದೋನ್ ಬಾದಶಹನಂತೆ ದರ್ಪ ಹಾಗೂ ವೈಭವವನ್ನು ಹೊಂದಿದ ಜಹಾಪನಾರವರು ಹಳ್ಳಿ ಪಟ್ಟಣ ಮತ್ತು ಪ್ರಜೆಗಳ ಸಂರಕ್ಷಕರಾಗಿದ್ದಾರೆ. ತಮ್ಮ ಪವಿತ್ರ ಅಂಗೈ ಕಷ್ಟದ ದುಡಿಮೆ ಮತ್ತು ಉದ್ದೇಶ ಸಾಧನೆಯ ದ್ಯೋತಕವಾಗಿದೆ. ತಮ್ಮ ಹೆಸರು ಹಾಗೂ ನ್ಯಾಯದ ಹಸ್ತ ಅಖಂಡ ಇಸ್ಲಾಮಿನ ಅಭ್ಯುದಯಕ್ಕೆ ಸಾಕ್ಷಿಯಾಗಿದೆ. ಸದ್ಗುಣಸಂಪನ್ನ ಉತ್ತಮ ಗುಣನಡತೆಯುಳ್ಳ ಪ್ರವಾದಿಯವರ ರೀತಿನೀತಿ ರಿವಾಜುಗಳ ಬೆಂಬಲಿಗ ರೆಹಮತುಲ್ಲಾ ಮಘ್‌ಫೂರ್ ವಲ್ ಮಬ್‌ರೂರ್‌ರವರ ಕಂಗಳ ಬೆಳಕು ಸುಲ್ತಾನ್ ಮೊಹಮ್ಮದ್ ಆದಿಲ್ ಶಾ ಯೌವನದ ಹುರುಪು ಮತ್ತು ತಾರುಣ್ಯದಿಂದ ತುಂಬಿ ತುಳುಕುತ್ತಿದ್ದಾರೆ.

ರಾಜ್ಯದ ಮತ್ತು ಆಡಳಿತದ ಉಗಮವಾದಾಗಿನಿಂದಲೇ ಹಗಲು ರಾತ್ರೆ ಭರವಸೆಯ ಹಸ್ತವನ್ನು ಚಾಚಿ ಹಾಗೂ ಭರವಸೆಯ ನೋಟವನ್ನು ಬೀರಿ ಅಂತರಂಗದ ಪ್ರಬುದ್ಧತೆಯನ್ನು ಹೊಂದಿ ಸಂಪೂರ್ಣ ವಿನಯ ಮತ್ತು ದೈನ್ಯತೆಯಿಂದ ಇರುವಾಗ, ಅಲ್ಲಾಹನ ಕರುಣೆ ಮತ್ತು ದಯೆಯಿಂದ ದೀನ ದಲಿತರ ಅಗತ್ಯ ಅವಶ್ಯಕತೆಗಳನ್ನು ಪೂರೈಸುವುದಾಗಿ ಹೇಳಲಾಯಿತು. ಕೈತುಂಬಾ ಸುಖ ಸವಲತ್ತು ಹಾಗೂ ಅಗಣಿತ ಇನಾಮು ಮತ್ತು ಕೊಡುಗೆಗಳನ್ನು ಅಲ್ಲಾಹನ ಕೃಪೆಯಿಂದ ಈ ಯಾಚಕನಿಗೆ ನೀಡಲಾಯಿತು ಹಾಗೂ ಮಾನವಜೀವಿಯ ಅತ್ಯಂತ ಕ್ಲಿಷ್ಟಕರವಾದ ಕೆಲಸವನ್ನು ಪ್ರೀತಿಯಿಂದ ಅಲ್ಲಾಹನ ಈ ಭಕ್ತನ ಜವಾಬುದಾರಿಗೆ ನೀಡಬೇಕೆಂಬ ಅಲೋಚನೆಯನ್ನು ಬಿತ್ತರಿಸಲಾಯಿತು. ಅತ್ಯಂತ ಉಪಕಾರ ಹಾಗೂ ಪರಮ ಕರುಣಾಳು ಎಂದು ಎತ್ತರದ ನಿರೀಕ್ಷೆಗಳನ್ನು ಹೊಂದಿದವ ನೋಟವನ್ನು ವಿಸ್ತಾರವಾಗಿ ಹರಡುತ್ತಾನೆ.

ಸನ್ನಡತೆಯ ಉತ್ತರಾಧಿಕಾರಿ ಯುವಕ ಹಾಗೂ ಇಡೀ ರಾಜ್ಯವೇ ಜಂಭಪಡುವಂತಹ ಅತ್ಯಂತ ಸಂಭಾವಿತ ಮತ್ತು ವಿಧೇಯ ಪುತ್ರ ಆತನ ವ್ಯಕ್ತಿತ್ವದಿಂದ ಪರಾಕ್ರಮ ಹಾಗೂ ದಯಾಳುತನ ಪ್ರಕಾಶಿಸುತ್ತದೆ, ಇಸ್ಲಾಮಿನ ಅಮೂಲ್ಯ ಸಂಪತ್ತು ಮಿಂಚಿನೋಪಾದಿ ವೇಗದ ಕತ್ತಿಗೆ ನಾಲ್ಕು ಮೂಲೆಗಳಲ್ಲಿ ಹುಡುಕುವಂತೆ. ಆ ಮೂಲಕ ಭೂಖಂಡದಲ್ಲಿ ವಾಸ ಮಾಡುತ್ತಿರುವ ಜನಗಳ ನಡುವೆ ಸಂಪೂರ್ಣ ಖ್ಯಾತಿ ಉಂಟಾದಂತೆ ಆತನ ಕಾರ್ಯವೈಖರಿಯಾಗಿದೆ

ಕತ್ತೆಯಂತಹ ಸ್ವರೂಪದ ಮೂರ್ಖ ಪಾಪಿಷ್ಠರ ಪ್ರಯತ್ನಗಳನ್ನು ಕತ್ತಿ ಹಾಗು ಭರ್ಜಿಯ ಮೊನೆಯಿಂದ ಮೂಲೋತ್ಪಾಟನೆಯಾಗಲಿ ಹಾಗೂ ವಿನಾಶದ ಅಂತಿಮ ಸ್ಥಾನವನ್ನು ತಲುಪಲಿ. ಪ್ರದರ್ಶನಕ್ಕಿರುವ ಅಲ್ಲಾಹನ ಅವಿಧೇಯ ಭ್ರಷ್ಟ ಮತ್ತು ಅಯೋಗ್ಯ ಬಾದಶಹ ಹೃದಯಗಳ ಆಜ್ಞಾಪಾಲನೆಯ ಸರಪಳಿಗಳನ್ನು ಬಂಧಿಸಿ ವಿದ್ರೋಹದ ನೆಲೆಗಳನ್ನು ಪ್ರಜ್ವಲಿಸಿ, ಅಲ್ಲಾಹನ ಆಜ್ಞೆಗಳನ್ನು ಬೆಂಬಲಿಸುವ ಶಕ್ತಿಯೊಂದಿಗೆ ದ್ರೋಹಿ ಎಂಬ ಕೋಳವನ್ನು ಅವರ ಕತ್ತಿನಲ್ಲಿ ತೂಗಾಡಿಸಿ, ಭುಜಗಳ ಮೇಲೆ ನಂಬಿಕೆ ವಿಶ್ವಾಸದ ಜೀನನ್ನು ಎಳೆದು ಹಾಕಲಿ ಮತ್ತು ಎಚ್ಚರಿಕೆ ನೀಡಲಿ. ವಿದ್ರೋಹಿ ಹಾಗೂ ಹುಚ್ಚು ಖೋಡಿ, ಸ್ವಾರ್ಥಿ ವ್ಯಕ್ತಿಗಳ ಇತರೆಯವರ ಸಂಪತ್ತನ್ನು ಲಪಟಾಯಿಸುವ ನೋಟದಿಂದ ಅಕ್ರಮ ಸಂಪತ್ತನ್ನು ಹಾಲಿಗಿಂತಲೂ ಹೆಚ್ಚು ಸಕ್ರಮವೆಂದು ತಿಳಿಯುತ್ತಾರೆ ಹಾಗೂ ಗಲಭೆಕೋರ ಹಸ್ತದಿಂದ ಜನತೆಯ ಆಸ್ತಿಪಾಸ್ತಿಗಳ ಮೇಲೆ ಎರಗುತ್ತಾರೆ ಮತ್ತು ಸುಳ್ಳನ್ನು ಸತ್ಯವೆಂದು ಸಾಧಿಸುತ್ತಾರೆ.

ಈ ಅಸಹಾಯಕ ವ್ಯಕ್ತಿಗಳ ಮೇಲೆ ಕೃಪೆ ತೋರುತ್ತಾ ನ್ಯಾಯ ಪರತೆಯ ಬುನಾದಿಯ ಮೇಲೆ ರಾಜಮನೆತನ ನಿಂತಿದೆ. ಹಾಗೂ ತಮ್ಮ ಗೌರವಾನ್ವಿತ ವ್ಯಕ್ತಿತ್ವದಿಂದ ತಾಜಾ ಮತ್ತು ಹೊಸ ಸಂಪ್ರದಾಯವನ್ನು ಸ್ವೀಕರಿಸಲಿ. ದೈನ್ಯತೆಯಿಂದ ಕೂಡಿ

ಒಣತುಟಿ ಮತ್ತು ತೀಕ್ಷ್ಣ ಹಲ್ಲಿನಿಂದ ಕೂಡಿದವರ ಮೇಲೆ ದಯೆ ಧರ್ಮ ಮತ್ತು ದಾನದ ಮಳೆಹನಿಗಳಿಂದ ತೇವ ಹೊಂದಿದ ನಾಲಿಗೆಯ ಮತ್ತು ನೆಮ್ಮದಿಯ ಹೃದಯ ಮತ್ತು ಮನಸ್ಸನ್ನು ಹೊಂದಿದವರಾಗಲಿ. ಅಂತರಂಗವನ್ನು ಭ್ರಷ್ಟಗೊಳಿಸಿ ಬಹಿರಂಗವನ್ನು ಅಲಂಕರಿಸುವವರು ಉದ್ದೇಶ ಸಾಧನೆ ಮಾಡಲಾರರು. ಪ್ರದರ್ಶನ ಮಾಡುವ ವ್ಯಕ್ತಿಗಳು ದೈವ ಭೀರು ಮತ್ತು ಸತ್ಯನಿಷ್ಠೆಯ ಸಿಂಹಾಸನವನ್ನೇರುವವರಾದರು. ಹೃದಯದ ಮಾರ್ಗದರ್ಶನದಲ್ಲಿ ನಡೆದಂತಹ ಬಹಿರಂಗ ಪ್ರದರ್ಶನ ವ್ಯಕ್ತಿಗಳು ದೈವಭೀರುಗಳಾಗಿ ಸತ್ಯನಿಷ್ಠೆಯ ಸಿಂಹಾಸನವನ್ನೇರುವವರಾದರು.

ಸಂಕ್ಷಿಪ್ತವಾಗಿ ಹೇಳುವುದಾದಲ್ಲಿ, ಸ್ವರ್ಗದ ಸಭೆಯ ಮುಖಂಡ ಜನತೆ ಹಾಗೂ ಜೀವಿಗಳಿಗೆ ಉಪಕಾರ ಮಾಡುವ ಹೊಣೆ ಹೊತ್ತಿರುವವರು ಸ್ವಪ್ರಶಂಸೆ ಮತ್ತು ಅದರ ತೋರಿಕೆಯಿಂದಲೂ ಮುಕ್ತರಾಗಿದ್ದರು. ಭಗವಂತನ ಸನ್ನಿಧಿಯ ಆಪ್ತರು, ಅವನು ಅಂದರೆ ನಿರಪೇಕ್ಷ ಪರಮಾತ್ಮನ ಕೊಡುಗೆಯ ಕಿವಿಗಳಿಂದ ಸತ್ಯವನ್ನು ಆಲಿಸುವವರಾಗಿದ್ದರು. ಓ ಬುದ್ಧಿ ಮತ್ತು ನೋಟದ ಸಮ್ಮಿಶ್ರಣವೇ, ಬುದ್ದಿ ಮತ್ತೆ ಹಾಗೂ ನಿಷ್ಕಾಮ ಸೇವೆಯ ಪುಸ್ತಕದ ಒಳಿತಿನ ಪಟ್ಟಿಯನ್ನು ಹುಡುಕಿ ವಿಶ್ವದ ವಿವಿಧ ಪ್ರಭೇಧಗಳ ಸಲುವಾಗಿ ಒಳಿತು, ಇಡೀ ವಿಶ್ವದ ಮಾನವ ಜನಾಂಗದ ಉತ್ಕೃಷ್ಟತೆಯ ಮೂಲಕ ಜನತೆಯ ಸಾಮ್ಯತೆಯುಂಟಾಯಿತು ಹಾಗೂ ಉದ್ದೇಶದ ವಧು ಅಂಗೀಕಾರದ ಒಡವೆಗಳಿಂದ ಅಲಂಕೃತವಾಯಿತು. ಒಟ್ಟಾರೆ ಎಲ್ಲಾ ವಿಷಯಗಳು ನಿರ್ದಿಷ್ಟ ವೇಳೆಯಲ್ಲಿ ಸೂರ್ಯನ ಕಿರಣಗಳೋಪಾದಿಯಲ್ಲಿ ಮತ್ತು ಹಗಲಿನಲ್ಲಿ ಸುಸ್ಪಷ್ಟ ದೇದೀಪ್ಯಮಾನವಾಗಿ ಪ್ರಕಟವಾಗುವುದು ಪೂರ್ವ ನಿರ್ಧರಿತವಾದ ವಿಷಯವಾಗಿದೆ. ವಿಘಟನೆ ಹಾಗೂ ವಿರೋಧದ ಕಲ್ಲನ್ನು ನೆಮ್ಮದಿಯ ಹೃದಯದ ಕನ್ನಡಿಯ ಮೇಲೆ ಒಗೆಯಬೇಡ ಹಾಗೂ ಭರವಸೆಯ ಗಾಜನ್ನು ಅವಶ್ಯಕತೆ ಪೂರೈಸಲಿಲ್ಲವೆಂದು ಕಲ್ಲಿನಿಂದ ಘಾಸಿಗೊಳಿಸಬೇಡ. ಸೂರ್ಯನಂತಹ ಬೆಳಕನ್ನು ಹೊಂದಿರುವವನು ದೀನ ದಲಿತರೊಂದಿಗೆ ಪ್ರೇಮ ಭಾವ ಹಾಗೂ ಅಂತಃಕರಣದಿಂದ ಅಮೂಲ್ಯ ಮುತ್ತಿನಂತೆ ಆಗು.

ಮನರಂಜನಾಗೃಹದಲ್ಲಿ ತನ್ನ ಆಕರ್ಷಕ ಚಲನೆಯನ್ನು ಪ್ರದರ್ಶಿಸಿದ ಬಳಿಕ, ಒಂದು ದೀರ್ಘ ಕಾಲಾವಧಿಯ ನಂತರ ಅಪ್ಪಣೆ ಕೊಡಿಸಿದ್ದೇನೆಂದರೆ, ಇಲ್ಲಿ ವಾಸಿಸುತ್ತಿರುವವರ ನೋಟಕ್ಕೆ ಗ್ರಾಸ ಒದಗಿಸುತ್ತಿರುವ ಈ ಪುರಾತನ ಕಟ್ಟಡವು ನಾಶವಾಗಲಿದೆ ಹಾಗೂ ಆ ಚಿಂತಕ ಮತ್ತು ಪ್ರಬುದ್ಧ ವ್ಯಕ್ತಿಯ ವಾತ್ಸಲ್ಯ ಹೊಂದಿದವನಾಗಿದ್ದಾನೆ. ವಿಶ್ವವಿಖ್ಯಾತ ನ್ಯಾಯಪರ, ಸಮಗ್ರ ಸಮದೃಷ್ಟಿ ಮತ್ತು ಯುಕ್ತಿಯ ಒಡೆಯನು ಈ ನಶ್ವರ ಜಗತ್ತಿನಲ್ಲಿ ಯಾವುದೋ ವಸ್ತುವಿನ ಆವಿಷ್ಕಾರಕ್ಕೆ ಕಾರಣಕರ್ತನಾಗಿರುತ್ತಾನೆ. ಮತ್ತು ಯಾವ ಆವಿಷ್ಕಾರಕ್ಕೆ ಕಾರಣಕರ್ತನಾಗುತ್ತಾನೋ

ಅದಕ್ಕೆ ಅವನ ಹೆಸರನ್ನೇ ಕೊಡಲಾಗುತ್ತದೆ ಮತ್ತು ಸ್ಪಷ್ಟಪಡಿಸುವುದೇನೆಂದರೆ ಆವಿಷ್ಕಾರಕ್ಕೆ ಅಂತರಂಗದ ಪರದೆಯ ಮೇಲೆ ಪ್ರಕಟವಾಗುವ ಜಾಲವಿದೆ.

ಯಾರ ಪ್ರಕಾಶದ ವಿನಃ ವಿಶ್ವದ ಕ್ರಿಯೆ ಪ್ರತಿಕ್ರಿಯೆಗಳ ಸಭೆಯ ಕಲ್ಪನೆಯನ್ನು ಮಾಡುವುದು ಕೂಡಾ ಅಸಾಧ್ಯವೋ ಅಂತಹ ಅಂಧಕಾರದ ಬೆಳಕಾಗಿದ್ದಾನೆ ಅವನು. ದೀರ್ಘಾವಧಿಯಿಂದ ಅಸೂಯೆ ಮತ್ತು ಕುಟಿಲತೆಯ ಕಾರಸ್ಥಾನವು ಪ್ರಪಂಚದ ಜನರ ಹೃದಯದಲ್ಲಿ ಮನೆಮಾಡಿದೆ. ಅದನ್ನು ಹೊರಗೆಡವಿ ಈ ಲೋಕ ಮತ್ತು ಪರಲೋಕದ ವ್ಯವಸ್ಥೆಗೆ ಪ್ರಬುದ್ಧತೆ ಮತ್ತು ಶೋಭೆಯನ್ನು ನೀಡುವನು. ಒಡಕು, ದ್ವೇಷ, ಮತ್ಸರದ ಅಗ್ನಿಯು ಹೃದಯಗಳಲ್ಲಿ ಉರಿಯುತ್ತಿದುದ್ದನ್ನು ಪ್ರೇಮದ ಪರಿಸರವನ್ನು ನಿರ್ನಾಮ ಮಾಡಲು ಉದ್ದೇಶಿಸಿದ್ದು, ಕರುಣೆಯ ಮೋಡದ ಹನಿಗಳಿಂದ ತಂಪುಗೊಳಿಸಿ ಲೌಕಿಕ ಹಾಗೂ ಅಲೌಕಿಕ, ಅಂತರಂಗ ಮತ್ತು ಬಹಿರಂಗ ಕ್ರಿಯೆಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿ ಸರಾಗಗೊಳಿಸುತ್ತಾನೆ. ಈ ದಿವ್ಯ ಜ್ಞಾನ ಹೊಂದಿರುವ ಬಾದಶಹನ ಮೇಲೆ ಅಲ್ಲಾಹನ ಕೃಪಾಶೀರ್ವಾದಗಳಿವೆ. ಅವನು ಮೊದಲ ದಿನದಿಂದ 'ನನಗೆ ನನ್ನ ಒಡೆಯನ ವತಿಯಿಂದ ವಿದ್ಯಾದಾನ ನೀಡಲಾಗಿದೆ' ಎಂಬ ಉಕ್ತಿಯಿಂದ ಬಹಿರಂಗ ಶುದ್ಧಿಯನ್ನು ಹೊಂದಿ, ಲೌಕಿಕ ಹಾಗು ಅಲೌಕಿಕ (ಮಾನವನನ್ನು ಸೃಷ್ಟಿಮಾಡಿ ಅವನಿಗೆ ಮಾತುಕಲಿಸಿದ) ಎಂಬ ಪಾಠಶಾಲೆ ಸಿದ್ಧಿ ಪಡೆದು ಸೃಷ್ಟಿಕರ್ತನ ವಿಧೇಯ ಭಕ್ತನಾಗಿ, ಸಿಂಹಾಸನದಲ್ಲಿ ಆಸೀನನಾಗಿ ಉನ್ನತ ಸ್ಥಾನಮಾನ ಹೊಂದಿದ ವ್ಯಕ್ತಿಗಳ ಪೈಕಿ ಸೇರಿದ್ದಾನೆ.

ತಮ್ಮ ಯೋಗ್ಯತೆಯ ಭಂಡಾರವು ಯೋಗ್ಯತೆಗೆ ಅನುಸಾರವಾಗಿತ್ತು. ಈ ಎಲ್ಲಾ ಉದ್ದೇಶಿತ ಕೆಲಸಕಾರ್ಯಗಳು ಅಲ್ಲಾಹನ ಇಚ್ಛೆಗನುಸಾರವಾಗಿತ್ತು. ತಮ್ಮ ಉನ್ನತ ಹಾಗೂ ಬಲಾಢ್ಯ ಮತ್ತು ಉತ್ತಮ ದರ್ಜೆಯ ವ್ಯಕ್ತಿತ್ವದಲ್ಲಿ ಸಂಪೂರ್ಣವಾಗಿ ಪ್ರಕಾಶಮಯವಾಗಿತ್ತು.

ಅಲಿ ಅದಿಶಹನ ಜನನ

ಅಂಧಕಾರದಲ್ಲಿ ಮುಳುಗಿದ ಭೂಮಿಯ ಕತ್ತಲನ್ನು ತನ್ನ ಅಸ್ತಿತ್ವದ ಪ್ರಕಾಶದಿಂದ ಬೆಳಗಿದ. ಜನಾಬ್ ಘುಫ್ರಾನ್ ಪನಾಹ್ ರಿಜ್ವಾನ್ ದಸ್ತಗಾಹ್ ಆಲಿಗೆ ಆ ಪ್ರಸ್ತುತಿಯ ಶುಭವಾರ್ತೆಯು ಅರುಹುವಿಕೆಯ ವೃತ್ತಾಂತದಿಂದ ದಯಾಪರ ಮತ್ತು ಸಂಪನ್ನನಾದ ಬಾದಶಹನ ಸಂತೋಷಕ್ಕೆ ಎಲ್ಲೆಯೇ ಇರಲಿಲ್ಲ. ಸಂತೋಷ ಹಾಗೂ ಸಂಭ್ರಮದಲ್ಲಿ ತಲ್ಲೀನನಾಗಿ ತಿಂಗಳು ಹಾಗೂ ದಿನಗಳ ಎಣಿಕೆಯ ಬಗ್ಗೆ ತಾಳ್ಮೆ ಇಲ್ಲದೆ ಅಸ್ತವ್ಯಸ್ತನಾಗಿದ್ದಾನೆ. ಮನುಷ್ಯನ ಜೀವನ ಬಹುಮುಖ್ಯ ಹಾಗೂ ಅವಶ್ಯಕ ಘಟ್ಟವನ್ನು ಆತ ರಾತ್ರಿಯಲ್ಲಿ ನಿದ್ರೆ ಇಲ್ಲದೆ ಹಗಲಿನಲ್ಲಿ ಕೂಡಾ ಹಾಸಿಗೆಯುದ್ದಕ್ಕೂ ಕಾಲುಚಾಚದೆ, ಬಾದಶಹ ಮತ್ತು ಯಶಸ್ಸಿನ ಅಹಂಕಾರದ ದೇಶದ ಸೂರ್ಯನ ಉಗಮದ ನಿರೀಕ್ಷಣೆ

ಮಾಡುತ್ತಾ ಭರವಸೆಯ ಕ್ಷಣಗಳನ್ನು ಎಣಿಸತೊಡಗಿದ. ಪ್ರಪಂಚವನ್ನು ವೀಕ್ಷಿಸಿದ ದೃಷ್ಟಿಯು, ಖಿಲಾಫತ್‌ನ ಆಕಾಶದ ಪ್ರಜ್ವಲಿಸುವ ನಕ್ಷತ್ರದ ಆಗಮನವನ್ನು ನಿರಂತರವಾಗಿ ಗಳಿಗೆಗಳಿಗೆಗೂ ಎದುರು ನೋಡತೊಡಗಿದೆ ಹಾಗೂ ಜೀವಸಂಕುಲದ ಒಳಿತಿಗಾಗಿ ಸಫಲತೆಯ ಹೆಬ್ಬಾಗಿಲು ತೆರೆಯುವ ಸುದಿನವನ್ನು ಕಾಯತೊಡಗಿದ.

ಒಟ್ಟಾರೆ, ಆ ಹೂರ್- ಅಪ್ಸರೆಯಂತಹ ಗಂಧರ್ವ ಕನ್ಯೆಗೆ ನವಮಾಸಗಳು ತುಂಬಿದಾಗ, ತಮ್ಮ ಆಗಮನದ ನಿರೀಕ್ಷಣೆಯ ಉತ್ತಮ ನಡತೆಯ ಯುವಕ ಹಾಗೂ ಪ್ರಬುದ್ಧ ವ್ಯಕ್ತಿ, ಮೌಲ್ಯಯುತ ಉದ್ದೇಶಗಳ ಸರದಾರ ಹಾಗು ಬಲಾಢ್ಯರು ಮತ್ತು ದುರ್ಬಲ ವ್ಯಕ್ತಿಗಳ ಬಯಕೆ ಪೂರೈಸಿತು. ೧೦೪೮ ನೇ ಹಿಜರಿ ರಬಿಯುಸ್ಸಾನಿ ಮಾಹೆಯ ಹದಿನಾರನೇ ತಾರಿಕಿನಂದು ಅತಿಸುಂದರ ನವಜಾತ ಮಂಗಳಕಾರೀ ಉತ್ತರಾಧಿಕಾರಿಯು ತಾಯಿಯ ಗರ್ಭದಿಂದ ಬರ್ಹಿಲೋಕಕ್ಕೆ ಪಾದರ್ಪಣೆಮಾಡಿ, ಆ ಪುಣ್ಯದಿಂದ ಅಂಧಕಾರದ ಉಡುಪನ್ನು ತೊಟ್ಟಿದ್ದ ಜನರಿಗೆ ಹೊಳೆಯುವ ಬೆಳಗುವ ಪ್ರಕಾಶಮಯ ದಿರಿಸನ್ನು ತೊಡಿಸಿತು.

ಮತ್ತು ಈ ಭೂಮಿಯನ್ನು ಆಕಾಶದ ದಶದಿಕ್ಕುಗಳಿಂದ ಪ್ರಕಟವಾಗುವ ಅಶ್ವಾರೋಹಿಗಳ ಮೂಲಕ ಪೂರ್ವಪಶ್ಚಿಮ ದಿಕ್ಕುಗಳಿಗೆ ಸುಗಂಧಪೂರಿತ ಅತ್ತರಿನ ಸುವಾಸನೆಯಿಂದ ತುಂಬಿತು. ಈ ಬೆಳಕಿನ ನಕ್ಷತ್ರವು ಲೋಕದ ಕಂಗೆಟ್ಟ ಕಣ್ಣುಗಳಿಗೆ ಬೆಳಕನು ನೀಡುವ ಗಾಢಾಂಧಕಾರದ ಲೋಕವನ್ನು ಬೆಳಕಿನ ಉಂಡೆಯನ್ನಾಗಿ ಪರಿವರ್ತಿಸುವ ಬದ್ನಾಪುರ ಹೆಸರಿನ ಖ್ಯಾತಿ ಹೊಂದಿದ ಮೊಹಮ್ಮದ್‌ಪುರ ಶಹರಿನ ಕೋಟೆಯ ಒಳ ಭಾಗದಲ್ಲಿ ಹಜರತ್ ಬಾದಶಹ ಘಾಝಿಯು ತಮ್ಮ ಪವಿತ್ರ ಪಟ್ಟಾಭಿಷೇಕದ ನಂತರ ನಿರ್ಮಿಸಿದ ಮಸೀದಿಯ ಬಳಿ ಜನ್ಮ ತಳೆದ.

ಆ ಸಂದರ್ಭದಲ್ಲಿ ಅಗಣಿತ ಶುಭ ಮುಹೂರ್ತಗಳು ಮತ್ತು ಶುಭ ಸಂಕೇತಗಳು ಮೂಡಿಬಂದವು. ದರ್ಜೆಯಲ್ಲಿ ಅತ್ಯುತ್ತಮವು ಮತ್ತು ಕಾಲದಲ್ಲಿ ಉತ್ತಮವೂ ವರ್ಷಗಳು ಮತ್ತು ತಿಂಗಳುಗಳ ಪೈಕಿಯು ಆದ ಬುರ್ಜೆ ಅಸದ್ ಭೂಖಂಡದ ಸುಲ್ತಾನನ ಪರಮಪಾವನ ಅರಮನೆಯಲ್ಲಿ ಲೋಕಕ್ಕೆ ಬೆಳಕನ್ನು ನೀಡುವ ಸೂರ್ಯನ ಉದಯವಾಯಿತು. ಮನೆಯೊಡೆಯನು ಗ್ರಹಗಳು ಹಾಗೂ ನಕ್ಷತ್ರಗಳ ದಂಡಿನ ಬಾದಶಹನೂ ಸಸ್ಯಕಾಶಿ ಮತ್ತು ಪ್ರಾಣಿ ಸಂಕುಲ ಮತ್ತು ಮಾನವರ ಸಂರಕ್ಷಕನೂ ಆಗಿದ್ದಾನೆ.ತನ್ನ ಪ್ರಭುತ್ವದ ಸಿಂಹಾಸನವನ್ನೇರಿ ಅತಾರೋ ನಕ್ಷತ್ರಕ್ಕೆ ತನ್ನ ಅಭಯದಿಂದ ಗರ್ವವನ್ನುಂಟು ಮಾಡಿ ಹೆಮ್ಮೆಯ ಸ್ಥಾನವನ್ನು ನೀಡಿದ.

ಲೌಕಿಕ ಮನುಷ್ಯರಿಗೆಂಬ ಮರ್ಯಾದೆಯನ್ನು ನೀಡಿ, ಅಭಿಮಾನದ ಔತಣ ಕೂಟದಲ್ಲಿ ಎಲ್ಲಾ ರೀತಿಯ ಪ್ರತ್ಯುಪಕಾರವನ್ನು ಕರುಣಿಸಿದ ಹಾಗೂ ಆ ಮಂಗಳ

ಕ್ಷಣದಲ್ಲಿ ಎಲ್ಲಾ ಜ್ಯೋತಿಷಿಗಳು ಬುಜ ನಕ್ಷತ್ರ ಮತ್ತು ಜೋರುಘ್ ನಕ್ಷತ್ರಗಳನ್ನು ಅದೃಷ್ಟದ ಚಂದ್ರ ಎಂದು ಪರಿಗಣಿಸುತ್ತಾರೆ. ಆ ಗುಂಪು ರಸಿಕ ಹಾಗೂ ಸಂತಸ ನೋಟದ ಪ್ರೇಮಿಗಳಿಂದ ಕೂಡಿದ್ದು ಶೃಂಗಾರ ಮತ್ತು ಅಲಂಕೃತ ಪ್ರೇಮಿಗಳೆಂದು ಅವರನ್ನು ಕರೆಯುತ್ತಾರೆ. ಮಾನವ ಜನಾಂಗದ ವ್ಯಕ್ತಿಗಳು ಆತನನ್ನು ಸೊಗಸುಗಾರ ಹಾಗೂ ಸೊಬಗಿನ ಲೋಕದ ನಾಯಕ, ಒಳಿತು ಮತ್ತು ಶೋಭೆಯ ಜಗತ್ತಿನ ದೊರೆ ಎಂಬ ಹೆಸರನ್ನು ನೀಡಿದಲ್ಲಿ ಸೂಕ್ತವಾಗುತ್ತದೆ. ಆತನು ಬರ್ಜಿಹೌತ್ ಎಂಬ ನಕ್ಷತ್ರದಲ್ಲಿ ಶ್ರೇಷ್ಠತಮ ಪೀಠವನ್ನು ಅಲಂಕರಿಸಿ ಸಿಂಹಾಸನವನ್ನು ಆರೋಹಣಮಾಡಿ ಸಕಲ ಜನತೆಯ ಮೇಲೆ ಶೋಭೆ ಹಾಗೂ ಸಮೃದ್ಧಿಯ ಹೆಬ್ಬಾಗಿಲನ್ನು ತೆರೆದ. ಝೊಹ್ರ ಎಂಬ ಗ್ರಹವು ಔನತ್ಯ ಹಾಗೂ ಸಂತೋಷ ಮತ್ತು ಸಮೃದ್ಧಿಯ ಆಗರವಾಗಿದ್ದು, ಸಂತಸವೃದ್ಧಿಗೆ ಖ್ಯಾತಿಯನ್ನು ಹೊಂದಿದೆ.

ಅಫ್ರ ಸಯಾಬ್‌ನ ಪುತ್ರಿಯಾದ ಮುನ್ಷೀರಾಳ ದರ್ಜೆಗೆ ಅನುಸಾರವಾಗಿ ಅಂದರೆ ಹಿಂದೂ ಜ್ಯೋತಿಷಿಗಳು ಕರೆಯುವ ಪುಷ್ಯ ನಕ್ಷತ್ರವೆನ್ನುತ್ತಾರೆ. ಆಹ್ಲಾದದ ಗೀತೆಯನ್ನು ನುಡಿಸುತ್ತಾ ಪರಾಕ್ರಮಿ ಮತ್ತು ಗೌರವಾದರಗಳಿಗೆ ಪಾತ್ರವಾದ ಈ ಉಜ್ವಲ ನಕ್ಷತ್ರವು ಪ್ರಭುತ್ವದ ಬಾನಿನಂಗಳದ ಪೂರ್ಣ ಚಂದ್ರನಂತೆ, ರಾಜನ ಆಪ್ತ ಬಳಗದವರಲ್ಲಿ ಪ್ರಖ್ಯಾತಿ ಹೊಂದಿದ ಪ್ರತಾಪ ಸ್ವರೂಪಿ ನೆಮ್ಮದಿಯ ಜನರನ್ನು ಮರಗಳು, ರೆಂಬೆ-ಕೊಂಬೆಗಳು ಹಾಗೂ ಎಲೆಗಳಂತೆ ಮತ್ತು ಶುಭ್ರಮನಸ್ಕ, ಗೌರವಾರ್ಹ ಸಭ್ಯ ಗುಣಗಳ ಸೂಫಿಗಳ ನೃತ್ಯ ಮತ್ತು ಲಘು ಅಮಲಿನ ಭಾವೋದ್ರೇಕ ಪ್ರೇರಿತ ಆದೇಶದತ್ತ ತರಲಾಗುತ್ತಿದೆ. ಹಿಂದೂಸ್ತಾನೀ ಜ್ಯೋತಿಷಿಗಳ ಪ್ರಕಾರ, ಎಲ್ಲಾ ಸಂಕೇತಗಳು ಆ ಸಲಾತೀನೆ ಬಾದಶಹನ ಅದೃಷ್ಟವು ಸೂರ್ಯನಂತೆ ಆಡಳಿತಾತ್ಮಕವಾಗಿ ಪ್ರಜ್ವಲಿಸುವುದೆಂತಲೂ ಹಾಗೂ ಅಧಿಕಾರದ ಹಿಡಿತವನ್ನು ಹೊಂದಿದವನೆಂತಲೂ ಅಭಿಪ್ರಾಯಪಟ್ಟರು. ಬಹುತೇಕ ರಾಜಮಹಾರಾಜರು ವಿಜಯಿ ಮತ್ತು ಸಫಲರಾಗಿದ್ದು, ವೈಭವೋಪೇತ ಅನುಯಾಯಿಗಳು ಆ ಆಲಂಗೀರ್ ಬಾದಶಹನ ಮೃದು ನೆರಳಿನಲ್ಲಿ ರಕ್ಷಣೆ ಪಡೆದು ಆರಾಮ ಮತ್ತು ನಿರಾಯಾಸತೆಯನ್ನು ಅನುಭವಿಸುವರು ಹಾಗೂ ಆಜ್ಞಾಪಾಲನೆ ಮತ್ತು ಗುಲಾಮತನದ ಸರಪಳಿಯಲ್ಲಿ ಬಂಧಿತರಾಗಿದ್ದು ಜಹಾಪನಾರವರ ಇಚ್ಛೆಯನ್ನು ಸಂಪ್ರೀತಗೊಳಿಸುವರು ಹಾಗೂ ಅವರ ನಂಬಿಕೆ ಮತ್ತು ಭರವಸೆಯನ್ನು ಎಲ್ಲಾ ಕೆಲಸಕಾರ್ಯಗಳಲ್ಲಿ ಕಾರ್ಯಗತಗೊಳಿಸುತ್ತಾ ಆಜ್ಞಾಪಾಲನೆ ಹಾಗೂ ವಿಧೇಯತೆಯಿಂದ ಸಾಮಂತರಾಗಿರುವರು. ಹಜರತ್ ಗುಫ್ರಾನ್‌ಪನಾಹ್ ಬಾದಶಹ ಆ ಚೇತೋಹಾರಿ ಮತ್ತು ಸಂಭ್ರಮ ಸಂತಸದ ಸುದ್ದಿಯನ್ನು ಕೇಳಿದನಂತರ ಎಲ್ಲಾ ಹೂರ್ ನಂತಹ (ಗಂಧರ್ವ ಕನ್ಯೆ) ಮತ್ತು ತೇಜೋಮಯ ಶುಕ್ರಗ್ರಹದಂತೆ ಹೊಳೆಯುತ್ತಿದ್ದ ಶುಭ ಸುದ್ದಿಯನ್ನು ಅರುಹಿದ ಸ್ತ್ರೀಯರು ಅಪಾರ ಸಂತೋಷದ ಬಟ್ಟಲನ್ನು

ಹೀರುತ್ತಿದ್ದರು. ಅವರಿಗೆ ದಿರ್‌ಹಮ್ ಮತ್ತು ದೀನಾರ್‌ಗಳ ಭಕ್ಷೀಸು ಮತ್ತು ಇನ್ನಿತರೆ ಮುತ್ತು-ರತ್ನಗಳಿಂದ ತುಂಬಿದ ಥೈಲಿಗಳನ್ನು ಇನಾಮಿನ ರೂಪದಲ್ಲಿ ನೀಡಿದ. ಎಲ್ಲರ ಶುಭಕಾಂಕ್ಷೆಗಳು, ಕೊಡುಗೆ ಚಮತ್ಕಾರದಲ್ಲಿ ಮುಳುಗಿ, ಅತ್ಯಂತ ಚೂಟಿಯಾಗಿ ರಾಜ್ಯಾಡಳಿತ ಹಾಗೂ ಪರಾಕ್ರಮದ ಹೂದೋಟದ ಅದ್ವಿತೀಯ ಮತ್ತು ಶ್ರೇಷ್ಠ ಹಾಗೂ ಉನ್ನತ ತೋಟದ ಹಸಿರು ಸೂಸುವ ಮರವು ಎಲ್ಲಾ ಸೂರ್ಯಕಿರಣಗಳನ್ನು ಏಕೀಭವಿಸುತ್ತಾ ಹಾಗೂ ದೇಶಗಳನ್ನು ನೆಮ್ಮದಿಯಿಂದ ಸಾಲಂಕೃತಗೊಳಿಸುತ್ತಿರುವ ಹಣೆಯ ಮೇಲೆ ಅದೃಷ್ಟದ ಬರೆಹವನ್ನು ಚಿತ್ರಸುತ್ತಾ ತನ್ನ ವಿಶ್ವಮಾನ್ಯ ಹಸ್ತವನ್ನು ಜಗತ್ಪ್ರಸಿದ್ಧ ಖುದಾನ ಭೂಮಿಯ ಮೇಲೆ ಗುಲಾಮತನದಿಂದ ಹಣೆಯನ್ನು ಮತ್ತು ತನ್ನ ಜಬೀನ್‌ನನ್ನು ಭೂಮ್ಯಕಾಶಗಳ ಒಡೆಯನಾದ ಖುದಾನ ಸನ್ನಿಧಿಯಲ್ಲಿ ವಿನಯ ಮತ್ತು ಯಾಚನೆಯ ಆರ್ತಭಾವನೆಯಿಂದ ಭಾಗಿಸಿ, ಇಂತಹ ಅದ್ಭುತ ಕೊಡುಗೆಗಳು, ಉನ್ನತ ಭಕ್ಷೀಸುಗಳು ತನ್ನ ಮನೆಯ ಅಲಂಕರಣದಲ್ಲಿ ಬಳಸಿರುವ ವೈಭವೋಪೇತ ಪೀಠೋಪಕರಣಗಳು, ಅಮೂಲ್ಯ ಬೆಳಗುವ ಮುತ್ತುಗಳು, ಅತಿಸುಂದರ ವಜ್ರ ವೈಢೂರ್ಯ ಹಾಗೂ ಅಪೂರ್ವ ಸರಕು ಸಾಮಾನುಗಳ ಕೊಡುಗೆಯ ಬಗ್ಗೆ ವಂದನೆಗಳನ್ನು ಅರ್ಪಿಸುತ್ತಾ,

ಮುತ್ತುಗಳ ಸಂದೂಕದಿಂದ ಈ ಪವಿತ್ರ ಸೃಷ್ಟಿಯು ಉದಯವಾದಾಗ
ಅದರ ಪ್ರಕಾಶದಿಂದ ಆಕಾಶವು ಬೆಳಗಿತು.
ಕೊರಳಹಾರದ ಸಂದೂಕದಿಂದ ಆ ಪ್ರಜ್ವಲ ಮುತ್ತುಗಳು
ದೊರೆತಾಗ ವಿಶ್ವದ ಜನತೆಯ ದೇಹಗಳಲ್ಲಿ
ನವ ಪ್ರಾಣ ಸಂಚಾರವಾಯಿತು.
ಅದೆಂಥಾ ಅದೃಷ್ಟವೋ ವಿಶ್ವವನ್ನು ಬೆಳಗುವ ಸೂರ್ಯ
ಆ ಬೆಳಕಿನ ಭವ್ಯತೆ ಎದುರು ಕಳಾಹೀನನಾದ.
ಭೂ ಖಂಡದ ಮೇಲೆ ಇಂತಹ ಸೂರ್ಯ ಉದಯಿಸಿದಾಗ
ವಿಶ್ವಕ್ಕೆ ನಿರಂತರತೆಯ ಆನಂದ ನಿರುಮ್ಮಳತೆ ಪ್ರಾಪ್ತವಾಯಿತು.
ಜಗತ್ತು ಅವನ ಬೆಳಕಿನಿಂದ ಪ್ರಕಾಶಮಯವಾಯಿತು.
ಭೂಮಿ ಅವನ ಆಗಮನದಿಂದ ಹೂದೋಟವಾಯಿತು.

ಜಗತ್ತಿನ ನೋಟದಿಂದ ಮರೆಯಾಗುವ ವಸ್ತುಗಳು, ಸುಪ್ರಸಿದ್ಧ ಹಾಗೂ ಆಶ್ಚರ್ಯಜನಕ ಮಾರ್ಗದರ್ಶಕ ಮುಖಂಡ, ನಾಯಕತ್ವ ಮತ್ತು ಮನ್ನಣೆಯ ವಂಶಾವಳಿ, ಪಾವಿತ್ರ್ಯತೆ, ಗೌರವ ಹಾಗೂ ಹಿರಿತನದ ಆಗರ ಧರ್ಮನಿಷ್ಠೆ ಹಾಗೂ ಖ್ಯಾತ ನಾಮವೆಂಬ ಉಡುಗೆಯನ್ನು ತೊಡುವವನು, ಪಾವಿತ್ರ್ಯತೆ ಮತ್ತು ಗುರಿಯ ಆಭರಣಗಳಿಂದ ನೆರವಾಗುವವನು ಸಿರಿವಂತಿಕೆ, ಅಧಿಕಾರ ಮತ್ತು ಹಿರಿತನದ

ಖುಲ್‌ಝುಮ್ ಸಾಗರ.(ಖುಲ್‌ಝುಮ್ ಎಂಬುದು ಈಜಿಪ್ಟ್ ಹಾಗೂ ಮೆಕ್ಕಾದ ನಡುವೆ ಇರುವ ಪಟ್ಟಣ) ಅಮೂಲ್ಯ ಮುತ್ತು, ಪಾವಿತ್ರ್ಯತೆ ಹಾಗೂ ಶಿಷ್ಟತೆಯ ಆಗಸ, ಜಗತ್ತನ್ನು ಬೆಳಗುವ ಔದಾರ್ಯದ ಖನಿ, ಶುಭ್ರತೆ ಹಾಗು ಪಾವಿತ್ರ್ಯದ ಹೆಸರಿನ ಶೀರ್ಷಿಕೆ, ಉತ್ತಮ ವಂಶಸ್ಥ, ಉತ್ತಮ ಗುಣದ ತೋಟದ ಬುಲ್-ಬುಲ್ ಹಕ್ಕಿ, ಸೌಭಾಗ್ಯ ಸೂರೆಗೈದ ಅದೃಷ್ಟಶಾಲಿ ತೇಜಸ್ವಿ ನೋಟದ, ಉನ್ನತ ನಾಮಾಂಕಿತ, ಪರಾಕ್ರಮಶಾಲಿ. ಅವರ ಹಣೆಯಿಂದ ದೈವಭಕ್ತಿಯ ಶರಾಬು ಅಮಲಿನೋಪಾದಿಯಲ್ಲಿ ವ್ಯಕ್ತವಾಗುತ್ತಿತ್ತು. ಹಾಗೂ ಧರ್ಮಬೀರುತ್ವವೆಂಬುದು ಅವರ ಸ್ವಭಾವದಿಂದ ಗುಲಾಬಿಯ ಸುಗಂಧದಂತೆ ವ್ಯಕ್ತವಾಗುತ್ತಿತ್ತು. ಬುದ್ಧಿವಂತಿಕೆ ಹಾಗೂ ಸೂಕ್ಷ್ಮನೋಟದ ಕಿಂಡಿಯ ಮೂಲಕ ಅವರು ಕೊಡವನ್ನು ಎಳೆಯುವವರಿದ್ದರು.

■

*

ಅಧ್ಯಾಯ-೩

ಬಡೆಸಾಹೇಬಾಳ ವರ್ಣನೆ

ಪುರುಷರಿಗಿಂತಲೂ ಹೆಚ್ಚು ಬುದ್ಧಿ ಮತ್ತೆ ಹೊಂದಿದಂತಹ
ಮಹಿಳೆಯು ಸಾಗರಕ್ಕಿಂತಲೂ ಹೆಚ್ಚಿನ ಪವಿತ್ರ ಪ್ರಕೃತಿ
ಮತ್ತು ಜೀವರಾಶಿಯ ಹುಟ್ಟು ಗುಣವನ್ನು ಹೊಂದಿದ್ದಾಳೆ.

ಆಕೆಯು ಧೃಡ ನಿಶ್ಚಯವನ್ನು ಮತ್ತು ಜಾಗೃತ ಆತ್ಮವನ್ನು ಅಂತರ್ಗತ ಮಾಡಿಕೊಂಡಿದ್ದು ಕಠಿಣವಾದ ಸಂದರ್ಭಗಳಲ್ಲಿ ಜನತೆಯ ಮೇಲೆ ಉದಾರತೆಯನ್ನು ತೋರುವವಳಾಗಿದ್ದಾಳೆ. ಆಕೆಯ ದಾಸಿಗಳು ಮತ್ತು ತೊತ್ತುಗಳು ಸ್ವರ್ಗದ ಹೂರ್(ಅಪ್ಸ)ರೆಯರಾಗಿದ್ದಾರೆ. ಆಕೆಯು ಪಿಂಗಾಣಿಯಂತಹ ಶುಭ್ರದೇಹದ ಮಶ್ಕ್ ಮತ್ತು ಅಂಬರನಂತಹ ಸುಗಂಧಪೂರಿತ ಹಾಗೂ ಮರಿಯಮ್‌ನಂತಹ ನಡತೆ ಮತ್ತು ಅಂತಸ್ತಿನಲ್ಲಿ ಬಲ್ಕೀಸ್ ಚಕ್ರವರ್ತಿನಿಯಂತೆ ಕಂಗೊಳಿಸುತ್ತಿದ್ದ ಹಜರತ್ ಬಡಿ ಸಾಹೇಬಾ ದಿವಂಗತ ಸುಲ್ತಾನ್ ಮೊಹಮ್ಮದ್ ಖುತುಬ್‌ಶಾಹ್‌ನ ಕಣ್ಣಿನ ಕಾಂತಿ, ಹೃದಯದ ತಂಪು ಆಗಿದ್ದರು. ಪರಮ ಪರಾಕ್ರಮಿ ಬಾದಶಹ ರಿಜ್ವಾನರವರ ಅಂತಃಪುರದ ಎಲ್ಲಾ ಪವಿತ್ರ ಪತ್ನಿಯರ ಪೈಕಿ ಗೌರವ, ಆತ್ಮೀಯತೆ ಮತ್ತು ಸಾಂಗತ್ಯದಲ್ಲಿ ಅತಿ ಹೆಚ್ಚು ಸ್ಥಾನಮಾನವನ್ನು ಹೊಂದಿದ್ದರು. ಮಹಾನ್ ಗಾಂಭೀರ್ಯ ಮತ್ತು ಶ್ರೀಮಂತಿಕೆಯ ಪರದೆಯ ಮೇಲೆ ಶ್ರೇಷ್ಠಸ್ಥಾನವನ್ನು ಪಡೆದಾಕೆ. ಪ್ರೇಮ ಮತ್ತು ದಯೆ ಹಾಗೂ ಕಾರುಣ್ಯದ ಒಡತಿ ಮತ್ತು ಜಾಗೃತ ಆತ್ಮದ ಪ್ರತೀಕವಾಗಿದ್ದರು. ಅವರನ್ನು ಅಜ್ಞಾತಲೋಕದ ರಹಸ್ಯಗಳ ಮತ್ತು ದಿವ್ಯ ಪ್ರಕಾಶದ ಕನ್ನಡಿ ಎಂದು ಹೇಳಬಹುದು. ಅಲ್ಲಾಹನು ಅವರಿಗೆ ಅಂತಹ ಹಿರಿಮೆಯನ್ನು ಕರುಣಿಸಿದ್ದಾನೆ. ಅವರ ಕನಸಿನ ಲೋಕವು ಜಾಗೃತ ಲೋಕಕ್ಕಿಂತ ಮಿಗಿಲಾಗಿದೆ. ಅನೇಕ ವೇಳೆ ಆಗಮಿಸಲಿರುವ ಜನರ ತಂಡಗಳ ಬಗ್ಗೆ

ಆಕೆ ಮಾಹಿತಿ ನೀಡುತ್ತಾರೆ. ನೋಡಿದಲ್ಲಿ, ಆಕೆಯು ಆಕಾಶದಿಂದ ಭೂಮಿಯವರೆಗೆ ಆಭರಣಗಳಿಂದ ಅಲಂಕೃತರಾಗಿದ್ದಾರೆ. ಇಡೀ ವಿಶ್ವವೇ ಆಕೆಯ ಸೂರ್ಯ ಕಿರಣಗಳಿಂದ ಬೆಳಕಿನಿಂದ ಬೆಳಗುತ್ತಿದೆ ಮತ್ತು ಆಕೆಯು ಪ್ರೌಢಿಮೆ ಹಾಗು ಗೌರವ ಮತ್ತು ಧರ್ಮಪರತೆಯಲ್ಲಿ ಸಭ್ಯತೆ ಹಾಗೂ ಸಮಚಿತ್ತತೆಯನ್ನು ಸೂರ್ಯನೋಪಾದಿಯಲ್ಲಿ ಕಂಗೊಳಿಸುತ್ತಿದ್ದಾರೆ. ಪರಿಪಕ್ವ ವಿವೇಕದ ಚಂದ್ರನು ಅವರ ಹಣೆಯ ಮೇಲಿನ ಆಕಾಶದಿಂದ ಪ್ರಕಾಶವನ್ನು ಬೀರುತ್ತಿದ್ದಾನೆ. ಓ ಮಹಾರಾಣಿಯೇ! ನೀನು ಕಂಗಳ ತಂಪು ಮತ್ತು ಬಾದಶಹನ ತೋಟದ ಕರುಣೆಯ ಪ್ರತೀಕವಾಗಿರುವೆ. ಅನ್ವೇಷಣೆ ಮತ್ತು ಹುಡುಕಾಟದ ದೃಷ್ಟಿಯಿಂದ ಐಹಿಕ ಮತ್ತು ಪರಲೋಕದ ದರ್ಜೆಗಳ ಸಾಧನೆ ಹಾಗೂ ಗೆಲುವಿನ ಮೆಟ್ಟಿಲುಗಳ ಸಾಧನೆಯ ಆರಂಭಿಕ ಹಾದಿಯು ಸುಸ್ಪಷ್ಟವಾಗಿದೆ. ಸಿಕಂದರ್ ಬಿನ್ ಅರಿಸ್ಟಾಟಲ್ ಸಿಂಹಾಸನದ ಮಾಂಡಳಿಕರು ಮಹಾನ್ ಗೌರವಾನ್ವಿತ ಹಜರತ್ ಪನಾಂ ಬಾದಶಹ ಆಲಮ್ ಗೀರ್‌ನ ಆವಗಾಹನೆಗೆ ಅದ್ಭುತ ಸುದ್ಧಿಯೊಂದನ್ನು ತಲುಪಿಸಿದರು. ಏನೆಂದರೆ, ಈ ವಿನಯಶೀಲ ಸುಪುತ್ರನು ತನ್ನ ಪ್ರೇಮಪೂರಿತ ನೋಟವನ್ನು ಯಾವುದೇ ನಿಕೃಷ್ಟ ವಸ್ತುವಿನ ಮೇಲೆ ಹಾಯಿಸಿದಲ್ಲಿ ಕಣ್ಣರೆಪ್ಪೆ ಮುಚ್ಚುವುದರೊಳಗೆ ಸೂರ್ಯನ ಪಕ್ಕ ಸ್ಥಾನ ಪಡೆಯುತ್ತಾನೆ.

ಒಂದು ವೇಳೆ ಕ್ರೋಧಾನಿಲ ನೇತ್ರದಿಂದ ಪ್ರಾಚೀನ ಆಕಾಶದ ಗೊಮ್ಮಟದತ್ತ ದೃಷ್ಟಿ ಹಾಯಿಸಿದಲ್ಲಿ ಧೂಳಿನ ಕಣಗಳಂತೆ ವಿನಾಶ ಹೊಂದುತ್ತದೆ ಮತ್ತು ಧ್ವಂಸವಾಗಿ ಕಣ್ಮರೆಯಾಗುತ್ತದೆ. ಆಶ್ಚರ್ಯಚಕಿತ ರಾಜಸಿಂಹಾಸನವು ಇಂತಹ ಸೂರ್ಯನಂತಹ ಪ್ರಜ್ವಲಿತ ಬಾದಶಾಹನ ಶೋಭಾಯಮಾನ ಗ್ರಹಗತಿಯ ವ್ಯಕ್ತಿತ್ವದ ಪ್ರಭಾವದಿಂದ ಶೋಭೆ ಹೊಂದಿತು. ಆತನ ಧರ್ಮನಿಷ್ಠೆ ದಿನನಿತ್ಯದ ಬೆಳಕಿನಿಂದ ಅಂಧಕಾರದ ಪ್ರಪಂಚ ಹಾಗೂ ಜ್ಞಾನದ ಬೆಳಕಿನಿಂದ ವಂಚಿತವಾದ ಹೃದಯವು ಕತ್ತಲಿನಿಂದ ತುಂಬಿತ್ತು. ಸದಾಕಾಲ ಅಜ್ಞಾನದ ಅಂಧಕಾರ ಮತ್ತು ದುರ್ಮಾರ್ಗದ ಕತ್ತಲ ಕೂಪದಲ್ಲಿ ಮುಳುಗಿದ್ದವು. ಆ ಜನರು ಕ್ಷಮೆ, ಮೋಕ್ಷ, ಮುಕ್ತಿ ಹಾಗೂ ಸದ್ಗತಿಯ ಸಿಂಹಾಸನವನ್ನೇರಿದ್ದು, ಒಳಿತು ಮತ್ತು ಸನ್ನಡೆಯ ಮದರಸಾದ ಅಧ್ಯಕ್ಷ ಸ್ಥಾನವನ್ನೇರಿದರು ಹಾಗೂ ಅನಿಷ್ಟ ಪದ್ಧತಿಗಳ ಬೆಂಬಲಿಗರಾಗಿದ್ದವರು ಸತ್ಯ ಪಕ್ಷಪಾತಿಗಳಾಗಿ ಬದಲಾದರು ಮತ್ತು ರಂಗಾರಂಗಿ ವಿಲಾಸಿಜೀವನದ ಕಾಲದಲ್ಲಿ ಬಡವರ ಬಗ್ಗೆ ಕಾಳಜಿಯ ಸ್ವಭಾವದ ಏಕಧ್ಯೇಯ ವಾಕ್ಯ ಮೂಡಿಬಂದಿತು. ಅಷ್ಟೆ ಅಲ್ಲದೆ ದೀನದಲಿತರ ಮತ್ತು ಬಡಬಗ್ಗರ ನಿರೀಕ್ಷೆಯ ಗೊಂಚಲಿನ ಮೊಗ್ಗುಗಳು ಅರಳಲಾರಂಭಿಸಿದವು. ಪಾನಪ್ರಿಯರ ಮದಿರ ಪ್ರಿಯರ ನಿರೀಕ್ಷೆಯ ಬಟ್ಟಲು ಸೋರಿಹೋಯಿತು. ಬಾದಶಹನ ಆಪ್ತವರ್ಗದವರ ಆಸ್ಥಾನದಲ್ಲಿ, ಪರಲೋಕದ ಲೋಲುಪತೆಯನ್ನು ಕೊನೆಗಾಣಿಸಿತು.

ಅಲಿ ಆದಿಶಹನ ರಕ್ಷಣೆಗಾಗಿ ಆನಂದ ಮಹಲನ್ನು ಅಲಂಕರಿಸಿದ್ದು

ಈ ಸಂದರ್ಭದಲ್ಲಿ ಹಜರತ್ ಆಲಿ ಜನಾಬ್‌ರವರು ಅಲ್ಪ ಕಾಣಿಕೆಯನ್ನು ಭೂಮ್ಯಾಕಾಶಗಳ ಸೃಷ್ಟಿಕರ್ತ ಒಡೆಯನ ಶ್ರೇಷ್ಠ ಕಾಣಿಕೆ ಎಂದು ಪರಿಗಣಿಸಿ, ಆನಂದ ಮಹಲಿನಲ್ಲಿ ಆ ಮಾಹೆಯ ಹತ್ತೊಂಬತ್ತನೆಯ ದಿನಾಂಕದ ಭಾನುವಾರದಂದು ಪಾದಾರ್ಪಣೆ ಮಾಡಿ, ಶೋಭಾಯಮಾನವಾಗಿಸಿ ಒಂದು ದೊಡ್ಡ ಸಮಾರಂಭವನ್ನು ಏರ್ಪಡಿಸಿದರು. ಸ್ವರ್ಗದ ತೋಟದಲ್ಲಿ ಕಿಚ್ಚು ಹಚ್ಚುವಂತಹ ಹಾಗೂ ತಮ್ಮ ವಿಶ್ವವಿಖ್ಯಾತ ಮತ್ತು ಶುಭ ನಾಮಧೇಯವನ್ನು ಹೊಂದಿದ ನಾಣ್ಯವನ್ನು ಟಂಕಿಸಿದರು. ಆ ಬಗ್ಗೆ ಸರ್ವರೀತಿಯ ಸಂಭ್ರಮವು ಮೇರೆ ಮೀರಿತು. ಪ್ರಿಯತಮೆಯಂತಹ ದೇಹಾಕಾರ ಪಡೆದ ವಿದ್ಯಾರ್ಥಿಗಳನ್ನು ಪೊರೆಯುವ ಕಾನೂನೀತಜ್ಞರು ಮಾನಸಿಕವಾಗಿ ಸೂಕ್ತ ನಿರ್ಧಾರ ಕೈಗೊಂಡು, ಮದಿರಾ ಪ್ರಿಯ ಪಾನಾಸಕ್ತರನ್ನು ದೈವಭಕ್ತರನ್ನಾಗಿ ಪರಿವರ್ತಿಸಿದರು ಮತ್ತು ಹಾಡುಗಾರ, ಗಜಲ್ ಗಾಯಕರು ಹಾಗು ಮಂತ್ರ ಮುಗ್ಧ ಸುಶ್ರಾವ್ಯ ಕಂಠ ಹೊಂದಿದವರನ್ನು ನೈಜ ಮತ್ತು ಶಾಶ್ವತ ಪ್ರಿಯತಮನ (ಅಲ್ಲಾಹನ) ವಿರಹಗಳನ್ನಾಗಿ ಪರಿವರ್ತನೆ ಮಾಡಿದರು. ಚಂದ್ರಮನಂತಹ ಮೋರೆಯುಳ್ಳ ಪ್ರಿಯ ಭಾಷಣಿಯರು ಮತ್ತು ಹಾವಭಾವಗಳಿಂದ ಮನ ಸೂರೆಗೈಯುವ ನರ್ತಕಿಯರ ಅಲಂಕೃತ ತೋಟಗಳ ಎತ್ತರದ ಮರಗಳು ಮುದುಡಿಕೊಂಡವು. ಕಾಡು ಮತ್ತು ಮರುಭೂಮಿಯು ಅವರ ಅಲಂಕಾರ ಮತ್ತು ಹಾವಭಾವಗಳ ಕ್ಷೀಣಿಸುವಿಕೆಗೆ ಕರಗಿ, ಕಾಬೂಲಿನಿಂದ ಕಾಶ್ಮೀರದವರೆಗಿನ ಕಾಡು, ಗಿಡ, ಮರ, ಹೂವುಗಳು ಅಸ್ತವ್ಯಸ್ತವಾದವು. ಸಂಪೂರ್ಣ ಆಮೋದ ಪ್ರಮೋದಗಳಲ್ಲಿ ಮುಳುಗಿದ ಕುಟಿಲ ಜಗತ್ತಿನ ಸುಂದರಿಯರು ಆಮೂಲಾಗ್ರವಾಗಿ ಬದಲಾವಣೆ ಹೊಂದಿ ಉತ್ತಮ ಅಭಿರುಚಿಯ ಪೋಷಾಕನ್ನು ಧರಿಸತೊಡಗಿದರು.

ಮತ್ತು ಆ ತಂಡವು ಎಂತಹ ನಾಚ್ ಮತ್ತು ಠುಮಕ್‌ವನ್ನು ಪ್ರದರ್ಶಿಸಿತೆಂದರೆ, ಇಡೀ ಪ್ರಪಂಚವು ಅವರ ಹೆಜ್ಜೆ ಗುರುತುಗಳನ್ನು ಕುರಿತು ನೆಮ್ಮದಿಯ ನೋಟದ ಸಂಪ್ರದಾಯವನ್ನು ಭಂಗಗೊಳಿಸುವವರೆಂದು ಹೃದ್ಗತ ಮಾಡಿಕೊಂಡರು.

ಅರಮನೆಯ ಅಂಗಳದಲ್ಲಿ ಹೂಗೊಂಚಲು ಪ್ರಕಾಶ ಬೀರುತ್ತಿದೆ
ಹಗಲಿನ ಸೂರ್ಯ ಮತ್ತು ಈ ಇರುಳಿನಲಿ ದೀಪ ಬೆಳಗಿದಂತೆ.
ಪ್ರಕಾಶವನ್ನು ವೀಕ್ಷಿಸುವಂತಹ ಶಕ್ತಿ ಅವರ ನೋಟದಲ್ಲಿಲ್ಲ
ಏಕೆಂದರೆ ಆತನನ್ನು ಹತ್ತಿರ ಮತ್ತು ದೂರದಿಂದ ವೀಕ್ಷಿಸಬೇಕು.
ಯಾರ ಕಿವಿಯಲ್ಲಾದರೂ ಅವರ ಧ್ವನಿ ಮಾರ್ದನಿಸಿದಲ್ಲಿ

ಆ ವ್ಯಕ್ತಿ ತನ್ನ ಅಸ್ತಿತ್ವ ಮತ್ತು ಮಾನವನ್ನು
ಅರ್ಪಿಸುವನು ಅವರ ಬೆಡಗಿನ ಹಿಂದೆ.

ಅವರ ನಡುವೆ ಫರಿಶ್ತ (ದೇವದೂತ) ಪರಾಕ್ರಮವನ್ನು ನೋಡುವುದಿಲ್ಲ ಹಾಗೊಮ್ಮೆ ನೊಡಿದಲ್ಲಿ, ಮೇಲಿನಿಂದ ಕೆಳಗಿಳಿಯುವನು. ದುರಾಸೆಯ ಹಾದಿಯನ್ನು ವಿಚಿತ್ರ ಜನರು ಲಾಲಸೆಯ ಕಾಡಿನಲ್ಲಿ ಪಥಭ್ರಷ್ಟರಾಗಿದ್ದಾರೆ. ನಿರರ್ಥಕವಾಗಿ ಅಲೆಯುವವರು ಅಂಗೈ ಮೇಲೆ ಅಪೇಕ್ಷಿತ ಮುತ್ತು ಮತ್ತು ಹೆಗಲಿನ ಮೇಲೆ ದೈವಸಾಕ್ಷಾತ್ಕಾರವನ್ನು ಹೊಂದಿ, ಭೂಮಿಯ ಮೇಲೆ ತಮ್ಮ ಸೆರಗನ್ನು ಗೌರವ, ಘನತೆ ಹಾಗು ನೆಮ್ಮದಿಯಿಂದ ತುಂಬಿಸಿಕೊಂಡರು.

ತಪ್ತತುಟಿಯ ಮಹಾಜನರು ದಯೆ ಮತ್ತು ಕರುಣೆಯ ಕಣಿವೆಯಲ್ಲಿ ಆರ್ದ್ರ ಹೃದಯದ ಕರುಣಾಮಯಯಿಗಳ ಅನರ್ಘ್ಯ ಕೊಡುಗೆ ಮತ್ತು ನೆರವು ಹಾಗೂ ಉಪಕಾರದ ಭಾರದಿಂದ ಕೂಡಿ ನೆಮ್ಮದಿಯನ್ನು ಕಂಡುಕೊಂಡರು. ಸುಬಹಾನಲ್ಲಾ-ನಾವೇ ಅದೃಷ್ಟವಂತರು. ಜಹಾಪನಾಹ್ ಅತ್ಯುತ್ತಮ ಬಾದಶಹರವರು ಮೌಲಾನ ಇಸ್ಹಾಕ್ ಖದಸ್ಸರಾಹ್‌ರವರ ರುಬಾಯಿಯ ಅನುಸಾರ ಗೆಲುವು ಮತ್ತು ವಿಜಯದ ಸಿಂಹಾಸನದ ಮೇಲೆ ಆಸೀನರಾಗಿದ್ದಾರೆ.

ಅಲಿಯ ಕಂಗಳಲಿ ಉನ್ನತಸ್ಥಾನ ಅಲಂಕರಿಸುವವರು ಅಡಗಿದ್ದಾರೆ.
ಆದರೆ ಅಲಿಯ ಹೆಸರಿನ ಲಾಮ್ ಅಕ್ಷರದಿಂದ ಸರ್ವಶಕ್ತನು ಪ್ರಕಟವಾಗಿದ್ದಾನೆ.
ಅಲಿಯ ಹೆಸರಿನ 'ಯಾ'ನಲ್ಲಿ ಹುವಲ್ ಹಯ್ಯುಲ್ ಖಯ್ಯುಮ್ನ ರಹಸ್ಯವಿದೆ.
ನೀನು ಓದು ಮತ್ತು ನೋಡು ಇದರಲ್ಲಿ ದೇವನ ತೊಂಭತ್ತೊಂಭತ್ತು ಹೆಸರುಗಳಿವೆ.

ಅಂದರೆ, ತಮ್ಮ ಶುಭನಾಮಧೇಯದಲ್ಲಿ ಅಸ್ಮಾಯ-ಆಜಮ್(ಅಲ್ಲಾಹನ ತೊಂಭತ್ತೊಂಭತ್ತು ಹೆಸರಿನ) ಸೆಳಕುಗಳಿವೆ. ಏಕೆಂದರೆ, ಧರ್ಮವೇತ್ತ ಸುಂದರ ಹಾಗೂ ಉತ್ತಮ ನಡತೆಯಿಂದ ಪ್ರಶಂಸೆಗೊಳಲ್ಪಟ್ಟಲಾಗಿದೆ ಶುಭಕಾಂಕ್ಷೆಗಳ ಮತ್ತು ಅಭಿಮಾನ ಜನತೆಯ ಹಾರೈಕೆ ಮತ್ತು ಕ್ರಿಯಾಶೀಲತೆಯಲ್ಲಿ ತಾವು ಪರಮಾತ್ಮನ ಸಕಲ ಗುಣಗಳ ಜೀವಂತ ಪ್ರತೀಕವಾಗಿದ್ದೀರಿ. ಭವಿಷ್ಯತ್ತನ್ನು ನಾಶಮಾಡಿಕೊಳ್ಳುವ ಮತ್ತು ದುರ್ಮಾರ್ಗಿ ವ್ಯಕ್ತಿಗಳ ವಿಧ್ವಂಸಕ ಮತ್ತು ವಿದ್ರೋಹಿ ಚಟುವಟಿಕೆಗಳಲ್ಲಿ, ಸಂಕಷ್ಟ ನಿವಾರಕ ಅಲ್ಲಾಹನ ತೇಜಸ್ವಿ ಗುಣಗಳ ಸಾಕ್ಷಿಪ್ರಜ್ಞೆ ಎಂದು ಪರಿಗಣಿಸಲಾಗಿದೆ.

ತಾವು ಆಡಳಿತಾತ್ಮಕ ಕಗ್ಗಂಟನ್ನು ಪರಿಹರಿಸುವವರಾಗಿದ್ದೀರಿ. ಕಡ್ಡಾಯ ಸೇವೆಯ ಸಂದರ್ಭದಲ್ಲಿ ದೈವಾಜ್ಞೆಯನ್ನು ಬೆಂಬಲಿಸುವ ವ್ಯಕ್ತಿಗಳಿಂದ ಯಾವುದಾದರೂ ಜನವಿರೋಧಿ ದೊಡ್ಡ ಲೋಪ ಉಂಟಾದಲ್ಲಿ, ಅಂತಹ ಸಂದರ್ಭದಲ್ಲಿ ತಪ್ಪಿತಸ್ಥ

ವ್ಯಕ್ತಿಯ ಅಂತಸ್ತನ್ನು ಧೃಡ ನಿಶ್ಚಯದಿಂದ ದಂಡನೆಗೊಳಪಡಿಸತಕ್ಕದ್ದು, ಹಾಗೂ ಅವರ ಮಾನ ಮರ್ಯಾದೆಯ ಪ್ರಭಾವವನ್ನು 'ಅವಮಾನಕಾರೀ'ನ ಚಾಕುವಿನಿಂದ ಸುಲಿಯತಕ್ಕದ್ದು. ಆದರೆ ಇಲ್ಲಿ ಅಲ್ಲಾಹನು ಕ್ಷಮೆಯ ಒಡೆಯನಾದ ಬಾದಶಹನನ್ನು ತಪ್ಪನ್ನು ಮರೆಮಾಚುವ ಹಾಗೂ ಶಿಕ್ಷೆಯನ್ನು ಮಾಫ್ ಮಾಡುವ ಗುಣಕ್ಕೆ ಅನುಸಾರವಾಗಿ ದಯಾಭಿಕ್ಷೆ ನೀಡಿದ್ದು, ಕರುಣೆಗೆ ಅರ್ಹನನ್ನಾಗಿ ಮಾಡಿದ್ದಾನೆ. ಇಂತಹ ಅಪ್ರಿಯ ಕೃತ್ಯಗಳು ಘಟಿಸಿದಾಗಲೂ, ತಮ್ಮ ಹಣೆಯ ಮೇಲೆ ಗೆರೆಗಳು ಮೂಡುವುದಿಲ್ಲ. ಸತ್ಯಕ್ಕೆ ಅರ್ಹವಲ್ಲದ ತಂಡಗಳನ್ನು ಕೂಡಾ ತಾವು ಹೃದಯ ವಿದ್ರಾವಕವಾದ ವಿದ್ರೋಹಿ ಬಾಣಗಳಿಗೆ ಗುರಿಯನ್ನಾಗಿಸುವುದಿಲ್ಲ. ಬದಲಿಗೆ ರಾಜಮರ್ಯಾದೆ ಅನುಗುಣವಾದ ಪ್ರೀತಿ ಮತ್ತು ಸೌಮ್ಯತೆಯ ಅಪಾರ ಸಾಗರವನ್ನು ಬಡಿದೆಬ್ಬಿಸಿ, ಪ್ರೌಢ ವಿದ್ವಾಂಸನ ಅಮೂಲ್ಯ ಮುತ್ತುಗಳಂತಹ ಉತ್ತಮ ಮನೋಧರ್ಮವನ್ನು ಪ್ರದರ್ಶಿಸುತ್ತೀರಿ.

ನಾಸ್ತಿಕತೆ ಮತ್ತು ನೀಚತನಗಳ ಕಾಡಿನಲ್ಲಿ ಅಲೆಮಾರಿಗಳಾಗಿ ಅಲೆಯುವ ಜನರು ವಿದ್ರೋಹ ಮತ್ತು ಸಂಚಿನ ಕ್ಷೇತ್ರದಲ್ಲಿ 'ಪಥಭ್ರಷ್ಟರಾಗಿದ್ದಲ್ಲಿ ಅವರ ಕೊರಳಿನಲ್ಲಿ ಕೊಲೆಯ ಸಂಚು ಅಂಗಭೇದನದ ಸಲುವಾಗಿ ಕಾಲಿನಲ್ಲಿ ಸರಪಳಿ ಹಾಕಿ ಬಂಧಿಸಲಾಗುವುದು. ಅವರ ಕುಚೇಷ್ಟೆ ಮತ್ತು ವಿದ್ರೋಹದ ನಂತರ ಅವರೆಷ್ಟೇ ಅಂಗಲಾಚಿದರೂ ಮತ್ತು ಲಜ್ಜಿತರಾದರೂ, ಮತ್ತು ಎಷ್ಟೇ ಪರಿತಪಿಸುತ್ತಾ ದಯಾಭಿಕ್ಷೆಯನ್ನು ಬೇಡಿದರೂ, ಸೈನ್ಯವು ಮೈದಾನದಲ್ಲಿಳಿದು ಕುದುರೆಯ ಮೇಲೆ ಸವಾರರಾಗಿ ಅವರ ಮೇಲೆ ಆಕ್ರಮಣವನ್ನು ಮಾಡುವುದು. ಮತ್ತು ತಪ್ತ ಭೂಮಿಗೆ ಆ ಶಿಕ್ಷಾರ್ಹ ಗುಂಪಿನ ಅಶುದ್ಧ ನೆತ್ತರಿನಿಂದ ಅಭಿಷೇಕ ಮಾಡಿ, ಸಂಚಿನ ನಾಮಾವಶೇಷ ಮಾಡುವುದು.'

ಇಡೀ ದೇಶದ ಮಹಾನ್ ಬಾದಶಹನು ಆ ಸಂಚಿನ ಮೂಲೋತ್ಪಾಟನೆ ಮಾಡುವವರೆಗೂ ಆ ಕತ್ತಿಯನ್ನು ಒರೆಯಲ್ಲಿ ಇರಿಸುವುದಿಲ್ಲ ಹಾಗೂ ನಿರಂತರ ವಿಜಯದ ಒಡೆಯನ ಸಂತೋಷಭರಿತ ಜನ್ಮ ವೃತ್ತಾಂತವನ್ನು ನಿಸ್ಸಂಶಯ ದೇವನಾದ ಅಲ್ಲಾಹನ ಪೋಷಕರ ದಿವ್ಯವಾಣಿ ಮತ್ತು ದೇವಚರರ ದಿವ್ಯಪ್ರೇರಣೆ ಮತ್ತು ಅಂತರ್ಜ್ಞಾನದ ಶುಭವಾರ್ತೆಯ ಮೂಲಕ ಯಾರ ಬಿರುದು ಬಾವಲಿಗಳು ಪವಾಡಗಳು ಇರುತ್ತದೆಯೋ ಅವುಗಳ ಪ್ರಸ್ತಾಪದಲ್ಲಿ ಈ ದ್ವಿಪದಿಯನ್ನು ನುಡಿಯಲಾಗಿದೆ.

ಯಾರ ಹಿಂದೆ ಬಾನೆತ್ತರದ ಉನ್ನತ ಜನತೆ ಬಾಗುವರೋ
ಆ ನ್ಯಾಯಸಾಮ್ರಾಟ ಶೆಹನ್‌ಶಾಹ್ ಖುಸ್ರೂ
ನ್ಯಾಯದ ಉದ್ಯಾನವನದದ ನವಸುಮವನ್ನು

ರಾಜರಮನೆಯನ್ನು ನೆಲದ ಒಡೆಯನೂ ಸೃಷ್ಟಿಕರ್ತನೂ ಕರುಣಿಸಿದ.
ಒಂಬತ್ತನೇ ಆಕಾಶದಿಂದ ದೇವಚರನೊಬ್ಬ ಸಂತೋಷದಿಂದ ಧ್ವನಿಸಿದ
ಅದೇನಂದರೆ, ರಾಜಕುಮಾರನ ಉನ್ನತ ಜನ್ಮದ ನಕ್ಷತ್ರ ಬೆಳಗುತಿದೆ.

ಹಜರತ್ ಸ್ವರ್ಗವಾಸಿ ಶಿಷ್ಯ ಮತ್ತು ಪವಿತ್ರ ಪೋಷಕನ್ನು ಧರಿಸಿ ತಲುಪಿಸಲ್ಪಟ್ಟರು ಮತ್ತು ರಾಜನ ಕರುಣೆಯಲ್ಲಿ ಸೇರಿಸಲ್ಪಟ್ಟರು.

■

*

ಅಧ್ಯಾಯ–೪

ಹಜರತ್ ಬಾದಶಹರ ಖತ್ನ ಮಾಡುವ ಬಗ್ಗೆ ಬಡೀ ಸಾಹೇಬಾರ ಸಂಭ್ರಮ ಆಚರಿಸುವುದು

ಶುಭಾಕಾಂಕ್ಷಿಗಳು ಹಾಗೂ ಆಸ್ಥಾನಿಕರು ಮತ್ತು ಲೋಕಜ್ಞಾನವನ್ನು ಹೊಂದಿದ ಮೇಧಾವಿಗಳು ಮತ್ತು ಜ್ಞಾನಚಕ್ಷುಗಳನ್ನು ಹೊಂದಿದ ಮಹನೀಯರಿಂದ ಈ ಮಾತು ಗುಪ್ತವಾಗಿ ಉಳಿಯಲಿಲ್ಲ. ಹಜರತ್ ಬಾದಶಹ ಘಾಜಿಯ ವಯಸ್ಸು ನಾಲ್ಕು ವರ್ಷ ಒಂದು ತಿಂಗಳು ತುಂಬಿತು. ಹಜರತ್‌ರವರು ಸದೃಢರಾಗಿದ್ದು, ಬುದ್ಧಿ ಶಕ್ತಿ, ವಿವೇಚನೆ ಮತ್ತು ಯುಕ್ತಿಯಿಂದ ಪ್ರಕಾಶಮಾನರಾದ ಹಾಗೂ ಶ್ವೇತ ಅಶ್ವದಂತೆ ಸದ್ಗುಣಗಳನ್ನು ಹೊಂದಿದ ಗ್ರಹಿಕೆ ಹಾಗೂ ಧಾರಣಶಕ್ತಿಯಲ್ಲಿ ಸೂಕ್ಷ್ಮ ಒಳನೋಟವನ್ನು ಹೊಂದಿದ್ದು, ಮರುಭೂಮಿಯಲ್ಲಿ ಅಶ್ವಾರೋಹಣ ಮಾಡಿದಂತಹ ಹಜರತ್ ರಿಜ್ವಾನ್ ದಸ್ತಗಾಹ್‌ರವರು ಬಾದಶಹ ಘಾಜಿಯ ತರಬೇತಿ ಮತ್ತು ಪೋಷಣೆಯನ್ನು ಮಾಡಬೇಕೆಂದು ಸ್ವಯಮ್ ತೀರ್ಮಾನವನ್ನು ಕೈಗೊಂಡರು.

ಗೌಹರ್‌ಜಾನ್ ಈ ವಿರಹವನ್ನು ಒಂದು ಕ್ಷಣ ಅಥವಾ ಗಳಿಗೆಯೂ ಸಹಿಸಲು ಇಷ್ಟಪಡಲಿಲ್ಲ. ೫೨೧ನೆಯ ಹಿಜರಿ ಒಂದು ಸಾವಿರದ ಐವತ್ತೆರಡು ಜಮಾದಿವುಲ್‌ಅವ್ವಲ್ ತಿಂಗಳ ಅಂತಿಮ ಬುಧವಾರದಂದು ಕುಟುಂಬದ ಗುಲಾಮರಿಗೆ ಆದೇಶವನ್ನು ನೀಡಲಾಯಿತು. ಅದೇನೆಂದರೆ, ಇನಾಯತ್ ಸಮದಿಯ ಅಪೂರ್ವ ದೈವಪ್ರೇರಿತ ನುಸ್‌ಖಾದ ಕರುಣೆಯ ಉತ್ಕೃಷ್ಟ ಚಿಕಿತ್ಸಾರೂಪದಿಂದ ಹಜರತ್ ಆಲಿ ಜನಾಬ್ ಈ ಸಂಬಂಧದಲ್ಲಿ ಮಾಹಿತಿ ಮತ್ತು ತಿಳುವಳಿಕೆಯನ್ನು ಪಡೆದು, ಬಾದಶಾಹಿ ಭವ್ಯತೆಯ ಉದಯಿಸುತ್ತಿರುವ ಸೂರ್ಯನ ತೇಜಸ್ಸನ್ನು ಹೊಂದಿರುವ ರಾಜಕುಮಾರನನ್ನು ಕರೆತಂದು ವೈಭವ, ಪಾಂಡಿತ್ಯ ಮತ್ತು ಅದೃಷ್ಟದ ಬೆಳಗುವ

ನಕ್ಷತ್ರವನ್ನಾಗಿ ಮಾಡತಕ್ಕದ್ದು. ಆಗ ಸ್ವಭಾವತಃ ಸ್ನೇಹಿ ಕುಟುಂಬದ ಗುಲಾಮರು ವಿಧೇಯತೆಯ ರುಮಾಲನ್ನು ತಲೆಗೆ ಕಟ್ಟಿಕೊಂಡು ವಿಶ್ವಾಸಪೂರ್ವಕ ನಡವಳಿಕೆಯ ವೇಷಭೂಷಣದಿಂದ ಆಜ್ಞಾಪರಿಪಾಲನೆಯನ್ನು ಮಾಡುತ್ತಾ ಭವ್ಯ ಆಕೃತಿಯ ಪರಿಸರ ಸ್ನೇಹಿ, ವಿದ್ಯಾಪಾರಂಗತ ಫಲ ಹಾಗೂ ವೃಕ್ಷವನ್ನು ಕರೆ ತಂದಾಗ ಅವರ ಶುಭ ಆಗಮನದಿಂದ ಆಡಳಿತದ ಸಕಲ ರಂಗಗಳು ಸ್ವರ್ಗಕ್ಕೆ ಕಿಚ್ಚನ್ನು ಹಚ್ಚುವಂತೆ ಮತ್ತು ಆಕಾಶಕಾಯಗಳ ಅದ್ವಿತೀಯ ಶೋಭೆ ಎನಿಸತೊಡಗಿದವು. ಹಜರತ್ ಘುಫ್ರಾನ್‌ಪನಾಹ್‌ನ ಹೃದಯವು ಶೋಭಾಯಮಾನವಾಗಿ ಮೆರೆಯುತ್ತಿದ್ದು, ಕಂಗಳಿಗೆ ತಂಪನ್ನು ಕರುಣಿಸುತ್ತಿರುವ ತನ್ನ ಬಯಕೆಯ ಕುಡಿಯನ್ನು ಕಂಡು ಅತೀವ ಆನಂದಪಟ್ಟರು. ಆ ಅಧಿಕಾರದ ಕೇಂದ್ರ ಸ್ಥಾನವನ್ನು ಆಸ್ವಾದಿಸುತ್ತಿದ್ದು ಒಳಿತು ಮತ್ತು ಮೇಲ್ಮೆಯ ಹರಿಕಾರ ಮತ್ತು ನ್ಯಾಯ ಪರತೆಯಿಂದ ಕೂಡಿ ಉತ್ತಮ ನಡವಳಿಕೆಯಿಂದ ಕೂಡಿದ್ದ ಒಡೆಯರಾಗಿದ್ದರು.

ಸ್ವರ್ಗವಾಸಿ ಶ್ರೀಮಂತ ಒಡೆಯರ ಬಯಕೆ ಏನಾಗಿತ್ತೆಂದರೆ ಹೃದಯದ ಕೇಂದ್ರಬಿಂದು ಮತ್ತು ನೆಮ್ಮದಿಯ ಎತ್ತರಕೆತ್ತರಕೆ ಏರುವ ಶೆಹಬಾಜ್ ಗರುಡನಂತೆ ಇರುವ ತಮ್ಮ ಸುಪುತ್ರನಿಗೆ ಕರುಣೆ ಮತ್ತು ಪ್ರೀತಿಯಿಂದ ದೊರಕಿರುವ ಆಹಾರವು ಪ್ರೀತಿಯನ್ನು ಉಂಟು ಮಾಡಲಿ ಇನಾಮು ಮತ್ತು ಕೊಡುಗೆಗಳ ಹಸಿವು ಇರುವ ಹಸಿದಿರುವ ಪಕ್ಷಿಗಳ ತಲೆಯ ಮೇಲೆ ಹಾರಾಟ ಮಾಡುವ ಸಹೋದರತ್ವ ಮತ್ತು ಪ್ರೇಮಭಾವದ ಹಸ್ತದ ಸ್ನೇಹವುಂಟಾಗಲಿ. ಒಟ್ಟಾರೆ ಆ ಜಾಗೃತ ಆತ್ಮದ ಯೋಗ್ಯರನ್ನು ಗುರುತಿಸುವ ಚಾಣಾಕ್ಷ ಬುದ್ಧಿಯ ದೂರದೃಷ್ಟಿಯುಳ್ಳ ಬಾದಶಹನು ಈ ಎಲ್ಲಾ ವಿಷಯ ವಸ್ತುಗಳಲ್ಲಿ ತನ್ನ ವೇಳೆಯನ್ನು ವ್ಯಯ ಮಾಡಲಿಲ್ಲ.

ಆ ಜನಪ್ರಿಯತೆಯಿಂದ ಮತ್ತು ಅಪಾರ ಕೊಡುಗೆಗಳ ಮೂಲಕ ಶ್ರೀಮಂತಿಕೆ ಹಾಗೂ ಲೋಲುಪತೆಯಲ್ಲಿ ಮಗ್ನನಾಗುವಂತೆ ಮಾಡಲಿಲ್ಲ. ಅನಾಸಕ್ತಿಯ ವಿನಃ ಇನ್ನೇನೂ ಮಾಡಲಿಲ್ಲ ಮತ್ತು ಹಜರತ್ ಆಲಿ ಜನಾಬ್‌ರವರ ಅಗಲಿಕೆಯ ಹಂಬಲ ಮತ್ತು ಬಯಕೆಯ ಹೊರತು ಅವರ ಬದುಕಿನಲ್ಲಿ ಇನ್ನು ಯಾವ ಬೀಜವನ್ನು ಕೂಡ ನೆಡಲಿಲ್ಲ. ಬಿಲ್‌ಖೀಸ್ ಮಹಾರಾಣಿಯಂತಹ ಸ್ಥಾನಮಾನವನ್ನು ಹೊಂದಿದ್ದ ಚಕ್ರವರ್ತಿಗೆ ಈ ಅನಿಷ್ಟ ಹಾಗೂ ದರಿದ್ರ ವಿಷಯವು ತಿಳಿದು ಬಂದಾಗ, ಈ ವಿಷಯವು ಸಿಂಹದಂತಹ ಹೃದಯವನ್ನು ಚೂರುಮಾಡುವಂತಹ ಹೃದಯದ ನೆಮ್ಮದಿಯನ್ನು ಕಸಿಯುವಂತಹದಾಗಿತ್ತು. ಹೃದಯವು ಸಂತಸದ ಮೂಲೆಯಲ್ಲಿ ತಾವನ್ನು ಹುಡುಕಿಕೊಳ್ಳುವಂತಹದಾಗಿತ್ತು. ಅವರು ಅಮೃತದಂತೆ ತಮ್ಮನ್ನು ಮೂಲೆಗುಂಪು ಮಾಡಿಕೊಂಡರು ಹಾಗೂ ಏಕಾಂತದಲ್ಲಿ ಬದುಕುವುದನ್ನು ತಮ್ಮ ಪ್ರವೃತ್ತಿಯನ್ನಾಗಿಸಿಕೊಂಡರು. ಅಷ್ಟೇ ಅಲ್ಲದೆ ತಮ್ಮನ್ನು ತಾವು ಸ್ವಯಂನಾಶಕ್ಕೆ

ಗುರಿಪಡಿಸುವುದು ತಮ್ಮ ಮೂಲಗುರಿಯೆಂದು ಪರಿಭಾವಿಸಿದರು. ಅವರು ಅನ್ನಪಾನಾದಿಗಳನ್ನು ಸೇವಿಸುವುದು ಶರಾಬಿನಂತೆ ನಿಷಿದ್ಧ ಎಂದು ಪರಿಗಣಿಸಿದರು. ಹೀಗೆಂದು ಯಾರಾದರೂ ತೀರ್ಮಾನ ಕೈಗೊಂಡಲ್ಲಿ ಸ್ವತಃ ಸಾವಿನಾಗಮನವನ್ನು ಎದುರು ನೋಡುವವರಾಗಿರುತ್ತಾರೆ. ನವಾಬ್ ಮುಸ್ತತಾಬ್ ಮೊಹಮ್ಮದ್ ಅಮೀನ್ ಮುಸ್ತಫಾ ಖಾನ್ ಆಡಳಿತಾತ್ಮಕ ವಿಷಯಗಳಲ್ಲಿ ವಿಶೇಷ ಸ್ಥಾನಮಾನ ಹೊಂದಿದವರಾಗಿದ್ದು, ದೀನ ದಲಿತರ ಎಲ್ಲಾ ವಿಧದ ಅವಶ್ಯಕತೆಗಳನ್ನು ತಮ್ಮ ಆದ್ಯ ಕರ್ತವ್ಯವೆಂದು ಪರಿಗಣಿಸಿ ಪೂರೈಸುತ್ತಿದ್ದರು.

ಮೂರನೆಯ ದಿನದಂದು ಒಂದು ಉನ್ನತ ಧ್ಯೇಯದ ಇರಾದೆಯನ್ನು ಮಾಡಿ ಜನಾಬ್ ಬಾದಶಹರವರ ಸನ್ನಿಧಿಯಲ್ಲಿ ಒಂದು ಕೋರಿಕೆಯನ್ನು ಸಲ್ಲಿಸಿದರು, 'ಓ ಪ್ರಪಂಚದ ಆಫಾಖ್‌ನ ಸರದಾರರೇ ಜಾಗೃತ ಆತ್ಮದ ಬಾದಶಹರವರೇ ಅತ್ಯಂತ ಉತ್ತಮ ಜ್ಯೋತಿಷ್ಯಶಾಸ್ತ್ರದ ಜ್ಞಾನಿಗಳಾಗಿದ್ದೀರಿ. ಈ ನಿಕೃಷ್ಟನು ಮಹಾರಾಜರ ಪಾನಗೃಹದ ಸೇವಕ ಮತ್ತು ರಾಜಸ್ಥಾನದಲ್ಲಿ ತಮ್ಮ ಇನಾಮಿನ ಪಾನಗೃಹದ ಉಪಕೃತನಾಗಿದ್ದಾನೆ. ರಾಜಕುಮಾರನು ರಾಜ ಸಿಂಹಾಸನದ ಮರ್ಯಾದೆಯನ್ನು ಅರಿತವನಾಗಿದ್ದು ಅದರ ಉನ್ನತ ಸ್ಥಾನಮಾನಕ್ಕೆ ಶೋಭೆಯನ್ನು ತರುವವನಾಗಿದ್ದಾನೆ. ಆತನ ಆಯಸ್ಸು ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿದೆ.

ಧರ್ಮದ ಶತ್ರುಗಳ ಆಯಸ್ಸನ್ನು ಮತ್ತುಭೂಖಂಡದ ಮೇಲೆ ವಿದ್ರೋಹವನ್ನು ಎಸಗುವವರ ಮೇಲೆ ಸಜೆಹಾಗೂ ಕಾಠಿಣ್ಯವನ್ನು ಬಿಗಿ ಮಾಡಬೇಕು. ಆ ಮೂಲಕ ಬೈಗು ಬೆಳಗು ದಿನ ಮತ್ತು ರಾತ್ರಿ ಸ್ವತಃ ಏರು ಅದೃಷ್ಟವಂತ ಹಾಗೂ ಶ್ರೇಯೋಭಿವೃದ್ಧಿಯ ಮೆಟ್ಟಿಲುಗಳನ್ನೇರುವವರು ಮತ್ತು ಬಲಿಷ್ಠ ಬಲಾಢ್ಯತೆ ಹಾಗೂ ವೈಭವೋಪೇತ ಮೆಟ್ಟಿಲುಗಳ ಮೇಲೆ ತಲೆ ಎತ್ತಿ ನಡೆಯುವವರಾಗುತ್ತಾರೆ. ಸಂಚುಕೋರ ಮತ್ತು ಗರ್ವ ಹಾಗೂ ಅಹಂಬಾವದಿಂದ ಕೂಡಿದ ಕುತ್ಸಿತ ದ್ರೋಹಿಗಳನ್ನು ಅಧಃಪತನದತ್ತ ಮತ್ತು ಕೀಳರಿಮೆಯ ಕೂಪದಲ್ಲಿ ನಿರ್ದಯವಾಗಿ ನೂಕಲಿ'

ಯಾರ ಕಾಲಾವಧಿಯಲ್ಲಿ ಸಾಹಿತಿಗಳು ಮತ್ತು ಪಂಡಿತರಿಗೆ ಪುರಸ್ಕಾರ ದೊರಕುವುದೋ, ವಿದ್ಯೆ ಹಾಗೂ ಕೌಶಲ್ಯಕ್ಕೆ ಮನ್ನಣೆ ದೊರಕುವುದೋ ಬುದ್ಧಿಮತ್ತೆ, ವೈಚಾರಿಕತೆಯ ಪ್ರಜ್ಞೆ ತೀಕ್ಷ್ಣವಾಗಿದ್ದು ಪ್ರಚಲಿತವಾಗಿದೆಯೋ ಅಲ್ಲಿ ಯಾವನೇ ವ್ಯಕ್ತಿಗೆ ನಷ್ಟ ಹಾಗೂ ಪಾಪಪೂರಿತ ರಾತ್ರಿಯ ನೋಟ ಕನಸಿನಲ್ಲಿಯೂ ಕಾಣ ಸಿಗದು. ಯಾರ ಕಾಲದಲ್ಲಿ ದೀನದಲಿತರ ನೋವಿಗೆ ಮಿಡಿಯುವ ಹಾಗೂ ದಾನ ಧರ್ಮಗಳ ಕಥನವು ಇಡೀ ಭೂಖಂಡದ ಉದ್ದಗಲಕ್ಕೂ ವ್ಯಾಪಿಸುವುದೋ, ಯಾವನೇ ಜೀವಂತ ವ್ಯಕ್ತಿಯ ಕಲ್ಪನೆಯಲ್ಲಿಯೂ ಕೂಡ ಬಡತನ ಮತ್ತು ಯಾಚನೆಯ ಹೆಸರು ಕೂಡ ಉಳಿಯುವುದಿಲ್ಲ. ಈ ಏಳು ಭೂಖಂಡಗಳ ಅಧಿಕಾರವನ್ನು ಹೊಂದಿರುವ

ಬಾದಶಹ ಖುಸ್ರು ಬಾದಶಹನಂತಹ ರಾಜ್ಯ ಮತ್ತು ಸಿಂಹಾಸನದ ಒಡೆಯ ಖುದ್ದು ಕಣ್ಣಲ್ಲಿ ಕಣ್ಣಿಟ್ಟು ರಾಜ್ಯಭಾರವನ್ನು ನಡೆಸಿದಲ್ಲಿ ಮತ್ತು ತನ್ನ ರಾಜ್ಯಾಡಳಿತದ ಎಲ್ಲೆಗಳ ಉದ್ದಕ್ಕೂ ಹರಡಿರುವ ಭೂ ಖಂಡದ ಜೊತೆಯಲ್ಲಿ ಅಕಾಶದ ಉದ್ದಗಲಕ್ಕೂ ಪರಾಕ್ರಮದ ಹೊಳೆಯುವ ನಕ್ಷತ್ರದೋಪಾದಿಯಲ್ಲಿ ವಿನಯಶೀಲತೆಯಲ್ಲಿ ಉನ್ನತ ಚಂದ್ರಮನ ತರಬೇತಿಯಲ್ಲಿ ತೊಡಗಿಸಿಕೊಂಡಲ್ಲಿ ಬೆಳಕೋ ಬೆಳಕು ಪ್ರತಿಫಲನವಾಗುತ್ತದೆ ಹಾಗೂ ಸಂಭ್ರಮಕೊಂದು ಸಂಭ್ರಮದ ಗರಿಯಾಗುತ್ತದೆ. ಇಲ್ಲವಾದಲ್ಲಿ ಅದೊಂದು ಬೃಹತ್ತಾದ ಕೆಲಸವಾಗಿದೆ ಮತ್ತು ಎಲ್ಲಾ ಗಣ್ಯ ಹಾಗೂ ಸಾಮಾನ್ಯ ಜನರ ಅಪೇಕ್ಷೆ ಏನೆಂದರೆ ಆತ ಇಡೀ ಲೋಕದ ಪ್ರೀತಿಪಾತ್ರ ಚಂದ್ರನೋಪಾದಿಯಲ್ಲಿ ಬೆಳಗುತ್ತಿದ್ದಾನೆ. ಆತನ ತರಬೇತಿಯಲ್ಲಿ ನಿರತವಾಗಿರುವಾತನು ಆಲಿ ಜನಾಬ್ ಆಲಿ ಬಖ್ತ್‌ನ ವಿನಃ ಬೇರೆ ಯಾರೂ ಕೂಡ ಯೋಗ್ಯತೆಯನ್ನು ಹೊಂದಿರುವುದಿಲ್ಲ.

ಮೇಲ್ಕಂಡ ಎಲ್ಲಾ ಮಾತುಗಳನ್ನು ಸ್ವಾರ್ಥ ಮತ್ತು ಕೆಡುಕಿನಿಂದ ಮುಕ್ತವಾದ ಒಳಿತಿನಿಂದ ಕೂಡಿದ ಸದುದ್ದೇಶಪೂರಿತವಾದುದೆಂದು ಪರಿಗಣಿಸಿದ ಹಜರತ್ ಘುಫ್ರಾನ್ ಪನಾಹ್ ಬಾದಶಹ ಆ ನ್ಯಾಯಪರ ದೃಷ್ಟಿಯ ಉಕ್ತಿಗಳನ್ನು ನಿಜದ ಹಾಳೆಯ ಮೇಲೆ ಅಮೂಲ್ಯ ಕಲಾಕೃತಿಯೇನೋ ಎಂಬಂತೆ ತಮ್ಮ ಮನಃಪಟಲದ ಮೇಲೆ ಕೆತ್ತನೆ ಮಾಡಿದರು.

ಜಾಗೃತಾವಸ್ಥ ಕಣ್ಣಿನ ತಂಪು ಮತ್ತು ರಾಜ ಸಿಂಹಾಸನದ ವಾರೀಸುದಾರ ಮತ್ತು ಹಕ್ಕುದಾರನನ್ನು ಶಾಹ್ ಕೇವ್‌ಮರಸ್‌ನ ವೈಭವ ಮತ್ತು ಶಾಹ್ ಜಮ್‌ಶೀದ್‌ನ ಕೀರ್ತಿಯಿಂದ ಅಲಂಕರಿಸಿ, ಹಜರತ್ ಅಲಿಯವರ ಶ್ರೀಮಂತ ಮನೆಯ ಹೊಸ್ತಿಲಿನವರೆಗೆ ತಲುಪಿಸುವಂತೆ ಪ್ರತಿಷ್ಠಿತ ಬಿರುದಾಂಕಿತ ನವಾಬ್ ಸಾಹೆಬರಿಗೆ ಆಜ್ಞೆಯನ್ನು ಮಾಡಿದರು. ಸದರಿ ಕರ್ತವ್ಯ ನಿರ್ವಹಣೆಯು ಈ ಸದವಕಾಶವು ಪ್ರಾಪ್ತಿಯಾಗಿರುವುದು ತನ್ನ ಸೌಭಾಗ್ಯವಾಗಿದೆ ಹಾಗೂ ತನ್ನ ಗೌರವ ಮತ್ತು ಸ್ಥಾನ ಮಾನವು ಇದರಿಂದ ಹೆಚ್ಚುವುದು ಎಂಬುದನ್ನು ಅರಿತು ಈ ಗುರುತರ ಜವಾಬುದಾರಿಯನ್ನು ತನ್ನ ಹೆಗಲಿಗೇರಿಸಿಕೊಂಡು ಕಾರ್ಯೋನ್ಮುಖರಾದರು. ಗೌರವಪೂರ್ಣ ಸಿಂಹಾಸನದ ಉತ್ತರಾಧಿಕಾರಿ, ಸುಂದರ ಕಾಯದ ಉತ್ತಮ ಅಶ್ವಾರೋಹಿಯಾದ ಯುವರಾಜನನ್ನು ವಿಸ್ತಾರವಾದ ಬಾನಂಗಳದಲಿ ಆಕಾಶದ ಆಲಿಂಗನದ ಮುಕುಟವನ್ನಾಗಿ ಮತ್ತು ಆಕಾಶದ ಪ್ರಕಾಶಮಾನ ಸೂರ್ಯನನ್ನಾಗಿ ರಾಜನೀತಿಯಲ್ಲಿ ಲೋಕಮಾನ್ಯ ಚಂದ್ರನ ಗೆಳೆಯನಾದ ದಿಗಂತವನ್ನಾಗಿ ಹಜರತ್ ಬಿಲಕೀಸ್ ಜಮಾನಿಯ ಮನೆಯಂಗಳವನ್ನು ಶುಕ್ರವಾರದ ದಿನಾಂಕ ಜಮಾದಿಯುಸ್ಸಾನಿ ಮಾಹೆಯ ಅಪೂರ್ವ ಸೂರ್ಯೋದಯದ ಹೊತ್ತನ್ನು ಬೆಳಕಿನ ದೀವಟಿಗೆಯಂತೆ ಅಲಂಕರಿಸಿದ. ಹಜರತ್ ಬಿಲ್‌ಕೀಸ್ ಜಮಾನಿ ಹಜರತ್ ಅಲಿಯಾರವರು ಆ

ಮನಸೂರೆಗೊಳ್ಳುವ ಘಟನೆಯನ್ನು ತಮ್ಮ ಬದುಕಿನ ಉಳಿದ ಆಯುಷ್ಯದ ಸಲುವಾಗಿ ನೆಮ್ಮದಿಯ ಸಂಕೇತ ಹಾಗೂ ಸೌಭಾಗ್ಯದ ಕ್ಷಣ ನೆಮ್ಮದಿಯ ಅನಂತತೆಗಾಗಿ ಹೂಡಿದ ಅಮೂಲ್ಯ ಬಂಡವಾಳ ಆನಂದದ ನಿರಂತರತೆಗೆ ಸದವಕಾಶ ಎಂಬುದನ್ನು ತಿಳಿದುಕೊಂಡರು. ಗೌರವಾನ್ವಿತ ಅಂತಃಪುರ ಹಾಗೂ ಆನಂದ ಮೆಹಲಿನ ನಡುವೆ ಸೇರಿದ್ದಂತಹ ಜನತೆಯು ಆ ಗುಲಿಸ್ತಾನದಂತಹ ಮತ್ತು ಉದಯಿಸುತ್ತಿರುವ ಸೂರ್ಯನಂತಹ ಮೋರೆಯನ್ನು ನೋಡಿ ಹೃದಯ ತುಂಬಿ ಬುಲ್ಬುಲ್ ಹಕ್ಕಿಯಂತೆ ಈ ಕಾವ್ಯವನ್ನು ಹಾಡತೊಡಗಿದರು.

ಏನು ಹೇಳಲಿ ವಿರಹದ ವಿಯೋಗವ
ನನ್ನ ಮೇಲೆ ಜರುಗಿದ ಕಥನವ
ಹೇಗೆ ಹೇಳಲಿ ನೀನು ಕಣ್ಮರೆಯಾದ
ನೋವು ಹೇಗೆ ಕೊರೆಯುತಿದೆ ಎಂದು
ನಿನ್ನ ಪ್ರತೀಕ್ಷೆ ಮತ್ತು ಬಯಕೆಯಲಿ
ದಿನವೊಂದು ವರುಷದಂತೆ
ನಿನ್ನ ನಿರೀಕ್ಷೆಯಲಿ ದಿನವೊಂದು
ನೂರು ವರ್ಷದಂತೆ

ಈ ಕವಿತೆಯನ್ನು ಆಲಾಪಿಸತೊಡಗಿದರು. ಮೇಧಾವಿ ನವಾಬನನ್ನು ರೋಗ ಪತ್ತೆ ಹಚ್ಚು ಅನುಭವಿ ಹಕೀಮನಿಗೂ ಗುಣಪಡಿಸುವ ಧನ್ವಂತರಿ ಎಂದು ಪರಿಗಣಿಸಿ ಅಮೂಲ್ಯ ಕೊಡುಗೆಗಳನ್ನು ಇನಾಮುಗಳನ್ನು ಮುತ್ತು ರತ್ನಗಳಿಂದ ಕುಸುರಿ ಕೆಲಸ ಮಾಡಿದ ಉತ್ತಮ ಪೋಷಾಕುಗಳನ್ನು ದಯಪಾಲಿಸಿ ಬೀಳ್ಕೊಡಲಾಯಿತು. ಹಜರತ್ ಘುಫ್ರಾನ್ ಪನಾಹ್ ಬಾದಶಹರವರು ಬೆಳಗಿನ ಎಳೆ ಪ್ರಕಾಶದಂತೆ ಮತ್ತು ಖುರ್ಷಿದ್ ಬಾದಶಹನ ಸೂರ್ಯನ ಉದಯದಿಂದ ಹಗಲು ಇರುಳು ನ್ಯಾಯಕ್ಕೆ ಅತೀವ ಪ್ರಾಮುಖ್ಯತೆಯನ್ನು ನೀಡುತ್ತಿದ್ದು ತಮ್ಮ ಎಲ್ಲಾ ಕೆಲಸ ಕಾರ್ಯಗಳಲ್ಲಿ ಹಜರತ್ ರಸೂಲೆ ಪಾಕ್ ಸಲ್ಲಲ್ಲಾಹು ವ ಸಲ್ಲಮ್‌ರವರ ಅಜ್ಞಾ ಪರಿಲಾಲನೆ ಮತ್ತು ವಿಧೇಯ ಅನುಸರಣೆಯನ್ನು ಮಾಡುತ್ತಿದ್ದರು.

ಬಾದಶಹ ಘಾಜಿಯ ವಯೋಮಾನವು ೪ ವರ್ಷ ೪ತಿಂಗಳು ೪ ದಿನಕ್ಕೆ ತಲುಪಿದಾಗ ಹಜರತ್ ಮಘ್ಫಿರತ್‌ಪನಾಹ್ ರಿಜ್ವಾನ್ ದಸ್ತಗಾಹ್‌ರವರು ದಿನಾಂಕ ೨೦ನೇ ಶಾಬಾನ್ ಹಿಜರಿ ಶಕೆಯ ೧೦೫೪ರ ಶುಕ್ರವಾರದಂದು ಆ ಅಮೂಲ್ಯ ಮೇಧಾವಿ ಕಂಗಳಿಗೆ ಬೆಳಕನ್ನು ನೀಡುವಾತನನ್ನು ಸೂರಃ ಹಾಗೂ ಆಯಾತ್‌ಗಳ(ಶ್ಲೋಕಗಳ) ಸತ್ಯ ನಿಷ್ಠೆಯನ್ನು ಬೋಧಿಸುವ ದೇವರ ಕೃಪಾಶೀರ್ವಾದದ ಮದ್ರಸಕ್ಕೆ ಸೇರಿಸಲಾಯಿತು. ಯಾವನಾದರೂ ಜನ್ಮತಃ ಮೂಕನಾದವನು ಕೂಡಾ ಅಕಸ್ಮಿಕವಾಗಿ

ಆ ಗುರುಕುಲದಲ್ಲಿ ಕ್ಷಣಕಾಲ ಕಳೆದರೂ ಆ ದೇವಚರರ ಆವಾಸಸ್ಥಾನದಲ್ಲಿ ಮತ್ತು ದಾನದ ಫಲಪ್ರಾಪ್ತಿಯ ನಿರಂತರ ಚಿಲುಮೆಯ ಕೇಂದ್ರ ಸ್ಥಾನವಾಗಿರುವಲ್ಲಿ ಆತನು ಮೃದು ಭಾಷೆ ಮತ್ತು ಸಹಸ್ರಾರು ಪದಗಳ ಸಮುದ್ರವಾಗಿ ಪರಿವರ್ತನೆ ಹೊಂದುತ್ತಾನೆ. ಮೇಧಾವಿ ಪಾಂಡಿತ್ಯಪೂರ್ಣ ಆಡಳಿತಗಾರರು ಮತ್ತು ಚಿಂತಕರಂತೆ ಸ್ಮರಣ ಶಕ್ತಿ ಮತ್ತು ವಿದ್ಯೆಯ ಭಂಡಾರವನ್ನು ಪ್ರಾಪ್ತಿ ಹೊಂದುತ್ತಾನೆ.

ಆಕಸ್ಮಿಕವಾಗಿ ಬುದ್ಧಿಗೇಡಿ ಮತ್ತು ಅವಿವೇಕಿ ಮತಿಹೀನನ ಬಾಯಲ್ಲಿ ಅವನ ನಾಮಸ್ಮರಣೆ ಉಂಟಾದಲ್ಲಿ, ಅದು ಸಂಕಷ್ಟಗಳ ಬೀಗಗಳ ಕೀಲಿಕೈಯಾಗುತ್ತದೆ. ಆತನು ನಿರ್ಯೋಜನೆಯಿಂದ ಅನಾಯಾಸವಾಗಿ ಪ್ಲೆಟೊ ಮತ್ತು ಅರಿಸ್ಟಾಟಲ್‌ನಂತೆ ಗ್ರೀಕರ ಯುಕ್ತಿಯ ನೂರಾರು ವಿದ್ಯೆ ಹಾಗೂ ಚಿಂತನೆಗಳನ್ನು ಸುಲಭೋಕ್ತಿಯಿಂದ ತೆರೆದಿಡುತ್ತಾನೆ ಹಾಗೂ ಗುರಿ ಮತ್ತು ಅಪೇಕ್ಷೆಯ ತೋಟವನ್ನು ಸಿಂಗರಿಸುತ್ತಾರೆ. ಈ ಲೋಕದಲ್ಲಿ ದುರ್ಬಲವಾದ ವಿಷಪೂರಿತ ಆಲೋಚನೆಗಳನ್ನು ವೈಭವೀಕರಿಸುವ ಲೋಭಿಯ ಬಿರು ಬೀಸು ಬಿರುಗಾಳಿಯನ್ನು ತಮ್ಮದಾಗಿಸಿಕೊಂಡು ಲಾಭಬಡುಕ ಧನದಾಹಿಗಳು ಖಜಾನೆಗಳನ್ನು ಕ್ರೌರ್ಯ ಮತ್ತು ಹಿಂಸೆಯಿಂದ ಲೂಟಿ ಹೊಡೆಯುವ ಜನರಿಂದ ಚಳಿಗಾಲದ ಎಲೆಯುದುರುವ ಕಾಲದಂತೆ ಕಳೆಗುಂದಿದ್ದರು. ಕರುಣೆ ಹಾಗೂ ದಯೆಯ ಸಿಂಚನವು ಸದ್ಗುಣಗಳ ಬೆಳಗಿನ ತಂಗಾಳಿಯು ಅವರನ್ನು ಹಸಿರಿನ ಸಿರಿಯ ತಾಜಾ ಲವಲವಿಕೆಯನ್ನು ನೀಡಿತ್ತು. ಎಲ್ಲ ಹಿರಿಯರು ಮತ್ತು ಕಿರಿಯರ ನಾಲಿಗೆಯ ಮೇಲೆ ಸದಾಕಾಲದ ವಸಂತದ ಪುಷ್ಪಗಳು ಎಂಬ ಘೋಷಣೆ ನಲಿಯುತ್ತಿತ್ತು.

■

*

ಅಧ್ಯಾಯ-೫

ಅಲಿ ಆದಿಲಶಹನ ಬುದ್ದಿಮತ್ತೆ

ಎಲ್ಲಾ ಪ್ರಶಂಸೆ ಮತ್ತು ಕೃಪೆಯು ಅಲ್ಲಾಹನದಾಗಿದೆ. ಏಕೆಂದರೆ ಅಲ್ಲಾಹನು ಸ್ವಭಾವಸಿದ್ಧ ಉತ್ಕೃಷ್ಟ ತೋಟದ ಆಹ್ಲಾದವನ್ನು ಮತ್ತು ನೇರ ಸನ್ಮಾರ್ಗದ ಹೊದೋಟದ ತಾಜಾ ಮತ್ತು ಎತ್ತರದ ವೃಕ್ಷವನ್ನು ಅಲ್ಪ ಅವಧಿಯಲ್ಲಿಯೇ ಕಲೆಗಳು ಪಾರಸಿ ಬಾಷೆ, ಸಂಗೀತ, ಸಂಸ್ಕೃತ ಮತ್ತು ಇನ್ನಿತರೆ ವಿದ್ಯೆಗಳಲ್ಲಿ ಪಾರಂಗತನನ್ನಾಗಿಸಿದ. ದೈವಪ್ರೇರಣೆಯ ಧ್ಯಾನ ಮತ್ತು ಕ್ಲಿಷ್ಟ ಸನ್ನಿವೇಶಗಳ ಪರಿಹಾರವು ಅಧಿಕಾರಾರೂಢ ವ್ಯಕ್ತಿಗಳು, ಚಿಂತಕರು, ಸುಪ್ರಸಿದ್ಧ ವಿದ್ವಾಂಸರ ವಿವೇಕದ ಲಾಠಿಯಿಂದ ಪರಿಪೂರ್ಣವಾಗಿದೆ.

ಈ ಕಾಲದ ಶತಮಾನದದಲ್ಲಿ ಅಸ್ತಿತ್ವದಲ್ಲಿರುವ ಪ್ರಸಿದ್ಧ ಹಾಗೂ ಅರಿವಿಗೆ ಬಾರದ ಗೌಪ್ಯ ವಿಷಯಗಳ ಮೇಲಿನಿಂದ ಪರದೆಯನ್ನು ಸರಿಸಲು ಆ ಜನರು ಕಠಿಣ ಮತ್ತು ಪೇಚಿನಿಂದ ಕೂಡಿದ ಪ್ರಯತ್ನವನ್ನು ಮಾಡಲಿಲ್ಲ. ಆದರೆ ಖುದಾಯೆ ತಾಲಾ (ದೇವರು) ನ ವತಿಯಿಂದ ಕರುಣಿಸಲ್ಪಟ್ಟ ಅಗಣಿತ ನೆರವು ಹಾಗೂ ಕೊಡುಗೆಯ ದೆಸೆಯಿಂದ ಅನುಯಾಯಿಗಳು ಮಾರ್ಗದರ್ಶನ ಮತ್ತು ಬೆಂಬಲವನ್ನು ಪಡೆದರು. ಅವರು ತಮ್ಮ ಶಕ್ತಿ ಮತ್ತು ಯುಕ್ತಿಯಿಂದ ಅರ್ಥವಿವರಣೆಯ ಪ್ರಪಂಚದ ಪ್ರಭುಗಳಾಗಿ ಮೂಡಿದ್ದಾರೆ. ಆ ಕಾಲದ ರಹಸ್ಯಗಳ ಪರಿಚಯದಲ್ಲಿ ದೈನಂದಿನ ದುಡಿಮೆಯಲ್ಲಿ ಹಾಗೂ ಸಾಹಿತ್ಯದ ಶಿಷ್ಯತ್ವದ ಲಾಭಗಳನ್ನು ಪಡೆಯಲು ಮತ್ತು ಚಿಂತನೆಯ ಫಲವನ್ನು ಪಡೆಯಲು ಹೆಮ್ಮೆಯಿಂದ ಕೂಡಿದ ಸಾಧನೆಗಿಂತ ಉತ್ತಮ ಇನ್ನು ಯಾವ ವಸ್ತುವೂ ಕೂಡ ದೊರಕುವುದಿಲ್ಲ. ಹಜರತ್ ಬಾದಶಹ ಘಾಜಿಯ ವಯೋಮಾನ ೭ನೇ ವರ್ಷಕ್ಕೆ ತಲುಪಿದಾಗ, ಶ್ರೀಮತಿ ಹಜರತ್ ಅಲಿಯಾರವರು

ಸ್ವರ್ಗವಾಸಿ ಹಜರತ್ ಬಾದಶಹರವರ ಸಹಮತದೊಂದಿಗೆ ಈ ಲೋಕ ಮತ್ತು ಪರಲೋಕದ ಅಭ್ಯುದಯದ ದೃಷ್ಟಿಯಿಂದ ಭಾಗ್ಯಶಾಲಿ ರಾಜಕುಮಾರನ ಖತ್ನದ ಔತಣಕೂಟ ಹಾಗೂ ಇನಾಮು ಮತ್ತು ಕೊಡುಗೆಗಳು ಮೊದಲಾದವುಗಳ ವೆಚ್ಚದ ಜವಾಬುದಾರಿಯನ್ನು ಹೆಗಲಿಗೇರಿಸುತ್ತ ಹುಜೂರ್ ಬಾದಶಹರವರ ಸನ್ನಿಧಿಯಲ್ಲಿ ಸಂದೇಶವನ್ನು ಕಳಿಸಿದರು. ದೇಶದ ಸಂಗತಿಯಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸುವವರು ಹಾಗೂ ರಾಜ್ಯಾದ್ಯಂತ ಕಾರ್ಯ ನಿರ್ವಹಣೆ ಮಾಡುವವರಿಗೆ ಆದೇಶ ನೀಡಿ ಶುಭ ದಿನ ಮತ್ತು ಗಳಿಗೆಯನ್ನು ನಿಗದಿಪಡಿಸಿದರು. ಸಮಾರಂಭದ ಮೇಜವಾನಿಯ ಆರಂಭವನ್ನು ಮಾಡತಕ್ಕದ್ದು. ಮೇಲ್ಕಂಡ ಸಂದರ್ಭವು ಎಲ್ಲಾ ಮೇಲ್ವರ್ಗ ಹಾಗೂ ಕೆಳವರ್ಗದವರ ಸಂತೋಷ ಮತ್ತು ಸಂಭ್ರಮಕ್ಕೆ ಮೂಲ ಕಾರಣವಾಗಿದೆ.

ಬ್ರಿಜ್ ಮತು ಜೋಜ್ ನಕ್ಷತ್ರಗಳ ಚಲನೆಯ ಅಭಿಮಾನಿಗಳು ಹಾಗೂ ನಿರಂತರವಾಗಿ ಒಳಿತಿನ ಭವಿಷ್ಯವಾಣಿಯನ್ನು ನುಡಿಯುವ ಜನರು ಎಲ್ಲರೂ ಸೇರಿ ಸೋಮವಾರದಂದು ದಿನಾಂಕ ೨೦ ಜಮಾದಿವುಲ್ ಅವ್ವಲ್ ಹಿಜರಿ ಶಕೆ ೧೦೫೪ರಂದು ಚಲಿಸುತ್ತಿರುವ ಗ್ರಹಗಳು ಹಾಗೂ ಸ್ಥಾಯಿಯಾದ ನಕ್ಷತ್ರಗಳ ಪ್ರಭಾವಗಳ ಮೇಲೆ ಪ್ರಭುತ್ವವನ್ನು ಸಾಧಿಸಿದ ಮತ್ತು ಮತ್ಸ್ಯದ ಹೊಟ್ಟೆಯ ಇಕ್ಕಟ್ಟಾದ ಹಾದಿಯಿಂದ ಮುಕ್ತಿ ಪಡೆದು ಆಕಾಶದ ಸಿಂಹಾಸನದ ಮೇಲೆ ಆಸೀನರಾದ ಯೂನುಸ್ ಅಲೈಹಿಸ್ಸಲಾಮ್‌ರವರಂತೆ ದಿನಾಂಕವನ್ನು ನಿಗದಿಪಡಿಸಿದರು ಮತ್ತು ಅವರು ಯೋಗ್ಯತೆಯನ್ನು ಗುರುತಿಸುವವರಾಗಿದ್ದು ದಿವ್ಯಪ್ರಭೆಯನ್ನು ಬೀರುವವರಾದರು. ಸುಗಂಧಪೂರಿತ ಅಂಬರ್ ಸೀಳಿದ ಮಂಜಿನಂತೆ ಕೇಸರಿ ಬಣ್ಣದ ಉದಯ ಸೂರ್ಯನಂತೆ ಅರ್ಥಾತ್ ಶರದೃತುವಿನಲ್ಲಿ ಎಲೆಗಳು ಕಳಚಿ ಬೀಳುವಂತೆ. ಆ ಸಮಾರಂಭದ ಸಲುವಾಗಿ ಹಸಿರು ಪಚ್ಚೆಯಿಂದ ಕುಸುರಿ ಮಾಡಿದ ರತ್ನಕಂಬಳಿಯನ್ನು ಹೂದೋಟ ಮತ್ತು ಕಾಲುದಾರಿಯಲ್ಲಿ ಹಾಸಲಾಯಿತು.

ಒಂಭತ್ತು ದಿನಗಳ ಸಂತೋಷ ಕೂಟವು ವೃಕ್ಷಗಳ ಪ್ರೇಮಮಯಿ ತಂಗಾಳಿಯೊಡನೆ ಸಂತೃಪ್ತ ಹೃದಯದಿಂದ ಕರುಣೆಯ ಹಸ್ತದೊಂದಿಗೆ ಆರಂಭವಾಗಿ ತೀವ್ರಗತಿಯಲ್ಲಿ ಸಡಗರವು ಮುಂದುವರೆಯಿತು ಹಾಗೂ ಶುಭ, ಶುಭ್ರ ಅಕಾಂಕ್ಷೆಗಳೊಡನೆ ಮೋಡಗಳಿಂದ ಹೊರಹೊಮ್ಮಿದ ಮಳೆ ಹನಿಗಳಿಂದ ವೃಕ್ಷಗಳ ಮೇಲಿನ ಅನಾರೋಗ್ಯಕರ ಹಳದಿ ಕಲೆಗಳು ತೊಡೆದು ಹೋಗಿ ಆರೋಗ್ಯವಂತ ಕಳೆಯ ಪೋಷಾಕು ಮೂಡಿಬಂದಿತು. ಅವುಗೆಲ್ಲದರ ಮೇಲೆ ಕಪ್ಪುಕಂಬಳಿಯನ್ನು ಹೊದೆಸಿದ್ದು, ಬುಲ್‌ಬುಲ್ ಹಕ್ಕಿಯು ಹಸಿರುಹೊದ್ದು ಗಿಳಿಯಂತೆ ಕಂಡು ಬಂದಿತು ಹಾಗೂ ಫಾಖ್ತ ಎಂಬ ಬಿಳಿಕೊಕ್ಕರೆಯು ನವಿಲಿನಂತೆ ಕಂಡು ಬರತೊಡಗಿತು. ಆ ಧೃಢ ನಿರ್ಧಾರವು ಬಣ್ಣ ಬಣ್ಣದ ಹೂವುಗಳ ನೆರಳಿನಿಂದ ಸಾವಿರಾರು ಕಲಾತ್ಮಕ ಕುಸುರಿಪ್ರತಿಮೆಗಳನ್ನು ನಿರ್ಮಿಸಿತು.

ನಾಳೆಗಾಗಿ ಬೆಳಗನ್ನು ಸಿಂಗರಿಸುವ ಸುಂದರಿಯು
ಕಲಾತ್ಮಕ ಕುಸುರಿಯನ್ನು ಅಂಗೈಯ ಮೇಲೆ ಬಿಡಿಸಿ
ಹಸಿರು ಎಲೆಯನ್ನು ಹಚ್ಚುವವಳಾದಳು
ರಕ್ತನಾಳಗಳಲ್ಲಿ ನೆತ್ತರು ಚಿಮ್ಮತೊಡಗಿತು
ಸಿಹಿ ತುಳಸಿ ಮತ್ತು ಶೀತನಿವಾರಕ ಮೂಲಿಕೆಯು
ಭುಜಕ್ಕೆ ಭುಜತಗುಲಿಸಿಕೊಂಡಂತೆ
ನೀರು ಹೊಳೆಯ ಬದಿಯಲಿ ರಾಗಾಲಾಪನೆ ಮಾಡತೊಡಗಿತು
ಆಕಾಶನೀಲಿ ಬಣ್ಣದ ಹೂವಿನಂತೆ ಮಾತನಾಡುವ
ಹೂವಿನ ಮಾತು ನಿಂತು ಹೋಯಿತು
ನೆಲದ ಹಸಿರು ಹೂವಿನಂತೆ ಹೂವಾಯಿತು
ಮತ್ತು ಹೂವಿನ ನೆರಳಿನಲ್ಲಿ ಕಿವಿಯ ರಿಂಗು ಮೂಡಿತು
ತೋಟದಲಿ ಎತ್ತರದ ಮರ ಕಂಡು ಬಂದಿತು
ಉಷ್ಟ್ರ ಪಕ್ಷಿಯು ರೆಕ್ಕೆ ಹರಡಿದಂತೆ

ನೀಲ್ ನದಿಯು ಬಟ್ಟೆ ತೊಡುವುದಿಲ್ಲವೆಂದು ಶೀತ ನಿವಾರಕ ಹೂವನ್ನು ತ್ವರಿತವಾಗಿ ಕೊಂಡೊಯ್ಯುತ್ತಾರೆ. ಪ್ರಪಂಚದಲ್ಲಿ ಆಜ್ಞಾಪಾಲನೆ ಮಾಡತಕ್ಕ ಬಾದಶಹನ ಹುಕುಮನ್ನು ಮನ್ನಣೆ ಮಾಡುವ ಹಾಗೂ ವಿಧೇಯತೆಯಿಂದ ಅನುಸರಿಸುವ ಕವಿತೆ ಹಾಗೂ ಸಿತಾರ್‌ನಂತೆ ಸೇವಾ ತತ್ಪರತೆಯ ಕಿರೀಟ ಧಾರಣೆ ಮಾಡಲಿ. ದೊಡ್ಡ ಡೇರೆ ಮತ್ತು ಶಾಮಿಯಾನಾ ಹೊಂದಿರುವ ಪರಿಚಿತರು, ಮೇಧಾವಿಗಳು ಹಾಗೂ ಬೆಂಬಲಿಗರು ಚತುರ ಜನರು ಆ ಆಕಾಶದ ನೀಲಿ ಉಡುಪನ್ನು ಒಳ ಬಟ್ಟೆ(ಲೈನಿಂಗ್) ಎಂದು ಕರೆದರೆ ಸೂಕ್ತವಾದೀತು. ಸೂಕ್ಷ್ಮ ಒಳನೋಟ ಮತು ನಿಸ್ಪೃಹತೆಯನ್ನು ಹೊಂದಿದವರು ಹಾಗೂ ನ್ಯಾಯಪರ ಹಾದಿಯ ಪಥಿಕರು ಅದನ್ನು ಪುರಾತನ ಆಕಾಶದ ಪುರಾತನ ಗುಮ್ಮಟದ ತುಂಡು ಎಂದು ಕರೆದಲ್ಲಿ ಅಕ್ರಮ ಎಸಗಿದಂತಾಗುವುದಿಲ್ಲ. ಭೂಮಿಯ ಉನ್ನತ ನೆಲೆಯನ್ನು ಸಾರುವ ಕೊಳಲ ಗಾನ ಎಂದರೆ ಅತಿಶಯೋಕ್ತಿಯಾಗುವುದಿಲ್ಲ ಅಂದರೆ ಆಕಾಶ ಮತ್ತು ಭೂಮಿಯ ನಡು ಮಧ್ಯದಲ್ಲಿ ತನ್ನನ್ನು ಸೂಕ್ಷ್ಮ ಬಿಂದು ಎಂತಲೂ ಹಾಗೂ ಸೂರ್ಯ ಅದರ ನೆರಳಲ್ಲಿ ತನ್ನನ್ನು ಅಣುವಿಗಿಂತಲೂ ನಗಣ್ಯ ಎಂದು ತಿಳಿಯುತ್ತಾನೆ. ಅದರ ಹಗ್ಗವು ಚಂದ್ರಮುಖಿಯ ಮುಂಗುರುಳಿನ ಸುಂದರಿಯರಂತೆ ಮತ್ತು ಹೂರ್‌ನಂತಹ ಗಂಧರ್ವ ಕನ್ಯೆಯರಂತೆ ವಿಶಿಷ್ಟವಾಗಿದೆ.

ಅದರ ಪ್ರತಿ ಕಂಬವು ಬೃಹತ್ತಾದ ಸೂರ್ಯನೋಪಾದಿ ಪ್ರಕಾಶಮಯವಾಗಿರುವ ಮೀನಖಂಡಕ್ಕಿಂತ ಹೆಚ್ಚು ಆಕರ್ಷಕವಾಗಿದೆ. ಅವರ ಪ್ರತಿ ಹೆಜ್ಜೆ ಮನಸೂರೆಗೊಳ್ಳುವ

ಉತ್ತಮ ಗಾಯಕಿಯ ಸುಶ್ರಾವ್ಯ ನಾದಕ್ಕಿಂತಲೂ ಹೆಚ್ಚು ಮೃದು.ಅದರ ಪ್ರತಿ ಕುಸುರಿ ಕೌಶಲ್ಯವು ವಯ್ಯಾರದ ಬೆಡಗಿಯ ನೀಳ ನಿಲುವಿಗಿಂತಲೂ ಹೆಚ್ಚು ಸುಂದರವಾಗಿತ್ತು. ಜನರು ಆ ಅದ್ಭುತ ಮತ್ತು ಬಲಿಷ್ಠ ದರಬಾರಿನಲ್ಲಿ ಉಪಸ್ಥಿತರಿದ್ದು, ತಮ್ಮ ನೆರಳಿನ ಶ್ರೀಮಂತಿಕೆಯಿಂದ ಭೂಮಿಯನ್ನು ಆಕಾಶದ ಸರಿಸಮಾನ ಸ್ಥಾನವನ್ನು ಕರುಣಿಸಿದ್ದರು ಮತ್ತು ಆಕಾಶವನ್ನು ತನ್ನ ಔನ್ನತ್ಯ ಹಾಗೂ ಬಲಾಢ್ಯತೆಯ ವೈಶಿಷ್ಟ್ಯತೆಯ ಹಮ್ಮಿನಿಂದ ಕೆಳಗೆ ಸರಿಸಿ, ಭೂಮಿಯ ಮಟ್ಟಕ್ಕೆ ತಂದು ನಿಲ್ಲಿಸಿದರು. ಮನಮೋಹಕ ಕೆತ್ತನೆ ಹಾಗೂ ಕುಸುರಿ ಕೆಲಸದಿಂದ ಕೂಡಿದ ರತ್ನಕಂಬಳಿಯ ಮೇಲೆ ಆಸೀನರಾದ ನಿಶ್ಚಯೀ ಸ್ವರೂಪೀ ಫರಿಶ್ತಗಳಂತಹ ಹಸನ್ಮುಖಿ ಆಸ್ಥಾನಿಕರು ರೇಷ್ಮೆ ವ್ಯಾಪಾರಿಗಳ ಬಲದ ಕೇಂದ್ರಬಿಂದುವಾಗಿದ್ದರು. ಬಳಕುವ ಮತ್ತುರತ್ನಗಳನ್ನು ಕೂಡಾ ನಾಚಿಸುವಂತಹ ಪ್ರಭೆಯನ್ನು ಹೊಂದಿದ ಸುಂದರ ವದನಗಳಿಂದ ಮುತ್ತುಗಳು ಹೊಳೆಯುತ್ತಿದ್ದವು ಮತ್ತು ಅವುಗಳ ಶೋಭಾಯಮಾನವಾದ ಕೆತ್ತನೆಯ ಸೌಂಧರ್ಯವು ಖಿರಾಸಾನಿನ ಕುಶಲಕರ್ಮಿಗಳ ಮತ್ತು ಚೈನಾದವರ ಮೋಜು ತಾಣಗಳು ಹಾಗೂ ವೇಷ ಭೂಷಣದ ತಾಣಗಳನ್ನು ನಾಚಿಸುವಂತಿದ್ದವು. ತನ್ನ ಅಸ್ತಿತ್ವದ ಪೂರ್ಣತೆಯ ಸಲುವಾಗಿ ನಗ್ನ ಮತ್ತು ಬೆತ್ತಲೆಯಾಗಿದ್ದ ಭೂಮಿಯು ಹೆಮ್ಮೆಮತ್ತು ಔನ್ನತ್ಯದ ಕೆಂಪು ಉಡುಪನ್ನು ಧರಿಸುವವಳಾದಳು. ದೃಷ್ಟಿಯು ಈ ನೆಮ್ಮದಿ ಮತ್ತು ಸುಖದ ಹಾಸಿಗೆಯ ಮೇಲೆ ಬಿದ್ದಲ್ಲಿ, ಅದರ ಮೃದುತ್ವ ಮತ್ತು ಸೌಖ್ಯದಿಂದ ಆಶ್ಚರ್ಯವುಂಟಾಗಿ ತನ್ನ ದೃಷ್ಟಿ ಲೋಕದಲ್ಲಿ ಮರಳಿಬರುವುದು. ಎಂದಾದರೂ ಆಕಾಶದ ಫರಿಶ್ತ(ದೇವಚರರು)ಗಳಿಗೆ ಈ ನೆಮ್ಮದಿಯಿಂದ ಕೂಡಿದ ಸುಖಾನುಭವದ ಹಾಸಿಗೆಯ ಮೇಲೆ ಕ್ಷಣ ಕಾಲ ವಿಶ್ರಮಿಸುವ ಅವಕಾಶ ಸಿಕ್ಕಲ್ಲಿ ಆ ದೇವಚರರ ಹೃದಯ ಮತ್ತು ಮನಸ್ಸುಗಳು ಪರಲೋಕದತ್ತ ಮರಳುವ ಆಲೋಚನೆಯನ್ನು ಮಾಡುವುದಿಲ್ಲ.

ಆತಿಥ್ಯದ ದಿವ್ಯ ನಡವಳಿಕೆಯು ದಾನ, ಧರ್ಮ, ಬಹುಮಾನ ಮತ್ತು ಉದಾರತೆಯಿಂದ ಕೂಡಿತ್ತು.

ಬಾನೆತ್ತರಕ್ಕೆ ಅವನ ಶಾಮಿಯಾನವನ್ನು ಏರಿಸಲಾಯಿತು.
ವಿಶ್ವದುದ್ದಕ್ಕೂ ಆಕಾಶವನ್ನು ವಿಸ್ತರಿಸಲಾಯಿತು.
ಮೇಧಾವಿ ಕುಶಲಕರ್ಮಿಗಳು ಚಿನ್ನದ ರೇಷ್ಮೆ ಪೋಷಾಕನ್ನು
ಸಂಪೂರ್ಣ ಕಲೆಗಾರಿಕೆಯಿಂದ ಧರಿಸಿ,
ಸೌಂದರ್ಯದ ಜಾಲವನ್ನು ಹರಡಿ, ಶಿಕಾರಿಯ
ಸಲುವಾಗಿ ಸುಂದರ ಮತ್ತು ಆಕರ್ಷಕ ಬೀಡನ್ನು ಬಿಟ್ಟಿದ್ದಾರೆ.

ಎತ್ತರದ ಮತ್ತು ಬೃಹತ್ತಾದ ಡೇರೆಗಳು ಮತ್ತು ಆಕರ್ಶಕ ಶಾಮಿಯಾನಗಳ ಅಡಿಯಲ್ಲಿ ಸೂರ್ಯನಂತೆ ತೇಜಸ್ಸುಳ್ಳ ಪ್ರಾವೀಣ್ಯತೆಯನ್ನು ಹೊಂದಿದ ನರ್ತಕಿಯರು

ಜೊಹರಾ ಗ್ರಹದಂತೆ ಪ್ರಭೆಯನ್ನು, ಬೀರುತ್ತಾ, ಮುಶ್ತರಿ ಗ್ರಹದಂತೆ ಸೌದರ್ಯವನ್ನು ಹೊಂದಿದವರಾಗಿದ್ದು, ಕತ್ತಿಂಯು ಬಲವನ್ನು ಹೊಂದಿದ ಎಣ್ಣೆಗಪ್ಪು ಸೌಂಧರ್ಯನಿಧಿಯಾಗಿದ್ದು, ಇಡೀ ವಿಶ್ವವನ್ನು ನಿಯಂತ್ರಣಕ್ಕೆ ತರುವ ವಿಶ್ವವಿಖ್ಯಾತ ಖಡ್ಗ ಮತ್ತು ಸಾಗರದ ಅಲೆಗಳಂತೆ ಪ್ರಣಯದ ಬಿಲ್ವಿದ್ಯೆಯ ವಯ್ಯಾರ, ಮುಂಗುರುಳಿನ ಉರುಳಿನ ಬೆಡಗು, ಅಲೆಗ್ಸಾಂಡರ್ ಬಾದಶಹ ನಂತಹ ಪ್ರತಾಪದಂತಹ ಹೃದಯ ಸಿಂಹಾಸನದ ಒಡೆಯರಾದವರು ಭೂಮಿ ಮತ್ತು ಆಕಾಶವನ್ನು ತಂಗುದಾಣವನ್ನಾಗಿಸಿ ವಿಶ್ರಮಿಸಿದರು. ಪ್ರೀತಿ ಮತ್ತು ಅಲಂಕಾರ ಹಾಗೂ ಸೌಂದರ್ಯದ ಪಾನಪ್ರಿಯರು ತಮ್ಮ ಬೆಳಗಿನ ಪಾನಕೂಟದ ಅಹಂಕಾರ ಮತ್ತು ಶೃಂಗಾರದಿಂದ ತುಂಬಿದ ಮಾದಕ ನೋಟದ ಅರೆ ವಿಧೇಯ ಗುಟುಕಿನ ಗೂಡಿನಲ್ಲಿ ಉಳಿಯುವ ಜನರು, ತಪಶ್ಚರ್ಯೆಯ ಸಲುವಾಗಿ ಮಸೀದಿಯಲ್ಲಿ ಉಳಿಯುವ ಗಾಜಿನಂತಹ ಹೃದಯವನ್ನು ಹೇಗೆ ಚೂರುಮಾಡಿದರೆಂದರೆ, ಮಣ್ಣನ್ನು ಆರಾಧಿಸುವ ಜನರು ಮತ್ತು ಮನಸೋ ಇಚ್ಛೆ ವರ್ತನೆಮಾಡುವವರು ನೆಮ್ಮದಿ ಕಳೆದುಕೊಂಡು ಅಸ್ತವ್ಯಸ್ತರಾಗಿ ಕಲ್ಲಿನ ಮೇಲೆ ಗಾಜಿನಂತಹ ಹೃದಯವನ್ನು ಒಡೆದುಹಾಕುತ್ತಾರೆ. ಹಾಗೂ

ಪ್ರೀತಿಯ ತೋಟದ ತಾಜಾ ಮತ್ತು ಬೆಳಗುವ ಮೋರೆಯವರು, ಆ ತೋಟದ ತಾಜಾ ಎತ್ತರದ ವೃಕ್ಷದ ಉನ್ನತ ನರ್ತನದ ಸಂದರ್ಭದಲ್ಲಿ ಪನ್ನೀರನ್ನು ಪ್ರೋಕ್ಷಿಸುತ್ತಾ, ಆರ್ದ್ರಭೂಮಿಯ ಮೇಲ್ಭಾಗದ ಹಿಸ್ಸೆಯನ್ನು ಆಕಾಶದ ತೋಟದ ಸಲುವಾಗಿ ಹೆಮ್ಮೆಗೆ ಗ್ರಾಸವನ್ನು ಒದಗಿಸಿದರು. ಹೈರಾಣವಾಗಿ ಮತ್ತು ಅಸ್ತವ್ಯಸ್ತವಾಗಿ ಅಲೆಮಾರಿಗಳಾಗಿ ಅಲೆದಾಡುವವರ ಸಂಬಂಧಿಗಳ ಗುಂಪಿನ ಬಾಂಧವ್ಯವನ್ನು ಸುಂದರ ರೆಪ್ಪೆಗಳು ವಿಸ್ತಾರವನ್ನಾಗಿಸಿದವು. ಪ್ರೇಮಲೋಕದ ನೀಳ ಸುಂದರಿಯರು ಮತ್ತು ಸೌಂದರ್ಯದ ತೋಟದ ಅಮೂಲ್ಯ ವಜ್ರ ವೈಢೂರ್ಯಗಳು ಪಾದಗಳ ಠೇಂಕಾರದ ವಯ್ಯಾರವನ್ನು ಮತ್ತು ಪರಸ್ಪರ ಮಿಲನದ ನಡೆಯು ಚಾಲಾಕಿ ಮತ್ತು ಪಕ್ಷಿಗಳ ದೂರ ಹಾಗೂ ಹತ್ತಿರದ ದೃಷ್ಟಿಯನ್ನು ಬೀರುವವರನ್ನು ಮನಸ್ಸಿನ ಪ್ರಜ್ಞೆಯಿಂದ ಬಿಡುಗಡೆಗೊಳಿಸಿ ಮೋಸದಾಟ ಹಾಗೂ ಬಿನ್ನಾಟದ ಲಾಠಿಯಿಂದ ತಾಳ್ಮೆ, ವಿವೇಚನೆ ಕಳೆದುಕೊಂಡು, ಹೃದಯದ ಲೋಕದಲ್ಲಿ ಸಮತೋಲನವನ್ನು ಕಳೆದುಕೊಂಡರು.

ಒಂದು ಹೃದಯ ತುಂಬುವ ಸಮಾರಂಭವನ್ನು ಏರ್ಪಡಿಸಲಾಯಿತು.
ಒಳ–ಹೊರಗು ಇವೆರಡನ್ನು ಸಿಂಗರಿಸಲಾಯಿತು.
ಮತ್ತು ಆ ಹಸಿರು ಮಹಲಿನ ಮುಂಭಾಗದಲ್ಲಿ ಧೈರ್ಯ ಮತ್ತು ಪರಾಕ್ರಮದ ಮೈದಾನದಂತೆ ಹಾಸಿಗೆಯನ್ನು ಬಿಡಿಸಿದರು.

ಪರದೆಯ ಮುಂಭಾಗದಲ್ಲಿ ವಜ್ರ ಖಚಿತ ಟೋಪಿಗಳು,
ಸಭಾಂಗಣದ ಬಾಗಿಲ ಮೇಲೆ ನೇತಾಡಿದವು.
ಈ ದಡದಿಂದ ಆದಡದವರೆಗೂ ಆ ಭೂಮಿಯ ಮೇಲೆ
ಸಾದ ಉಡುಪು ಮತ್ತು ಚೈನಾದ ರೇಷ್ಮೆ ಬಟ್ಟೆ ಹೊಳೆಯುತಿದ್ದವು.
ಚಿನ್ನದ ಕುಸುರಿ ಕೆಲಸದ ಪರದೆಯಂತೆ ಕಂಡು ಬಂದವು.
ಆಕಾಶವನ್ನು ಜನರು ಅಪರಂಜಿ ಚಿನ್ನದಲಿ ಕೊಂಡುಕೊಂಡರು.
ಏಕೆಂದರೆ ಸಮಾರಂಭದಲ್ಲಿ ನೀಲಿ ಪರದೆಯನ್ನು ಶುಭವೆಂದೆಣೆಸುವುದಿಲ್ಲ.

ಸುಬಹಾನಲ್ಲಾ ಅಲ್ಲಾಹನು ಪವಿತ್ರನು. ಇದೇನು ಹೃದಯವನ್ನು ಅಪಹರಿಸಿದ ಪ್ರಿಯತಮೆಯು ಚತುರ ಭಾಷಿಣಿಯಾಗಿದ್ದು ಆಕೆಯ ದೇಹದ ಪರಿಶುದ್ಧತೆಯು ಕನ್ನಡಿಯಂತೆ, ಎದೆಯ ಬಚ್ಚಿಟ್ಟ ರಹಸ್ಯಗಳು ಗಾಜಿನ ಬಟ್ಟಲಿನ ಪಾನೀಯದಂತೆ, ಬೆಂಬಲಿಗರ ತೀಕ್ಷ್ಣ ನೋಟದೆದುರು ಸ್ಪಷ್ಟ ಹಾಗೂ ಪ್ರಕಟವಾಗಿದೆ. ಮತ್ತು ಅವರ ಕೆನ್ನೆಯ ತಾಜಾತನವು ಎಂತಹದೆಂದರೆ ತೋಟದ ಹೂವುಗಳು ಲಜ್ಜೆಯಿಂದ ತಮ್ಮ ಮೋರೆಗಳನ್ನು ಎಲೆಗಳ ಮರೆಯಲ್ಲಿ ಅಡಗಿಸಿಕೊಂಡವು. ಮತ್ತು ಇವರು ಎಂತಹ ಮಾಂತ್ರಿಕ ಸಂಚಿನಾಟದ ಅಮಲೇರಿದಂತಹ ಮಯ್ಯಾರದ ಉಡುಗೆ ತೊಡುಗೆಯವರಾಗಿದ್ದಾರೆಂದರೆ, ನರ್ತನದ ಸಮಯದಲ್ಲಿ ಅವರ ಕೈಗಳ ಚಲನೆಯಿಂದ ಆಕಾಶದ ನಕ್ಷತ್ರಗಳು ಮತ್ತು ಗ್ರಹಗಳು ಆಶ್ಚರ್ಯಚಕಿತ ಗೋಡೆಯನೇರಿದ ಕುಂದಣ ಹಾಗೂ ಆಶ್ಚರ್ಯದ ಪ್ರಪಂಚದ ಚಿತ್ರದಂತೆ ಕಂಡು ಬಂದವು ಹಾಗೂ ಗಾನದ ಅಮಲಿನ ಗುಟುಕು ಭೂಮಿ ಮತ್ತು ಉನ್ನತ ಆಕಾಶದ ಬಟ್ಟಲಿನಲ್ಲಿ ಬೀಳಿಸುತ್ತವೆ. ಎಲ್ಲರನ್ನು ಸೌಂದರ್ಯದ ಸೆರೆಯಲ್ಲಿ ಬಂಧಿಸಿ, ಅಮಲಿನಲ್ಲಿ ತೇಲಾಡಿಸುತ್ತಾರೆ, ಪವಿತ್ರ ಹಾಗೂ ಪಾರದರ್ಶಕ ಸೂಫಿ ಶ್ರೇಷ್ಠರು ನೃತ್ಯ ಮತ್ತು ಅದರ ಮತ್ತಿನಲ್ಲಿ ಮುಳುಗುವಂತೆ.

ಅವರ ಕೆನ್ನೆಯನ್ನು ನೋಡಿ ನೋಟವು ಪ್ರೀತಿ
ಮತ್ತು ಬಿನ್ನಾಣದಲಿ ತೊಡಗುವುದು
ಅವರ ಧ್ವನಿಯಿಂದ ಕಿವಿಯ ತಮಟೆಯು
ರಾಗಾಪಾಲನೆ ಮಾಡತೊಡಗುವುದು
ಎಲ್ಲಾ ಕಡೆಯಿಂದಲೂ ಹೃದಯವನು
ಪರೀಕ್ಷೆಗೆ ಒಡ್ಡಲಾಗುವುದು
ಮತ್ತು ಹೃದಯವನು ಅತೀವ
ಮೋಸದಾಟದಲಿ ಮುಳುಗಿಸಲಾಗುವುದು

ಹಜರತ್ ಘುಫ್ರಾನ್ ಪನಾಹ್‌ರವರ ಕರುಣೆಯಿಂದ ಮಾಲಿಗಳು ವಿವಿಧ ಹೃದಯಕ್ಕೆ ನಲಿವನ್ನು ತಂದುಕೊಡುವ ಸಸ್ಯ ಪ್ರಭೇಧಗಳನ್ನು ಸ್ವರ್ಗಸಮಾನ ಭೂಮಿಯಲ್ಲಿ ವ್ಯವಸ್ಥಿತವಾಗಿ ನೆಟ್ಟಿದ್ದರಿಂದ ಕ್ರೌರ್ಯ ಹಾಗೂ ದುಃಖದ ಕಳೆಗಳು ಬೆಳೆಯಲು ಸ್ಥಳವೇ ಸಾಲದಾಯಿತು. ಮತ್ತು ಅವರ ಕರುಣೆಯ ಪ್ರವಾಹವು ಪ್ರತಿಸಾಮಾನ್ಯ ಹಾಗೂ ಅಸಮಾನ್ಯರ ಹೃದಯದ ಓಣಿಯಲ್ಲಿ ಸಂತಸ ಮತ್ತು ಚೈತನ್ಯದ ಬುನಾದಿಯನ್ನು ಹಾಕಿದ್ದು, ಅದರ ಗೋಡೆಯಲ್ಲಿ ದುಃಖ ದುಮ್ಮಾನಗಳ ಬಿರುಕು ಸಂಭವಿಸಲು ಸಾಧ್ಯವೇ ಇರಲಿಲ್ಲ. ಮತ್ತು ದುಃಖಿಗಳ ಬಾಣವು ಮರುಭೂಮಿಯಲ್ಲಿ ಹೇಗೆ ಕಣ್ಮರೆಯಾಯಿತೆಂದರೆ, ಪೀಡಕನು ಅದರ ಅನ್ವೇಷಣೆಯಲ್ಲಿ ಬಾಗಿದ ಬಿಲ್ಲಿನಂತೆ ಒಂದುಕ್ಷಣವು ವ್ಯರ್ಥವಾಗದಂತೆ ಬಾಗಿದ ಆದರೂ ಕೂಡ ಪ್ರಯೋಜನವಾಗಲ್ಲಿ.

ಪ್ರೀತಿ ಮತ್ತು ಸಾಫಲ್ಯದ ರೇಷ್ಮೆಯ ಉಡುಪನ್ನು ಸಾಮಾನ್ಯ ಪ್ರದೇಶಗಳಲ್ಲಿ ವಾಸಿಸುವ ಬೆತ್ತಲೆ ದೇಹದ ಜನರಿಗೆ ದೊರಕಿ, ವೇಷ ಭೂಷಣಗಳಿಂದ ಅಲಂಕೃತಗೊಂಡು ಮೆರೆಯ ತೊಡಗಿದರು. ಹಗಲು-ರಾತ್ರಿ ಪುರುಷರು ಹಾಗೂ ಮಹಿಳೆಯರಿಗೆ ಔತಣಕೂಟಗಳನ್ನು ಆಯೋಜಿಸಲಾಗಿದ್ದು ಆ ಸ್ವಾದಿಷ್ಟ ತಿನಿಸುಗಳು ಸ್ವರ್ಗದ ಅಡಿಗೆಗಳೆಂದು ಪ್ರತೀತಿ ಹೊಂದಿದವು. ಆ ರುಚಿಕರ ತಿನಿಸುಗಳು ದೇಹಕ್ಕೆ ಪುಷ್ಟಿಯನ್ನು ನೀಡುವುದರ ಜೊತೆಗೆ ಹಸಿವನ್ನು ಕೂಡ ಹೆಚ್ಚಿಸಿದವು. ಅದರ ಸ್ವಾದವು ಬಯಕೆಯ ಲೋಕದಲ್ಲಿ ಪಥ ಭ್ರಷ್ಟರಿಗೆ ಮಾರ್ಗದರ್ಶನ ಮಾಡುವಂತಹದಾಗಿದ್ದು ಮತ್ತು ಅದನ್ನು ವೀಕ್ಷಿಸುವುದು ಹಕೀಮರು ತಯಾರಿಸಿದ ಅಜೀರ್ಣದ ಔಷಧಿಯಂತೆ ಹಾಗೂ ಚೂರ್ಣದಂತೆ ಇತ್ತು. ಅದರ ವ್ಯಕ್ತಿತ್ವವನ್ನು ತೂಬಾಕಲ್ಪವೃಕ್ಷ ಎಂದೆಣಿಸಿದಲ್ಲಿ, ಬಯಸಿದುದನ್ನು ಸಂಪೂರ್ಣವಾಗಿ ಪಡೆಯುವಂತಹದಾಗಿತ್ತು. ಅದೃಷ್ಟಶಾಲಿ ಎಂದೆನ್ನುವುದು ಸೂಕ್ತ ಏಕೆಂದರೆ ಮನದಲ್ಲಿ ಮೂಡಿದ ಬಯಕೆಗಳು ಕೂಡಲೇ ಪ್ರಾಪ್ತಿಯಾಗುತ್ತಿದ್ದವು.

ಅವರ ನಾನ್ ಮತ್ತು ಖಮಿರಿ ರೊಟ್ಟಿ (ಹುಳಿ ರೊಟ್ಟಿ) ಆಕಾಶದೆತ್ತರಕೆ ಏರಿತ್ತು. ಹಾಸಿಗೆ ಹಿಡಿದಿದ್ದ ಕೃಶಕಾಯದ ರೋಗಿಗಳ ಸಲುವಾಗಿ ಮನೋರಂಜನೆ ಮತ್ತು ಮೆದುಳಿಗೆ ಬಲ ತರಿಸುವಂತಹದಾಗಿದೆ. ಮತ್ತು ಅವರ ಆಯ್ಕೆಯ ಕಾಳುಗಳು ಬಹ್ರೈನ್ ಮತ್ತು ಏಡನ್ನಿನ ಆಭರಣದಿಂದ ತುಂಬಿದ ಕಾಳುಗಳಂತೆ ಕಂಡುಬರುತ್ತಿತ್ತು. ಅವರ ಬಹುಮಾನ ಹಾಗೂ ಕೊಡುಗೆಗಳ ಔತಣ ಕೂಟಗಳ ಶೋಭೆಯು ವೀಕ್ಷಕರ ಕುತ್ತಿಗೆ ಮತ್ತು ಕಿವಿಗಳಿಗೆ ಶೋಭೆಯನ್ನುಂಟುಮಾಡುತ್ತಿತ್ತು. ಆ ಅಮೃತದ ಒಂದು ಗುಟುಕು ಯಾವುದಾದರೂ ಜೀವಿಗಳಿಗೆ ದೊರಕಿದ್ದಲ್ಲಿ ಆತನು ಹಜರತ್ ಖಿಜರ್ ಅಲೈಹಿಸ್ಸಲಾಮ್(ಖಿಜರ್ ಪೈಗಂಬರವರು)ರವರಂತೆ ದೀರ್ಘಾಯುಷ್ಯದ ಪೋಷಾಕನ್ನು ಧರಿಸುವವನಾಗುತ್ತಾನೆ ಮತ್ತು ಅವನು ಶಾಶ್ವತ ಜೀವನದ ಶರಾಬು ಖಾನೆಯ

ಪಾನಪ್ರಿಯನಾಗುವನು. ಒಂದಿಷ್ಟು ಕೇಸರಿ ಬಣ್ಣದ ವಿಷಕಾರಿ ಪ್ರತ್ಯೌಷಧದ ಒಂದಿಷ್ಟು ಹಿಸ್ಸೆ ಆರೋಗ್ಯವಂತ ವ್ಯಕ್ತಿಯ ಗಂಟಲಿನಲ್ಲಿ ಇಳಿದಲ್ಲಿ ಎಂದಿಗೂ ಸರ್ಪದ ವಿಷವು ಮತ್ತು ಇನ್ನಿತರೆ ರೋಗಗಳು ಆತನ ದೇಹದ ಮೇಲೆ ಯಾವುದೇ ಪರಿಣಾಮವನ್ನು ಬೀರುವುದಿಲ್ಲ ಮತ್ತು ಆತನ ಸ್ವಾದಿಷ್ಟ ರುಚಿಗಳನ್ನು ನೋಡಿ, ಇವನೇನು ಆಯಸ್ಕಾಂತಿಯ ಶಕ್ತಿಪಡೆದಿರುವನೇ ಎಂದು ನೀವು ಆಶ್ಚರ್ಯ ಚಕಿತರಾಗುವಿರಿ.

ಸಾಮಾನ್ಯ ಹಾಗೂ ಅಸಮಾನ್ಯರ ಹೃದಯದ ಹೆಜ್ಜೆಗಳನ್ನು ತನ್ನತ್ತ ಸೆಳೆಯುತ್ತಿರುವ ಶಕ್ತಿ ಯಾವುದಿರಬಹುದು ಅಥವ ಸರ್ವಶಕ್ತಪರಮಾತ್ಮನ ವತಿಯಿಂದ ನೀಡಲಾದ ಇನಾಮು ಮತ್ತು ಉಪಕಾರದ ಪ್ರತೀಕವೇ ಎಲ್ಲಾ ಹಿರೀಕರು ಮತ್ತು ಕಿರಿಯರು ಹೇಗೆ ಅವನತ್ತ ಸೆಳೆಯಲ್ಪಡುತ್ತಿದ್ದಾರೆ. ನಗರ ಮತ್ತು ಬಾಜಾರಿನ ಶುಭ ಸೂಚಕ ವೃಕ್ಷಗಳನ್ನು ನೆಡುವುದರಿಂದ ಕಾಶ್ಮೀರ ಹಾಗೂ ಕಾಬೂಲಿನ ಪುಷ್ಪಗಳ ಬಿಂಬಗಳನ್ನು ಹೊತ್ತ ಭೂಮಿಗೆ ಸೌಂದರ್ಯವನ್ನು ದಯಪಾಲಿಸಿ ಚಂದ್ರನಂತಹ ವದನವನ್ನು ಹೊಂದಿದ ಹೊಸ ಮದುವಣಗಿತ್ತಿ ಕೋಣೆಗಿಂತಲೂ ಹೆಚ್ಚು ಪ್ರಶಸ್ತ ಸ್ಥಳವನ್ನಾಗಿ ಮಾಡುತ್ತಾರೆ ಮತ್ತು ಆ ಚೈತನ್ಯದ ಸಭೆಯಲ್ಲಿ ಪ್ರತಿದಿನ ಸಭಿಕರ ಮೇಲೆ ಅತ್ತರನ್ನು ಸಿಂಪಡಿಸಲಾಗುತ್ತದೆ. ಅದರ ಸುಂದರ ಪುಷ್ಪವು ಯೂಸುಫ್ ಅಲೈಹಿಸ್ಸಲಾಮ್ (ಪ್ರವಾದಿ)ಯವರ ಸುಗಂಧದಂತೆ ದುಃಖ ಹಾಗೂ ಯಾತನೆಯಲ್ಲಿ ಒಳಗಾಗಿರುವ ಹೃದಯಗಳಿಗೆ ನೆಮ್ಮದಿಯನ್ನು ನೀಡುವಂತಹದಾಗಿದೆ. ಬೆಳಗಿನ ತಂಗಾಳಿಯು ಈ ಸುವಾಸನೆಯನ್ನು ಗಗನದ ಎತ್ತರಕೆ ತಲುಪಿದಲ್ಲಿ, ದೇವದೂತರ ಮುಖ್ಯಸ್ಥನು ಅದನ್ನು ಸ್ವರ್ಗದ ಸುಗಂಧವಾದ ಅಂಬರೀನ್ ಎಂದು ಭಾವಿಸಿ, ಅದನ್ನು ಆಘ್ರಾಣಿಸಿ, ತನ್ನ ಮನಸ್ಸನ್ನು ತಾಜಾತನದಿಂದ ಪ್ರಫುಲ್ಲವಾಗಿಸಿ ಸಂತೋಷವನ್ನು ಅನುಭವಿಸುವನು. ಒಂದು ವೇಳೆ ಆ ಗುಲಾಬಿ ಅತ್ತರಿನ ಒಂದು ಹನಿಯು ಅಮ್ಮಾನಿನ ಸಾಗರದಲ್ಲಿ ಬಿದ್ದಲ್ಲಿ ಆ ಕಾಲದ ಮೇಧಾವಿಗಳು ಮತ್ತು ಪ್ರಮುಖರು ಅದರ ನೀರನ್ನು ವಿಶ್ವವಿಖ್ಯಾತ ಜಲ ಎಂದು ಪರಿಗಣಿಸಿ, ಹೃದಯಕ್ಕೆ ತಂಪು ಹಾಗೂ ಸಂತೋಷ ಮತ್ತು ನೆಮ್ಮದಿಯನ್ನು ಕಂಡುಕೊಳ್ಳುವವರಾಗುತ್ತಾರೆ. ಅದರ ಚೈತನ್ಯಪೂರ್ಣ ಸಂಭಾಷಣೆಯ ಎತ್ತರವು ಅಂತರಂಗದ ಗೆಳೆಯನಂತೆ ಇದೆ. ಒಂದು ವೇಳೆ ಯಾರೊಡನಾದರೂ ಒಂದು ಕ್ಷಣ ಭೇಟಿ ಹಾಗೂ ಪರಿಚಯವಾದಲ್ಲಿ ಆಜೀವಪರ್ಯಂತ ಆತನ ಗೆಳೆತನ ಹಾಗೂ ಸಾಮಿಪ್ಯವನ್ನು ತೊರೆಯುವುದಿಲ್ಲ ಮತ್ತು ದುಃಖ ನಿವಾರಕ ಸಂತಸದ ಖಜಾನೆಯಾಗಿದೆ. ಕನ್ನಡಿಯ ಮೇಲೆ ಸವರಿದ್ದಲ್ಲಿ, ಪಾರದರ್ಶಕ ಮೇಲ್ಮೈಯ ಮೇಲೆ ಕೂಡಿದ ದುಃಖದ ಜಿಡ್ಡನ್ನು ಕೊನೆಗಾಣಿಸುವಂತಹದಾಗಿದೆ.

ಅವನ ಮನೆಯ ಪ್ರತಿ ಕಟ್ಟಿಗೆಯು ಸಂತಸ ಹಾಗೂ ಪ್ರಫುಲ್ಲತೆಯ ಮಹಲಿನ ಕಂಬಗಳಾಗಿವೆ. ಇದು ಶೈತಾನನ ವತಿಯಿಂದ ಉಂಟಾಗಬಹುದಾದ ಅನಿಷ್ಟ ಮತ್ತು

ಕೆಡುಕಿನ ವಿರುದ್ಧದ ರಕ್ಷಣೆಯಾಗಿದೆ. ಅವರ ದಾನಧರ್ಮ ಮತ್ತು ಸಂಸ್ಕಾರ ಹಾಗೂ ಶೋಭೆಯ ಸಭೆಯಲ್ಲಿ ಹೊಳೆಯುವ ಬೆಳಗುವ ದೀಪದ ಎಣ್ಣೆಯಾಗಿದೆ ಮತ್ತು ಅದರ ಮಸಿಯು ಕಣ್ಣಿಗೋಸ್ಕರ ಸುರ್ಮಾ ಆಗಿದೆ. ಎಲ್ಲಾ ಜನಸಾಮಾನ್ಯರು ಮತ್ತು ಅಸಮಾನ್ಯರ ಹೃದಯದ ಆನಂದ ಮತ್ತು ಸಂಭ್ರಮವಾಗಿದೆ. ಹಗಲು-ರಾತ್ರಿ ಅವರ ಸಭೆಯಲ್ಲಿ ಸಂಪೂರ್ಣ ಸಂತೋಷ ಹಾಗೂ ಚೈತನ್ಯವಿದೆ. ಅನ್ನಾಹಾರವು ಹವಳದಂತಹ ತುಟಿಗಳನ್ನು ಹೊಂದಿದ ಸುಂದರಿಯ ಬಾಯಿಯ ಬೀಗಗಳನ್ನು ತೆರೆಯುವ ಕೀಲಿ ಕೈಯಾಗಿದೆ. ಮತ್ತು ಹಿರಿಯರು ಹಾಗೂ ಕಿರಿಯರ ಪರಸ್ಪರ ವ್ಯವಹಾರಕ್ಕೆ ಗ್ರಾಸವನ್ನು ಒದಗಿಸುತ್ತದೆ ಮತ್ತು ಎಲ್ಲ ಯುವಕರು ಹಾಗೂ ವೃದ್ಧರಿಗೆ ಸಂತೋಷ ಮತ್ತು ನೆಮ್ಮದಿಯನ್ನು ನೀಡುವಂತಹದಾಗಿದೆ ಮತ್ತು ಲೇಖನಿಯು ಅವರ ಉತ್ತಮ ಗುಣಗಳನ್ನು ದಾಖಲಿಸಲು ನಿರ್ಧರಿಸಿದಲ್ಲಿ, ಅದರ ಮೊನೆಯ ನಾಲಿಗೆಯಿಂದ ಅಗಣಿತವಾದ ಅನರ್ಘ್ಯರತ್ನಗಳಂತಹ ಶಬ್ಧ ಭಂಡಾರದ ಪದಗಳು, ಮುತ್ತು ರತ್ನಗಳಿಗಿಂತಲೂ ಹೆಚ್ಚು ಹೊಳೆಯುವ ವರ್ಣರಂಜಿತ ಪದಗಳು ಪುಂಖಾನುಪುಂಖವಾಗಿ ಹೊರಬೀಳುತ್ತವೆ. ಅದರ ಹೊಂಬಣ್ಣವನ್ನು ಕೆಂಬಣ್ಣದ ಮಾಣಿಕ್ಯ ಮತ್ತು ಬಿಳುಪನ್ನು ವಜ್ರದೊಡನೆ ಹೋಲಿಕೆ ಮಾಡುವುದು ಕುಳ್ಳಗಿನ ಕತ್ತೆಯನ್ನು ಪ್ರಖರವಾದ ಸೂರ್ಯನಿಗೆ ಹೋಲಿಸಿದಂತಾಗುತ್ತದೆ. ಹಾಗೂ ಕಲ್ಲು ಚೂರನ್ನು ಅಮೂಲ್ಯ ಮುತ್ತಿನ ಸಮ ಹೋಲಿಕೆ ಮಾಡಿದಂತಾಗುತ್ತದೆ. ಅದೇ ರೀತಿಯಲ್ಲಿ ಸಂತೋಷ ಮತ್ತು ಭೋಗ ವಿಲಾಸದ ಅಮಲನ್ನು ಶರಾಬಿನೊಂದಿಗೆ ಹಾಗೂ ಸುಗಂಧ ಪುಷ್ಪವನ್ನು ಗುಲಾಬಿಯ ಸುಗಂಧದೊಂದಿಗೆ ಹಾಗೂ ಉಪ್ಪು ನೀರನ್ನು ಅಮೃತ ಮತ್ತು ಝಮ್ ಝಮ್ ನೀರಿನೊಂದಿಗೆ (ಕಾಬಾದಲ್ಲಿ ದೊರಕುವ ಬಾವಿಯ ಪವಿತ್ರ ನೀರು) ಹಾಗೂ ದ್ರಾಕ್ಷಾರಸವನ್ನು ಜೀವಸೆಲೆಯಾದ ಪವಿತ್ರ ನೀರಿನ ದರ್ಜೆಯೊಂದಿಗೆ ಸಮೀಕರಿಸಿದಂತಾಗುತ್ತದೆ.

ಯಾವುದು ಅರ್ಥವ್ಯಾಪ್ತಿಯಲ್ಲಿ ವಿಸ್ತಾರ ಹಾಗೂ
ಲಕ್ಷಣದಲ್ಲಿ ಸೂಕ್ಷ್ಮವಾಗಿದೆಯೋ
ಗೌರವದಲ್ಲಿ ಭಾರಿ ಹಾಗೂ ಮೌಲ್ಯದಲ್ಲಿ ಕಡಿಮೆ ಇದೆಯೋ
ಒಮ್ಮೊಮ್ಮೆ ಆರೋಗ್ಯದ ಸಲುವಾಗಿ ಲಾಭದಾಯಕ
ಇಡುಗಂಟು ಮತ್ತು ಮೋಕ್ಷದ ಹಾದಿಯಲಿ ಬುತ್ತಿಗಂಟು ಆಗುತ್ತದೆ.
ಅವನಂತಹ ಯಾವನೇ ವ್ಯಕ್ತಿಯು ಧನ ಪ್ರಾಪ್ತಿಗಾಗಿ
ಜೀವವನು ಒತ್ತೆಯಿಟ್ಟಿರಲಿಲ್ಲವೇನೋ
ಸುಂದರ ಮಾಣಿಕ್ಯದ ಮೇಲೆ ಒಂದಿಷ್ಟು ಹಣ.
ಬಾದಶಹನು ಆ ಕೆಂಪುಗುಣದ ಕೆಂಪು ಶರಾಬನ್ನು

ಕುಡಿಯುತ್ತಾನೆ ಮತ್ತು ಆ ಮೂಲಕ ಶತ್ರುಗಳ
ರಕ್ತವನ್ನು ಕುಡಿಯುತ್ತಾನೆ.

ಅತ್ಯಂತ ಸಂತೋಷ ಹಾಗೂ ಸಂಭ್ರಮದಿಂದ ಗೌರವ ಮತ್ತು ಶುಭದಾಯಕ ಖತ್ನದ ರಾತ್ರೆ ಕಳೆಯಿತು. ಎಣೆ ಇಲ್ಲದ ಖುದಾನ ಭಕ್ತನಾದ ಗಂಭೀರ ವ್ಯಕ್ತಿತ್ವ ಹೊಂದಿದ ಬಾದಶಹನಾದ ಸ್ವರ್ಗವಾಸಿ ಹಜರತ್ ರಿಜ್ವಾನ್ ದಸ್ತಗಾಹ್ ಬಾದಶಹನು ಶುಕ್ರವಾರದ ದಿನ ೧೧೦೪೪ನೇ ವರ್ಷದ ರಜಬ್ ತಿಂಗಳ ೬ನೇ ತಾರೀಕಿನಂದು ರಾಜ್ಯದ ಭರವಸೆಯ ಕುಡಿ ಹಾಗೂ ರಾಜತ್ವದ ಬೆಳಕಾದ ಕುಮಾರನನ್ನು ಸಿಡಿಲಿನ ವೇಗದ ಚಾಲಾಕಿ ಕುದುರೆಯ ಮೇಲೆ ಸವಾರಿ ಮಾಡಿಸಿದ್ದು, ಎಲ್ಲಾ ಪ್ರಖ್ಯಾತ ಮಂತ್ರಿಗಳು, ಪರಾಕ್ರಮಿ ಸರದಾರರು ಹಾಗೂ ರಾಜ ಪ್ರಮುಖರೊಡನೆ ಕಳುಹಿಸಿಕೊಟ್ಟ, ಲೋಕ ಮಾನ್ಯತೆ ಹಾಗೂ ಆತಿಥ್ಯದ ರೀತಿ–ರಿವಾಜುಗಳನ್ನು ಆ ವಿದ್ಯೆ ಹಾಗೂ ದಾನದ ಪ್ರತೀಕವಾದ ಬೆಳಗುವ ಸೂರ್ಯನೇ ನಿರ್ವಹಿಸಿದ. ಅಮೂಲ್ಯವಾದ ಆರ್ದ್ರವಾದ ಮುತ್ತು ರತ್ನಗಳನ್ನು ಆ ರಾಜ ಗಾಂಭೀರ್ಯದ ಮಾನವಂತ ರಾಜಕುಮಾರನ ಮೇಲೆ ನಿವಾಳಿಸಲಾಯಿತು.

ಹಾಗೂ ಇಡೀ ಜ್ಯೋತಿಷಿಗಳ ಆಕಾಶದ ಹೆಸರುವಾಸಿ ತಾರೆಗಳು ತಮ್ಮ ಶುಭನಾಮಧೇಯವನ್ನು ಉತ್ತಮ ಎಂದು ಪರಿಗಣಿಸಿದರು. ಒಳಿತನ್ನು ಮಾಡುವವರು, ಜೀವವನ್ನು ಒತ್ತೆ ಇಡುವವರು, ಆಜ್ಞಾ ಪರಿಪಾಲಕರು ಬರೆಹಗಾರರು, ಬಾದಶಹನ ಸಿಬ್ಬಂದಿ ಯವರು ಎಲ್ಲರೂ ಬಾದಶಹನ ಆಜ್ಞೆಯ ಮೇರೆಗೆ ಒಂದು ದೊಡ್ಡ ಕಾರ್ಯಕ್ರಮವನ್ನು ಹಾಗೂ ಉತ್ತಮ ಸಭೆಯ ಆಯೋಜನೆಯನ್ನು ಮಾಡಿ ಇಡೀ ಭೂಖಂಡವನ್ನು ಶೋಭಾಯಮಾನವನ್ನಾಗಿ ಬೆಳಗಿಸಿದರು. ಹೇಗೆಂದರೆ, ದೀಪದ ಬೆಳಕಿನಿಂದ ಅದ್ಭುತವಾದ ಆಕಾಶದ ನಕ್ಷತ್ರಗಳು ಉದುರಿಬಿದ್ದವು. ವಿವಿಧ ರೀತಿಯ ಪಟಾಕಿಗಳ ವಿದ್ಯೆಯನ್ನು ಬಲ್ಲವರು ತಮ್ಮ ಕೌಶಲ್ಯವನ್ನು ಪ್ರದರ್ಶಿಸಿದರು. ಇಂತಹ ಮೇಣದ ಬತ್ತಿಯನ್ನು ಕೊಟ್ಟ ನಂತರ ದೀಪದ ಗೊಂಚಲು ಮಾಣಿಕ್ಯದ ದೀಪದಂತೆ ಹಾಗೂ ಪಚ್ಚೆಯ ಬೆಳಕಿಗಿಂತಲೂ ಹೆಚ್ಚು ಅಂದವಾಗಿ ಕಂಡುಬಂದವು ಹಾಗೂ ನೋಡುಗರ ನೋಟವು ಅದರ ಒಂದು ಝಲಕ್ ಹಾಗೂ ನೆರಳನ್ನು ಸ್ವರ್ಗದ ತೋಟ ಎಂದು ಕರೆದರು. ನಿರಂತರವಾದ ಕಿಡಿಗಳ ಅಗ್ನಿಯಾಟದ ಕೌಶಲ್ಯದ ದೆಸೆಯಿಂದ ಬೆಂಕಿಯ ತೋಟವೇನೋ ಎಂಬಂತೆ ಕಂಗೊಳಿಸತೊಡಗಿತು. ಆಕಾಶದಲ್ಲಿ ಸಂಚರಿಸುವವರು ಬೆಳಕಿನ ಹೂವುಗಳನ್ನು ಪರಿಸರದಲ್ಲಿ ಚೆಲ್ಲಿರುವರೋ ಮತ್ತು ಪ್ರತಿ ಕ್ಷಣವೂ ತಣ್ಣನೆಯ ಪ್ರಿಯತಮನಾಗಿರುವನೋ ಹಾಗೂ ಹೂವುಗಳ ಬಣ್ಣಗಳಿಂದ ಆವೃತನಾಗಿರುವನೋ ತಾಜಾತನದಲ್ಲಿ ಸದಾ ವಸಂತದ ಋತುವಿನಂತೆ ಕಂಗೊಳಿಸುತ್ತಿದ್ದನು.

ಏನು ಬೆಂಕಿ ಇದು ಜ್ವಾಲೆಗಿಂತ ಮಿಗಿಲು
ಮತ್ತು ಆಕಾಶದೆತ್ತರಕೆ ಚಿಮ್ಮುವುದು.
ಒಂದು ಕ್ಷಣದಲಿ ತೋಟವು
ಕಂಗೊಳಿಸಲಾರಂಭಿಸುವುದು.

ಎಂತಹ ತೋಟವಿದು ತನ್ನೊಡನೆ ವಸಂತ
ಋತುವು ಆಕಾಶ ನೀಲಿ ಬಣ್ಣಕೆ ತಿರುಗಿದಾಗ
ಆಕಾಶದ ನಕ್ಷತ್ರಗಳು ನೆಲಕೆ ಚೆಲ್ಲಿವೆ
ಎಂದು ತಿಳಿಯುವುದು.

ಆಕಾಶದ ನಕ್ಷತ್ರಗಳು ಲಜ್ಜೆಯಿಂದ ನಾಚಿ ಸ್ವಯಂ ಕೆಳಗೆ ಬೀಳುತ್ತಿರುವಂತೆ, ಅದರ ಚಂದ್ರನಂತಹ ನಕ್ಷತ್ರವು ಎಂತಹ ಸೂರ್ಯನೆಂದರೆ, ಪ್ರಕಾಶಮಯ ಸೂರ್ಯನೊಂದಿಗೆ ಕೈ ಮಿಲಾಯಿಸುತ್ತದೆ. ಅಂದರೆ , ಪ್ರಪಂಚವನ್ನು ಪ್ರಕಾಶಮಯವನ್ನಾಗಿಸುವ ಚಂದ್ರನು ಆ ಸೂರ್ಯನ ಮುಖಾಬಿಲೆಯಲ್ಲಿ ನಿಕೃಷ್ಟ ಕಪ್ಪು ಹೊಗೆಗಿಂತಲೂ ಹೆಚ್ಚು ಕಡು ಗಪ್ಪಾಗಿ ಕಂಡು ಬರುತ್ತಾನೆ.

ಸೂರ್ಯನಿಗಿಂತಲೂ ಹೆಚ್ಚು ಬೆಳಗುವ ಚಂದ್ರನೇನಿದ್ದರೂ
ಅವನ ಸಭ್ಯತೆಯ ಪುಷ್ಪವು ಪ್ರಕಟವಾದಲ್ಲಿ
ಬೆಳಗುವ ಹೃದಯದ ಪ್ರಕಾಶದಿಂದ
ಹೃದಯ ಹೊರಬರುವುದು.

ಕಿಟಕಿ ಬಾಗಿಲುಗಳು, ಮನೆ ಮತ್ತು ಬಂಗಲೆ ಹಾಗೂ ಅರಮನೆಗಳ ಮೇಲೆ ನಿರಂತರವಾಗಿ ಮಶಾಲುಗಳು ಬೆಳಗಲಾರಂಭಿಸಿದವು ಅವುಗಳ ಬೆಳಕಿನ ತೀವ್ರತೆಯಿಂದ ಆಕಾಶದ ಚುಕ್ಕಿಗಳ ಚಲನೆಯ ತಜ್ಞರು ಯಾವುದೇ ಯಂತ್ರದ ನೆರವಿಲ್ಲದೆ, ಗ್ರಹಗಳ ಚಲನವಲನ ಹಾಗೂ ಸ್ಥಿರವಾದ ನಕ್ಷತ್ರಗಳ ವಾಸ್ತವತೆಯನ್ನು ಮತ್ತು ಸೂಕ್ಷ್ಮತೆಗಳನ್ನು ಚೆನ್ನಾಗಿ ಅರಿತರು ಮತ್ತು ಅದರ ವಿಶ್ವವಿಖ್ಯಾತ ಕಿರಣಗಳ ಚಮತ್ಕಾರದಿಂದ ಕಪ್ಪು ಹೃದಯ, ಕೆಡುಕಿನ ಆಂತರ್ಯದ ಭ್ರಷ್ಟ ಆತ್ಮವನ್ನು ಹೊಂದಿದ ಜನರು ಭೂಮಿಯ ಅಮೂಲ್ಯ ಖಜಾನೆಗಳನ್ನು ಅಮೂಲ್ಯ ಮುತ್ತು, ಎಣೆ ಇಲ್ಲದ ಸುಂದರ ವಜ್ರ ವೈಢೂರ್ಯಗಳನ್ನು ಹಾಗೂ ಗಣಿಗಳಲ್ಲಿ ಹಾಗೂ ಆಳಸಮುದ್ರದಲ್ಲಿ ಹುದುಗಿರುವ ನಿಕ್ಷೇಪಗಳು ಬೀರಿದ ಪ್ರತಿಫಲನದಿಂದ ಜನತೆ ಸಿಂಗಾರಗೊಳ್ಳಲು ಕನ್ನಡಿಯೆದುರು ತಮ್ಮ ಕೈ ಚಾಚಲಿಲ್ಲ.

ಸುಲೇಮಾನ್ ರೆಹಮತ್‌ನ ಸೂರ್ಯನೋಪಾದಿಯ ಹೆಸರು ಎಲ್ಲರ ನಡುವೆ ಹೊಳೆಯುವ ನಕ್ಷತ್ರದಂತೆ ಬೆಳಗುತ್ತಿರಲು, ಆ ಜನರು ಆರ್ತತೆ ಹಾಗೂ ಕ್ರೌರ್ಯ

ಮತ್ತು ಹಿಂಸೆಯ ಸೆರೆಯಾಳುಗಳಾಗಿದ್ದರು ಮತ್ತು ತಮ್ಮ ಪ್ರಿಯ ಬದುಕಿನ ಉಳಿವಿಗಾಗಿ ಹಾಗೂ ಗುರಿಯೆಂಬ ಪ್ರಿಯತಮೆಯನ್ನು ಪಡೆಯುವ ಸಲುವಾಗಿ ಭರವಸೆಯ ನೋಟದೊಂದಿಗೆ ನಿರಪೇಕ್ಷತೆ ಮತ್ತು ಸಂತೃಪ್ತಿಯ ಕ್ಷೇತ್ರದಲ್ಲಿ ಸೌಂದರ್ಯ ಹಾಗೂ ಪವಾಡದ ರಾಜಧಾನಿಯ ಪ್ರಿಯತಮೆಯಂತೆ ಮೆಲ್ಲಮೆಲ್ಲನೆ ಅವರ ಕರುಣೆ ಮತ್ತು ನ್ಯಾಯದ ಆಕಾಂಕ್ಷಿಗಳಾದರು. ಹೀಗೆ, ಮೋಸ ಪಿತೂರಿ ಮತ್ತು ದಂಗೆಯ ಕಾಲವು ಹೃದಯ ಹೀನ, ಯಾತನೆ ಮತ್ತು ಮೋಸದಿಂದ ಕೂಡಿತ್ತು. ನಷ್ಟದ ವೇದಿಕೆಯು ಆ ಮೂಲಕ ಬಂದ್ ಆಯಿತು. ಶೋಷಣೆ ಮತ್ತು ಹಿಂಸೆಯ ಧೂಳು ನೀಚ ಹಾಗೂ ಕ್ರೌರ್ಯವು ಆಕಾಶದಲ್ಲಿ ಕಂಡುಬರುವ ಆಕಾಶ ಗಂಗೆಯ ಪಕ್ಕದ ಪ್ರಕಾಶಮಾನವಾದ ಕೆಂಪು ನಕ್ಷತ್ರ ಪುಂಜದ ಎತ್ತರದ ಮಟ್ಟಕ್ಕೆ ತಲುಪಿತ್ತು. ಆ ಬಾದಶಹನ ಕರುಣೆಯ ಕೊಡುಗೆಗಳು ಮತ್ತು ಇನಾಮುಗಳ ಮೋಡಗಳ ಹನಿಯುವಿಕೆಯಿಂದ ವರ್ಷಾಧಾರೆಯಂತೆ ಕೆಳಗೆ ಇಳಿದಿತ್ತು.(ನಾಶವಾಗಿತ್ತು) ಅಪೇಕ್ಷೆಗಳು ಹಾಗೂ ನಿರೀಕ್ಷೆಗಳ ಮೊಗ್ಗುಗಳು ಅವರ ದಯೆ ಮತ್ತು ಕರುಣೆಯ ಆಹ್ಲಾದಕರ ಬೆಳಗಿನ ತಂಗಾಳಿಯ ಅಲೆಯೊಡನೆ ಅರಳ ತೊಡಗಿದವು. ಹಾಗೂ ಬಡತನ ಮತ್ತು ಅಸಹಾಯಕತೆಯಿಂದ ದಿಕ್ಕು ಕಾಣದೆ ಇದ್ದ ಜನರ ಬಯಕೆಗಳು ಪೂರ್ಣಗೊಳ್ಳುವ ಕಾಲ ಸನಿಹವಾಯಿತು.

ಇಡೀ ವಿಶ್ವವೇ ಅವರ ದಾನಧರ್ಮದಿಂದ
ಆಶ್ಚರ್ಯ ಚಕಿತವಾಯಿತು.
ಮೋಡದ ವಸಂತದ ದೆಸೆಯಿಂದ
ಹೂವಿನಂತೆ ಮುಗುಳುನಗೆ ಬೀರತೊಡಗಿದರು.

ಜನಾಬ್ ಘಾಜಿ ಬಾದಶಹರವರ ವಯಸ್ಸು ೯ವರ್ಷಕ್ಕೆ ತಲುಪಿದಾಗ. ಶ್ರೀಮಂತ ಸ್ವರ್ಗವಾಸಿ ರಿಜ್ವಾನ್ ದಸ್ತಗಾಹ್‌ರವರು ೧೦೫೬ನೆ ವರ್ಷದ ರಬಿಯುಸ್ಸಾನಿ ತಿಂಗಳ ೨೯ನೇ ತಾರೀಖಿನ ಗುರುವಾರದಂದು, ಅವರ ಹುಟ್ಟುಹಬ್ಬವನ್ನು ಆಚರಿಸುವ ಸಲುವಾಗಿ ಒಂದು ಕಾರ್ಯಕ್ರಮವನ್ನು ಆಯೋಜನೆ ಮಾಡಿದ್ದು, ಒಂದು ಸಂತೋಷಕೂಟವನ್ನು ವ್ಯವಸ್ಥೆ ಮಾಡಿದರು ಹಾಗೂ ಆ ಪರಿಚಿತರ ಮತ್ತು ಚಿಂತಕರು ಕೂಡಿದ ಸಭೆಯಲ್ಲಿ ಏರು ಜವ್ವನದ ಸೂರ್ಯನ ಅಲ್ಲಾಹನ ಕರುಣೆಯ ಬಾನಂಗಳದ ಹೊಳೆಯುವ ಚಂದ್ರನಿಗೆ ಉತ್ಕೃಷ್ಟವಾದ ಅಲಂಕೃತವಾದ ತಕ್ಕಡಿಯಲ್ಲಿ ತೂಗಿದರು. ಅದರ ಅಂದ ಚೆಂದ ಮತ್ತು ತೇಜಸ್ಸು ಚಂದ್ರ ಮತ್ತು ಸೂರ್ಯನು ಒಟ್ಟಿಗೆ ಸೇರಿ, ಸನ್ಮಾನಮಾಡಿದರೂ ಆ ಮಟ್ಟವನ್ನು ತಲುಪಲು ಸಾಧ್ಯವಾಗಲಿಲ್ಲ. ಸಪ್ತನಕ್ಷತ್ರಗಳ ಛಾಯಾಪಥವು ಈ ಹಗ್ಗ ಅಥವಾ ಕುಣಿಕೆಗೂ ಶೋಭೆಯನ್ನು ನೀಡುವಂತಿತ್ತು. ತಮ್ಮ ಭಾರಿಗಾತ್ರದ ನೀಳ ಕಾಯದ ಸಮಾನ ಬಂಗಾರ ಹಾಗೂ ಅಗಣಿತ ಮುತು-ರತ್ನ ಅನರ್ಘ್ಯ ಹರಳುಗಳನ್ನು ಹಾಗೂ ಬೆಳ್ಳಿ ಬಂಗಾರವನ್ನು ಎಲ್ಲಾ ದೊಡ್ಡ ಮತ್ತು ಚಿಕ್ಕ ನಗರವಾಸಿಗಳು ಮತ್ತು ಗ್ರಾಮಸ್ಥರ ನಡುವೆ ಹಂಚಲಾಯಿತು.

ಪ್ರಕಾಶದ ರೀತಿಯಲ್ಲಿ ತಕ್ಕಡಿಯ ಮೇಲೆ ಬೆಳಗತೊಡಗಿದರು.
ಇಡೀ ವಿಶ್ವವೇ ಅವನ ನೆರಳಿನಲ್ಲಿ ಹೂತೋಟವಾಗಿ ಅರಳಿತು.

ಅವರೆಲ್ಲರೂ ತೂಕ ಮಾಡುವ ಸಲುವಾಗಿ ತಕ್ಕಡಿಯಲ್ಲಿ ಕೂರಿಸಿದಾಗ
ಸೆರಗಿನ ಮೇಲೆ ವಜ್ರವೈಢೂರ್ಯವ ಹರಡಿ ಬಿಟ್ಟರು.

■

*

ಅಧ್ಯಾಯ-೬

ಹಜರತ್ ಬಾದಶಹ ಅಲಿ ಆದಿಲಶಹನ ಪಟ್ಟಾಭಿಷೇಕ

ಪಾರಮಾರ್ಥಿಕ ಚಿಂತನೆಯನ್ನು ಮಾಡುವ ದೇಶಗಳ ಮೇಲೆ ಆಡಳಿತ ನಡೆಸುವ ಅಧಿಕಾರಸ್ಥರು ಮತ್ತು ಸಂಪರ್ಕ ಯೋಜನೆಯಲ್ಲಿ ದುರ್ಬಲರಾಗಿರುವ ವ್ಯಕ್ತಿಗಳು ಶುಭ್ರ ಹೃದಯಗಳಲ್ಲಿ ಮರೆಯಾಗುವುದಿಲ್ಲ. ಏಕೆಂದರೆ ಆಕಾಶದ ಭವ್ಯತೆಯನ್ನು ಹೊಂದಿರುವ ಬಾದಶಹರ ಪ್ರಮುಖ ಗುರಿ ಹಾಗೂ ನ್ಯಾಯಪರ ಬಾದಶಹರ ಅಂತಿಮ ಗುರಿ ಏನಾಗಿತ್ತೆಂದರೆ ಭಗವಂತನ ಪಾನಗೃಹದ ಪಾನಪ್ರಿಯರು ಮತ್ತು ಅದ್ವಿತೀಯ ಅನುಗ್ರಹದ ಪಾನಗೃಹದ ಅತಿಥಿಗಳಾಗಿದ್ದಾರೆ. ಈ ಪ್ರತಿಷ್ಠಿತ ಗುಂಪು ದೇಶದ ಆಡಳಿತದ ಶುದ್ಧ ಶರಾಬಿನ ಗುಟುಕಿನ ಅಮಲು ಸೂಕ್ತ ಎಚ್ಚರಿಕೆ ಹಾಗೂ ನೆಮ್ಮದಿಯ ಗೆಳೆಯನ ನಶೆಯಿಂದ ಪರಿವೆಯಿಲ್ಲದೆ ಇಡೀ ಪ್ರಭುತ್ವದ ಮೇಲೆ ಆವರಿಸಿಕೊಳ್ಳುವಂತಹದಾಗಿದೆ. ದಾನಧರ್ಮಗಳ ಬುನಾದಿಯು ಮೋಸ, ವಂಚನೆ ಹಾಗೂ ದಂಗೆಯ ಮನೆಗಳನ್ನು ನಾಶಮಾಡುವುದು, ಧಾರ್ಮಿಕತೆ ಹಾಗೂ ಶರೀಯತ್‌ನ ಬಾವುಟಗಳನ್ನು ಮೇಲೇರಿಸುವುದು ನಾಸ್ತಿಕತೆ ಹಾಗೂ ಅಜ್ಞಾನದ ಬುನಾದಿಯನ್ನು ದೈವಭಕ್ತಿ ಮತ್ತು ಧೈವಜ್ಞಾನದ ಸುಂದರ ಮಾರ್ಗದ ಮೂಲಕ ವಿನಾಶಗೊಳಿಸುವುದು ಮಾಲಿನ್ಯದ ಅಂಶಗಳಿಂದ ಮುಕ್ತಗೊಳ್ಳುವುದಾಗಿದೆ. ಹಾಗೂ ಪ್ರಾಣಿಯಂತಹ ಸ್ವಬಾವ ಮತ್ತು ಆಕರ್ಷಣೆಗಳು ಭಗವಂತನ ಅಸ್ತಿತ್ವಕ್ಕೆ ಹಾನಿಯನ್ನುಂಟು ಮಾಡುವಂತಹದಾಗಿದೆ. ಅಂತಹ ನಿಲುವನ್ನು ಹೊಂದಿದವರು ದೇವರ ಕೊಡುಗೆಯ ಸ್ವಾದದಿಂದ ವಂಚಿತರಾಗುತ್ತಾರೆ.

ಈ ಕಾರಣದಿಂದ ದೈವೇಚ್ಛೆಯ ಬಲದಿಂದ ಮತ್ತು ವಿಧಿ ಲಿಖಿತದ ದೆಸೆಯಿಂದ ಕೆಲವು ವರ್ಷಗಳ ಕಾಲ ಈ ನಾಶವಾಗತಕ್ಕ ಅರಮನೆಯು ಲಯಗೊಳ್ಳುವ

ಮನೋರಂಜನೆಯ ಎದುರಿನಲ್ಲಿ ಯಾವುದೇ ಯೋಗ್ಯತೆ ಹಾಗೂ ಮಹತ್ವವನ್ನು ಹೊಂದಿರುವುದಿಲ್ಲ. ನ್ಯಾಯನಿಷ್ಠೆ ಮತ್ತು ನ್ಯಾಯ ಪರಿಪಾಲನೆಯ ಮೂಲಕ ಸ್ವರ್ಗ ಸಾಧನೆಯ ಹಾದಿಯಲ್ಲಿ ಈರ್ಷ್ಯೆ ಪಡುವಂತಹ ಗುಣ ಧರ್ಮಗಳನ್ನು ಹೊಂದಿದ್ದು, ಹೆಮ್ಮೆಯಿಂದ ಕೂಡಿ ಆಜ್ಞೆಗಳನ್ನು ಜಾರಿಗೊಳಿಸಿ, ಬಾದಶಹನ ಆಜ್ಞೆಗಳನ್ನು ಶಿರಸಾವಹಿಸಿ ಪಾಲಿಸುವುದಾಗಿದೆ. ಏಕೆಂದರೆ ಅವರ ಉನ್ನತ ಆದೇಶಗಳ ಮೂಲಕ ದೊರಕದ ವಾಸ್ತವತೆ ದುರವಸ್ಥೆಯ ಅಲ್ಪಜ್ಞಾನದ, ದುರ್ಬಲ ಕಲೆ ಮತ್ತು ಖಂಡಿತವಾದಿ ಗುಣ ಹೊಂದಿರುವ ಹಾಗೂ ದೈಹಿಕ ಅಭೀಪ್ಸೆ ಮತ್ತು ಲೈಂಗಿಕ ತೃಷೆಯನ್ನು ಹೊಂದಿರುವ ಬಂಗಾರವ ಕುದಿಸಿ ಕಾಯಿಸಿ ಕಪಟತನ ಮತ್ತು ಅಂಧಕಾರದ ಕೇಡಿನಿಂದ ತುಂಬಿ ತುಳುಕುತ್ತಿದೆ. ಪ್ರಕೃತಿಯ ಬಂಗಾರವನ್ನು ಸಿಂಪಡಿಸಿ ದೈವಪ್ರೇರಣೆಯ ನಗರಗಳನ್ನು ಒಲಿಸಿಕೊಂಡು ನ್ಯಾಯಪರತೆಯ ಸಂತೆಯ ಸರಾಫರಿಂದ ನಿರ್ಮಿಸಲ್ಪಟ್ಟ ಪರಿಶುದ್ಧ ಒರೆಗಲ್ಲು ಆಗಿದೆ. ಮತ್ತು ಅವರ ಮಾರ್ಗದರ್ಶನ ಹಾಗೂ ಸದ್ಬುದ್ಧಿಯು ಅಜ್ಞಾನದ ಕಾಡು ಪ್ರಾಣಿಗಳು ಹಾಗೂ ಪಕ್ಷಿಯಂತಹ ವ್ಯಕ್ತಿಗಳಿಗೆ ಶಿಕಾರಿಗಳ ಸರ್ದಾರರು ಕ್ರೌರ್ಯ ಮತ್ತು ದುರ್ಮಾರ್ಗದ ಕೃತ್ಯಗಳನ್ನು ಎಸೆಗಲು ತಹತಹಿಸುವವರಾಗಿದ್ದಾರೆ. ಜನನಿಬಿಡ ಸ್ಥಳಗಳಲ್ಲಿ ವಾಸಿಸುವವರು.

ಕಾನೂನನ್ನು ಪರಿಪಾಲಿಸದವರಿಗೆ ಸೆರೆಮನೆಯೇ ಆಸರೆಯಾಗುತ್ತದೆ. ಅವರಿಗೆ ಮಾರ್ಗದರ್ಶನ ಹಾಗೂ ತರಬೇತಿಯ ನೆರವಿನ ಹಸ್ತವನ್ನು ನೀಡಿದ್ದು, ಅವರಿಗೆ ನ್ಯಾಯ ಪರತೆಯ ಹಾದಿಯಲ್ಲಿ ನಿಯುಕ್ತಿ ಮಾಡಿ ದೈವನಿಷ್ಠೆಯ ಪಂಜರದಲ್ಲಿ ಆರಾಮವಾಗಿರುವಂತೆ ಕೂಡಿಡತಕ್ಕದ್ದು.

ಈ ಉದ್ದೇಶದ ಸಾಧನೆಯ ನಂತರ ನೈಜ ಅನುಯಾಯಿಗಳು ಮತ್ತು ತಮ್ಮ ಕಣ್ಣಿನ ಬೆಳಕಾದ ಪುತ್ರನಲ್ಲಿ ಜನತೆ ಹಾಗೂ ಹಕ್ಕುದಾರರು ಮತ್ತು ರಾಜ್ಯದ ಬೆಂಬಲಿಗರ ಕಟ್ಟಡವನ್ನು ವೀಕ್ಷಿಸುತ್ತಿದ್ದಾರೆ. ಅವರನ್ನು ತಮ್ಮ ವಾರೀಸುದಾರ ಹಾಗೂ ಯುವರಾಜನನ್ನಾಗಿ ಮಾಡಿ ಕಾಡು ಮತ್ತು ನಾಶವಾಗುವ ಮರಳುಗಾಡಿನಿಂದ ಶಾಶ್ವತ ಲೋಕದತ್ತ ಮುನ್ನಡೆದು ಸತ್ಯಲೋಕದ ಒಡೆಯನ ಮುಂದೆ ಸಾಷ್ಟಾಂಗ ಎಸೆಗುವವರಾಗುತ್ತಾರೆ. ಮತ್ತು ಈ ಮಾತುಕತೆಯನ್ನು ಧೃಢೀಕರಿಸುವವರು ಹಾಗೂ ಈ ಸಂಗತಿಗಳ ಸಾಕ್ಷಿಗಳಾಗುತ್ತಾರೆ. ಮತ್ತು ಹಜರತ್ ಸ್ವರ್ಗವಾಸೀ ರಿಜ್ವಾನ್ ದಸ್ತಗಾಹ್‌ರವರ ಮರಣದ ಯಾತನೆಯ ಸತ್ಯ ವೃತ್ತಾಂತವನ್ನು ವಿವರಿಸಲಾಗಿದೆ. ಆ ಬಾದಶಹ ಘಾಜಿಯು ದೇಶದ ಪ್ರಭುತ್ವವನ್ನು ಪಡೆದು ಸಿಂಹಾಸನವನ್ನು ಏರುವುದು ಮತ್ತು ಆ ನಿಟ್ಟಿನಲ್ಲಿ ಕ್ರಿಯಾಶೀಲರಾಗುವ ವಿಶಿಷ್ಟ ಪ್ರಸಂಗವು ನಡೆಯಿತು. ಇದರಿಂದ ಬರವಣಿಗೆಯ ಕ್ಷೇತ್ರದಲ್ಲಿ ಲೇಖನಿಯ ಪ್ರವಾಹಕ್ಕೆ ಲಗಾಮು ಹಾಕಲು ಮುಂದಿನ ಪ್ರಹಸನಗಳತ್ತ ನವೋತ್ಸಾಹದಿಂದ ತರಲಾಗಿದೆ. ಹಜರತ್ ಸ್ವರ್ಗವಾಸಿ ನೂರುಲ್ಲಾ

ಮರ್ಖದ ಮರ್ಘ್‌ಜಲಿ ಮೂವತ್ತು ವರ್ಷಗಳವರೆಗೆ ರಾಜ ಸಿಂಹಾಸನದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಎಂದಿಗೂ ಇತರೆ ಜನರೊಂದಿಗೆ ಒರಟು ವರ್ತನೆಯಿಂದ ನಡೆದುಕೊಳ್ಳಲಿಲ್ಲ. ಅಸಲಿಗೆ ಒರಟು ವರ್ತನೆ ಮತ್ತು ದುರ್ವರ್ತನೆಯು ಮುಂದಿನ ಪರಿಣಾಮಗಳ ಬಗ್ಗೆ ಅರಿವು ಹೊಂದದ, ಕೀಳರಿಮೆಯನ್ನು ಹೊಂದಿದ ಸಂಪೂರ್ಣ ಕೆಡುಕು ಮತ್ತು ನೀಚತನದಿಂದ ಕೂಡಿದ ಜನರ ಸ್ವಭಾವವಾಗಿದೆ. ಇಸ್ಲಾಮಿ ಆಶಯ ಹಾಗೂ ಪ್ರವಾದಿಯವರ ಸಮುದಾಯದ ನಿಯಮಗಳ ವಿರುದ್ಧ ಯಾರಿಗೂ ಎಂದಿಗೂ ಸಜೆಯನ್ನು ನೀಡುವ ಇರಾದೆಯನ್ನು ಮಾಡಲಿಲ್ಲ. ಬೇಡುವ ಅಸಹಾಯಕತೆಯು ಕ್ರೂರ ಜಂತುವಿನ ನಖಗಳಿಂದ ಯಾವ ಜನರು ಗಾಯಗೊಂಡಿದ್ದರೋ ನಿರಪೇಕ್ಷತೆ, ಗುರಿತಲುಪುವಿಕೆ ಹಾಗೂ ಭರವಸೆಯ ಸೀಮುರುಘ್ ಎಂಬ ಕಾಲ್ಪನಿಕ ಪಕ್ಷಿಯ ಬೇಟೆ ಮಾಡುವ ಹಂಬಲ ಪಡೆದ. ಹಾಗೂ ನಿರಪೇಕ್ಷತೆ ಮತ್ತು ಅಪೇಕ್ಷೆಯ ಪೂರೈಕೆ ಎಂಬ ಗರುಡನ ಬೇಟೆಯಾಡುವ ಆಲೋಚನೆಯಲ್ಲಿ ತೊಡಗಿದರು ಮತ್ತು ಯಾಚನೆಯ ಹೆಜ್ಜೆಗಳನ್ನು ಬಾನೆತ್ತರಕೆ ಚಾಚಿ ಭರವಸೆ ಹಾಗೂ ಬಯಕೆಯ ಅಮೂಲ್ಯ ಮುತ್ತುಗಳನ್ನು ಯಾರ ನೆರವನ್ನು ಪಡೆಯದೆ, ತೀವ್ರ ಅಪೇಕ್ಷೆ ಹಾಗೂ ನಿರಂತರ ಪ್ರಯತ್ನದ ಜೇಬಿನಿಂದ ಸಾಧಿಸಿದರು. ಅದೇ ಹೊತ್ತಿನಲ್ಲಿ ಬಾದಶಹನು ವಾಸ್ತವತೆಯ ಕ್ಷೇತ್ರದಲ್ಲಿ ವಿವೇಚನೆಯ ಕುದುರೆಯನ್ನು ದೌಡಾಯಿಸಿ, ಧರ್ಮವೇತ್ತ ಗೌರವಾನ್ವಿತ ಪ್ರತಿಷ್ಠೆಯ ವೇದಿಕೆಯ ಮೇಲೆ ವಿರಾಜಮಾನನಾಗಿ ಪ್ರೌಢಹಾಗೂ ಮೇಧಾವಿ ದೃಷ್ಟಿಕೋನವನ್ನು ಹೊಂದಿದ್ದು ವಿವೇಚನೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಹಜರತ್ ಫಿರ್ದೋಸ್ ಮಕಾನಿಯ ಮೇಲೆ ಅಲ್ಲಾಹನ ಅಪಾರ ಕೊಡುಗೆಗಳಿದ್ದವು. ಉತ್ತಮಕುಲದ ಉತ್ಕೃಷ್ಟ ನಕ್ಷತ್ರದಂತಹ ರಾಜಕುಮಾರನ ಮೋರೆಯ ಮೇಲೆ ತೇಜಸ್ಸಿನ ಸೂರ್ಯನು ಹೊಳೆಯುವುದನ್ನು ಗಮನಿಸಿ ತರಬೇತಿ ಹಾಗೂ ಮಾರ್ಗದರ್ಶನದ ಸಂದರ್ಭದಲ್ಲಿ ವಿಶೇಷವಾಗಿ ಅರಮನೆಯ ಜನರು ಮತ್ತು ಜೀವವನ್ನು ಬಲಿಕೊಡಲು ಸಿದ್ಧರಾದ ಬೆಂಬಲಿಗರಿಗೆ ಹುಕುಮು ನೀಡಿದ್ದು, ಲೋಕದಲ್ಲಿ ರಾಜ ಮಹಾರಾಜರು ತಮಗೆ ಸಿಕ್ಕಿರುವ ಪ್ರಭುತ್ವವನ್ನು ತಮ್ಮ ದೈಹಿಕ ಕಾಮನೆಗಳ ಮಾರ್ಗ ಎಂತಲೂ ಸಂಪತ್ತನ್ನು ದೈಹಿಕ ಲಂಪಟತನದ ಬಳುವಳಿ ಎಂತಲೂ ತಿಳಿಯುತ್ತಾರೆ.

ಮತ್ತು ಈ ನಶ್ವರ ಸ್ಥಿತಿಯ ಮೆಟ್ಟಿಲುಗಳನ್ನು ಏರುವುದರ ವಿನಃ ದುಃಖ ಹಾಗೂ ಸಂಕಷ್ಟಗಳ ಮೆಟ್ಟಿಲನ್ನು ಹತ್ತದೆ ಮಾನಸಿಕ ಕ್ಲೇಶದ ಹೊರತು ಅವರ ಎದುರಿಗೆ ಇನ್ನು ಯಾವ ಮಾರ್ಗವೂ ತೆರೆದುಕೊಳ್ಳಲಿಲ್ಲ. ಒಂದು ವೇಳೆ ತಮ್ಮ ಶೌರ್ಯ ಪ್ರದರ್ಶನದ ಮೂಲಕ ಸೂಕ್ತವಾತಾವರಣವನ್ನು ಸೃಷ್ಟಿಸಿ, ಭೂಮಿಯ ಮೇಲೆ ಅಧಿಕಾರವನ್ನು ಪಡೆದು ತನ್ನ ಆಳ್ವಿಕೆಯ ಎಲ್ಲಾ ಸಾಮಂತರು ಸರದಾರರು,

ಪೆಹಲವಾನರ ಭುಜಗಳ ಮೇಲೆ ತನ್ನ ವಿಧೇಯತೆ ಚಾದರವನ್ನು ಹೊದಿಸಿ ನಂಬಿಕೆ ಹಾಗೂ ಆಜ್ಞಾಪರಿಪಾಲಕರನ್ನಾಗಿ ತನ್ನ ವೃತ್ತವನ್ನು ರಚಿಸಿಕೊಂಡರು. ಬಚ್ಚಿಟ್ಟ ಜಮೀನುಗಳನ್ನು ತಮ್ಮ ಗೌರವಾನ್ವಿತ ಹೆಸರುಗಳಲ್ಲಿ ಕೆತ್ತಿಸಿ, ಖ್ಯಾತನಗರ ಪಟ್ಟಣ ಹಾಗೂ ಗ್ರಾಮಗಳಲ್ಲಿ ಸಾರಲಾಗಿದೆ. ಹಾಗೂ ಉಳಿಕೆ ಬಂಗಾರ ಮತ್ತು ಪಶು ಸಂಪತ್ತನ್ನು ಒಂದು ನಿಗದಿತ ಅವಧಿಗಾಗಿ ಒಂದೆಡೆ ಸೇರಿಸಲಾಯಿತು. ಆಟೋಟ, ಲಂಪಟತೆ ಹಾಗೂ ವಿಲಾಸಗಳಲ್ಲಿ ವೆಚ್ಚಮಾಡಿ, ಪ್ರಚಾರವನ್ನು ಪಡೆಯಲು ಇಚ್ಛಿಸುತ್ತಾರೆ.ಆ ಮೂಲಕ ಪ್ರಭುಗಳಿಗಿಂತಲೂ ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದು ತಮ್ಮ ಮೇಲರಿಮೆಯ ಅಹಂಕಾರದಿಂದ ಇಬ್ನೆಜಯಾದ್‌ನ ಹೆಸರನ್ನು ಖ್ಯಾತಿಯ ಪ್ರಚಾರದಿಂದ ಮಣ್ಣುಗೂಡಿಸುವ ಪ್ರಯತ್ನ ಮಾಡುತ್ತಾರೆ.

ಒಟ್ಟಾರೆ ಮೇಲೆ ಹೇಳಿದ ಜನರನ್ನು ರಾಜ್ಯದ ಹೆಮ್ಮೆಯ ಪುತ್ರರು ಹಾಗೂ ದೇಶದ ಕಣ್ಮಣಿಗಳು ಎಂದು ಹೇಳಲು ಸಾಧ್ಯವಿಲ್ಲ. ಬದಲಿಗೆ ವಿನಯವಂತಿಕೆ ಮತ್ತು ಉಚ್ಚ ನಕ್ಷತ್ರದವರಾಗಲು ತಮ್ಮ ಪ್ರಿಯ ಹಾಗೂ ಅಮೂಲ್ಯ ಕ್ಷಣಗಳನ್ನು ದುರ್ಬಲ ಜನತೆಯ ದುಃಖ ಪರಿಹಾರದ ದಿಕ್ಕಿನಲ್ಲಿ ತೊಡಗಿಸಿಕೊಂಡು, ದೀನದಲಿತರ ನೋವಿಗೆ ಸ್ಪಂದಿಸಿದಲ್ಲಿ, ಅವರ ಸಾರ್ಥಕ ಕ್ಷಣಗಳು ಅನಾಥರೊಡನೆ ಪ್ರೇಮ ಹಾಗೂ ಒಳಿತಿನ ಪ್ರೇರಕ ಶಕ್ತಿಯಾಗಿ ಪರಿವರ್ತನೆಯಾಗುತ್ತವೆ. ಸಾಮಾನ್ಯ ಹಾಗೂ ವಿಶೇಷ ಜನತೆಯ ಸೇವೆಯೇ ಯಾರ ಪ್ರಮುಖ ಕರ್ತವ್ಯವಾಗಿದೆಯೋ, ಹಾಗೂ ಸಮುದಾಯದ ಒಳಿತನ್ನು ಬಯಸುವವರಾಗಿರುವರೋ ಮತ್ತು ಶರೀಯತ್ತಿಗೆ ಅನುಗುಣವಾಗಿ ಪರಿಶುದ್ಧ ಬದುಕು ಇದೆಯೋ ವಿದ್ರೋಹಿ ದಂಗೆಕೋರರ ವಿರುದ್ಧ ಯಾರ ಇಸ್ಲಾಮೀ ಖಡ್ಗವು ಝಳಪಿಸುತ್ತದೆಯೋ ಆತನನ್ನು ತಾಜಾತನದ ಸಿರಿ ಸಂಪನ್ನ ಸಂತೃಪ್ತ ಜೀವಿ ಎಂದೆನ್ನಬಹುದು.

ಆ ಖಡ್ಗದ ಹರಿತ ಮೊನೆಯಿಂದ ನಾಸ್ತಿಕತೆಯ ಕಲೆಯು ಭೂಖಂಡದಿಂದ ಹೊಗೆಯಂತೆ ಮಾಯವಾಗಲಿ. ಇಂತಹ ವ್ಯಕ್ತಿಯು ರಾಜಸಿಂಹಾಸನದ ಮೇಲೆ ವಿರಾಜಮಾನಾಗಲು ಅರ್ಹ ಹಾಗೂ ಆತನನ್ನು ಅಧಿಕಾರದ ಹಕ್ಕುದಾರ ಎಂದು ತಿಳಿಯತಕ್ಕದ್ದು. ಹಾಗೂ ಮೇಲೆ ಹೇಳಿದ ಎಲ್ಲಾ ಸದ್ಗುಣಗಳ ಚಿಲುಮೆ ಮತ್ತು ಸದರಿ ಗುಣ ನಡತೆಯ ಕೇಂದ್ರವಾದ ವ್ಯಕ್ತಿಯು ಶ್ರೇಷ್ಠತೆಯ ಮತ್ತು ಸಫಲತೆಯ ಸಾಗರದ ಅನರ್ಘ್ಯ ಮುತ್ತುರತ್ನಗಳ ಸಹಕಾರವನ್ನು ರಾಜ್ಯದ ಪ್ರಭು ಎಂದು ತಿಳಿಯುವುದು. ತನ್ನ ಯುವರಾಜನನ್ನಾಗಿ ಮಾಡುವುದರ ಮೂಲಕ ಅಲ್ಲಾಹನ ಆದೇಶ ಮತ್ತು ಎಲ್ಲಾ ಕರುಣೆ ಹಾಗೂ ದಯೆಯ ಮಾಲೀಕನಿಂದ ನಿರೀಕ್ಷೆ ಮಾಡುವುದೇನೆಂದರೆ, ನನ್ನ ಆಯುಷ್ಯದ ಕೊನೆಯಾದನಂತರ ಈ ರಾಜ್ಯದ ಕರ್ತವ್ಯಗಳ ಫಲಿತಾಂಶ ಹಾಗೂ ಆಡಳಿತದ ಜವಾಬುದಾರಿಯು ಕಣ್ಣಿನ ಬೆಳಕು ಹಾಗೂ ಕಣ್ಣಿನ ತಂಪಾದ

ಈ ಯುವರಾಜನ ಭುಜಗಳ ಮೇಲಿರಲಿ. ಸ್ವರ್ಗವಾಸಿ ೧೦೩೬ನೇ ವರ್ಷದಲ್ಲಿ ಗೌರವಾನ್ವಿತ ವೃಕ್ಷಕ್ಕೆ ಅನಾರೋಗ್ಯದ ತೀವ್ರ ಬಿರುಗಾಳಿಯು ಕಿತ್ತೊಗೆಯಲು ಪ್ರಯತ್ನಿಸಿತು.

ಕ್ಷೇಮ ಮತ್ತು ಸೌಖ್ಯದ ಎಲೆಗಳನ್ನು ಹಾಗೂ ಆರೋಗ್ಯವೆಂಬ ಫಲಗಳನ್ನು ಎಸೆಯಲು ಆರಂಭಿಸಿತು. ಹಾಗೂ ಅನಾರೋಗ್ಯವೆಂಬ ದರೋಡೆಕೋರನು, ಜೀವನ್ಮರಣದ ಸಂತೆಯ ಕೀಳು ಇಡುಗಂಟು ಹಾಗೂ ನಗಣ್ಯ ವಸ್ತುವಾದ ಪ್ರೀತಿ, ಪ್ರಣಯ ಆನಂದವನ್ನು ಸಂಪೂರ್ಣನಾಶ ಮಾಡಿತು. ಸ್ವರ್ಗವಾಸಿಯಾದ ಬಾದಶಹರವರು ಆ ಪ್ರಾಣಾಂತಿಕ ದುಃಖ, ಯಾತನೆ, ಮತ್ತು ಸಂಕಷ್ಟಗಳು ಹಾಗೂ ಆರೋಗ್ಯದ ಕಟ್ಟಡವನ್ನು ನಿರ್ಜನವನ್ನಾಗಿ ಮಾಡುವ ಹಾಗೂ ಅಸ್ತಿತ್ವದ ಬುನಾದಿಯನ್ನು ನಿರ್ನಾಮ ಮಾಡುವವ ಎಂದು ತಿಳಿದು, ಭರವಸೆ ಇಡಬಹುದಾದ ಸರ್ವ ನಂಬಿಗಸ್ಥ ಜನರನ್ನು ಉದ್ಧೇಶಿಸಿ, ನನ್ನ ಹೃದಯಾಂತರಾಳದ ಆಸೆ ಏನೆಂದರೆ, ನನ್ನ ಬದುಕಿನ ನಕ್ಷತ್ರಗಳು ದೀರ್ಘ ಕಾಲದವರೆಗೆ ಉನ್ನತವಾಗಿ ಪ್ರಕಾಶಿಸಿದಲ್ಲಿ ಮತ್ತು ವಿನಾಶದ ಮೋಡವು ನನ್ನನ್ನು ಆವರಿಸಿ ರಹಸ್ಯವಾಗಿ ಇಡದಿದ್ದಲ್ಲಿ ಇಡೀ ಕರ್ನಾಟಕ ರಾಜ್ಯವು ಹೊಳೆಯುವ ಪ್ರಕಾಶಮಯ ಮೋರೆಯನ್ನು ಹೊಂದಿರುವ ತಜ್ಞ ಹಾಗೂ ಪ್ರೇಯಸಿಯ ಅಗಲುವಿಕೆಯಿಂದ ಕಗ್ಗತ್ತಲಿಗಿಂತಲೂ ಹೆಚ್ಚು ಘೋರ ಅಂಧಕಾರದಲ್ಲಿ ಮುಳುಗುತ್ತದೆ. ಹಾಗೂ ದುಷ್ಟರು ಮತ್ತು ಪಾಪಿಗಳ ಹೃದಯಗಳಿಗಿಂತಲೂ ಕಡುಕಪ್ಪಾಗಿದೆ. ಪ್ರಜ್ವಲಿಸುವ ಸೂರ್ಯನ ಉದಯದಿಂದ ಅಲ್ಪ ಅವಧಿಯಲ್ಲಿಯೇ ನವರಸದ ಹೊಸವರ್ಷದ ಉತ್ಸವದಂತೆ,ಬೆಳಗುವ ವಿಜಯೀ ಮುಂಜಾವಿನಂದು ಈದ್‌ನಂತೆ ಹೊಳೆಯುವ ಪ್ರಭೆಯನ್ನುಂಟು ಮಾಡುತ್ತೇನೆ. ಆದರೆ ಈಗ, ದುಷ್ಟ ಆಕಾಶವು ಬಯಸುವಂತೆ ಮೂಲಭೂತ ಘಟಕದ ನಂತರ ಸಮಚಿತ್ತತೆಯ ಗೋಡೆ ಅಂದರೆ ಯಾವುದು ರಾಜ್ಯಭಾರ, ಸಭೆಯ ಕೇಂದ್ರಬಿಂದು, ಆರೋಗ್ಯ ಮತ್ತು ಸ್ವಾಸ್ಥ್ಯ ಸಂತೋಷ ಮತ್ತು ಶೋಭೆಯ ಮಾರ್ಗವಾಗಿದೆ. ಅದರಲ್ಲಿ ಅಡೆತಡೆಯನ್ನುಂಟು ಮಾಡುವುದು ಮತ್ತು ದೌರ್ಬಲ್ಯ ಹಾಗೂ ಅಶಕ್ತತೆಯ ಕಲ್ಲಿನಿಂದ ಪಂಚೇದ್ರಿಯಗಳ ಗಟ್ಟಿನೆಲದ ಮೇಲೆ, ಯಾವುದು ಬಾದಶಹರ ನಾಡಿ ಮಿಡಿತದ ಬೇರು ಹಾಗೂ ವೈಭವೋಪೇತ ಒಡೆಯ ಉನ್ನತ ಗೌರವಸ್ಥಾನದ ಬಾದಶಹನ ಸೇವಕರಾಗಿದ್ದಾರೆ. ಗಾಯಗೊಳಿಸಿ. ಮತ್ತು ಅಸ್ತಿತ್ವದ ಒಲೆಯನ್ನು ಉರಿಸಲು ಅಗತ್ಯವಾದ ಉರುವಲಿನ ಸಲುವಾಗಿ ಬಿಸುಪು ಮತ್ತು ಆಯುಷ್ಯ ಹಾಗೂ ಬದುಕಿನ ಒಲೆಯನ್ನು ಬೆಚ್ಚಗಿಡುವ ಕ್ರಿಯೆಗೆ ಒಳಗಾಗುತ್ತದೆ. ಅದನ್ನು ಅನಾರೋಗ್ಯದ ತಣ್ಣೀರಿನಿಂದ ತಂಪು ಮಾಡಿ, ಪ್ರಿಯ ಸ್ವಭಾವಜನ್ಯ ದೇಹವೆಂಬ ರಾಜ್ಯದ ನಿಗಾವಣೆ ಮಾಡುವವರಾಗಿದ್ದಾರೆ. ಅವರ ಬರ ಹೊಗುವಿಕೆಯು ದ್ವಾರಗಳನ್ನು ಬಂದ್ ಮಾಡುತ್ತದೆ.

ಆದರೂ ನಾನು ಸರ್ವಶಕ್ತ ಭಗವಂತನ ತೀರ್ಮಾನಕ್ಕೆ ಬದ್ಧನಾಗಿದ್ದು, ಮತ್ತು ಆತನ ಆದೇಶಕ್ಕೆ ಮಣಿದು ನಾನು ಕೆಲವು ದಿನಗಳವರೆಗೆ ಯುದ್ಧರಂಗದ ಡೇರೆಗಳು ಹಾಗೂ ಪೆಂಡಾಲು ಸೇರಿದಂತೆ ಎಲ್ಲಾವಸ್ತುಗಳನ್ನು ಕ್ಷೇತ್ರದಲ್ಲಿ ಬಿಟ್ಟು ಅಲ್ಲಾಹನ ಅಸ್ತಿತ್ವವೊಂದೇ ಬಾಕಿ ಇರುವಂತಹದಾಗಿದೆ ಹಾಗೂ, ಅಲ್ಲಾಹನ ಹೊರತು ಉಳಿದ ಎಲ್ಲಾ ವಸ್ತುಗಳು ಅಂತ್ಯ ಕಾಣುತ್ತವೆ ಎಂಬ ವಾಸ್ತವತೆಯನ್ನು ಅರಿತು ಸರ್ವಶಕ್ತನ ಬಳಿ ಮರಳಲು ಹುಜೂರ್ ಪ್ರವಾದಿಯವರ ನೆರಳಾಗಲಿದ್ದೇನೆ.

ಒಂದು ವೇಳೆ ಗೌರವಾನ್ವಿತ ದೇಶಗಳ ಬಾದಶಹರು ಮತ್ತು ವೈಭವೋಪೇತ ಮಹಾರಾಜರ ಕ್ರಮವು ಇದೇ ಆಗಿದೆ. ಅಂದರೆ, ಅನಂತ ಜೀವನದತ್ತ ಪಯಣ ಸಾಗಿಸುವತ್ತ ಅವರ ಇಚ್ಛೆಯು, "ತನ್ನ ಪ್ರಭುವಿನತ್ತಮರಳು ಅವನ ಇಚ್ಛೆಯ ಮೇರೆಗೆ" ಎಂಬುದಕ್ಕೆ ಉತ್ತರವಾಗಿ ಸಂತೋಷ ಮತ್ತು ನೆಮ್ಮದಿಯನ್ನು ಪಡೆಯುವುದಾಗಿದೆ. ಅನೇಕ ಬುದ್ಧಿವಾದಗಳು ಹಾಗೂ ರಹಸ್ಯಗಳ ನಿಬಂಧನೆಗಳು ಕಷ್ಟ ಹಾಗೂ ಅಸಂಭಾವ್ಯದ ಕತ್ತಲ ಮನೆಯಲ್ಲಿ ಪಥಭ್ರಷ್ಟರಾಗಿರುವ ಜನರಿಗೆ ಮಾರ್ಗದರ್ಶನವನ್ನು ನೀಡುತ್ತವೆ. ಹಾಗೂ ಈಕ್ಷೇತ್ರದ ಬಾಯಾರಿದ ಜನರ ಉದ್ದೇಶಗಳಿಗೆ ನೀವು ಮೃಗೀಯ ಸಮಾನ ಎಂದು ಭಾವಿಸುತ್ತೀರಿ.

ಸನ್ನಡೆಯ ಅದೃಷ್ಟಶಾಲಿ ಮಕ್ಕಳ ಉಜ್ವಲಹಣೆಯಿಂದ ಆಡಳಿತದ ತೇಜಸ್ಸು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗೂ ವಿಶ್ವವನ್ನು ಬೆಳಗುವ ಚಂದನದ ಇಂತಹ ಹಣೆಯನ್ನು ಹೊಂದಿರುವವರ ಪೈಕಿ ಪ್ರಾಶಸ್ತ್ಯವನ್ನು ಪಡೆಯುತ್ತಾನೆ. ಕಷ್ಟವನ್ನು ಮರೆಯಿಸುವ ಅನುಯಾಯಿಗಳು ಕರಾರು ಮತ್ತು ಕ್ರಿಯಾಶೀಲರಾಗುವವರು ಮಾನವೀಯತೆಯ ಒಳಿತಿಗಾಗಿ ಕಾನೂನು ಹಾಗೂ ಸಂಹಿತೆ ಎಂದು ಪರಿಗಣಿಸಿ, ನೆಮ್ಮದಿ ಮತ್ತು ರಕ್ಷಣೆ ಹಾಗೂ ಅಲ್ಲೋಲಕಲ್ಲೋಲ ಹೃದಯಕ್ಕೆ ಸಾಂತ್ವನವನ್ನು ನೀಡುವ ಸಲುವಾಗಿ ಕೈಯೊಳಗಿನ ಜಪಮಣಿಯನ್ನಾಗಿ ಮಾಡಿಕೊಳ್ಳುತ್ತಾರೆ. ಸೇವಾ ತತ್ಪರತೆಯನ್ನು ಹೊಂದಿದ ನಿಸ್ಪೃಹತೆಯ ಮನೋಭಾವದ ಪರೋಪಕಾರಿ ಜನರು ಸದ್ಗುಣದಿಂದ ಕೂಡಿದ್ದು, ಚಟುವಟಿಕೆಯಿಂದ ಕೂಡಿದ ಅಂತಹ ದೇಹಧಾರ್ಡ್ಯತೆಯನ್ನು ಹೊಂದಿದವರ ಮೇಲೆ ವಂಶ ಪಾರಂಪರ್ಯದ ಜುಬ್ಬಾ ಮತ್ತು ಯುವರಾಜನೆಂಬ ಕುರ್ತಾ ಸೂಕ್ತವಾಗಿ ಕಾಣುತ್ತದೆ. ಯೋಗ್ಯ ಪ್ರಜೆಗಳ ಗುಂಪಿಗೆ ಉಪಕಾರ, ಇನಾಮು ದಾನ ಮುಂತಾದ ದಸ್ತರ್‌ಖ್ವಾನ್(ಊಟದಸಲುವಾಗಿ ಹಾಸುವ ಬಟ್ಟೆ)ಯ ಮೇಲಿನಿಂದ ಚೂರುಪಾರನ್ನು ಆಯ್ದುಕೊಳ್ಳುವುದರಿಂದ ವಂಚಿತರಾಗಿ ದುರದೃಷ್ಟಶಾಲಿಗಳನ್ನಾಗಿಸುವುದು ಬೇಡವೆಂದು ಈ ಗುಂಪು ಶಿಫಾರಸು ಮಾಡುತ್ತದೆ.

ಒಟ್ಟಾರೆ ನನ್ನ ನಂಬಿಕೆ ಏನೆಂದರೆ, ಪರಮಾತ್ಮನು ಈ ವಿಚಾರವಂತ ಬುದ್ಧಿವಂತ ರಹಸ್ಯಗಳನ್ನು ಅರಿತವ, ಒಳಿತು ಹಾಗೂ ಮೇಧಾವಿತನದ ಒಟ್ಟಾರೆ ಫಲವಾಗಿದೆ.

ಆತನು ದೈವವಾಣಿ ಮತ್ತು ಆದೇಶದ ಮದ್ರಸದಲ್ಲಿ ಜನತೆಯ ಸುಧಾರಣೆ ಹಾಗೂ ನಗರಗಳ ನಿರ್ಮಾಣದ ನಿಯಮಗಳ ನೈಜಗುರುವನ್ನಾಗಿ ಮಾಡಿ ತನ್ನ ದೈವಿಕ ಕೃಪಾಶೀರ್ವಾದದೊಂದಿಗೆ ರಹಸ್ಯ ಮಹಲಿಗೆ ಕಳುಹಿಸಲಾಗಿದೆ.

ಯಾರಾದರೂ ವಿದ್ಯಾಭ್ಯಾಸದ ಅವಕಾಶದಿಂದ ನಿರಾಕರಣೆಗೊಳಗಾಗಿದ್ದಲ್ಲಿ, ಜ್ಞಾನದ ಅರಿವಿನಿಂದ ಯಾರಾದರೂ ದೂರವಿದ್ದಲ್ಲಿ ಮಜಬೂತು ಮತ್ತು ಆದೇಶಾತ್ಮಕ ಬುದ್ಧಿ ಮತ್ತೆಯ ವರ್ತುಲದಲ್ಲಿ ಜನತೆಯ ಕಲ್ಯಾಣ ಮತ್ತು ಕರ್ತವ್ಯವನ್ನು ನಿರ್ವಹಿಸುವಲ್ಲಿ, ಹಾಗೂ ಸಾಮಾನ್ಯ ಮತ್ತು ವಿಶೇಷ ಜನರತ್ತ ಕರ್ತವ್ಯ ನಿರ್ವಹಿಸುವಲ್ಲಿ ದೂರದೃಷ್ಟಿಯ ಸಂಶೋಧನೆಯ ಸಡಗರದಲ್ಲಿ, ಜನ ಸಮುದಾಯ ಮತ್ತು ವಿಶ್ವವನ್ನು ಸಂಕಷ್ಟದಲ್ಲಿ ಮುಳುಗಿರುವ ಜನರನ್ನು ರಕ್ಷಣೆ ಮಾಡುವ ಮೂಲಭೂತ ಕರ್ತವ್ಯವನ್ನು ಎಸಗಲಿ. ಮತ್ತು ಉತ್ಕೃಷ್ಟಲೇಖನಿಯಿಂದ ಬರೆಯಲಾಯಿತು–ಒಳಿತಿಗಾಗಿ ಈ ವಿಧೇಯತೆಯ ತೋಟದ ತಾಜಾ ಪುಷ್ಪವು ಹಾಗೂ ಅದೃಷ್ಟಶಾಲಿ ಎಂಬ ತೋಟದ ನಿತ್ಯನೂತನ ವೃಕ್ಷವು ಈ ಉಕ್ತಿಯಂತೆ "ಮಗುವು ತನ್ನ ಪೂರ್ವಿಕರ ಅಥವ ತನ್ನ ಬಂಧುಗಳ ಅನುಕರಣೆಯನ್ನು ಮಾಡುತ್ತದೆ ಎಂಬಂತೆ ನಂಬಿಕೆ ಮತ್ತು ಅರ್ಪಣಾಭಾವದ ವೃಕ್ಷಗಳ ನೆರಳಿನಲ್ಲಿ ವಿರಮಿಸುವ ನಿರೀಕ್ಷೆಯ ಪುಷ್ಪಗಳು ಮತ್ತು ಜೀವಕಾರುಣ್ಯದ ನಾಲ್ಕು ತೋಟಗಳ ಬಳಕುವ ನಡಿಗೆಯವರು ಮತ್ತು ನಮ್ಮ ವಿಶ್ವಾಸಕ್ಕೆ, ಹಗಲುರಾತ್ರಿ ಗುರಿ ಮುಟ್ಟುವ ತೋಟದಲ್ಲಿ ಸಾವಿರಾರು ಬುಲ್‌ಬುಲ್‌ಗಳ ವೃಂದಗಾನದಂತೆ ಹಾಗೂ ಸಫಲತೆ ಮತ್ತು ತರಬೇತಿಯ ಋತುವನ್ನು ಕಾಣದ ತೋಟದಲ್ಲಿ ಹಗಲುರಾತ್ರೆ ಸುಶ್ರಾವ್ಯ ಬುಲ್‌ಬುಲ್‌ನಂತೆ ಹಾಡುವ ನೀಲಗೋನ್ ಪಕ್ಷಿಯಂತೆ, ಮುಂಜಾವಿನ ತಂಗಾಳಿಯ ಅಮೃತಸಮಾನ ಉಪಕಾರಗಳ ಮಳೆಹನಿ ಹಾಗೂ ಕರುಣೆಯಿಂದ ಸಂತೋಷದಿಂದ ಆರ್ದ್ರವನ್ನಾಗಿಸಿದೆ. ಖಂಡಿತವಾಗಿಯೂ ಭೂಮ್ಯಾಕಾಶಗಳ ಸೃಷ್ಟಿಕರ್ತನು ಅವನ ಹೃಯದ ಕನ್ನಡಿಯನ್ನು ಅತ್ಯಂತ ಪ್ರಕಾಶಮಯವನ್ನಾಗಿಸಿ ಕ್ಲೇಶವನ್ನು ನಿರ್ಮೂಲನಗೊಳಿಸಿದ್ದಾನೆ. ದೀನದಲಿತರ ಹೃದಯದಲ್ಲಿ ಬೇಡಿಕೆ ಮತ್ತು ಯಾಚನೆಯು ಮನೆ ಮಾಡಿರುತ್ತದೆ. ಅದು ಅತ್ಯಂತ ಉತ್ತಮ ರೀತಿಯಲ್ಲಿ, ಆತ್ಮಪೂರ್ವಕವಾಗಿ ಕಪಟದಿಂದ ಮುಕ್ತವಾಗಿ ಶಾಂತಿ ಪೂರ್ವಕವಾಗಿ ಬೆಳಗುತ್ತದೆ. ಮತ್ತು ಪ್ರತಿ ಭರವಸೆ ಹಾಗೂ ಬಯಕೆಯನ್ನುಳ್ಳ ಸುಂದರಿಗೆ ಪರದೆಯ ಹಿಂದಿನಿಂದ ವಾಸ್ತವಿಕ ಅಸ್ತಿತ್ವದಲ್ಲಿ ಹೊಂದಿದವರ ಮನದಲ್ಲಿ ಬೇಗನೆ ಮೂಡುತ್ತಾನೆ.

ಅಸ್ತವ್ಯಸ್ತತೆ ಇಲ್ಲದೆ, ಸಹಾಯಕ ಸೇವಕೀಯ ನೆರವಿಗಾಗಿ ವಿವೇಕ ಹಾಗೂ ಪ್ರಜ್ಞೆಯ ಸಿಂಹಾಸನದ ಮೇಲೆ ಈ ವಿಚಾರವಂತ ನಾವಿಕನು ಮೈದಾನದಲ್ಲಿ ಸವಾರಿ ಹೊರಡುವುದನ್ನು ಅಂಗೀಕರಿಸಿ, ಸೂಕ್ತ ಪೋಷಾಕಿನಿಂದ ಅಲಂಕೃತನಾಗಿ ಸನ್ನದ್ಧನಾದ. ಈ ಕಾರಣದಿಂದಲೇ ತುಟಿಗಳ ಮೇಲೆಮೌನ ಮುದ್ರೆಯನ್ನೊತ್ತಿ, ಮೌನಪ್ರಿಯನಾದ

ಭಗವಂತನ ಸ್ತುತಿಯ ಹೊರತು ಇನ್ನಿತರೆ ವಿಷಯಗಳ ಬಗ್ಗೆ ಆಲೋಚನೆ ಮಾಡುವುದು ಕೂಡಾ ಲಜ್ಜಿತರಾಗಿ ಪಶ್ಚಾತ್ತಾಪ ಪಡುವಂತಹದಾಗಿದೆ. ಹಜರತ್ ಘುಫ್ರಾನ್ ಪನಾಹರವರ ತೀವ್ರ ಅನಾರೋಗ್ಯದ ಸುದ್ದಿಯು ಖಾನ್ ಅಲಿಶಾನ್‌ರವರ ಕಿವಿಗೆ ತಲುಪಿದಾಗ, ಅವರ ಬೆಂಕಿಯುಗುಳುವ ಖಡ್ಗದ ಕೃಪೆಯಿಂದ ಇಸ್ಲಾಮಿನ ದೀಪದ ತೈಲವಾಗಿದೆ, ಮತ್ತು ಅವರ ಭರ್ಜಿಯ ಕಲಾತ್ಮಕತೆಯು ಹೆಬ್ಬಾವಿನಂತೆ ನುಲಿಯುತ್ತದೆ. ಪ್ರವಾದಿಯ ಹೆಸರಿನ ರಾಜ್ಯದ ನಿರ್ಮಾಣ ಮಾಡುವುದು ಅವರ ಪರಾಕ್ರಮದ ಪರಿಧಿಯಲ್ಲಿದೆ.

ರುಸ್ತಮ್ ನಂತಹವನನ್ನು ದೂರವಿಡುವವನು ಮತ್ತು ಸಾವಿರಾರು ಮೇಧಾವಿಗಳ ಸಾಗರಗಳ ನಾರಿಮನ್‌ಗಳ ತರಹ (ರುಸ್ತುಮ್‌ನ ಅಜ್ಜನಂತೆ ಈಲೋಕ ಮತ್ತು ಪರಲೋಕಕ್ಕೆ ಸಂಬಂಧಿಸಿದಂತೆ ಉತ್ತಮ ಕಾರ್ಯಗಳನ್ನು ಎಸಗುವುದು ಸಾದ್ಯವಾಗಿದೆ.) ಹಾಗೂ ಘನ ಉದ್ದೇಶಗಳ ಸಾಧನೆಯು ಅವರ ನುಡಿ ಮುತ್ತುಗಳ ಗುರಿಯಾಗಿದೆ. ಎಲ್ಲಾ ಪ್ರಮುಖ ಕರ್ತವ್ಯಗಳ ಕಾರಣಕರ್ತರು ಮತ್ತು ಅವುಗಳ ಕಷ್ಟಕರವಾದ ಸಮಸ್ಯೆಗಳ ಪರಿಹಾರ ಹಾಗೂ ಕರಾರುಗಳ ಉದ್ದೇಶವು ಅವರ ಘನತೆಗೆ ಸಾಕ್ಷಿಯಾಗಿದೆ. ರುಸ್ತುಮ್‌ನಂತಹ ಪೈಲ್ವಾನನನ್ನು ಸೋಲಿಸುವ ದೇಹಸಿರಿಯನ್ನು ಹೊಂದಿರುವವರ ಸಭೆಯಲ್ಲಿ ಹೋಲಿಕೆಗೆ ಅರ್ಹರಾದವರ ಹಾಗೂ ಸಮಬಲಶಾಲಿ ಯೋಧರನ್ನು ಬಂಧಿಸುವುದು ಆ ಕತ್ತಿಯ ಪ್ರಮುಖ ಉದ್ದೇಶ ಭರವಸೆ ಮತ್ತು ಮೂಲ ಆಶಯವಾಗಿತ್ತು. ಹಾಗೂ ಅಭೇದ್ಯ ಮತ್ತು ಸದೃಢ ಕೋಟೆಯ ವಿಜಯಿಯಾಗಿದ್ದಾನೆ. ಮತ್ತು ಅವನ ಸಂಗಾತಿ ಮತ್ತು ಬಾಣಗಳು ಪ್ರತಿ ಕೋಟೆಯಲ್ಲಿಯೂ ಸಭ್ಯತೆ ಮತ್ತು ಸ್ಥಿರತೆ ಹಾಗೂ ಗಾಂಭೀರ್ಯವನ್ನು ಎತ್ತಿ ಹಿಡಿಯುವಂತಹದಾಗಿದೆ. ವಿಶ್ವದಲ್ಲಿಯೇ ಗೌರವಾರ್ಹ ಮಾತಾಪಿತರನ್ನು ಹೊಂದಿದ ಶ್ರೀಯುತ ಮಾವೇತ್‌ಖಾನ್ ಮೊಹಮ್ಮದ್‌ರವರು ಕರ್ನಾಟಕ ರಾಜ್ಯವನ್ನು ವಶಕ್ಕೆ ಪಡೆಯಲು ಹೊರಟಾಗಿತ್ತು. ಅವರ ಕಿವಿಗಳಿಗೆ ಈ ಸುದ್ದಿಯು ತಲುಪಿತು. ಅಸ್ತವ್ಯಸ್ತ ಉಡುಪಿನ ಅತ್ಯಂತ ವ್ಯಾಕುಲ ಚಿತ್ತ ಮನಸ್ಥಿತಿಯಲ್ಲಿ ದುಃಖಿತ ಉಡುಪನ್ನು ತೊಟ್ಟುಕೊಂಡು ಗ್ಲಾನಿಯುಕ್ತ ಹಾಗೂ ಅಸ್ವಸ್ಥ ಪೇಟಾವನ್ನು ತಲೆಯ ಮೇಲೆ ತೊಟ್ಟುಕೊಂಡು ಮೂರು ದಿನಗಳ ಅವಧಿಯೊಳಗೆ ಕೆಲವೇ ಮಂದಿ ಆಪ್ತರನ್ನು ಒಳಗೊಂಡು ದೇಶದ ರಾಜಧಾನಿಯನ್ನು ತಲುಪಿದನು.

ಆದಿನ ಮೇಲೆ ಹೇಳಿದ ಸುದ್ದಿಯನ್ನು ಜನ್ನತ್‌ಮಕಾನಿಯವರ ಬಗ್ಗೆ ಸುದ್ದಿಯನ್ನು ಬಿತ್ತರಿಸಿದರು.

ತೀಕ್ಷ್ಣ ಕಣ್ನೋಟ ಹೊಂದಿದ ಎತ್ತರದ ಕಂಬದ ಮೇಲೆ ಕುಳಿತ ಗರುಡನೇ
ನಿನ್ನ ಪರಿಶ್ರಮದ ಖಜಾನೆಯಿಂದ ನಿನ್ನ ಗೂಡು ಸಮೃದ್ಧವಾಗಿದೆ.

ನಿನಗೆ ಆಕಾಶದ ಶಿಖರಗಳು ಕೂಗಿ ಕರೆಯುತ್ತಿವೆ.
ಈ ಪ್ರಪಂಚಕ್ಕೆ ಯಾವ ಕೆಡುಕು ಸಂಭವಿಸಿದೆಯೋ ತಿಳಿಯದು.

ಈ ಧ್ವನಿಯನ್ನು ಕೇಳುವುದರಿಂದ ನ್ಯಾಯಪರ ಜನರ ಹೃದಯಗಳಲ್ಲಿ ಪ್ರೀತಿಯುಕ್ಕುವ ಮತ್ತು ವಾಸ್ತವತೆಯನ್ನು ಅನ್ವೇಷಿಸುವ ಜನರ ಜೀವವು ಮೃತರ ದರ್ಶನವಮಾಡುವ ಭಯಾನಕತೆಯನ್ನು ದೂರಗೊಳಿಸುವುದಾಗಿದೆ. ಹಜರತ್‌ಫಿರ್ದೋಸ್‌ಆಶಿಯಾನಿಯು ಅತಿವೇಗ ಮತ್ತು ಉತ್ತಮ ಆತ್ಮದ ಪಕ್ಷಿಯನ್ನು ಈ ಲೋಕದ ಗಡಿಯಿಂದ ಹಾಗೂ ಇಹಲೋಕದ ಬದುಕಿನಿಂದ ಬಿಡುಗಡೆ ಮತ್ತು ಮುಕ್ತಿಗೊಳಿಸುತ್ತಾ ಪರಲೋಕದ ವಾತಾವರಣದಲ್ಲಿ ಅದೇನೆಂದರೆ ಅನ್‌ಖಾ ಎಂಬ ನಾಲ್ಕು ಕಾಲುಗಳುಳ್ಳ ಬೃಹತ್ ಕಾಲ್ಪನಿಕ ಪಕ್ಷಿಯ ಗುಣಸಾದೃಶ್ಯತೆಯನ್ನು ಹೊಂದಿದ ಉನ್ನತ ಪ್ರವಾಸದ ಸ್ಥಳದಲ್ಲಿ ಪ್ರಯಾಣಕ್ಕೆ ಸನ್ನದ್ಧಗೊಳಿಸಿ ಎಣೆಯಿಲ್ಲದ ಪರಮಾತ್ಮನ ಸಾಮೀಪ್ಯದ ಶಿಖರವೇರುವ ಮತ್ತು ಭಗವಂತನ ಸನ್ನಿಧಿಯಲ್ಲಿ ಆಶ್ರಯ ಹೊಂದುವಂತೆ ಮಾಡಿದ. ಅವರ ಆಗಮನದಿಂದ ಸಂತೋಷಭರಿತರಾದ ಆಕಾಶದ ವಾಸಿಗಳು ಸಂಭ್ರಮದಿಂದ ಪರಸ್ಪರ ಶುಭಾಶಯಗಳನ್ನು ಕೋರಿದರು. ಮತ್ತು ಅವರ ಅಗಲುವಿಕೆಯಿಂದ ಅತ್ಯಂತ ಕಷ್ಟದಿಂದ ಭೂಮಿಯ ಜನರು ಶೋಕಾಚರಣೆಯನ್ನು ಮಾಡುತ್ತ ದುಃಖತಪ್ತರಾದರು.

ಇಡೀ ಪ್ರಪಂಚವೇ ಈದುರಂತದಿಂದ ಚಿಮ್ಮುವ ಚಿಲುಮೆಯಂತೆ ರೋದಿಸುತ್ತಾ ಆಕ್ರಂದನ ಗೈಯತೊಡಗಿತು. ಮತ್ತು ಈ ಲೋಕದ ಜನರು ಈ ಘಟನೆಯಿಂದ ವಿಚಲಿತರಾಗಿ ಶೋಕಾಚರಣೆಯಲ್ಲಿ ಮುಳುಗಿದರು ಮತ್ತು ಸುಂದರ ಮೋರೆಯ ಚೆಲುವೆಯರು ಮ್ಲಾನ ವದನರಾದರು.

ಎಂತಹ ದುರಂತ ದುಃಖ ಮತ್ತು ಯಾತನೆಯಿಂದ ಅಶ್ರುಪೂರಿತವಾಗಿರುವ ಸುಂದರ, ಆಕರ್ಷಕ ಮದುವಣಗಿತ್ತಿಯು ಎದೆಬಡಿದುಕೊಂಡು ಅಳುತ್ತಿದ್ದಾಳೆ. ದುಃಖ ಹಾಗೂ ಶೋಕದಿಂದ ಶೋಕಗೀತೆಯನ್ನು ನುಡಿಸುತ್ತಾ ಇಡೀ ಲೋಕದ ಹೃದಯಗಳು ದುಃಖದ ಕುರ್ಚಿಯಲ್ಲಿ ಆಸೀನವಾದವು. ಸುತ್ತಾ ಸೇರಿದ್ದ ಮಾನವರ ಹೃದಯದ ಮೇಲೆ ಬರಸಿಡಿಲೆರಗಿದಂತಾಯಿತು. ಮತ್ತು ಒಂಭತ್ತನೇ ತೇದಿಯ ಚಂದ್ರನು ಶೋಕದಿಂದ ಕಳಾಹೀನವಾದ ಮತ್ತು ಅದರ ವರ್ತನೆಯು ಕಾರಿರುಳಿನಂತೆ ಗಾಢಾಂಧಕಾರದಿಂದ ಕೂಡಿತ್ತು. ಹಾಗೂ ಸಂತೋಷ ಮತ್ತು ಸಂಭ್ರಮದಿಂದ ಕೂಡಿದ ದೇಶವು ಅತ್ಯಮೂಲ್ಯ ಮುತ್ತಿನ ನಾಶದಿಂದ ಶೋಕಭರಿತವಾಗಿ ದುಃಖದ ಕಾರ್ಮೋಡ ಕವಿದಂತಾಯಿತು. ಮತ್ತು ಗಾಯಗೊಂಡ ಹೃದಯದ ಪ್ರಿಯತಮನಂತೆ ಹೂವು ಮುಳ್ಳಿನ ಬಗಲಲ್ಲಿ ಕುಳಿತು ಚೀರಿತು.

ದ್ರಾಕ್ಷಿಯ ಗೊಂಚಲಿನ ಬೀಜದಂತೆ ಖಾದ್ಯವು ಶುಷ್ಕವಾಯಿತು. ಈಗ ಚರ್ಮ ಮತ್ತು ನರಗಳ ಹೊರತು ಮೂಳೆಯ ಮೇಲೆ ಏನು ಉಳಿಯಲಿಲ್ಲ. ಸ್ವತಃ ಶೋಕವೇ ಈ ಯಾತನೆಯಿಂದ ಕಂಗೆಟ್ಟು ತನ್ನ ತಲೆಯನ್ನು ಚಚ್ಚಿಕೊಂಡು ನೀರವ ಮೌನವನ್ನು ಧರಿಸಿತು. ಅಪ್ಸರೆಯಂತಹ ಮೋರೆಯನ್ನು ಉಳ್ಳ ಸುಂದರ ನರ್ತಕಿಯಯರು ಆಕ್ರಂದನಗೈಯ್ಯುತ್ತ ನರ್ತಿಸುತ್ತಿದ್ದರು. ಅವರ ಗಂಟಲಿನಿಂದ ಚೀತ್ಕಾರದ ವಿನಃ ಇನ್ನೇನು ಹೊರಡಲಿಲ್ಲ. ಅವರ ಶ್ವಾಸದಿಂದ ನಿಟ್ಟುಸಿರನ್ನು ಬಿಟ್ಟರೆ ಇನ್ನೇನು ಹೊರಡಲಿಲ್ಲ.

ದೊಡ್ಡ ನಗಾರಿಯು ಈ ಸಂಕಷ್ಟದಿಂದ ಮೌನಧರಿಸಿತು. ಬೃಹತ್ತಾದ ಕೋಲಿನಿಂದ ಅದರ ತಲೆಯ ಮೇಲೆ ಬಲವಾಗಿ ಹೊಡೆತವನ್ನು ನೀಡಿದರೂ ಅದು ಮಿಸಕಲಿಲ್ಲ. ಹಾಗೂ ಯಾವುದೇ ಧ್ವನಿಯನ್ನು ಹೊರಡಿಸಲಿಲ್ಲ. ಪರಾಕ್ರಮದ ಕೇದ್ರಸ್ಥಾನವಾಗಿ ಸುಂದರ ಅಪ್ಸರೆಯಂತೆ ಜಗಮಗಿಸುತ್ತಿದ್ದ ಆ ಅರಮನೆಯು ದುಃಖದ ಮಡುವಿನಲ್ಲಿ ಮುಳುಗಿತ್ತು. ಆ ಅರಮನೆಯು ದುಃಖದಲ್ಲಿ ಬೆಂದು ಅಂಧಕಾರಮಯವಾಯಿತು. ಸಾಗರದ ಮೇಲೆ ಭಯ ಮತ್ತು ಆತಂಕದಿಂದ ಬೊಬ್ಬೆ ಮೂಡಿತು. ಈರೀತಿಯ ನೂರಾರು ಗಂಟುಗಳಿಂದ ಕೂಡಿದ ದುಃಖವು ತೀವ್ರವಾಯಿತು. ಮತ್ತು ಮೆಲ್ಲ ಮೆಲ್ಲನೆ ಹೆಜ್ಜೆ ಇಡುತ್ತಾ ಶೋಕವು ಇಡೀ ಲೋಕವನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡಿತು. ದುರ್ಬಲ ಮತ್ತು ಕ್ಷೀಣ ಹಾಗೂ ಅಸಹಾಯಕ ಚಂದ್ರನ ಬಿಂಬದಲ್ಲಿ ದುಃಖದ ಛಾಯೆ ಎದ್ದು ಕಾಣುತ್ತಿತ್ತು.

ಅವರ ಪಾರ್ಥಿವ ದೇಹವನ್ನು ಭೂಮಿಯಿಂದ ಹೆಗಲಿಗೇರಿಸಿದಾಗ
ಹೃದಯದಿಂದ ನೆಮ್ಮದಿ ಮತ್ತು ಎದೆಯಿಂದ ಪ್ರಜ್ಞೆ ಕೊನೆಗೊಡಿತು.
ಆಕಾಶದಂತೆ ಭೂಮಿಯು ಸಂಚಲನ ಮೂಡಿಸಿತು.
ದುಃಖದ ಕತ್ತಿಯಿಂದ ಎದೆಯು ಸೀಳಿತು.
ಜನತೆಯ ನಡುವೆ ಕಳವಳವು ತೀವ್ರವಾಯಿತು
ಇಡೀ ಲೋಕದ ನೆಮ್ಮದಿಯು ನಾಶವಾಯಿತು
ಭೂಮಿಯಿಂದ ಆಕಾಶದ ವರೆಗೂ ಶೋಕವು ಮಡುಗಟ್ಟಿತು
ಕಣ್ಣಿನಿಂದ ರಕ್ತದ ಮಳೆ ಹರಿಯತೊಡಗಿತು
ಎಲ್ಲರೂ ಒಟ್ಟಾಗಿ ಸೇರಿ ಆಕ್ರಂದನಗೈದರು
ಭೂಮಿಯು ತಳಮಳದಿಂದ ಕಂಪಿಸತೊಡಗಿತು

ಸುಗಂಧದಂತೆ ವ್ಯಕ್ತವಾಗುತ್ತಿತ್ತು. ಬುದ್ಧಿವಂತಿಕೆ ಹಾಗೂ ಸೂಕ್ಷ್ಮನೋಟದ ಕಿಂಡಿಯ ಮೂಲಕ ಅವರು ಕೊಡವನ್ನು ಎಳೆಯುವವರಿದ್ದರು

ಒಟ್ಟಾರೆ ಆಡಳಿತ ರೂಢ ಬಾದಶಹನು ಈ ನೋವು ಮತ್ತು ಯಾತನೆಯ ಘಟನೆಯ ನಂತರ ದುಃಖದ ತೀಕ್ಷ್ಣತೆಯಿಂದ ನಲುಗಿ ನೆಮ್ಮದಿ ಕಾಣದೆ ಚೈನಾ ದೇಶದ ಮೂರ್ತಿಯಂತೆ ನಿಶ್ಚೇಷ್ಟಿತನಾದರು. ನುಡಿಯು ಮತ್ತು ನಡೆಯುವ ಸಾಮರ್ಥ್ಯವನ್ನು ಕಳೆದುಕೊಂಡರು. ಈ ನಡುವೆ ಮೇಧಾವಿ ಚಿಂತಕ ಮತ್ತು ಪರಾಕ್ರಮಿಯಾದ ಶಾಹ್‌ಅಬುಲ್‌ಮಾಲ್ ಮಾಲೂಮ್ ಆಲಿ ಖಾನ್ ಆಡಳಿತದತ್ತ ಗಮನವನ್ನು ನೀಡಿದ. ಇಂತಹ ಪ್ರಾಣಾಂತಿಕ ಮತ್ತು ಭಯಾನಕ ಪ್ರಸಂಗಗಳು ನಡೆದಾಗ ಪರಾಕ್ರಮಿಗಳ ಪಾದಗಳು ಗೋಡೆಯ ಮೇಲಿನ ಕೆತ್ತನೆಯಂತೆ ಸ್ಥಿರವಾಗಿ ನಿಲ್ಲುವುದು ಮತ್ತು ದುಃಖದ ಪ್ರವಾಹದಲ್ಲಿ ಕೊಚ್ಚಿಹೋಗುವುದು ಸೂಕ್ತವಲ್ಲ. ಇಂತಹ ದುರ್ಭರ ಪ್ರಸಂಗಗಳು ಎದುರಾದಾಗ ನೆರವಿನ ಹಸ್ತದ ಅಗತ್ಯವಿದೆ. ಹಾಗೂ ದುರಂತಗಳ ಅಡವಿಯಲ್ಲಿ ಗಾಯಗೊಂಡ ಹೃದಯದ ಜನರ ನೋವನ್ನು ನಿವಾರಿಸಬೇಕಾದದ್ದು ಅಗತ್ಯ. ತಾಳ್ಮೆಯ ಹೆಜ್ಜೆಗಳು ನಡುಗತೊಡಗಿದಾಗ ರಾಜ್ಯಭಾರದ ನಡೆಯು ಜಾರ ತೊಡಗುವ ಕ್ಷಣ ಇದಾಗಿದೆ.

ಯಾವ ವ್ಯಕ್ತಿಯು ದುಃಖ ಮತ್ತು ಪರೀಕ್ಷೆಯ ಸಂದರ್ಭದಲ್ಲಿ ಮುಳುಗುವ ಜನರ ಅಭಿರಕ್ಷಕನಾಗುವನು ಆತನು ದುಃಖ ಮತ್ತು ಯಾತನೆಯ ಕಾರಾಗೃಹದಲ್ಲಿ ಬಂದಿತರಾದವರಿಗೆ ಬಿಡುಗಡೆಕೊಡುವವನಾಗಿದ್ದಾನೆ. ಅಸ್ತವ್ಯಸ್ತ ತಲೆದೆಸೆಯಿಂದ ತಲೆಯನ್ನು ಮತ್ತು ದುಃಖದ ಹಾಸಿಗೆಯಿಂದ ದೇಹವನ್ನು ಎತ್ತಬೇಕಾದುದ್ದು ಅವನ ಧರ್ಮವಾಗಿದೆ. ಹಾಗೂ ಆಕಾಶದಂತಹ ದರಬಾರಿಗೆ ಆಗಮಿಸಿ ಆ ಬಾದಶಹ ಘಾಸಿಯನ್ನು ಅಲೆಗ್ಸಾಂಡರ್‌ನ ವೈಭವ ಮತ್ತು ಸಂಭ್ರಮವನ್ನು ಹೋಲುವ ಆ ರಾಜ್ಯವನ್ನು ಶಾಸ್‌ಕೇವಮರಸ್‌ನ ಗಾಂಭೀರ್ಯ ಮತ್ತು ವೈಭವದೊಡನೆ ಅದ್ಭುತವಾದ ರಾಜಸಿಂಹಾಸನದ ಮೇಲೆ ಶಾಸ್ತ್ರೋಕ್ತವಾಗಿ ಪಟ್ಟಾಭಿಷೇಕವನ್ನು ಮಾಡಲಿ, ಏಕೆಂದರೆ ದುಃಖ ಮತ್ತು ಶೋಕವನ್ನು ದೂರವಿಡಲು ಮತ್ತು ಮುಕ್ತಿಪಡೆಯಲು ಇದಕ್ಕಿಂತ ಉತ್ತಮವಾದ ಶರಾಬು ಮತ್ತು ಚಿಕಿತ್ಸೆಯು ಇನ್ನೊಂದಿಲ್ಲ. ಅಂಧಕಾರವನ್ನು ಹೊಡೆದೋಡಿಸುವ ಇದಕ್ಕಿಂತ ಉತ್ತಮವಾದ ಬೆಳಗುವ ದೀವಟಿಗೆ ಇನ್ನೊಂದಿಲ್ಲ. ಖಾನ್‌ಹಾಸಿಫ್ನಿಷಾನ್ ಈ ಬೆಳವಣಿಗೆಯನ್ನು ಅತೀತವಾದ ದೈವವಾಣಿಯ ಕುರುಹು ಎಂದು ಭಾವಿಸಿ ಅದನ್ನು ಅತ್ಯಂತ ಪವಿತ್ರ ದೃಷ್ಟಿಯಿಂದ ಪರಿಗಣಿಸಿ ಸಹಸ್ರಾರು ರೀತಿಯಲ್ಲಿ ಅತಿ ಉತ್ತಮ ಎಂಬುದನ್ನು ಅರಿತು ಹಜರತ್ ಬಲ್ಕೀಸ್‌ಜಮಾನ್‌ರವರ ಅರಮನೆಗೆ ಹೋದರು. ಅಲ್ಲಿ ರಾಜ್ಯಕ್ಕೆ ಶೋಭೆಯನ್ನು ತರುವ ಹಾಗೂ ಲೋಕಕ್ಕೆ ವೈಭವ ಮತ್ತು ಶೋಭೆಯನ್ನು ತರುವ ಸಲುವಾಗಿ ರಾಜ ಮರ್ಯಾದೆಯನ್ನು ಸಲ್ಲಿಸುತ್ತಾ ತಾರೀಖು ೨೬ನೇ ಮೊಹರಮ್ ತಿಂಗಳ ೧೦೬೭ರಂದು ಶನಿವಾರ ೯ಗಂಟೆಗೆ ಸಕಲ ರಾಜಮರ್ಯಾದೆಗಳೊಡನೆ ರಾಜಸಿಂಹಾಸನದ ಗೌರವವನ್ನು ಕಾಪಾಡುತ್ತ ಹಾಜರಾದರು.

ಪ್ರೇಮ ಮತ್ತು ಕರುಣೆಯ ಲೋಕದ ಬಾದಶಹ
ರಾಜಸಿಂಹಾಸನ ಮೇಲೆ ಚಂದ್ರನಂತೆ ವಿರಾಜಮಾನನಾದ.
ಸಂತಸಭರಿತ ಕ್ಷಣದಲ್ಲಿ ಗಗನವು ನರ್ತಿಸಿತು.
ಆ ಶುಭ ಸುದ್ದಿಯೊಂದಿಗೆ ವೃದ್ಧರ ಮೇಲೆ ಯವ್ವನ ಮರುಕಳಿಸಿತು.
ಸಂತಸದ ಉದ್ಗಾರ ಮತ್ತು ಘೋಷಣೆಗಳು ಪರಲೋಕದವರೆಗೂ
ತಲುಪಿದವು.
ಎಲ್ಲಾ ಹಿರಿಕಿರಿಯರ ಮೇಲೆ ಆನಂದ ಮತ್ತು ಸಂತೋಷ ಆವರಿಸಿತು.
ಭೂಮಿಯ ಸಂತೋಷ ಮತ್ತು ಸಂಭ್ರಮ ಮತ್ತು ಪರಸ್ಪರ ಆಲಂಗಿಸಿದವು.
ಅಂದರೆ ತನ್ನ ಭುಜಗಳನ್ನು ಪರಲೋಕದವರೆಗೂ ತಲುಪಿಸಿದವು.
ಯಾವ ವ್ಯಕ್ತಿಯು ದುಃಖ ಅತಿರೇಕದಿಂದ ಬಿಲ್ಲಿನಂತೆ ಬಾಗಿದ್ದನ್ನು
ಅವನು ಸಂತೋಷದ ಶುಭವಾರ್ತೆಯಿಂದ ಬಾಣದಂತೆ ನೆಟ್ಟಗಾದ.

ಸಿಂಹಾಸನದ ಗೌರವವು ಅವರ ಶುಭನಾಮಧೇಯದೊಡನೆ ಬೆಸೆದು ಆಕಾಶದಗಲಕ್ಕೂ ವ್ಯಾಪಿಸಿತು ಮತ್ತು ಅವರ ಶುಭ ಮತ್ತು ಗೌರವಾನ್ವಿತ ಹೆಸರಿನ ಶಕೆಯು ಅಂದಿನ ಪ್ರಖ್ಯಾತರಾಜ ಮಹರಾಜರುಗಳ ನಾಣ್ಯಕ್ಕಿಂತಲೂ ಹೆಚ್ಚು ಖ್ಯಾತಿಯನ್ನು ಹೊಂದಿತು.

ವೃದ್ಧರ ಕಾಲಮಾನವು ಯುವ ನೃತ್ಯಗಾತಿಯ ನರ್ತನದಂತೆ ಆಯಿತು. ಹಾಗೂ ಸೊಟ್ಟಗಾಗಿದ್ದ ಚಂದ್ರಮನು ನೇರವಾಗಿ ಸೇವೆಯಲ್ಲಿ ತೊಡಗಿದ. ಭೂಮಿಯು ಸದರಿ ಬಾದಶಹನ ಅಧಿಕಾರ ಸ್ವೀಕಾರದ ಶುಭ ಸುದ್ದಿಯನ್ನು ಕೇಳಿ ತಾಳ್ಮೆ ಮತ್ತು ಸಂಭ್ರಮದ ಬಹುದೊಡ್ಡ ಹೊರೆಯನ್ನು ಹೊರುತ್ತಾ ಸಂಭ್ರಮದಿಂದ ನಲಿಯತೊಡಗಿತು. ದೂರನಿಂತ ಆಗಸವು ರಾಗ ಸಂಭ್ರಮದ ಪಿತೂರಿಯನ್ನು ಕಂಡು ಭಯಗ್ರಸ್ಥವಾಯಿತು. ಹೆಮ್ಮೆ ಮತ್ತು ಬಲಾಢ್ಯತನದ ಪರಾಕ್ರಮದ ನಗಾರಿಯು ಗಾಂಭೀರ್ಯದಲ್ಲಿ ಉನ್ನತಸ್ಥಾನವನ್ನು ಪಡೆಯಿತು. ಅವರ ಆಡಳಿತ ವೈಖರಿ ಮತ್ತು ದಾನಧರ್ಮಾಧಿಗಳು ಪ್ರಖ್ಯಾತವಾದವು. ಅಸಲಿಗೆ ಆನಂದ ಮತ್ತು ಸಂಭ್ರಮದ ಹೊತ್ತು ಸಂತೋಷದಿಂದ ನಲಿಯುವ ಕಾಲವಾಗಿದೆ. ಅಲ್ಲಾಹನ ಕರುಣೆ ಮತ್ತು ಕೊಡುಗೆಗಳಿಂದ ಮಳೆ–ಬೆಳೆ ಸಕಾಲದಲ್ಲಿ ಉಂಟಾಗಿ ಸುಭೀಕ್ಷವಾಯಿತು. ಭಗವಂತನ ಪ್ರಿಯ ಭಕ್ತರ ತೋಟದ ಮಾಲಿಗಳ ಪಾಲನೆ ಪೋಷಣೆಯಿಂದ ಸಂತಸದ ವೃಕ್ಷಗಳು ಎತ್ತರಕ್ಕೆ ಬೆಳೆದು ಮನಮೋಹಕ ಹಸಿರಿನಿಂದ ಕಂಗೊಳಿಸಿದವು. ಶರದೃತುವು ತಲೆ ತಪ್ಪಿಸಿಕೊಂಡಿದ್ದರಿಂದ ನಳನಳಿಸುವ ಹೃದಯಗಳಲ್ಲಿ ತಾಜಾ ಹಸಿರುತನ ತುಂಬಿತು. ಮುಳ್ಳುಗಳು ನಾಚಿ ಮುದುಡಿದ್ದರಿಂದ ದುಃಖಿತ ಹೃದಯಗಳು ಅರಳುವ ಪುಷ್ಪಗಳನ್ನು ಕಂಡು ಭರವಸೆಯ ಬೆಳದಿಂಗಳಂತೆ ನಲಿದವು.

ಉದ್ದೇಶ ಸಫಲವಾಗುವ ಸುಮಧುರ ಧ್ಯೇಯವು ಅಸಹಾಯಕರ ತುಟಿಗಳನ್ನು ಆರ್ದ್ರವಾಗಿಸಿತು. ಅಪ್ಸರೆಯಂತಹ ಸುಂದರಿಯರಾದ ಪ್ರೇಯಸಿಯರು ತಮ್ಮ ತಂಗುದಾಣಗಳು ಮತ್ತು ಶಹರಿನ ಪೇಟೆ ಬೀದಿಗಳಲ್ಲಿ ಹಸನ್ಮುಖಿ ಮತ್ತು ಹಂಸದ ನಡಿಗೆಯೊದಿಗೆ ಕಂಡುಬಂದರು ಮತ್ತು ಉನ್ನತ ಕುಲದ ಪ್ರೇಯಸಿಯರು ಎಲ್ಲೆಡೆ ಪ್ರೇಮದ ಉನ್ಮಾದವನ್ನು ಸೃಷ್ಟಿಸಿದರು. ತಂಗಾಳಿಯಲಿ ಹರಡುವ ಅತ್ತರಿನ ಪೆರಾರಿಯಂತೆ ಅಂದಚಂದದಿಂದ ಕೂಡಿ ಸುಗಂಧವನ್ನು ಹರಡಿದರು. ನಗರವಾಸಿಗಳು ಮತ್ತು ಮರಳುಗಾಡಿನ ವಾಸಿಗಳ ತ್ರಾಣ ಆ ಶಕ್ತಿಯು ಹರಡಿ ಸಾಮಾನ್ಯ ಜನಕೆ ಮತ್ತು ಸಾಮಂತರ ನಡುವೆ ಚೇತೋಹಾರಿ ವಾತಾವರಣ ಹೂಡಿತು. ಪುಷ್ಪದ ಸುಗಂಧವು ಹೃದಯದ ಅಡಿಯಾಳಾಯಿತು. ಗುಲಾಬಿಯ ಸುಗಂಧ ವ್ಯಾಪಿಸಿದಂತೆ ಸಾಮಾನ್ಯ ಜನರ ಅಮೋಘ ಸತ್ಕಾರವಾಯಿತು. ಸೂರ್ಯನ ಸಂಗಡ ಕಿರಣಗಳಂತೆ

ಗಂಭೀರ ಧ್ವನಿಯು ವಿಚಲಿತ ಜನತೆಯ ನಡುವೆ ಪ್ರೇಮ ಮತ್ತು ನೆರವಿನ ನೆಲದ ಮೇಲೆ ನಡಯಿತು. ಆನಂದ ಮತ್ತು ಸಂಭ್ರಮವನ್ನು ಸಾರುವವರು ದುರದೃಷ್ಟದ ಹೃದಯದಲ್ಲಿ ಸೆರೆಯಾಗಿರುವ ಜನರ ಸಲುವಾಗಿ ಸಹಾಯಕರು ಮತ್ತು ಸಂದೇಶವಾಹಕರಾಗಿದ್ದಾರೆ. ಸಂಭ್ರಮದ ಗಾಯನದ ಜೊತೆಯಲ್ಲಿ ಡೋಲಿನ ಜೊತೆಯಲ್ಲಿ ಆಲಾಪನೆ ಮಾಡುವವರು ವಿಜಯದ ಗೀತೆಗಳನ್ನು ಹಾಡುತ್ತಿದ್ದರು. ಮತ್ತು ತಂಬೂರಿಯು ಪ್ರತಿಯೊಬ್ಬ ಹಾಡುಗಾರನನ್ನು ನಿರಂತರವಾದ ಆನಂದ ಸಂಭ್ರಮದ ಲೋಕದತ್ತ ಸೆಳೆಯುತ್ತಿತ್ತು.

ಪ್ರೇಮದ ಹೊಸ್ತಿಲಲ್ಲಿ ಯುವಕರು ಮತ್ತು ವೃದ್ಧರು ಪ್ರೇಮಲೋಕದಲ್ಲಿ ಮುಳುಗಿ ದುಃಖ ಮತ್ತು ದುರಂತವನ್ನು ಮರೆತು ಬೇರೆ ಪ್ರತೀಕಾರದ ಬಿಲ್ಲು ಬಾಣಗಳನ್ನು ದುಃಖ ಮತ್ತು ನೋವಿನಿಂದ ತುಂಬಿರುವ ಹೃದಯದಿಂದ ಹೊರದೂಡಲಿ.

ಎಲ್ಲಾ ಸ್ತುತಿಯು ಅಲ್ಲಾಹನ ಕರುಣೆ ಮತ್ತು ಕೊಡುಗೆಗಳ ದಯೆಯಿಂದ, ಏಕೆಂದರೆ ಮೃತ್ಯುಹೃದಯಿ ಸೂಕ್ಷ್ಮದೃಷ್ಟಿಯ ಹಜರತ್ ಬಾದಶಹ ಘಾಜಿಯ ಅತ್ಯಂತ ಸಫಲ ವಿಜಯಪ್ರಾಪ್ತಿ ಮತ್ತು ಸಿಂಹಾಸನರೋಹಣದ ಮೆರವಣಿಗೆಯು ಅತ್ಯಾಕರ್ಷಕವಾಗಿತ್ತು. ಲೋಕವನ್ನು ಬೆಳಗುವ ಚಂದ್ರನಂತೆ ಹಗಲು–ಇರುಳು ಬೆಳಕಿನ ಒಡೆಯನಾದ ಪರಮಾತ್ಮನ ಬೆಂಬಲ ಮತ್ತು ನೆರವಿನಿಂದ ಸೂರ್ಯನಿಂದ ಬೆಳಕನ್ನು ಪಡೆದು ದೈವಭೀರು ನ್ಯಾಯಪರಿಪಾಲಕ ಮತ್ತು ಪರಮಾತ್ಮನ ಭಕ್ತ ಸಮೂಹ ಜನರನ್ನು ಗರುಡನಂತೆ ಸತ್ಕರ್ಮದ ತಕ್ಕಡಿಯನ್ನು ಕೈಯಲ್ಲಿ ಹಿಡಿದು ಏಕಾಂತವನ್ನು ಹರಿಸಿ ಜೀವವನ್ನು ಪಣವಾಗಿಟ್ಟು ಅಸಹಾಯಕತೆ ಮತ್ತು ದೀನತೆಯ ಪಚ್ಚೆರತ್ನಗಳ ಖರೀದಿದಾರರಾಗಿರುತ್ತಾರೆ. ಹಾಗೂ ನೆರವನ್ನು ನಿರೀಕ್ಷಿಸುತ್ತಾರೆ. ಹಾಗೂ ಪಥಭ್ರಷ್ಟತೆಯ ಅರಣ್ಯದಲ್ಲಿ ಅಸ್ತವ್ಯಸ್ತವಾಗಿ ಅಲೆದಾಡುತ್ತಿರುವ ಜನರನ್ನು ಅಜ್ಞಾನದ ಅರಣ್ಯದಲ್ಲಿ

ಅಲೆಮಾರಿಗಳಾಗಿರುವ ಜನರನ್ನು ಕಾಳನ್ನು ಆಯ್ದು ತಿನ್ನುವವರನ್ನಾಗಿ ಮಾಡಿ, ಆಶ್ರಯಹೀನ ಅರಣ್ಯದಲ್ಲಿ ಎತ್ತಿನಂತೆ ಬಾಲವನ್ನು ಅಲ್ಲಾಡಿಸುವವರಾಗುತ್ತಾರೆ. ಅವರು ದೈವಜ್ಞಾನದ ಅರಣ್ಯದ ಮಾರ್ಗದರ್ಶಕರಾಗುವಂತೆ ಹಾಗೂ ವಿಶೇಷ ಗುಣವುಳ್ಳ ಮಂಗಳಗ್ರಹದ ಆಕ್ರಮಣ ವೃಶ್ಚಿಕ ರಾಶಿಯ ತಲೆ ಮತ್ತು ಬಾಲ ಹಾಗೂ ಶನಿಗ್ರಹದಂತೆ ಮುಂತಾಗಿ ಗಲಭೆಯ ಸ್ವಭಾವವನ್ನು ಹುಲಿಯಂತೆ ರಕ್ತಪಿಪಾಸು ಹಾಗೂ ಏಡಿಯಂತೆ ವಕ್ರ ನಡಿಗೆಯವನನ್ನು ತನ್ನ ಮುಖಂಡರನ್ನಾಗಿಸಿ ಒಪ್ಪಿಕೊಳ್ಳಲಿ.

ಬುದ್ಧಿಮತ್ತೆಯ ನಕ್ಷತ್ರವನ್ನು ಲಾಲಸೆ ಮತ್ತು ದುರಾಸೆಯ ಬಾವಿ ಮತ್ತು ಬುದ್ಧಿವಂತಿಕೆಯ ಮೀನನ್ನು ಲೈಂಗಿಕ ಬಯಕೆಗಳ ಜಾಲದಲ್ಲಿ ಬಂಧಿಸುತ್ತಾರೆ. ಅವುಗಳನ್ನು ಅಭಿಶಾಪದ ಕಲ್ಲಿನಿಂದ ಕುಟ್ಟಿ ಜೀವಂತ ವ್ಯಕ್ತಿಗಳನ್ನು ಆ ಅಶ್ಲೀಲ ಮತ್ತು ಕೀಳು ಗುಂಪಿನ ದುರ್ಮಾಗಗಳು ಮತ್ತು ದುರ್ಬೋಧನೆಗಳನ್ನು ಒದ್ದೋಡಿಸಿ ರಕ್ಷಣೆಯನ್ನು ನೀಡಿ ನಿರ್ಭಯರನ್ನಾಗಿ ಮಾಡುತ್ತದೆ.ಆದ್ದರಿಂದ ಅವರ ಧಾರ್ಮಿಕತೆ ಮತ್ತು ದೈವಸಾಕ್ಷಾತ್ಕಾರದ ಪ್ರಯತ್ನಗಳು ಪ್ರಸಿದ್ಧಿಯ ಉತ್ತುಂಗವನ್ನು ತಲುಪಿದವು. ನಿರ್ಲಜ್ಜಮಹಲ್ಲ್‌ಗಳ ಲಂಪಟ ಶುಕ್ರಗ್ರಹದಂತೆ ಚತುರ ತಜ್ಞ ಪ್ರೇಮದ ನಕಾಶೆಯನ್ನು ಹೊಂದಿದ ಹೃದಯವನ್ನು ಶುಭ್ರಗೊಳಿಸಿ ನೈಜ ಪ್ರಿಯತಮನ ತಲಾಶಿನ ಹಾದಿಯಲ್ಲಿ ಅವಿರತವಾಗಿ ಅನ್ವೇಷಣೆ ಮಾಡ್ವವರಂತಾದರು. ಹಾಗೂ ಕೃತಜ್ಞತಪೂರ್ವಕ ಮೋಡದ ಹೆಚ್ಚಳದಿಂದ ಸುರಿದ ಮಳೆಯ ದೆಸೆಯಿಂದ ಭೂಮಿಯು ದಾನಧರ್ಮಗಳ ಹೆಚ್ಚಳದಿಂದ ಸಂಪದ್ಭರಿತವಾಯಿತು. ದುರಾಸೆ ಮತ್ತು ಲಾಲಸೆಯ ಸ್ವಭಾವದವರನ್ನು ಉತ್ತೇಜನ ನೀಡಿ ಅವರ ಸ್ವಭಾವಗಳನ್ನು ತಿದ್ದಿ ತೀಡಿ ಪ್ರೇಮ, ಕರುಣೆ, ನ್ಯಾಯದ ಮೌಲ್ಯಗಳಿಂದ ಪ್ರೇರೇಪಿಸಿ ಸನ್ಮಾರ್ಗಕ್ಕೆ ತರಲಾಯಿತು. ಹಾಗೂ ಸಿಂಗಾರಗೊಳಿಸಲು ಬಂದ ಕಲೆಗಾರ ಮಹಿಳೆಯು ಸ್ವತಃ ತಾನೇ ಮದುವಣಗಿತ್ತಿಯಾದಳು. ಹಜರತ್ ಬಾಶಾ ಘಾಜಿಯ ಉನ್ನತಿ ಮತ್ತು ಖ್ಯಾತಿಯ ಸಿಂಹಾಸನರೋಹಣವು ಮೌಲಾನ ಹಲಾಲಿ ರೆಹಮತುಲ್ಲಾ ಅಲ್ಯೆ ಅವರ ಕವಿತೆಯ ಅರ್ಥದಂತೆ ಶೋಭೆ ಸಂಭ್ರಮ ಮತ್ತು ವೈಭವದ ವರ್ಣರಂಜಿತ ಮಿಶ್ರಣವಾಯಿತು. ಚಿಂತಕ ಸಹೃದಯರ ಅವಗಾಹನೆಗೆ ಕೆಳಕಂಡಂತೆ ಇದೆ.

ದಖ್ಖನಿನ ಮಹರಾಜನ ಮೆರವಣಿತೆಯ ಸಾಲಿನಲ್ಲಿ
ಸಂಮ್ಮೋಹನ ಘೋಷಿಸುವವನು ದೊಡ್ಡ ಧ್ವನಿಯಲ್ಲಿ ಧ್ವನಿಗೂಡಿಸಿದ.
ಈ ಮಾತಿನಲ್ಲಿ ಅಂತಿಮ ಚರಣವಿಲ್ಲ.
ಅಂದರೆ ಮೊಹಮ್ಮದ್‌ರ ವಾರೀಸುದಾರ ಅಲಿಯಾಗಿದ್ದಾರೆ.

ಈ ಚರಣವನ್ನು ಮತ್ತು ಶುಭ ದಿನಾಂಕವನ್ನು ಮೌಲಾನ ಅಬ್ದುಲ್ ನಬೀ ಕೂಡಾ ಹೇಳಿದ್ದಾರೆ.

ರಾಜರ ನಗಾರಿಯು ಮೊಹಮ್ಮದ್‌ರ ನಂತರ ಅಲಿಗಾಗಿ ಮೀಸಲಾಯಿತು. ಮುಲ್ಲಾ ಮೊಹಮ್ಮದ್ ಅಲಿ ಖೀಲಾಫತ್‌ನ ಮೆರವಣಿಗೆಯ ದಿನಾಂಕದ ಸಂಬಂಧದಲ್ಲಿ ಕೆಳಕಂಡಂತೆ ನುಡಿದಿದ್ದಾರೆ.

ಅಲ್ಲಾಹನಿಗೆ ಕೃತಜ್ಞತೆ ಅವನು ಖಿಲಾಫತ್ತಿನ ಸಿಂಹಾಸನದ ಮೇಲೆ
ನಿಗದಿಪಡಿಸಿದ.
ಆ ಸೂರ್ಯನ ಉದಯದಿಂದ ಲೋಕವು ಬೆಳಗಿತು.
ಪ್ರಖ್ಯಾತ ಜನರ ನಡುವೆ ಹೆಮ್ಮೆಯ ಉನ್ನತ ಸ್ಥಾನ ಅವನಿಗೆ ಮೀಸಲು
ಏಕೆಂದರೆ ಅವನು ಮೊಹಮ್ಮರ ದೇಶದ ಮೇಲೆ ಅಲಿಯಂತೆ
ವಿರಾಜಮಾನನಾದ.
ಅವರ ಸಿಂಹಾಸನರೋಹಣದ ವರ್ಷವನ್ನು ಪೂರ್ಣಬುದ್ಧಿಮತ್ತೆಯಿಂದ
ಸ್ವೀಕರಿಸಿದ.
ಹಾಗಾಗಿ ಆತ ನುಡಿದ ಮೊಹಮ್ಮದ್‌ರ ನಂತರ ವಿಶ್ವಾಸಿಗಳ ಸರ್ದಾರ
ಅಲಿಯಾದರು.

ಹಜರತ್ ಬಾದಶಹ ಘಾಜಿ ಸದರಿ ಉಜ್ವಲ ಪ್ರಶಂಸೆಗಳನ್ನು ಆಲಿಸಿದ ನಂತರ ಸೂಕ್ತ ವೈಭವೋಪೇತ ರಾಜ ಹುಡುಪನ್ನು ಧರಿಸಿ ಬಹಳ ಬಂಗಾರವನ್ನು ಬಡಬಗ್ಗರಿಗೆ ದಾನಮಾಡಿ ಜನತೆಯ ದೃಷ್ಟಿಯಲ್ಲಿ ಖ್ಯಾತನಾಮರಾದರು.

ಭಗವಂತನ ಎಲ್ಲಿಯವರೆಗೆ ಈ ಸೂರ್ಯನು ಪ್ರಜ್ವಲಿಸುವನು

ಪುಷ್ಪದಂತಹ ಮೋರೆಯುಳ್ಳವರಿಂದ ಭೂಮಿಯು ಹೂದೋಟದಂತೆ
ಕಂಗೊಳಿಸುವುದು.
ಸಾಗರದ ನೀರು ಎಲ್ಲಿಯವರೆಗೆ ಭೂಮಿಯ ಮೇಲೆ ನಿಲ್ಲುವುದು
ಅಲ್ಲಿಯವರೆಗೆ ಭೂಮಿಯ ಮೇಲೆ ವೃಕ್ಷಗಳು ಆವರಿಸಿಕೊಂಡಿರುತ್ತವೆ.
ಎಲ್ಲಿಯವರೆಗೆ ಮಣ್ಣು, ನೀರು, ಬೆಂಕಿ ಮತ್ತು ಗಾಳಿ ಬಾಕಿ ಇರುತ್ತವೋ
ದಖ್ಖನಿನ ಮಹಾರಾಜನು ಅಲಿಯ --- ಬಾಕಿ ಇರುತ್ತೆ

■

*

ಅಧ್ಯಾಯ-೭

ಅಲಿ ಆದಿಲ್ ಶಾಹನ ರಾಜ್ಯಾಡಳಿತ

ಕರುಣೆ ಮತ್ತು ಕ್ಷಮೆಯ ಹಾಸಿನ ಮೇಲೆ ಆಸೀನರಾಗಬೇಕೆಂಬುದು ಕರುಣಾಮಯಿ ಹಾಗೂ ದಯೆಯ ಒಡೆಯನಾದ ಭಗವಂತನ ಬಯಕೆಯಾಗಿತ್ತು. ದಾನ ಧರ್ಮಗಳ ಆಸನದ ಮೇಲೆ ಆಸೀನರಾಗುವವರಿಗೆ ಸಾಫಲ್ಯತೆ ತಂದುಕೊಡುವುದೇನೆಂದರೆ ದುಃಖಿತರ ದುಃಖ ಹಾಗೂ ಸಂಕಷ್ಟಗಳನ್ನು ದೂರಗೊಳಿಸುವುದಾಗಿದೆ. ಹಗಲು-ರಾತ್ರಿ ಸಂತೋಷ ಆನಂದ ಮತ್ತು ನೆಮ್ಮದಿಯ ದ್ವಾರಗಳನ್ನು ಅವರಿಗಾಗಿ ತೆರೆಯುವ ಸಲುವಾಗಿ ಅಲ್ಲಾಹನು ಅವರಿಗೆ ಈ ಕೊಡುಗೆಯನ್ನು ನೀಡಿದ್ದಾನೆ ಹಾಗೂ ಅವರ ಹೃದಯಗಳಲ್ಲಿ ಸಂತೋಷ ಮತ್ತು ನೆಮ್ಮದಿಯ ಮಹಲುಗಳನ್ನು ನಿರ್ಮಾಣ ಮಾಡುವಂತೆ ಕಷ್ಟ ಮತ್ತು ದಾರಿದ್ರ್ಯದ ಅಗೋಚರ ದೇವವಾಣಿಯನ್ನು ಕೂಡ ಮೊಳಗಿಸುತ್ತಾನೆ. ಅರಣ್ಯಗಳಲ್ಲಿ ಪಥಭ್ರಷ್ಟರಾಗಿರುವವರಿಗೆ ಹಗಲು ಮತ್ತು ಇರುಳು ಈ ಗೌರವಾನ್ವಿತ ಸಮುದಾಯವು ಸತ್ಕಾರ್ಯ ಮತ್ತು ಸದ್ಗುಣಗಳ ಉಡುಪಿನಿಂದ ಸಿಂಗರಿಸಿ ಉತ್ತಮ ಕಾರ್ಯಗಳಿಂದ ಅಲಂಕರಿಸುತ್ತಾರೆ. ಏಕೆಂದರೆ ಈ ಉತ್ಕೃಷ್ಟ ಕಾರ್ಯದ ಬೆಂಬಲಿಗ ಗುಂಪಿನವರು ನಿರ್ಣಾಯಕ ದಿನದ ಅಲ್ಲಾಹನ ತೀರ್ಪುಗಳನ್ನು ಒಪ್ಪುವವರನ್ನು ಅವರ ನೋಟಗಳಲ್ಲಿ ಬೇಡಿಗಳನ್ನು ಪೂರೈಸಿದ ಅಮೂಲ್ಯರತ್ನಗಳ ಕಾಡಿಗೆಯನ್ನು ಮತ್ತು ಭರವಸೆ ಹಾಗೂ ಬಯಕೆಯ ಸುಗಂಧಿತ ಮಣ್ಣು ಮತ್ತು ನೀಲಿಯ ಬಣ್ಣದ ಲೇಪದಿಂದ ಅಲಂಕರಿಸಿ ಅಲ್ಲಾಹನ ಹಾದಿಯಲ್ಲಿ ಬಲಿಯಾಗುವವರ ಮುಖಂಡತ್ವವನ್ನು ಹೊಂದಿದ್ದು ದೈವ ಸಾಮಿಪ್ಯದ ಪಾನಗೃಹದ ಅಮಲೇರಿದವರಾಗಿರುತ್ತಾರೆ. ಈ ಮಾತುಕತೆಯ ಸಾಕ್ಷಿಯು ಹಜರತ್ ಬಾದಶಹರವರ ಸುಧಾರಣೆಯ ಮತ್ತು ತರಬೇತಿಯ ಸಮಾರಂಭದ ವೃತ್ತಾಂತವಾಗಿದೆ. ಒಂದು ವೇಳೆ ಈ ಪ್ರಾಶಸ್ತ್ಯತೆಯು ಸೂರ್ಯನ ನೆರಳು ಸನ್ನಡತೆ

ಮತ್ತು ಸತ್ಕರ್ಮದ ಹುಂಡಿಯನ್ನು ಹೊಂದಿಲ್ಲದವರ ಮೇಲೆ ಬಿದ್ದಲ್ಲಿ ಆ ಆಯುಷ್ಯದ ಉಡುಪು ಮೇಲು ಹೊದಿಕೆಯನ್ನು ಹೊದ್ದಿರುವ ದೇಹದಂತೆ ಸಂಪೂರ್ಣವಾಗಿ ಸೇವಾತತ್ಪರತೆ ಮತ್ತು ವಿಧೇಯತೆಯ ಕ್ಷೇತ್ರದಲ್ಲಿ ತೊಡಗಿರುತ್ತಾನೆ ಮತ್ತು ಒಂದು ವೇಳೆ ಆತನ ಔನತ್ಯೆಯ ಮಂಗಳ ಗ್ರಹವು ಕಪ್ಪು ಹೃದಯವನ್ನು ಹೊಂದಿರುವ ಶತ್ರುವಿನತ್ತ ಒರಟು ನೋಟವನ್ನು ಬೀರಿದಲ್ಲಿ ಅವನು ನಿರ್ಜೀವಿ ನೆರಳಿನಂತೆ ಪರಲೋಕದ ಪ್ರಯಾಣಿಕನಾಗುತ್ತಾನೆ ಮತ್ತು ಒಂದು ವೇಳೆ ಪರಾಕ್ರಮ ಮತ್ತು ಸುಸಂಬದ್ಧತೆಯನ್ನು ಹೊಂದಿದಲ್ಲಿ ಅವನ ಸಾಗರದ ಒಂದು ಹನಿಯಿಂದ ಎತ್ತರದ ಗಗನದಂತೆ ಪ್ರಳಯಕಾಲದವರೆಗೂ ಶಾಶ್ವತ ಮತ್ತು ಸ್ಥಿರತೆಯ ಉಭಯ ಕಂಬಗಳ ಮೇಲೆ ತಮ್ಮ ಅಸ್ತಿತ್ವ ಕಂಡುಕೊಳ್ಳುತ್ತವೆ. ಒಂದು ವೇಳೆ ಅವನ ಕ್ರೋಧದ ಕಿಡಿಯು ಗಗನದ ಪಾದಗಳ ಮೇಲೆ ಬಿದ್ದಲ್ಲಿ ಕಡಾಯಿಯಲ್ಲಿ ಸುಟ್ಟ ಹತ್ತಿಯಂತೆ ಭಸ್ಮವಾಗಿ ಸಮುದ್ರದಲ್ಲಿ ಸೇರಿಹೋಗುತ್ತದೆ ಮತ್ತು ಅವನ ನಿತ್ಯದ ಕರುಣೆ ಮತ್ತು ಕೃಪೆಯು ಪ್ರತಿಕ್ಷಣವೂ ಕೂಡಾ ಬಡತನ ಮತ್ತು ದಾರಿದ್ರ್ಯದ ಅರಣ್ಯದ ನಿರ್ಜೀವ ಹೃದಯದ ಜನರಿಗೆ ಪ್ರಾಣದಾನ ಮಾಡುವಂತಹದಾಗಿದೆ ಮತ್ತು ಅವನ ಪ್ರಾಣಾಂತಿಕ ಕ್ರೋಧವು ಪ್ರತಿಕ್ಷಣವು ಈಜಿಪ್ಟಿನ ಫ್ಯಾರೋವಿನಂತೆ ಅವಿಧೇಯ ಗುಣ ಸ್ವಭಾವಗಳನ್ನು ಹೊಂದಿದವರ ಎದುರಿನಲ್ಲಿ ಮೂಸ ಪ್ರವಾದಿಯವರ ಪವಾಡವನ್ನು ತೋರಿದಂತೆ ಅವನ ಕರುಣೆಯು ಬೆಳಗಿನ ತಂಗಾಳಿಯಂತೆ ಇದೆ. ಒಂದು ವೇಳೆ ಅರಣ್ಯ ಮತ್ತು ಮೈದಾನದ ಮೇಲೆ ಬಿದ್ದಲ್ಲಿ ಅದರ ಹುಲ್ಲು ನಿರಂತರವಾಗಿ ವಸಂತದಂತೆ ಕಂಗೊಳಿಸುವುದು ಹಾಗೂ ಮಧುರ ಫಲಗಳನ್ನು ಹೊಂದಿದ ವೃಕ್ಷದಂತೆ ಕಂಡುಬರುತ್ತದೆ. ಒಂದು ವೇಳೆ ಅವನ ಕರುಣೆಯ ನೋಟದ ಮೋಡವು ಬಂಜರು ಭೂಮಿಯ ಮೇಲೆ ಬಿದ್ದಲ್ಲಿ ಅದರ ಮಣ್ಣಿನಲ್ಲಿ ನಿರಂತರವಾಗಿ ಸಂಬಲ್ ಮತ್ತು ನಸ್ರೀನ್‌ನಂತಹ ಸಸ್ಯರಾಶಿ ಬೆಳೆಯಲಾರಂಭಿಸುತ್ತದೆ ಮತ್ತು ಅವುಗಳ ಸ್ವಭಾವವು ಅತ್ಯಂತ ಎತ್ತರಕ್ಕೆ ಹಾರುವ ಹುಮ ಎಂಬ ಪಕ್ಷಿಯು ಎತ್ತರಕ್ಕೆ ಹಾರುವಾಗ ಆಕಾಶದೆತ್ತರದಿಂದ ವೀಕ್ಷಿಸಿದವರಿಗೆ ಆಕಾಶದ ವಿಸ್ತಾರವು ಇರುವೆಯ ನೋಟಕ್ಕಿಂತಲೂ ಚಿಕ್ಕದಾಗಿ ಕಂಡುಬರುತ್ತದೆ ಮತ್ತು ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳ ಬಯಕೆಯ ವ್ಯಾಪ್ತಿಯಿಂದ ಹೊರತಾಗಿ ಒಂದು ಕ್ಷಣವೂ ಕೂಡಾ ತನ್ನ ರೆಕ್ಕೆ ಮತ್ತು ಪುಕ್ಕಗಳನ್ನು ಹರಡುವುದಿಲ್ಲ.

ತನ್ನ ಅತ್ಯಂತ ಬುದ್ಧಿವಂತಿಕೆಯ ಪ್ರವಾಸದ ಸಂದರ್ಭದಲ್ಲಿ ಭೂಮಿ ಮತ್ತು ಆಕಾಶದ ಉದ್ದಗಲಗಳನ್ನು ತನ್ನ ಎರಡು ಕಾಲುಗಳ ದೂರಕ್ಕಿಂತಲೂ ಕಡಿಮೆ ಎಂದು ತಿಳಿಯುತ್ತದೆ. ಪರಮ ಪಾವನನಾದ ಅಲ್ಲಾಹನ ಸೃಷ್ಟಿಯ ಕ್ಷೇತ್ರದಿಂದ ಹೊರತಾಗಿ ಅದು ಸುತ್ತುಹಾಕುವುದನ್ನು ಇಷ್ಟಪಡುವುದಿಲ್ಲ ಮತ್ತು ಅವನ ಕರುಣೆಯ ಸೂರ್ಯನಂತೆ ಬೆಳಗುವ ಚಂದ್ರನ ಮೇಲೆ ನೆರಳನ್ನು ಹರಡಿದಲ್ಲಿ ಉದಯ ಮತ್ತು

ಅಸ್ತಮಾನದ ಸಂಘರ್ಷದಿಂದ ಮುಕ್ತನಾಗುತ್ತಾನೆ ಮತ್ತು ಸದಾಕಾಲ ಆಕಾಶದಲ್ಲಿ ಪ್ರಕಾಶಮಯವಾಗಿರುತ್ತಾನೆ ಹಾಗೂ ಅವನ ಪ್ರೇಮದ ಚಂದಿರನು ವಿಶ್ವವನ್ನು ಬೆಳಗುವ ಚಂದ್ರಮನ ಮೇಲೆ ಒಂದು ಕಿರಣವನ್ನು ಹಾಸಿದಲ್ಲಿ ಗ್ರಹಣದ ಸಂಕಷ್ಟಗಳಿಂದ ರಕ್ಷಣೆ ಪಡೆಯುತ್ತಾನೆ ಮತ್ತು ಸದಾಕಾಲ ಆಕಾಶದಲ್ಲಿ ಬೆಳಗುತ್ತಾ ಪ್ರಕಾಶಿಸುತ್ತಾ ಇರುವುದು.

ಅಲೆಗ್ಸಾಂಡರ್‌ನಂತೆ ಲೋಕವನ್ನು ಹಿಡಿತಕ್ಕೆ ತರುವ ಬಾದಶಹನಿದ್ದಾನೆ.
ಅವನ ಹೃದಯವು ಲೋಕಕೆ ತೋರುವ ಕನ್ನಡಿಯಾಗಿದೆ.
ಆಕಾಶದಂತಹ ಅದೃಷ್ಟ ಮತ್ತು ಉತ್ಕೃಷ್ಟ ಮುತ್ತು-ರತ್ನಗಳ ಒಡೆಯ
ಅಂದರೆ ಅವನನ್ನು ಆವರಿಸುವ ನೆರಳು ಅಲ್ಲಾಹನ ರಕ್ಷಣೆಯಾಗಿದೆ.
ಉತ್ತಮ ಕುರುಹುಗಳು ಅವನ ಚಂದ್ರಮನ ಮೇಲೆ ಪರದೆಯಾಗಿವೆ
ಮತ್ತು ಅವನ ವಾತ್ಸಲ್ಯವು ಅಲ್ಲಾಹನ ನೆರವಿನಿಂದ ಇದೆ.
ಅವನ ಸೈನ್ಯವು ಬಯಲಿನ ಮೇಲೆ ಹೋದಾಗ
ಸಾಗರದ ಅರಮನೆಯಲಿ ಲೋಕವು ಹೊರಟು ಹೋಗುತ್ತದೆ

ಸಾಲಾಗಿ ನಿಂತ ಗುಂಪಿನ ಮೇಲೆ ಕತ್ತಿ ಸವರಿದಾಗ
ಬೆಟ್ಟದ ಶಿರವು ಬೆಟ್ಟದ ಬುಡದಲಿ ಹೊರಳಾಡುವುದು.
ಅವನ ಭಯವು ಸರದಾರರ ಹೃಯವನು ಛಿದ್ರಗೊಳಿಸುವುದು.
ಮತ್ತು ವಿಚ್ಛಿದ್ರಕಾರಕ ಶಕ್ತಿಗಳ ಬೆನ್ನೆಲುಬು ಮುರಿಯುವುದು.
ಅವನ ಬಾಗಿಲಿನಿಂದ ರಾಜ್ಯಕ್ಕೆ ಗೌರವ ದೊರಕಿತು.
ಮತ್ತು ಅವನ ಶಿರದಿಂದ ಕಿರೀಟವು ಉನ್ನತಿಗೇರಿತು.
ಪರ್ವತವು ಅವನ ವೈಭವ ಮತ್ತು ವೈಭೋಗದ
ಸಂಪತ್ತಿನಿಂದ ಉಳಿದುದನ್ನು ಬಾಚಿಕೊಂಡು
ಸ್ವಪ್ರದರ್ಶನದ ಸೆರಗನ್ನು ತುಂಬಿಸಿಕೊಳ್ಳುತ್ತದೆ.

ಮತ್ತು ಸಾಗರವು ಅವನ ಕ್ಷಮೆಯ ಅಂಗೈಯಿಂದ ಮೋಡಗಳ ಹನಿಗಳನ್ನು ಶೇಖರಿಸಿ, ದೊಡ್ಡ ದನಿಯ ಅಲೆ ಹಾಗೂ ಉತ್ಪ್ರೇಕ್ಷೆಯಿಂದ ಕೂಡಿದ ಜನರ ಕಲಕಲ ಧ್ವನಿಯಿಂದ ತುರ್ಕಿಸ್ತಾನದ ಕೊರೆಸಸ್ ಪರ್ವತದ ಕಿವಿಯಲ್ಲಿ ಎಸೆದುಬಿಡುತ್ತದೆ ಮತ್ತು ಅವನ ಕ್ಷಮೆಯ ದ್ವಾರಗಳು ದೀನದಲಿತರು ಮತ್ತು ಫಕೀರರ ಸಲುವಾಗಿ, ಮೋಹದ ಬಲೆಯಲ್ಲಿ ಸಿಲುಕಿದ ಪ್ರೇಮಿಯ ಕಣ್ಣಿನಂತೆ ಯಾವಾಗಲೂ ತೆರೆದಿರುತ್ತದೆ. ಈ ಲೋಕ ಮತ್ತು ಲೋಕದ ಜನತೆಯು ಅವನ ಎಚ್ಚರದ ಶ್ರೀಮಂತಿಕೆಯಿಂದ ಎತ್ತಿ ನಡೆಯುವ ಅಮಲೇರಿದ ಮೋಹಕ ಪ್ರೇಯಸಿಯ ಕಣ್ಣೋಟದಂತೆ ಆದವು. ಅವಳ ಪ್ರೇಮದ ಮಾದಕತೆಯಲ್ಲಿ ಸಿಲುಕಿದವರು ಸಾಗರದ ಮೋಡಗಳಂತೆ ಗಗನವನ್ನು ಆಲಂಗಿಸಿದರು ಮತ್ತು ದುರ್ಬುದ್ಧಿಯ ಶ್ರೀಮಂತ ವ್ಯಕ್ತಿಗಳು ನೆಲದಡಿಯ ಮಳೆಯ

ಹನಿಗಳಂತೆ ಕಂಡುಬಂದರು. ಒಂದು ವೇಳೆ ಅವನ ಕರುಣೆಯು ಸಂತೋಷ ಮತ್ತು ನೆಮ್ಮದಿಯಿಂದ ಚಲಿಸುವ ಸಿಂಹದತ್ತ ಕಣ್ಣೋಟದ ಭಿಕ್ಷೆಯನ್ನು ಬೀರಿದ್ದಲ್ಲಿ ಸಿಂಹವು ತೇಜಸ್ವಿ ಸೂರ್ಯನಂತೆ ಬೆಳಗುವನು. ಒಂದು ವೇಳೆ ಅವನ ವಿವೇಚನೆ ಎಂಬ ಕೊತ್ವಾಲನು ಆಕಾಶದತ್ತ ಕಠಿಣ ನೋಟವನ್ನು ಬೀರಿದಲ್ಲಿ ಸೂರ್ಯನು ಚಂದ್ರನನ್ನು ಜೇಬಿನಲ್ಲಿ ಮುಚ್ಚಿಟ್ಟು ಅಣುವಿನಂತೆ ಭಯ ಮತ್ತು ವಿಹ್ವಲತೆಯಲ್ಲಿ ಮುಳುಗುವನು. ಒಂದು ವೇಳೆ ಅವನ ಲೋಕರಕ್ಷಕ ದಾನವು ಪ್ರಜ್ವಲಿಸುವ ಬೆಂಕಿಯು ಮಕ್ಕಳ ಸಲುವಾಗಿ ದಾದಿಯ ಕೆಲಸವನ್ನು ಮಾಡುವಂತೆ ಆಜ್ಞೆ ನೀಡಿದಲ್ಲಿ ಅದರಿಂದ ಹೊಗೆಯು ಬದಲಿಗೆ ಅದರ ಜ್ವಾಲೆಗಳ ಮೊಲೆಗಳಿಂದ ಸಹಸ್ರಾರು ಹಾಲಿನ ಚಿಲುಮೆಗಳು ಉದ್ಭವಿಸುತ್ತವೆ. ಒಂದು ವೇಳೆ ಅವನ ನೋಟವು ಮಕ್ಕಳ ಆಟಿಕೆಯ ಮರದ ಕತ್ತಿಗೆ ಸೂಚನೆ ನೀಡಿದಲ್ಲಿ ತತ್‌ಕ್ಷಣವೇ ಆ ದಿವ್ಯಧರ್ಮದ ಶತ್ರುವನ್ನು ಎರಡು ತುಂಡುಗಳಾಗಿ ಕತ್ತರಿಸುತ್ತದೆ. ಒಮ್ಮೊಮ್ಮೆ ಬಾಯಾರಿದ ಕತ್ತಿಯ ರಕ್ತಪಿಪಾಸುತನದಿಂದ ಬಂಜರು ಭೂಮಿಯನ್ನು ಸಾಗರವನ್ನಾಗಿ ಮಾಡುತ್ತದೆ ಮತ್ತು ಇನ್ನೊಮ್ಮೆ ಸಾಗರವನ್ನು ಕತ್ತಿಯ ಹೊಳಪಿನಿಂದ ಆಕಾಶಕ್ಕೆ ಎಸೆಯುತ್ತದೆ ಮತ್ತು ಸುಸಂಬದ್ಧವಾಗಿ ಪೋಣಿಸುವ ಲೇಖನಗಳ ಅಮೂಲ್ಯ ಮುತ್ತುಗಳನ್ನು ಬೊಂಬೆಗಳ ಕಿವಿ ಮತ್ತು ಕೊರಳುಗಳ ಅಲಂಕಾರದ ಸಲುವಾಗಿ ಅವುಗಳ ಹೊಗಳಿಕೆಯನ್ನು ಸಹೃದಯರ ಹೃದಯ ಸಾಗರದಿಂದ ವಿಚಾರ ಹೀನವಾಗಿ ಮುಳುಗಿ ಹೊರಬರುತ್ತದೆ. ಝುಲೇಖನಂತಹ ಅದೃಷ್ಟಶಾಲಿ ಪ್ರವಾದಿ ಯೂಸುಫ್ ಅಲೈಹಿಸ್ಸಲಾಮ್‌ರವರ ಬಗಲನ್ನು ಸೇರಲು

ಹೊಗಳಿಕೆಯ ಸಹಸ್ರಾರು ಶೋಭಾಯಮಾನವಾದ ಶಬ್ದಗಳಿಂದ ಅಲಂಕರಿಸುತ್ತಾರೆ. ಕುರೂಪಿ ಮತ್ತು ಕುಚೇಷ್ಟೆಯ ಜನರ ಮತ್ಸರದನೋಟವು ಪ್ರಜ್ವಲ ವೈಭವದ ಸೂರ್ಯನ ವೀಕ್ಷಣೆಯಿಂದ ಬೆಳಕಿನ ತೆರೆಯಿಂದ ಬಿಡುಗಡೆ ಹೊಂದುವನು ಹಾಗೂ ಅಜ್ಞಾನಿ ಮತ್ತು ದ್ವೇಷಪ್ರೇರಿತ ಶತ್ರುವಿನ ಕೈಕಾಲುಗಳು ಅವನ ಸಿಂಹದ ಜೊತೆಗಿನ ಸೆಣಸಾಟದ ವೀಕ್ಷಣೆ ಮತ್ತು ಪ್ರಭಾವದಿಂದ ರೋಮಾಂಚಿತನಾಗಿ ಅಂಗಾಂಗಗಳ ನಡುಗುವಿಕೆಯಿಂದ ಮತಿಹೀನರಾಗುತ್ತಾರೆ. ಎಂತಹ ಧರ್ಮಪಾಲ ಬಾದಶಹನಿದ್ದಾನೆ. ಇಡೀ ಸಮುದ್ರವನ್ನು ಕೆಲವೇ ಕ್ಷಣಗಳಲ್ಲಿ ತೇಜಸ್ಸನ್ನು ಹರಡುವ ಸೂರ್ಯನ ನೆರವಿನಿಂದ ಒಟ್ಟುಗೂಡಿಸಿದ್ದಾನೆ. ಕಣ್ಣರೆಪ್ಪೆ ಅಲುಗಿಸುವಷ್ಟರಲ್ಲಿ ಕರುಣೆಯ ಅರೆ ಸಂಕೇತ ಮಾತ್ರದಿಂದಲೇ ಬಡತನ ಅಸಹಾಯಕತೆ ಅದೃಷ್ಟಹೀನ ಅರಣ್ಯದಲ್ಲಿ ತೊಳಲಾಡುವವರ ಭವಿಷ್ಯವು ಅರಳುವುದು. ನ್ಯಾಯ ಪಾಲನೆಯ ಬಾವುಟವನ್ನು ಭೂಮಿಯಲ್ಲಿ ನೆಟ್ಟು ಪರಾಕ್ರಮಶಾಲಿ ಸಿಂಹಗಳ ಸ್ವಭಾವಕ್ಕೆ ವಿರುದ್ಧವಾಗಿ ಬೇಟೆಯಾಡುವುದರಿಂದ ಬೇಸರವುಂಟಾಗುವ ಮನಸ್ಸನ್ನು ಸುಸ್ಥಿತಿಯಲ್ಲಿ ಇಡುವುದು. ಸಿಂಹದಂತೆ ವಿದ್ಯೆಯಂತೆ ಗಾಳಿಯಲ್ಲಿ ಮಿತವ್ಯಯ ಮಾಡಿ, ಎಲೆಯುದುರುವ ಚಳಿಗಾಲದಲ್ಲಿ ಹೂತೋಟದ ಕುಶಲ ಉಸ್ತುವಾರಿಯನ್ನು

ಮಾಡುವುದು. ತನ್ನ ವೈಯುಕ್ತಿಕ ವಿಶೇಷತೆಯ ವಿರುದ್ಧವಾಗಿ ಬೆಳಗಿನ ಫಲ ಮತ್ತು ವೃಕ್ಷಗಳ ಜೀವರಕ್ಷಕನಾಗುವುದು ಆ ಮೂಲಕ ಲಾಭ ಪಡೆಯುವುದು ಮತ್ತು ನಷ್ಟವನ್ನು ನಿರ್ಮೂಲನ ಮಾಡುವುದು ಉನ್ನತ ಅಧಿಕಾರದ ಬಾವುಟದ ನೆರವಿನಿಂದ ಫಲಿತಾಂಶವನ್ನು ಪಡೆಯುವುದು. ಎಲ್ಲಾ ವಿರೋಧಿಗಳು ಮತ್ತು ದ್ವೇಷವನ್ನು ಹಿಡುಗಂಟಾಗಿರುವ ವಿದ್ರೋಹಿ ವ್ಯಕ್ತಿಗಳ ಶಿರಚ್ಛೇಧನ ಮಾಡುವುದು. ಏಕೆಂದರೆ ಲೌಕಿಕ ಹಾಗೂ ಧಾರ್ಮಿಕ ವಿಷಯಗಳಲ್ಲಿ ಮತ್ತು ಮೇಧಾವಿ ಹಾಗೂ ಅರ್ಥಗರ್ಭಿತ ಭಾಷೆಯ ನೆರವಿನಿಂದ ವ್ಯವಸ್ಥೆಯನ್ನು ಪಾರುಗೊಳಿಸುವುದು. ಕತ್ತಿಯ ಭಾಷೆಗೆ ಲಗಾಮನ್ನು ಹಾಕುವುದು ಅವನ ಕತ್ತಿಯು ಸೂರ್ಯನಂತೆ ಸದಾ ಮುಗುಳುನಗೆ ಬೀರುವಂತಹದಾಗಿದೆ. ರಾಜ್ಯದ ಶತ್ರುಗಳನ್ನು ಹಗಲು–ಇರುಳು ಧಾರಾಕಾರವಾಗಿ ಅಳುವಂತೆ ಮಾಡುವಂತಹದಾಗಿದೆ ಮತ್ತು ಅವನ ಲೇಖನಿಯು ಅಳುಬುರುಕು ಪ್ರೇಮಿಯ ಕಣ್ಣೋಟದಂತೆ ಆರ್ದ್ರವಾಗಿದೆ. ರಾಜ್ಯಕ್ಕಾಗಿ ಬಲಿಯಾಗುವ ವ್ಯಕ್ತಿಗಳಿಗೆ ಪ್ರೇಮಿಯ ಮುಗುಳುನಗೆ ಬೀರುವ ದಂತಪಂಕ್ತಿಯಂತೆ ಸದಾ ಹಸನ್ಮುಖಿಯಾಗುವಂತೆ ಮಾಡುವನು.

ಅವನ ವೈಭವ ಮತ್ತು ವೈಭೋಗವು ಕಪ್ಪು ಮುತ್ತು–ರತ್ನವಲ್ಲ ಬದಲಿಗೆ ಆ ಸಂಭ್ರಮದ ಹರಿತವಾದ ಅಮಲೇರಿದ ಝಳಪಿಸುವ ಮುತ್ತುರತ್ನವಾಗಿದೆ. ಅದರ ಮತ್ತು ದ್ರಾಕ್ಷಾರಸದ ಶರಾಬಿನಿಂದ ಉಂಟಾಗಿರುವುದಲ್ಲಿ ಬದಲಿಗೆ ಧರ್ಮ ದ್ರೋಹಿಗಳ ಅಪವಿತ್ರ ರಕ್ತದ ಶರಾಬಿನಿಂದ ಆಗಿರುವಂತಹದಾಗಿದೆ. ಅದರಿಂದ ಧರ್ಮದ ಹೂದೋಟದಲ್ಲಿ ಪುಷ್ಪ ಬಿರಿಯುವಂತಹ ಮೊಗ್ಗುಗಳು ಉಳಿದು ಅಂದ ಚೆಂದದ ತಾಜಾತನದಿಂದ ಹೂದೋಟಗಳು ನಳನಳಿಸುವವು ಹಾಗೂ ಶರಾ ಮೊಹಮ್ಮದಿಗೆ ಅವನ ಕತ್ತಿಯಿಂದ ಶಕ್ತಿ ದೊರಕುತ್ತದೆ. ಮತ್ತು ಅವನ ಲೋಕ ವಿಖ್ಯಾತ ಕತ್ತಿಯ ಚಲಿಸುವಿಕೆಯಿಂದ ಗಾಬರಿಗೊಂಡ ರಾಜ್ಯ ಮತ್ತು ಸಮುದಾಯಕ್ಕೆ ಸದಾ ನೆಮ್ಮದಿ ದೊರಕುತ್ತದೆ ಮತ್ತು ಅವರ ಧಾರ್ಮಿಕತೆಯ ಪ್ರಬುದ್ಧ ಬಾವುಟದ ಎತ್ತರದಿಂದ ಧರ್ಮಭ್ರಷ್ಟತೆಯು ಫರಿದೋನ್‌ನ ರಾಜಮರ್ಯಾದೆಯ ಲಾಂಛನದಂತೆ ಇದೆ ಮತ್ತು ಅವನ ದಾನಧರ್ಮಗಳ ಹಸ್ತಗಳು ಎಲ್ಲಾ ಊಟೋಪಚಾರಗಳ ಬೀಗದಕೈಯಾಗಿದೆ ಹಾಗೂ ಸಿಡಿಲಿನೋಪಾದಿಯಲ್ಲಿ ಅವನ ಖಡ್ಗವು ಹೊರೆಯಿಂದ ಹೊರಟು ಪಿತೂರಿ ಮತ್ತು ದಂಗೆಗಳ ಮೂಲವನ್ನು ನಿರ್ನಾಮ ಮಾಡುವಂತಹದಾಗಿದೆ.

ಪ್ರಾಣಾರ್ಪಣೆಯ ಸಂದರ್ಭದಲ್ಲಿ ಮೊಗ್ಗಿನ ಮೋರೆಯು ವಾಸ್ತವತೆಯ ದೃಷ್ಟಿಯಲ್ಲಿ ಕನ್ನಡಿಯಲ್ಲಿ ಇಂದು ಕಂಡು ಬರುತ್ತದೆ. ಸ್ವಾರ್ಥ ದೃಷ್ಟಿಯನ್ನು ಮೀರಿದ ದಾನ ಧರ್ಮವು ಸಮುದ್ರದ ಅಲೆಗಳಿಗೆ ಆವೇಶವನ್ನು ತರುತ್ತದೆ ಹಾಗೂ ಶತ್ರುಗಳನ್ನು ತ್ಯಜಿಸುವ ಸಂದರ್ಭದಲ್ಲಿ ತಾಳ್ಮೆಯ ಲೇಖನಿಯಿಂದ ವಸ್ತುಸ್ಥಿತಿಯನ್ನು ಸ್ವಾಗತಿಸುವ

ಬಣ್ಣದ ಅಂತ್ಯದಿಂದ ದಾಖಲಿಸುತ್ತದೆ. ಹಾಗೂ ಬುನಾದಿ ಇಲ್ಲದ ಬೇರುಗಳು ಗಟ್ಟಿ ಇಲ್ಲದ ಅಗ್ನಿಯನ್ನು ತತ್‌ಕ್ಷಣದಿಂದಲೇ ಪ್ರಜ್ವಲಿಸುವಂತೆ ಮಾಡುವುದಿಲ್ಲ. ರಕ್ತಪಾತ ಮತ್ತು ದಂಗೆಯ ಹೆಸರನ್ನು ನೀಡಲಾಗಿರುವ ಲೋಕದ ನಡವಳಿಕೆಗೆ ಅವನ ಪ್ರಭುತ್ವದ ದೆಸೆಯಿಂದ ರಕ್ತಪಾತವಿಲ್ಲದ ದಂಗೆಯಿಲ್ಲದ ರಾಜ್ಯವೆಂದು ಸ್ಥಾಪಿಸಲಾಯಿತು ಹಾಗೂ ಮೋಡವು ಅವನ ಲೋಕಪಾಲಕ ಆರ್ದ್ರವಾದ ಅಂಗೈ ಫಲವಾಗಿ ನಗರ ಮತ್ತು ಕಾಡಿನಲ್ಲಿ ಫಲವಂತಿಕೆಯಾಯ್ತು ಮತ್ತು ಸಿಂಹಾಸನದ ಮೇಲೆ ಹೆಮ್ಮೆ ಮತ್ತು ಪ್ರಾಶಸ್ತ್ಯದೊಂದಿಗೆ ಆರಾಮಾಸನದಲ್ಲಿ ಪೀಠಸ್ಥವಾಯಿತು. ಇದು ಅವನ ನ್ಯಾಯಪರತೆಯ ಕೊತ್ವಾಲಿಕೆಯ ದೆಸೆಯಿಂದ ಆಯಿತು. ಅವನ ಅಂಗೈಯ ಹೂದೋಟದಿಂದ ಪುಷ್ಪ ಮತ್ತು ಮೊಗ್ಗುಗಳು ಹೊರಡಲಿಲ್ಲ. ಅವನ ಪರಾಕ್ರಮದ ಭಯದಿಂದ ಕಾಫರರ ಹೃದಯದ ದೇಗುಲದಲ್ಲಿ ಮೂರ್ತಿಯು ಯಾವುದೇ ಗೌರವ ಮತ್ತು ಆದರರಗಳಿಂದ ಆಸೀನವಾಗಲಿಲ್ಲ.

ಇಡೀ ಲೋಕವೇ ಅವನ ಉಪಕಾರದ ತೀವ್ರತೆಯಿಂದ ಅವನ ರಾಜ್ಯಭಾರದಲ್ಲಿ ಆಹಾರದ ಸಲುವಾಗಿ ಸೂರ್ಯನ ಕಿರಣಗಳಿಗೆ ಕಂಗಾಲಾಗಲಿಲ್ಲ ಮತ್ತು ಈ ಅಕ್ಷರಲೋಕವು ಅವನ ಕೊಡುಗೆಗಳ ಮಳೆ ಮತ್ತು ಸಮೃದ್ಧಿಯಿಂದ ಆದಾಯದ ಸಲುವಾಗಿ ಮಳೆಯ ಹನಿಗಳಿಗೋಸ್ಕರ ಬೇಡಿಕೆಯನ್ನು ಇಡಲಿಲ್ಲ. ಆ ಕುರಿಯ ಹೃದಯ ವಿದ್ರಾವಕತೆಯನ್ನು ಗಮನಿಸಿ ಆ ಕುರಿಯು ಒಂದು ಕ್ಷಣವೂ ಕೂಡ ಅವನ ಉಪಕಾರದ ಕಾಡಿನಲ್ಲಿ ಮೇಯಲಿಲ್ಲ. ಜನಗಳನ್ನು ಹರಿದು ತಿನ್ನುವ ತೋಳವು ಅದನ್ನು ದುರಾಸೆಯಿಂದ ಮಣ್ಣಿನ ಗುಡ್ಡೆ ಮತ್ತು ಅಕ್ಷರದ ಲೋಕದಲ್ಲಿ ಕಟ್ಟಿ ದುಃಖ ಮತ್ತು ನೋವಿನ ಮುಳ್ಳುಗಳನ್ನು ತಿನ್ನುವಂತೆ ಬಲಾತ್ಕರಿಸುವಂತಾಯಿತು. ಇಂತಹ ಪುಟ್ಟ ಗುಬ್ಬಚ್ಚಿಯು ಎತ್ತರದ ಹಾರಾಟದ ದೆಸೆಯಿಂದ ತನ್ನ ಆಹಾರವನ್ನು ತಿನ್ನಲು ಸಾಧ್ಯವಾಗಲಿಲ್ಲ. ತನ್ನ ಸ್ವಭಾವದ ದುರಾಸೆಯನ್ನು ಕಿತ್ತೊಗೆದು ಮತ್ತು ಲಾಲಸೆಯ ದೃಷ್ಟಿಯಿಂದ ಕಣ್ಣನ್ನು ತೆರೆಯಲಿಲ್ಲ. ಚಳಿಗಾಲದಲ್ಲಿ ಎಲೆಗಳು ಎಲೆಗಳನ್ನು ಉದುರಿಸಿದಾಗ ಅವನ ಎತ್ತರದ ಅದೃಷ್ಟದ ಬೆಳಕಿನಲ್ಲಿ ನಕ್ಷತ್ರಗಳು ಉದಯವಾಗುವುದರಿಂದ ಸಪ್ತರ್ಷಿ ಮಂಡಲದ ಬಾದಶಹನು ಬೆಂಬಲವನ್ನು ನೀಡುತ್ತಾನೆ ಮತ್ತು ಮೋಡದಿಂದ ಬಿದ್ದ ಯಾವುದೇ ಹನಿಯು ಆ ಶುಭಹಸ್ತದ ಮೇಲೆ ಬಾಗುತ್ತದೆ ಮತ್ತು ಅವನು ಸಮುದ್ರವು ತನಗೆ ನೀಡಿದ ತನ್ನ ಉಪ್ಪಿನ ಉಪಕಾರವನ್ನು ಸ್ಮರಿಸುತ್ತಾನೆ ಹಾಗೂ ಸುರಸುಂದರಿಯರು ಮತ್ತು ಸುಗಂಧ ಪೂರಿತ ಮೋರೆಯನ್ನು ಹೊಂದಿರುವ ಬಿಂಬವನ್ನು ನೇತುಹಾಕಿರುತ್ತಾನೆ. ಏಕೆಂದರೆ ಪ್ರಜ್ಞೆ ಮತ್ತು ಬುದ್ಧಿಮತ್ತೆಯನ್ನು ಹೊಂದಿರುವ ಬುದ್ಧಿವಂತರು ಮತ್ತು ತಿಳುವಳಿಕಸ್ಥರು ಇದಕ್ಕೆ ಮೆಹರ್‌ಸಬಸಿ ಎಂಬ ಹೆಸರನ್ನು ನೀಡುತ್ತಾರೆ ಮತ್ತು ಅದರ ಶುಭೋದಯದ ಮೋಡದ ನೆರಳಾಗಿದೆ. ಲೋಕದ ಬುದ್ಧಿವಂತರು ಆಕಾಶ ಮತ್ತು

ಆಕಾಶಕಾಯಗಳ ವಾಸ್ತವತೆಯನ್ನು ಅರಿತವರು ಇದನ್ನು ಈದ್‌ನ ಚಂದ್ರ ಎಂದು ಕರೆಯುತ್ತಾರೆ. ಅವನ ಕೋಪದ ಗಾಳಿಯು ಸಮುದ್ರದ ಹೃದಯದಲ್ಲಿ ಮರ್‌ಜಾನ್‌ನ ಶಾಖೆಯಿಂದ ಬೆಂಕಿಯನ್ನು ಉತ್ಪಾದಿಸುತ್ತದೆ ಮತ್ತು ಅವನ ಪ್ರೀತಿಯು ತರಬೇತಿಯ ಕಿವಿಯಲ್ಲಿ ಕಲ್ಲುಗಳನ್ನು ಹಾಕಿ ನೇರದ ಅರಿವಿನ ವೇಗವನ್ನು ಹೆಚ್ಚಿಸುತ್ತದೆ. ಅವನ ಅತ್ಯಂತ ದ್ವೇಷಪೂರ್ವಕ ಶತ್ರುವು ಅವನ ತೀವ್ರ ವಕ್ರತೆಯಿಂದ ಸೀಮರ್ ಎಂಬ ಕಾಲ್ಪನಿಕ ಪ್ರಾಣಿಯಂತೆ ದುಃಖ ಮತ್ತು ಯಾತನೆಯಿಂದ ಕೂಡಿದ್ದು ಪರ್ವತದಲ್ಲಿ ಠಿಕಾಣಿ ಮಾಡುತ್ತಾನೆ ಮತ್ತು ಅವನ ಅಂಧಕಾರದ ಹೃದಯ ಹಾರೂತ್‌ಮಾರೂತ್ ಎಂಬ ಶತ್ರುಗಳ ರೀತಿಯಲ್ಲಿ ನೀಚತನದ ಬಾವಿಯಲ್ಲಿ ಸೆರೆಯಾಗುತ್ತಾನೆ ಮತ್ತು

ಪ್ರತಿ ಅಂಧಕಾರದ ಮೋರೆಯನ್ನು ಇಡುವವನಾಗುತ್ತಾನೆ. ಅವನು ವರದತ್ತ ರಾಜ್ಯದ ಜೊತೆಯಲ್ಲಿ ವ್ಯರ್ಥ ಪ್ರಲಾಪ ಮಾಡುವ ನಾಲಿಗೆಯನ್ನು ಇಟ್ಟಿರುತ್ತಾನೆ. ಅದೃಷ್ಟವನ್ನು ನಿರ್ಧರಿಸುವ ಅವನ ಮೇಲೆ ನೀಚತನ ಹಾಗೂ ಕುಪ್ರಸಿದ್ಧ ಚಿಕ್ಕ ಚಾಕುವಿನ ಅಲಗಿನ ಮೊನೆಯಿಂದ ಸೀಳಿ ಅಹಂಕಾರಿಯ ಮೊರೆಯನ್ನು ಗುರುತಿಸುತ್ತಾನೆ. ರಾಜ್ಯದ ಬೆಂಬಲಿಗರು ಮತ್ತು ಕೃಪಾಕಾಂಕ್ಷಿಗಳ ಜೊತೆಯಲ್ಲಿ ಇಟ್ಟಿರುವ ಉತ್ತಮ ಭವಿಷ್ಯದ ಬಿರುದಾವಳಿಗಳು ಅವನ ಹೃದಯ ಶ್ರೀಮಂತಿಕೆಯ ತರಹ ಅವಿಧೇಯರ ಗೋರಿಗಳಿಂದ ಹೆಚ್ಚು ಅಂಧಕಾರಮಯವನ್ನಾಗಿಸಿ ಮತ್ತು ಅವರ ದೇಹವನ್ನು ಸೀಳುವ ಮತ್ತು ಪ್ರಾಣವನ್ನು ಹತ್ಯೆ ಮಾಡುವ ಭರ್ಜಿಯನ್ನಾಗಿ ಮಾಡುತ್ತಾನೆ.

ಅವನ ಕತ್ತಿಯ ಪ್ರಭೆಯು ಅಂಗೈಯ ಮೇಲೆ ಹೊಳೆಯುತ್ತಿತ್ತು. ಧರ್ಮದ
ಶತ್ರುಗಳ ಮೇಲೆ ನಿರ್ಣಾಯಕ ಆಜ್ಞೆಯು ಮೇಲುಗೈ ಪಡೆದಿತ್ತು.
ಅವನ ಹೃದಯ ಮತ್ತು ಹಸ್ತಗಳು ದಾನ ಧರ್ಮದಲ್ಲಿ
ಸಮುದ್ರ ಮತ್ತು ಕಪ್ಪು ಮೋಡದಂತಿದೆ.
ಎಂತಹ ಕಪ್ಪು ಮೋಡ ಅಂದರೆ ಯಾವುದೇ
ವಿಷಾದವಿಲ್ಲದೆ ಮುತ್ತು ಸುರಿಯುತ್ತದೆ.

ಅವನ ಅಂಗೈ ಮತ್ತು ವಸಂತದ ಮೋಡದ
ನಡುವೆ ಯಾವ ನಂಟು
ಏಕೆಂದರೆ ಅಂಗೈಯು ಮುತ್ತನ್ನು ನಿವಾಳಿಸುತ್ತದೆ.
ಮತ್ತು ಅದು ಮಳೆಹನಿಯಾಗಿದೆ
ಸರ್ವಕಾಲಿಕ ಪ್ರಭುವಾದ ಅಲ್ಲಾಹನ ಕರುಣೆಯ ನೆರಳಾಗಿದೆ.
ಆದರೆ ಆ ನೆರಳಿನ ಆಸರೆಯನ್ನು ಬಯಸುವವನಿಗೆ
ಅದಃಪತನವು ಕಾಣಿಸುವುದಿಲ್ಲ.

ಅವನ ಗೌರವಾನ್ವಿತ ನ್ಯಾಯದಿಂದ ಬೇವಕೂಫ ಗೂಬೆಯು ಉದ್ವಿಗ್ನವಾಯಿತು. ಅದೊಂದು ಅಮೂಲ್ಯವಾದ ಖಜಾನೆಯ ರೀತಿಯಲ್ಲಿ ನಾಶವಾಯಿತು.

ಒಟ್ಟಾರೆ ಬಾಯಿಯ ಸಂದೂಕನ್ನು ಮಾತಿನ ಬೀಗದಿಂದ ತೆರೆದು ಹಾಗೂ ಮೌನಧಾರಣೆಯ ಸ್ವಭಾವದ ಬಾಗಿಲನ್ನು ವ್ಯಾಖ್ಯಾನದ ಹಾಸಿಗೆಯ ಮೇಲೆ ಹರಡಿ ಆ ವಿವರವಾದ ವರದಿಯಿಂದ ಒಟ್ಟಾರೆ ರಖಮನ್ನು ಜಮೆಮಾಡಿ ಎರಡು ಉಭಯ ಕಿವಿಗಳಿಗೆ ನೆಮ್ಮದಿಯನ್ನು ಕರುಣಿಸಲಾಯಿತು. ಬುದ್ಧಿಗೇಡಿಗಳು ಮತ್ತು ಕಪ್ಪು ಹೃದಯದ ಕುಚೇಷ್ಟೆಗಳ ಸಲುವಾಗಿ ಈ ರಖಮು ಹೃದಯ ಭೇದಕವಾಗಿದೆ. ಹಜರತ್‌ಬಾದಶಹ ಘಾಜಿಯ ಶುಭ ಕೆನ್ನೆಗಳ ಪುಸ್ತಕದ ಶುಭ ಬರಹವು ಹಾಳೆಯನ್ನು ಕುಬೂಲೂ ಮಾಡಿ, ತಮ್ಮ ಶುಭ ಕೆನ್ನೆಗಳ ಹೂದೋಟವನ್ನು ಕೃತಜ್ಞತೆಯ ಹಸಿರಿನಿಂದ ಶೋಬಾಯಮಾನವಾಗಿಸಿತು. ಹಜರತ್‌ಬಡೀ ಸಾಹೇಬರವರ ಬಯಕೆ ಏನಾಗಿತ್ತೆಂದರೆ ಈ ಭವ್ಯ ಔತಣಕೂಟದ ದಾನಧರ್ಮಗಳ ಖರ್ಚುವೆಚ್ಚದ ಹೊಣೆಗಾರಿಕೆಯನ್ನು ತಮ್ಮ ಮೇಲೆ ಇರಿಸಿಕೊಂಡು ಸ್ವತಃ ತಾವು ಎಲ್ಲಾ ಹಿರಿ-ಕಿರಿ ಜನರ ಹೃದಯದ ಸಫಲತೆ ಮತ್ತು ವಿಜಯದ ಅರಮನೆಗಳ ಕಟ್ಟಡಗಳ ಬುನಾದಿಯನ್ನು ಹಾಕಿದರು. ಮತ್ತು ದುಃಖ ಹಾಗೂ ಯಾತನೆಯ ನೆರಳನ್ನು ಉತ್ತಮ ಮತ್ತು ಕೆಳಹಂತದ ಎಲ್ಲಾ ವಿಧದ ಹೃದಯಗಳಿಂದ ನಾಶಮಾಡುವಂತೆ ಇದೇ ಆಧಾರದ ಮೇಲೆ ಈಉದ್ದೇಶದ ಮುತ್ತು ರತ್ನಗಳನ್ನು ಅಭಿವ್ಯಕ್ತಿಯ ತಟ್ಟೆಯಲ್ಲಿ ಇಟ್ಟರು ಮತ್ತು ಆ ಉದ್ದೇಶದ ಮುತ್ತುಗಳನ್ನು ಅಭಿವ್ಯಕ್ತಿ ಮಾಡಿ, ದಾರದಲ್ಲಿ ಪೋಣಿಸಿ ಇಡೀ ಲೋಕವನ್ನು ಶೃಂಗರಿಸುವ ಹಜರತ್ ಬಾದಶಹ ಘಾಝಿಯ ಅಭಿಪ್ರಾಯವನ್ನು ತಿಳಿದುಕೊಂಡು ಆಜ್ಞಾನುಸಾರ ಮತ್ತು ಸೇವೆಯ ಕಾಡಿನ ಪ್ರಯಾಣಿಗರು ಮತ್ತು ಶುಭಾಕಾಂಕ್ಷಿಗಳ ಸ್ಥಾನದ ಮೇಲೆ ಸ್ಥಿರವಾಗಿ ನಿಲ್ಲುವ ಆಜ್ಞಾಧಾರಕರಿಗೆ ಹುಕುಮ್ ನೀಡಿದರು.

ಅಂದರೆ ಆ ಅದ್ಭುತ ಸಮಾರಂಭದ ವ್ಯವಸ್ಥೆ ಮತ್ತು ಸಂತೋಷದ ಹೆಚ್ಚಳದ ಸಭೆಯ ಶೋಭೆಯ ಸಲುವಾಗಿ ನಿಯುಕ್ತರಾಗಿದ್ದ ಜನರು ಅಲ್ಲಿನ ಸಂಪತ್ತಿನ ಅನುಸಾರ ಯಾರು ಹುಕುಮನ್ನು ವಿಧೇಯತೆಯಿಂದ ಪಾಲಿಸಿದರು. ಯಾರು ಮುಂಜಾನೆಯ ತಂಗಾಳಿಯಂತಹ ಉತ್ತಮ ಜನ ಮತ್ತು ಸೇವಾಕಾಂಕ್ಷೆ ಜನರಿದ್ದರು. ಅವರು ಲೌಕಿಕ ಮತ್ತು ಪರಲೋಕದ ಹೂದೋಟದಲ್ಲಿ ಸಕ್ರಿಯವಾಗಿ ಸೇವಾಕಾಂಕ್ಷಿಗಳಾಗಿ ತೊಡಗಿಸಿಕೊಂಡಿದ್ದಾರೆ ಅವರ ಸೇವೆಯ ಶ್ರಮವು ಸಂತೋಷ ಹಾಗೂ ಶ್ರೇಯಸ್ಸಿನ ಹಸಿರಿಗೆ ಅದ್ಭುತವಾದ ಕಸವು ಮತ್ತು ತಾಜಾತನವನ್ನು ನೀಡಿತು ಹಾಗೂ ಬಾದಶಾಹಿ ರಾಜ್ಯದ ಪ್ರಭುತ್ವದ ಕೆಲಸಕಾರ್ಯಗಳ ಪಾನಗೃಹದ ಪಾನಪ್ರಿಯರು ಮತ್ತು ರಾಜನ ಸೇವಕರು ಆಸ್ಥಾನದ ಸೇವಕರು ಆ ಶರಾಬುಖಾನೆಯ ಈ ಅದ್ಭುತವಾದ ಶುಭಗಳಿಗೆಯಲ್ಲಿ ಅಂದರೆ ಹೆಮ್ಮೆಯ ಸಂಪತ್ತನ್ನು ಇಡುವಂತಹ ಅಭಿಪ್ರಾಯವನ್ನು

ನೀಡಿದ್ದು ಅಂದರೆ ಜ್ಯೋತಿಷ್ಯದ ಅಭಿಪ್ರಾಯದ ಮೇರೆಗೆ ಜ್ಯೋತಿಷ್ಯ ಗ್ರಂಥಗಳನ್ನು ಅದರ ಅದೃಷ್ಟದ ಮೇರೆಗೆ ಪ್ರಕಟಗೊಳಿಸುವುದು ಮತ್ತು ಅಂತಹ ಸಂದರ್ಭದಲ್ಲಿ ಹೃದಯದ ತೋಟದ ಹೂಗೊಂಚಲನ್ನು ಪುಷ್ಪ ಮತ್ತು ಹೂದಂಡೆಯ ಸುಂದರವಾದ ಸುವಾಸನೆ ಬೀರುವ ಹೂವುಗಳನ್ನು ಬುದ್ಧಿವಂತಿಕೆಯ ದೃಷ್ಟಿಯಿಂದ ಬೆಳಕನ್ನು ಚೆಲ್ಲುವವರು ಮತ್ತು ಬುದ್ಧಿವಂತಿಕೆ ಹಾಗೂ ಚಿಂತಕರು ಮತ್ತು ದೂರದೃಷ್ಟಿಯುಳ್ಳ ಬೆಂಬಲಿಗ ಜನರ ಹೃದಯಗಳನ್ನು ಆನಂದ ಸಂತೋಷದ ಸಾಮಗ್ರಿಯಿಂದ ತುಂಬಿದರು. ದೈವಭೀರು ತಿಳುವಳಿಕೆಯ ಜನ ವಿಚಿತ್ರ ಮತ್ತು ವೈಚಿತ್ರ್ಯಗಳನ್ನು ಗಮನಿಸಿದರು. ಮತ್ತು ಎಲ್ಲಾರೀತಿಯ ಉನ್ನತವಾದಂತಹ ಹಾಗೂ ಕೆಳಹಂತದ ಜನರ ಸಲುವಾಗಿ ನಿರಂತರವಾದ ಪ್ರಿಯತಮನ ಅಂದರೆ ಅಲ್ಲಾಹುನನ್ನು ಅನ್ವೇಷಣೆ ಮಾಡುವುದು ಮತ್ತು ಆತನ ಆತ್ಮ ನಿರೀಕ್ಷಣೆ ಮಾಡತಕ್ಕಂತಹ ಭಗವಂತನ ಅನ್ವೇಷಣೆಯ ಸರಪಳಿಗಳನ್ನು ಚಾಲನೆಗೆ ಹೊದುವಂತಹದಾಗಿದೆ. ಅಷ್ಟೇ ಅಲ್ಲದೆ ದೃಶ್ಯಗಳನ್ನು ಕೊಂಬೆ ಮತ್ತು ಫಲಗಳಿಂದ ತುಂಬಿದ ಕೊಂಬೆಗಳನ್ನು ಅಂದರೆ ವಸಂತದ ತೋಟದ ರೀತಿಯ ವ್ಯವಸ್ಥೆಯನ್ನು ಮಾಡಲಾಯಿತು. ಮತ್ತು ಅವುಗಳನ್ನು ಮುತ್ತಿನಿಂದ ತುಂಬಿ ತುಳುಕಿದ ಸಮುದ್ರದ ಮಳೆಯಂತೆ ಶ್ರೀಮಂತಿಕೆಯ ಸುವ್ಯವಸ್ಥಿತವಾದ ಸಂಪತ್ತಿನ ಕೇಂದ್ರವನ್ನಾಗಿ ಮಾಡಲಾಯಿತು. ಬುಲ್-ಬುಲ್ ಹಕ್ಕಿಯ ಸುಶ್ರಾವ್ಯವಾದ ರಾಗದಿಂದ ಹೂವಿನ ಸ್ವಭಾವವು ಅದನ್ನು ವೀಕ್ಷಿಸಿ ಅಮಲೇರಿದಂತಾಗಿ ಸೂಫಿಯ ಅಮಲಿನಿಂದ ನೃತ್ಯ ಮಾಡಲು ಆರಂಭಿಸುವಂತೆ ಮತ್ತು ವಸಂತದ ಮೋಡವು ಪ್ರೇಕ್ಷಣೆಗೈಯ್ಯುವಂತೆ ಬಾಯಾರಿದ ತುಟಿಗಳ ಮೇಲೆ ಪ್ರೋಕ್ಷಣೆ ಮಾಡಲಾಯಿತು ಹಾಗೂ ತೀವ್ರ ಬಾಯಾರಿಕೆ ಮತ್ತು ಸಂಕಷ್ಟಕರ ಜೀವಕ್ಕೆ ಬಿಡುಗಡೆ ಹಾಗೂ ಮುಕ್ತಿಯನ್ನು ಕರುಣಿಸಿತು. ಅಷ್ಟೇ ಅಲ್ಲದೆ ತೋಟಗಳ ಪರೀಕ್ಷಿತ ವಧುವನ್ನು ಬಣ್ಣಗಳಿಂದ ಕೂಡಿದ ಸಿಂಗಾರದ ಮಹಿಳೆಯನ್ನು ಹೂವಿನ ಬಣ್ಣದ ರೀತಿಯಲ್ಲಿ ಚಂಬಲ್ ವೃಕ್ಷದಿಂದ ಶೋಭೆಯನ್ನು ನೀಡಲಾಯಿತು.

ಅಂಗೈಗಳ ಎಲೆಗಳು ವೃಕ್ಷಗಳ ತಾಜಾತನ ಮತ್ತು ಹಸಿರಿಗಾಗಿ ಮತ್ತು ಅವುಗಳ ಸ್ವಾಗತದ ಸಲುವಾಗಿ ಗಗನದತ್ತ ಮೋರೆಯನ್ನೆತ್ತಿ ಪಕ್ಷಿಗಳ ಕೊರಳಿನಿಂದಲೂ ಕೂಡ ಸುಶ್ರಾವ್ಯವಾದ ಗೀತೆಯನ್ನು ಹಾಡುವಂತೆ ಮಾಡಿದರು ಹಾಗೂ ಬುಲ್-ಬುಲ್ ಮತ್ತು ಅಂದಲೀಪ್ ಪಕ್ಷಿಗಳ ಸಮೀಪ ವರ್ತಿಗಳಿಗೆ ಈ ಸ್ತುತಿಯ ಹಾಡನ್ನು ಎತ್ತರದ ಕಲ್ಲುಗಳ ಶಿಲೆಗಳ ಮೇಲೆ ಮತ್ತು ತಾಜಾ ಪುಷ್ಪಗಳು ಮತ್ತು ಪುಷ್ಪದ ದಂಡೆಗಳನ್ನು ಅವಧಿಯನ್ನು ನಿಗದಿಪಡಿಸುವವರಂತೆ ಪ್ರವಚನದ ಸಲುವಾಗಿ ವಸಂತ ಗಾನದ ಸುಶ್ರಾವ್ಯತೆಯೊಂದಿಗೆ ಸ್ತುತಿಯ ಪ್ರವಚನವನ್ನು ಆರಂಭ ಮಾಡಲಾಯಿತು ಮತ್ತು ಎಲ್ಲಾ ವಿದ್ವಾಂಸರನ್ನು ಕೂಡಾ ನಿರಂತರವಾದ ಆನಂದ ಮತ್ತು ನ್ಯಾಯ ಹಾಗೂ

ಬಹುಮಾನಗಳನ್ನು ನೀಡಲಾಯಿತು ಮತ್ತು ತಂಗಾಳಿಯ ನಿಯಮಿತವಾದ ಸೇವನೆಯಿಂದ ತೋಟ ಮತ್ತು ಅರಣ್ಯದಲ್ಲಿ ಅಂತಹ ಪುರುಷರ ದೇಹಗಳು ಆರೋಗ್ಯ ಶಾಲೆಗಳಾಗಿ ಕಂಗೊಳಿಸತೊಡಗಿದವು ಹಾಗೂ ಸಂಭ್ರಮದ ವಾತಾವರಣವನ್ನು ಎಲ್ಲೆಡೆ ವ್ಯಾಪಿಸಿ ಸಂತೋಷ ಸಂಭ್ರಮವು ಎಲ್ಲೆ ಮೀರತೊಡಗಿತು. ಅತ್ಯಂತ ಬಲಶಾಲಿಗಳು ಗುಡಿಸುವ ಸಾರಿಸುವ ಸೇವಕರು ಜನಗಳಿಗೆ ಆದೇಶ ನೀಡಿ ಡೇರೆ ಮತ್ತು ಶಾಮಿಯಾನಗಳನ್ನು ನಿರ್ಮಿಸಿದರು. ಮತ್ತು ಅದರ ಕೆಳಗೆ ಆಕಾಶವು ಮೊಟ್ಟೆಯಂತೆ ಗೋಪುರದಲ್ಲಿ ತೇಲುವುದು. ಅದು ಚಂದ್ರ ಮತ್ತು ಸೂರ್ಯ ಒಟ್ಟಿಗೆ ಕಂಗೊಳಿಸುವಂತೆ ಕಂಡುಬಂತು ಹಾಗೂ ಸಂಚರಿಸುವ ಚಲನೆಯಲ್ಲಿರುವ ಎಲ್ಲಾ ನಕ್ಷತ್ರಗಳು ಅವುಗಳ ನಡುವೆ ಕಂದೀಲಿನಂತೆ ಕಂಡುಬರತೊಡಗಿದವು. ಅಲಂಕಾರಕ್ಕೋಸ್ಕರ ಅವುಗಳನ್ನು ಕಟ್ಟಿದಂತೆ ಮತ್ತು ಅವುಗಳ ಪ್ರತಿ ಹಗ್ಗವು ದೇವರ ಪ್ರೀತ್ಯರ್ಥ ಅಬೂಲ್ ಸ್ಥಿರ ಕಂಬಗಳಂತೆ ಲೋಕ ಪಾವನ ವ್ಯಕ್ತಿಗಳು ಅಂಟಿಸಿದರು. ಅದರ ಪ್ರತಿಯೊಂದು ಕಂಬಗಳು ಕೂಡಾ ಅತ್ಯಂತ ಸೌಂದರ್ಯದಿಂದ ಕೂಡಿದ ಮೋರೆಯನ್ನು ಉಳ್ಳ ಕುಲೀನ ಸ್ತ್ರೀಯ ಎತ್ತರದಂತೆ ತುಂಬಾ ಅದ್ಭುತ ಸೌಂದರ್ಯದಿಂದ ಭೂಮಿಯ ಮೊಳೆಗಳಂತೆ ದೃಢವಾಗಿ ನಿಲುವಿನಂತೆ ಬಾದಶಹನ ಅರಮನೆಯ ಅಂಗಳದ ಮುಂಭಾಗದಲ್ಲಿ ನಿಲುವಂತೆ ಮಾಡಲಾಯಿತು ಮತ್ತು ಆ ಬೇರೆ ಶಾಮಿಯಾನಗಳ ಕೆಳಭಾಗದಲ್ಲಿ ತುಂಬಾ ಚೆಲುವಾದ ಮತ್ತು ಅಲಂಕೃತವಾದ ಅದ್ಭುತ ವರ್ಣಗಳಿಂದ ಕಂಗೊಳಿಸುತ್ತಿದ್ದ. ಕಂಬಳಿಗಳನ್ನು ಹಾಸಲಾಯಿತು. ಅದರ ಶೃಂಗಾರ ಮತ್ತು ಕುಸುರಿ ಕೆಲಸದ ಸಲುವಾಗಿ ರೋಮ್‌ನಿಂದ ನಿಪುಣ ಕಲೆಗಾರ ಮತ್ತು ಇರಾನಿನ ಬೆಹಜಾದ್‌ನಿಂದ ಇನ್ನೊಬ್ಬ ಪರಿಣಿತ ಕುಶಲಕರ್ಮಿಯು ಆಗಮಿಸಿದರು. ಒಂದು ವೇಳೆ ಆ ಸಭೆಯ ಸುದ್ದಿಯನ್ನು ಮೊದಲೇ ತಿಳಿದಿದ್ದಲ್ಲಿ, ತಮ್ಮ ರಕ್ಷಣೆ ಮತ್ತು ಗೌರವ ಮರ್ಯಾದೆಯನ್ನು ಉಳಿಸಿಕೊಳ್ಳುವ ಸಲುವಾಗಿ ತಮ್ಮ ತಾಯಿಯು ಗರ್ಭದಿಂದ ಈ ಲೋಕಕ್ಕೆ ಕಾಲಿಡುವ ಧೈರ್ಯವನ್ನು ಖಂಡಿತವಾಗಿಯೂ ಅವರು ಮಾಡುತ್ತಿರಲಿಲ್ಲ.

ಎತ್ತರದಲ್ಲಿ ಆಕಾಶವನ್ನು ಹೋಲುವ ತಾಜಾ ಮತ್ತು ಕೌಶಲ್ಯಪೂರ್ಣವಾದ ರತ್ನಗಂಬಳಿಗಳನ್ನು ಶಾಮಿಯಾನದಲ್ಲಿ ಹಾಸಲಾಯಿತು. ಅಪ್ಸರೆಯಂತಹ ವೈಯ್ಯಾರ ಮತ್ತು ಬಳುಕುವಿಕೆಯ ನಡೆಯನ್ನು ನಡೆಯುವ ಮತ್ತು ಪುಷ್ಪದಂತಹ ದೇಹವನ್ನು ಹೊಂದಿದ ಸುಂದರಿಯರು ಒಂದುವೇಳೆ ಆಕಸ್ಮಿಕವಾಗಿ ವಿಶೇಷ ಬಣ್ಣದ ಮುಂಗುರುಳಿನ ಛಾಯೆಯ ಸೂರ್ಯನೋಪಾದಿಯ ಸಭೆಯ ಮೇಲೆ ಬಿದ್ದಲ್ಲಿ ಇಡೀ ಲೋಕವು ನಾಶವಾಗುವವರೆಗೂ ತಲೆಯನ್ನು ಕತ್ತಲಗರ್ಭದಲ್ಲಿ ಕೆಳಹಾಕುವರು ಮತ್ತು ವಿಶ್ವವನ್ನು ಬೆಳಗುವ ಪ್ರಕಾಶಮಯವಾದ ಕುರ್ಚಿಯಲ್ಲಿ ಆಸೀನವಾಗಿರುವ ಮತ್ತು ಭೂಮಿಯ

ಮೇಲೆ ಸೂರ್ಯನ ಕಿರಣಗಳಿಂದ ಕಂಗೊಳಿಸುತ್ತಿರುವ ಸಿಂಹಾಸನದ ಮೇಲೆ ಖಂಡಿತವಾಗಿಯು ಆಸೀನನಾಗುತ್ತಿರಲಿಲ್ಲ. ಮತ್ತು ಅವರ ಬೆವರಿನ ಒಂದು ಹನಿಯು ಅಮೃತದ ಬಿಂದುಗಳಿಗಿಂತಲೂ ಹೆಚ್ಚು ಸಾವಿರಾರು ಪಟ್ಟು ಹೆಚ್ಚು ಉತ್ತಮ ದರ್ಜೆಯದಾಗಿತ್ತು. ಒಂದು ವೇಳೆ ಭೂಮಿಯ ಅಂಗಾಲಿನ ಮೇಲೆ ಬಿದ್ದಲ್ಲಿ ತೋಟಗಳು ಮತ್ತು ಅರಣ್ಯಗಳು ಅತ್ತರ್ ಮತ್ತು ಪನ್ನೀರಿಗಿಂತಲೂ ಹೆಚ್ಚು ಸುಗಂಧಪೂರಿತವಾಗುವವು. ನೃತ್ಯ ಮತ್ತು ಅಮೋದ ಪ್ರಮೋದಗಳಲ್ಲಿ ಆ ಜಿಂಕೆಯ ರೀತಿಯಲ್ಲಿ ಆಗುವವರು ಹರಿಣಿಗಳನ್ನು ಬೇಟೆಯಾಡುವವರು ಸ್ವತಃ ಬೇಟೆಯಾಡಲ್ಪಡುವಂತೆ ಹೂವಿನಂತಹ ಮೋರೆಯು ಹೊಂದಿದ್ದಂತಹ ಮಧುರ ಭಾಷಿಣಿ ಚಂದ್ರನಂತಹ ಮೋರೆ ಮತ್ತು ಶ್ರೇಣಿಗಳ ಸಲುವಾಗಿ ಆಕರ್ಷಿಸುವ ಸಲುವಾಗಿ ಮುಗುಳುನಗೆಯ ಕನ್ನಡಿಯನ್ನು ಬೀರುತ್ತ ತೋಟಗಳಲ್ಲಿ ಉದಾಸವಾದ ಬಣ್ಣದ ವಾತಾವರಣವನ್ನು ಬೀರುತ್ತಾ ಜಂಷೀದ್‌ನ ಪಾನದಂತೆ ಸೂರ್ಯನ ಕನ್ನಡಿಗಿಂತಲೂ ಹೆಚ್ಚು ಬೆಳಕು ಬೀರುವವರು ಮತ್ತು ಹೊಳೆಯುವವರನ್ನಾಗಿ ಮಾಡಿದರು ಮತ್ತು ದೈವಲೋಕದ ಸೌಂದರ್ಯದ ಯುಕ್ತಿಯಿಂದ ದುಃಖ ಮತ್ತು ಯಾತನೆಯ ವಿದ್ರೋಹಿ ದೈತ್ಯಕಾರಿಗೆ ಪ್ರೇಮ ಮತ್ತು ಆನಂದದ ಉಂಗುರದಿಂದ ಹಿಡಿದು ಆ ದೇಶದಿಂದ ಸಾವಿರಾರು ಕ್ರಮಗಳಿಂದ ಆರೋಪಗಳನ್ನು ಹೊರಿಸಿ ಹಾಗೂ ಅವಮರ್ಯಾದೆಯನ್ನು ಎದ್ದು ಕಾಣುವಂತೆ ಮಾಡುವ ಜಲಗಳ ಹೃದಯಗಳಿಂದ ಹೊರ ಎಸೆಯುದಂತಹದು ಇದೇ ಪ್ರಪಂಚಕ್ಕೆ ನೆಮ್ಮದಿ, ಶಾಂತಿ ಮತ್ತು ಕರುಣಿಸುವ ಪ್ರಯತ್ನವನ್ನು ಮಾಡಲಾಯಿತು. ಮತ್ತು ದೇಶದಲ್ಲಿ ದಾವೂದ್ ಪ್ರವಾದಿಯವರಂತಹ ಸುಶ್ರಾವ್ಯ ಕಂಠದಿಂದ ಅದ್ಭುತವಾದ ಗಾನವನ್ನು ಆಲಾಪಿಸಲಾಯಿತು. ಅದ್ಭುತ ಗಾನದಿಂದ ನೆಮ್ಮದಿ ಮತ್ತು ಸಂತೋಷದ ಸೆಲೆಯನ್ನು ಹರಡಿ ಆ ಎಚ್ಚರವನ್ನು ವಹಿಸಿ ಜನಗಳ ಹೃದಯಗಳಲ್ಲಿ ಸಂತೋಷ,ನೆಮ್ಮದಿ ಮತ್ತು ಸಂಭ್ರಮದ ರಾಜಮರ್ಯಾದೆಗಳನ್ನು ಕೊಡಮಾಡಲಾಯಿತು.

ಆ ಸಭೆಯ ಸುಮಧುರ ಕಂಠದ ಜನರನ್ನು ಸಂತೋಷ, ಸಂಭ್ರಮ ಮತ್ತು ನೆಮ್ಮದಿ ಹಾಗೂ ವಿಜಯದ ಪರಿಣಿತರು ವಾದ್ಯ ಗಾಯನದ ಮೂಲಕ ಯುವಕರು ಮತ್ತು ವೃದ್ಧರ ಸಭೆಗಳಲ್ಲಿ ಸಂಕಷ್ಟಗಳನ್ನು ಮರೆತವರಂತಾದರು ಮತ್ತು ನಿರಂತರವಾಗಿ ಶೋಭಾಯಮಾನವಾದ ಕಂಗೊಳಿಸುತ್ತಿದ್ದ ವೇದಿಕೆಯ ಅಧ್ಯಕ್ಷರ ನೆನಪಿನಲ್ಲಿ ಅನೇಕ ಸ್ತುತಿಗಳನ್ನು ಹಾಡಲಾಯಿತು ಹಾಗೂ ಪ್ರೇಮ,ಹೊನ್ನು ಬದುಕನ್ನಾಗಿಸಿದ್ದು, ಸೌಂದರ್ಯದ ಸಂತೋಷ ಹಾದಿಯಲ್ಲಿ ತಂಗಾಳಿಯಲಿ ನಡೆದಾಡುವ ಸುಂದರಿಯರು ಮತ್ತು ಅಲಂಕೃತ ದೇಶದ ನಕ್ಷತ್ರಗಳು ಹಾಗೂ ಕೊಳಲು ವಾದನದ ಅಂದಲೀಪ್ ಹಕ್ಕಿಯನ್ನು ಸಹಸ್ರಾರು ಬಾಯಿಗಳು ತಮ್ಮ ಕಂಠಸಿರಿಯಲ್ಲಿ ಕಾಪಿಟ್ಟು ಗೀತೆ ಮತ್ತು ಗಾಯನಗಳ ಮೂಲಕ ಭಗವಂತನ ಶ್ರೇಷ್ಟತೆಯನ್ನು ಹಾಡುತ್ತ ಆ ಸಮುದ್ರದ ಸಿರಿಕಂಠಗಳನ್ನು ಅರಮನೆಯಲ್ಲಿ ತೆರೆದಿದ್ದವು.

ದುಃಖ ಮತ್ತು ಕೋಪದ ಕುರೂಪವನ್ನು ಮತ್ತೆ
ಬರುವವನು ಕಟ್ಟಿಟ್ಟ ನೇರ ಯೋಗ್ಯತೆಯನ್ನು
ಹೊಂದಿದವರು ನೃತ್ಯದಂತೆ ಖ್ಯಾತರಾದರು.
ಯುಕ್ತಿಯನ್ನು ಮತ್ಸರದ ಸುಳಿಯಲ್ಲಿ ಸಿಲುಕಿಸುವವರು
ಎಂತಹ ಹೃದಯವಿದು ಕಳವಳದಿಂದ ಕೂಡಿರುವಂತಹದು

ನಲವತ್ತು ದಿನಗಳವರೆಗೆ ಈ ಸಭೆ, ಸಮಾರಂಭಗಳಲ್ಲಿ ಪ್ರಪಂಚವನ್ನು ಬೆಳಗುವ ಸೂರ್ಯನಿಗಿಂತ ಹೆಚ್ಚಾಗಿ ಪ್ರಮಾಣಿಕ ಬೆಂಬಲಿಗರು ಔತಣಕೂಟಗಳಲ್ಲಿ ಅತ್ಯಂತ ಉತ್ತಮ ಭಕ್ಷ್ಯಗಳನ್ನು ಸಿದ್ಧಮಾಡಿ ಬಡಿಸುತ್ತಿದ್ದರು ಮತ್ತು ಅತಿ ಹೆಚ್ಚಿನ ಭಕ್ಷ್ಯಗಳನ್ನು ಉದಾರ ಹೃದಯದಿಂದ ಮನುಷ್ಯರು ಜಿನ್‌ಗಳು ಮತ್ತು ಹಸಿರಿನಿಂದ ಕೂಡಿದ ಸೈನಿಕರ ನಡುವೆ ಹಂಚಲಾಯಿತು ಮತ್ತು ಅದರ ನಾಲ್ಕು ಗೋಡೆಗಳ ಬುರುಜುಗಳ ಗುರುತಿಸುವಿಕೆಯಿಂದ ವಿವರಗಳನ್ನು ಬಾಯಿ ಮಾತಿನಲ್ಲಿ ಅಥವಾ ವರದಿಯ ರೂಪದಲ್ಲಿ ಮತ್ತು ಲೇಖನಿಯ ರೂಪದಲ್ಲಿ ಪ್ರಕಟಪಡಿಸುವುದು ಕೂಡಾ ಸುಲಭದ ಕೆಲಸವಲ್ಲ.

ಸೂಕ್ಷ್ಮ ನಡತೆಯವರು ಮತ್ತು ಯುದ್ಧನಿರತರು ಈ ಔತಣಕೂಟದ ಉಪ್ಪು ಮಿಶ್ರಿತ ಆಹಾರಗಳಿಂದ ಉಪ್ಪನ್ನು ಭಿಕ್ಷೆಯಲ್ಲಿ ಪಡೆದು ಹೃದಯ ವ್ಯಾಪಾರದ ಬಜಾರಿನಲ್ಲಿ ಉಪ್ಪು ಮಾರಾಟದ ಅಂಗಡಿಗಳನ್ನು ತರೆದು ಬಿಡುತ್ತಾರೆ ಮತ್ತು ವಯ್ಯಾರದ ಸುಂದರಿಯರು ಹಾಗೂ ಅದರ ಸಿಹಿಗಾತ್ರಗಳ ಸ್ವಾದದಿಂದ ಸಂತೃಪ್ತರಾಗಿ ಸಿಹಿ ತುಟಿಗಳನ್ನು ನಗರ ಮತ್ತು ಹಳ್ಳಿಗಳಲ್ಲಿ ನಗದೀಕರಣ ಮಾಡುತ್ತಾರೆ ಮತ್ತು ಈರೀತಿಯಲ್ಲಿ ಅತ್ತರ್ ಪೂಸಿದ ಸುರಸುಂದರಿಯರು ಪ್ರತಿದಿನ ಸಭಿಕರ ಮೇಲೆ ದಯೆ ತೋರುತ್ತಾರೆ. ಒಂದು ವೇಳೆ ಅದರ ಪವಾಡಸದೃಶ ಜೀವನ್ಮುಖೀ ಸುಗಂಧವು ಪುರುಷರ ನಾಸಿಕದವರೆಗೆ ತಲುಪಿದಲ್ಲಿ, ಇಡೀ ಬದುಕಿನುದ್ದಕ್ಕೂ ಉತ್ತಮ ದಿರಿಸನ್ನು ಧರಿಸಿ ತಮ್ಮ ಬದುಕು ಮತ್ತು ದೇಶದ ಸಮಾಚಾರಗಳಲ್ಲಿ ನೆಮ್ಮದಿಯಿಂದ ಇರುವುದನ್ನು ಕಾಣಬಹುದು ಒಂದುವೇಳೆ ಬೆಳಗಿನ ತಂಗಾಳಿಯು ಅದರ ಖುಷಿಯನ್ನು ಅರಣ್ಯದ ಇಲಾಖೆ ಮತ್ತು ಮುಳ್ಳು ಪೊದೆಗಳ ಮರುಭೂಮಿಯಲ್ಲಿ ತಲುಪಿಸಿದ್ದಲ್ಲಿ ಇಡೀ ವಿಶ್ವದಾದ್ಯಂತ ಅದರ ಸುವಾಸನೆಯು ಹೂವಿನ ಸುಗಂಧದಂತೆ ಹರಡೀ ಇಡೀ ಮೈಮನಸನ್ನು ಹಗುರಗೊಳಿಸುತ್ತದೆ ಮತ್ತು ಅದರ ಕೇಸರಿಯಿಂದ ಕೂಡಿದ ಬಣ್ಣವನ್ನು ಪಡೆಯುವುದು ಪ್ರತಿ ಹಿರಿಯ ಕಿರಿಯರ ಪ್ರಮುಖ ಕರ್ತವ್ಯವಾಗಿದೆ ಮತ್ತು ಬಿಂಕದ ಪ್ರೇಯಸಿಯರ ಮುಂಗುರುಳು ಮತ್ತು ನೀಲಕೇಶವು ಧೂಮದ ಸ್ವರೂಪದಲ್ಲಿ ಕಂಡು ಬಂದಲ್ಲಿ ಸ್ವತಃ ತಮ್ಮ ಹೃದಯಗಳನ್ನು ತಮಗೆ ಅರ್ಪಿಸುವಂತೆ ಹುಚ್ಚರನ್ನಾಗಿ ಮಾಡುತ್ತಾರೆ. ಸೂರ್ಯನ ಕಿರಣಗಳು ಮೃಗದ ಹವೆಯಂತೆ ಅಂಧಕಾರದ ಚೆಹರೆಗಳಿಂದ ಪರದೆಯನ್ನು ಎತ್ತುವನು ಮತ್ತು ಸಂಚರಿಸುವ ದಿನವು ಕತ್ತಲಿನ ಬಣ್ಣವನ್ನು ಕೂಬೂಲ್ ಮಾಡುವವನನ್ನು

ಪ್ರಕಟಪಡಿಸುವನು ಹಾಗೂ ವಿಶ್ವವನ್ನು ಹೋಳೆಯುವ ಚಂದ್ರನಂತೆ ಶೋಭಾಯಮಾನವಾಗಿ ಮಾಡುವನು. ಅದರಿಂದ ಹೂವುಗಳು ಅರಳುತ್ತವೆ ನವ ವಧುವಿನಂತೆ ಮತ್ತು ಅದರ ತಲೆಯ ಮೇಲೆ ಮುತ್ತು-ರತ್ನಗಳನ್ನು ನಿವಾಳಿಸಲಿ ಜನತೆಯ ವಾಸಸ್ಥಳಗಳ ನಿವಾಸಿಗಳ ದೃಷ್ಟಿಯಲ್ಲಿ ದೇದಿಪ್ಯಮಾನವಾದ ಹಾಗೂ ಇಡೀ ವಿಶ್ವವನ್ನು ಬೆಳಗುವ ಸೂರ್ಯ ಕಿರಣಗಳ ಔತಣಕೂಟಕ್ಕಿಂತ ಬೆಳಕಿನ ಉಂಡೆಯನ್ನು ಹಾಯುವವನಂತೆ ಆದ ಹಾಗೂ ವಿಶ್ವವನ್ನು ಬೆಳಗುವ ಚಂದ್ರನು ಆ ಔತಣಕೂಟದ ಕಿರಣಗಳು ಮತ್ತು ಬೆಳಕಿನ ಪ್ರಭೆಯಿಂದ ನಗರಗಳಲ್ಲಿ ಖ್ಯಾತಿಯನ್ನು ಪಡೆದ.

ಒಂದು ವೇಳೆ ಆಕಾಶವು ಅದರ ಕಿರಣಗಳ ಮಶಾಲುಗಳನ್ನು ನೆನಪಿಸಿಕೊಂಡಲ್ಲಿ, ಅದು ಹೃದಯಗಳ ರಾತ್ರಿಯ ತಂಗುದಾಣವನ್ನು ಬೆಳಕಿನಿಂದ ತುಂಬುವನು. ಅದನ್ನು ಮರೆಗುಳಿತನದ ವೇಗದ ಗಾಳಿಯ ಮಾಟದಿಂದ ರಕ್ಷಣೆ ಸಿಗಲಿ ಮತ್ತು ಮತ್ತೊಮ್ಮೆ ಲೋಕವನ್ನು ಬೆಳಗುವ ಸಲುವಾಗಿ ಪ್ರಪಂಚವನ್ನು ಬೆಳಗುವ ಸೂರ್ಯನಿಂದ ಹೊರಡುವ ದೀನತೆಯನ್ನು ಪಡೆಯದಿರಲಿ ಮತ್ತು ಒಂದು ವೇಳೆ ಅವನ ಬೆಳಕಿನ ಪ್ರಭೆಯು ಹುಟ್ಟುಕುರುಡನ ಮೇಲೆ ಬಿದ್ದಲ್ಲಿ ಅವನ ನೋಟವು ಕಣ್ಣೆವೆ ಮಿಟುಕಿಸುವಷ್ಟರಲ್ಲಿ ಸೂರ್ಯನಂತೆ ಪ್ರಜ್ವಲಿಸುವ ಜ್ವಾಲೆಯಾಗುವನು. ಈ ಆಮೋದ ಪ್ರಮೋದಗಳ ಸಭೆ, ಸಮಾರಂಭಗಳು ನಗರ ಬಜಾರುಗಳು ಮತ್ತು ಛಾವಣಿ ಮತ್ತು ಹಾದಿಬೀದಿಗಳಲ್ಲಿ ಬೆಳಕಾಗುತ್ತದೆ. ಯಾವಾಗಲಾದರೊಮ್ಮೆ ಕಿರಿಯರು, ಹಿರಿಯರು, ವೃದ್ಧರು ಮತ್ತು ಯುವಕರು ಎಲೆಅಡಿಕೆಯನ್ನು ಸೇವಿಸುವುದರ ಮೂಲಕ ಸಂತಸಭರಿತರಾದರೆ ಹಸಿರು ದೀವಟಿಗೆಯಿಂದ ತೋರಿಬರುವ ಆಕಾಶವು ತನ್ನ ಸೆರಗಿನ ಮೇಲೆ ದಿವ್ಯತೆಯನ್ನು ಹಾಸಿ ನಾಮಧಾರಿ ಅಲೆಗಳ ಮೇಲೆ ಸವಾರಿ ಮಾಡುತ್ತಾ ಉನ್ನತಿಯನ್ನು ಏರುತ್ತಾನೆ. ಚಂದ್ರಲೋಕವು ತನ್ನ ಬಿಳಿಯ ಔತಣದ ಪರಿಕರಗಳಿಂದ ಹೊಣೆಗಾರಿಕೆಯನ್ನು ತ್ಯಜಿಸಿ ಸ್ವತಃ ಪ್ರಪಂಚದಲ್ಲಿ ಎಲ್ಲರಿಗಿಂತ ಖ್ಯಾತಿಯನ್ನು ಪಡೆಯುತ್ತಾನೆ ಮತ್ತು ಕಾಯಿಲೆ ಬಿದ್ದ ಜನರು ಅದನ್ನು ಬಳಸುವುದರಿಂದ ಚೂರ್ಣಗಳು ಮತ್ತು ವೈದ್ಯಕೀಯ ತಂಡಗಳು ಮತ್ತು ಹಕೀಮರನ್ನು ಅವಲಂಬಿಸುವುದಿಲ್ಲ. ಮತ್ತು ಪ್ರೇಯಸಿಯರು ಅವನ ಬಣ್ಣದ ಮೇಲೆ ನಂಬಿಕೊಂಡು ಶೃಂಗಾರಮಾಡಿಕೊಳ್ಳಲು ಒಡವೆ ಮತ್ತು ಹೊಂಬಣ್ಣದ ಆಭರಣಗಳ ಹಿಂದೆ ಕಂಗಾಲಾಗುವುದಿಲ್ಲ.

ಅಭ್ಯುದಯದ ಕೀಲಿಕೈಯು ಕೈಸೇರಿತು ಮತ್ತು ಔತಣಕೂಟದ ಆರಂಭದ ದಿನಬಂದಾಗ ಸರದಾರರು, ಮಂತ್ರಿಗಳು, ಸಭಿಕರು ದರಬಾರಿನ ಉನ್ನತಾಧಿಕಾರಿಗಳು ಮತ್ತು ಸಭೆಯಲ್ಲಿ ಸೇರಿದ್ದ ಜನರ ಸ್ಥಾನಮಾನ ಹಾಗೂ ಅಧಿಕಾರಕ್ಕೆ ತಕ್ಕನಾದ ಬಿರುದು ಬಾವಲಿಗಳು ಮತ್ತು ಕೊಡುಗೆಗಳಿಂದ ಅಮೂಲ್ಯ ಹರಳುಗಳ ಕುಸುರಿಯಿಂದ ಕೂಡಿದ ಉತ್ತಮ ಪೋಷಾಕು ಹಾಗೂ ಹೆಮ್ಮೆಪಡುವಂತಹ ಆಭರಣಗಳನ್ನು

ನೀಡಲಾಯಿತು. ಈ ರೀತಿಯಲ್ಲಿ ಇಡೀ ಸಭೆಯನ್ನು ಅದ್ಭುತವಾಗಿ ಆಯೋಜಿಸಲಾಯಿತು ಮತ್ತು ಇಡೀ ನಗರದಲ್ಲಿ ಈ ರೀತಿಯ ಬಿರುದು ಬಾವಲಿ ಇನಾಮುಗಳನ್ನು ಪಡೆಯದ ಒಬ್ಬನೇ ಒಬ್ಬ ವ್ಯಕ್ತಿಯು ಕಂಡುಬರುವುದಿಲ್ಲ.

ಆ ಸಂದರ್ಭದಲ್ಲಿ ತನ್ನ ಉದ್ದೇಶದ ಹೂವುಗಳ ಗೊಂಚಲುಗಳ ಮೊಗ್ಗುಗಳು ಅರಳದ ಯಾವೊಬ್ಬ ಯುವಕನು ಅಥವಾ ವೃದ್ಧನು ಕಂಡುಬರಲಿಲ್ಲ. ಅರ್ಧರಾತ್ರಿಯಲ್ಲಿ ಬಿರಿದ ಪುಷ್ಪಗಳ ರೀತಿಯಲ್ಲಿ ಸಂತುಷ್ಟವಾಗಿ ಅರಳಿದವು. ರಾಜನ ಕರುಣೆಯ ಬೆಳಗಿನ ತಂಗಾಳಿಯ ಆಹ್ಲಾದಕರ ಅಲೆಗಳು ಮತ್ತು ಅವನ ಕೊಡುಗೆಗಳ ಸಂಪದ್ಭರಿತ ಮಂಜಿನ ಹನಿಗಳು ಇಡೀ ಲೋಕವನ್ನು ಬೆಳಗುವ ಸೂರ್ಯನಂತೆ ಮುಗುಳುನಗೆ ಮತ್ತು ನಗುಮೋರೆಯ ಸಂದೇಶದೊಡನೆ ಹೊಸಶಕೆಯನ್ನು ತೆರೆದವು ಮತ್ತು ವಿಫಲತೆ ಮತ್ತು ನಿರಾಶೆಯಿಂದ ಅಸಹಾಯಕತೆಯ ಸ್ಥಿತಿಯಲ್ಲಿ ಹಾಸಿಗೆಯ ಮೇಲೆ ಒರಗಿಕೊಂಡು ಅನಾರೋಗ್ಯದ ಹೊದಿಕೆಯಿಂದ ಆವರಿಸಲ್ಪಟ್ಟು ಬಿದ್ದವನನ್ನು ಲೋಕವಿಖ್ಯಾತ ಮಹಾವೈದ್ಯರು ಕೂಡಾ ಕೈಚೆಲ್ಲಿ ನೆರವಿನ ಬಾಗಿಲನ್ನು ಬಂದ್ ಮಾಡಿದರು. ಅವನ ಆ ಪರಿಸ್ಥಿತಿಗೆ ಯಾವ ಹೊತ್ತಿನಲ್ಲಿಯೂ ಕೂಡಾ ನೆರವಿನ ಭರವಸೆ ಇಲ್ಲ. ಆದರೆ ಅವನ ಮೇಲೆ ಈ ಲೋಕದ ಕರುಣಾಸಾಗರನು ಮಹಾವೈದ್ಯ ರಾಜ ಪುರುಷನು ವಿಷಕ್ಕೆ ಪ್ರತ್ಯೌಷಧವನ್ನು ನೀಡಿ ಜೀವಸೆಲೆಯ ಮುಖಾಂತರ ಕರ್ತವ್ಯನಿರತನಾದರೆ ಅವನು ಸಂಪೂರ್ಣ ಗುಣಮುಖನಾಗುತ್ತಾನೆ. ಪ್ರತಿಯೊಬ್ಬ ಭಗ್ನಹೃದಯಿಯು ದುಃಖದ ಕತ್ತಿ ಮತ್ತು ಯಾತನೆಯ ಖಡ್ಗದಿಂದ ಗಾಯಗೊಂಡಿದ್ದವನು ಬಾದಶಹನ ದಾನಧರ್ಮಗಳ ಮುಲಾಮಿನಿಂದ ಸಂಪೂರ್ಣ ಆರೋಗ್ಯವಂತನಾದ ಮತ್ತು ಬದುಕಿನುದ್ದಕ್ಕೂ ಸಂತಸ ಮತ್ತು ನೆಮ್ಮದಿಯಿಂದ ಕಳೆದ ಮತ್ತು ಪ್ರತಿ ನೋವಿಗೊಳಗಾದ ಹಾಗೂ ಯಾತನೆ ಮತ್ತು ವಿಫಲತೆಯ ಅರಣ್ಯದ ಅನಾರೋಗ್ಯ ಪೀಡಿತನಾಗಿದ್ದ ದುಃಖದ ಅರಣ್ಯದ ಪಥಿಕನಾಗಿದ್ದವನು ಒಡೆಯನ ಪೀತ್ಯಾದರಗಳಿಂದ ಪ್ರೇಮವೆಂಬ ಮುತ್ತಿನ ದೆಸೆಯಿಂದ ಆರೋಗ್ಯ ಮತ್ತು ಸಫಲತೆಯನ್ನು ಪಡೆದು, ಪೂರ್ಣ ಬದುಕಿನುದ್ದಕ್ಕೂ ಅಸಹಾಯಕತೆ ಮತ್ತು ಅವಲಂಬನೆಯಿಂದ ಮುಕ್ತಿ ಹೊಂದಿದ. ಶೋಷಣೆ ಮತ್ತು ಕ್ರೌರ್ಯದ ಬಿಂದಿಗೆಯನ್ನು ಒಡೆಯುವ ದುಷ್ಟ ಆಕಾಶವು ಹೃದಯದಲ್ಲಿ ನೀಚತನ ಮತ್ತು ಅಲ್ಪತನದಲ್ಲಿ ತೊಳಲಾಡುತ್ತಾ ಇದ್ದವರ ನೆಮ್ಮದಿ ಮತ್ತು ಆನಂದದ ಮೆಟ್ಟಿಲು ಬಂದ್ ಆಗಿದ್ದವು. ಅವರು ನಾಶಗೊಂಡ ಮನೆಯಲ್ಲಿ ಮರೆಯಾಗಿದ್ದರು ಹಾಗೂ ಕ್ರೌರ್ಯ ಮತ್ತು ಹಿಂಸೆಯ ಭಯಾನಕ ಸಿಂಹವು ನೀಚತನದಿಂದ ಕೂಡಿದ್ದು, ಸಂತೋಷ ಮತ್ತು ಸಂಭ್ರಮದ ರಕ್ತಮಾಂಸವನ್ನು ಅರಗಿಸಿಕೊಳ್ಳುವ ಹಾಗೂ ನೆಮ್ಮದಿ ಮತ್ತು ಸಂತೋಷದ ಹಲ್ಲುಗಳನ್ನು ಮುರಿಯುವ ಸ್ವಭಾವಸಿದ್ಧ ಗುಣಗಳನ್ನು ಹೊಂದಿತ್ತು.

ಆ ಗೆಳೆತನದ ಆಳದ ನಿಷ್ಣಾತ ಗೌರವದ ಹಡಗಿನ ನಾವಿಕನು ಚಿಂತನೆಯ ಸಾಗರದಲ್ಲಿ ಈಜಾಡುತ್ತಾ ಅಮೂಲ್ಯವಾದ ಮುತ್ತುಗಳು ಹಾಗೂ ಸಭ್ಯ ನಡವಳಿಕೆ ಮತ್ತು ಎಲ್ಲಾ ಅಮೂಲ್ಯ ಮುತ್ತುಗಳು ಶೋಭಾಯಮಾನವಾದ ಕರುಣೆ ಮತ್ತು ಬಾದಶಹನ ಪ್ರೀತಿ ಎಲ್ಲಾ ಜನರ ನಡುವೆಯು ಏಕತ ಭಾವವನ್ನು ಸೂಸುವ ಬಾದಶಹನ ಪ್ರೇಮವನ್ನು ಸುಸಂಬದ್ಧವಾಗಿ ತಂದು ಉಪಕಾರ ಮತ್ತು ಶಾಬಾಸ್‌ಗಿರಿಯ ಸಂಪೂರ್ಣ ಬುದ್ಧಿಮತ್ತೆ ಹಾಗೂ ಸೂಕ್ಷ್ಮ ದೃಷ್ಟಿಯ ಪರಿಣಿತ ವ್ಯಕ್ತಿಗಳ ಎದುರಿಗೆ ಹೆಮ್ಮೆಯ ಭಾಷೆಯಯೊಂದಿಗೆ ಪ್ರಸ್ತುತಪಡಿಸುವುದು. ಒಟ್ಟಾರೆ ಒಂದು ದೀರ್ಘ ಅವಧಿಯ ಸುದೀರ್ಘ ದುಡಿಮೆಯ ನಂತರವೂ ಮೇಲ್ಕಂಡ ಉದ್ದೇಶದ ಸಾಫಲ್ಯವು ಕಂಡುಬರಲಿಲ್ಲ. ಶರಬತ್ತು ಮತ್ತು ಚೇತೋಹಾರಿ ಪಾನಕಗಳು ಅಲಭ್ಯವಾದುದರಿಂದ ನೀರಿನಿಂದಲೇ ಜೀವನ ಸಾಗಿಸುವ ಸಣಕಲ ದುರ್ಬಲ ವ್ಯಕ್ತಿಯಂತೆ ಲಭ್ಯವಾದ ಕೆಲವೇ ಅಮೂಲ್ಯ ನಗನಾಣ್ಯಗಳ ಕೊಡುಗೆಗಳಿಂದಲೇ ತೃಪ್ತನಾದ ಸೂಕ್ಷ್ಮ ಒಳನೋಟಗಳನ್ನು ಹೊದಿದ ಚಿಂತಕರ ದೃಷ್ಟಿಯಲ್ಲಿ ಆ ಕೊಡುಗೆಗಳು ಸೂರ್ಯ ಚಂದ್ರರಿಗಿಂತಲೂ ಹೆಚ್ಚು ಅಮೂಲ್ಯ ವಸ್ತುಗಳಾಗಿದ್ದವು. ನಾನು ನನ್ನ ಮಾತನ್ನು ಕೊನೆಗೊಳಿಸಿ ದಸ್ತಗಾಹ್ ಅಬುಲ್ ಮಾಲಿಯತ್‌ರವರ ಅಲಂಕಾರ ಮತ್ತು ಉಪಮೆಗಳ ದಾರದಿಂದ ಬಂಧಿತವಾದ ಅಕ್ಷರ ಮಾಲೆಯ ಒಂದು ನೋಟವನ್ನು ಬರವಣಿಗೆಯ ಮೂಲಕ ಅಭಿವ್ಯಕ್ತಿಸುತ್ತಿದ್ದೇನೆ.

ಅದೇ ದಿನದಿಂದ ಅಂದರೆ ವಿಶ್ವದ ಆದಿ ಯಾದಂದಿನಿಂದ ಅಂದರೆ ಆದಮ್ ಪೈಗಂಬರ್‌ರವರ ಉದ್ಭವ ಅದರ ಉದ್ದೇಶವಾಗಿತ್ತು. ಮೂಲಭೂತ ವಸ್ತುಗಳಾದ (ಅಗ್ನಿ, ನೀರು, ಮಣ್ಣು, ಗಾಳಿ)ಗೆ ಹೊಂದಾಣಿಕೆ ದೊರಕಿತು.

ಪ್ರೇಮದ ಸೌಂದರ್ಯ ಮತ್ತು ಗೆಳೆತನದ ಸವಿ ದೊರಕಿತು. ಜೀವ ಮತ್ತು ದೇಹದಲ್ಲಿ ಪ್ರೀತಿ ಹುಟ್ಟಿತು. ಸೌಂದರ್ಯ ಮತ್ತು ಪ್ರೀತಿಯ ದೆಸೆಯಿಂದ ಪ್ರೇಮ ವ್ಯಕ್ತವಾಯಿತು.

ಈ ರೀತಿಯಲ್ಲಿ ಬೃಹತ್ ಸಮಾರಂಭವನ್ನು ಯಾರು ವೀಕ್ಷಿಸಿದರೋ ದಿನನಿತ್ಯದ ಪ್ರಣಯ ಮತ್ತು ಸಂತಸದಿಂದ ಆವರಿಸಿತು. ಸಂತಸಭರಿತನಲ್ಲದೆ ಯಾವೊಬ್ಬನೂ ಭಿನ್ನವಾಗಿರಲಿಲ್ಲ ಮತ್ತು ಪ್ರತಿ ವೃದ್ಧ ಹಾಗೂ ಯುವಕ ನೆಮ್ಮದಿಯಿಂದ ಕೂಡಿದ್ದರು. ಒಳಿತಿನಿಂದ ವಿಶ್ವವು ಮೀನಿನಂತೆ ಸಂತಸದಿಂದ ಕೂಡಿತು. ವಾಸ್ತವತೆ ಏನೆಂದರೆ ಚಂದ್ರನಿಂದ ಸಂಭ್ರಮ ಮೂಡಿತು. ಹುಮಾಯುನಿನ ಸಂಭ್ರಮದಿಂದ ಸಂಭ್ರಮಕೆ ಶೋಭೆ ಮೂಡಿತು. ಅನುರಾಗಿಯ ಪ್ರೇಮದಂತೆ ಲಾಲಸೆಯು ನಿರ್ಮೋಹಿಯಾಯಿತು. ರಾಜ ಸಂಭ್ರಮವು ಮಾನವೀಯವಾಯಿತು. ದುಃಖ ಮತ್ತು ಯಾತನೆಯು ವಿಶ್ವದಿಂದ ನಿರ್ಗಮಿಸಿತು. ಅವನ ಕ್ಷಮೆ ಮತ್ತು ಕೊಡುಗೆಯು ಸರ್ವವಿಧದಲ್ಲೂ ಹೆಚ್ಚಾಯಿತು. ಫಕೀರರ ಅದೃಷ್ಟದಲ್ಲಿ ಕುಬೇರನ ಭಂಡಾರ ಸೇರಿತು.

ದೇವರೇ ಎಲ್ಲಿಯವರೆಗೆ ವಿಶ್ವದ ಶೋಭೆಯು ನಿರಂತರವಾಗಿರುವುದೋ ದೇವರೇ ಅಲ್ಲಿಯವರೆಗೆ ಬಾದಶಹರ ಹೋಲಿಕೆಯು ಖಾಯಮ್ಮಾಗಿರುವುದು. ಸಂತಸದಿಂದ ಎಲ್ಲಿಯವರೆಗೆ ವಿಶ್ವದ ಕಾರ್ಯನಿರ್ವಹಣೆ ನಡೆಯುತ್ತದೆ. ಇಬ್ನೆ ಘಾಝಿಯ ಆರಾಮ ಮತ್ತು ನೆಮ್ಮದಿಯು ವೃದ್ಧಿಯಾಗಲಿ.

■

*

ಅಧ್ಯಾಯ – ೮

ಶಿವಾಜಿ ವಿದ್ರೋಹ, ಅಫಜಲ್‌ಖಾನನ ಕೊಲೆ ಮತ್ತು ಪನಾಳಾ ಕೋಟೆ ಕೈವಶ

ನಿರ್ಮಲ ಮನಸ್ಸು ಮತ್ತು ವಿನಯಶೀಲ ಬುದ್ಧಿವಂತರ ಆಲಸ್ಯದ ದೆಸೆಯಿಂದ ನತದೃಷ್ಟ ಹಾಗೂ ಒಳನೋಟಗಳನ್ನು ಕಳೆದುಕೊಂಡ ಅಜ್ಞಾನದಲ್ಲಿ ಸಿಲುಕಿದ ಖಂಡನಾರ್ಹ ಸ್ವಭಾವದ ನೀಚ ಪ್ರಕೃತಿಯ ಅಜ್ಞಾನಿ ಮತ್ತು ದುರ್ಮಾರ್ಗಿಗಳಿಗೆ ಹೇಳುವುದೇನೆಂದರೆ ನೆಪಗಳ ಕಲ್ಲುಗಳು ಮತ್ತು ಕುಟಿಲತೆಯ ಮಣ್ಣುಗುಡ್ಡೆಗಳನ್ನು ಆ ಗೌರವಾನ್ವಿತ ಬಾದಶಹರ ಅನುಸರಣೆ ಮತ್ತು ವಿಧೇಯತೆಯ ಹೂಜಿಯನ್ನು ಅದೆಂದರೆ ರಕ್ತಸಿಕ್ತ ಖಡ್ಗ ಮತ್ತು ತನ್ನ ಪ್ರತೀಕಾರದ ಸ್ವಭಾವವನ್ನು ನಿರ್ಲಜ್ಜತನದ ದೇಹದ ವಿನಃ ಆ ಭಗವಂತನ ಧರ್ಮದ ವಿರುದ್ಧ ಹಗೆತನ ಮತ್ತು ದ್ವೇಷವನ್ನು ಮಾಡಿ, ಅಧಃಪತನಕ್ಕೆ ಜಾರಿ ನೀಚತನದ ಕೃತ್ಯಗಳನ್ನು ಮಾಡುವ ಸಲುವಾಗಿ ಪ್ರಾಣವನ್ನು ಬಲಿಕೊಟ್ಟು ದೇವ ಸಹಭಾಗಿತ್ವದ ಪಾಪ ಕೃತ್ಯವನ್ನು ಮಾಡುವ ಜನರ ಕೊಲೆಯನ್ನು ಮಾಡಿ, ಸುಂದರವಾದ ಸಮುದಾಯದ ಸಂಪ್ರದಾಯವನ್ನು ಮುಂದುವರೆಸುವ ಪ್ರಯತ್ನವನ್ನು ಮಾಡುತ್ತಾರೆ. ಯುದ್ಧರಂಗದಲ್ಲಿ ನಾಸ್ತಿಕರನ್ನು ಮತ್ತು ವಿದ್ರೋಹಿಗಳ ಅಶುದ್ಧ ರಕ್ತದಿಂದ ಹೂದೋಟ ಮತ್ತು ಸಸ್ಯರಾಶಿಯ ಉಳಿವಿನ ಸಾಮಗ್ರಿಯನ್ನು ಒದಗಿಸುತ್ತಾರೆ. ದುರ್ಗುಣ ಮತ್ತು ದುಷ್ಟತನದ ತೀವ್ರತೆ ಹಾಗೂ ಹೇಡಿಗಳು ಅವರ ಅಹಂಕಾರ ಮತ್ತು ಸದ್ಗುಣಗಳನ್ನು ರಾತ್ರಿ ಟಂಕಿಸಿದ ನಾಣ್ಯವೆಂದು ತಿಳಿದು ತಕ್ಕಡಿಯಲ್ಲಿಟ್ಟು ತಮ್ಮ ಅದೃಷ್ಟ ಮತ್ತು ಒಳ್ಳೆಯ ದಿನಗಳನ್ನು ತಮ್ಮ ಹಿರಿಯರ ಹೊಸ್ತಿಲಿನಿಂದ ಅಹಂಕಾರದ ಎದಿರೇಟು ಮತ್ತು ಕೆಡುಕಿನ ಕೆನ್ನೆಗೆ ಬಿಗಿದ ಏಟಿನಿಂದ ಸಾವಿರಾರು ಮೈಲಿಗಳ ದೂರ ಓಡಿಸುತ್ತಾನೆ. ಪರಿಚಿತ ಧೀಮಂತ ಹಾಗೂ

ದೂರದೃಷ್ಟಿಯುಳ್ಳ ವ್ಯಕ್ತಿಗಳು ಮತ್ತು ಚಿಂತಕರು ಅಂಡಲೆಯುವ ದುರದೃಷ್ಟದಿಂದ ಕೂಡಿದ ವ್ಯರ್ಥ ಪ್ರಲಾಪದ ಹೇಡಿಗಳು ಅಹಂಕಾರಿಗಳಿಗೆ ಮುನ್ನೆಚ್ಚರಿಕೆಯುಳ್ಳವರು ಎಂಬ ಹೆಸರನ್ನು ಕೊಡುತ್ತಾರೆ. ಅಂದರೆ ವಿಧೇಯತೆ ಮತ್ತು ಅನುಸರಣೆಯ ಕ್ಷೇತ್ರದಲ್ಲಿ ನ್ಯಾಯಪರತೆಯನ್ನು ಉಳಿಸಿಕೊಳ್ಳುವವರು ನಗರವಾಸಿಗಳು ಉತ್ತಮ ಚಿಂತನೆ ಮತ್ತು ನಾಯಕದೃಷ್ಠಿಯಿಂದ ಆಡಳಿತ ನಡೆಸುವವರು ಅಂದರೆ ದೈವ ಪ್ರೇರಣೆಯಿಂದ ಹಾಗೂ ದೈವ ಭೀರುಗಳಾದರೂ ನೀಲಿಬಣ್ಣದ ಕತ್ತಿಯನ್ನು ವಿದ್ರೋಹದ ಕಡುಗಪ್ಪು ಕೃತ್ಯಗಳಿಂದ ಕೂಡಿದವರ ರಕ್ತದಿಂದ ವಧಿಸಿ ಅದನ್ನು ರಖಾನಿಯ ಹವಳ ಮತ್ತು ಯಮನ್ ದೇಶದ ಅಮೂಲ್ಯ ಕೆಂಪು ಹರಳು ಎಂದು ಭಾವಿಸಿ ಕಪಟ ಮತ್ತು ದಂಗೆಯ ಸೈತಾನನ್ನು ಮಹಾಸಾಗರದಂತಹ ಭುಜಬಲದ ಪರಾಕ್ರಮದಿಂದ ಜಯಶೀಲರಾಗಿ ಆ ಶಕ್ತಿಯಿಂದ ವ್ಯಕ್ತವಾಗದ ಸರಪಳಿಗಳಲ್ಲಿ ಸೆರೆಹಿಡಿಯುತ್ತಾನೆ. ಕೈಗಳನ್ನು ಮಡಿಸುತ್ತಾ ಸ್ವತಃ ಅವಮಾನಿತನಾಗಿ ದೀನತೆಯಿಂದ ಸೆರೆಮನೆಯಲ್ಲಿ ಖೈದಿಗಳನ್ನಾಗಿ ಮಾಡಿಕೊಳ್ಳುತ್ತಾನೆ.

ಈ ಸಂಭಾಷಣೆಯ ಚರ್ಚೆಯು ಒಟ್ಟಾರೆ ನಷ್ಟವನ್ನು ಅನುಭವಿಸಿದ ಪರಿಸ್ಥಿತಿಯ ಸ್ವರೂಪದಲ್ಲಿದೆ. ಅಂದರೆ ಈ ಬರವಣಿಗೆಯ ಮೂಲಕ ಲೇಖನಿಯ ಧ್ವನಿಯು ನಶೆಯ ಹಾಸಿಗೆಯ ಮೇಲೆ ಆರಾಮವಾಗಿರುವವರನ್ನು ಬಡಿದೆಬ್ಬಿಸುತ್ತದೆ. ಮತ್ತು ಆ ಬರವಣಿಗೆಯ ಶೋಭೆಯಿಂದ ಅಹಂಕಾರದ ಕತ್ತಲಮನೆಯಲ್ಲಿ ಅಲೆದಾಡುವ ವ್ಯಕ್ತಿಗಳಿಗೆ ದೀಪದ ಬೆಳಕನ್ನು ನೀಡುತ್ತದೆ. ಅವಮಾನ ಮತ್ತು ಅಹಂಕಾರದ ಆಳವಾದ ಕಂದಕವು ನರಕದ ದ್ವಾರದಿಂದಲೂ ಹೆಚ್ಚು ಭಯಾನಕವಾಗಿದೆ. ಎಂದು ಅರಿಯಲು.

ಅಹಂಕಾರದ ಆಳ ಮತ್ತು ಅವಿಧೇಯತೆಯ ಗೋರಿಯಿಂದಲೂ ಹೆಚ್ಚು ಘೋರ ಅಂಧಕಾರದಿಂದ ಕೂಡಿದೆ ಎಂದು ತಿಳಿಯುವ ಸಲುವಾಗಿ ಸ್ವಭಾವತಃ ವೇಗವಾಗಿ ಓಡುವ ಕುದುರೆ ಮತ್ತು ವಿದ್ಯುತ್ ವೇಗದಲ್ಲಿ ಓಡುವ ಬುರ್ರಾಖ್ ಎಂಬ ಕಾಲ್ಪನಿಕ ಅರೆ ಕುದುರೆ ಅರೆ ಮಾನವ ಪ್ರಾಣಿಯು ತಿಳುವಳಿಕೆಯ ಪ್ರಭೆಯನ್ನು ತನ್ನ ಸುತ್ತಮುತ್ತಲೂ ಅಲಕ್ಷ್ಯತನ ಮತ್ತು ಮರೆವೆಯ ಕುಣಿದಾಟದಿಂದ ಪಕ್ಕಕ್ಕೆ ಇಡಲಿ ಮತ್ತು ಆ ಘಟನೆಯ ವಿವರಗಳು ಏನೆಂದರೆ ರಭಸವಾಗಿ ಗಾಳಿಯು ಸ್ವರ್ಗವಾಸಿ ಫಿರ್‌ದೋಸ್ ಮಕಾನಿಯ ಆರೋಗ್ಯದ ದೋಣಿಯನ್ನು ಅಪಘಾತಕ್ಕೆ ಮುಖಾಮುಖಿಯಾಗಿಸಿ ಅನಾರೋಗ್ಯದತ್ತ ಸೆಳೆದಿರುತ್ತದೆ ಮತ್ತು ಅನಾರೋಗ್ಯದ ಆ ಸಂದರ್ಭದಲ್ಲಿ ಆಗಾಗ್ಗೆ ನೆಮ್ಮದಿ ಮತ್ತು ಸಂತಸದ ಅಗತ್ಯಗಳನ್ನು ಹಾಗೂ ಸಂತೋಷ ಮತ್ತು ಸಂಭ್ರಮದ ಕಿರೀಟವನ್ನು ಲೂಟಿಮಾಡಿದ್ದು, ಅಂಧಕಾರಮಯ ದಿನಗಳ ದುರಾದೃಷ್ಟಪೂರಿತ ಸಂಕಟಗಳು ಮತ್ತು ದುರ್ಮಾರ್ಗಿ ನಾಸ್ತಿಕ ವಿದ್ರೋಹಿಗಳ ದಂಗೆಯ ನಕ್ಷತ್ರವು ಏರತೊಡಗಿತು. ಸೈತಾನನು ಕಪಟ ಮತ್ತು ಪಿತೂರಿಯ ತಂತ್ರಗಾರಿಕೆಯನ್ನು ಮಿಥ್ಯೆ ಹಾಗೂ ಸಂಚುಗಳನ್ನು

ಹೆಮ್ಮೆಯಿಂದ ಬಳುವಳಿಯಾಗಿ ಪಡೆದುಕೊಂಡನು ಹಾಗೂ ಚತುರ ಕಪಟಿಗಳು ಆಕಾಶದಷ್ಟು ನೆಪಗಳನ್ನು ರೂಢಿಸಿಕೊಂಡವರು ದ್ರೋಹ, ಕಪಟ ಮತ್ತು ಸಂಚಿನಿಂದ ಅಪಾರವಾಗಿ ಸಂಗ್ರಹಗೊಂಡ ರಾಶಿಯಿಂದ ಉಳಿದದ್ದನ್ನು ಬಾಚತೊಡಗಿದುದು ವ್ಯಕ್ತವಾಗಿತ್ತು.

ಲಾಲಸೆಯ ಪಾತ್ರೆಯನ್ನು ವ್ಯರ್ಥ ಪ್ರಾಪ್ತಿಗಾಗಿ ಕಾಮನೆಗಳನ್ನು ಸಾಧಿಸಲು ಹಾಗೂ ವ್ಯರ್ಥ ಭರವಸೆಗಳನ್ನು ಈಡೇರಿಸಲು ಆವೇಶಭರಿತವಾಗಿ ಇಚ್ಛೆಯ ಗಾಳಿ ಕುದುರೆಯನ್ನೇರಿ ಅದರ ಲಗಾಮನ್ನು ದುಷ್ಟ ನಶೆಯ ಅಮಲಿನಲ್ಲಿ ಅಹಂಕಾರಿಗಳ ಕೈಗೆ ನೀಡಿದರು. ನೀವು ಹೇಳಬಹುದು ಉದ್ದೇಶವನ್ನು ನಾಶದ ಸ್ಥಳದಲ್ಲಿ ಲಾಠಿಯಿಂದ ಹೊಡೆದು ಇಡೀ ದೇಶವನ್ನು ವಿನಾಶದ ಪೊರಕೆಯಿಂದ ಗುಡಿಸಿ ಹಾಕಿರಾಜ್ಯದ ಬೇರೆ ಭಾಗದಲ್ಲಿದ್ದ ರಹಾಬರ್ ಕೋಟೆಯನ್ನು ಆಕ್ರಮಿಸಿಕೊಂಡನು. ಆ ಕೋಟೆಯು ನಿರಂಕುಶವಾಗಿ ವಿಚ್ಛಿದ್ರವಾಯಿತು ಹಾಗೂ ಪಿತೂರಿ ಮತ್ತು ದಂಗೆಯ ದೆಸೆಯಿಂದ ಹಸ್ತಕ್ಷೇಪ ಮಾಡುತ್ತಾ ದುರಾಕ್ರಮಣವನ್ನು ಮಾಡಿ, ರಕ್ತಸಿಕ್ತ ಹಸ್ತದಿಂದ ದೋಚಿಕೊಂಡ ಅವರು ಮನುಷ್ಯನನ್ನು ತಿಂದುಹಾಕುವ ತೋಳದಂತೆ ಆ ಪ್ರಾಂತ್ಯದ ಸುಖ, ಸಂತೋಷ ಮತ್ತು ನೆಮ್ಮದಿಯಿಂದ ಬಾಳ್ವೆ ಮಾಡುತ್ತಿದ್ದ ವ್ಯಕ್ತಿಗಳ ಬದುಕನ್ನು ಕಸಿದುಕೊಂಡು ಸಂಚು ಮತ್ತು ಕಪಟದ ಹಲ್ಲುಗಳಿಂದ ಸೀಳಿ ಹಾಕಿದರು. ವಿಧಿ ಬರಹವನ್ನು ನಿರ್ಧರಿಸುವ ಭಗವಂತನು ಸ್ವರ್ಗವಾಸಿಯ ಅಸ್ತಿತ್ವವನ್ನು ಅವಶ್ಯಕತೆಯ ಲೇಖನಿಯಿಂದ ಹಲಗೆಯ ಮೇಲೆ ದಾಖಲಿಸಿದನು ಹಾಗೂ ನಿಕ್ಷೇಪದ ಚಾಕುವಿನಿಂದ ಸುಲಿದ ಮತ್ತು ಭಗವಂತನು ಪ್ರಕೃತಿಯು ಬದುಕಿನ ಮೋರೆಯನ್ನು ಶೋಭಿಸುವ ಹಾಳೆಯ ಮೇಲೆ ಸ್ಪಷ್ಟವಾದ ಲೇಖನಿಯಿಂದ ದಾಖಲಿಸಿದ್ದ.

ನಶ್ವರತೆಯ ಬೆರಳಿನಿಂದ ಆ ದುರ್ಮಾರ್ಗಿ ನಾಸ್ತಿಕನು ಒರೆಸಿಬಿಟ್ಟ ಆ ಭಯಾನಕ ಸುದ್ದಿಯನ್ನು ಫಲಗಳಿಗೆ ಹಾನಿಯನ್ನುಂಟು ಮಾಡುವವರನ್ನು ವಿಜಯ ಮತ್ತು ಸಫಲತೆಗಾಗಿ ಒಳ್ಳೆಯ ಸಂದೇಶವೆಂದು ತಿಳಿದರು ಹಾಗೂ ಹೂತೋಟದ ಸಲುವಾಗಿ ಬೆಳಗಿನ ತಂಗಾಳಿಯ ಅಲೆಗಳನ್ನು ಆಹ್ವಾನಿಸಲಾಯಿತು. ತಾತ್ಪರ್ಯವೇನೆಂದರೆ ಆ ಸರಹದ್ದಿನ ಕೋಟೆಗಳ ಮೇಲೆ ವಶಪಡಿಸಿಕೊಂಡ ಶುಭಸುದ್ದಿಯು ಹಸಿರು ಹಸಿರಾಗಿ ಪ್ರಸಾರವಾಯಿತು ಹಾಗೂ ಲಾಲಸೆಯಿಂದ ಕೂಡಿದ ಹಸಿವಿನ ನಾಯಿಯು ಅಶುದ್ಧ ಶವದ ಮೂಳೆಯನ್ನು ಕಡಿಯುವಂತೆ ತಮಗೆ ದೊರಕಿದುದರಲ್ಲಿ ಸಂತೃಪ್ತಿಯನ್ನು ಪಡೆಯದೆ ಇನ್ನೂ ಹೆಚ್ಚಿನ ದುರಾಸೆಯಿಂದ ಕೂಡಿದ್ದರು. ಹಸಿವಿನಿಂದ ಕೂಡಿದ ದುರಾಸೆಯ ಬೆಕ್ಕು ಅಶುದ್ಧ ಶವದ ಮಾಂಸದ ತುಂಡಿನಿಂದ ತೃಪ್ತಿಪಡಲಿಲ್ಲ. ದುರಾಸೆ ಮತ್ತು ಲಾಲಸೆಯ ಹಲ್ಲುಗಳನ್ನು ಹರಿತಗೊಳಿಸಿ ಕ್ರೌರ್ಯ ಮತ್ತು ಭಯಾನಕತೆಯ ಹಸ್ತವನ್ನು ಮುಂದೆಮಾಡಿ, ನೋವು ಯಾತನೆ ಮತ್ತು ಹಿಂಸೆಯ ದ್ವಾರಗಳನ್ನು

ತೆರೆದು ವಿನಾಶಕಾರಿ ಕೃತ್ಯಗಳಿಂದ ಲೂಟಿ ಮತ್ತು ಧ್ವಂಸಮಾಡಿ ದುರ್ಬಲರು ಮತ್ತು ಬಲಾಢ್ಯರ ಸಕಲವನ್ನು ಕೊಳ್ಳೆಹೊಡೆದರು ಹಾಗೂ ರಾಜಿ ಮತ್ತು ಧರ್ಮನಿಷ್ಠೆಯ ಹೃದಯಾಂತರಾಳದ ನೆಮ್ಮದಿಯ ಹೂವುಗಳನ್ನು ದಂಗೆ, ವ್ಯಾಜ್ಯ, ಹೋರಾಟ ಮತ್ತು ವಿರೋಧಗಳ ಮುಳ್ಳಿನಿಂದ ರಕ್ಷಿಸಿಸುತ್ತಾ ನಿಶ್ಚಯಗೊಳಿಸಲಾದ ಅಚ್ಚ ಹಸಿರಿನಿಂದ ಕೂಡಿದ ವಾತಾವರಣಕ್ಕೆ ಬೇರ್ಪಟ್ಟಿರುತ್ತಾರೆ. ಜೀವವನ್ನು ನೀಡುವ ಭಗವಂತನ ಸ್ತುತಿಯಲ್ಲಿ ನಿರತರಾಗಿರುತ್ತಾರೆ. ವಕ್ರತೆಯ ವಿಷಯುಕ್ತ ಗಾಳಿ ಮತ್ತು ಹೃದಯ ವಿದ್ರಾವಕ ರಭಸದ ಗಾಳಿಯಿಂದ ಶುಷ್ಕವಾಗಿ ಚಳಿಗಾಲದ ಉದುರುವ ಎಲೆಗಳಂತೆ ಮಣ್ಣಿನ ಮೇಲೆ ಎಸೆದರು. ಅಹಂಕಾರದಿಂದ ಕೂಡಿದ್ದು ಬುದ್ಧಿವಾದವನ್ನು ಆಲಿಸಲಿಲ್ಲ. ಪಿತೂರಿ ಮತ್ತು ಕುಟಿಲತೆಯ ಮೋಡಗಳ ಘರ್ಜನೆ ಅವನ ಗೌರವ ಮತ್ತು ಪರಾಕ್ರಮದ ಬಲವನ್ನು ಸುಟ್ಟು ಹಾಕುವುದು ಎಂಬ ಸತ್ಯವನ್ನು ಅವನು ಅರಿಯಲಿಲ್ಲ. ವಿದ್ರೋಹ ಮತ್ತು ಸಂಚಿನ ಪ್ರವಾಹವು ಆ ಕಂಗೊಳಿಸುತ್ತಿದ್ದ ಸುರಕ್ಷಿತ ಕೋಟೆ ಮತ್ತು ಅದರ ವೈಭವವನ್ನು ಕಡುಕಪ್ಪು ಮಣ್ಣಿನೊಂದಿಗೆ ಸರಿಸಮ ಮಾಡುವುದಾಗಿ ಅವನು ಅರಿಯಲಿಲ್ಲ. ಅಪಕ್ವ ಸ್ವಭಾವದ ಅಪ್ರಬುದ್ಧನ ಮನಸ್ಸು ಮೊದಲು ಧಾರ್ಮಿಕ ಒಣ ಹುಲ್ಲನ್ನು ಮೇಯಿದು ನಂತರ ದುರಾಸೆ ಮತ್ತು ಲಾಲಸೆಯ ಸರಪಳಿಯಲ್ಲಿ ಬಿಗಿಯಲ್ಪಡುವನು. ಇದರ ಪರಿಣಾಮವೇನೆಂದರೆ ಅವನ ಪರಾಕ್ರಮದ ಗೋಡೆಯ ಕತ್ತಲನ್ನು ನಿರ್ಲಜ್ಜ ಮತ್ತು ನೀಚತನದ ಕತ್ತಿಯಿಂದ ಕಡಿಯಲ್ಪಡುವುದು ಮತ್ತು ಹೇಡಿ ಮತ್ತು ನೀಚ ಜನರು ಸಂತೃಪ್ತಿಯನ್ನು ಹೊಂದಿಲ್ಲದೆ ದುರಾಚಾರದಲ್ಲಿ ನಿರತರಾಗಿದ್ದು ಅಂತಹವರ ಶಿರಚ್ಛೇದನವನ್ನು ಅವಮಾನಪೂರ್ವಕವಾಗಿ ಮಾಡಲಾಗುವುದು.

ಈ ಅನಿಷ್ಟಕರವಾದ ವಿಷಯದ ಸುದ್ದಿಯ ನಂತರ ಬಾದಶಹ ಘಾಝಿಯ ನೆರವಿನ ಹಸ್ತವು ಅವರ ರಕ್ಷಣೆಯ ನೆರಳಿನಲ್ಲಿ ಮನೆಮಾಡಿತು ಮತ್ತು ಹಗಲು-ರಾತ್ರಿ ರಾಜ್ಯಭಾರದ ಜವಾಬ್ದಾರಿಯಲ್ಲಿ ಆ ನೆರವಿನ ಪಕ್ಷಿಯು ತನ್ನ ರೋಮ ಮತ್ತು ರೆಕ್ಕೆಗಳನ್ನು ವಿಶಾಲವಾಗಿ ಹರಡಿತು. ಸನ್ನಡತೆಯ ಅದೃಷ್ಟವಂತ ವ್ಯಕ್ತಿಯು ಯುದ್ಧರಂಗದ ಹೋರಾಟಗಳಲ್ಲಿ ತನ್ನ ಇಚ್ಛೆಯ ಚರ್ಮದ ಪಟ್ಟಿಯ ಮೇಲೆ ಕೈ ಇಟ್ಟು ಅರೆಕ್ಷಣವು ತಡೆಮಾಡದೆ ಪರಿಪಾಲಿಸುವ ವಿನಯವಂತ ಸೇವಕನಂತೆ ಪೈಗಂಬರ್ ಮಹಮ್ಮದ್‌ರವರ ಶರಿಯತ್ತಿನ ಹೂದೋಟಕ್ಕೆ ತನ್ನ ಹಿಸಾಮ್ ಹೆಸರಿನ ಕತ್ತಿಯಿಂದ ರಕ್ತ ಸಿಂಚನ ಮಾಡದೆ ನೆಮ್ಮದಿ ದೊರಕುವುದಿಲ್ಲ. ನಾಸ್ತಿಕತೆ ಮತ್ತು ದೇವ ಸಹಭಾಗಿತ್ವದ ಮುಳ್ಳುಗಳನ್ನು ಕಿತ್ತೆಸೆಯುವ ಸಲುವಾಗಿ ಅಫ್‌ಝುಲ್ ಖಾನನಿಗೆ ೧೫,೦೦೦ ಪರಾಕ್ರಮಿ ಸೈನಿಕರ ಜೊತೆಯಲ್ಲಿ ನೀಚ ಅಲ್ಪತನದಿಂದ ಕೂಡಿದವನ ಬೇರುಗಳನ್ನು ಕಿತ್ತು ಅವನನ್ನು ಮೂಲೋತ್ಪಾಟನೆ ಮಾಡಬೇಕೆಂದು ಆದೇಶ ನೀಡಿದ. ಆ ಮೂಲಕ ಅವನ ದುರ್ಮಾರ್ಗ ಮತ್ತು ದುರಾಚಾರದ ಸಂಪಾದನೆ ಹಾಗೂ ಅಕ್ರಮ ಮಾರ್ಗಗಳಿಂದ

ಗಳಿಸಿದ ಸಂಪತ್ತನ್ನು ದಹಿಸಿ ಅವನು ಇಹಲೋಕವನ್ನು ತ್ಯಜಿಸುವಂತೆ ಮಾಡುವುದು ಮತ್ತು ಕ್ರೌರ್ಯದ ಸಹಸ್ರಾರು ಮೂಲೆಗಳಿಂದ ತಲೆ ಎತ್ತುತ್ತಿರುವ ಅವನ ಬದುಕಿನ ಪೈರನ್ನು ಕುದುರೆಗಳ ಖುರ ಪುಟದಿಂದ ನಾಶಮಾಡಲಿ.

ಅಫ್‌ಝುಲ್‌ಖಾನನು ಬಾದಶಾಹಿ ಆಜ್ಞೆಯನ್ನು ತಲೆಯ ಮೇಲೆ ಹೊತ್ತು ಆತನ ಆಜ್ಞೆಯನ್ನು ಶಿರಸಾವಹಿಸಿ ಎದುರು ನಿಂತಿರುವ ಶತ್ರುವನ್ನು ನಾಶಮಾಡಲು ವೀರನಾದ ಅಫ್ರ ಸಯ್ಯಾದ್‌ನಂತಹ ವ್ಯಕ್ತಿಗಳ ಜೊತೆಯಲ್ಲಿ ತೀಕ್ಷ್ಣನೋಟದ ಜ್ವಾಲೆಯಂತಹ ಆದೇಶಗಳನ್ನು ಪರಿಪಾಲಿಸಲು ಉದ್ಯುಕ್ತನಾದ. ಆ ತೀಕ್ಷ್ಣನೋಟವನ್ನು ಎತ್ತರದ ಪರ್ವತಗಳು ಮತ್ತು ದೃಢವಾದ ಕೋಟೆಗಳತ್ತ ಹಾಯಿಸಿದಲ್ಲಿ ಎವೆ ಮುಚ್ಚುವುದರೊಳಗಾಗಿ ಪರ್ವತಗಳು ಉರಿದು ಬೂದಿಯಾಗುತ್ತವೆ ಮತ್ತು ಮೊಹಮ್ಮದ್‌ರ ನೋಟವು ಕಿಡಿ ಸಮೇತ ಸಿಡಿಲಿನ ಖಾಯಂ ಆವಾಸಸ್ಥಾನವಾಗಿದೆ. ರಕ್ತಪಿಪಾಸು ಸಿಂಹಗಳತ್ತ ನೋಡಿದಲ್ಲಿ ಅವರ ಗುಂಪು ಒಂದೇ ನೋಟದಲ್ಲಿ ದ್ರವದಂತೆ ಕರಗಿ ಹೋಗುತ್ತದೆ.

ಸಂಪೂರ್ಣ ಅಗ್ನಿಯಂತೆ ಪೂರ್ಣ ಶತ್ರುತ್ವ
ಮತ್ತು ಯುದ್ಧದೊಂದಿಗೆ ಎಲ್ಲಾ ಜನರು
ಕಗ್ಗೊಲೆ ಮತ್ತು ಹೊಡೆದಾಟ
ಬಡಿದಾಟದತ್ತ ತೊಡಗಿದರು.
ಕತ್ತಿಯ ಮೊನೆಯು ಹರಿತವಾದ
ಹೃದಯದೊಂದಿಗೆ ಪ್ರಿಯತಮೆಯ
ನೋಟಕ್ಕಿಂತಲೂ ಹೆಚ್ಚಿನ
ರಕ್ತಪಿಪಾಸುಗಳು ಹೊರಟರು.

ಶತ್ರುವಿನ ಬೇಟೆಯಾಡುವವವರು ಯುದ್ಧರಂಗದಲ್ಲಿ ಮುಖಾಬಿಲೆ ಮಾಡುವ ಜನರ ಶೌರ್ಯದ ಡಂಗೂರದ ಗುಲ್ಲು, ಎದುರಾಳಿಗಳು ಮತ್ತು ಶತ್ರುಗಳ ಕಿವಿಗಳಿಗೆ ಬಿದ್ದು ಆಶ್ಚರ್ಯಚಕಿತರಾದರು. ಹಾಗೂ ಹಗೆತನ ಮತ್ತು ಅಸೂಯೆಯ ನೋಟವನ್ನು ಪರಾಕ್ರಮಿ ಸಿಂಹಗಳ ಕೆಚ್ಚೆದೆಯ ಹೋರಾಟದ ಧೂಳು ಅವರ ಕಣ್ಣುಗಳನ್ನು ಮಸುಕಿತು. ಹಾಗೂ ವಿಜಯದ ಗಾಳಿಯು ಧರ್ಮಭೀರು ಸದ್ಗುಣಿ ಉತ್ತಮ ಅದೃಷ್ಟದ ಜನಗಳ ಹೃದಯ, ಮನಸ್ಸು ಮತ್ತು ನಾಸಿಕವನ್ನು ಮಶ್ಕ್ ಮತ್ತು ಅಂಬರ್ ಸುಗಂಧದ್ರವ್ಯಗಳಂತೆ ಸುವಾಸನಾಪೂರಿತವಾಗಿ ಮೂಡಿತು. ನೆರವಿನ ದೀಪದ ಪ್ರಭೆಯುಳ್ಳ ದೈವ ಪ್ರೇರಣೆಯುಳ್ಳ ಎದೆಗಾರಿಕೆಯ ವ್ಯಕ್ತಿಗಳಿಗೆ ಸೂರ್ಯನಂತಹ ಸ್ವರೂಪ ಮತ್ತು ಚಂದ್ರನಂತಹ ಬೆಳಕನ್ನು ನೀಡಿ ಸಂಪೂರ್ಣ ಬೆಳಕಿನ ಕಿರಣಗಳಿಂದ ಅದ್ಭುತ ನೋಟವನ್ನು ನೀಡಿತು. ಹಾಗೂ ಜೀವಗಳ ಬೇಟೆಯಾಡುವ ಅಖಾಬ್ ಎಂಬ ಪಕ್ಷಿಯು ಶತ್ರುಗಳ ದೇಹಗಳನ್ನು

ಕತ್ತಿಯ ನೆರಳಿನಿಂದ ಯುದ್ಧರಂಗದಿಂದ ಎತ್ತಿ ತರುವ ಸಲುವಾಗಿ ಹಾರಾಡುತ್ತಾ ಮೋಸ ಮತ್ತು ಸಂಚು ಹಾಗೂ ಕಪಟತನ ಮತ್ತು ದಂಗೆಯಲ್ಲಿ ನಿರತ ಸೈನಿಕರ ಸಾಲುಗಳಲ್ಲಿ ಸಾವಿನ ಸಂದೇಶವನ್ನು ಬೀರಿದವು. ಎಂದಾದರೂ ಅರಣ್ಯಗಳಲ್ಲಿ ಗುಂಪು ಗುಂಪಾಗಿ ಕೊಲೆ ಮಾಡುವವರು ಯುದ್ಧರಂಗದಲ್ಲಿ ಕುದುರೆಗಳ ರೂಪದಲ್ಲಿ ಕಂಡುಬರುತ್ತಾರೆ. ನಿರ್ಭಯ ನಿಷ್ಠುರ ಪರಾಕ್ರಮಿಗಳ ಭಯದಿಂದ ಮರಳುಗುಡ್ಡೆ ಮತ್ತು ಕಂದಕಗಳಲ್ಲಿ ಅವರು ನಾಪತ್ತೆಯಾದರು.

ಆನೆಯಂತಹ ದೇಹದ ಪರಾಕ್ರಮಿಗಳು
ಬಿಲ್ಲು ಬಾಣ ಮತ್ತು ಕತ್ತಿ ಹಾಗೂ ಭರ್ಜಿಯೊಂದಿಗೆ

ಸೈನ್ಯದ ಅಣು ಅಣುವಿಗೂ ಕಫನ್ ಬಲಿಯಾಯಿತು.
ಪರ್ವತವೇನಾದರೂ ಇರುತ್ತಿದ್ದಲ್ಲಿ ಅದನ್ನು
ಬಾವಿಯಂತೆ ಅಗೆದು ಹಾಕುತ್ತಿದ್ದರು
ಯುದ್ಧದ ರಭಸವು ತೀವ್ರವಾದಾಗ ಶತ್ರು ಪಾಳೆಯದವರು.
ಓಡುವ ಸಲುವಾಗಿ ಮೋರೆಯನ್ನು ತಿರುಗಿಸಿದರು.

ಆ ಭಯಾನಕ ಸುದ್ದಿಯ ಆಲಿಕೆಯು ಸಿಡಿಲಿನೋಪಾದಿಯಲ್ಲಿ ದುರದೃಷ್ಟಶಾಲಿ ದುರ್ಮಾರ್ಗಿ ಮತ್ತು ದುರ್ಜನ ಕಪಟಿಗಳ ಬಲ ಮತ್ತು ಸ್ಥಿರತೆಯ ಅರಮನೆಯಲ್ಲಿ ಕಳವಳ ಮತ್ತು ಉದ್ವೇಗ, ಹೆದರಿಕೆ, ಗಾಬರಿಯಿಂದ ಕೂಡಿದ್ದು ಸೋಲಿನ ಸಂಕೇತವನ್ನು ವ್ಯಕ್ತಪಡಿಸಿತು ಮತ್ತು ಸಿಡಿಲಿನೋಪಾದಿ ಗರ್ಜಿಸುವ ಮಿಂಚಿನಂತಹ ಶೂರ ಸೈನಿಕರ ಭಯ ಮತ್ತು ಹೆದರಿಕೆಯ ಪ್ರವಾಹದಿಂದ ದುಃಖಾರ್ತರಾದ ಅಹಂಭಾವದ ಅಜ್ಞಾನಿ ಗರ್ವಿಷ್ಠ,ನಿರ್ಲಜ್ಜ ಶತ್ರುಗಳ ಹೋರಾಟವು ಆಕಾಶದೆತ್ತರಕೆ ಏರಿದ್ದು, ನೆಲಸಮವಾಯಿತು.

ಆ ದೌರ್ಭಾಗ್ಯದಿಂದ ಕೂಡಿದ ಮೂರ್ಖ, ಸಂಚುಕೋರ, ಪಿತೂರಿಕೋರರು ಸೇರಿದ್ದ ಸ್ಥಳದಿಂದ ಅನೇಕ ಜನರು ಮತಿಹೀನರಾಗಿ ಆಲೋಚನಾ ಶಕ್ತಿಯನ್ನು ಕಳೆದುಕೊಂಡರು. ನರಿಯಂತಹ ಮೋಸದ ನೆಪ ಹೂಡಿಕೆಯಿಂದ ಅನೇಕರು ಅಸೂಯೆ ಮತ್ತು ಹೊಟ್ಟೆಕಿಚ್ಚಿನ ಜನರು ತಮ್ಮ ಜೀವವನ್ನು ಉಳಿಸಿಕೊಳ್ಳುವ ಮತ್ತು ತಮ್ಮ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವ ಸಲುವಾಗಿ ಇನ್ನು ಯಾವ ಮಾರ್ಗವನ್ನು ಕೂಡ ಕಾಣಲಿಲ್ಲ. ಮುಂದೇನೂ ದಾರಿಕಾಣದೆ ಅಫ್‌ಝಲ್‌ಖಾನ್‌ನಿಗೆ ಒಂದು ಪತ್ರವನ್ನು ಬರೆದರು. ಅದರಲ್ಲಿ ಒಂದು ವೇಳೆ ಮುಂಬರುವ ದಿನಗಳಲ್ಲಿ ಆಕಾಶದ ಕರುಣೆ ತಮ್ಮ ಪಾಲಿಗೆ ಇಲ್ಲವಾದಲ್ಲಿ ಮತ್ತು ಶತ್ರುತ್ವದ ಉರುಳಿನಲ್ಲಿ ಬಂದಿಯಾದಲ್ಲಿ ಅಹಂಕಾರ ಮತ್ತು ದುರಭಿಮಾನದ ಮೇರೆಗೆ ತಾವು ಕಳಾಹೀನವಾಗಿದ್ದೇವೆ. ಆದರೂ ಕೂಡಾ ಈ ಅರ್ಪಣಾ ಭಾವವನ್ನು ಉಳಿಸಿಕೊಂಡಿರುವವರ ಹೃದಯದಲ್ಲಿ ಹಿಂದೆ

ಹಳೆಯಕಾಲದಲ್ಲಿ ಆದಂತೆ ಪ್ರಭುತ್ವದ ದೃಷ್ಟಿಯು ತಮ್ಮ ಮೇಲೆ ಇಡುವುದು ಅಗತ್ಯವಾಗಿದೆ. ಸಂಪೂರ್ಣವಾದ ಕುಟಿಲತೆ ಮತ್ತು ಅಸೂಯೆಯಿಂದ ಒಂದು ಅವಧಿಯವರೆಗೆ ನಾನು ಜನ್ಮತಃ ಕುರುಡನಂತೆ ನನ್ನ ಕಣ್ಣುಗಳು ದೃಷ್ಟಿಹೀನವಾಗಿದ್ದವು. ಕರುಣೆಯ ಸುರ್ಮ ಮತ್ತು ಮೃದುತ್ವದ ಕಾಡಿಗೆಯು ಹಾಸಿಗೆ ಹಿಡಿದ ರೋಗಿಷ್ಠನಿಗೆ ಚೈತನ್ಯದಾಯಕವಾಯಿತು. ಔಷಧಾಲಯದ ಹಕೀಮರು ನವ ಮುತ್ತಿನಂತೆ ಪಾರದರ್ಶಕ ಬೆಳಕಿನಿಂದ ಕಣ್ಣುಗಳನ್ನು ಸ್ವಚ್ಛಮಾಡಿದ್ದಾರೆ. ಉದ್ವಿಗ್ನತೆ ಮತ್ತು ಉದ್ವೇಗದಿಂದ ಹಾಗೂ ಅಸಹಾಯಕತೆ ಮತ್ತು ಕಳವಳದಿಂದ ಹಾಸಿಗೆಯ ಮೇಲೆ ಬಿದ್ದಿರುವ ಅಸ್ವಸ್ಥರಿಗೆ ಆರೋಗ್ಯವನ್ನು ಮರುಕಳಿಸುವ ವೈದ್ಯರು ದುರಾದೃಷ್ಟ ಪೀಡಿತರಾಗಿ ಕಾಡಿನಲ್ಲಿ ಅಂಡಲೆಯುತ್ತಿರುವ ವ್ಯಗ್ರ ಜನರ ನಿರೀಕ್ಷೆಯ ನೋಟವನ್ನು ಪರಿಣಾಮಕಾರಿಯಾಗಿ ಪರಿಗಣಿಸುವವರೇ ಕರುಣೆಯ ಅಮೂಲ್ಯ ಮುತ್ತು–ರತ್ನಗಳ ಕಾಡಿಗೆಯಿಂದ ಸುಸ್ಥಿತಿಯ ಬೆಳಕನ್ನು ನೀಡಿದ್ದೀರಿ. ಅದರ ಕಿರಣ ಮತ್ತು ಬೆಳಕಿನ ವೀಕ್ಷಣೆಯಿಂದ ಸೂರ್ಯನ ನೋಟವು ಆಶ್ಚರ್ಯ ಚಕಿತವಾಗಿದೆ. ಈ ಬೆಳಗುವ ಸೂರ್ಯನ ಉಪಕಾರವನ್ನು ಉತ್ತಮವಾದ ಗೌರವ ಮತ್ತು ಸಜ್ಜನಿಕೆಯಿಂದ ಒಂದು ಕ್ಷಣವೂ ಬೇರ್ಪಡುವುದಿಲ್ಲ. ವಿಧೇಯತೆಯ ಶರಾಬುಖಾನೆಯ ಪಾನಪ್ರಿಯ ಮತ್ತು ಉನ್ನತಿಯ ಪಾನಗೃಹದಿಂದ ನಶೆ ಏರಿದಂತಾಗಿದೆ ಹಾಗೂ ಸಜ್ಜನಿಕೆ ಮತ್ತು ಅರ್ಪಣಭಾವದ ಕೇಂದ್ರದಿಂದ ಸ್ಥಿರವಾದ ಹೆಜ್ಜೆಗಳಿಂದ ದೃಢವಾದ ನಿಲುವಿನಿಂದ ನಂಬಿಕೆಯ ವರ್ತುಲದಿಂದ ತಲೆಯನ್ನು ಹೊರಹಾಕದೆ ಒಳ್ಳೆಯ ಅದೃಷ್ಟ ಹಾಗೂ ಗೆಳೆತನದ ನಂಬಿಕೆ ಮತ್ತು ಪ್ರೇಮಭಾವದ ಆಸನದಲ್ಲಿ ಆಸೀನರಾಗಿ ಸಭೆಯ ತೇಜಸ್ವಿ ಕಲಾಪಗಳ ಅಧ್ಯಕ್ಷತೆಯನ್ನು ನಿರ್ವಹಿಸುವಂತಹವನಾಗುತ್ತಾನೆ.

ಆದರೆ ಪುರಾತನ ಪಾಪ ಮತ್ತು ಲೋಪವು ಆ ಶುಭ ಇಚ್ಛೆಯ ಪಾದಗಳಲ್ಲಿ ಸರಪಳಿಗಳನ್ನು ಮತ್ತು ಪ್ರಮುಖ ಇಚ್ಛೆಯ ಕುತ್ತಿಗೆಯಲ್ಲಿ ಕುಕೃತ್ಯಗಳ ಅಧಃಪತನ ಮತ್ತು ಭಯ ಹಾಗೂ ಭಯೋತ್ಪಾದನೆಯ ಉರುಳನ್ನು ತೊರೆಯಲಿಲ್ಲ. ಆ ಪರಾಕ್ರಮದ ಮೈದಾನದಲ್ಲಿ ಆರೋಗ್ಯದ ಲಾಠಿಯನ್ನು ಬೀಸುವವರಿಗೆ ಸಜ್ಜನಿಕೆ ಮತ್ತು ಸಭ್ಯತೆಯನ್ನು ಪಡೆಯುವ ಸಲುವಾಗಿ ಸಂಪೂರ್ಣವಾಗಿ ಹೇಳಿದಂತೆ ನಾನು ತತ್‌ಕ್ಷಣದಿಂದಲೇ ನಡೆದುಕೊಳ್ಳುವೆನು ಹಾಗೂ ಉಪ್ಪು ತಿಂದವರಿಗೆ ದ್ರೋಹ ಬಗೆಯುವ ಮತ್ತು ನೀಚತನದ ಸ್ವಾಭಾವಿಕ ಕಲೆಗಾರಿಕೆಯನ್ನು ಉನ್ನತವಾದ ಹಣೆಗೆ ಅದೃಷ್ಟ ಮತ್ತು ತೇಜಸ್ಸಿನ ಶುಭ್ರ ಕಣ್ಣಿನ ಕೊಡುಗೆಗಳು ಮತ್ತು ಇನಾಮುಗಳನ್ನು ಪವಿತ್ರ ಜಲದಿಂದ ಶುಭ್ರಗೊಳಿಸಿ ತನ್ನ ಮೋರೆಯನ್ನು ಚಂದ್ರ ಮತ್ತು ಸೂರ್ಯನಿಗಿಂತ ಹೆಚ್ಚು ಪ್ರಕಾಶಮಯವನ್ನಾಗಿ ಮಾಡುವೆ. ಒಂದು ವೇಳೆ ಅವರು ನೆರವು ಮತ್ತು ವಿಜಯಪ್ರಾಪ್ತಿಯಿಂದ ಬುದ್ಧಿವಂತ ಮತ್ತು ಧೀಮಂತ ವ್ಯಕ್ತಿಗಳ ಕೈಯಿಂದ ಸಫಲತೆ

ಮತ್ತು ವಿಜಯದ ಫಲಗಳನ್ನು ಜಗದೊಡೆಯನ ಕರುಣೆಯ ಫಲಗಳಿಂದ ಆಯ್ದುಕೊಂಡು ತಮ್ಮ ಪಾಲಿನದನ್ನು ತುಂಬಿಸಿಕೊಳ್ಳುತ್ತಾರೆ ಹಾಗೂ ಬೆಳಕಿನ ಭುಜಗಳನ್ನು ನೆರವಿನ ತೋಳಬಂದಿಯನ್ನು ಭೂಮಿ ಮತ್ತು ಆಕಾಶದಿಂದ ಶೃಂಗಾರ ಮಾಡಿ, ವಿಶ್ಲೇಷಣೆಯ ದೃಷ್ಟಿಯಿಂದ ಸಾವಿರಾರು ವರದಿಗಳನ್ನು ಇಡುವವರ ಝೂಲ್‌ನರೇಮಾನನಿಂದ ತುಚ್ಛವಾಗಿ ನೋಡುತ್ತಾನೆ. ಕೋಟೆಯನ್ನು ಗೌರವ ಮತ್ತು ಸೂರ್ಯನಂತಹ ಎತ್ತರದ ಸ್ಥಾನಮಾನದಂತೆ ಶುಭ ಸ್ವಾಗತದ ಸಂಭ್ರಮದ ಮೂಲಕ ಗೌರವ ಮತ್ತು ಉನ್ನತಿಯನ್ನು ನೀಡುವೆ. ನಾನು ನಿರಾಕರಣೆ ಮತ್ತು ವ್ಯಾಕುಲತೆಯ ಕೊಚ್ಚೆಯಲ್ಲಿ ಪಾದಗಳನ್ನು ಇಟ್ಟಿದ್ದೆ. ಕೊಡುಗೆಗಳ ಸಾಂತ್ವನ ಮತ್ತು ಬಿಡುಗಡೆ ಹಾಗೂ ಮುಕ್ತಿಯ ಆಶ್ವಾಸನೆ ನೀಡುತ್ತಾ ಹೃದಯಗಳನ್ನು ಸಂತೋಷ ಮತ್ತು ನೆಮ್ಮದಿಯಿಂದ ತುಂಬುತ್ತಾರೆ. ಭೂಮಿ ಮತ್ತು ಕಾಲದ ರೋಗಿಷ್ಠರ ಗಾಯಗಳ ಮೇಲೆ ಮುಲಾಮನ್ನು ಹಚ್ಚುವ ದಯಾಮಯನ ದಯೆಯಿಂದ ದೂರ ಮತ್ತು ವಂಚಿತನಾಗಿರುವುದಿಲ್ಲ. ಹಜರತ್ ಬಾದಶಹ ಘಾರಿಖಯ ಸಂಕೇತವು ಸುಸಂಬದ್ಧತೆಯಿಂದ ಕೂಡಿದ್ದು ರಾಜನು ಅನುವಂಶಿಕ ಉತ್ತರದಾಯಿತ್ವ ಮತ್ತು ವಿಮರ್ಶೆಯ ಲೋಕದ ಕಾರ್ಯನಿರ್ವಾಹಕನಾಗಿದ್ದಾನೆ. ಅಫಜಲ್‌ಖಾನ್‌ನನ್ನು ಬೀಳ್ಕೊಡುವ ಸಂದರ್ಭದಲ್ಲಿ ನಿರ್ದೇಶನ ಮತ್ತು ಸೂಚನೆಗಳನ್ನು ನೀಡುತ್ತಾ ರಾಜ್ಯದ ಸಂರಕ್ಷಕ ಮತ್ತು ಸಲಹೆ ಸೂಚನೆಗಳನ್ನು ನೀಡುವ ಮಾರ್ಗದರ್ಶಕನನ್ನಾಗಿಸಿದ್ದ.

ಒಂದು ವೇಳೆ ಆ ಕಡುಗಪ್ಪು ನಾಸ್ತಿಕರು, ದುರ್ಬುದ್ಧಿಯ, ಕಪಟಿಗಳು, ಪಿತೂರಿಕೋರರು ನೆಪಗಳನ್ನು ಮುಂದೊಡ್ಡಿ ಆತ್ಮಘಾತಕ ಸಂಬಂಧಿತರಾದಲ್ಲಿ, ಕೇಡು ಮತ್ತು ಪ್ರತೀಕಾರದ ಮೈದಾನದಲ್ಲಿ ಅವರುಗಳು ಎದುರಾಳಿಗಳಾಗಿ ಮುಂದೆಬಂದಲ್ಲಿ ಹಾಗೂ ಕತ್ತಿಯ ಸೆಳೆತದಿಂದ ಬೆಂಬಲಿಗ ಅನುವರ್ತಿ ಸೈನ್ಯದ ಕ್ರೋಧದಿಂದ ಅವರ ಅಹಂಕಾರವು ಭಂಗವಾದಲ್ಲಿ ಅವರು ಆ ಹೊಟ್ಟೆಕಿಚ್ಚು ಮತ್ತು ಅಸೂಯೆಯ ಕರಾರನ್ನು ಲಗತ್ತಿಸಿ ದ್ವೇಷದ ಬರವಣಿಗೆಯನ್ನು ಸತ್ಯಧರ್ಮದ ಸಂಪ್ರದಾಯದ ಮೇರೆಗೆ ಅವಲೋಕನ ಮಾಡಿ, ಕಳುಹಿಸುವುದು. ಆದರೆ ಚಾಪ್ಲೂಸಿ ಮತ್ತು ಮೋಸದ ಮೊಖದಮೆಗಳನ್ನು ಅಂಗೀಕರಿಸುವುದು ಮತ್ತು ಅವನ ಹರಿತನಾಲಿಗೆ ಮತ್ತು ಕಪಟದ ಮಾತುಗಳನ್ನು ಗಮನವಿಟ್ಟು ಆಲಿಸುವುದು ಹಾಗೂ ಚಿಕ್ಕಪುಟ್ಟ ಬೇಟೆಗಾರನಂತೆ ತನ್ನ ಜೀವವೇ ಬೇಟೆಯಾಡಲ್ಪಡುವುದರಿಂದ ಎಚ್ಚರಿಕೆ ವಹಿಸುವುದು.

ಒಂದು ವೇಳೆ ಅವನ ಆತ್ಮದ ಕನ್ನಡಿಯು ವಸ್ತುಸ್ಥಿತಿಯನ್ನು ಅವಲೋಕಿಸಿದ ನಂತರವೂ ಸತ್ಯದ ಬೆಳಕನ್ನು ಅಂಗೀಕರಿಸುವ ಮನಃಸ್ಥಿತಿಯನ್ನು ರೂಪಿಸದಿದ್ದಲ್ಲಿ ಹಾಗೂ ದುರಾದೃಷ್ಟವಶಾತ್ ಕಪಟ ಹೃದಯದಲ್ಲಿ ದೂರದೃಷ್ಟಿಯ ಅಂಶಗಳು ಕಂಡು ಬರದಿದ್ದಲ್ಲಿ ಆ ಮೋಸದ ಕರಾರಿನ ಬರವಣಿಗೆಯನ್ನು ನಿರ್ಣಾಯಕ ದಿನದಂದು

ಅಲ್ಲಾಹನು ತೀರ್ಪು ನೀಡುವಾಗ ಪುಣ್ಯವಂತರ ಕೃತ್ಯಗಳ ಹಾಳೆಯನ್ನು ಬಲಗೈಯಲ್ಲಿ ನೀಡಿ ಭಗವಂತನ ಪ್ರೀತ್ಯಾದ್ಯರಗಳಿಂದ ಸ್ವರ್ಗದಲ್ಲಿ ನೆಲೆಯಾಗುವರು. ಹೀಗೆಯೇ ಶಾಂತಿ ಮತ್ತು ನೆಮ್ಮದಿಯ ರಾಜ್ಯದ ಸಂರಕ್ಷಕರೆಂದು ಭಾವಿಸಿ ಸತ್ಯ ಮತ್ತು ಸದ್ಗುಣಗಳ ಎಲ್ಲೆಗಳನ್ನು ಅತಿಕ್ರಮಿಸುವ ಇರಾದೆಯಿಂದ ಕರಾರನ್ನು ಭಂಗಗೊಳಿಸುವ ಹಾಗೂ ಅವಿಧೇಯತೆಯ ಕಲ್ಲುಗಳಿಂದ ಗೆಳೆತನವನ್ನು ನಾಶಮಾಡುವರು. ನವ ವಧುವಿನಂತೆ ಸಂತಸದ ಹೃದಯ ಹಾಗೂ ದುಃಖ ಮತ್ತು ಸಂಕಷ್ಟಗಳಿಂದ ಮುಕ್ತಿಹೊಂದಿದ ಅಪ್ಸರೆಯಂತಹ ಹಣೆಯನ್ನು ಹೊಂದಿದಂತಾಗುತ್ತಾರೆ. ಆಕೆಯ ಸೌಂದರ್ಯದ ಜಾಲರಿಯಿಂದ ಚಂದ್ರ ಮತ್ತು ಸೂರ್ಯರು ಬಾಚಿಕೊಳ್ಳುವರು. ಆಕೆಯನ್ನು ತಮ್ಮ ಆಲಿಂಗನದ ತೆಕ್ಕೆಯಲ್ಲಿ ಸುತ್ತುವರೆದು ಅನೇಕರು ಉದ್ವೇಗಕ್ಕೆ ಒಳಗಾಗುತ್ತಾರೆ. ಭಯಾನಕ ಕಣಿವೆ ಮತ್ತು ನಿಗೂಢ ಅರಣ್ಯಗಳತ್ತ ಮುಖಮಾಡಿ ಅದರ ಮೇಲೆ ಮುಳ್ಳುಗಳ ಗಾಯಗಳ ಭಯದಿಂದ ಸತ್ಯವನ್ನು ಅರಿಯುವ ಹಕೀಮರಂತೆ ಜನ್ಮ ರಹಸ್ಯದ ಹಸ್ತವು ಯಾವಾಗಲೂ ಗಡಿರೇಖೆಯಲ್ಲಿ ಇರುವುದಿಲ್ಲ.

ಪಾರ್ಶ್ವವಾಯು ಪೀಡಿತ ವ್ಯಕ್ತಿಯು ತನ್ನ ಅಂಗೈಯ ತೋಳಿನಿಂದ ಕೈಯನ್ನು ಹೊರತೆಗೆಯಲು ಅಸಾಧ್ಯ ಮತ್ತು ಬುದ್ಧಿವಂತ ಜನರು ಚಿಂತನೆಯಿಂದ ಕೂಡಿದ ಅಲೋಚನೆ ಸೂಕ್ತ ಪರಿವೀಕ್ಷಣೆಯ ಒಡೆಯರಾದಂತಹ ಜನರು ನಡೆದಾಡುವ ಪಾದಗಳನ್ನು ಕಲ್ಲುಮಣ್ಣಿನಿಂದ ಕೂಡಿದ ಮೈದಾನದ ಕಲ್ಲುಗಳಿಂದ ರಕ್ಷಿಸುವ ಸಲುವಾಗಿ ಪಾದಗಳಲ್ಲಿ ಗಾಯಗಳಾಗುವ ಅಂಜಿಕೆಯಿಂದ ಕುಂಟರಂತೆ ಪಾದಗಳನ್ನು ಉದ್ದವಾಗಿ ನೀಡುವುದಿಲ್ಲ. ಮರಗಿಡಗಳ ಬಾಹುಳ್ಯದ ದೆಸೆಯಿಂದ ಇಳಿಜಾರು ಮತ್ತು ಗುಡ್ಡಗಳು ಬಾನಿನ ಬೆಳಗುವ ಚಂದ್ರನ ಬೆಳಕನ್ನು ಮತ್ತು ಸೂರ್ಯನ ಕಿರಣಗಳ ಉಜ್ವಲತೆಯನ್ನು ತಮ್ಮ ಉದ್ದೇಶ ಸಾಧನೆಯ ಭರವಸೆಯೊಂದಿಗೆ ಆಯ್ಕೆ ಮಾಡಲಿಲ್ಲ. ಅದರ ಮಣ್ಣು ಗುಡ್ಡೆಗಳು ಮತ್ತು ಕಂದಕಗಳು ಮರಗಳು ಮತ್ತು ಅವುಗಳ ಕೊಂಬೆಗಳ ಜೊತೆಯಲ್ಲಿ ಒಂದರೊಡನೆ ಒಂದು ಬೆಸೆದುಕೊಂಡಿದ್ದರಿಂದ ಅರೆ ಅಂಧಕಾರಮಯ ರಾತ್ರಿಯ ದೆಸೆಯಿಂದ ಕಣ್ಣುಗಳು ವಿಶ್ವವನ್ನು ಬೆಳಗುವ ಚಂದ್ರನ ಹೊಳೆಯುವ ಬೆಳಕಿನಿಂದ ಯಾವುದೇ ಪಾಲನ್ನು ಪಡೆಯಲು ಅಸಾಧ್ಯವಾಯಿತು. ಕೆಲವೇ ದಿನಗಳ ಅವಧಿಯಲ್ಲಿ ಎಲ್ಲಾ ಸೈನಿಕರನ್ನು ಆ ಕೋಟೆಯ ಸುತ್ತಮುತ್ತ ತಲುಪಿಸಲಾಯಿತು. ಆ ದುಷ್ಟ ದ್ವೇಷಪೂರಿತ ನಾಸ್ತಿಕರು ಮತ್ತು ವಿದ್ರೋಹಿಗಳು ತಿರಸ್ಕಾರದ ಆ ಉದ್ದೇಶದಿಂದ ಅರಳಿದ ಪುಷ್ಪದಂತೆ ಗಹಗಹಿಸಿ ನಗುತ್ತಾ ಈ ಸಂದೇಶವನ್ನು ಕಳುಹಿಸಿದರು. ನಾಳೆ ವಾಗ್ದಾನದ ದಿನವಾಗಿದೆ ಮತ್ತು ನಾನು ಆ ದಾನಧರ್ಮಗಳ ಆಳವಾದ ಮಹಾಸಾಗರದೊಂದಿಗೆ ಭೇಟಿಯಾಗಲು ಕಾತುರನಾಗಿದ್ದೇನೆ.

ಅಫ್‌ಝುಲ್‌ಖಾನನಿಗೆ ಆ ಸಂದರ್ಭದಲ್ಲಿ ವಿವೇಚನೆಯ ಟೋಪಿಯು ತಲೆಯ ಮೇಲಿರಲಿಲ್ಲ. ಬದಲಿಗೆ ಮೂರ್ಖತನದ ಪರದೆಯು ಅವನ ಕಣ್ಣಿನ ದೃಷ್ಟಿಯನ್ನು ಕಿತ್ತುಕೊಂಡಿತ್ತು. ಚಿಕ್ಕ ಪುಟ್ಟ ಬೇಟೆಗಾರನನ್ನು ಭವಿಷ್ಯದ ನಾಯಕ ಹಾಗೂ ವಿಶೇಷ ಪರಾಕ್ರಮಿ ಎಂದು ಭಾವಿಸಿ ಆ ದಿನ ಬೆಳಿಗ್ಗೆ ಹನ್ನೆರಡು ಜನರೊಂದಿಗೆ ಕೂಡಿ ಕೋಟೆಯ ಮೇಲ್ಭಾಗಕ್ಕೆ ಹೋದ. ಆ ವಿದ್ರೋಹಿ ಮತ್ತು ಉಲ್ಲಂಘನೆಯ ಕತ್ತಲ ರಾತ್ರಿಯಲ್ಲಿ ಅಂಧಕಾರಸ್ಥನಾದ ಸಿಪಾಯಿಯು ಹೃದಯದ ಕರಾರು ಒಪ್ಪಂದದ ಸೂಕ್ಷ್ಮತೆಯನ್ನು ಅವಿಶ್ವಾಸದ ಮತ್ತು ಭಿನ್ನಮತದ ಕಲ್ಲಿನಿಂದ ಚೂರು ಚೂರು ಮಾಡಿದ ಮತ್ತು ತನ್ನ ಬದುಕಿನ ಜೇನನ್ನು ಸಾವಿನ ಕೊಚ್ಚೆಯೊಂದಿಗೆ ಮಿಶ್ರಮಾಡಿದ ಮತ್ತು ತನ್ನ ಅಸ್ತಿತ್ವದ ಮರ್ಯಾದೆಯನ್ನು ಪರಲೋಕದ ಪಯಣದಿಂದ ನಾಶಗೊಳಿಸಿದ. ಅವನ ಎಲ್ಲಾ ಕುದುರೆಸವಾರರು ಹಾಗೂ ಪದಾತಿ ದಳದವರು ನಿರ್ಜೀವ ದೇಹದೊಂದಿಗೆ ಅವನ ಆತ್ಮವು ಪಯಣ ಮಾಡುವುದನ್ನು ದುಃಖ ಮತ್ತು ಯಾತನೆಯಿಂದ ವೀಕ್ಷಿಸಿ ಅಸಹಾಯಕತೆಯಿಂದ ಓಡತೊಡಗಿದರು. ಆ ಕೃತಘ್ನ ಧರ್ಮವಿರೋಧಿಯು ಹಜರತ್ ಬಾದಶಹ ಘಾಝಿಯ ಬಗ್ಗೆ ಅರ್ಪಣಾಭಾವ ಮತ್ತು ಆಜ್ಞಾಪಾಲನೆಯ ನಿಲುವಂಗಿಯ ದಿಕ್ಕನ್ನು ತಪ್ಪಿಸಿ ಸ್ನೇಹಪರತೆಯ ನಿಲುವಂಗಿಯನ್ನು ತೊಟ್ಟು ವಿದ್ರೋಹದ ಕೋಟೆಯಾದ ಪನಾಲಾದ ಬಾದಶಹನ ಕೋಟೆಗಳ ಮುಂದೆ ನಿಂತು ಸ್ವತಃ ಚುರುಕು ಮತ್ತು ಯೋಗ್ಯನೆಂದು ಭಾವಿಸಿದ್ದ. ಯುದ್ಧರಂಗದಿಂದ ಓಡುತ್ತಿದ್ದ ಅವನ ಎಲ್ಲಾ ವಿದ್ರೋಹಿ ಜನರೊಂದಿಗೆ ಮೇಲೆ ಹೇಳಿದ ಕೋಟೆಯ ಮೇಲೆ ಹಿಡಿತವನ್ನು ಸಾಧಿಸಿದ. ಸಿತಮ್‌ಝೂಮಾನ್ ಎಂಬುವಾತ ಬಾದಶಹನ ಸರದಾರರ ಪೈಕಿ ಒಬ್ಬನಾಗಿದ್ದ. ಮಂತ್ರಿಯನ್ನು ೩,೦೦೦ ಸೈನಿಕರೊಂದಿಗೆ ಸಮೀಪದ ಜಹಗೀರಿನಲ್ಲಿ ಕುಳಿತು ಅವನ ಸಾವಿನ ಪುಷ್ಪಗಳು ಮತ್ತು ಯೌವ್ವನದ ಹೂದೋಟಗಳು ಬದುಕಿನ ಸಂಭ್ರಮದ ಹೂತೋಟದಿಂದ ಸಫಲತೆಯ ಸುಗಂಧವನ್ನು ಆಯ್ಕೆ ಮಾಡಲಾರಂಭಿಸಿದ. ಆ ಸುದ್ದಿಯನ್ನು ಕೇಳಿದ ನಂತರ ಸಂಘರ್ಷ ಮತ್ತು ಯುದ್ಧದ ನಡುವೆ ಆ ಕೊಲೆಗೆ ಯೋಗ್ಯನಾದ ಧರ್ಮ ವಿರೋಧಿ ಶತ್ರುವು ನಿಕೃಷ್ಟತೆಯ ಪೈರನ್ನು ಬೆಳೆದ. ಒಟ್ಟಾರೆ ಅವನು ನೀಚತನ ಮತ್ತು ನಿರ್ಲಜ್ಜತೆಯ ಮುಳ್ಳು ಕಂಟಿಯ ವಿನಃ ಇನ್ನಾವುದೇ ಫಲವನ್ನು ಪಡೆಯಲಿಲ್ಲ. ಯುದ್ಧವೆಂಬುದೇ ಮೋಸ ಎಂಬ ನಾಣ್ಣುಡಿಯಂತೆ ಎಲ್ಲಿಯವರೆಗೆ ಯುದ್ಧಾಕಾಂಕ್ಷಿ ವೀರರ ಪರಾಕ್ರಮದ ಕತ್ತಿಯು ಪ್ರಜ್ಞೆ ಮತ್ತು ಚಿಂತನೆಯ ಕಾಂತಿಯಿಂದ ಹೊಳೆಯುವುದಿಲ್ಲವೋ ಅಲ್ಲಿಯವರೆಗೆ ರಾಜಕಾರಣ ಮತ್ತು ರಾಜ್ಯಾಡಳಿತದ ಮೋರೆಯನ್ನು ಅದರೊಳಗೆ ಕಾಣಲು ಸಾಧ್ಯವಿಲ್ಲ. ಎಲ್ಲಿಯವರೆಗೆ ಬಲಾಢ್ಯ ವೇದನೆಯು ದೇಶಕ್ಕೆ ಗೆಲುವನ್ನು ತರುವವವರ ಮುಖಾಬಿಲೆ ಮಾಡುವ ವೀರರ ಪ್ರಯತ್ನಗಳ ಉಪಾಯಗಳ ರೋಮ ಮತ್ತು ರೆಕ್ಕೆಗಳೊಡನೆ ಬೆಂಬಲ ನೀಡುವುದಿಲ್ಲವೋ. ಅಲ್ಲಿಯವರೆಗೆ ದಿಗ್ವಿಜಯ ಶುಭವಾರ್ತೆ ಮತ್ತು ಸಫಲತೆಯ

ಶಿಳ್ಳೆಯು ಕೇಳಿಬರುವುದಿಲ್ಲ. ಈ ಕಾರಣದಿಂದಲೇ ಹಜರತ್ ಬಾದಶಹ ಘಾಝಿಯವರು ಈ ನಿಷ್ಠುರತೆಯ ಕಾಡಿನ ಗುಂಪು ಮತ್ತು ಕೂಟವನ್ನು ಶಿಕ್ಷಿಸುವ ಸಲುವಾಗಿ ಹಾಗೂ ಹೃದಯಭೇದಕ ಮತ್ತು ಅಶುದ್ಧತೆಯ ಗಲ್ಲಿಗಲ್ಲಿಗಳನ್ನು ಅವನ ಪರಾಕ್ರಮದ ಪುಷ್ಪಗಳ ಸಂಹಾರ ಮಾಡುವುದು ಮೂರ್ಖತನವಾಗುವುದಿಲ್ಲ ಹಾಗೂ ಸಮುದ್ರದ ರಕ್ತಪಿಪಾಸು ಮನುಷ್ಯರನ್ನು ನುಂಗುವ ಮೊಸಳೆಯಂತಹ ಯುದ್ಧ ಹಾಗೂ ಮರ್ಯಾದೆಯ ಬೇಟೆಯಾಡುವ ಸಿಂಹವೆಂದು ಪರಿಗಣಿಸಲಾಗುತ್ತದೆ.

ತನ್ನ ಅಮೂಲ್ಯ ಜೀವವನ್ನು ಈ ಭೂಮಿಯ ಬಾದಶಹನ ಮೇಲೆ ಅರ್ಪಣೆ ಮತ್ತು ಬಲಿನೀಡಿ ಅವನ ಸ್ಥೈರ್ಯವನ್ನು ಅಮರ್ತ್ಯ ಪ್ರೇಮಿಯಾದ ಫರ್‌ಹಾದ್‌ನ ಕೊಡಲಿಯಿಂದ ಸೀಳಿ ಅವನ ದ್ರೋಹವನ್ನು ನಮ್ರುದ್‌ನ ಬೆಂಕಿಯ ಖಡ್ಗದ ನೀರಿನಿಂದ ತಂಪಾಗಿಸಲಿ ಮತ್ತು ಅವನ ಅಹಂಕಾರ ಮತ್ತು ಗರ್ವವನ್ನು ಖಡ್ಗದ ಬೆಂಕಿಯ ಶಾಖದಿಂದ ಒಣಗಿಸಲಿ. ಭೂಮಿಯ ತೋಟವನ್ನು ಆ ದುರ್ಮಾರ್ಗಿ ಧರ್ಮಬಾಹಿರನ ಅಸ್ತಿತ್ವದ ನೀಚತನದಿಂದ ಶುಭ್ರಗೊಳಿಸಲಿ. ಈ ನಡುವೆ ಕಂದನೂಲ್ ಪ್ರಾಂತ್ಯದ ಒಡೆಯನಾದ ಸಲಾಬತ್‌ಖಾನ್ ಎಂಬುವವನಿಂದ ಒಂದು ಅರ್ಜಿಯು ತಲುಪಿತು.

ದಿನಂಪ್ರತಿಯ ಕರುಣೆ ಮತ್ತು ಕೊಡುಗೆಗಳನ್ನು ಪಡೆಯುವವರ ವಿವಿಧ ಪ್ರಭೇದಗಳು ಬಹುಮಾನಗಳ ಭಾರಿ ಕೊಡುಗೆಗಳನ್ನು ದೃಢವಾಗಿ ಸ್ವೀಕರಿಸುವವರಿಗೆ ಒಂದು ದೀರ್ಘಾವಧಿಯಿಂದ ಅಂತರಾಳದ ಆಸೆಯೊಂದಿದೆ. ಆ ಪ್ರತಿವ್ಯಕ್ತಿಯು ಯಾವನು ನತದೃಷ್ಟನಾಗಿದ್ದು ರಾಜ್ಯದ ಕರ್ತವ್ಯಗಳನ್ನು ಕೃತಘ್ನತೆ ಅಪಾಯಕರ ಅನುಮಾನಾಸ್ಪದ ಬುನಾದಿಯ ಮೇಲೆ ದೇವರ ಕೃಪಾಶೀರ್ವಾದವನ್ನು ಹೊಂದಿದ ಅರಸನ ದರಬಾರಿನ ಜನಗಳ ಮೇಲೆ ಎತ್ತರದ ಗೋಡೆಗಳನ್ನು ಕಟ್ಟಿ ಕಪಟತೆಯನ್ನು ಮೆರೆದಿದ್ದರು. ವಾಸ್ತವತೆ ಏನೆಂದರೆ ಅದೊಂದು ಅತ್ಯಂತ ನೀಚತನದ ಮಾತಾಗಿತ್ತು. ಪರಾಕ್ರಮ ಮತ್ತು ಶೌರ್ಯದ ಮಳೆಯು ಕಪ್ಪು ಮಣ್ಣನ್ನು ಸಮ ಮಾಡಿತ್ತು ಮತ್ತು ಆ ನತದೃಷ್ಟ ನಕ್ಷತ್ರದ ಪ್ರತಿಯೊಬ್ಬನು ಕೂಡಾ ಸ್ಥಾನಮಾನದ ತೋಟ ಮತ್ತು ಆಜ್ಞಾಪಾಲನೆಯ ಚಿಲುಮೆಯ ಫಲಪಡೆಯುವವನು. ಜಹಾಂಪನಾ ಬಾದಶಹನ ದರಬಾರಿನಲ್ಲಿ ಜನತೆಗೆ ನೀರನ್ನು ಕೂಡಾ ಒದಗಿಸಲಿಲ್ಲ. ಅದಕ್ಕೆ ರಭಸದ ಸಂಕಷ್ಟದ ಹವಾಮಾನ ಮತ್ತು ಕಠಿಣ ಪರಾಕ್ರಮದಿಂದ ಅದರ ಕೊಂಬೆ,ರೆಂಬೆಗಳನ್ನು ಅರೆಜೀವ ಮಾಡಿ, ಶುಷ್ಕವನ್ನಾಗಿಸಿ ಬೇರಿನಿಂದ ಕಿತ್ತು ಬಿಸಾಡುತ್ತಾರೆ. ಆದರೆ ದೈವಭಕ್ತನು ಬಯಸುವುದೇನೆಂದರೆ ಕೊಡುಗೆಯ ಶೀರ್ಷಿಕೆಯ ಸಂಕೇತಗಳ ಪಾಲಿಸುವವನ ಸ್ಥಾನವು ಮುಖಂಡತ್ವ ಕರುಣೆಯ ಸೂರ್ಯನಿಂದ ಉದಯವಾಗುವ ಮತ್ತು ಅದರ ಪ್ರತೀಕೇಂದ್ರವು ಜನತೆಯತ್ತ ಪ್ರೀತಿ,ಕರುಣೆ ಮತ್ತು ದಯೆಗಳ ಚಿಲುಮೆಯ ಒಟ್ಟಾರೆ ಧೋರಣೆಯಾಗಿದೆ. ಈ ಸದಾಶಯದ ಶರಾಬುಖಾನೆಯ ಪಾನಪ್ರಿಯ ಮತ್ತು

ಪ್ರಾಮಾಣಿಕ ಶ್ರದ್ಧೆಯ ಗುಣ ಹೊಂದಿರುವ ಪಾನಗೃಹದ ಆದೇಶಗಳ ಪಾಲನೆಯ ಅವಕಾಶವನ್ನು ಪಡೆಯುತ್ತಾನೆ.

ಏಕೆಂದರೆ ಅಂತಹ ಪ್ರಾಣಪ್ರಿಯರ ಮೋರೆಯು ಹೃದಯದಷ್ಟೇ ನಿರ್ಮಲವಾಗಿದ್ದು ಸದಾಶಯದ ಅರಿಷಿಣದಿಂದ ಮೋರೆಯನ್ನು ಸಿಂಗರಿಸಿ ಬಯಕೆಯ ಹೂಜಿಯನ್ನು ಅಪೇಕ್ಷೆಯ ಶುಭವಾರ್ತೆಯ ಬೆಂಬಲ ಮತ್ತು ನೆರವಿನ ಪಾನ ಪಾತ್ರೆಯಿಂದ ಮೊಗೆದು ತಮ್ಮದಾಗಿಸಿಕೊಳ್ಳುವರು. ಇನ್‌ಷಾ ಅಲ್ಲಾ ಅಲ್ಪಾವಧಿಯಲ್ಲಿಯೇ ದೈವಬಲ ಮತ್ತು ಪೈಗಂಬರವರ ಕೃಪಾದೃಷ್ಟಿಯಿಂದ ಎಲ್ಲಾ ದ್ರೋಹಿಗಳು ಮತ್ತು ರಾಜ್ಯದ ವಿರೋಧಿಗಳಾದ ಎಲ್ಲಾ ಜನರನ್ನು ಕೂಡಾ ನಿರ್ಮೂಲನ ಮಾಡಿ, ವಕ್ರತಿರುವಿನ ಖಡ್ಗದ ಹೊಡೆತದಿಂದ ಅವರಿಗೆ ಮೂರ್ಛೆರೋಗವನ್ನು ಬರಿಸಿದಲ್ಲಿ ಕಂಪನದಲ್ಲಿ ನಡುಗುವವರು. ನಡುಕ ಮತ್ತು ಕಂಪಿಸುತ್ತಿರುವವರನ್ನು ಕೋಪೋದ್ರೇಕದಿಂದ ಕೆಳಗೆ ಹಾಕಿ ಅವರ ಚಲನವಲನವನ್ನು ನಿಗ್ರಹಿಸಿ ಅಪರಿಚಿತ ಶರಾಬುಖಾನೆಯಲ್ಲಿ ತಲೆಮರೆಸಿಕೊಳ್ಳುವಂತೆ ಮತ್ತು ಅನಾಮಿಕ ಕಾಡಿನಲ್ಲಿ ತಲೆಯ ಮೇಲೆ ಮಣ್ಣು ಹೊಯ್ದುಕೊಳ್ಳುವಂತೆ ಆಗಲಿ.

ಹಜರತ್ ಬಾದಶಹ ಘಾಝಿಯು ಈ ದುರಂತದ ದುರ್ಗಂಧಪೂರಿತ ರೋಗದ ಅವಲೋಕವನ್ನು ಮಾಡಿ, ಸಲಾಬತ್‌ಖಾನ್‌ನ ಬುದ್ಧಿವಂತಿಕೆಯ ಅನುಸಾರ ಅವನನ್ನು ಸ್ವತಂತ್ರನನ್ನಾಗಿ ಬಿಟ್ಟರು ಮತ್ತು ಪ್ರಶಂಸೆಯ ಪುಷ್ಪಗಳನ್ನು ಅವನ ಬುದ್ಧಿವಂತಿಕೆಯ ಸೆರಗಿನಲ್ಲಿ ಹಾಕಿ, ಉನ್ನತ ಸ್ಥಾನಮಾನವನ್ನು ನೀಡಿ ಅತ್ಯಂತ ಪ್ರಕಾಶಮಯವಾದ ಕಿಲ್ಲತ್ತನ್ನು ಅವನ ಹೆಸರಿನಲ್ಲಿ ಪ್ರಕಟಪಡಿಸಿದರು ಹಾಗೂ ಅನೇಕ ಸರದಾರರು ಜಿಹಾದ್‌ನ ಕತ್ತಿಯನ್ನು ಹರಿತವಾದ ಕಲ್ಲಿನ ಮೇಲೆ ಉಜ್ಜಿ ಅಲ್ಪ ಅವಧಿಯಲ್ಲಿ ಅವನ ಹೃದಯವನ್ನು ಸಿಡಿಲಿನೋಪಾದಿ ಕತ್ತಿಯು ಮೂಲಕ ಕತ್ತರಿಸುವರೇನೋ ಮತ್ತು ಕಣ್ಣೆವೆ ಮಿಟುಕಿಸುವುದೊರಳಗಾಗಿ .

ಕತ್ತಿಯ ಕಬ್ಬಿಣವನ್ನು ಕ್ರೋಧದ ಅಗ್ನಿಯಲ್ಲಿ ಕಾಯಿಸಿ ಲೋಕ ಪರಲೋಕಗಳ ಅವಿಶ್ವಾಸಿ ಹಾಗೂ ದುಃಖ ಯಾತನೆಯ ಕಾಡಿನ ಅಲೆಮಾರಿಯ ಬದುಕಿನ ಹಣೆಯ ಮೇಲೆ ವಿನಾಶದ ಹೆಗ್ಗುರುತನ್ನು ಮಾಡಲಿ. ಆದರೆ ಆ ರುಸ್ತುಮ್‌ನಂತಹ ಕಠಿಣ ಮತ್ತು ಅಫ್ರಸಯಾಬ್‌ನಂತಹ ಭಯವನ್ನುಂಟು ಮಾಡುವವನಂತೆ ಯುದ್ಧರಂಗದಲ್ಲಿ ಅವನ ವೀರಾವೇಶ ಮತ್ತು ಬದುಕಿನ ಹಣೆಯ ಮೇಲೆ ವಿನಾಶದ ಹೆಗ್ಗುರುತು ಮೂಡಲಿ. ಆದರೆ ಆ ರುಸ್ತುಮ್‌ನಂತಹ ಕಠಿಣ ಮತ್ತು ಅಫ್ರ ಸಿಯಾಬ್‌ನಂತಹ ಭಯವನ್ನುಂಟು ಮಾಡುವವನಂತೆ ಯುದ್ಧ ರಂಗದಲ್ಲಿ ಅವನ ವೀರಾವೇಶ ಮತ್ತು ಶತ್ರು ಸಂಹಾರವು ಅವನ ಗಂಭೀರ ಸ್ವಭಾವಕ್ಕೆ ತಕ್ಕಂತೆ ಇದೆ. ಈ ಸೇವೆಯ ಸಲುವಾಗಿ ಬೇಡಿಕೆಯನ್ನು ಮುಂದಿಟ್ಟು ನುಡಿದದ್ದೇನೆಂದರೆ ಸದಾಚಾರಿಗಳು

ಕರುಣೆಯನ್ನು ದುಷ್ಟ ಶತ್ರುಗಳ ಗುಂಪಿನ ಮೇಲೆ ಪರಾಕ್ರಮದ ಕ್ಷೇತ್ರದಲ್ಲಿ ನೆರಳನ್ನು ಹಾಸುವವರು ಎಂದು ತಿಳಿದು ನನಗೆ ಹುಕುಮ್ ನೀಡಿ. ಇಡೀ ಸಮುದಾಯದ ಮರ್ಯಾದೆಯನ್ನು ಕಳವಳದ ಹೃದಯದ ಕ್ಲೇಶದ ಉದ್ವೇಗದಿಂದ ನಿರ್ಮೂಲಗೊಳಿಸಿ ಹಾಗೂ ಹೃದಯದ ಕೋಣೆಯನ್ನು ಸಮಾಧಾನದ ಪೊರಕೆಯಿಂದ ಗುಡಿಸಿ ಭಯ, ಕಳವಳ ಮತ್ತು ಉದ್ವೇಗದಿಂದ ಪರಿಶುದ್ಧಗೊಳಿಸಲಿ ಎಂದು ಪರಾಕ್ರಮದ ಲಾಠಿಯಿಂದ ನೀವು ಹೇಳುವುದೇನೆಂದರೆ ರಭಸದಿಂದ ಬೀಳುವ ಗಾಳಿಯ ಮೇಲೆ ಕೂಡಾ ಮೇಲ್ಮೆಯನ್ನು ಸಾಧಿಸಿ ಹಸಿರುವರ್ಣದ ಬಾದಶಹನ ಮರ್ಯಾದೆಯ ಕಣ್ಣಿನ ಸೂರ್ಯನನ್ನು ನೊಡುವುದು. ಕ್ರಿಮಿ ಕೀಟಗಳನ್ನು ವೈಭವದ ಅಧಿಕಾರಿಗಳನ್ನಾಗಿ ಮಾಡುವುದು. ಸಲಾಬತ್ ಖಾನನು ಮೇಲ್ಕಂಡ ಆಜ್ಞೆಯನ್ನು ಹೊಂದಿದ ಹುಕುಮ್‌ನಾಮೆಯನ್ನು ವೀಕ್ಷಣೆ ಮಾಡಿ ಸಫಲತೆಯ ಪೇಟಾವನ್ನು ತಲೆಯ ಮೇಲೆ ಏರಿಸಿ, ಕಾಡು ಮೇಡು ಮತ್ತು ಭೂಮಿಯ ಮೇಲೆ ಬಿರುಗಾಳಿಯಂತೆ ಬೀಸುತ್ತಾ ಯುದ್ಧರಂಗದತ್ತ ವೀರಾವೇಶದಿಂದ ಹೊರಟ. ಹುಕುಮ್‌ನಾಮೆಯ ಕಾಗದವನ್ನು ಅದ್ಭುತ ಬರವಣಿಗೆ ಎಂಬಂತೆ ಸುರುಳಿಯನ್ನು ಸುತ್ತಿಭಯದಿಂದ ಮುಕ್ತವಾದ ಹೃದಯದಲ್ಲಿ ಕಾಪಿಟ್ಟ. ಮೂಲ ಉದ್ದೇಶ ಮತ್ತು ಅಪೇಕ್ಷೆಯು ಕೈಗೂಡುವ ಶುಭ ಸುದ್ದಿಯ ಸಿಹಿ ದ್ರವವು ಮಧುರವಾಗಿ ಕಂಡು ಬಂದಿತು. ಬಾಹ್ಯ ಸೌಂದರ್ಯ ಮತ್ತು ಆಂತರಿಕ ಕಹಿಯು ಕೃತಘ್ನತೆಯ ಸಂಕೇತವಾಗಿದೆ. ಕಣ್ಣಿನಲ್ಲಿ ಬೆಂಕಿಯು ಅಡಗಿರುವಂತೆ ಹೃದಯದಲ್ಲಿ ಅದನ್ನು ಬಚ್ಚಿಟ್ಟಿದ್ದ. ಕೆಲವೇ ದಿನಗಳೊಳಗಾಗಿ ಕಪಟ ಹೃದಯ ಮತ್ತು ದ್ವೇಷದ ಜೇನಿನ ಹೊಸ್ತಿಲಿಗೆ ನಮಿಸಿ ಭರವಸೆಯ ಬಾಯಿಯಿಂದ ಹೊರ ಚೆಲ್ಲಿದ. ಉದ್ದೇಶ ಸಾಧನೆಯ ಫಲಗಳನ್ನು ಪ್ರತಿ ನಿತ್ಯ ಪ್ರೇಮ ಮತ್ತು ಕೊಡುಗೆಗಳ ವೃಕ್ಷಗಳಿಂದ ಆಯ್ದು ತನ್ನ ಸೆರಗನ್ನು ವಿಜಯದ ಪುಷ್ಪಗಳಿಂದ ಅಲಂಕರಿಸಿಕೊಂಡು ನಿರ್ಲಜ್ಜತೆ ಮತ್ತು ವಿಶ್ವಾಸಘಾತಕ ಮನಃಸ್ಥಿತಿಯ, ಕ್ರೌರ್ಯ ಹಾಗೂ ಹಿಂಸೆಯ ಹಾದಿಯಲ್ಲಿ ನಡೆಯುವವರನ್ನು ಬೇರುಸಮೇತ ಕಿತ್ತು ಬಿಸಾಡುವ ಪ್ರತಿಜ್ಞೆಯನ್ನು ಮಾಡಿದ. ಅವನ ಪಾಪ ಕೃತ್ಯಗಳು ಹಾಗೂ ಘೋರ ನತದೃಷ್ಟತನದಿಂದ ಸಹಸ್ರಾರು ಸಂಕಷ್ಟಗಳು ಮತ್ತು ದುರಂತಗಳ ದ್ವಾರಗಳು ತೆರೆದವು. ಭೋಗ ವಿಲಾಸ ಮತ್ತು ಸಂತೋಷ ಹಾಗೂ ಸಂಭ್ರಮಗಳ ವಾತಾವರಣವು ದೊರಕುವುದು. ದೂರವಾಯಿತು ವಿಜಯದ ಸಾಗರದ ರಕ್ತ ಪಿಪಾಸು ಮೊಸಳೆಯಂತಹ ಕತ್ತಿ ಹಾಗೂ ಶತ್ರು ಸಂಹಾರದ ಬೆಂಕಿಯಿಂದ ವಿರಾಮವನ್ನು ನೀಡಲಾಗಿರುವ ನೀರಿನ ಚಿಲುಮೆಯಾಶ್ರಯದ ಕುದುರೆಯಂತೆ ಕಂಡು ಬಂದಿತು. ಅವನಿಗೆ ಕ್ರೋಧದ ಪಂಥಾಹ್ವಾನವನ್ನು ನೀಡಿ ಟೊಂಕ ಕಟ್ಟಿ ನಿಂತುಕತ್ತಿಯನ್ನು ಹಿರಿದು ಅತೀವ ಕಠೋರ ಹೃದಯ ಮತ್ತು ಯೌವನದ ಶಕ್ತಿಯನ್ನು ಹೊಂದಿದ ಆನೆಯಂತಹ ದೇಹ ಧಾರ್ಢ್ಯತೆಯನ್ನು ಹೊಂದಿದ ಬಲಾಢ್ಯರೊಂದಿಗೆ ಹೋರಾಟದ ಸಲುವಾಗಿ ಹೊರಟು ನಿಂತ.

ಪೈಲವಾನ್ ಮತ್ತು ವೀರರಿಂದ ಕೂಡಿದ ಒಂದು ಗುಂಪು
ತಮ್ಮ ವಿರೋಧಿಗಳನು ಬೇಟೆಯಾಡುವವರು ಮತ್ತು
ರಾಜ್ಯಗಳನು ವಶಪಡಿಸಿಕೊಳ್ಳುವವರು
ದೃಢ ಬೇರಿನ ಶಕ್ತಿಶಾಲಿಗಳು
ದೇಹಧಾರ್ಢ್ಯತೆಯಲ್ಲಿ ಆನೆಯಂತೆ
ಶೌರ್ಯದಲಿ ಸಿಂಹದಂತೆ

ಪರ್ವತವು ಎದುರಾದಲ್ಲಿ ಅದನ್ನು
ಜಾಗದಿಂದ ಮೇಲೆತ್ತುವರು
ಆನೆಯಿದ್ದಲ್ಲಿ ಮುಷ್ಟಿಯಿಂದ
ಹರಿದೊಗೆಯುವರು

ಆ ಕುಚೇಷ್ಟೆಯ ಧರ್ಮ ವಿರೋಧಿ ಶರಾಬುಖಾನೆಯಲ್ಲಿ ಅಮಲೇರಿದ್ದಾಗ ಒಂದು ಅದ್ಭುತ ತಂಡವು ರವಾನೆಯಾಯಿತು. ಆ ನೆರವಿನ ಹಸ್ತವನ್ನು ಚಾಚಿದ ಸೈನ್ಯದ ಮುಂದೆ ಯಾರೂ ಕೂಡಾ ಎದುರು ನಿಲ್ಲಲಾಗಲೀ ಅಥವಾ ಹೋರಾಟದ ಧೈರ್ಯವನ್ನು ಹೊಂದಿದವರಾಗಲೀ ಇರಲಿಲ್ಲ. ಹೇಡಿಗಳು ಮತ್ತು ಅಸಭ್ಯತನದಿಂದ ಕೂಡಿ ಮರ್ಯಾದೆಯ ಗಾಜನ್ನು ನಿರ್ಲಜ್ಜತೆಯಿಂದ ಕಲ್ಲಿನ ಮೇಲೆ ಚಚ್ಚಿ ವಿಶ್ವಾಸದ ವಾತಾವರಣವನ್ನು ಅಪಮಾನಕಾರೀ ಮಣ್ಣಿನ ಮೇಲೆ ಎಸೆದ. ಅವರುಗಳು ಬಿರುಗಾಳಿಯೆದುರು ಮಣ್ಣು ಮುಕ್ಕುವ ದುರ್ಬಲ ಹೃದಯದ ಸೊಳ್ಳೆಗಳ ಸೈನ್ಯದಂತೆ ಕಂಡು ಬಂದವು. ಧೃಡ ಹೆಜ್ಜೆಗಳನ್ನು ಯುದ್ಧ ರಂಗದಲ್ಲಿ ಅಸ್ಥಿರವೆಂದು ಕಂಡು ಬಂದದ್ದರಿಂದ ಪನಾಲ ಕೋಟೆಯಲ್ಲಿ ಸುತ್ತುವರೆಯಲಾಯಿತು. ಪುರುಷಸಿಂಹನ ಹರಿತ ಉಗುರುಗಳ ಮೂಲಕ ಹೂವಿನಂತಹ ಮೋರೆಯನ್ನು ಸೀಳುವುದು ಮತ್ತು ಸ್ವತಃ ಅಪಾರ ಬಲದ ಮೂಲಕ ಸರ್ಪದೊಂದಿಗೆ ಅತ್ಯಂತ ಶಕ್ತಿಶಾಲಿ ಆನೆಯ ಸೊಂಡಿಲಿನೊಂದಿಗೆ ಕ್ರೀಡೆಯಾಡುವುದು. ಆ ಮೂಲಕ ಪ್ರಾಣಾಂತಿಕ ವಿಷವನ್ನು ಬದುಕಿನ ಬಾಯಿಯಲ್ಲಿ ಸುರಿದಂತಾಗುವುದು. ಆಯಸ್ಸು ಮತ್ತು ಬದುಕಿನ ಮರ್ಯಾದೆಯನ್ನು ದುರಂತದ ಮಣ್ಣಿನ ಮೇಲೆ ಸುರಿದಂತಾಗುವುದು ಮತ್ತು ತಮ್ಮ ಸೋತ ಸೈನ್ಯದೊಡನೆ ಹೀಗೆಂದು ಸಂಬೋಧಿಸಿದ. ಗುಡ್ಡ ಹಾಗೂ ಬೆಟ್ಟಗಳಲ್ಲಿ ಸೈತಾನನ ಮಲಿನ ಸೈನ್ಯದ ರೀತ್ಯಾ ವ್ಯತ್ಯಾಸವನ್ನು ಮನಗಂಡು ಹಾಗೂ ಧೈರ್ಯದ ಹಸ್ತವನ್ನು ನಮಾಜು ಮಾಡುವವರ ಸಂಪತ್ತು ಮತ್ತು ಐಶ್ವರ್ಯದ ಲೂಟಿ ಮಾಡುವುದರ ಮೂಲಕ ಧೈರ್ಯ ಹಾಗೂ ಸಫಲತೆಯನ್ನು ಕಾಣುವುದಿಲ್ಲ. ಹಾಗೂ ತೋಳಿನಂಚಿನಲ್ಲಿ ಭಯ ಮತ್ತು ಆತಂಕವನ್ನು ಅಡಗಿಸಿರುವುದಿಲ್ಲ. ಒಂದು ವೇಳೆ ಆ ವೀರ ಸೈನಿಕರ ಬೆಂಬಲಿಗರ ಕತ್ತಿಗಳ ಮೊನೆಗಳನ್ನು ಹೃದಯಭೇದಕ ಕಶ್ಮಲ ಮತ್ತು

ದುರ್ಗಂಧವು ತಲುಪಿದಲ್ಲಿ, ನೆಪಗಳನ್ನು ಹೂಡುವ ಆ ಗುಂಪು ಅಪಮಾನ ಮತ್ತು ಭಂಗಕ್ಕೆ ಈಡಾಗುವುದು ಹಾಗೂ ಓಡುತ್ತಾ ಅವರು ಧೂಳು ಹಾಗೂ ಮಣ್ಣನ್ನು ಮೆತ್ತಿಕೊಳ್ಳುತ್ತಾರೆ ಹಾಗೂ ಕತ್ತಿಯನ್ನು ಅವರ ಹೃದಯದ ರಕ್ತದಿಂದ ಶುಭ್ರಗೊಳಿಸುತ್ತಾರೆ. ಎಲ್ಲಾದರೂ ದ್ರೋಹ ಮತ್ತು ಭಯಾನಕ ದೃಶ್ಯಗಳು ಕಂಡುಬಂದಲ್ಲಿ ಬುದ್ಧಿವಂತಿಕೆ ಮತ್ತು ಎಚ್ಚರದಿಂದ ನಿಭಾಯಿಸುತ್ತಾರೆ. ಹೊಳೆಯುವ ಅಗ್ನಿಯಂತಹ ಖಡ್ಗವನ್ನು ಒರೆಯಿಂದ ಹೊರತೆಗೆದು ಅದರ ಬೇರನ್ನು ಕಿತ್ತು ಒಗೆಯುತ್ತಾರೆ.

ಯಾವುದೇ ಆಲೋಚನೆಯನ್ನು ಮಾಡದೆ ಪುಡಿ–ಪುಡಿಯನ್ನಾಗಿ ಮಾಡುತ್ತಾರೆ. ಇಸ್ಲಾಮೀ ಸೈನ್ಯದ ಬೇಟೆಗಾರ ಸಿಂಹಗಳು ಅರಣ್ಯ ಮತ್ತು ಕಣಿವೆಗಳಲ್ಲಿ ಕತ್ತಿಯಿಂದ ಮತ್ತು ಮಳೆಯಿಂದ ಕಷ್ಟಗಳನ್ನು ಪರಿಹರಿಸುತ್ತಾರೆ. ಆ ಹಾದಿ ತಪ್ಪಿದ ನತದೃಷ್ಟ ಅನಾಗರೀಕ ದ್ರೋಹಿ ಗುಂಪನ್ನು ಬದುಕಿನ ಹಾಳೆಯಿಂದ ಒರೆಸಿ ಹಾಕಿದ್ದು ಆ ಶವಗಳನ್ನು ಆಳವಾದ ಕಂದಕಗಳ ಕೊರಕಲಿನಲ್ಲಿ ಎಸೆಯಲಾಗುತ್ತದೆ ಹಾಗೂ ಭಯಾನಕ ಸಾವಿನ ಕಪಾಳಮೋಕ್ಷದಿಂದ ಸಾವು ಕಪಟ ಮತ್ತು ಸುಳ್ಳನ್ನು ಆಶ್ರಯಿಸಿರುವ ವಿರೋಧಿಗಳ ತೆರೆಮರೆಯ ಆಯಸ್ಸನ್ನು ಹರಿದು ಚಿಂದಿ ಮಾಡುವರು. ಮಿಂಚಿನಂತೆ ಓಟವನ್ನು ಹೊಂದಿರುವ ಕೆಂಪು ಕುದುರೆಗಳ ಖುರಪುಟದ ಅಗ್ನಿಯಿಂದ ಯುದ್ಧರಂಗದಲ್ಲಿ ಸೇರಿದ ಜನರ ಹೃದಯಗಳ ಮೇಲೆ ಶಿಲೆ ಹಾಗೂ ಕಬ್ಬಿಣಕ್ಕಿಂತಲೂ ಹೆಚ್ಚು ಕಠಿಣವಾಗಿತ್ತು. ನೀರನ್ನು ತಯಾರಿಸಲಾಯಿತು ಹಾಗೂ ದೇಶವನ್ನು ಆ ಅಶುದ್ಧ ಜನರ ರಾಕ್ಷಸೀ ಪ್ರವೃತ್ತಿ ಮತ್ತು ಕುಚೇಷ್ಟೆಗಳಿಂದ ಮಲಿನಗೊಳ್ಳುವುದನ್ನು ತಡೆಯಲಾಯಿತು. ಸಲಾಬತ್‌ಖಾನನ ಬಲಶಾಲೀ ಹಸ್ತವು ಆ ಧರ್ಮವಿರೋಧಿ ಕ್ರೂರಿಗಳ ಗೌರವದ ತೋರಿಕೆಯ ಚಿಲುಮೆಗಳನ್ನು ನಾಶ ಮಾಡಿತು. ಅಲ್ಲಿ ಸಪಾಟಾದ ಮೈದಾನದ ವಿನಃ ಇನ್ನೇನೂ ಇರಲಿಲ್ಲ. ಅವರನ್ನು ಅಪಮಾನಕಾರೀ ಮಣ್ಣಿನಡಿಯಲ್ಲಿ ದೂಡಲಾಯಿತು ಮತ್ತು ಆ ಗಡಿಬಿಡಿ ಮತ್ತು ದಂಗೆಯಲ್ಲಿ ಸುಡಲಾದ ಬೃಹತ್ತಾದ ಪಿತೂರಿ, ನೆಪಗಳು ಹಾಗೂ ಕಪಟತನದ ದ್ವಾರಗಳನ್ನು ಪ್ರಜ್ಞಾವಂತಿಕೆಯ ಕೀಲಿಕೈಯಿಂದ ತೆರೆದ ಸಲಾಬತ್‌ಖಾನನಿಗೆ ಆ ಪನಾಲ ಕೋಟೆಯ ಆಕ್ರಮಣದ ನಂತರ ಒಂದು ಪತ್ರದಲ್ಲಿ ದಾಖಲಿಸಲಾಯಿತು.

ಆ ದಿನದಿಂದ ಅಂದರೆ ವಿಶ್ವದ ಕಾಂತಿ, ಲೋಕದ ಜ್ಯೋತಿ ಹಾಗೂ ವೈಭವದ ಒಡೆಯನ ಸಂತೋಷದ ಹಾಜರಾತಿಯು ಅ ಶುಭಾಕಾಂಕ್ಷಿ ನಿರ್ಮಲ ಅಸ್ತಿತ್ವದ ಮೇಲೆ ಮೂಡದೆ ಅವನ ಕಿವಿಗಳ ಪರದೆಗಳ ಮೇಲೆ ನೆರಳುಗಳು ಮೂಡಿದವು. ಹೃದಯವು ಅತೀವ ಸುಸಂಸ್ಕೃತ, ಸ್ವಸ್ಥ ಬಯಕೆಯ ಮಂಗಳಗ್ರಹದ ನಶೆಯು ಮಾದಕತೆಯಿಂದ ಕೂಡಿತ್ತು. ಮಾದಕ ಪಾನೀಯ ಸೇವನೆಯ ನಶೆಯಿಂದ ಮುಕ್ತ ಸಫಲತೆ, ದಿಗ್ವಿಜಯ ಮತ್ತು ಅದೃಷ್ಟದ ದೆಸೆಯಿಂದ ಕೆಲವು ಯೋಜನಗಳವರೆಗೆ

ಸ್ವಾಗತಿಸಲು ಬಂದರು. ಅಮೂಲ್ಯವಾದ ಕಾಡಿಗೆಯಿಂದ ಆವರಿಸಿದ ಬಲಾಢ್ಯ ಶೂರನ ಯೋಗ್ಯತೆಯನ್ನು ತುಂಬಿಕೊಂಡ ಕಣ್ಣುಗಳನ್ನು ದಯೆಯ ನೋಟದಿಂದ ಸಿಂಗರಿಸಲಾಯಿತು. ಹಾಗೂ ಸಂಪೂರ್ಣ ಗಾಂಭೀರ್ಯ ಮತ್ತು ಉತ್ತಮವಾದ ನಡವಳಿಕೆಯಿಂದ ಶೋಭೆಯನ್ನು ನೀಡುತ್ತಾ ಪ್ರೇಮಮಯವಾದ ನೋಟವನ್ನು ಬೀರಲಾಯಿತು.

ಕುರುಡನಂತೆ ಅಂದರೆ ಯಾವನು ಪ್ರತಿ ಹೆಜ್ಜೆಗೂ ಎತ್ತರದ ಗೋಡೆಯ ಎದುರಿಗೆ ತೇಲುತ್ತಾ ಏಳುತ್ತಾ ಹಾದಿಯನ್ನು ಕ್ರಮಿಸುವನೋ ಮತ್ತು ಕೋಲಿನ ಸಹಾಯದಿಂದ ನಡೆಯುತ್ತಾ ತನ್ನ ಶಕ್ತಿಬಲದಿಂದ ವಿಪತ್ತು ಮತ್ತು ತೊಂದರೆಗಳ ಬಾವಿಯ ಕೈದಿಯಾಗುವುದಿಲ್ಲ ಹಾಗೂ ತೊಂದರೆ ಮತ್ತು ಯಾತನೆಗಳ ಕಂದಕದಲ್ಲಿ ಬೀಳುವುದಿಲ್ಲ. ಆದೂ ಕೂಡಾ ಸರಪಳಿಗಳ ಬಂಧನದ ಭಯಾನಕತೆ ಮತ್ತು ದರ್ಪವು ಮತ್ತು ಆಸೆಯು ಅವನಿಗೆ ಮುಕ್ತಿಯನ್ನು ನೀಡಲಿಲ್ಲ. ಅದೃಷ್ಟದ ಹೂತೋಟದ ಕರುಣೆ ಮತ್ತು ದಯೆಯ ಆರ್ದ್ರತೆಯಿಂದ ಅವನು ಕ್ಷೇಮ ಮತ್ತು ನಿರೀಕ್ಷೆಯ ಸಮುದ್ರದ ಮೋಡವನ್ನು ಹಚ್ಚ ಹಸಿರು ಮತ್ತು ತಾಜಾತನದಿಂದ ಕೂಡಿದಂತೆ ಮಾಡಿದನು ಹಾಗೂ ಅದೃಷ್ಟದ ಹಾಳೆಯನ್ನು ಪ್ರೇಮ, ಸೌಹಾರ್ದತೆ ಮತ್ತು ನೆಮ್ಮದಿಯ ನಕಾಶೆಯಿಂದ ಅದನ್ನು ಉಪಕಾರ ಮತ್ತು ಸಮಾಧಾನದ ನಗಾರಖಾನೆಯ ಚಿತ್ರವನ್ನಾಗಿ ಮಾಡಿದ. ಅಲಂಕಾರ, ಸಿಂಗಾರ ಮಾಡಿದ್ದರೂ ಕೂಡ ನಿರಾಕರಣೆಯ ಮಣ್ಣನ್ನು ತಲೆಯ ಮೇಲೆ ಹೊಯ್ದುಕೊಂಡು ಅಂದರೆ ಕನಸಿನಲ್ಲಿಯೂ ನೀರನ್ನು ಕಾಣದೆ ಇರುವವನು ಬಾಯಾರಿ ಬಳಲಿದಂತೆ ಯಾವುದೇ ಭರವಸೆಗಳಿಲ್ಲದೆ ಅಸಹಾಯಕತೆಯ ಕಣಿವೆಯಲ್ಲಿ ಕಂಗಾಲಾಗಿ ತೊಳಲಾಡುವಂತೆ ಮಾಡಿದ. ಈಗ ಈ ಪುಣ್ಯ ಭೂಮಿಯು ಸಫಲತೆಯನ್ನು ಪಡೆಯುವ ಹಂತದಲ್ಲಿ ಪುನುಗಿನ ರೀತಿಯಲ್ಲಿ ಸುಗಂಧಪೂರಿತವಾಗಿದೆ. ಅನುಮತಿಯ ಹೂಗೊಂಚಲು ದೀರ್ಘಾವಧಿಯ ಅಭಿಲಾಷೆಯನ್ನು ಇಡುವವನ ತಲೆಯ ಪಗಡಿಯ ಮೇಲೆ ಇಟ್ಟಲ್ಲಿ ಕೆಲವು ವ್ಯಕ್ತಿಗಳ ಜೊತೆಯಲ್ಲಿ ಸಂಜೆಯ ವೇಳೆ ನಿರಂತರವಾಗಿ ಒಳ್ಳೆಯತನದ ಸೇವೆಯಲ್ಲಿ ಶೀಘ್ರವಾಗಿ ರಕ್ಷಣೆಯನ್ನು ಪಡೆಯುವ ಜನರ ಆಸೆಯ ಅಮೂಲ್ಯ ಹರಳುಗಳನ್ನು ನಿವಾಳಿಸಲಾಗುವುದು. ವೈಭವ ಮತ್ತು ತೇಜಸ್ಸಿನ ಆಶಯದಲ್ಲಿ ತಿಳಿಯುವುದೇನೆಂದರೆ, ಸದುದ್ದೇಶದ ಹೃದಯ ಮುಟ್ಟುವ ಬುದ್ಧಿವಾದವನ್ನು ಆಲಿಸುವ ಸಲುವಾಗಿ ಕಿವಿಗಳು ಜಲಸ್ವರೂಪಿ ಮುತ್ತಿನಂತೆ ಅತ್ಯಮೂಲ್ಯವಾಗಿದ್ದು ಉಪಕಾರದ ಮುತ್ತಿನಿಂದ ಹನಿಹನಿಯಾಗಿ ಮಳೆ ಉದುರಿಸುವ ಮೋಡವನ್ನಾಗಿಸಿ ಹೃದಯದ ಸೆರಗನ್ನು ಹೊಳೆಯುವ ಮುತ್ತುಗಳು ಮತ್ತು ಅಪೇಕ್ಷೆಯ ತೀವ್ರತೆಯಿಂದ ಒಡಮೂಡಿಸುತ್ತದೆ. ಈ ತೀವ್ರ ಬಯಕೆಯ ಹೂದೋಟವು ಮತ್ತು ಅಭಿಮಾನದ ಅರಣ್ಯದ ಕರುಣೆಯ ಹೂ ಮಾಲೆಯಿಂದ ಸುಸಜ್ಜಿತ ರಾಜ್ಯದ ತೋಟದ

ಮುಗುಳ್ನಗೆಯ ಮತ್ತು ಅರಳುವ ಪುಷ್ಪಹಾಗೂ ಹಣ್ಣುಗಳಿಂದ ಕೂಡಿದ ಫಲ ಮತ್ತು ಉದ್ದೇಶಗಳನ್ನು ಪುರೈಸುವ ಫಲಗಳನ್ನು ನೀಡುವಂತಾಯಿತು. ನಿರೀಕ್ಷೆಯ ಸಾಕ್ಷಿಯು ಧಾರ್ಮಿಕ ನೀಡಿಕೆಯ ಸ್ವರೂಪದಲ್ಲಿ ಅಲಂಕೃತವಾಗಿದೆ

ಹಾಗೂ ಅಭಿಮಾನಿಯ ಆಲಿಂಗನದಲ್ಲಿ ಆ ಹೃದಯವು ಸುಂದರ ಕಾವ್ಯದ ತೋಟದ ಮಾಲಿಯ ವೀಕ್ಷಣೆಯನ್ನು ಮಾಡುವಂತಾಗಿದೆ. ಪ್ರತಿಯೊಬ್ಬ ದುರ್ಬಲನು ಸೂಕ್ತ ಬೆಂಬಲವನ್ನು ಹೊಂದಿದಲ್ಲಿ ಭಗವಂತನ ನೆರವಿನ ಮೂಲಕ ಕಡ್ಡಾಯವಾಗಿ ಅಳಿದುಳಿದ ದಾನ್ಯವನ್ನು ಬಾಚಿಕೊಳ್ಳುವವನಾಗುತ್ತಾನೆ ಮತ್ತು ಗೌರವದ ಬಾಬತ್ತನ್ನು ಆಕಾಶದ ನೆತ್ತಿಯ ಮೇಲೆ ಬಿಟ್ಟು ಅಲ್ಲಿನ ಆಪ್ತರ ಅಜ್ಞಾಧಾರಣೆಯ ದಿಕ್ಕಿನತ್ತ ಪ್ರೇಮ ಮತ್ತು ಅಭಿಮಾನದಿಂದ ಅದೃಷ್ಟದ ಹೊಸ್ತಿಲನ್ನು ದಾಟಿ ಅರಮನೆಯ ಉಪ್ಪರಿಗೆಯ ಮೇಲೆ ಬೆಳಕನ್ನು ಚೆಲ್ಲುತ್ತಾನೆ. ಅವನು ಉತ್ತಮ ಅದೃಷ್ಟ ಹಾಗೂ ಖ್ಯಾತನಾಮರ ಪಂಕ್ತಿಯಲ್ಲಿ ಫಲ ಪ್ರಾಪ್ತಿಯನ್ನು ಪಡೆಯಲಿಲ್ಲ

ಪ್ರಿಯ ಮಿತ್ರ ಅವನ ದರಬಾರಿನಿಂದ ಮೋರೆಯನ್ನು ತಿರುವಿದ.
ಯಾವ ಬಾಗಿಲಿನಿಂದ ಹೋದರೂ ಕೂಡ
ಅವನು ಯಾವುದೇ ಮರ್ಯಾದೆಯನ್ನು ಪಡೆಯಲಿಲ್ಲ

ಅಂಧಕಾರದಿಂದ ತುಂಬಿದ ಮನೆಯ ವಿದ್ರೋಹಿ ಹೃದಯದ ದೀವಿಗೆಯಾದ ಸೂರ್ಯನೊಂದಿಗೆ ಸಲಾಬತ್‌ಖಾನನು ಕೃತಜ್ಞತೆಯ ಬಾಂಧವ್ಯವನ್ನು ಉಳಿಸಿಕೊಳ್ಳಲಿಲ್ಲ ಹಾಗೂ ಅಹಂಕಾರಿ ಮತ್ತು ದುರುದ್ದೇಶದ ವಿನಃ ಹೃದಯವನ್ನು ಕೆಡಿಸುವ ವಿಷಯದಲ್ಲಿ ಯಾವುದೇ ರೀತಿಯ ಪ್ರಚೋದನೆಯು ಕಡಿಮೆಯಾಗಲಿಲ್ಲ. ಅರಸನ ಪತ್ರವನ್ನು ಅವಲೋಕಿಸಿದ ನಂತರ ಅವನ ಮೋರೆಯು ಹೂ ಗೊಂಚಲಿನಂತೆ ಅರಳಿತು. ಅಂದರೆ ಬೆಳಗು ಮುಂಜಾನೆಯ ತಂಗಾಳಿಯಿಂದ ತುಟಿಯಂಚಿನಲಿ ಮುಗುಳುನಗೆ ಬೀರುವ ಸಲುವಾಗಿ ಅರಳುತ್ತದೆ. ವಿಶ್ವವಿಖ್ಯಾತ ಸೂರ್ಯನ ಉದಯದ ಸಂದರ್ಭದಲ್ಲಿ ನಗುವನ್ನು ಬೀರಲು ಮೋರೆಯರಳುತ್ತದೆ. ಭೋಗವಿಲಾಸ ಹಾಗೂ ಅಮೋದ ಪ್ರಮೋದಗಳ ಹೂ ದೋಟದಲ್ಲಿ ಬೆಳಗುವ ಮುಖದೊಂದಿಗೆ ನಗು ನಗುತ್ತಾ ಅದರ ಉತ್ತರವನ್ನು ಬರೆದ. ಒಂದು ವೇಳೆ ಬಾಹ್ಯ ಒಡಂಬಡಿಕೆಯ ರೀತ್ಯಾ ಈ ಸರಹದ್ದಿನಲ್ಲಿರುವ ಮುಳ್ಳಿನಿಂದ ಕೂಡಿದ ವೃಕ್ಷದ ಬೇರನ್ನು ಕತ್ತರಿಸಿ ಕಿತ್ತು ಬಿಸಾಡುವುದು ಹಾಗೂ ವಿದ್ರೋಹಿ ಕಾಡಿನಿಂದ ಅದನ್ನು ನಾಶ ಮಾಡುವುದು ನಮ್ಮ ಕರ್ತವ್ಯವಾಗಿದ್ದಲ್ಲಿ ಪುಣ್ಯ ಪಡೆಯುವ ಉದ್ದೇಶವು ಹೃದಯದ ಗುಪ್ತ ಆಸೆಯಾಗಿದೆ. ಇಡೀ ರಾತ್ರೆ ಸಭೆಯಲ್ಲಿ ವಿಧೇಯತೆಯ ನೆಲಹಾಸಿನ ಮೇಲೆ ದೀಪವು ಒಂಟಿ ಕಾಲಿನಲ್ಲಿ ನಿಂತು ಇಡೀ ಸೃಷ್ಟಿ ಸಂಕುಲಕ್ಕೆ ಬೆಳಕನ್ನು ಬೀರುವ ಸಲುವಾಗಿ ತನ್ನನ್ನು ತಾನೇ ಸಂಕಷ್ಟಗಳ ಬೆಂಕಿಯಲ್ಲಿ ಕರಗಿಸುತ್ತಾ ತನ್ನ ಆಯುಷ್ಯವನ್ನು ಕ್ಷೀಣಿಸುತ್ತಾ ಹೃದಯಭೇದಕವಾದ

ಹರಿತ ಹಲ್ಲುಗಳ ಕತ್ತರಿಯಿಂದ ಕೋರಿಕೆ ಮತ್ತು ಬೇಡಿಕೆಯ ಬಾಂಧವ್ಯವನ್ನು ಕೊರಳಿನಲ್ಲಿ ಗಂಟನ್ನಾಗಿ ಕಟ್ಟಿ ಕಂಕುಳಲ್ಲಿ ಸಂತೋಷ ಹಾಗೂ ಭೋಗ ವಿಲಾಸ ಮತ್ತು ವೈಯಾರವನ್ನು ತೋರಬೇಕಾಗಿದೆ.

ಅನುಸರಣೆ ಮತ್ತು ಶರಣಾಗತಿಯ ಸಂದರ್ಭದಲ್ಲಿ ನಾವು ಧೃಡ ಹೆಜ್ಜೆಯಿಂದ ಮತ್ತು ಸ್ಥಿರಚಿತ್ತದಿಂದ ಇದ್ದೇವೆ. ನಮ್ಮ ಲಾಭ ನಷ್ಟಗಳ ಮೋರೆಯನ್ನು ನಾವು ಹೃದಯದ ಕನ್ನಡಿಯಲ್ಲಿ ಮತ್ತು ನೋಟದಲ್ಲಿಯೂ ತರಲಿಲ್ಲ ಹಾಗೂ ಎಲ್ಲಾ ಸಮಯ ಸಂದರ್ಭವನ್ನು ರಾಜನಿಷ್ಠೆಯ ಒಳಿತಿನಲ್ಲಿ ಕಳೆದಿದ್ದೇವೆ. ಇಡೀ ಆಯುಷ್ಯದುದ್ದಕ್ಕೂ ಜನರನ್ನು ಸುರಕ್ಷಿತವಾಗಿ ದಡಸೇರಿಸುವ ಕಾಯಕದಲ್ಲಿ ನಿರತವಾದ ಘರ್ಜಿಸುವ ಹಾಗೂ ಭಯಾನಕವಾದ ಖಿಲ್‌ಝುಮ್ ಮಹಾಸಾಗರವನ್ನು ಎದುರಿಸುತ್ತಾ ಸಂಕಷ್ಟ ಮತ್ತು ಎಡರು ತೊಡರುಗಳನ್ನು ಎದುರಿಸುವುದು ಸಂತೋಷ ಮತ್ತು ನೆಮ್ಮದಿಗಿಂತಲೂ ಪ್ರಿಯವಾದುದು. ನಿರಂತರವಾಗಿ ಅಲೆಗಳ ಹೊಡೆತದಿಂದ ನಾನು ಭಯ ಬೀಳಲಿಲ್ಲ. ಹಾಗೂ ಬರ ಹೋಗುವ ಸಂಚಾರದ ತನ್ನ ಕಾಯಕದಿಂದ ಹಿಂಜರಿಯಲಿಲ್ಲ. ಅಭಿಮಾನದ ಹಾದಿಯಲ್ಲಿ ನಡೆಯುವವನಾಗಿ ತನ್ನ ಲಾಭ ನಷ್ಟಗಳ ನಕ್ಷೆಯನ್ನು ಪ್ರಮುಖವೆಂದು ಎಂದಿಗೂ ಎಣಿಸಲಿಲ್ಲ. ಇಡೀ ಹಗಲು ಮತ್ತು ರಾತ್ರೆ ತನ್ನ ಹಣವನ್ನು ರಾಜನ ಯೋಗಕ್ಷೇಮದ ಸಲುವಾಗಿ ಖರ್ಚು ಮಾಡಲಾಯಿತು. ನಮ್ಮ ಮೇಲಿನ ಕರುಣಾಪೂರಿತ ಕೃಪೆಯಿಂದ ಇನ್‌ಶಾ ಅಲ್ಲಾಹ್ ಉಪಕಾರ ಮತ್ತು ಮೃದುತ್ವದ ಕೆಲವು ಹನಿ ನೀರಿನಿಂದ ಈ ಬಾಯಾರಿದ ಒಣಗಿದ ತುಟಿಗಳ ಗಂಟಲಿನಲ್ಲಿ ಸಂತಸ, ಸಂಭ್ರಮ ಮತ್ತು ಮೃದುತ್ವದ ಜಲವನ್ನು ಹನಿಸಿ ಬಾಯಾರಿಕೆಯ ತೀಕ್ಷ್ಣತೆಯನ್ನು ದೂರಗೊಳಿಸುತ್ತೇವೆ. ಬೆಳಕು ಮತ್ತು ಪ್ರಭೆಯ ಮಶಾಲುಗಳ ಜ್ವಾಲೆಯು ಕತ್ತಲ ರಾಜ್ಯದ ತಳಮಳದಿಂದ ಕೂಡಿದ ಪಥಭ್ರಷ್ಟ ಜನರಿಂದ ಭಯ ಮತ್ತು ಅಪಾಯವನ್ನು ದೂರಗೊಳಿಸಿದೆವು. ನತದೃಷ್ಟತೆಯ ಅಂಧಕಾರದಿಂದ ಅದೃಷ್ಟದ ನಕ್ಷತ್ರವು ಬಿಡುಗಡೆಯನ್ನು ಪಡೆದಿದ್ದು ಸಂತೋಷ ಹಾಗೂ ಸಫಲತೆಯ ಆಕಾಶದೆತ್ತರದ ಕಟ್ಟಡಗಳ ಅರಮನೆಯ ಮೇಲೆ ಪೀಠಸ್ಥರನ್ನಾಗಿ ಮಾಡಲಾಗುವುದು. ಅರ್ಪಣೆಯ ಹಾದಿಯಲ್ಲಿ ನಿರೀಕ್ಷೆಯ ಕಣ್ಣುಗಳು ತೆರೆದಿವೆ. ಹಾಗೂ ಪರಸ್ಪರ ಉಭಯತರ ಒಪ್ಪಿತವಾದ ವಿಷಯಗಳ ಚರ್ಚೆಯು ದೂರ ದೂರದಲ್ಲಿದೆ.

ಹೃತ್ಪೂರ್ವಕವಾದ ಸಂತೋಷದ ಲೆಕ್ಕವನ್ನು
ತಿಳಿಯಲು ಸಾಧ್ಯವಾಗಿಲ್ಲ
ಈ ಲೆಕ್ಕಾಚಾರದ ಹೊರತು ನನ್ನ
ಹೃದಯ ಅಪಾರ ಬಯಕೆಯಿಂದ ಕೂಡಿದೆ

ಸೇವಾರಿಸಕ್ ಸೇವಾವಂಚಕನಿಗೆ ಬುದ್ಧಿಮತ್ತೆಯ ಇಡುಗಂಟು ಮತ್ತು ವಿನಮ್ರತೆಯೊಂದಿಗೆ ಯಾವುದೇ ಸಂಬಂಧವಿರಲಿಲ್ಲ. ತನ್ನ ಆಮೋದ ಪ್ರಮೋದಗಳಲ್ಲಿ ಮುಳುಗಿದ್ದವನು ಸಲಾಬತ್‌ಖಾನನ ಪತ್ರವನ್ನು ಓದಿದ. ದುಃಖ ಮತ್ತು ಹೃದಯದಲ್ಲಿ ಉಂಟಾದ ಆಶಂಕೆಯಿಂದ ತಲೆಯನ್ನು ಕೆಳ ಹಾಕಿದ ಮತ್ತು ಮರುದಿನ ಮಧ್ಯಾಹ್ನದ ನಂತರ ರಾತ್ರೆಯ ಹೊತ್ತಿನಲ್ಲಿ ತನ್ನೊಡನೆ ಮೂವರನ್ನು ಕರೆದುಕೊಂಡು ಕೋಟೆಯ ಮೇಲ್ಭಾಗದಿಂದ ಕೆಳಗಡೆ ಬಂದ ಹಾಗೂ ಸಂಚು ಮತ್ತು ದ್ರೋಹದ ಮಾತುಗಳಿಂದ ಸಿಂಹಾಸನದ ಪೀಠಸ್ಥನೊಡನೆ ಹೇಡಿ ಅಲ್ಪಮತಿಯು ಹೋರಾಟಕ್ಕೆ ಅಣಿಯಾದ. ಈಜಿಪ್ಟಿನ ಫೆರೋ ದೊರೆಯ ಮಾಂತ್ರಿಕ ದಂಡ ಹಾಗೂ ಹಗ್ಗಗಳ ವಿರುದ್ಧ ಮೂಸಾ ಪ್ರವಾದಿಯವರ ದಂಡವು ಪರಿಣಾಮಕಾರಿಯಾಯಿತು. ಹಾಗೆಯೇ ಝಿಲ್‌ಹಜ್ಜ ತಿಂಗಳ ಇಪ್ಪತ್ತನೇ ತಾರೀಕಿನಂದು ಆ ಭಗವಂತನ ಕರುಣೆಯಿಂದ ಧನ ದೌಲತ್ತು ಮತ್ತು ಸಂಪತ್ತಿನೊಂದಿಗೆ ಧಾರ್ಮಿಕ ರಾಜ್ಯದ ಸೇವಕನಾದ ತಾಯೀದ್ ರಬ್ಬಾನಿಯನ್ನು ಕುದುರೆಯ ಮೇಲೆ ಏರಿಸಿ ತಮ್ಮ ಬೆಂಬಲಿಗರ ಜೊತೆಯಲ್ಲಿ ಮಿಂಚಿನೋಟದಲ್ಲಿ ಪಳಗಿದ ಕುದುರೆಗಳ ಮೇಲೆ ಅವರನ್ನು ಸನ್ನದ್ಧರನ್ನಾಗಿ ಮಾಡಲಾಯಿತು. ದುರುಳ, ಕುತಂತ್ರಿ, ಪಿತೂರಿಕೋರನನ್ನು ಕತ್ತಿಯ ಮೊನೆಯಿಂದ ಸೀಳಿ ಹಾಕುವಂತೆ ಆದೇಶಿಸಿ, ಆ ಸಂತೋಷದಾಯಕ ಸುದ್ದಿಯನ್ನು ಕೇಳುವ ಸಲುವಾಗಿ ಸಿದ್ಧನಾದನು.

ಆ ಹೊತ್ತಿನಲ್ಲಿ ಆ ಪುಣ್ಯಭೂಮಿಯು ಸಂತೋಷದಿಂದ ಕೂಡಿದ್ದು ಶುಭ ಹಾಜರಿಯಾದ ಈ ಲೋಕ ಮತ್ತು ಪರಲೋಕಗಳ ಹೆಮ್ಮೆಯಾದ ಹಜರತ್ ಬಾದಶಹ ತಮ್ಮ ಪಾದಗಳನ್ನು ಆಕಾಶದೆತ್ತರಕೆ ಏರಿಸಿದರು. ಆ ಪ್ರಾಂತ್ಯ ಮತ್ತು ಪ್ರದೇಶದ ಜನರು ತಮ್ಮ ಸ್ವದೇಶದ ಪ್ರೇಮದಲ್ಲಿ ಹುಮಾ ಹಕ್ಕಿಯಂತೆ ಅರಳಿ ಅದರ ರೆಕ್ಕೆಯ ನೆರಳಿನಲ್ಲಿ ಅಧಿಕಾರಸ್ಥ ಬೆಂಬಲಿಗರು ಪರ್ವತಗಳಂತೆ ನೆಲೆಯಾದರು. ಆ ದೇಶದ ಒಡೆಯನು ದಾನ ಧರ್ಮಾದಿಗಳಲ್ಲಿ ತೊಡಗಿ ನಿರಪೇಕ್ಷತೆಯಿಂದ ಕೂಡಿ ಸೌಭಾಗ್ಯಶಾಲಿ ಪ್ರತಿಷ್ಠಿತ ದರಬಾರಿನ ಮುಖಂಡನಾದ.

ಹುಮಾ ಪಕ್ಷಿಯಂತೆ ಎಲ್ಲೆಲ್ಲಿ ನೆರಳನ್ನು ಹರಡುವುದೋ
ತನ್ನ ಶುಭ ಹೆಜ್ಜೆಗಳಿಂದ ಬಹುತೇಕ
ಭೂಮಿಯನ್ನು ಅಗೆಯುವುದು

ಹಜರತ್ ಬಾದಶಹ ಫಾಝಿಯು ಅಬ್ದುಲ್ ಹಸನ್‌ನನ್ನು ಸಲಾಬತ್ ಖಾನ್‌ನೊಡನೆ ಹೋರಾಟಕ್ಕೆ ಕಳುಹಿಸಿದ. ಏಕೆಂದರೆ ಅವನ ಕೃತಘ್ನತೆಯ ಬಿಸಿ ಹೊಗೆಯು ಹೊರ ಬಂದು ಪ್ರಜ್ವಲಿಸಿದಲ್ಲಿ ದೃಷ್ಟಿವಿಹೀನ ಕುರುಡು ಕಣ್ಣುಗಳಂತಾಗುತ್ತದೆ. ಮಾರ್ಗದರ್ಶನದ ಆದೇಶವನ್ನು ಹೊಂದಿದ ಜವಾಹಿರಿ ಕಾಡಿಗೆಯ ಮೂಲಕ ಬೆಳಕನ್ನು ಬೀರಿ, ಅಭಿಮಾನಪೂರ್ವಕವಾಗಿ ಹಾಗೂ ಅರ್ಪಣಾಭಾವದ ಪ್ರೇಯಸಿಯ

ಮೋರೆಯನ್ನು ಕಾಣುವಂತಾಗಲಿ. ಬುದ್ಧಿ ಮತ್ತು ಪ್ರಜ್ಞೆಯ ದೀಪವು ಕೀಳು ಅಹಂಕಾರದ ರಭಸದ ಗಾಳಿಯನ್ನು ಆರಿಸುತ್ತದೆ. ಲಾಭದಾಯಕ ಬುದ್ಧಿವಂತಿಕೆಯ ಶೋಭೆ ಹಾಗೂ ಉನ್ನತವಾದ ಶುಭಾಕಾಂಕ್ಷೆಯಿಂದ ಬೆಳಗಿ ಶ್ರೇಯೋಭಿಲಾಷೆಯ ರತ್ನಕಂಬಳಿಯ ಮೇಲೆ ಪ್ರಜ್ವಲಿಸುತ್ತಿರುವ ದೀಪದಂತೆ ಆಗಲಿ.

ಅಣುವಿನಂತೆ ದಾರಿಯಲ್ಲಿ ಹೊರಟು ಬಂದ.
ಹಾಗೂ ಬಾದಶಹನ ದರಬಾರಿನಲ್ಲಿ ಮೆರಗನ್ನು ತಂದ

ಇದನ್ನು ನಿರ್ಧರಿಸಿ ವಿದ್ರೋಹ ಮತ್ತು ಉಲ್ಲಂಘನೆಯ ಬೆಂಕಿಯು ಆ ನೀಚ ಮತ್ತು ನಷ್ಟದ ರಕ್ಕಸನಿಗೆ ಮತ್ತು ಮಾರ್ಗದರ್ಶಕವನ್ನು ಪಡೆಯಲು ಹಾದಿಯನ್ನು ತೆರೆಯುತ್ತಾನೆ ಮತ್ತು ಅವನು ವಿದ್ರೋಹ ಮತ್ತು ಹಿಂಸೆಯ ಹೆಚ್ಚಳದ ಮೈದಾನದ ಗಂಡಾಂತರದ ಮಾರ್ಗದರ್ಶನದ ಬೆಳಕಿನಿಂದ ದೇಶದ ಒಳಿತಿನ ಸ್ಥಿರತೆಯ ಪ್ರಯತ್ನ ಮಾಡಿ ಕೃತಜ್ಞನಾಗುತ್ತಾನೆ.

ಒಟ್ಟಾರೆ ಆ ಜಾಗದಿಂದ ಅಂದರೆ ಕತ್ತಿಯ ಮೊನೆಯನ್ನು ಗಾಯದ ಮೇಲೆ ಊರುವುದು ಮತ್ತು ಗಾಯದ ಮೇಲೆ ಉಪ್ಪನ್ನು ಸವರುವುದು. ಇದೊಂದು ಅಪ್ರಿಯವಾದ ನಡವಳಿಕೆಯಾಗಿದ್ದು, ಕುತ್ತಿಗೆಯನ್ನು ಶ್ರದ್ಧೆಯ ಸ್ವರೂಪದಲ್ಲಿ ಹೃದಯ ಬಯಸುವುದನ್ನು ಹಗ್ಗದ ಗಂಟನ್ನು ಮಾಡಿ, ಅದರ ಉರುಳಿನ ಮತ್ತು ಸರಪಳಿಯ ಹಕ್ಕುದಾರನನ್ನಾಗಿ ಮಾಡಿ ತಲೆಯನ್ನು ಪಾಪಿಷ್ಠ ಆಲೋಚನೆಗಳಿಂದ ಮತ್ತು ಅತ್ಯಂತ ಭಿನ್ನಾಭಿಪ್ರಾಯದ ಬೆಟ್ಟದ ಮೇಲೆ ಹಾಕಿ ಕೃತಘ್ನತೆಯ ಕಡುಪಾಪದಲ್ಲಿ ನಿರತನಾದ ಹಾಗೂ ಬೆಳಗಿನ ಸೂರ್ಯೋದಯದಿಂದ ಸುಸಂಬದ್ಧವಾಗಿ ಮಾತಾಡುವುದನ್ನು ಹಾಗೂ ಸರಿಯಾದ ನಿಯತ್ತನ್ನು ಅವನ ಅದೃಷ್ಟವನ್ನು ಮತ್ತು ಅವನ ದ್ರೋಹದ ಮೇಲೆ ಕೂಡ ಬೆಳಕು ಚೆಲ್ಲುತ್ತದೆ. ಇಡೀ ಲೋಕಕ್ಕೆ ಬೆಳಕನ್ನು ಪ್ರಸರಿಸುವ ಸೂರ್ಯನ ಬೆಳಕು ಅತ್ಯಂತ ಎತ್ತರದ ವ್ಯಕ್ತಿತ್ವ ಮತ್ತು ಒಳ್ಳೆಯ ಇರಾದೆಯು ಅವನ ಅದೃಷ್ಟದ ಕೋಣೆಯನ್ನು ಅತ್ಯಂತ ಪ್ರಕಾಶಮಯವನ್ನಾಗಿ ಮಾಡುತ್ತದೆ. ಆತನು ಯಾವುದೇ ಪ್ರಯೋಜನವನ್ನು ಪಡೆಯಲಿಲ್ಲ. ಅಜ್ಞಾನ ಮತ್ತು ವಿದ್ರೋಹದ ನಿರಂತರವಾದ ಕಾಡಿನಲ್ಲಿ ಅಲೆದಾಡುತ್ತಾ ಹಾಗೂ ಅಂಧಕಾರದ ಕತ್ತಲಿನಲ್ಲಿ ಸುತ್ತಾಡುತ್ತಾ ನಿರಂತರವಾಗಿ ನಷ್ಟದಲ್ಲಿ ತೊಡಗಿದ.

ಯಾರ ಸ್ವಭಾವದಲ್ಲಿ ಸದ್ಗುಣಗಳ ನೆರಳು
ಕೂಡ ಇರುವುದಿಲ್ಲವೋ ಅಂತಹ ವ್ಯಕ್ತಿಯು

ಅಯೋಗ್ಯ ಜನರ ಸಹವಾಸ ಮಾಡುವುದು
ಮಂಟಪದ ಮೇಲೆ ಕುತ್ತಿಗೆಯನ್ನು ಇಡುವಂತೆ

ಸೇವಾ ಶೌರ್ಯ ಮತ್ತು ಪರಾಕ್ರಮದ ನಶೆಯ ಕಿಂಚಿತ್ತು ಅಂಶವು ಕೂಡ ಇರಲಿಲ್ಲ. ಪರಾಕ್ರಮದ ಕ್ಷೇತ್ರದಲ್ಲಿ ದ್ರೋಹ ಮತ್ತು ನೆಪಗಳ ಯಾವುದೇ ಬೀಜಗಳನ್ನು ನೆಡಲಿಲ್ಲ ಮತ್ತು ಅವನ ಗೌರವದ ಹಣೆಯು ಮಣ್ಣಾಗುವುದಕ್ಕೆ ಅರ್ಹವಾಗಿತ್ತು. ನೀಚತನ ಮತ್ತು ನಿರ್ಲಜ್ಜತೆಯ ಸಾಕ್ಷಿಯಾಯಿತು ಹಾಗೂ ಅವನ ಔನ್ನತ್ಯವು ಯೆಮನ್ ದೇಶದ ತಿರುವು ಮುರುವು ರಸ್ತೆಗಳಂತೆ ನಿರ್ಲಜ್ಜತನ ಮತ್ತು

ಅಂತ್ಯವಾಗುವುದಕ್ಕೆ ಯೋಗ್ಯವಾಗಿತ್ತು. ಹೃದಯಭೇದಕವಾದ ಬಾಣದ ಎದುರು ನಿಲ್ಲುವ ಶಕ್ತಿಯನ್ನು ಪಡೆಯಲಿಲ್ಲ. ಶತ್ರುಗಳನ್ನು ಸುಟ್ಟುಹಾಕುವ ಪ್ರಪಂಚಕ್ಕೆ ಬೆಳಕು ನೀಡುವ ಒಳಿತಿನ ಕಡೆಗೆ ಆಹ್ವಾನಿಸುವ ಸಜ್ಜನ ಪರಾಕ್ರಮಿಗಳು ತಮ್ಮಲ್ಲಿ ಸತ್ವವನ್ನು ಒಟ್ಟುಗೂಡಿಸುತ್ತಾರೆ. ಅವರಂತಹ ಯಾವುದೇ ಚಾಲನೆಯನ್ನು ಪಡೆಯಲಿಲ್ಲ. ಒಂದು ರಾತ್ರೆ ಪನಾಲ ಕೋಟೆಯಿಂದ ತನ್ನ ಭಾರಿ ಸೈನ್ಯದ ಜೊತೆಯಲ್ಲಿ ಓಡಿದ ಹಾಗೂ ಗೌರವ ಮತ್ತು ಒಳ್ಳೆಯ ಹೆಸರಿನ ಸಂದರ್ಭವನ್ನು ನಿರ್ದಯವಾಗಿ ಕೊಲೆಮಾಡುವ ಹಾಗೂ ಎದುರಾಳಿಗಳಾಗಿ ನಿಲ್ಲುವ ಸಜ್ಜನರ ಶಕ್ತಿ ಹಾಗೂ ಪರಾಕ್ರಮದಿಂದ ಅರಿವಿಲ್ಲದಂತೆ ಅವನು ಅಸ್ತವ್ಯಸ್ತವಾದ ಪರಿಸ್ಥಿತಿಯಲ್ಲಿ ತೆರೆದಿಟ್ಟ ಹಾಗೂ ಹಜರತ್‌ಬಾದಶಹ ಘಾಜಿಯವರ ಪರಿಸ್ಥಿತಿ ಈ ರೀತಿಯಲ್ಲಿತ್ತು

ಅವನ ಶೌರ್ಯವು ಯುದ್ಧದ ದಿನದಂದು
ಕರುಣೆಯ ಕೈಯನ್ನು ಬಿಚ್ಚಿದಾಗ
ಅಂದರೆ ಅವನ ಕ್ಷಮೆಯಿಂದ ಗುಮಾನಿ ಮತ್ತು
ಸಂದೇಹದ ನೋಟವು ಆಶ್ಚರ್ಯಭರಿತವಾಯಿತು

ಇಂತಹ ಭಯೋತ್ಪಾದನೆಯಲ್ಲಿ ಶತ್ರುಗಳ ಕತ್ತಿಗಳು ಯದ್ಧದ ಹೊತ್ತಿನಲ್ಲಿ ಹೊರತೆಗೆದಾಗ ಅವುಗಳು ಹೊಳೆಯುವ ಸೂರ್ಯನ ಕಣ್ಣಿನ ಭಯಾನಕತೆಯಿಂದ ಹೆಚ್ಚು ಕಪ್ಪಾಗುತ್ತವೆ. ಮೇಲೆ ಹೇಳಿದ ಕೋಟೆಯ ವಿಜಯಪ್ರಾಪ್ತಿಯಾದ ನಂತರ ಖುಸ್ರುನಂತಹ ಅದೃಷ್ಟವನ್ನು ಹೊಂದಿದವರು ಸ್ವತಃ ಗೌರವದ ಮನೆಯತ್ತ ದ್ವೇಷವನ್ನು ತೋರಿದವು. ಬೆಳಗಿದ ಹೂವಿನಂತಹ ಚೆಹರೆ ಮತ್ತು ಸಿಂಬಲ್‌ನಂತಹ ಯಶೋಗಾಥೆಯ ಪರಾಕ್ರಮ ಹಾಗೂ ಬುಲ್‌ಬುಲ್‌ನ ಕಿವಿಗಳಲ್ಲಿ ತಲುಪಿಸಿದ ದೈವ ಅನುಗ್ರಹದ ಕಲೆಗಾರಿಕೆಯ ನೋಟಗಳು ಈ ಎಲ್ಲಾ ಘಟನೆಗಳು ಅದ್ಭುತವಾದ ಚಿತ್ರಣವನ್ನು ನೀಡಿದವು ಮತ್ತು ರಾಜಧಾನಿಯತ್ತ ವಾಪಸ್ ಮಾಡಲಾಯಿತು ಹಾಗೂ ಫಕೀರರು ಮತ್ತು ಬಡವರು ಅರಣ್ಯದಲ್ಲಿ ಬಾಯಾರಿ ಅಲೆದಾಡುವವರಿಗೆ ಅಸಹಾಯಕತೆ ಮತ್ತು ಭಯದ ಕಾರಣದಿಂದ ಒಣಗಿ ಬಾಯಾರಿದ ನಾಲಿಗೆಯಿಂದ ನರಳುತ್ತಿರುವವರಿಗೆ ಅತ್ಯಂತ ಕರುಣೆ ಮತ್ತು ಪ್ರೇಮದಿಂದ ತಂಪಾದ ನೀರೆರೆದು ಸಂತೋಷ ಮತ್ತು

ಸಂಭ್ರಮದ ಭಂಡಾರವನ್ನು ತೆರೆದಾಗ ಅದರಲ್ಲಿ ಉಳಿದುದೆಲ್ಲವನ್ನು ಕೂಡಾ ಬಾಚಿಕೊಂಡರು.

ಹಾಗೂ ಸಂತೋಷದ ಗಣಿಯ ಅಗಣಿತ ಸಂಪತ್ತೆಲ್ಲವನ್ನೂ ಬಾಚಿದರು ಹಾಗೂ ಗಾಯಗೊಂಡ ಹೃದಯ ದುರ್ಬಲವಾದ ತಳಮಳಕ್ಕೆ ಗುರಿಯಾದ ಯಾತನೆಯ ಶರೀರ ಮತ್ತು ಅಸಹಾಯಕತೆ ಹಾಗೂ ದುಃಖದಿಂದ ಅಲೆದಾಡುವವರನ್ನು ನಯ ಮತ್ತು ಕರುಣೆಯ ಅನುಗ್ರಹದ ಮುಲಾಮಿನಿಂದ ಸಂಪೂರ್ಣ ಆರೋಗ್ಯವನ್ನು ಕರುಣಿಸಿ ಸ್ವಸ್ಥ ಹಾಗೂ ಸಂತೃಪ್ತ ಪೀಠದ ಮೇಲೆ ಒಳ್ಳೆಯತನದಿಂದ ಮತ್ತು ದೇದೀಪ್ಯಮಾನವಾದ ಪೀಠದಲ್ಲಿ ಆಸೀನರಾಗುವಂತೆ ಮಾಡಿದ.

ಇಡೀ ವಿಶ್ವವನ್ನು ಅಲಂಕಾರದಿಂದ ಸಿಂಗರಿಸಿರುವ ಅಲ್ಲಾಹನು ಯುಕ್ತಿ ಮತ್ತು ಸೃಜನಶೀಲತೆಯಿಂದ ಬಯಸುವುದೇನೆಂದರೆ, ರಾಜ್ಯಾಡಳಿತದ ಸಹಾನುಭೂತಿಪರ ಅಭಿಮಾನಿ ಮತ್ತು ಸೌಮ್ಯತೆಯ ಬೆಂಬಲಿಗ ವೃದ್ಧನು ಬಲಿದಾನದ ಸಲುವಾಗಿ ಸಿದ್ಧನಾದಲ್ಲಿ ಉತ್ತಮ ಅದೃಷ್ಟ ಹಾಗೂ ಸಭ್ಯ ನಡವಳಿಕೆಯ ಹಾಸಿಗೆಯಲ್ಲಿ ಮಂಡಿಯೂರಿ ಕುಳಿತಿದ್ದು ಮತ್ತು ಒಳ್ಳೆಯ ಇರಾದೆಯಿಂದ, ಕ್ರಿಯೆಗಳಿಂದ ಹೊಸ್ತಿಲ ಬಳಿ ಟಿಕಾಣೆ ಹೂಡುವವನಾದಲ್ಲಿ ಅವನಿಗೆ ದುರಾದೃಷ್ಟದ ಕಾಡಿನಲ್ಲಿ ಸುತ್ತಿ ಸುಳಿಯುವ ಅಲೆಮಾರಿಯಾಗಿ ಸುತ್ತಾಡುವವನಂತೆ ಮಾಡಿದಲ್ಲಿ ಅದಕ್ಕೆ ಮೊಟ್ಟ ಮೊದಲಿಗೆ ಅಸಭ್ಯ ನಡವಳಿಕೆಯ ಭೂಮಿಯ ಮೇಲೆ ನಡೆದಾಡುವ ಅಯೋಗ್ಯ ಸ್ವಭಾವದ ಕಾಡುಗಳ ಯಾತ್ರಾರ್ಥಿಯನ್ನಾಗಿ ಮಾಡುತ್ತಾನೆ ಹಾಗೂ ಎರಡನೆಯದಾಗಿ ಸನ್ನಡತೆಯ, ನ್ಯಾಯಪರ ಅರಸನು ಉತ್ತಮ ನಡವಳಿಕೆಯ ಪ್ರೇರಕ ನ್ಯಾಯಪರ ವಿಶ್ವಾಸಪರ ಹಾಗೂ ಈಜಿಪ್ಟಿನ ಫ್ಯಾರೊನಂತೆ ಕಾನೂನುಗಳನ್ನು ಹಾಗೂ ಅಹಂಕಾರ ಹಾಗೂ ವಕ್ರತೆಯ ನಡವಳಿಕೆಯವನನ್ನಾಗಿ ಮಾಡುತ್ತಾನೆ. ಏಕೆಂದರೆ ಆಂತರಿಕ ಲೋಕವನ್ನು ಅರಿಯದವನು ಬಾಹ್ಯವಸ್ತುಗಳ ಮೇಲೆ ಕಣ್ಣಿಟ್ಟು ತಾನು ಬಯಸಿದುದನ್ನು ಪಡೆಯದವನು ಬಾಹ್ಯವನ್ನು ಪಡೆಯುವ ಸಲುವಾಗಿ ಇಂತಹ ದುರಾದೃಷ್ಟ ಪೀಡಿತನಿಗೆ ಉಪದೇಶ ಮತ್ತು ತಿಳುವಳಿಕೆಯನ್ನು ಹೇಳಿ ಆ ಸಮುದಾಯದ ಸ್ವಾರ್ಥಪರತೆಯ ಮೇಲೆ ಅವಲಂಬಿತನಾಗಿದ್ದು, ದೈವ ನಂಬಿಕೆಯುಳ್ಳ ಪ್ರತಿಷ್ಠಿತ ಸಮುದಾಯ ಮತ್ತು ಬುದ್ಧಿವಂತ ಜನರ ಜೊತೆಯಲ್ಲಿ ಇರದೆ ಸ್ವತಃ ತಪ್ಪು ಮತ್ತು ಅವಿಧೇಯತೆಯ ಸಾಗರದಲ್ಲಿ ಮುಳುಗೇಳುತ್ತಾರೆ ಹಾಗೂ ಅಪನಂಬಿಕೆ ಮತ್ತು ಲಜ್ಜೆಯ ಪ್ರಜ್ವಲಿಸುವ ಬೆಂಕಿಯನ್ನು ತೋರುವುದಿಲ್ಲ. ಮೂರನೆಯ ಕಾರಣವೇನೆಂದರೆ ಈ ನ್ಯಾಯ ಪರಿಪಾಲನೆ ಮತ್ತು ಪರಾಕ್ರಮದ ಕ್ಷೇತ್ರದ ಕುದುರೆ ಸವಾರರು ಹಾಗೂ ಯುದ್ಧದಲ್ಲಿ ವೀರಾವೇಶ ತೋರುವ ಪರಾಕ್ರಮದ ಏಕ ಮಾತ್ರ ಸವಾರರಿಗೆ ವಿಜಯ ಪ್ರಾಪ್ತಿಯಾಗುವುದು. ಈ ಪಿತೂರಿ ಸ್ವಭಾವ ಮತ್ತು ದುರ್ಗುಣಗಳ ಬದಲಿಗೆ ದುರ್ಜನರಿಗೆ ಸಜೆಯನ್ನು ನೀಡುವುದು.

ಏಕೆಂದರೆ ಅವರ ಲಾಲಸೆಯ ಗಾಜನ್ನು ಅಪಮಾನಕಾರೀ ಕಲ್ಲಿನಿಂದ ಚಚ್ಚಿ ಅವರ ಆನಂದದ ಬಟ್ಟಲನ್ನು ಅಪಮಾನದ ಭೂಮಿಯ ಮೇಲೆ ಬಿಸಾಡುತ್ತಾ ಭೂಮಿ ಮತ್ತು ಆಕಾಶದಲ್ಲಿ ವಾಸಿಸುವ ಜನರು ಅಪಮಾನಕಾರೀ ಸೆರೆಮನೆಯಲ್ಲಿ ಸೆರೆಯಾಳುಗಳಾಗಲಿ ಹಾಗೂ ಜೀವ ಮತ್ತು ಆತ್ಮವನ್ನು ಸೃಷ್ಟಿಸಿದ ಅಲ್ಲಾಹನ ಹೊಗಳಿಕೆ ಮತ್ತು ಕರುಣೆಯ ಸಮ್ಮುಖದಲ್ಲಿ ಅವನಿಗೆ ಧಿಕ್ಕಾರದ ಸಜೆ ನೀಡಲಿ.

ಈ ಸಂವಾದದ ರೀತ್ಯಾ ವಿದ್ರೋಹ ಮತ್ತು ಅಪರಾಧ ಹಾಗೂ ಯುದ್ಧದ ಸಾಗರದಲ್ಲಿ ಮುಳುಗಿದ್ದ ಹಿನ್ನೆಲೆಯಲ್ಲಿ ಮೌಲ್ಯರಹಿತ ಉದ್ಧಟತನದ ಸ್ವಭಾವದ ಸಲಾಬತ್‌ಖಾನನಿದ್ದ. ಆದುದರಿಂದ ಸುಸ್ವರದ ಬುಲ್‌ಬುಲ್ ಹಕ್ಕಿ ಈ ವಿಷಯದ ವರದಿಯನ್ನು ಮಾಡಲು ತೋಟದಲ್ಲಿ ತನ್ನ ಕೊರಳಿನಿಂದ ಸುಶ್ರಾವ್ಯವಾದ ಸ್ವರವನ್ನು ಹೊರಡಿಸತೊಡಗಿತು ಮತ್ತು ಈ ವೃತ್ತಾಂತದ ಸಲಾಬತ್‌ಖಾನನು ಪನಾಲ ಕೋಟೆಯ ವಿಜಯದ ನಂತರ ಕೆಲವು ದುರ್ಜನ ದುಷ್ಟ ಜನರ ದುರ್ಬೋಧನೆಯ ಮೇರೆಗೆ ಒಳಿತನ್ನು ಬಯಸುವ ವಸಂತದ ಋತುವನ್ನು ಶಿಶಿರ ಋತುವಿನ ಅಹಂಕಾರದ ತೀವ್ರ ಗಾಳಿಯಿಂದ ಕೆಟ್ಟ ಇರಾದೆಯೊಂದಿಗೆ ಬದಲಾವಣೆ ಮಾಡಿದ ಹಾಗೂ ಜೀವನಾಧಾರದ ಕೊಡುಗೆಯನ್ನು ನೀಡುವ ಗೆಳೆತನ ಮತ್ತು ಬೆಳಕಿನ ಮನೆಗೆ ವಿದ್ರೋಹವನ್ನು ಎಸಗಿದ್ದು, ಧೂಳು ಮತ್ತು ಮಣ್ಣಿನ ಹೆಚ್ಚಳದಿಂದ ತನ್ನ ಅರಮನೆಯನ್ನು ಅಂಧಕಾರದ ಮನೆಯನ್ನಾಗಿ ಮಾಡಲು ಬಯಸಿದ ಹಾಗೂ ವಾಗ್ದಾನಗಳನ್ನು ಉಲ್ಲಂಘನೆ ಮಾಡುವುದು ರಕ್ಷಣೆ ಮಾಡುವುದು ಅರಮನೆಯ ಕಂಬದ ರೀತಿಯಲ್ಲಿ ಅಗತ್ಯ ಎಂಬುದನ್ನು ಮರೆತ. ವ್ಯಕ್ತಪಡಿಸಿದ ಸಫಲತೆಯ ಸಂಕೇತಗಳನ್ನು ಇಬ್ರಾಹಿಮ್ ಖಾನ್ ಮೌಲ್ವಿ ಹಾಗೂ ಸಹಾಯಕ ಮುಲ್ಲಾ ಅಹಮದ್ ಮತ್ತು ನವಾಬ್‌ಮುಸ್ತಾಬ್‌ಅಬ್ದುಲ್ ರಹೀಮ್ ತೆಹಲೂಲ್ ಖಾನ್‌ರವರು ಮನಮೋಹಕ ಕರ್ನಾಟಕವನ್ನು ವಿಜೇತರಾಗಿ ಆಕ್ರಮಿಸಿಕೊಂಡಿದ್ದರು. ಆಕಾಶದ ದರಬಾರಿನಲ್ಲಿ ಹೊಸ್ತಿಲಿಗೆ ಮುತ್ತಿಕ್ಕಿ ಆ ಕಡೆ ಗಮನವನ್ನು ಹರಿಸಿದ್ದರು. ಆಗ ಪಿತೂರಿ ಮತ್ತು ದಂಗೆಯ ಮೈದಾನದಲ್ಲಿ ಮಲ್ಲಯುದ್ಧ ಹಾಗೂ ನೀಚತನದ ರಂಗದಲ್ಲಿ ತುಂಬಾ ಪರಾಕ್ರಮ ಹಾಗೂ ಅಹಂಕಾರ, ಗರ್ವ ಮತ್ತು ನಿರ್ಲಜ್ಜತೆಯ ಬಿರುಗಾಳಿಯಲ್ಲಿ ಕಲಹದ ಮರುಭೂಮಿಯಲ್ಲಿ ಸರ್ವನಾಶವಾಗುವಂತಹ ಕ್ರಿಯೆಯಲ್ಲಿ ತೊಡಗಿದ್ದ. ಆಜ್ಞಾಪಾಲನೆಯ ಡೇರೆಯ ಹಗ್ಗಗಳನ್ನು ಅರ್ಪಣಾಭಾವದ ಗೂಟಗಳಿಂದ ಕತ್ತಲಾಗಿಸಿತ್ತು. ದ್ರೋಹ ಮತ್ತು ಸಂಚಿನ ಕತ್ತಿಯನ್ನು ಯುದ್ಧದಲ್ಲಿ ಕತ್ತರಿಸಿ ಕೆಲವೇ ಮಂದಿ ಉತ್ತಮ ಅಭಿಪ್ರಾಯವನ್ನು ಇಡುವವರನ್ನು ಹಾಗೂ ಉತ್ತಮ ಆಲೋಚನೆಗಳ ಮಾಲೀಕರನ್ನು ದೂರದೃಷ್ಟಿಯ ಮಾಲೀಕರನ್ನು ಉತ್ತಮ ಚಿಂತನೆ, ದೈವಬೀರುತನ ಮತ್ತು ನ್ಯಾಯಪರತೆಯ ಬಟ್ಟಲಿನಿಂದ ಉಪಕೃತರನ್ನಾಗಿ ಮಾಡಿ ಅವರುಗಳು ಆ ಕ್ಷೇತ್ರದಲ್ಲಿ ತಮ್ಮದಾದ ಪ್ರತಿಷ್ಠೆಯನ್ನು ಹೊಂದಿದವರಾಗಿದ್ದರು ಮತ್ತು ಹಗಲು ರಾತ್ರೆ

ಇದೇ ಕುರುಡು ಬುದ್ಧಿ, ಅಹಂಕಾರ ಮತ್ತು ಯಾರ ಮಾತನ್ನೂ ಆಲಿಸದಂತಹ ದುರ್ಜನರು ಅವನಿಗೆ ನೆರವನ್ನು ನೀಡುವವರಂತಹವರಾಗಿದ್ದರು. ಈ ದುರ್ವ್ಯವಸ್ಥೆ ಹಾಗೂ ಕೆಟ್ಟ ನಡತೆಯಿಂದ ಅದರ ಪರಿಣಾಮ ವೃಥಾ ವಾಗ್ವಾದ ಮತ್ತು ನಷ್ಟದ ವಿನಹ ಇನ್ನೇನೂ ಪ್ರಯೋಜನವಿರಲಿಲ್ಲ

ದುರಾದೃಷ್ಟ ಹಾಗೂ ದುರ್ನಡತೆ ಮತ್ತು ಸಂಪೂರ್ಣ ನೀಚತನದಿಂದ ಕೂಡಿದ್ದು ಈ ರೀತಿಯು ತೀರ್ಮಾನದಿಂದ ಅವರು ಅಡ್ಡಿ ಮತ್ತು ಆತಂಕವನ್ನು ಮಾಡುವವರಂತಹವರಾದರು. ಒಟ್ಟಾರೆ ಈ ವಿನಾಶದ ಮತ್ತು ಸಂಚಿನ ಕೇಡಿನಿಂದ ಪ್ರೇರಿತವಾದ ಈ ರೀತಿಯ ಪ್ರಯೋಜನಕಾರಿ ಬುದ್ಧಿವಾದವನ್ನು ಕಟ್ಟು ಕಥೆಗಿಂತಲೂ ಹೆಚ್ಚು ನಂಬಿಕೆಗೆ ಅರ್ಹವೆಂದು ಅವನು ಭಾವಿಸಿದ ಹಾಗೂ ಈಜಿಪ್ಟಿನ ದೊರೆ ಫೇರೊನ ಸ್ವಭಾವದ ರೀತ್ಯಾ ತನ್ನನ್ನು ತಾನೇ ಸ್ವತಂತ್ರ ಹಾಗೂ ಮುಂದಿನ ದಿನಗಳಲ್ಲಿ ಅಪಾರ ನಷ್ಟವನ್ನು ಉಂಟು ಮಾಡುವಂತಹ ಭಯಂಕರ ಅನಾರೋಗ್ಯಕರ ರೋಗ ಮತ್ತು ಪ್ರಾಣಾಂತಿಕವಾದ ಸಂಕಷ್ಟಗಳು ಎದುರಾದವು, ಐದು ಸಾವಿರ ಸವಾರರು ಯುದ್ಧರಂಗದಲ್ಲಿ ಬೆಂಕಿಯನ್ನು ಉರಿಸುವವರಾಗಿದ್ದರು. ಧರ್ಮದ ದರ್ಬಾರಿನ ಈ ಮೂವರು ಆಪ್ತರ ಜೊತೆಯಲ್ಲಿ ಯುದ್ಧದ ಬಿರುಗಾಳಿಯ ದೃಷ್ಟಿಯಿಂದ ಮತ್ತು ಇರಾದೆಯಿಂದ ಅವನು ಹೊರಟು ನಿಂತ. ಆದರೆ ಆ ಮೂವರು ಕೂಡ ದೈವ ಭಕ್ತಿಯನ್ನು ಹೊಂದಿದ್ದು, ಗೆಳೆತನದ ಕೊಡುಗೆಯ ಪ್ರಾಮುಖ್ಯತೆಯನ್ನು ಅರಿತವರಾಗಿದ್ದು ಹಾಗು ತಮ್ಮ ಸೈನ್ಯದ ಅಪಾರ ಸಂಕಷ್ಟಗಳನ್ನು ಮತ್ತು ಕಡಿಮೆ ಸಂಖ್ಯೆಯ ಸೈನ್ಯ ಹಾಗೂ ಪ್ರಯಾಣದ ಪ್ರಯಾಸವನ್ನು ಕೂಡ ಲೆಕ್ಕಿಸದೆ ಬಾತುಕೋಳಿಯಂತೆ ತಮ್ಮ ಶಕ್ತಿ ಸಾಮರ್ಥ್ಯ ಹಾಗೂ ತ್ರಾಣವನ್ನು ಉಳಿಸಿಕೊಂಡಿದ್ದರು. ಕೈ ಕಾಲುಗಳನ್ನು ಶತ್ರುಗಳ ರಕ್ತದ ಮೆಹಂದಿಯಿಂದ ಕೆಂಪನ್ನಾಗಿಸಿ, ಬಿನ್ನಾಣದ ವಧುವಿನ ಮನಮೋಹಕವಾದ ಕೆಂಪು ಬಣ್ಣದ ಉಡುಪಿನೊಂದಿಗೆ ಶೃಂಗಾರದೊಂದಿಗೆ ಕಂಗೊಳಿಸುತ್ತಿರುವಲ್ಲಿ ಆಕೆಯು ತೆರೆಯ ಮರೆಯಲ್ಲಿದ್ದು ಗೌಪ್ಯವಾಗಿ ಮಧುಶಯ್ಯೆಯಲ್ಲಿ ವಿರಮಿಸುತ್ತಿದ್ದಾಳೆ. ವೀರಾವೇಶದ ಕತ್ತಿಯ ಸಂದೇಶದಿಂದ ತನ್ನ ಆಲಿಂಗನದಲ್ಲಿ ತೆಗೆದುಕೊಂಡು ವೈಭವ ಮತ್ತು ಭೋಗ ಹಾಗೂ ಸಂತೋಷವನ್ನು ಮೂಡುವಂತಹ ಬೆಳಗುವ ಮೋರೆಯಂತಹವರಾಗಲಿ ಹಾಗೂ ಅಲ್ಪ ಅವಧಿಯಲ್ಲಿ ಪಂಕ್ತಿಯನ್ನು ಛಿದ್ರಗೊಳಿಸುವ ಬಿರುಗಾಳಿಯ ಹೊಡೆತದಿಂದ ಶತ್ರುಗಳ ರಕ್ತದ ಹೊಳೆಯ ಅಲೆಗಳು ಅಪ್ಪಳಿಸಲು ಅವರ ತಲೆಗಳ ಮೇಲಿನ ಹಿಸ್ಸೆಯನ್ನು ಕಾಳಿನಂತೆ ಮತ್ತು ಅವರ ದೇಹಗಳನ್ನು ನೀರಿನಲ್ಲಿ ಮೀನುಗಳು ಈಜಾಡುವಂತೆ ಮಾಡಿ ಎಲ್ಲಾ ಹಿರಿ ಕಿರಿಯರ ದೃಷ್ಟಿಯಲ್ಲಿ ಕಂಡು ಬರುವಂತೆ ಮಾಡಲಿ.

ಅಲ್ಪ ಸಂಖ್ಯೆಯ ಸೈನ್ಯದ ಬೆಂಬಲದಿಂದಲೇ ಅವರು ಕುತ್ತಿಗೆಯನ್ನು ಹಿಡಿಯುವ ಸಾಮರ್ಥ್ಯವನ್ನು ಪಡೆದಿದ್ದರು.

ಅವರು ಈ ಮಾತಿನ ಸಾಮರ್ಥ್ಯವನ್ನು ಹೊಂದಿದಾರೆ.
ಅಂದರೆ ಅಲ್ಪ ಸಂಖ್ಯಾತ ಸೈನ್ಯದೊಂದಿಗೆ ಮೊದಲೇ
ಕುತ್ತಿಗೆಯನ್ನು ಹಿಡಿಯುವವರಂತೆ ಆದರು
ತಮ್ಮ ತೀವ್ರ ಚಲನೆಯಿಂದಲೆ ಪ್ರಾಣವನ್ನು ಹೆಕ್ಕಿ ತೆಗೆಯುವವರಂತೆ
ಅಂದರೆ ಮೂಳೆಗಳನ್ನು ಚೂರು ಚೂರುಗಳನ್ನಾಗಿ ಮಾಡಿದರು

ಅಂದರೆ ಈ ಸಂಗತಿಯು ಹಜರತ್ ಬಾದಶಹ ಫಾರ್ಖಿಯ ಇರಾದೆಯ ವಿರುದ್ಧವಾಗಿ ಹೋದುದರ ಮತ್ತು ಅವರ ಅಪಾರ ಸೈನ್ಯವು ಮರಳುಗಾಡಿನ ರೀತಿಯಲ್ಲಿ ಧ್ವಂಸಗೊಳಿಸುವಂತಹ ಆಕಾಶದೆತ್ತರದ ಸಂಕೇತಗಳ ಹೊಸಿಲನ್ನು ಮುತ್ತಿಕ್ಕುವ ಸಲುವಾಗಿ ರವಾನೆಯಾಯಿತು. ಆ ಪವಿತ್ರ ಮತ್ತು ಗೌರವಾನ್ವಿತ ಕರ್ತವ್ಯದ ನಂತರ ಯಾವುದರಿಂದ ಕಡ್ಡಾಯವಾಗಿ ಧರ್ಮ ಮತ್ತು ಲೋಕಕ್ಕೆ ಕಲ್ಯಾಣ ಪ್ರಾಪ್ತಿಯಾಗುತ್ತದೆ. ಹಜರತ್ ಬಾದಶಹ ಫಾರ್ಖಿ ಆ ಮೂವರು ಬುದ್ಧಿವಂತ ಹಾಗೂ ಗುಣಗ್ರಾಹಿ ಕರುಣಾಸ್ವರೂಪರಾದಂತಹ ವ್ಯಕ್ತಿಗಳನ್ನು ಶಾಮೀಲು ಮಾಡಿ ಅವರೊಡನೆ ನುಡಿದರು, ಈ ಸಂಪೂರ್ಣ ಅಜ್ಞಾನಿ ಅಯೋಗ್ಯನಾದ ಅನಾಗರೀಕ ಕ್ರಿಯೆಗಳು ಮತ್ತು ದುಷ್ಕೃತ್ಯಗಳಿಂದ ತಿಳಿದು ಬರುವುದೇನೆಂದರೆ ಅವನ ಹೊಳೆಯುವ ಬೆಳಗುವ ಅದೃಷ್ಟದ ತಾರೆಯು ನಮ್ಮ ಕರುಣೆ ಮತ್ತು ಕೊಡುಗೆಗಳ ಸೂರ್ಯನ ಬೆಳಕಿನಿಂದ ಐಶ್ವರ್ಯ ಸಂಪತ್ತು ಹಾಗೂ ಅಧಿಕಾರದ ಮೇಲೆ ಪೀಠಸ್ಥರಾಗುವವರ ಕಣ್ಣುಗಳನ್ನು ಕುಕ್ಕುವಂತಹದಾಗಿದೆ. ಈ ಐಶ್ವರ್ಯ ಮತ್ತು ಸಂಪತ್ತಿನ ನಡುವೆ ಆಕಾಶದ ವೈಭೋಗ ಮತ್ತು ಗೌರವದ ಸೂರ್ಯನ ಔನ್ನತ್ಯವನ್ನು ಕಳಂಕದ ಮೋರೆ ಹಾಗೂ ಅವರೋಹಣ ಮತ್ತು ಅನಾಮಿಕತನದ ಕೀಳು ಮತ್ತು ಅರೆಜೀವವಾಗುವುದರ ಕಡೆ ಬದಲಾವಣೆಯಗುತ್ತಿದೆ. ಅವನ ಹೆಸರಿನ ತೋಟವು ಮತ್ತು ಸೈನ್ಯಾಧಿಕಾರಿಯ ತೋಟವು ನಮ್ಮ ಉಪಕಾರ ಮತ್ತು ಕರುಣೆಯ ಹೂತೋಟದ ಮಾಲಿಗಳ ತರಬೇತಿ, ಬೆಂಬಲ ಹಾಗೂ ರಿಯಾಯತಿಯ ಶಮೀಮ್ ಅಂಬರ್ ಎಂಬ ಸುಗಂಧದ ಬೆಳಗಿನ ತಂಗಾಳಿಯ ಅಲೆಗಳಿಂದ ಸ್ವಚ್ಛ ತಾಜಾತನವನ್ನು ಅನುಭವಿಸುತ್ತಿದ್ದ. ಉತ್ತಮ ಚಿಂತಕ ಹೃದಯವು ಸಂಕಷ್ಟಗಳನ್ನು ಬಯಸುವ ಜನರ ಸ್ವಬಾವವನ್ನು ಸ್ವರ್ಗದ ಸಂಸ್ಥಾನವನ್ನು ಬೆಳೆಸುವ ಹೂತೋಟದ ರೀತ್ಯಾ ಮಾಡುವಂತಹವನ ದೃಷ್ಟಿಯಲ್ಲಿ ಬೆಳಕನ್ನು ಬೀರುವಂತಹ ಮತ್ತು ಶಿಶಿರ ಋತುವನ್ನು ನೋಡುವಂತಹ ದೇವಚರರನ್ನು ಸಂಸ್ಥಾಪಿಸುವ ಒಂದು ಸಂಸ್ಥಾನವಾಗಿದೆ.

ರಭಸದ ಗಾಳಿಯು ಬೀಸುವುದರಿಂದ ದುರಾದೃಷ್ಟವನ್ನು ಹೊಂದಿದವರ ನಕ್ಷತ್ರವನ್ನು ನೋಡುವವರ ಕಣ್ಣಿನಲ್ಲಿ ಬಬೂಲ್‌ನ ಮರದಂತೆ ಮರಳುಗಾಡಿಗಿಂತಲೂ ಹೆಚ್ಚು ಭಯವನ್ನು ಸೃಷ್ಟಿಸುವಂತಾಯಿತು ಮತ್ತು ಆ ಜಾಗದಿಂದ ಅಂದರೆ ಸೃಜನಶೀಲತೆಯ ಕಾರಖಾನೆಯ ಕೆತ್ತನೆಗಳು ದಾನ ಧರ್ಮ ಉದಾರತೆಯ ಖಜಾನೆಯ ಶಕ್ತಿಯನ್ನು ಸಹಿಸುವ ಅಪರಾಧ ಮತ್ತು ಪಾಪವನ್ನು ಕ್ಷಮಿಸುವ ಮತ್ತು ಕೊಡುಗೆಗಳನ್ನು ಕೂಡ ತೆರೆಮರೆಯಿಂದ ನೀಡುವಂತಹ ಗುಣಹಾಗೂ ಚಿಂತನಾಶೀಲ ಬೆಂಬಲಿಗರು ಮತ್ತು ಸೂಕ್ಷ್ಮದೃಷ್ಟಿಯನ್ನು ಉಳ್ಳವರು ವಾಸ್ತವವಾದೀ ವ್ಯಕ್ತಿಗಳು ದೇವರ ಪ್ರಿಯವಾದ ಗುಣಗಳನ್ನು ಮತ್ತು ದೇವರ ಅದ್ಭುತ ಗುಣಗಳನ್ನು ಅರಿವನ್ನು ಹೊಂದಿದವರಾಗಿದ್ದಾರೆ. ನಮ್ಮ ಲೋಕದಲ್ಲಿ ಜಹಾಂಪನಾಹ್ ದೊರೆಯ ವೈಭವ ಮತ್ತು ವಿಲಾಸಕ್ಕೆ ಅನುಗುಣವಾಗಿ ಹಾಗೂ ಬಾದಶಹರವರ ವೈಭೋಗದ ಅನುಗುಣವಾಗಿ ಇದೆ. ಯಾರಾದರೂ ವಕ್ರ ಮನೋಭಾವದವರು ಓರೆ ಮನಃಸ್ಥಿತಿಯವರು ಈ ಪಿತೂರಿಯಿಂದ ಸತ್ಯ ನುಡಿಯುವಂತಹವರು ಸದ್ಗುಣಿಗಳು ಹಾಗೂ ಅಭಿಮಾನಿಗಳ ಪೈಕಿ ಯಾರಾದರೂ ಒಬ್ಬರು ಅವಿಧೇಯತೆ ಮತ್ತು ದ್ವೇಷದ ಅರಣ್ಯದ ಅಲೆಮಾರಿಯಾಗಿದ್ದು, ನಮ್ಮ ದರಬಾರಿನ ಹೊಸ್ತಿಲಿಗೆ ನಮಿಸುವುದರಿಂದ ವಂಚನೆ ಮತ್ತು ಪಿತೂರಿ ನಡೆಸುವಂತಹ ವ್ಯಕ್ತಿಗಳ ಸಲುವಾಗಿ ನಿಗದಿತ ಸ್ಥಾನ ಮತ್ತು ಉಲ್ಲಂಘನೆಯ ತಾಣವಾಗಿದೆ. ಅಹಂಕಾರದ ಸ್ವಭಾವದ ನಿರ್ಲಜ್ಜ ಗರ್ವಿಷ್ಠ ವ್ಯಕ್ತಿಗಳಿಗೋಸ್ಕರ ಶರಣಾಗತಿಯ ಸ್ಥಾನವಾಗಿದೆ. ಉಲ್ಲಂಘನೆ ಮತ್ತು ವಿದ್ರೋಹವನ್ನು ತಮ್ಮದಾಗಿಸಿಕೊಳ್ಳುವವರು ನಮ್ಮ ಸಿರಿತನದ ಸಂಪತ್ತಿನ ಜೊತೆಯಲ್ಲಿ ಒಬ್ಬ ಮಾರ್ಗದರ್ಶಕ ಸಂತನರೀತಿಯಲ್ಲಿ ಅಂದರೆ ನೀಚ ಭುಜಗಳ ಮೇಲೆ ಕುದುರೆಯ ಜೀನನ್ನು ಹಾಕಿದ್ದು, ದೂರದ ರಸ್ತೆಗಳಲ್ಲಿ ಪಥಭ್ರಷ್ಟರಾಗಿರುವ ವ್ಯಕ್ತಿಗಳ ದಾಸರು ಗುಲಾಮರು ಮತ್ತು ಅನುಯಾಯಿಗಳಾಗಿರುವ ಜನರನ್ನು ಕೆಲವು ಹೆಜ್ಜೆಗಳವರೆಗೆ ಅರ್ಥ ಮಾಡಿಕೊಳ್ಳುತ್ತಾ ವಿವಿಧ ಪ್ರಭೇದಗಳ ಸಂಕಷ್ಟಗಳು ಮತ್ತು ಪ್ರಯಾಣದ ಹಂತಗಳನ್ನು ಸಂತೋಷ ಮತ್ತು ನೆಮ್ಮದಿಗಿಂತ ಉತ್ತಮ ಎಂದು ತಿಳಿಯುತ್ತೇವೆ. ವಿಜಯದ ಸಂಕೇತಗಳುಳ್ಳ ಎತ್ತರವಾದ ಬಾವುಟಗಳನ್ನು ಬೆಳಗಿನ ಮುಂಜಾವಿನ ರೀತಿಯ ನೆಮ್ಮದಿ ಮತ್ತು ಸಾಂತ್ವನದ ನಗರಗಳತ್ತ ಅವು ಕೆಡುಕು ಮತ್ತು ತಪ್ಪುಗಳ ಅಂಧಕಾರತಮ ರಾತ್ರೆಯ ಸುತ್ತಾ ಬೆಳಕನ್ನು ಅಪಮಾರ್ಗವನ್ನು ಪೂರ್ವಜರ ಲೋಪವೆಂದು ಪರಿಗಣಿಸಿ ಹಾಗೂ ಆ ಭೂಪ್ರದೇಶವನ್ನು ಸ್ವಾಗತದ ಸಂತೃಪ್ತತೆಯಿಂದ ಮತ್ತು ಪ್ರಾಮುಖ್ಯತೆಯ ಸೂರ್ಯನ ಉದಯವಾಗುವುದನ್ನು ಕಡ್ಡಾಯವೆಂದು ತಿಳಿಯುತ್ತೇವೆ.

ಕೊಡುಗೆಗಳು ಮತ್ತು ಪವಾಡಗಳ ಸೂರ್ಯನ ಕಿರಣಗಳ ಪ್ರಭೆಯಿಂದ ಮುಕ್ತವಾದ ಸಮುದಾಯವನ್ನಾಗಿ ಮಾಡಿ ಆ ಪಾಪಗಳ ಪ್ರಮಾದಗಳ ತುಕ್ಕಿನ ಕಲೆಗಳನ್ನು ದಯೆಯ ತುಕ್ಕು ನಿರೋಧಕ ಯಂತ್ರದಿಂದ ಉಪಕಾರದ ಹೃದಯದ ಕನ್ನಡಿಯಲ್ಲಿ

ವ್ಯಕ್ತಪಡಿಸಲಿ ಹಾಗೂ ಕ್ಷಮೆಯ ಗುರುತನ್ನು ಅವನ ಹಣೆಯ ಮೇಲೆ ಸಾಬೀತು ಮಾಡಿ ಅವನ ಗೌರವದ ಚೆಹರೆಯನ್ನು ನೀಚತನದ ಉಗುರುಗಳಿಂದ ರಕ್ತಸಿಕ್ತವನ್ನಾಗಿ ಮಾಡದೆ ಇರಲಿ ಬೆಂಕಿಯ ತಪ್ಪುಗಳ ಕಾರಸ್ತಾನವನ್ನು ಉಪಕಾರ ಮತ್ತು ಕ್ಷಮೆಯ ನೀರಿನಿಂದ ಶುದ್ಧಗೊಳಿಸಿ ಸಮಾಧಾನ ಸಂತೃಪ್ತಿ ಮತ್ತು ದಯೆಯ ದ್ವಾರಗಳನ್ನು ಅವನ ಚೆಹರೆಯ ಮೇಲೆ ತೆರೆದು ಒಳಿತಿನ ದೇಶದ ಮಾರ್ಗದರ್ಶನವನ್ನು ಮಾಡಲಿ ಹಾಗೂ ಅಸಲಿ ಬಾಂಧವ್ಯ ಮತ್ತು ಸ್ವಾಭಾವಿಕ ಮೃದುತ್ವದ ಕ್ರಮದಂತೆ ಹುಮಾಯೂನ್‌ನಂತಹ ಫರ್ಮಾನನ್ನು ಮತ್ತು ಶತ್ರುತ್ವದಿಂದ ತುಂಬಿದ ಹಾಗೂ ವಿದ್ರೋಹದಿಂದ ಆವರಿಸಿದ ಜನರ ಹೆಸರಿನಿಂದ ಈ ಬರವಣಿಗೆಯಲ್ಲಿ ಸೇರಿಸುವುದರ ಮೂಲಕ ಏನಾದರೂ ನಮ್ಮ ಅದೇಶಕ್ಕೆ ಭಕ್ತವತ್ಸಲ ಭಗವಂತನ ಭಕ್ತಿ ಮತ್ತು ನಮ್ಮ ಅನುಕರಣೆಯು ಅಲ್ಲಾಹನ ಕಾರ್ಯನಿರ್ವಾಹಕ ಶಕ್ತಿಯ ಆದೇಶವೆಂದು ಪರಿಗಣಿಸಿ ಮತ್ತು ಅರ್ಪಣಾ ಭಾವದಿಂದ ರಾಜಮಾರ್ಗದಿಂದ ಕಿರುಹಾದಿಯವರೆಗೂ ಘೋರ ಪಾಪಗಳು ಹಾಗೂ ಅಭಿಮಾನದ ಅಪಮಾರ್ಗವನ್ನು ಪೂರ್ವಜರ ಲೋಪವೆಂದು ಪರಿಗಣಿಸಿ ಹೃದಯಭೇದಕವಾದ ಕೆಡುಕಿನ ಇರಾದೆಯ ಉಡುಪನ್ನು ಹೃದಯ ಮತ್ತು ದೇಹದಿಂದ ಹೊರಗೆಸೆದು ನಮ್ಮ ದರಬಾರಿನ ಪ್ರದಕ್ಷಿಣೆಯ ಉದ್ದೇಶದಿಂದ ಯಾರು ಬೇಡುವನೋ ಅವನ ಉದ್ದೇಶ ಪೂರೈಕೆಯ ಕಾಬಾಭವನ ಮತ್ತು ಅಸಹಾಯಕರ ಭರವಸೆಯ ಉದ್ದೇಶ ಸಾಫಲ್ಯತೆಯ ಸಲುವಾಗಿ ಕಿಬ್ಲಾದತ್ತ (ಪಶ್ಚಿಮದತ್ತ)ಮುಖ ಮಾಡಿ ನಮಾಜ್ ಮಾಡುತ್ತಿರುವನೋ ಹಜ್ ಪ್ರದಕ್ಷಿಣೆ ಮಾಡುವ ಸಂದರ್ಭದಲ್ಲಿ ಧರಿಸುವ ಇಹ್ರಾಮ್ ಎಂಬ ಉಡುಪನ್ನುತನ್ನ ಸೊಂಟಕ್ಕೆ ಕಟ್ಟಿ ಲಬ್ಬೈಕ್ (ನಾನು ಹಾಜರಿದ್ದೇನೆ) ಹೇಳುತ್ತಾ ಪ್ರಾಮಾಣಿಕವಾದ ಇರಾದೆಯೊಂದಿಗೆ ಹಾಗೂ ನಿರ್ವಾಜ್ಯಪ್ರೇಮದೊಂದಿಗೆ ಹಜ್‌ರೆ ಅಸ್ವದ್ ಕಲ್ಲಿಗೆ ಮುತ್ತಿಕ್ಕಿ ಹಾಗೂ ಕೃತಜ್ಞತೆಯ ಕ್ಷೇತ್ರದಲ್ಲಿ ಅರಫಾತ್‌ನ ಮೈದಾನದಲ್ಲಿ ಒಳಿತಿನ ಉದ್ದೇಶದ ಪ್ರಾಮಾಣಿಕತೆ ಮತ್ತು ಭರವಸೆಯೊಂದಿಗೆ ಹಾಜರಾತಿಯನ್ನು ನೀಡಿದಲ್ಲಿ ಹೃದಯದ ಬಯಕೆಯ ಕೊಡುಗೆಯೊಂದಿಗೆ ಭಕ್ತಿಯ ಸಫಾ ಮರ್ವಾ ಬೆಟ್ಟಗಳ ನಡುವೆ ಓಡಾಡುವ ಸಯಿ ಎಂಬ ವಿಧಿವಿಧಾನವನ್ನು ಅನುಸರಿಸುತ್ತಾ ಹಜ್‌ನ ಆರಾಧನಾ ಸ್ಥಳದಲ್ಲಿ ಹಜ್‌ನ ವಿಧಿಗಳನ್ನು ಅನುಸರಿಸುತ್ತಾ ಆ ಮೂಲಕ ಶ್ರೇಯಸ್ಸು ಮತ್ತು ಸಫಲರಾಗಿ ನಮ್ಮ ಪ್ರತಿ ನಿತ್ಯದ ಕರುಣೆ ಮತ್ತು ವಿವಿಧ ರೀತಿಯ ಅದೃಷ್ಟದಾಟದ ಮೇರೆಗೆ ಆಬ್-ಎ-ಝುಮ್‌ಝುಮ್‌ನ ಪವಿತ್ರ ನೀರಿನೊಂದಿಗೆ ಉತ್ತಮವಾದ ಸೂಕ್ತ ಮತ್ತು ದ್ವಿವಿಧ ಸಂತೋಷ ತರುವ ಸ್ಥಾನ ಮಾನಗಳು ವೃದ್ಧಿಯಾಗಲಿ ಹಾಗೂ ಉತ್ತಮ ಸೇವೆಯ ಕಾಬಾ ಭವನದಲ್ಲಿ ಹಾಜರಾಗಿ ಅತ್ಯಂತ ಗೌರವಾನ್ವಿತ ಹಾಗೂ ಪ್ರತಿಷ್ಠಿತರಾಗಿ ಸ್ಥಿರ ಚಿತ್ತದ ನಾಲ್ಕು ಸಜದಾ ಮಾಡುವ ಸಲುವಾಗಿ ಕೈ ಕಾಲುಗಳ ಮೂಲಕ ಶಿರ ಸಾಷ್ಟಾಂಗ ಮಾಡಿಭವಿಷ್ಯತ್ತಿನ ಅತ್ಯಮೂಲ್ಯವಾದ ಅದೃಷ್ಟವನ್ನು

ನಿರಂತರವಾಗಿ ಗೌರವ ಮತ್ತು ಹಿರಿಮೆ ಹೆಗ್ಗಳಿಕೆ ಸ್ಥಾನಮಾನದ ವೈಭವದ ವೈಭೋಗದಲ್ಲಿ ನಿರತರಾಗುವುದು. ಇಲ್ಲವಾದಲ್ಲಿ ಶಪಿತ ಶೈತಾನನ ಧಿಕ್ಕರಿಸಿದ ಪಿಶಾಚಿಯ ರೀತಿಯಲ್ಲಿ ಶಿಕ್ಷೆ ಮತ್ತು ವಿನಾಶದ ಕಣಕಣವಾಗಿ ಛಿದ್ರವಾಗಿ ಕೊನೆಗಾಲ ಮತ್ತು ಈ ಲೋಕದಲ್ಲಿ ಪಿಶಾಚಿಯಾಗಿ ಪ್ರೇಮ, ವಾತ್ಸಲ್ಯ ಹಾಗೂ ಸಹೋದರತ್ವದ ಸನ್ನಿಧಿಯಿಂದ ನಾಶವಾಗುವುದು. ಇಬ್ರಾಹಿಮ್ ಖಾನ್ ಮುಲ್ಲಾಹ ಅಹದ್ ಮತ್ತು ಶಾ ಅಬುಲ್ ಹಸನ್ ಜೊತೆಯಲ್ಲಿ ಹುಕುಮನ್ನು ನೀಡಲಾಯಿತು. ಈ ಪರಿಚಿತರು ಆ ವಿಶಿಷ್ಟ ವ್ಯಕ್ತಿಗಳು ಎಷ್ಟೊಂದು ಬುದ್ಧಿವಾದದ ಬೀಜಗಳನ್ನು ಆ ಹೃದಯದಲ್ಲಿ ನೆಟ್ಟರೂ ಮತ್ತು ಆ ಒಣ ಹೃದಯದ ಭೂಮಿಯಲ್ಲಿ ನೆಟ್ಟರೂ ವಿದ್ರೋಹಿತನ ಮತ್ತು ಕುಚೇಷ್ಟೆ ಹಾಗೂ ಅವಿಧೇಯತೆಯ ಕೇಡಿನ ವಿನಹ ಯಾವ ವಿಷಯವು ಕೂಡ ಆ ಅಹಂಕಾರಿಗಳಿಂದ ಬೇರೆಯಾವ ಪರಿಣಾಮವೂ ಹೊರ ಹೊಮ್ಮಲಿಲ್ಲ. ಎಷ್ಟು ಮನಮೋಹಕ ಸಂವಾದ ಮತ್ತು ಬುದ್ಧಿವಾದದ ಮಳೆ ಹನಿಗಳನ್ನು ಆ ಅಸೂಯೆಯಿಂದ ಕೂಡಿದ ಆತ್ಮದ ಮೇಲೆ ಸುರಿದರೂ ಕೂಡ ಬಂಡೆಯ ಮೇಲೆ ಸುರಿದಂತೆ ವ್ಯರ್ಥವಾಯಿತು ಹೊರತು ಯಾವುದೇ ಉದ್ದೇಶ ಸಾಧನೆಯಾಗಲಿಲ್ಲ. ಈ ಒಂದು ಪರಿಶ್ರಮವು ದುಃಖದ ವಿನಹ ಬೇರೆ ಯಾವುದೇ ಪರಿಣಾಮವನ್ನು ಅವನ ಮೇಲೆ ಬೀರಲಿಲ್ಲ ಹಾಗೂ ಕುಟಿಲತೆ ಮತ್ತು ಅಸೂಯೆಯಿಂದ ಕೂಡಿದ ಆಲೋಚನೆಯು ಯಾವ ರೀತಿಯ ಗುಣಕಾರಿಯಾದ ಸರ್ವೌಷಧಕ್ಕೂ ಮಣಿಯುವುದಿಲ್ಲ. ಅಂತೆಯೇ ಆ ಮೂವರ ಚಿಂತನೆಯು ಬುದ್ಧಿಯ ಸಂತೆಯಲ್ಲಿ ನಿರೀಕ್ಷಿತ ಚಿನ್ನದಂತಹ ಪರಿಣಾಮವನ್ನು ಬೀರಲಿಲ್ಲ.

ವಂಚನೆ ಸಂಚು ಮತ್ತು ಯುದ್ಧದ ವ್ಯಾಕರಣದ ವಿನಹ ಯಾವುದೇ ರೀತಿಯ ಸುಧಾರಣೆ ಮತ್ತು ನಡವಳಿಕೆ ಹಾಗೂ ಪೀಠದ ಮೇಲೆ ಆಸೀನರಾಗಿರುವ ವ್ಯಕ್ತಿಗಳ ಮತ್ತು ಕಥೆಯು ಕೂಡ ವ್ಯರ್ಥವಾಗಿ ಯಾವುದೇ ಪರಿಣಾಮವನ್ನು ಬೀರಲಿಲ್ಲ.

ತುಕ್ಕು ನುಂಗುವ ಕಬ್ಬಿಣವನ್ನು
ಈ ಮೆರಗು ಮತ್ತು ಹೊಳಪಿನಿಂದ
ಕೊನೆಗೊಳಿಸಲು ಸಾಧ್ಯವಿಲ್ಲ

ಕರಾಳ ಹೃದಯಕ್ಕೆ ಬುದ್ಧಿ ಮಾತಿನಿಂದ ಏನು ಪ್ರಯೋಜನ
ಕಲ್ಲಿನಲ್ಲಿ ಕಬ್ಬಿಣದ ಗೂಟ ಬೆಳೆಯುವುದಿಲ್ಲ

ಅಸಹಾಯಕರಾಗಿ ಆ ಮೂವರು ದೈವಭಕ್ತರು ಅತ್ಯಂತ ಅಭಿಮಾನಪೂರ್ವಕವಾದ ಅರ್ಪಣಾಭಾವದಿಂದ ಈ ಬುದ್ಧಿವಂತ ವ್ಯಕ್ತಿಗಳು ಮುಂದಿನ ಪರಿಣಾಮಗಳ ಬಗ್ಗೆ ಅರಿವಿಲ್ಲದ ವಕ್ರಬುದ್ಧಿಯ ವಿನಾಶಕಾರೀ ಪರಿಸ್ಥಿತಿಗೆ ಅನಿಷ್ಟವೆಂದು ಜನರು ಕರೆಯುತ್ತಾರೆ.

ಎಲ್ಲ ಪ್ರಶಂಸೆಗಳು ಕೂಡ ಅಲ್ಲಾಹನಿಗೆ ಮೀಸಲಾಗಿವೆ. ಯಾವಾತನು ಆ ಬಳಸುವ ಮತ್ತು ಸ್ಪಷ್ಟ ಸಂಕೇತಗಳ ಮೂಲಕ ಸೈನ್ಯದ ಸಂಯೋಜನೆಯನ್ನು ಮಾಡಿ ಆ ಕಾರ್ಖಾನೆಯಂತಹ ಅನ್ವೇಷಣೆಯನ್ನು ಮಾಡಿದ ಆತನ ಆ ಬರವಣಿಗೆಯಿಂದ ವಿಶಿಷ್ಟ ಪದ ಪ್ರಯೋಗವಾಯಿತು. ಅದೇನೆಂದರೆ ಎಲ್ಲೆಲ್ಲಿ ದೃಷ್ಟಿ ಹಾಯಿಸಿದರೂ ನೀನೇ ಕಂಡು ಬರುವೆ. ಹಝುರತ್‌ಬಾದಶಹ ಮನ್ಸೂರನು ಸಾಬೀತು ಮಾಡಿದ್ದೇನೆಂದರೆ, ತನ್ನ ಸಮಸ್ತ ವಿಶ್ವದ ನಕ್ಷೆ, ಶೃಂಗಾರ ಮತ್ತು ವಿಶ್ವವಿಖ್ಯಾತ ನಕ್ಷತ್ರ ಪ್ರಕಟವಾಗುವ ವಾಕ್ಯವೇನೆಂದರೆ ಯಾರು ಅವನ ಅಜ್ಞಾಪಾಲನೆಯಿಂದ ಹೊರತಾದನೋ ಅವನು ಖಂಡಿತವಾಗಿಯೂ ಈ ಲೋಕ ಮತ್ತು ಅಂತ್ಯದಿನದಂದು ನಷ್ಟದಲ್ಲಿ ಬೀಳುವವನಾದ. ಈ ನಕ್ಷೆಯಿಂದ ಬೆಳಗು ಮತ್ತು ಹೊಳಪು ನೀಡಲಾಯಿತು. ತದನಂತರವೂ ಈ ಉದ್ದೇಶ ಮತ್ತು ಇಚ್ಛೆಯು ಒಳಿತಿನ ಸ್ವಭಾವದ ಸದ್ಗುಣಿಗಳ ವೈಯುಕ್ತಿಕ ಕರುಣೆಯ ಅವಶ್ಯಕತೆಯ ಮೇರೆಗೆ ಅಂದರೆ ಅಲ್ಲಾಹನು ಪ್ರಪಂಚವನ್ನು ಸೃಷ್ಟಿಸಿದ ಮತ್ತು ಪೋಷಣೆ ಮಾಡುವವನ ವತಿಯಿಂದ ಒಂದು ಬೃಹತ್ತಾದ ಕೊಡುಗೆ ಮತ್ತು ಬಹುಮಾನವಾಗಿದೆ ಹಾಗೂ ಆ ಬೃಹತ್ತಾದ ಬಕ್ಷೀಸಿನ ಮೂಲಕ ಸೃಷ್ಟಿಕರ್ತನ ಖುಷ್ಕಿ ಮತ್ತು ತರಿ ಜಮೀನಿನ ಮೌಜೆ ಜಮ್‌ಲಕವನ್ನು ಗುರುತುಪಡಿಸಿದ. ಅದರ ವಾಸ್ತವ್ಯ ಒಂದು ಮೂಲೆಯಲ್ಲಿ ಆಯಿತು. ಅದರಲ್ಲಿ ನ್ಯಾಯ ಪರಿಪಾಲನೆಯಿಂದ ಬೆಳಕನ್ನು ಬೀರಿ ಸಂಚುಕೋರರರು ಹಾಗೂ ಕ್ರೂರಿಗಳ ಹೆಚ್ಚಳವನ್ನು ಮಾಡುವಂತಹ ಜನರ ಸಲುವಾಗಿ ಅವರು ಶರಣಾಗಿ ಸಜ್‌ದಾ ಮಾಡುವ ಸ್ಥಳವನ್ನಾಗಿ ಮಾಡಿದ. ಸ್ವನಿರೀಕ್ಷಣೆಯ ಹಾಸಿಗೆಯ ಮೇಲೆ ಸಂಚು ಮತ್ತು ಪಿತೂರಿಯ ರೋಗವು ಮರಣಾಂತಿಕವಾಗಿದೆ ಹಾಗೆಯೆ ಆ ರೋಗಿಯು ಈಜಿಪ್ಟಿನ ದೊರೆ ಫೇರೋನ ಕ್ರಿಯೆ ಪ್ರಕ್ರಿಯೆಗಳ ಸಿದ್ಧಾಂತದ ರೀತಿಯಲ್ಲಿ ಹಾಸಿಗೆಯಲ್ಲಿ ರೋಗಿಷ್ಠನಾಗಿದ್ದಾನೆ. ಅವನಿಗೆ ಮೃದುವಾಗಿ, ನಯವಾಗಿ ಮತ್ತು ಪ್ರೀತಿಯಿಂದ ಶರಬತ್ತನ್ನು ನೀಡಿದಲ್ಲಿ ದುರ್ಬಲವಾದ ಹೃದಯದ ವ್ಯಕ್ತಿಗಳಿಗೆ ಅದು ಗುಣಕಾರಿ ಹಾಗೂ ಮುಲಾಮು ಸವರಿದಂತಹ ಪರಿಣಾಮವನ್ನು ಬೀರುತ್ತದೆ ಹಾಗೂ ಪ್ರಾಣರಕ್ಷಣೆಯ ಮಾರ್ಗದ ಪರಿಕರಗಳು ಹಕೀಮರು ಮತ್ತು ನಾಡಿಮಿಡಿತವನ್ನು ಬಲ್ಲ ಅನುಭವೀ ವೈದ್ಯರಿಂದ ತಯಾರಿಸಲ್ಪಟ್ಟ ವಸ್ತುಗಳಿಂದಲೂ

ಸ್ಥಾನಮಾನಗಳಿಂದಲೂ ಒಳ್ಳೆಯದಾಗುತ್ತದೆ. ಒಟ್ಟಾರೆ ನೆಮ್ಮದಿಯನ್ನು ಮೂಡಿಸುವಲ್ಲಿ ಹಿಂದೂಸ್ಥಾನ ಮತ್ತು ಗ್ರೀಕಿನ ವೈದ್ಯರುಗಳು ಮತ್ತು ಅವರ ಸಹಾಯಕರ ಔಷಧೋಪಚಾರಗಳಿಂದ ಹೆಚ್ಚು ನೆಮ್ಮದಿಯನ್ನು ನೀಡುವುದು ಅಗತ್ಯವಾಗಿದೆ ಒಟ್ಟಾರೆ ಆರೋಗ್ಯವಂತ ಪರಿಸ್ಥಿತಿಯ ಪೀಠದ ಮೇಲಿನ ಹಿಸ್ಸೆಯಲ್ಲಿ ಉನ್ನತಿಯ ಸ್ಥಾನದಲ್ಲಿ ಇರುವಂತಹ ಮುಖ್ಯಸ್ಥರು ಉತ್ತಮ ಸ್ಥಾನಮಾನಗಳಲ್ಲಿ ನೇಮಕವಾಗಿರುವವರಿಂದ ಆರೋಗ್ಯವಂತ ಮತ್ತು ಸಂತೋಷದ ವಾತಾವರಣದ ಸಭೆಯನ್ನಾಗಿಮಾಡುತ್ತಾನೆ

ಹಾಗೂ ಗರ್ವಿಷ್ಠ ಹಾಗೂ ದುರ್ಮಾರ್ಗಿ, ದುರ್ಬಲ, ಹೇಡಿ, ಸ್ವಾರ್ಥಿ ಮತ್ತು ನೀಚ ಹಾಗೂ ಪಿತೂರಿಕೋರ ಸಂಚುಕೋರಿಯಾದ ಅವನ ಭೂಮಿಯನ್ನು ಬಾದಶಹ ಘಾಝಿಯು ಶಾಂತಿ ಸಮಾಧಾನದಿಂದ ಜವಾಹಿರಾತಿಯಂತಹ ಅಮೂಲ್ಯ ಲೋಹಗಳ ಚಿನ್ನ ಬೆಳ್ಳಿ ಗಣಿಯನ್ನಾಗಿ ಮತ್ತು ಸಂಪತ್ತು ಹಾಗೂ ಉಪಕಾರದ ಮುತ್ತುಗಳ ಮಹಾಸಾಗರವನ್ನಾಗಿ ಮಾಡಿದ. ಯಾವ ಕಾರಣಕ್ಕೂ ಶಾಂತಿ ಮತ್ತು ಸಮಾಧಾನದ ಸೆರಗಿನಿಂದ ಪಾದಗಳನ್ನು ಹೊರಗಡೆ ಇಡಲಿಲ್ಲ ಹಾಗೂ ಗುಲಾಮರಿಗೆ ಕ್ಷಮೆಯನ್ನು ನೀಡದೆ ವ್ಯರ್ಥ ಚರ್ಚೆ ಮತ್ತು ಪ್ರಲಾಪದ ನಂತರ ಮೂವರು ಕೂಡ ಫಲಪ್ರದವಾಗದ ಸುಲ್ತಾನೀ ರಹಸ್ಯಗಳನ್ನು ಅರಿತವರಾದ ಕಾರವಾನ್‌ನೊಡನೆ ಆಂತರಿಕ ರಹಸ್ಯಗಳ ಅರಿವಿನಿಂದ ಶೈತಾನನ ಆಶಂಕೆಗಳ ಸಮುದ್ರದಲ್ಲಿ ಮುಳುಗೇಳುವಂತಹವರಾದರು ಮತ್ತು ಸ್ವಾರ್ಥಪರ ಸಂಕಷ್ಟಗಳು ಅಪ್ಪಳಿಸುವುದರಿಂದ ನೀಡುವಾತನಿಗೆ ಈ ನೆಮ್ಮದಿ ಮತ್ತು ನೆರವಿಗಾಗಿ ರಾಜಿಗೆ ಸಿದ್ಧರನ್ನಾಗಿ ಮಾಡಿಕೊಂಡರು ಹಾಗೂ ಸಪ್ತರ್ಶಿ ಮಂಡಲದ ಶ್ರೇಷ್ಠತೆಯನ್ನು ಹೊಂದಿರುವ ಹೊಸ್ತಿಲಿಗೆ ನಮಿಸುವ ಸಲುವಾಗಿ ಜೇಬು ಮತ್ತು ಸೆರಗಿನಲ್ಲಿ ಒಳಿತಿನ ಉದ್ದೇಶ ಮತ್ತು ಪ್ರಾಮಾಣಿಕತೆಯ ಸುಗಂಧ ಹಾಗೂ ಶ್ರೇಷ್ಠತೆ ಮತ್ತು ಕರ್ತವ್ಯಪರತೆಯ ಆಶಯಗಳಿಂದ ತುಂಬಿ ಅವರುಗಳು ತಮ್ಮ ಉದ್ದೇಶದ ಗೌರವವನ್ನು ಕಾಪಾಡುವ ಸಲುವಾಗಿ ದರಖಾಸ್ತನ್ನು ತಲುಪಿಸಿದರು. ಏನೆಂದರೆ ಈ ಕಪ್ಪು ಮತ್ತು ಕಲಹಪ್ರಿಯ ಹಾಗೂ ಪೈಶಾಚಿಕ ಗುಣಗಳನ್ನು ಹೊಂದಿರುವವನಿಂದ ಕೇಡಿನ ಸ್ವಭಾವದ ಮತ್ತು ದುರ್ಗುಣಗಳಿಂದ ಕೂಡಿದವನಿಂದ ಬಯಸುವುದೇನೆಂದರೆ ಮೂರ್ಖತನ ಮತ್ತು ಅಯೋಗ್ಯತೆಯ ಆಲೋಚನೆಯ ಮೂಲಕ ತಲೆಯನ್ನು ಗರ್ವ ಮತ್ತು ಅಹಂಕಾರದಲ್ಲಿ ಸಿಲುಕಿಸಿಕೊಳ್ಳುವುದು ಸೂಕ್ತವಲ್ಲ ಮತ್ತು ವಿನಯ ಹಾಗೂ ಆಜ್ಞಾಪಾಲನೆಯ ಕ್ಷೇತ್ರದಲ್ಲಿ ಚಲಿಸುವ ವ್ಯಕ್ತಿಗಳ ಜೊತೆಯಲ್ಲಿ ಅವರ ಸಹಪಯಣಿಗ ಹಾಗೂ ಪರಾಕ್ರಮ ಮತ್ತು ಪ್ರತೀಕಾರದ ಆಲೋಚನೆಯ ಪೀಠದ ಮೇಲಿನ ಅಂತಸ್ತುಗಳ ವ್ಯಕ್ತಿಗಳ ಪ್ರಜ್ವಲಿಸುವ ನಕ್ಷತ್ರಗಳ ಮೇಲೆ ಬಾಣ ಬಿಡುವುದರಿಂದ ರಕ್ತಸಿಕ್ತಗೊಳ್ಳುವಂತಹ ಅನಾಮಧೇಯತೆಯ ಕಂದಕದಲ್ಲಿ ಬೀಳುವುದು ಸೂಕ್ತವಲ್ಲ.

ವಿದ್ರೋಹ ಮತ್ತು ಸಂಚಿನ ಕ್ಷೇತ್ರವು ಕ್ರೂರ ಪ್ರಾಣಿಗಳ ತಂಗುದಾಣದಂತೆ ಆಗುವುದು. ಆದುದರಿಂದ ಪಿತೂರಿ ಮತ್ತು ಸಂಚಿನ ಮಾಂತ್ರಿಕರನ್ನು ಅಲುಗಾಡಿಸಿ ಶುಭಾಕಾಂಕ್ಷಿಗಳು ಹಾಗೂ ಒಳಿತಿನ ಸಂದೇಶದ ಹೊಸ್ತಿಲಿನ ಮೇಲೆ ನಿಂತಿರುವ ವ್ಯಕ್ತಿಗಳ ಗೆಳೆತನವನ್ನು ಮಾಡಿಕೊಳ್ಳುವುದು ದುರ್ಬುದ್ಧಿ ಮತ್ತು ಕುಚೇಷ್ಟೆಗಳ ಅರಣ್ಯದಲ್ಲಿ ಸಂಚರಿಸುವವನನ್ನು ದೂರವಿಡುವುದು ಹಾಗೂ ಪರಾಕ್ರಮ ಮತ್ತು ಬಲಾಢ್ಯತೆಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ವೀರರು ನಾಶ ಮತ್ತು ಕೆಡುಕು ಹಾಗೂ ನೀಚತನದ ಹಗ್ಗವನ್ನು ಅವನ ಕೊರಳಿನಲ್ಲಿ ಹಾಕಿ ಸರ್ವನಾಶದತ್ತ ದೂಡುವುದು. ಅಲ್ಲಾಹನ

ಗೌರವ ಮತ್ತು ಶ್ರೇಷ್ಠತೆಯು ಹಝುರತ್ ಬಾದಶಹ ಫಾಝಿಯ ಬೆಳಕು ಬೀರುವ ಪ್ರಕಾಶಮಯವಾದ ಹೃದಯದ ಕನ್ನಡಿಗೆ ಕ್ರೋಧ ಮತ್ತು ಕೋಪದ ತುಕ್ಕಿನ ಆರಂಭದಿಂದ ಮುಕ್ತಿಯನ್ನು ನೀಡಿದೆ ಹಾಗೂ ಅವರ ಸುಗಂಧಪೂರಿತ ಹೃದಯದ ಅಮೂಲ್ಯತೆಯು ಅತ್ಯಂತ ಮೃದುತ್ವ, ನಯ ಪ್ರೇಮ ಸೂರ್ಯಕಿರಣಗಳಿಂದ ಮತ್ತು ಬೆಳಕಿನ ಕೊಡುಗೆಯಿಂದ ಅಪ್ಪಣೆ ಮಾಡುವುದೇನೆಂದರೆ, ಆ ಎಲ್ಲಾ ಮಾತುಗಳನ್ನು ಆಲಿಸಿದ ಆ ಮೂವರು ಧೈರ್ಯದಿಂದ ಕೂಡಿ ಎಲ್ಲಾ ಕಾರಣಗಳನ್ನು ಕೂಡಾ ಕೇಂದ್ರೀಕರಿಸಿದ್ದರು. ಪ್ರವಾದಿಯವರ ಹದೀಸಿನಲ್ಲಿ ಪ್ರತಿ ಮಗುವೂ ಕೂಡಾ ಸ್ವಭಾವತಃ ಇಸ್ಲಾಮಿನ ಆಶಯಗಳ ಅನುಗುಣವಾಗಿ ಜನ್ಮ ತಾಳುತ್ತದೆ. ತದನಂತರ ಆತನ ತಾಯಿ ತಂದೆಯರು ಅವನನ್ನು ಯಹೂದಿ, ನಸ್ರಾನಿಯನ್ನಾಗಿ ಮಾಡಲಿ ಮತ್ತು ಆ ಮೂಲಕ ಒಳ್ಳೆಯ ಕರ್ತವ್ಯಗಳ ಮೂಲಕ ಅವಿಧೇಯತೆಯ ಕಳಂಕದ ಪಾಪಗಳಲ್ಲಿ ಮುಳುಗೇಳುವುದು ಖಚಿತವಾಗಿದೆ. ತನ್ನ ಎಲ್ಲಾ ರೀತಿಯ ಅಜ್ಞಾನ ಹಾಗೂ ತಿರಸ್ಕಾರದ ಮನೋಭಾವದ ನೀಚತನದಿಂದ ಮುಕ್ತಿ ಹೊಂದಿ ಸಹೋದರತ್ವದ ಉಪಕಾರಗಳು ಮತ್ತು ಪವಾಡಗಳ ಸಹಪಂಕ್ತಿ ಭೋಜನದಿಂದ ನಮ್ಮ ಉಪಕಾರ ಮತ್ತು ಸಫಲತೆ ಹಾಗೂ ಪ್ರಯೋಜನಗಳು ಮತ್ತು ಭಕ್ಷೀಸುಗಳ ಊಟದ ಬಟ್ಟೆಯ ಮೇಲಿನ ಆಯ್ದು ತಿನ್ನು ವಿನಃ ಬೇರೆ ಯಾವ ಮಾರ್ಗವೂ ಅವನಿಗೆ ಇಲ್ಲ. ಆದರೆ ಪರಿಸ್ಥಿತಿಯ ಅದೃಷ್ಟ ಯೋಗ್ಯವಾಗಿಲ್ಲ ಹಾಗೂ ಆ ಹೊತ್ತಿನ ಸೂಕ್ತ ಸಮಯವಾಗಿಲ್ಲವಾದುದರಿಂದ ಕೆಲವು ನೀಚ ಸ್ವಬಾವದ ಪೈಶಾಚಿಕ ವ್ಯಕ್ತಿಗಳು ಮೋಸದಿಂದ ಪ್ರಯುತ್ನಶೀಲರಾಗಿ ಪುರಾತನ ಹಾದಿಯುನ್ನು ಮುಳ್ಳುಕಂಟಿಗಳಿಂದ ಹಾಗೂ ಆಜ್ಞಾಪಾಲನೆಯ ಹಾದಿಯಲ್ಲಿ ಕಲ್ಲು ಬಂಡೆಗಳಾಗಿ ನಿಂತಿದ್ದಾರೆ. ಬುದ್ಧಿಹೀನ ಅಜ್ಞಾನಿಯನ್ನು ಕೆಟ್ಟ ಹೆಸರಿನ ಸೆರೆಮನೆಯಲ್ಲಿ ಕೂಡಿ ಹಾಕಿದ್ದು ಅವನನ್ನು ವಿಫಲತೆ ಮತ್ತು ಅಪಜಯದ ನೆಲಮಾಳಿಗೆಯಲ್ಲಿ ಬಂಧಿತರನ್ನಾಗಿ ಮಾಡಿದ್ದಾರೆ.

■

*

ಅಧ್ಯಾಯ-೯

ಬಡೇಸಾಹೇಬಾರವರ ಮಕ್ಕಾ ಯಾತ್ರೆ ಮತ್ತು ಅಲಿ ಅದಿಲಶಹನ ಜನಸಂಪರ್ಕ

ಒಟ್ಟಾರೆ ನಾವು ಗೌರವ ಮತ್ತು ಘನತೆಯತ್ತ ಕೇಂದ್ರೀಕರಿಸಿ ಹಾಗೂ ಜಾಗೃತ ಆತ್ಮದ ಎಚ್ಚರಿಕೆಯನ್ನು ಪರಿಗಣಿಸುತ್ತಿದ್ದೇವೆ. ಅಭಿವ್ಯಕ್ತಿ ಮತ್ತು ಮಾರ್ಗದರ್ಶನದ ಸೂರ್ಯನ ದಿನನಿತ್ಯದ ಬೆಳಕಿನಿಂದ ಅವನ ಪಿತೂರಿ ಮತ್ತು ಗರ್ವ ಹಾಗೂ ಕ್ರೌರ್ಯದ ಅಂಧಕಾರವನ್ನು ಅಂತ್ಯಗೊಳಿಸಿ ಅವನನ್ನುಸತ್ಕಾರ್ಯದ ಹಾದಿಯ ಪಯಣಿಗನನ್ನಾಗಿ ಮಾಡುತ್ತೇವೆ ಹಾಗೂ ಬುದ್ಧಿವಂತ ಮತ್ತು ಮಾರ್ಗದರ್ಶನದ ಸಲುವಾಗಿ ಮಳೆಯ ಹನಿಗಳಿಂದ ಅವನ ಪಿತೂರಿ ಮತ್ತು ಅಹಂಕಾರದ ಅಗ್ನಿಯನ್ನು ತಂಪುಗೊಳಿಸಿ ಉತ್ತಮ ಕಾರ್ಯಗಳ ಹೂತೋಟದ ಪುಷ್ಪವನ್ನಾಗಿ ಮಾಡುವುದು. ಈ ನಡುವೆ ಹಝುರತ್ ಅಲಿಯಾ ಮಾಸಾಹಿಬಾರವರ ಹೃದಯವು ಕಾಬಾದ ಪ್ರದಕ್ಷಿಣೆ ಮಾಡುವ ಬಯಕೆಯಿಂದ ಹಜ್‌ಗೆ ಹೊರಡುವ ತಮ್ಮ ಬಯಕೆಯ ನೀರನ್ನು ಅಪೇಕ್ಷಿತ ಉದ್ದೇಶ ಹಾಗೂ ಪ್ರೇಮದ ಗುರುತಾಗಿ ಪ್ರಕಟಿಸಿದರು. ಹಿರಿತನ ಮತ್ತು ಗೌರವ ಘನತೆಯ ವೈಭೋಗ ಮತ್ತು ಸ್ಥಾನದ ಲಾಲಸೆಯ ಚಿತ್ರಣದ ಉದ್ದೇಶವನ್ನು ಸಮುದ್ರದ ನೀರಿನ ಹನಿಗಳಿಂದ ನಿರ್ಮಲಗೊಳಿಸಲಾಯಿತು. ಹಜರತ್ ಬಾದಶಹ ಘಾಝಿಗೆ ವಾಸ್ತವ ಸ್ಥಿತಿಯನ್ನು ಅರುಹಲಾಯಿತು. ಅವರಿಗೆ ತಿಳಿಹೇಳಿದ್ದೇನೆಂದರೆ ಒಂದು ವೇಳೆ ಈ ಪ್ರೇಮ ಪಾತ್ರ ಪುತ್ರನಿಗೆ ಬಾಹ್ಯ ಸ್ವರೂಪದಲ್ಲಿ ಅಲ್ ಬರ್ಝ್ ಮತ್ತು ಅಲ್‌ವಂದ್‌ನ ಪರ್ವತಗಳನ್ನು ಹಿಡಿದೆತ್ತಿ ತೆಗೆದುಕೊಂಡು ಹೋಗುವುದು ತೀವ್ರವಾದ ಕಷ್ಟದ ಕೆಲಸವೆಂದು ತಿಳಿಯುವುದಾದಲ್ಲಿ ಈ ಎರಡು ಕ್ಷೇತ್ರಗಳ ಪಾವಿತ್ರ್ಯ ಹಾಗೂ ಗೌರವಪೂರ್ಣ ಹಾದಿಯನ್ನು ಕ್ರಮಿಸುವುದು ಎಲ್ಲಾ ಬುದ್ಧಿವಂತರ ಕ್ರಿಯೆ ಹಾಗೂ ಉಭಯಲೋಕಗಳ ಪುಣ್ಯಪ್ರಾಪ್ತಿಯ ಹುಂಡಿಯಾಗಿದೆ

ಮತ್ತು ಉಭಯಲೋಕಗಳ ಸುಸಂಬದ್ಧತೆ ಮತ್ತು ಸ್ಥಾನಮಾನದ ಅಭಿವೃದ್ಧಿಯ ಅತ್ಯಮೂಲ್ಯವಾದ ಸಂಪತ್ತಾಗಿದೆ. ಆದುದರಿಂದ ಬಹಳ ಮುಖ್ಯವಾದ ಉದ್ದೇಶ ಹಾಗೂ ಬಹಳ ಪ್ರಮುಖವಾದ ಅಪೇಕ್ಷೆಯೇ ಇಚ್ಛೆ ಎಂದು ಪರಿಗಣಿಸುತ್ತಾ ನಾವು ದೂರವನ್ನು ಸಮೀಪದ ಮೇಲೆ ಹಾಗೂ ಅಗಲುವಿಕೆಯನ್ನು ಮಿಲನದ ಮೇಲೆ ಪ್ರಾಶಸ್ತ್ಯವನ್ನು ನೀಡುತ್ತಾ ಪವಿತ್ರ ಹಾದಿಯಲ್ಲಿ ಹೆಜ್ಜೆಯನ್ನು ಇಡುವುದು ಎಲ್ಲಾ ರೀತಿಯ ಪವಿತ್ರ ಕಾರ್ಯವನ್ನು ಒಟ್ಟುಗೂಡಿಸುವುದು ಹಾಗೂ ಅತ್ಯಂತ ಪುಣ್ಯದ ಫಲವನ್ನು ಪ್ರಾಪ್ತಿಯಾಗುವುದಕ್ಕಿಂತ ಉತ್ತಮ ಎಂದು ತಿಳಿದು ಈ ಸಂದರ್ಭದಲ್ಲಿ ಕತ್ತಲಿನಂತಹ ಕತ್ತಲಿನ ನೋಟವನ್ನು ಈ ಎರಡು ಪವಿತ್ರ ಸ್ಥಳಗಳ ಸಾಂಪ್ರದಾಯಿಕ ಮಣ್ಣನ್ನು ಕಣ್ಣಿನ ಸುರ್ಮಾ ಎಂದು ಬಳಸಲಾಗುವುದು. ಅಲ್ಲಿನ ಸೂರ್ಯಕಿರಣಗಳು ಮತ್ತು ಬೆಳಕನ್ನು ಬೀರುವ ಧಾನ್ಯದ ರಾಶಿಯಲ್ಲಿ ಹುಡುಕಿ ಆಯ್ಕೆ ಮಾಡುವುದಾಗಿದೆ ಹಾಗೂ ಸೂರ್ಯನ ಬೆಳಕಿಗಿಂತ ಹೆಚ್ಚು ಬೆಳಕು ಮತ್ತು ಪ್ರಕಾಶವನ್ನು ಬೀರುವುದಾಗಿದೆ.

ನಾಲಿಗೆ ಮತ್ತು ಹೃದಯವನ್ನು ಆ ಸ್ವರ್ಗಸಮಾನ ದೇಶದ ಭೂಮಿ ಮತ್ತು ಆಕಾಶದ ಒಡೆಯನ ಪ್ರಶಂಸೆ, ಸ್ತುತಿ ಹಾಗೂ ಭಕ್ತಿಯಲ್ಲಿ ಕಳೆದು ಕೆಡಕು ಮತ್ತು ಪಾಪಗಳಿಂದ ಬಿಡುಗಡೆ ಕೊಡಿಸುವ ಹಜರತ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರವರ ಮೇಲೆ ದರೂದ್ ಮತ್ತು ಸಲಾಮ್‌ನ ಮೂಲಕ ಉನ್ನತ ಅಸ್ತಿತ್ವ ಮತ್ತು ಶುಭ್ರ ನಿರ್ಮಲ ಒಡೆಯನ ಕೃಪಾಶೀರ್ವಾದದಿಂದ ಸತ್ಕರ್ಮಗಳಿಂದ ಪ್ರಮುಖವಾದ ಹಾಗೂ ಸ್ತುತ್ಯರ್ಹವಾದ ನಡವಳಿಕೆಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಶ್ರೇಷ್ಠತೆ ಮತ್ತು ಮೇಲ್ಮೆಯನ್ನು ಪಡೆಯುವಂತಹದಾಗಿದೆ, ಬೆಳಕನ್ನು ಬೀರುವ ಮತ್ತು ಪ್ರಕಾಶಮಯವಾದ ಆ ಸ್ಥಳದಿಂದ ದಿವ್ಯದರ್ಶನವನ್ನು ಪಡೆಯುವ ಹೃದಯ ಹಾಗೂ ದುರ್ಬೀನಿನಂತಹ ನೋಟದ ಹಜರತ್ ಬಾದಶಹರವರು ಸಿಕಂದರ್ ಬಾದಶಹನಂತೆ ಸಿಂಹಾಸನದ ಮೇಲೆ ಆಸೀನರಾಗಿದ್ದು ಜಮ್‌ಶೀದ್ ಸುಲ್ತಾನ್‌ರವರ ರೀತಿಯಲ್ಲಿ ಉನ್ನತ ದರ್ಜೆಯನ್ನು ಪಡೆಯುವವರಾಗಿದ್ದಾರೆ. ಹಜರತ್ ಬಿಲ್ಕೀಸ್ ಬಾದಶಹ ಸಾಹಿಬಾ ಹೆಚ್ಚಿನ ಸ್ಥಾನವನ್ನು ಪಡೆಯುವವರಾಗಿದ್ದಾರೆ. ಅವರ ಇಚ್ಛೆಯ ಮೇರೆಗೆ ಇಡೀ ಪ್ರಪಂಚ ಮತ್ತು ಪ್ರಪಂಚದ ಎಲ್ಲಾ ಸಂಗತಿಗಳು ಅದರಲ್ಲಿಯೂ ವಿಶೇಷವಾಗಿ ಬಾಹ್ಯ ಸ್ವರೂಪದಲ್ಲಿ ಆ ಸಮೃದ್ಧಿಯ ಫಲವನ್ನು ನೀಡುವಂತಹ ಮತ್ತು ಆಂತರ್ಯದಲ್ಲಿ ಸದ್ಗತಿಯ ಬೆಳೆಯನ್ನು ಪಡೆಯುವವರಾಗಿದ್ದಾರೆ. ಅವರ ಬಯಕೆಯನ್ನು ಅಂಗೀಕರಿಸುವ ಉದ್ದೇಶದಿಂದ ಸಂಪೂರ್ಣ ಮಗ್ನತೆಯಿಂದ ಆಲಿಸಿ ನಂತರ ಆ ಪ್ರಯಾಣದ ಸಿದ್ಧತೆಯ ಸಲುವಾಗಿ ಅಗತ್ಯ ಸಾಮಾನುಗಳ ಸಿದ್ಧತೆಯನ್ನು, ಆ ಸಿದ್ಧಪಡಿಸಿದ ಎಲ್ಲಾ ವಸ್ತುಗಳನ್ನು ದೊರಕಿಸಿ ಮತ್ತು ಬಹಳ ಸಂತೃಪ್ತಿಯಿಂದ ವ್ಯವಸ್ಥೆ ಮಾಡಲಾಯಿತು ಹಾಗೂ ಅವರ ಸಹವರ್ತಿಗಳಾಗಿ ಅಲ್ಲಮಾ ಜಮಾನ್ ಇಬ್ರಾಹಿಮ್‌ಖಾನ್‌ರವರನ್ನು ಜಮಾದಿವುಲವಲ್ ಮಾಹೆಯ

ಎರಡನೆಯ ತಾರೀಕಿನಂದು ಮೇಲ್ಕಂಡ ಮಹಾನುಭಾವರ ಉನ್ನತವಾದ ಉದ್ದೇಶದ ಸಲುವಾಗಿ ಕಳುಹಿಸಲಾಯಿತು ಮತ್ತು ಸ್ವತಃ ತಮ್ಮ ಘನತೆ ಮತ್ತು ವೈಭವದ ಅದೃಷ್ಟದೊಂದಿಗೆ ರಾಜಧಾನಿಯಿಂದ ಒಂದೂವರೆ ಮೈಲಿ ದೂರದಲ್ಲಿರುವ ಮೌಜೆ ತಕೂನದವರೆಗೆ ತಲುಪಿಸಿ ವಾಪಸ್ ಮರಳಿದರು ಮತ್ತು ನಿರಂತರವಾಗಿ ಈ ಪ್ರಯತ್ನ ಹಾಗೂ ಸೃಷ್ಟಿಯ ಅನ್ವೇಷಣೆಯಲ್ಲಿ ಪ್ರವಾದಿಗಳ ರೀತಿಯಲ್ಲಿ ಮಾರ್ಗದರ್ಶನವನ್ನು ನೀಡುವ ರಸೂಲ್‌ಗಳ ರೀತಿಯಲ್ಲಿ ನ್ಯಾಯಪರ ನೀತಿಯನ್ನು ನುಡಿಯುವ ದೈವ ಸಹಾಯದ ವಿಜಯದ ಬೆಂಬಲವನ್ನು ನೀಡುವ ದೇವರ ಆರಾಧಕರ ಪವಾಡವನ್ನು ವಿಶೇಷವಾಗಿ ಪರಿಗಣಿಸಿದರು. ಪ್ರವಾದಿತ್ವದ ಮಾರ್ಗದರ್ಶನವನ್ನು ಪಡೆಯುವ ಸಲುವಾಗಿ ಸಮುದಾಯದ ಅರಿವಿಗೆ ಪ್ರಕಟಣೆ ಮತ್ತು ಶರೀಯತ್‌ನ ಕಾನೂನಿನ ಬೆಂಬಲದಿಂದ ಹಾಗೂ ಅಲ್ಲಾಹನ ಆದೇಶದ ಅನುಸಾರ ಸಾಮಾನ್ಯ ಜನತೆ ಹಾಗೂ ವಿಶೇಷ ಮಾನ್ಯತೆ ಪಡೆದ ಜನತೆಯವರೆಗೂ ತಲುಪಿಸಿದರು. ವಿವಿಧ ಪಂಗಡ ಹಾಗೂ ಸಮುದಾಯದವರ ಮಾರ್ಗದರ್ಶನದ ಸಲುವಾಗಿ ಪರಿಚಿತರ ಸಹಕಾರವನ್ನು ಪಡೆದರು ಹಾಗೂ ಅಸಹಾಯಕ ಮತ್ತು ಒಳಿತನ್ನು ಕೋರುವವರ ಕಡೆ ಸನ್ನೆ ಮಾಡುವ ದೀನರಿಗೆ ನೆರವಾದರು. ಒಟ್ಟಾರೆ ಹಜರತ್ ಮೂಸಾ ಅಲೈಹಿಸ್ಸಲಾಮ್‌ರವರು ಅಲ್ಲಾಹನ ಕರುಣೆ ಮತ್ತು ದಯೆಯಿಂದ ತಮ್ಮ ಮೇಲೆ ಹಾಗೂ ನಮ್ಮ ಪ್ರವಾದಿಯವರಾದ ಹಜರತ್ ಮೊಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರವರ ಮೇಲೆ ಅಲ್ಲಾಹನ ಮೇಲ್ಮೆ ಮತ್ತು ದರಬಾರಿನಲ್ಲಿ ಇನಾಮು ಮತ್ತು ಕೊಡುಗೆಗಳನ್ನು ನೀಡುವವನಾಗಿದ್ದಾನೆ. ಓ ನನ್ನ ಒಡೆಯನೇ ನಮಗೆ ಸಹಾಯಕರನ್ನು ನೀಡು ಎಂಬ ಅವರ ಬೇಡಿಕೆಯ ಅನುಸಾರ ಓ ನನ್ನ ಒಡೆಯನೇ ನಮ್ಮ ವಂಶದ ಪೈಕಿ ನಮಗೆ ಒಬ್ಬ ಸಹಾಯಕನನ್ನು ನೀಡು. ನನ್ನ ಸಹೋದರ ಹಾರೂನನಿಗೆ ಅವರ ಮೂಲಕ ನನಗೆ ಶಕ್ತಿ ಮತ್ತು ಬಲವನ್ನು ನೀಡು ಹಾಗೂ ಅವರಿಗೆ ನನ್ನ ವಿಷಯದಲ್ಲಿ ಸಹಯೋಗಿಯನ್ನಾಗಿ ಮಾಡು. ನಾವು ನಿನ್ನ ಅನಂತಾನಂತ ಸ್ತುತಿಯನ್ನು ಮಾಡುತ್ತೇವೆ ಮತ್ತು ಅನಂತಾನಂತ ಸ್ಮರಣೆಯನ್ನು ಮಾಡುತ್ತೇವೆ. ಉನ್ನತವಾದ ಹಣೆಬರಹವನ್ನು ಬಾದಶಹನಷ್ಟು ಎತ್ತರದ ಸ್ಥಾನ ಮಾನ ಮತ್ತು ಉನ್ನತವಾದ ವೈಭವವನ್ನು ಹೊಂದಿರುವ ಅರಸನಿಗೆ ಧರ್ಮದ ಕಾಣಿಕೆಯನ್ನು ನೀಡು ಮತ್ತು ಪ್ರವಾದಿಯವರ ಸುನ್ನಗಳ ಧಾನ್ಯದ ರಾಶಿಯಿಂದ ತುತ್ತನ್ನು ಆಯ್ದು ಕೊಳ್ಳುವ ಅವಕಾಶವನ್ನು ನೀಡು ಹಾಗೂ ಸೈನ್ಯದ ಮಾರ್ಗದರ್ಶನ ಮಾಡಬೇಕಾದಂತಹ ದೇಹ ದಾರ್ಡ್ಯತೆ ಮತ್ತುಬುದ್ಧಿಯ ಸದ್ಬಳಕೆಯ ಅವಕಾಶವನ್ನು ನೀಡು. ಅನೇಕ ಸಂದರ್ಭಗಳಲ್ಲಿ ಲೇಖನಿಗೆ ಬರವಣಿಗೆಯ ಕರ್ತವ್ಯದಿಂದ ಪರಿಚಯವಾಗದಂತೆ ಇಡೀ ಲೋಕದಲ್ಲಿ ಪಿತೂರಿ ಹಾಗೂ ಹೃದಯದಲ್ಲಿ ನೆಲೆಸಿಗಲು ಮತ್ತು ನಿರ್ಮಾಣದ ಕಾರ್ಯದಲ್ಲಿ ಒಂದು ಕ್ಷಣ ಕೂಡ ಪ್ರಯತ್ನಶೀಲತೆಯಿಂದ ಸಾಧ್ಯವಿಲ್ಲ ಮತ್ತು ಸಂಘರ್ಷದ ಕ್ಷೇತ್ರದಲ್ಲಿ ಗಾಳಿಯಲ್ಲಿ

ಗುದ್ದಾಡುವಂತಾಗುತ್ತದೆ. ಈ ವಿಷಯದಲ್ಲಿ ಈ ಕ್ಷೇತ್ರಗಳಲ್ಲಿ ಸೂಕ್ತವಾದ ತೀರ್ಮಾನವನ್ನು ಕೈಗೊಳ್ಳುವಂತಹ ಧೈರ್ಯದ ಅನ್‌ಖಾ ಎಂಬ ಕಾಲ್ಪನಿಕ ಪಕ್ಷಿಯಂತೆ ಭಕ್ತರ ಕಾರ್ಯನಿರ್ವಹಣೆ ಮಾಡುವಂತಹ ಹಾಗೂ ಆಶ್ರಯಹೀನರನ್ನಾಗಿ ಮಾಡುವ ಹಾಗೂ ಅದರ ತಲಾಶಿನಲ್ಲಿ ಗರುಡನಂತೆ ಜನತೆಯ ಬಯಕೆ ಮತ್ತ ಉದ್ದೇಶದ ರೋಮ ಹಾಗೂ ರೆಕ್ಕೆಗಳನ್ನು ತೆರೆದು ವಿಸ್ತರಿಸುವನು.

ಪ್ರಕೃತಿಯಲ್ಲಿ ಅದೊಂದು ಕೆಟ್ಟ ಕಾರ್ಯವೆಂದು ಕಂಡು ಬರುವುದು. ಹಜರತ್ ಬಾದಶಹರವರು ಪ್ರತಿ ನಿತ್ಯವೂ ನಗರದ ವಸತಿ ಪ್ರದೇಶ ಹಾಗೂ ವಿದ್ಯೆಯ ಅಭಿವೃದ್ಧಿ ಮತ್ತು ಸುಧಾರಣೆ ಹಾಗೂ ಮನನೋಯಿಸುವ ಕಷ್ಟಗಳನ್ನು ಪರಿಹರಿಸಿ ನಗರಗಳನ್ನು ವಿನಾಶ ಮಾಡುವವರನ್ನು ದೂರವಿಟ್ಟು ಮನುಷ್ಯತ್ವದ ಒಳಿತನ್ನು ಬಯಸುವವರನ್ನು ಮುಂದಿಟ್ಟು ಸ್ವಭಾವತಃ ವಿಮರ್ಶಕ ಹಾಗೂ ಅತ್ಯಂತ ಗಂಭೀರ ಸ್ವಬಾವದಿಂದ ಘನತೆಯನ್ನು ಹೊಂದಿದವರಾಗಿದ್ದರು. ಆದುದರಿಂದ ಹಗಲು ರಾತ್ರೆ ತಮ್ಮ ಅತಿ ಧೈರ್ಯದ ವ್ಯಕ್ತಿತ್ವ, ಕರುಣೆ, ದಯೆ ಮತ್ತು ಸಹೋದರತ್ವ ಹಾಗೂ ಮೃದುತ್ವದ ಬೆರಳಿನಿಂದ ದೀನ ದಲಿತರು ಮತ್ತು ಅಸಹಾಯಕ ಜನತೆಯ ಅಪಾರ ರಹಸ್ಯಗಳನ್ನು ವಿಶಾಲಗೊಳಿಸುತ್ತಿದ್ದು ರಾಜ್ಯದ ಸಂಗತಿಗಳನ್ನು ಸುಸೂತ್ರವಾಗಿ ಪರಿಹರಿಸಿ ರಾಜ್ಯಾಡಳಿತದ ಕಷ್ಟಕರವಾದ ಸಂಗತಿಗಳ ಕಗ್ಗಂಟನ್ನು ಸಮರ್ಪಕವಾದ ರೀತಿಯಲ್ಲಿ ಬಗೆಹರಿಸುತ್ತಿದ್ದರು ಹಾಗೂ ಬಂಗಾರದಂತಹ ಆಲೋಚನೆಗಳು ಮತ್ತು ದೂರದೃಷ್ಟಿಯುಳ್ಳ ಬುದ್ಧಿವಂತಿಕೆಯನ್ನು ಹೊಂದಿದ್ದ ಇಬ್ರಾಹಿಮ್ ಖಾನ್‌ರವರ ಸೂಕ್ತ ಅಭಿಪ್ರಾಯದಂತೆ ಅವರ ಬೆಂಬಲಿಗರು ಅತ್ಯಂತ ಬುದ್ಧಿಶಕ್ತಿಯನ್ನು ಹೊಂದಿದ್ದು ಉತ್ತಮ ಚಿಂತನೆಯನ್ನು ಹೊಂದಿದ್ದ ಹಾಗೂ ಅನ್ವೇಷಕ, ಚಿಕಿತ್ಸಕ ವ್ಯಕ್ತಿಗಳ ದೃಷ್ಟಿಯನ್ನು ಹೊಂದಿದ್ದು ಅವರ ವ್ಯಕ್ತಿತ್ವವು ಅತ್ಯಂತ ಸಮಂಜಸವಾದ ತೂಕದ ವ್ಯಕ್ತಿತ್ವವಾಗಿತ್ತು. ಸಫಲತೆಯ ಧ್ವಜವಾಹಕ ಮತ್ತು ಪ್ರಯಾಣದಲ್ಲಿ ಒಳಿತಿನ ಆಕಾಂಕ್ಷಿ ಹಾಗೂ ಧಾರ್ಮಿಕವಾಗಿ ಹಿರಿಮೆ ಹೆಗ್ಗಳಿಕೆ ಸ್ಥಾನಮಾನದ ಗಾಜನ್ನು ನಿರ್ಲಕ್ಷ್ಯ ಹಾಗೂ ಅಲಕ್ಷ್ಯದ ಕಲ್ಲಿನಿಂದ ಚೆಚ್ಚಿದ. ಈ ಕಾರಣದಿಂದ ಹಜರತ್ ಬಾದಶಹ ಗಾಝಿ ಅರ್ಪಣಾಭಾವದ ಆಸ್ತಿಯ ಅಹವಾಲು ಮತ್ತು ಅಣು ಅಣುವಿನ ವಸ್ತುಗಳ ಸಂಗತಿಯನ್ನು ಅರಿತವರಾಗಿದ್ದಾರೆ. ಬಹಳ ಹೆಚ್ಚಿನ ಅಲೋಚನೆ ಮಂತ್ರಾಲೋಚನೆಯನ್ನು ಮಾಡಿದ್ದು ಹಾಗೂ ವಿಶದವಾಗಿ ಅನ್ವೇಷಣೆ ಮತ್ತು ಪರಿಶೀಲನೆಯ ಮೂಲಕ ಅಭಿಮಾನಿಗಳ ರೀತಿಯ ವಸ್ತುಸ್ಥಿತಿ ಮತ್ತು ಆಚಾರವಿಚಾರಗಳನ್ನು ಪರಿಶೀಲನೆ ಮಾಡಿ ವಿಚಾರವನ್ನು ತಿಳಿಸಿದ್ದರು. ಅಷ್ಟೇ ಅಲ್ಲದೆ ಸಂಕಷ್ಟ ಮತ್ತು ಕಳವಳದ ಲೋಕದಲ್ಲಿ ಮುಳುಗಿದ ಜನರ ನೆರವಿಗಾಗಿ ಸಹಾಯ ನೀಡುವ ಹಾಗೂ ಸಂಕಷ್ಟ ಮತ್ತು ಉದ್ವಿಗ್ನತೆಯ ಹಾಗೂ ಬಡತನ ಮತ್ತು ಅಸಹಾಯಕತೆಯ ಸರಪಳಿಯಿಂದ ಕಟ್ಟಿ ಹಾಕಲ್ಪಟ್ಟ ವ್ಯಕ್ತಿಗಳಿಗೆ ಅದರಿಂದ ಮುಕ್ತಿ

ಕೊಡಿಸುವ ಸಲುವಾಗಿ ಅಂತಹ ಜನರ ಮೂಲಕ ಯಾವುದೇ ಅನ್ವೇಷಣೆ, ಪರೀಕ್ಷೆ ಮಾಡದೆ ಅಬ್ದುಲ್ ಹಮೀದ್‌ರವರ ಸಹಾಯ, ನೆರವು ಮತ್ತು ಮಾರ್ಗದರ್ಶನದ ಮೂಲಕ ಅವರ ಹಣೆಯ ಮಧ್ಯದಲ್ಲಿ ಇಸ್ಲಾಮ್ ಅಂಗೀಕರಿಸಿದ ಬೆಳಕನ್ನು ಹೊರಡುವ ಚಂದ್ರ ಮತ್ತು ಅವರ ಹಣೆಯ ಮೇಲೆ ಅಧರ್ಮವನ್ನು ಅಳಿಸುವ ಮುಂಜಾವನ್ನು ಬೆಳಕಿನಿಂದ ತುಂಬುವಂತಹದ್ದಾಗಿತ್ತು.

ಅವರ ಹರಿತವಾದ ಕತ್ತಿಯು ಅಧರ್ಮೀಯರನ್ನು ಕತ್ತರಿಸಿ ಹಾಕುವ ಕಲೆಗಳಲ್ಲಿ ನಿಷ್ಣಾತವಾಗಿತ್ತು. ರಕ್ತಪಾತ, ಕೊಲೆ ಹಾಗೂ ವಿನಾಶದಲ್ಲಿ ಅವರ ಕತ್ತಿಯು ಯಾವುದೇ ಮುಲಾಜಿಲ್ಲದೆ ಕ್ರಿಯಾಶೀಲವಾಗಿದ್ದು ಅನೇಕ ವ್ಯಕ್ತಿಗಳ ಪ್ರಾಣವನ್ನು ಕೊನೆಗೊಳಿಸುವುದಾಗಿತ್ತು. ಮತ್ತು ಅವರ ಜೀವಹತ್ಯೆ ಮಾಡುವಂತಹ ಹಲ್ಲೆಯು ಕಣ್ಣಿನ ಬೆಳಕು ನೀಡುವ ಹಾಗೂ ಬಾವುಟವನ್ನು ಎತ್ತರಕ್ಕೆ ಏರಿಸುವ ಪವಾಡದಂತಹ ಹಸ್ತವಾಗಿತ್ತು. ಅವರ ಕಾರ್ಯಕ್ಷಮತೆ ರಾಜ್ಯಾಡಳಿತದ ಬಾಣವು ಪಾಪಕೃತ್ಯವನ್ನು ಕೊನೆಗೊಳಿಸುವಂತಹದಾಗಿತ್ತು. ಈ ರೀತಿಯ ಸಂಪ್ರದಾಯಗಳ ಕ್ಷೇತ್ರದಲ್ಲಿ ವಿಧ್ವಂಸಕವಾಗಿತ್ತು ಹಾಗೂ ತಮ್ಮ ಬಾಹುಬಲದ ದರ್ಶನವನ್ನು ಮಾಡಿದ್ದು ಜ್ಞಾನಾರ್ಜನೆಯ ಸಲುವಾಗಿ ಆಧಾರ, ಪ್ರಮಾಣಗಳಿಂದ ಸಾಬೀತುಪಡಿಸಲ್ಪಟ್ಟ ಬುದ್ಧಿ ಹಾಗೂ ಯುಕ್ತಿಯಿಂದ ಮತ್ತು ಆಧಾರ ಪೂರ್ವಕ ಜ್ಞಾನದಿಂದ ತುಂಬಿ ತುಳುಕುತ್ತಿದ್ದರು. ಹಾಗಾಗಿ ಆತ ಸಾವಿರಾರು ಮಂದಿ ಚಿಂತಕ ಮತ್ತು ಬುದ್ಧಿವಂತರು ಮತ್ತು ಎಲ್ಲಾ ವಿಧದ ಕರಾರು ಒಪ್ಪಂದಗಳ ಸಂದರ್ಭದಲ್ಲಿಯೂ ಅತ್ಯಂತ ಪ್ರಖರ ಮತ್ತು ಪ್ರಮುಖ ಅರಿಸ್ಟಾಟಲ್‌ನಂತೆ ಸಂಖ್ಯಾಶಾಸ್ತ್ರದ ಉತ್ತಮ ಪಂಡಿತನಾಗಿದ್ದ. ಸಭ್ಯತೆ ಹಾಗೂ ವಿದ್ಯೆಯಲ್ಲಿ ಅರಿಸ್ಟಾಟಲ್‌ನ ದೃಷ್ಟಿಯನ್ನು ಹೊಂದಿದ್ದು ಅಂತಹ ವಿದ್ಯಾಲಯದಲ್ಲಿ ಜ್ಞಾನಾರ್ಜನೆಯನ್ನು ಮಾಡಿದ್ದಂತಹ ಹಾಗೂ ಅನೇಕ ಸಂಕಷ್ಟಗಳ ಪರಿಹಾರವನ್ನು ಸೂಚಿಸುವ ಮತ್ತು ಕಷ್ಟಕರವಾದ ಕೆಲಸಗಳನ್ನು ಸರಳವಾಗಿ ಪರಿಹರಿಸುವಲ್ಲಿ ಅತ್ಯಂತ ವಿಶೇಷ ಶಕ್ತಿಯನ್ನು ಪಡೆದಿದ್ದರು. ಅಂತಹವರ ಬುದ್ಧಿ ಮತ್ತು ವ್ಯವಸ್ಥೆಯನ್ನು ಉತ್ತಮಪಡಿಸಲು ಮನುಷ್ಯಲೋಕದ ಕರ್ತವ್ಯಗಳನ್ನು ನಿರ್ವಹಿಸುವ ದೆಸೆಯಲ್ಲಿ ಅಪ್ರತಿಮ ಹಾಗೂ ಅಗಾಧ ಸಾಮರ್ಥ್ಯವನ್ನು ಹೊಂದಿದ್ದು ಅತ್ಯಂತ ಬುದ್ಧಿವಂತರ ಗ್ರಹಿಕೆಗೂ ನಿಲುಕದ ವ್ಯಕ್ತಿತ್ವವಾಗಿತ್ತು. ಅಮಾಯಕತನದಿಂದ ಪ್ರಸಂಶಾರ್ಹ ಮತ್ತು ಹೊಗಳಲ್ಪಟ್ಟ ಹಾಗೂ ವಿಷಯ ಸಂಗ್ರಹಣೆಯ ವಿಚಾರದಲ್ಲಿ ತಮ್ಮ ಸಫಲತೆಯ ದೆಸೆಯಿಂದ ಸಂಪದ್ಭರಿತರಾಗಿದ್ದರು ಮತ್ತು ಅವರ ಗುಣ ಸ್ವಭಾವವು ಆಕಾಶದ ಬುನಾದಿಯಂತೆ ಸಂರಕ್ಷಣೆಯಿಂದ ಕೂಡಿದ್ದು ನಷ್ಟದಿಂದ ದೂರವಾಗಿದ್ದವು.

ಕಾನೂನುಗಳು ಭೂಮಿಯ ಗೂಟದಂತೆ
ಚಲನೆಯಿಂದ ರಕ್ಷಣೆ ಪಡೆದಿವೆ.

ಅವರು ಎಂತಹ ಉಪಾಧ್ಯಾಯರೆಂದರೆ
ಆಕಾಶಕಾಯಗಳ ನಿರ್ವಹಣೆಯನ್ನು

ಅರಿಯುವ ಸಲುವಾಗಿ ಶಿಷ್ಯತ್ವವನ್ನು
ಕೈಗೊಳ್ಳುವುದರಲ್ಲಿ ಇನ್ನೊಬ್ಬರಿಲ್ಲ.

ಯಶಸ್ಸು ಹಾಗೂ ವಿವಿಧ ರೀತಿಯ ಮಾನ್ಯತೆಗಳು ಮತ್ತು ಔದಾರ್ಯಗಳು ಹಾಗೂ ಉನ್ನತವಾದ ದಯೆ ಮತ್ತು ಕರುಣೆಯ ಅನೇಕ ವಿಧಗಳನ್ನು ಅನುಸರಿಸದ ವಿನಃ ಅವರ ಸಲಹೆಯ ಕೀಲಿಕೈ ವಿಶ್ವದ ಬಹು ಮುಖ್ಯಕರ್ತವ್ಯಗಳ ಬೀಗಗಳನ್ನು ತೆರೆಯಲು ಸಾಧ್ಯವಾಗದು ಹಾಗೂ ಅವರ ಸಲಹೆಯ ತುಕ್ಕುನಿರೋಧ ಮನುಷ್ಯಜೀವಿಯ ಉದ್ದೇಶ ಮತ್ತು ಬೇಡಿಕೆಗಳ ಕನ್ನಡಿಯಿಂದ ಬದಿಗೆ ಸರಿಸಲಿಲ್ಲ. ಒಟ್ಟಾರೆ ವಿಷಯವೇನೆಂದರೆ ಹಜರತ್ ಬಾದಶಹ ಫಾರುಖ ಬಾದಶಾಹೀ ಅರಸೊತ್ತಿಗೆಯ ವೈಭವ, ಸನ್ಮಾನ ಹಾಗೂ ವೈಭೋಗದಲ್ಲಿ ಭಕ್ತವೃಂದದ ಜೊತೆಯಲ್ಲಿ ಜಮಾದಿಯುಸ್ಸಾನಿ ಮಾಹೆಯ ಐದನೆಯ ತಾರೀಕಿನಂದು ನೆರವನ್ನು ನೀಡುವ ಬಾವುಟಗಳನ್ನು ಎತ್ತರಕ್ಕೆ ಏರಿಸುವಂತೆ ಆಜ್ಞಾಪಿಸಿದರು ಮತ್ತು ಜನತೆಯ ಅಭ್ಯುದಯವನ್ನು ನಿರಂತರವಾಗಿ ಕಣ್ಣೆದುರಿಗಿಟ್ಟು ಹೃದಯ ಸಮುದ್ರದಲ್ಲಿ ತಲ್ಲಣಗಳಿಗೆ ಸಮಾಧಾನವನ್ನು ನೀಡುವತ್ತ ಸಕ್ರಿಯರಾದರು. ಸಯ್ಯದಿಮಸೂದ್ ಹಾದಿಯಲ್ಲಿ ಅವರು ಅಜ್ಞಾನಿ ಮತ್ತು ಶರ್ತಖಾನ್ ಶುಜಾಅತ್ ಹೊಸ್ತಿಲಿಗೆ ನಮಿಸುವ ಗೌರವವನ್ನು ಪಡೆದು ಬಾದಶಹರ ದರಬಾರಿನಲ್ಲಿ ಹಾಜರಿದ್ದಂತಹವರ ಸಮ್ಮುಖದಲ್ಲಿ ತಲುಪಿಸಲಾಯಿತು. ಒಂದು ಅವಧಿಯವರೆಗೆ ಸಲಾಬತ್ ಖಾನ್ ಮಿಯಾಂಜಿ ಮಧ್ಯವರ್ತಿ ಮತ್ತು ಸೇವಕರ ಮೂಲಕ ಗಟ್ಟಿ ನಿರ್ಧಾರದೊಂದಿಗೆ ತಲೆಯ ಮೇಲೆ ಸವಾರಿ ಮಾಡುತ್ತಿದ್ದಾನೆ ಮತ್ತು ಸೂರ್ಯನ ಕರುಣೆಯ ಬೆಳಕಿನ ನೆರವಿನಿಂದ ಹಾಗೂ ಮಿನುಗುವ ಆಕಾಶದ ಚಂದ್ರನ ಕೃಪೆಯಿಂದ ಕ್ಷಮಾರ್ಹನಾಗಿದ್ದಾನೆ ಹಾಗೂ ದುಃಖಿಯ ಹೃದಯದ ಅಂಧಕಾರದ ಕೋಣೆಯನ್ನು ಆ ಬಾದಶಹನ ಕರುಣೆ ಮತ್ತು ಕೊಡುಗೆಯ ಪ್ರೇಮದ ದೀಪದ ಕಿರಣಗಳಿಂದ ಬೆಳಕನ್ನು ಪಡೆದು ದೋಷಗಳನ್ನು ಮರೆಮಾಚಲಾಯಿತು. ಆದರೆ ದುರದೃಷ್ಟವಶಾತ್ ಅನೇಕ ತೊಡಕುಗಳು ಅವರ ಇಚ್ಛೆಯ ಪೂರೈಕೆಯಲ್ಲಿ ತೊಡಕುಗಳಾಗಿ ನಿಂತವು. ಆ ಬಿಂಕದ ಸಿಂಗಾರಿಯ ನೋಟದ ಅಮೂಲ್ಯ ಹರಳುಗಳ ಕಾಡಿಗೆಯು ಆತನಿಗೆ ಮುಕ್ತಿಯನ್ನು ನೀಡುತ್ತಿಲ್ಲ. ಆ ಭೇಟಿಯು ಬಾದಶಹರ ನೋಟಕ್ಕೆ ಸಂಪೂರ್ಣ ಬೆಳಕನ್ನು ನೀಡಲಿ ಮತ್ತು ಕಿವಿಗಳಿಗೆ ವಾಸ್ತವದಿಂದ ಲೇಪಿತವಾದ ಬುದ್ಧಿವಾದ ಮತ್ತು ಉಪದೇಶದ ಆಲಿಕೆಯಿಂದ ಆತನಿಗೆ ಸೂಕ್ತ ದಿವ್ಯದೃಷ್ಟಿ ದೊರಕಲಿ ಹಾಗೂ ಅಮ್ಮಾನ್ ಮಹಾಸಾಗರದಂತೆ ಉಪಕಾರದ ಸಮುದ್ರದ ಮುತ್ತುಗಳು ಹಾಗೂ ಅದ್ರ್ರ ಮುತ್ತುಗಳ ಚಿಪ್ಪುಗಳು ಕಂಡು ಬರಲಿ. ಆಶುಭ ಫಲಿತಾಂಶದ ನಿರೀಕ್ಷೆಯಲ್ಲಿ

ಅದೃಷ್ಟದ ಸಹಾಯ ಹಾಗೂ ಒಳ್ಳೆಯ ಅದೃಷ್ಟ ಅವರ ಶಕ್ತಿಯ ತೇಜಸ್ಸಿನ ಸಹಾಯದ ಹಾದಿಯ ಕುದುರೆ ಸವಾರನನ್ನಾಗಿ ಅವನನ್ನು ಎಳೆದು ತರಲಿ ಎಂದು ಬಯಸಿದ ಹಾಗೂ ಆಕಾಶದ ಸಂಕೇತಗಳನ್ನು ಹೊಂದಿದ ಹೊಸ್ತಿಲ ಮಣ್ಣನ್ನು ಧರಿಸಿ ಸಿಂಹಾಸನದ ಮೇಲೆ ಆಸೀನರಾದ ವ್ಯಕ್ತಿಗಳಿಗೋಸ್ಕರ ಅಸೂಯೆ ಪಡುವಂತಹ ವೈವದ ಪೀಠದ ಅಧ್ಯಕ್ಷತೆಯನ್ನು ಪಡೆದವರನ್ನು ಕಂಡು ಮತ್ಸರಕ್ಕೆ ಒಳಗಾಗುತ್ತಾರೆ ಹಾಗೂ ಅವನ ಹೇಡಿತನ ಮತ್ತು ಕೃತಘ್ನತೆಯ ಕಲೆಗಳನ್ನು ಅತ್ಯಂತ ವಿಧೇಯತೆ ಮತ್ತು ಸೇವಾ ತತ್ಪರತೆಯ ಚಿಲುಮೆಯ ಜಾರಿಯಿಂದ ಅವನ ಪ್ರಸ್ತುತ ಹಣೆಯನ್ನು ಶುದ್ಧಗೊಳಿಸಲಿ. ಸಲಾಬತ್‌ಖಾನನು ಯಾವ ರೀತಿಯಲ್ಲಿ ಈ ಅತ್ಯಂತ ಪರಾಕ್ರಮಿ ಬಾದಶಹನ ಕರುಣೆ ಮತ್ತು ದಯೆಯ ಮೇಲೆ ನಂಬಿಕೆಯನ್ನಿಟ್ಟು ಅವನ ದರಬಾರಿನ ಭಿನ್ನಾಭಿಪ್ರಾಯದ ಹಾದಿಯಲ್ಲಿ ಸುಳ್ಳಿಗೆ ಸತ್ಯದ ಹುಲ್ಲುಗಾವಲಿನಲ್ಲಿ ಯಾವುದೇ ಜಾಗ ಇರಲಿಲ್ಲ.

ಈ ರೀತಿಯಲ್ಲಿ ನಂಬಿಕೆಯಿಂದ ಕೂಡಿದ ಪುರಾತನ ಕೃತ್ಯಗಳ ಮೇಲೆ ನಂಬಿಕೆಯನ್ನಿಟ್ಟು ಪುರಾತನ ಹುದ್ದೆಗಳ ಮೇಲೆ ಪರಾಕ್ರಮಿ ಮತ್ತು ಜ್ಞಾನಿಗಳು, ಹಿರಿಯರು ಮತ್ತು ಸ್ವತಂತ್ರ ಸ್ವಬಾವದ ಸುಖೀ ಜನರು ನಿರಪೇಕ್ಷರಾಗಿದ್ದಾರೆ. ಒಟ್ಟಾರೆ ಕೆಲವು ನಾಗರೀಕರು ಸುಳ್ಳಿನ ಸರಮಾಲೆಗಳನ್ನು ಪೋಣಿಸಿ ಮತ್ತು ಮೋಸವನ್ನು ಹೆಚ್ಚು ಲಂಬಿಸಿ ಹಾಗೂ ವಾಸ್ತವತೆಯತ್ತ ತಲುಪದಂತೆ ಜ್ಞಾನ ಪರಿರಿಜ್ಞಾನಗಳಿಲ್ಲದೆ ಕರ್ತವ್ಯದಿಂದ ದೂರವುಳಿದು ವ್ಯರ್ಥ ಆಲೋಚನೆಗಳ ಸಾವಿರಾರು ಯುಕ್ತಿ ಮತ್ತು ಹವಣಿಕೆಗಳ ವ್ಯರ್ಥ ಕ್ರಿಯೆಗಳಲ್ಲಿ ತೊಡಗಿದ್ದಾರೆ. ಅಸಲಿಗೆ ಗಲಭೆ ಮತ್ತು ಆಶಂಕೆಗಳನ್ನು ಅವನ ಹೃದಯದಲ್ಲಿ ಹಾಕುತ್ತಾರೆ ಮತ್ತು ಆ ದುರದೃಷ್ಟಶಾಲಿ ವ್ಯಕ್ತಿಯಿಂದ ಸೃಷ್ಟನೆಗೊಂಡ ಸುಳ್ಳನ್ನು ನಿರ್ಮೂಲನೆ ಮಾಡುವ ಸಲುವಾಗಿ ಮತ್ತು ಆ ಅಧೈರ್ಯದ ಭ್ರಷ್ಟ ಕ್ರಿಯೆಗಳಲ್ಲಿ ತೊಡಗಿರುವವರ ವಿನಾಶ ಮತ್ತು ಆಲೋಚನೆಗಳನ್ನು ದೂರಗೊಳಿಸುವ ಸಲುವಾಗಿ ಗೌರವಾನ್ವಿತ ಕರಾರುನಾಮೆಯನ್ನು ಪ್ರಾಣಭಿಕ್ಷೆಯನ್ನು ನೀಡುವ ಸಲುವಾಗಿ ಒಳಗೊಳ್ಳುವುದು ಮತ್ತು ಕೃಪೆ ಹಾಗೂ ಉಪಕಾರಗಳ ಪ್ರತಿರೂಪವಾದ ಸಂತೋಷ ಮತ್ತು ನೆಮ್ಮದಿಯು ಒಳಗೊಳ್ಳುವಂತೆ ಹಾಗೂ ಕಳವಳಕ್ಕೆ ಒಳಗಾಗಿರುವ ವ್ಯಕ್ತಿಗಳ ಹೃದಯಕ್ಕೆ ನೆಮ್ಮದಿ ಮತ್ತು ಶಾಂತಿಯನ್ನು ನೀಡುವುದು. ಆ ಮೂಲಕ ದುಃಖಿತ ವ್ಯಕ್ತಿಗಳಿಗೆ ಸಂತೋಷವು ಪ್ರಾಪ್ತಿಯಾಗುವ ಸಮಯವು ಸನ್ನಿಹಿತವಾಯಿತು ದಾಸರನ್ನು ಅನುಗ್ರಹಿಸುವ ಮತ್ತು ಸಂಪೂರ್ಣ ಕ್ಷಮೆ ಹಾಗೂ ಕರುಣೆಯಿಂದ ಕೂಡಿದ್ದಲ್ಲಿ ಅದು ದೂರ ಉಳಿಯುವುದಿಲ್ಲ. ಹೇಡಿತನದ ವ್ಯಕ್ತಿಗಳಿಗೆ ಅವರ ಲೋಪ ಮತ್ತು ಅಧೈರ್ಯದಿಂದ ಹೃದಯದ ಕನ್ನಡಿಯನ್ನು ಶುದ್ಧಗೊಳಿಸಲಾಗುವುದು. ದೈವಭಕ್ತ ವ್ಯಕ್ತಿಗಳ ಪಾಪ ಮತ್ತು ಅಪರಾಧಗಳನ್ನು ನೀಚತನಗಳನ್ನು ಹೃದಯದ ತೋಟದಿಂದ ನಿರ್ಮೂಲನಗೊಳಿಸುವುದು ಹಜರತ್ ಬಾದಶಹ ಗಾಜಿಯವರ ಸ್ವಸ್ಥ ದೃಷ್ಟಿಯಲ್ಲಿ

ಅತ್ಯಂತ ಹೆಚ್ಚು ಒಳಿತು ಮತ್ತು ಶ್ರೇಷ್ಠತಮವಾದ ಭಕ್ತಿಯಾಗಿತ್ತು. ಅವನ ಮೋರೆಯು ಭರವಸೆಯ ಅಂಗೀಕಾರದ ಮುಖ ಮುದ್ರೆಯೊಂದಿಗೆ ಕೂಡಿದ್ದು, ಅವನ ಆಸೆಯ ತೋಟದಲ್ಲಿ ಒಪ್ಪಿಗೆಯ ತೀವ್ರತರದ ಗಾಳಿಯಿಂದ ಸಂತೋಷ ಮತ್ತು ನೆಮ್ಮದಿ ಹಸನ್ಮುಖಿಯಾದ ಮೋರೆಯಿಂದ ಕೂಡಿತ್ತು.

ಕರುಣೆಯಿಂದ ಕೂಡಿದ ಆದೇಶ ಪರಿಪಾಲನೆ ಹಾಗೂ ಕರಾರನ್ನು ಭಂಗಗೊಳಿಸಿದ ಯುದ್ಧ ಕೋರ ಜಂಭದಿಂದ ಕೂಡಿದ ದುರ್ಬೋಧನೆಯಿಂದ ಕೂಡಿದ ಸಯ್ಯದಿ ಮಸೂದ್‌ನ ಜೊತೆಯಲ್ಲಿ ಪ್ರಸ್ತುತ ಪಡಿಸಿದ.

ತೊರೆದು ಬಿಡು ತೊರೆದು ಬಿಡು
ಈ ಎಲ್ಲಾ ಕ್ರಿಯೆಗಳನು
ನೀನೇನಾದರೂ ಕಾಫರ್ ಆಗಿದ್ದಲ್ಲಿ
ದೈವಭಕ್ತನಾಗು ಮತ್ತು ವಿಗ್ರಹಾರಾಧನೆಯಿಂದ ಹೊರಬಾ
ಈ ಹುಮಾದಂತಹ ಎತ್ತರಕ್ಕೇರುವ ಪಕ್ಷಿಯ ದರಬಾರು
ಅಪನಂಬಿಕೆಯ ಸಭೆಯಲ್ಲ.
ನೀನು ನೂರು ಬಾರಿ ಪಶ್ಚಾತ್ತಾಪ ಪಟ್ಟು
ಮತ್ತೆ ಭ್ರಷ್ಟನಾದರೂ ಅದರಿಂದ ಹೊರಬಾ

ಗರ್ವ, ಜಂಬ ಮತ್ತು ಅಹಂಕಾರದ ಲೋಪದ ಪಾನಪಾತ್ರೆಯಿಂದ ಕುಡಿದು ವಿವಶನಾದ ವ್ಯಕ್ತಿಯು ಕ್ಷಮೆ ಮತ್ತು ಕೊಡುಗೆಯ ಶರಾಬಿನ ನಶೆಯಿಂದ ದೂರವಾಗಿ ದ್ರೋಹಿ ಮತ್ತು ಕೊಲೆಗಾರನ ಮೈದಾನದ ಮುಖಾಬಿಲೆಯಲ್ಲಿ ಯದ್ಧಕೋರ ವ್ಯಕ್ತಿಯು ಪರಾಕ್ರಮ ಮತ್ತು ವೀರಾವೇಷದ ಬಿಲ್ಲು ಮತ್ತು ಬಾಣವನ್ನು ಹೊರ ತೆಗೆಯಲಿ ಮತ್ತು ಇಜಿಪ್ಟಿನ ಫೆರೋನಂತಹ ಗುಣಗಳ ವಿದ್ರೋಹಿ ಮತ್ತು ಗರ್ವದ ಬೆಂಬಲಿಗನಿಗೆ ನಿಕೃಷ್ಟವಾದ ಅಪಮಾನಕಾರೀ ಬಾಣಗಳ ಕೇಂದ್ರವನ್ನಾಗಿ ಮಾಡಲಿ ಹಾಗೂ ಸೊಫಾರ್‌ನ ತರಹ ವಿನಯುವಂತಿಕೆಯ ಮೋರೆಯೊಂದಿಗೆ ಅತ್ಯಂತ ವಿನಯ ಮತ್ತು ಶರಣಾಗತಿಯೊಂದಿಗೆ ಕುಡಿಕೆಗಳಗೋಸ್ಕರವಾಗಿ ಮಣ್ಣಿನ ಕಣಗಳನ್ನು ಹಣೆಯ ಮೇಲೆ ಹಚ್ಚಿ ನಮ್ಮ ಇಚ್ಛೆಯ ಪಶ್ಚಿಮ ದಿಕ್ಕಿನತ್ತ ಮೋರೆ ಮಾಡಿ ಕಾಬಾದತ್ತ ಕೊಡುಗೆಯ ದಿಕ್ಕಿನಿಂದ ಮೋರೆಯನ್ನು ತಿರುಗಿಸದೆ ಇರಲಿ. ರಾಜಿ ಮತ್ತು ಸಂತಸದ ತಮ್ಮ ದರಬಾರಿನ ಹೊಸಿಲಿನ ಪಾವಿತ್ರ್ಯವನ್ನು ಉಳಿಸುವ ದೃಷ್ಟಿಯಿಂದ ಖಂಡಿತವಾಗಿಯೂ ಈ ದುರಾದೃಷ್ಟಶಾಲಿ ದುರ್ಬೋಧನೆಯಿಂದ ಕೂಡಿದ ಅಜ್ಞಾನಿ ಹಾಗೂ ಅನ್ಯಾಯ, ಹಿಂಸೆ ದಬ್ಬಾಳಿಕೆಯ ಉಗುರುಗಳನ್ನು ಕತ್ತರಿಸಿ ಆ ವಿದ್ರೋಹಿ ದುರ್ಗುಣದ ಹೃದಯದವನ ವೈಭವ ಮತ್ತು ವೈಭೋಗದ ಕ್ರೋಧ ಮತ್ತು ವಿನಾಶದ ಉನ್ನತವಾದ ಸ್ಥಾನವನ್ನು ಹೊಂದಿದವನಿಂದ ವಿಮುಕ್ತಿ ಸಿಗುವುದು.

ಇಲ್ಲವಾದಲ್ಲಿ ಬುದ್ಧಿಹೀನನ ಶರಾಬಿನ ಬಟ್ಟಲಿನಿಂದ ಕುಡಿದವನ ಮರ್ಯಾದೆ ಮತ್ತು ಗೌರವವು ತನ್ನಿಂದ ತಾನೇ ಶರಾಬುಖಾನೆಯ ಅಮಲಿನ ವ್ಯಕ್ತಿಗಳ ಪ್ರಾಣಹರಣಮಾಡುವ ಜನರ ಕಲ್ಲಿನಿಂದ ನುಚ್ಚುನೂರಾಗುವುದು ಮತ್ತು ಅಯೋಗ್ಯ, ಅಪಾಯಕಾರಿ ಮತ್ತು ನಿಷ್ಪ್ರಯೋಜಕ ವ್ಯಕ್ತಿಗಳ ಒಳ್ಳೆಯ ಹೆಸರು ಮತ್ತು ಶ್ರೀಮಂತಿಕೆ ಹಾಗೂ ವೈಭವದ ಕ್ರಿಯೆಗಳು ಪಂಕ್ತಿಯನ್ನು ಮುರಿಯುವಂತಹ ರೀತಿಯಲ್ಲಿರುತ್ತದೆ. ಒಳ್ಳೆಯ ಯೋಗ್ಯತೆಯುಳ್ಳ ಜನರ ಶತ್ರುತ್ವದ ಪ್ರವಾಹದಿಂದ ಅವನ ಪಾದಗಳ ಮೇಲೆ ಶರಣಾಗುವವರು. ಸಯ್ಯದ್ ಮಸೂದ್ ಈ ಅಮೂಲ್ಯ ಮತ್ತು ಸಂತಸ ಹಾಗೂ ನೆಮ್ಮದಿಯನ್ನು ತರುವ ರಾಜಾಜ್ಞೆಯನ್ನು ನಿರಾಶೆಯ ತುಟಿಗಳಿಂದ ಬುದ್ಧಿಯು ಲುಪ್ತವಾಗಿದ್ದ ಭಯ ಮತ್ತು ಉದ್ವೇಗದ ಭೂತದ ಹಾನಿ ಮತ್ತು ನಷ್ಟದ ಪಂಜದಿಂದ ಸುತ್ತುವರೆದಿದ್ದ ಖೈದಿಯವರೆಗೆ ತಲುಪಿಸಿದ. ಅಂದರೆ ದಯೆ ಮತ್ತು ಕರುಣೆಯ ಈ ರೀತಿಯ ಭರವಸೆಯನ್ನು ಬಯಸುವವನಾದ. ಯಾವ ರೀತಿ ಎಂದರೆ ಗಾಳಿಯ ಅಲೆಗಳ ಹೊಡೆತದಿಂದ ಸಮುದ್ರದಲ್ಲಿ ಮುಳುಗುವ ವ್ಯಕ್ತಿಯನ್ನು ಅದೃಷ್ಟದ ದಡದ ಮೇಲೆ ತಲುಪಿಸುವಂತೆ ಮತ್ತು ಆ ರಾಜಾಜ್ಞೆಯಂತೆ ದುಃಖ ಮತ್ತು ಕಳವಳದ ರೋಗಿಗೆ ಸಂತೋಷ ಮತು ನೆಮ್ಮದಿಯ ಲೇಹ್ಯದಿಂದ ಇಲಾಜು ಮಾಡಿದಂತೆ. ಭಿನ್ನಾಭಿಪ್ರಾಯ ಮತ್ತು ಭೇದದ ಹೆಜ್ಜೆಗುರುತುಗಳನ್ನು ಕಳವಳ ಮತ್ತು ಗಾಬರಿ, ಉದ್ವಿಗ್ನತೆ ವ್ಯಾಕುಲತೆಯ ಮೈದಾನದಲ್ಲಿ ವಿವಶನಾದ ಮತ್ತು ಗಾಬರಿಯಿಂದ ಓಡಾಡುವವನಂತೆ ಹೃದಯಭೇದಕವಾದ ಭಾಷಣದ ಮೂಲಕ ದೂರಗೊಳಿಸಿದ. ಬಾದಶಹನ ಸಂತೋಷ ಮತ್ತ ನೆಮ್ಮದಿಯ ಬಾಗಿಲುಗಳ ಮೇಲೆ ಅಂಟಿಸಿದ ಸಾವಿರಾರು ತೋರಿಕೆಯ ಮಾತುಕತೆಗಳನ್ನು ಒಳ್ಳೆಯ ಸಂವಾದದ ಕೀಲಿಕೈಗಳ ಮೂಲಕ ಆ ನೀಚತನ ಮತ್ತು ಅವಮಾನದ ಸೆರೆಮನೆಯಲ್ಲಿ ಸೆರೆಯಾಳನ್ನಾಗಿಸಿದ.

ಹಜರತ್ ಬಾದಶಹ ಗಾಝಿಯ ಶುಭಾಗಮನದಿಂದ ಜಮ್ಗಲ ಮೌಜೆಯ ಅರಣ್ಯ ಮತ್ತು ಮೈದಾನಗಳು ಕಾಶ್ಮೀರದ ಉದ್ಯಾನವನಗಳಂತೆ ಸಿಂಗರಿಸಲ್ಪಟ್ಟವು ಹಾಗೂ ಭಗವಂತನ ಆ ಭೂಮಿಯಲ್ಲಿ ವಾಸಿಸುತ್ತಿದ್ದವರ ಹೆಸರುಗಳ ಮೇಲೆ ವಿಜಯ ಮತ್ತು ಸಂತೋಷ ಹಾಗೂ ನೆಮ್ಮದಿಯ ಸಂದೇಶವು ಬರೆಯಲ್ಪಟ್ಟಿತು. ಮಾರನೆಯ ದಿನ ಸಲಾಬತ್‌ಖಾನನು ತನ್ನ ಇಡೀ ಸೈನ್ಯವನ್ನು ತಯಾರು ಮಾಡಿ ಸುಸಂಬದ್ಧವಾಗಿ ಹಜರತ್ ಬಾದಶಹರವರ ದರಬಾರಿನ ಹೊಸ್ತಿಲನ್ನು ಮುತ್ತಿಕ್ಕುವ ಸಲುವಾಗಿ ಹಣೆಯನ್ನು ಕಣ್ಣೀರಿನಿಂದ ತೊಳೆದ ಕನ್ನಡಿಯಂತೆ ಸೂರ್ಯನ ಕಿರಣಗಳ ದೆಸೆಯಿಂದ ಜಮ್‌ಶೀದ್‌ನ ಬಟ್ಟಲಿನಂತೆ ಮರ್ಯಾದೆಯ ಕಾರಣದಿಂದ ಮಾಡಲ್ಪಟ್ಟ ಮತ್ತು ಹಜರತ್ ಬಾದಶಹ ಘಾಝಿಯು ದಯೆ ಮತ್ತು ಕರುಣೆಯ ಕಾಳನ್ನು ಅವನ ಹೃದಯದ ಕಳವಳಕ್ಕೆ ಇನಾಮಿನ ರೂಪದಲ್ಲಿ ಕರುಣಿಸಿದರು ಮತ್ತುಅವನ ಹೃದಯಕ್ಕೆ ಗೌರವ ಮತ್ತು

ಬಹುಮಾನಗಳ ಕೊಡುಗೆಯಿಂದ ಪುರಸ್ಕಾರದ ದೆಸೆಯಿಂದ ಅವನ ಮರ್ಯಾದೆಯನ್ನು ಹೆಚ್ಚಿಸಿದರು. ಅತ್ಯಂತ ಪರಾಕ್ರಮದ ಸ್ಥಾನದ ವ್ಯಕ್ತಿಯ ವೈಭವ ಪ್ರದರ್ಶನವು ಹಾಗೂ ಉನ್ನತ ಸ್ಥಾನದ ಸಿಂಹಾಸನದ ಮೇಲೆ ಆಸೀನರಾದ ವ್ಯಕ್ತಿಗಳ ಆಯ್ಕೆಯಾಗಿರುತ್ತದೆ. ಕರುಣೆ ಮತ್ತು ಅಮೂಲ್ಯ ಹಾಗೂ ಅದ್ಭುತವಾದ ಜವಾಹಿರಿಗಳು ಮತ್ತು ಅತ್ಯಂತ ವೈಭೋಗದ ಗೌರವಾನ್ವಿತವಾದ ಕೊಡುಗೆಗಳಿಂದ ಅವನನ್ನು ಸತ್ಕರಿಸಿದರು.

■

*

ಅಧ್ಯಾಯ-೧೦

ವಿದ್ರೋಹಿಗಳ ಬಂಡು ಮತ್ತು ದಮನ

ಮೃದುತ್ವ ಮತ್ತು ಸಮಾಧಾನ ಹಾಗೂ ಸಂತೃಪ್ತಿಯ ದೆಸೆಯಿಂದ ಈ ದುರ್ಗುಣಗಳ ಮೈದಾನದಲ್ಲಿ ನೆಲೆಸಿದ್ದವನಿಗೆ ಹೇಳಿದರು. ನವಾಬ್ ಅಬ್ದುಲ್ ರಹೀಮ್ ಬೆಹಲುಲ್ ಖಾನ್ ಆತ್ಮಾಭಿಮಾನ ಮತ್ತು ಪ್ರಾಣಾರ್ಪಣೆ ಹಾಗೂ ನಂಬಿಕೆ ಮತ್ತು ಬೆಂಬಲಗಳ ಬೆಳಕನ್ನು ಹರಡುವ ವ್ಯಕ್ತಿಗಳಾಗಿದ್ದಾರೆ. ಅವರ ಹಣೆಯ ಮೇಲೆ ನಂಬಿಕೆ ಮತ್ತು ಕೃತಜ್ಞತೆಯ ಹೊಳೆಯುವ ಮತ್ತು ಬೆಳಗುವ ಚಂದ್ರ ಕಾಣ ಸಿಗುತ್ತಾನೆ ಮತ್ತು ಅವನ ನಂಬಿಕೆ ಕೆಂಪಗೆ ಹೊಳೆಯುವ ಚಿನ್ನವನ್ನು ನಾಚಿಸುವಂತಹ ಮೌಲ್ಯಮಾಪನ ಮತ್ತು ಒಳ್ಳೆಯ ಹೆಸರಿನ ಪ್ರಚಲಿತವಿರುವ ದೃಷ್ಟಿಗಳಲ್ಲಿ ಅತ್ಯಂತ ನಂಬಿಕೆಗೆ ಅರ್ಹ ಎಂದು ಪ್ರಶಂಸಿಸಲ್ಪಡುತ್ತಾನೆ. ಆತನ ತೂಕದ ವ್ಯಕ್ತಿತ್ವ ಬಂಡೆಗಲ್ಲಿನಂತಹ ಕರುಣೆ ಅಪಾರ ಕೊಡುಗೆಗಳು ಮತ್ತು ದೀನ ಪ್ರಾರ್ಥನೆಗಳಿಂದ ಆವೃತವಾದಂತೆ ಮಾಡುತ್ತವೆ. ಅವನ ಅ ಸತ್ಕರ್ಮಗಳು ಮತ್ತು ಸದ್ಗುಣಗಳು ನೇರ ಸನ್ಮಾರ್ಗದಲ್ಲಿ ಚಲಿಸುವಂತೆ ಮಾಡುವ ಅನ್ವೇಷಣೆ ಮತ್ತು ಹೆಜ್ಜೆಗಳಿಂದ ಹಗಲು ಮತ್ತು ರಾತ್ರೆಯನ್ನು ಅಳೆಯುವಂತೆ ಮಾಡಲಾಗುತ್ತದೆ ಮತ್ತು ಅವನ ಪ್ರೇಮ ಮತ್ತು ಅನುಸರಣೆಯ ಮಹಲಿನ ನಿರ್ಮಾಣ ಮತ್ತು ಇರಾದೆಯ ಹಸ್ತದಿಂದ ಮಾಡಲ್ಪಡಲಾಗುವುದು. ಅವನ ಭಿನ್ನಬಿಪ್ರಾಯ ಮತ್ತು ಜಗಳಗಳ ಪರದೆಯನ್ನು ಈ ಪ್ರೇಮ ಮತ್ತು ಗೆಳೆತನದ ವಧುವು ಈ ರೀತಿಯಲ್ಲಿ ಅಡ್ಡಿ ಆತಂಕದಿಂದ ಕೂಡಿದೆ. ನಡುವಿನಿಂದ ಆರಂಭಿಸಿದಲ್ಲಿ ಆ ಯುದ್ಧ ಮತ್ತು ಸಂಘರ್ಷದ ಅಂಧಕಾರವು ಸತ್ಯ ಪ್ರೇಮ ಮತ್ತು ಗೆಳೆತನದ ದೀಪವನ್ನು ಬೆಳಗಿಸಿ ಹೃದಯದ ಮಹಲಿನಿಂದ ದೂರಗೊಳಿಸುವುದು. ಧರ್ಮಭ್ರಷ್ಟತೆ ಮತ್ತು ಅರಾಜಕತೆಯ ಕಟ್ಟಡಗಳ ಕೆಡವಲು ಮತ್ತು ನಾಶ ಮಾಡುವುದು ಘಜ್ವ ಮತ್ತು ಜಹಾದ್ ಎಂಬ ಧರ್ಮ ಯುದ್ಧಗಳ ರೀತಿಯಲ್ಲಿ ಆತ್ಮ ಮತ್ತು ಲೋಕವನ್ನು

ನಿರಂತರವಾಗಿ ಸತ್ಯ ಹಾಗೂ ವಾಸ್ತವಿಕತೆಯ ದುರ್ಬೀನನ್ನು ಮನಮೆಚ್ಚುವ ನಡವಳಿಕೆಯನ್ನು ಹೊಂದಿದ ಜನರ ಆಯ್ಕೆ ಮತ್ತು ಉದ್ದೇಶವಾಗಿದೆ. ಒಟ್ಟಾರೆ ಕರುಣೆ ಮತ್ತು ಮೃದುತ್ವದ ಉದ್ಯಾನವನವು ಭಕ್ತವತ್ಸಲ ಮತ್ತು ದಾಸಾನುಗ್ರಹಿ ಮಳೆಯ ಹನಿಗಳಿಂದ ಹಚ್ಚ ಹಸಿರು ಮತ್ತು ಅತಿ ಸುಂದರವನ್ನಾಗಿಸಲಿ.

ಮಳೆಯ ಹನಿಗಳಿಂದ ಕೂಡಿ ಪಚ್ಚೆಹಸಿರಿನಿಂದ ಕಂಗೊಳಿಸುತ್ತಿದ್ದು ಮನಸೂರೆಗೊಳ್ಳುತ್ತಿದ್ದ ಆ ಉದ್ಯಾನವನ ಮತ್ತು ತೋಟದ ಅತ್ಯಂತ ಅಪ್ತ ಗೆಳೆತನವನ್ನು ಹೊಂದಿದ ಸಂತುಲಿತ ಮಾರುತದ ಅಲೆಗಳಿಂದ ಮುಗುಳು ನಗೆ ಬೀರುವ ಸಲುವಾಗಿ ವಂದನೆಗಳನ್ನು ಅರ್ಪಿಸುವ ಸಲುವಾಗಿ ಶಿರವನ್ನು ಬಾಗಿಸುವಂತಿತ್ತು. ಆ ದೇಶವು ಕರ್ನಾಟಕದ ಸಲುವಾಗಿ ಅತ್ಯಂತ ಪ್ರೀತಿಪೂರ್ವಕ ಹೃದಯದ ಆಸೆ ಮತ್ತು ಆಲೋಚನೆಯ ಸ್ಥಿತಿಗಿಂತಲೂ ಹೆಚ್ಚು ದೂರವಿದೆ ಮತ್ತು ವಿಶಾಲವಾಗಿದೆ. ಅದೆಂತಹ ದೇಶವೆಂದರೆ ಸೌಂದರ್ಯ ಮತ್ತು ಯೌವನಿಗರ ಭೇಟಿ ಮತ್ತು ಮಿಲನಕ್ಕಿಂತಲೂ ಹೆಚ್ಚುಮನಮೋಹಕವಾಗಿದೆ. ಬಲಿದಾನ ನೀಡುವ ಅಭಿಮಾನಿ ಬಳಗದ ಮತ್ತು ಸ್ವಭಾವದ ಒಳಿತನ್ನು ಬಯಸುವ ಶುಭಾಕಾಂಕ್ಷಿ ವ್ಯಕ್ತಿಯು ಮಜಬೂತಾದ ಗಂಡಿಗೆ ಕೊಡುಗೆಗಳನ್ನು ಕರುಣಿಸಲಾಗುತ್ತದೆ. ಹೀಗೆ ಈ ರೀತಿಯ ಮುತ್ತು ರತ್ನ ವಜ್ರ ವೈಢೂರ್ಯಗಳಿಂದ ಸಂಪದ್ಭರಿತವಾಗಿರುವ ಆ ಭೂಮಿಯನ್ನು ಕಲ್ಲಿನಂತೆ ಶಕ್ತಿಶಾಲಿಯಾಗಿರುವ ಸೈನ್ಯ ಮತ್ತು ದೈತ್ಯದೇಹಿ ಸೈನಿಕರ ತಂಗುದಾಣವನ್ನಾಗಿ ಮಾಡಲಿ. ಆ ದೇಶದ ಸರದಾರರುಗಳು ಮತ್ತು ರಾಜ ಮಹಾರಾಜರುಗಳು ಜ್ಞಾನದ ವಲಯದಿಂದ ಸಾವಿರಾರು ಹರದಾರಿಗಳ ದೂರದಲ್ಲಿದ್ದಾರೆ. ಅಹಂಕಾರ ಹಾಗೂ ಗರ್ವದ ಅರಣ್ಯದಲ್ಲಿ ಮತ್ತರಾಗಿ ಓಡಾಡುವವರಾಗಿದ್ದಾರೆ ಮತ್ತು ಅಕ್ರಮ ಸಂಪತ್ತಿನ ತೊಟ್ಟಿಲಿನ ಹಾಲಿನಿಂದ ತಮ್ಮ ಸಕ್ರಮ ಹಿಂಸೆ ಮತ್ತು ಯಾತನೆಗಳನ್ನು ಕೈಗೊಳ್ಳುವ ವ್ಯಕ್ತಿಗಳ ರಕ್ತವನ್ನು ತಂದೆಯ ಪ್ರೀತಿ ಮತ್ತು ಕರುಣೆಯ ಜೇನಿಗಿಂತಲೂ ಹೆಚ್ಚು ಸಿಹಿಯೆಂದು ಪರಿಗಣಿಸುತ್ತಾರೆ. ಈ ಕ್ರಮವು ಹೃದಯವನ್ನು ಛಿದ್ರಗೊಳಿಸುವ ಮತ್ತು ವಿಧ್ವಂಸಕ ಕೃತ್ಯಗಳಿಂದ ದೂರ ಸರಿದು ಇನ್ನು ಯಾವ ಇಡುಗಂಟನ್ನು ಕೂಡ ಹೃದಯದ ಮಾರುಕಟ್ಟೆಯಲ್ಲಿ ಇರಿಸುವುದಿಲ್ಲ. ಒಂದು ವೇಳೆ ಗುಲಾಮಿತನದ ಬೆಂಬಲಿಗರು ವಿನಯವಂತಿಕೆಯ ಚಾದರವನ್ನು ಭುಜಗಳ ಮೇಲೆಹಾಕಿ ಹಾಜರಾಗಿದ್ದು, ಪುರಾತನ ಕಾಲಧರ್ಮದ ಸಂಪ್ರದಾಯದಿಂದ ಸರಿದು ಇಡೀ ಜನತೆಯ ನ್ಯಾಯಪರತೆ ಮತ್ತು ಅಲ್ಲಾಹನ ಎಲ್ಲಾ ಸೃಷ್ಟಿ ಸಂಕುಲದೊಂದಿಗೆ ಉಪಕಾರ ಮತ್ತು ಕರುಣೆಯ ನಡವಳಿಕೆಯನ್ನು ತಮ್ಮ ಅತ್ಯಂತ ಪ್ರಿಯವಾದ ನಡವಳಿಕೆಯ ಸ್ವಭಾವವನ್ನು ಮೈಗೂಡಿಸಿಕೊಂಡಲ್ಲಿ ಅದನ್ನು ರಾಜನ ಆಸ್ಥಾನದ ಕರುಣೆ ಮತ್ತು ವೈಭವೋಪೇತ ಸ್ಥಾನಮಾನವನ್ನು ಪ್ರದರ್ಶನ ಮಾಡುತ್ತಾ ಬಾದಶಹನ ಕೊಡುಗೆ ಮತ್ತು ಉಪಕಾರಗಳೊಂದಿಗೆ ಮರ್ಯಾದೆ ಮತ್ತು ಗೌರವದ ಅದೃಷ್ಟಕ್ಕೆ ಉತ್ತಮ ಸ್ಥಾನವನ್ನು ನೀಡಲಾಗುವುದು

ಮತ್ತು ಯಾವ ವ್ಯಕ್ತಿಯು ತನ್ನ ಸ್ವತಃ ಶ್ರೀಮಂತಿಕೆಯ ಪ್ರಜ್ವಲಿಸುವ ಜ್ವಾಲೆಗಳನ್ನು ಅಗ್ನಿಯ ಪರ್ವತದ ಮೇಲೆ ತಲುಪಿಸಿ, ಜನತೆಯನ್ನು ಹುಲ್ಲುಮತ್ತು ಮುಳ್ಳಿನ ರೀತಿಯಲ್ಲಿ ಹಿಂಸೆ ಮತ್ತು ವಿದ್ರೋಹದ ಕಿಡಿಗಳಿಂದ ಸುಡುತ್ತಾನೋ ಅವನು ತನ್ನ ಕುತ್ತಿಗೆಯನ್ನು ಜಹಾಂಪನಾರವರ ದರಬಾರಿನಲ್ಲಿ ಆಜ್ಞಾಪಾಲನೆ ಮತ್ತು ಶರಣಾಗತಿಯ ಹಗ್ಗದಿಂದ ಹೊರ ತೆಗೆಯುವನು.

ಆತನು ತನ್ನ ತಲೆಯನ್ನು ವಿನಾಶ ಮತ್ತು ಘಾತುಕತನದ ಹತ್ಯೆ ಮತ್ತು ಕೈ ಕಾಲುಗಳನ್ನು ದುಃಖ ಹಾಗೂ ಯಾತನೆಯನ್ನು ಸಂಕಷ್ಟದ ವಿನಾಶಕಾರೀ ಕ್ರಿಯೆಯಲ್ಲಿ ತೊಡಗಿಸುತ್ತಾನೆ ಹಾಗೂ ಶಿಕಾರಿ ಮಾಡಲ್ಪಟ್ಟ ಕೈದಿಯಂತೆ ಸೆರೆಯಾಳನ್ನಾಗಿ ಮಾಡಿ ಆತನ ದೇಶದಲ್ಲಿ ವಿಗ್ರಹಗಳನ್ನು ಧ್ವಂಸ ಮಾಡುವ ಹಾಗೂ ಧರ್ಮಬೀರುಗಳ ಸಲುವಾಗಿ ಮಸೀದಿಗಳನ್ನು ಮತ್ತು ನಾಸ್ತಿಕರು ಹಾಗೂ ಧರ್ಮ ಭ್ರಷ್ಟರ ಆರಾಧನಾ ಸ್ಥಳಗಳನ್ನು ಅಸ್ತವ್ಯಸ್ತಗೊಳಿಸುವನು ಮತ್ತು ಗೌರವ ಹಾಗೂ ಮಾನ್ಯತೆಯ ಮಾಲೀಕನು ಅನಾದಿ ಕಾಲದಿಂದಲೂ ಬೆಳಗುವ ಹೊಳೆಯುವ ಬೆಳಕನ್ನು ಹರಡುವ ಚಂದ್ರನನ್ನು ಸಿಂಹದಂತಹ ಧೈರ್ಯವನ್ನು ಹೊಂದಿದ ಒಡೆಯ ಮತ್ತು ಮುಖಂಡತ್ವದ ಸಾಗರದಂತಹ ಮನಃಸ್ಥಿತಿಯನ್ನು ಹೊಂದಿದ ಬಾದಶಹನನ್ನು ಸೂರ್ಯನಿಗಿಂತಲೂ ಹೆಚ್ಚು ಬೆಳಕನ್ನು ಹೊಂದಿದವನನ್ನಾಗಿ ಮಾಡುವನು. ಯಾವಾತನ ಖಡ್ಗದ ಚಮತ್ಕಾರವು ಇಸ್ಲಾಮಿನ ಶ್ರೇಯೋಭಿವೃದ್ಧಿ ಹಾಗೂ ಧರ್ಮಭ್ರಷ್ಟರ ವಿನಾಶಕ್ಕೆ ಕಾರಣೀಭೂತನಾಗಿ ದೇಶದ ಸೂರ್ಯನಾಗಿರುವನೋ ಮತ್ತು ಅವನ ಕತ್ತಿಯ ಕಂಬನಿಯು ಪರಾಕ್ರಮದ ಲೋಕದಲ್ಲಿ ಗೌರವವನ್ನು ನೀಡುವ ಮತ್ತು ಧರ್ಮವನ್ನು ಬೆಳಗುವವನನ್ನಾಗಿ ಮಾಡುವನು. ಸನ್ನಡತೆ ಮತ್ತು ದೇಶದ ಆಡಳಿತದಲ್ಲಿ ಖ್ಯಾತಿಯ ಸಲುವಾಗಿ ಹೆಚ್ಚು ಸಶಕ್ತ ಹಾಗೂ ರಾಜ್ಯಾಡಳಿತದ ಬಲಿಷ್ಠತೆಯ ಸಲುವಾಗಿ ಸ್ವತಃ ತಾನು ಸ್ವಭಾವತಃ ಅಹಂಕಾರಮತ್ತು ಗರ್ವವನ್ನು ದೂರವಿರಿಸಿ ಧರ್ಮಭ್ರಷ್ಟರ ಕೊಲೆ ಮತ್ತು ವಿನಾಶ ಹಾಗೂ ವಿಧ್ವಂಸಕತೆಯಲ್ಲಿ ನಿರತರಾಗಿದ್ದು ಮತ್ತು ಪೀಡಕರಾಗಿದ್ದು ಮರ್ದನಗೈಯುವವರ ಬೇರುಗಳನ್ನು ಕಿತ್ತೆಸೆಯುವ ಸಲುವಾಗಿ ತಮ್ಮ ಗಮನವನ್ನು ಕೇಂದ್ರೀಕರಿಸಿ ಯಾವ ರೀತಿಯಲ್ಲಿ ಸಹಾಯ ಮತ್ತು ನೆರವಿನ ಅಗತ್ಯದ ಯಾಚನೆ ಮತ್ತು ಒಳಿತು ಹಾಗೂ ಅಖಂಡ ಬೆಂಬಲ ಮತ್ತು ಅಭಿಮಾನದ ಚಿಲುಮೆಗಳ ಕೇಂದ್ರಬಿಂದುವಾಗಿರುವರೋ ಅವರು ಒಳ್ಳೆಯ ರೀತಿಯಲ್ಲಿ ಕಾರ್ಯವನ್ನು ಕೈಗೊಳ್ಳುವವರಾಗಲಿ. ಅವರು ತಿರಸ್ಕೃತ ಮತ್ತು ಬಹಿಷ್ಕೃತರ ಪ್ರತಿಮಾ ಆರಾಧಕರ ಗುಂಪು ಮತ್ತು ಸಮುದಾಯದ ಕಟ್ಟಡಗಳು ಮತ್ತು ಬುನಾದಿಗಳನ್ನು ನಾಶಮಾಡಿ, ಕಲ್ಲುಗಳನ್ನು ಕೆಡವಿ ಇಸ್ಲಾಮಿನ ಸಂಪ್ರದಾಯದ ಕೇಂದ್ರಸ್ಥಾನವನ್ನು ಖಾಯಮ್ ಮಾಡಿ ಧರ್ಮಭ್ರಷ್ಟತೆಯ ಅಸ್ತಿತ್ವ ಮತ್ತು ಚೆಹರೆಗಳನ್ನು ಕಠಿಣವಾಗಿ ನಾಶ ಮಾಡಲಿ.

ಸಲಾಬತ್‌ಖಾನನ ವಿನಾಶಕಾರೀ ಹುಟ್ಟುಗುಣ, ಸುಳ್ಳು ಮತ್ತು ವಿಧ್ವಂಸಕತೆ ಹಾಗೂ ದ್ರೋಹದ ಮಣ್ಣಿನಿಂದ ಕಲಬೆರಕೆಯಾಗಿತ್ತು. ಜಫದರ್‌ಜಬಾನ್‌ನಂತಹ ಅಂದರೆ ದುರದೃಷ್ಟದಿಂದ ಕೂಡಿದ ಪಕ್ಷಿಯಂತೆ ಬಂಡಾಯದ ಮತ್ತು ವಿಧ್ವಂಸಕತೆಯ ಕಾಳನ್ನು ಆಯ್ದು ತಿನ್ನುವವ ಮತ್ತು ಧರ್ಮದ ಆದೇಶಗಳ ಹಾಗೂ ಆಂತರ್ಯದ ರಣಹದ್ದಿನ ಅರಣ್ಯದಲ್ಲಿ ಶವಗಳನ್ನು ಭಕ್ಷಿಸುವ ಕಡ್ಡಾಯ ಕೃತ್ಯ ಮತ್ತು ಆದೇಶಗಳನ್ನು ಅಗತ್ಯವಾಗಿ ಪಾಲಿಸುತ್ತ ಭಯ ಮತ್ತು ಅಪಾಯಗಳ ಸುಳಿಯಿಂದ ಪ್ರಾಣವನ್ನು ಸಂರಕ್ಷಿಸುತ್ತಾ ಹೊರಬರುವುದು ಆ ಹೊತ್ತಿನ ಅಗತ್ಯವೆಂದು ತಿಳಿಯುತ್ತಾ ಅಲ್ಲಿಂದ ಪರಾರಿಯಾದ ಮತ್ತು ಹಜರತ್ ಬಾದಶಹ ಗಾಝಿಯವರು ಅವನ ದ್ರೋಹ ಮತ್ತು ಪಿತೂರಿಯ ಚಿಲುಮೆಯು ನಿರ್ಗಮಿಸಿದ ನಂತರ ಕೆಲವು ದಿನಗಳವರೆಗೆ ಮೌಜೆ ಝುಲ್ಕಾದಲ್ಲಿ ಅತ್ಯಂತ ಸಂತೋಷ, ವೈಭವ, ವಿಜಯ ಮತ್ತು ಸಫಲತೆಯ ಖುಷಿ ಮತ್ತು ನೆಮ್ಮದಿಯ ಬೀಜಗಳನ್ನು ನೆಡುವ ಕೃಷಿಯನ್ನು ಕೈಗೊಂಡು ಬೆಳೆಯನ್ನು ಪಡೆಯುವನಂತಾದ ಹಾಗೂ ಸೈನ್ಯ ಹೊರಡುವ ಸೂಚನೆಯನ್ನು ನೀಡುವ ನಗಾರಿಯನ್ನು ಬಾರಿಸಲಾಯಿತು. ಆಗ ಪವಿತ್ರ ಶಾಬಾನ್ ತಿಂಗಳ ಹತ್ತನೆಯ ತಾರೀಖಾಗಿತ್ತು. ತನ್ನ ಮೌಜೆಯನ್ನು ತಲುಪುವ ಸಲುವಾಗಿ ಬಖಿನ್‌ಸರಾಯೆಯ ಪಾನಗೃಹದಿಂದ ಪಾನಪ್ರಿಯ ಕೆಲ ಜನರು ಮತ್ತು ರೋಶನ್ ರಾಯೆಯ ಪಾನಪ್ರಿಯ ವ್ಯಕ್ತಿಗಳು ಸೇರಿ ಪವಿತ್ರ ಹಾಗೂ ಶ್ರೇಷ್ಠ ಹುಜೂರ್‌ರವರ ಸಮಕ್ಷಮದಲ್ಲಿ ಒಂದು ಸಲಹೆಯನ್ನು ಮುಂದಿಟ್ಟರು. ಅದೇನೆಂದರೆ ಆ ಸ್ಥಳದಿಂದ ತೂರ್‌ನ ಕೋಟೆಯು ಕೇವಲ ಎರಡು ಹರದಾರಿ ದೂರವಿದೆ. ಒಂದು ವೇಳೆ ಸೂರ್ಯೋದಯದ ಶುಭ ಹೊತ್ತಿನಲ್ಲಿ ಪಾದಾರ್ಪಣೆ ಮಾಡಿದಲ್ಲಿ ರಾಜ ಮರ್ಯಾದೆಯೊಂದಿಗೆ ಮಹಾರಾಜರ ಆಗಮನವು ಧರ್ಮರಕ್ಷಕ ಕಟ್ಟಡಗಳ ಮತ್ತು ಆಕಾಶದ ಪೂರ್ಣ ಚಂದಿರನ ಶೋಭೆಯೊಂದಿಗೆ ಮೂಲೆ ಮೂಲೆಗಳಿಂದ ವೀಕ್ಷಣೆ ಮಾಡುವ ಹಾಗೂ ಬಹು ಪರಾಕ್ರಮಶಾಲೀ ವ್ಯಕ್ತಿತ್ವದ ದರ್ಶನವನ್ನು ಮಾಡುವ ಜನರು ನಮ್ಮ ಭೂಮಿಯನ್ನು ಸಂತಸದ ನೆಲವೆಂದು ಕರೆಯುವರು. ಬೆಳಕು ಮತ್ತು ಕಿರಣಗಳ ತೊಟ್ಟಿಲನ್ನಾಗಿ ಮಾಡಿದಲ್ಲಿ ಅದೊಂದು ಉತ್ತಮ ಕೆಲಸವಾಗುತ್ತದೆ. ಹಜರತ್ ಬಾದಶಹ ಘಾಝಿಯು ಈ ಸದಿಚ್ಛೆಯ ಮತ್ತು ಸದುದ್ದೇಶದ ಚಿನ್ನವನ್ನು ಅಂಗೀಕಾರದ ಪರೀಕ್ಷೆಯೊಂದಿಗೆ ತೂಗಿ ಚಿಂತನಾಶೀಲ ಹೃದಯದೊಂದಿಗೆ ಆ ಮಾತನ್ನು ಇಷ್ಟಪಟ್ಟು ಅಂಗೀಕರಿಸಿ ಸಹಾಯ ಮತ್ತು ವಿಜಯವನ್ನು ಶಾಮೀಲು ಮಾಡಿ ವೈಭವಪೂರ್ಣ ವೈಶಿಷ್ಟ್ಯತೆಯ ಪತಾಕೆಗಳನ್ನು ಹಾರಿಸುತ್ತಾ ಆ ಭೂಮಿಗೆ ಸಜ್ಜನಿಕೆ ಮತ್ತು ಮರ್ಯಾದೆಯನ್ನು ದಯಪಾಲಿಸಿದರು. ಈ ನಡುವೆ ಅನೇಕ ಮಿತ್ರರಂತೆ ನಟಿಸಿದ ಶತ್ರುಗಳು ಮತ್ತು ಹೇಡಿತನದ ಅಜ್ಞಾನವನ್ನು ಹರಡುವ ಮತ್ತು ಬಿತ್ತುವ ವ್ಯಕ್ತಿಗಳು ಅನಾಗರೀಕ ಮತ್ತು ಮೃಗೀಯ ದುರ್ಮಾರ್ಗಿ ಕಪ್ಪು ಮೋರೆಯವರು ಗುಂಡಿಗಳನ್ನು ಅಗೆಯುವ

ಪ್ರಯತ್ನವನ್ನು ಮಾಡುವ ಮೃಗದಂತಹ ಸ್ವಭಾವದ ನರಿಗಳಂತೆ ಮೋಸಗಾರರು ಕಡುಗಪ್ಪು ಬುದ್ಧಿಯನ್ನು ಹೊಂದಿದ ಪಿತೂರಿಕೋರರು ಸಕ್ರಿಯರಾದರು.

ಅವರ ಪೈಕಿ ಯಾಖೂತ್ ಹವಾಲ್ದಾರ್ ಎಂಬುವವನು ಮೇಲ್ಕಂಡ ಕೋಟೆಯನ್ನು ದುರ್ಬುದ್ಧಿಯಿಂದ ಕೂಡಿದ ಕಸ ಕಡ್ಡಿಯ ಬೇರುಗಳ ಸಮೇತ ಅಬ್ದುಲ್‌ರಹೀಮ್ ಬೆಹಲೂಲ್ ಖಾನ್‌ನ ಪಿತೂರಿಗೆ ನೀರೆರೆದ. ಈ ಮುಗಿಲನ್ನು ಮುಟ್ಟುವಂತಿದ್ದ ಕೋಟೆಯ ಮೇಲೆ ನಿಯಂತ್ರಣವನ್ನು ಸಾಧಿಸುವ ಅಂತರಂಗದ ಇಚ್ಛೆಯನ್ನು ಹೊಂದಿದ ಅಬ್ದುಲ್ ರಹೀಮ್ ಬೆಹಲೂಲ್‌ಖಾನ್‌ನ ಅಂತರಂಗದಲ್ಲಿ ದುರಾಶೆಯ ಬೀಜವನ್ನು ನೆಟ್ಟ. ಆದರೆ ಈ ಷಡ್ಯಂತ್ರದಿಂದ ನಿರಾಶೆಯ ಕ್ರಿಮಿ–ಕೀಟಗಳ ವಿನಃ ಬೇರೆ ಯಾವ ಫಲವೂ ಪ್ರಾಪ್ತಿಯಾಗಲಿಲ್ಲ. ಈ ಆಕಾಶದೆತ್ತರದ ಗೋಡೆಗಳ ಕೋಟೆಯ ಖಬ್ಜೆಯನ್ನು ಪಡೆಯುವ ಆಸೆಯು ವೃಕ್ಷದ ಸ್ವಭಾವ ಮತ್ತು ತೋಟದ ರಹಸ್ಯಗಳನ್ನು ಅರಿಯುವ ನಿರಾಶೆಯ ಮುಳ್ಳಿನ ವಿನಃ ಯಾವುದೇ ಪ್ರಯತ್ನವು ಫಲಿಸಲಿಲ್ಲ. ಅವನ ಭರವಸೆಯ ವೃಕ್ಷವು ರಾಜನ ಕೊಡುಗೆಯ ಉದ್ಯಾನವನದ ಮಾಲಿಗಳ ತರಬೇತಿಯಿಂದ ವಿಜಯ ಪ್ರಾಪ್ತಿಯ ಫಲವನ್ನು ಪಡೆಯುವ ದೃಷ್ಟಿಯಿಂದ ಕೊಂಬೆರೆಂಬೆಗಳು ಅಂಗೀಕಾರದ ಸಲುವಾಗಿ ಎಲೆಗಳಿಂದ ಶೃಂಗರಿಸಿಕೊಂಡು ತೂಗಾಡಲಾರಂಭಿಸಿದವು. ಹಜರತ್ ಬಾದಶಹ ಘಾಝಿಯ ಅಪೇಕ್ಷೆ ಏನಿತ್ತೆಂದರೆ ತಮ್ಮ ಅಮೂಲ್ಯ ಆಗಮನದ ದೆಸೆಯಿಂದ ಅವರ ಅಪೇಕ್ಷೆಯ ವಸಂತೋತ್ಸವನ್ನು ಆಕೋಟೆಗೆ ಕರುಣಿಸಿ ಅದರೊಂದಿಗೆ ಮುತ್ತು ರತ್ನ ವಜ್ರ ವೈಢೂರ್ಯದೊಂದಿಗೆ ಶೃಂಗರಿಸಿ ಅವುಗಳನ್ನು ಇನಾಮಿನ ರೂಪದಲ್ಲಿ ನೀಡಬೇಕೆಂದು. ಅವರ ನಿರಾಶೆ ಹಾಗೂ ಆಶಾಭಂಗದ ಆಪತ್ತಿನಿಂದ ಮುಕ್ತಿ ದೊರಕಲಿ ಈ ಸುಳ್ಳಿನ ಪೀಠಿಕೆಯು ಸತ್ಯದಿಂದ ಬಲವನ್ನು ಪಡೆಯಲು ಅಸಾಧ್ಯವಾಗಿ ತನ್ನ ಉದ್ದೇಶ ಸಾಧನೆಯಲ್ಲಿ ವಿಫಲವಾಯಿತು. ನತದೃಷ್ಟರು ಹಾಗೂ ಅದೃಷ್ಟದಾಟದಲ್ಲಿ ಸೋತವರ ದೆಸೆಯಿಂದ ಅವನ ಧೈರ್ಯದ ರಾಯಭಾರಿಯು ಸಜ್ಜನಿಕೆ, ಸದ್ವರ್ತನೆ ಮತ್ತು ಪಜ್ಞೆಯ ಮೆಟ್ಟಿಲಿನವರೆಗೆ ತಲುಪಲು ಸಾಧ್ಯವಾಗಲಿಲ್ಲ. ಕೃತಜ್ಞತೆ ಮತ್ತು ಅದೃಷ್ಟದಾಟದ ದೀಪವನ್ನು ನಿರಾಶೆಯಿಂದ ಆಶಾಭಂಗಕ್ಕೆ ಗುರಿಮಾಡಲಾಯಿತು ಮತ್ತು ವಿದ್ರೋಹ ಹಾಗೂ ಬಂಡಾಯದ ಮಣ್ಣನ್ನು ಶುಭಾಕಾಂಕ್ಷಿಯ ಬೈತಲೆಯ ಮೇಲೆ ಸುರಿದು ಬಾದಶಹನ ಬೆಂಗಾವಲಿನ ಪಡೆಯ ಕೆಲವು ಸೈನಿಕರ ವಿರುದ್ಧ ಸೆಣಸಾಟದ ಬಾಗಿಲನ್ನು ತೆರೆಯಲಾಯಿತು. ಬೆಂಗಾವಲಿನ ಪಡೆಯ ಮುಖ್ಯಸ್ಥನನ್ನು ಆ ಹುದ್ದೆಯಿಂದ ದೂರ ಸರಿಸಿ ಅವನನ್ನು ಪದಾತಿ ದಳದಲ್ಲಿ ನೇಮಕ ಮಾಡಲಾಯಿತು. ಮಾರನೆಯ ದಿನ ಹಜರತ್ ಬಾದಶಹ ಘಾಝಿಯು ಈ ಸುದ್ದಿಯನ್ನು ಆಲಿಸಿ ಸೈನ್ಯವು ನಿರ್ಗಮಿಸಬೇಕೆಂಬ ಸಂಕೇತದ ಕಹಳೆಯನ್ನು ಮೊಳಗಿಸಲಾಯಿತು. ವಿಜಯದ ಧ್ವಜಗಳನ್ನು ಎತ್ತರಕ್ಕೆ ಏರಿಸುತ್ತಾ ಸಾಗರದ ಅಲೆಗಳ ಆರ್ಭಟದೋಪಾದಿಯಲ್ಲಿ

ರೌದ್ರತೆಯಿಂದ ಕೂಡಿದ ಆವೇಶಭರಿತ ಸೈನ್ಯ ಮತ್ತು ಪರ್ವತದಂತಹ ಸಂಕಷ್ಟ ಮತ್ತು ಯಾತನೆಯನ್ನು ನೀಡುವಂತಹ ಸಿಪಾಯಿಗಳ ಮೂಲಕ ಆ ಕೋಟೆಯ ಸುತ್ತಮುತ್ತ ಹಾಗೂ ಅಕ್ಕ ಪಕ್ಕ ಸೈನಿಕರ ಮೂಲಕ ವಿಜಯದ ಹಗ್ಗಗಳಿಂದ ಕೂಡಿದ ಡೇರೆಗಳನ್ನು ನಿರ್ಮಾಣ ಮಾಡಲಾಯಿತು ಮತ್ತು ವಿಜಯದತ್ತ ಮುನ್ನಡೆದು ಪರಾಕ್ರಮಶಾಲಿ ಸಿಪಾಯಿಗಳಿಗೆ ಆರಾಮದಾಯಕ ತಂಗುದಾಣವನ್ನು ನಿರ್ಮಿಸಲಾಯಿತು.

ಆ ಹೊತ್ತಿನಲ್ಲಿ ಆ ಮೋಸಗಾರ ಠಕ್ಕ, ಪಿತೂರಿಕೋರ ಅಮಾನವೀಯತೆಯಿಂದ ಕೂಡಿದ ಪ್ರಜ್ಞಾಶೂನ್ಯ, ಅಯೋಗ್ಯನಾದ ಆತನು ಮೋಸ ದಗಾ ಹಾಗೂ ಪಿತೂರಿಯ ಬೆಂಕಿಯನ್ನು ತಂಪಾಗಿಸಿ ಹಣೆಯನ್ನು ಪಶ್ಚಾತ್ತಾಪ ಮತ್ತು ಲಜ್ಜೆಯ ನಾಣ್ಯದ ರೀತಿಯಲ್ಲಿ ಚಿನ್ನವನ್ನು ಕೆತ್ತನೆ ಮಾಡಿದ್ದು ದಯೆ ಮತ್ತು ಕರುಣೆಯ ಬೆಂಬಲಿಗರಾದ ಮಹಾರಾಜರ ದರಬಾರಿನ ಭೂಮಿಗೆ ಮುತ್ತಿಕ್ಕಿ ಶರಣಾಗಲು ಅವನು ಸಿದ್ಧನಾದ. ಹಜರತ್ ಬಾದಶಹ ಘಾಝಿಯವರ ವ್ಯಕ್ತಿತ್ವದ ಎದುರು ಖ್ಯಾತಿ ಮತ್ತು ಪ್ರಸಿದ್ಧಿಯನ್ನು ಪಡೆದಿದ್ದು ನಗರಗಳು ಹಾಗೂ ಬಾಜಾರುಗಳಲ್ಲಿ ದಿರ್ಹಮ್ ಮತ್ತು ದಿನಾರ್‌ಗಳ ರೀತಿಯಲ್ಲಿ ರಕ್ತ ಸಿಕ್ತ ಮೈದಾನದಲ್ಲಿ ತನ್ನನ್ನು ತಾನೇ ಪ್ರತಿಷ್ಠಾಪಿಸಲಾಗಿದೆ. ಕೀಳು ಧಾತುವಿನಂತೆ ಒಂದುವೇಳೆ ಮನೆಯ ನಾಣ್ಯಗಳನ್ನು ದುರ್ನಡತೆ ಮತ್ತು ಕಲಬೆರಕೆ ಹಾಗೂ ದುರ್ವ್ಯವಹಾರಗಳ ಖೊಟ್ಟಿತನದಿಂದ ಮುಕ್ತಗೊಳಿಸಿದಲ್ಲಿ ಕರುಣೆಯ ಸೆರೆಯಾಳು ಮತ್ತು ಸಂಪೂರ್ಣ ಉಪಕಾರದ ಬಾರದಲ್ಲಿ ನಲುಗಿರುವವನು ಮತ್ತು ದ್ವೇಷ ಹಾಗೂ ತಿರಸ್ಕಾರದ ರಾಯಭಾರಿಯ ಶಿರಚ್ಛೇದನದ ಮೂಲಕ ಭೂಮಿ ಮತ್ತು ಆಕಾಶದ ಮೇಲೆ ವಾಸ್ತವ್ಯವನ್ನು ಹೂಡುವ ಜಿನ್‌ಗಳ ಬದಲಿಗೆ ಪ್ರಾಣವನ್ನು ವೀಕ್ಷಿಸುವ ಬೆಂಬಲಿಗರು ಮತ್ತು ಸೂಕ್ಷ್ಮ ದೃಷ್ಟಿಯುಳ್ಳ ವ್ಯಕ್ತಿಗಳೂ ಕಠಿಣ ಹೆಸರನ್ನು ನೀಡುತ್ತಾರೆ. ಅವರ ದೇಹ ಮತ್ತು ಪ್ರಾಣಕ್ಕೆ ಯಾವುದೇ ಕಷ್ಟ ಮತ್ತು ದುಃಖವು ತಾಗುವುದಿಲ್ಲ. ಅವರ ಹೃದಯವು ಕುಲುಮೆಯ ಭಟ್ಟಿಯಂತೆ ಅವಿಧೇಯತೆ ಮತ್ತು ಮುನ್ನೆಚ್ಚರಿಕೆಯ ಜ್ವಾಲೆಗಳಿಂದ ಪ್ರಜ್ವಲಿಸಲಿಲ್ಲ ಹಾಗೂ ನಷ್ಟದ ಕಿಡಿಗಳು ಪ್ರಜ್ವಲಿಸಲಿಲ್ಲ. ಒಟ್ಟಾರೆ ಈ ಮುನ್ನೆಚ್ಚರಿಕೆ ಬೆಂಬಲದ ಸೈನಿಕರು ರಸ್ತೆಯ ಧೂಳನ್ನು ತಮ್ಮ ದೇಹದಿಂದ ಝಾಡಿಸುತ್ತಾ ಹೃದಯವನ್ನು ಧೃಢ ನಿಲುವಿನಿಂದ ಕೂಡಿ ಮರ್ಯಾದೆ ಮತ್ತು ಸಜ್ಜನಿಕೆಯಿಂದ ಕೂಡಿದ್ದು ಹುಕುಮ್ ಮತ್ತು ಆಜ್ಞೆಯನ್ನು ನೀಡಲಾಯಿತು.

ಯುದ್ಧಭೂಮಿಯ ಸಿಂಹಗಳ ರೀತಿಯ ಪರಾಕ್ರಮಶಾಲಿ ಸೈನಿಕರು ಯುದ್ಧಭೂಮಿಯಲ್ಲಿ ಕಾರ್ಯನಿರತರಾಗಿದ್ದು ಹೋರಾಟದ ಮೈದಾನದಲ್ಲಿ ತಮ್ಮ ಪ್ರಾಣ ಹಾಗೂ ಗೌರವದ ಮಹಲುಗಳ ಕಂಬಗಳು ಎಂಬುದನ್ನು ಅರಿತಿದ್ದಾರೆ ಹಾಗೂ ರಕ್ತ ಪಿಪಾಸು ತೋಪುಗಳನ್ನು ಮುನ್ನಡೆಸಿ ಕೋಟೆಯನ್ನು ಭೂಮಿಯ

ಮಟ್ಟಕ್ಕೆ ಸರಿಸಮನಾಗಿ ಮಾಡಿ ನೀಚ ಮತ್ತು ಲೋಭಿ ಜನರ ಅಸ್ತಿತ್ವವನ್ನು ಕೊನೆಗಾಣಿಸಲಾಗುವುದು. ಯಾರು ನೆಮ್ಮದಿ ಮತ್ತು ಆರಾಮವನ್ನು ಕೊನೆಗೊಳಿಸಿದ್ದರೋ ಆ ಜಾಗದ ನಿವಾಸಿಗಳ ವಾಸ್ತವ್ಯವನ್ನು ಕ್ರಿಮಿ ಕೀಟಗಳು ಮತ್ತು ನತದೃಷ್ಟರಾಗಿದ್ದರೋ ಅಂತಹವರ ಹೃದಯಗಳು ಅಧೈರ್ಯ ಮತ್ತು ಅಶಾಂತಿಯ ದೆಸೆಯಿಂದ ತಮ್ಮ ಮನಸಿನಾಳದಲ್ಲಿ ಅಲ್ಲಿಂದ ಪಲಾಯನ ಮಾಡುವ ಮತ್ತು ತಮ್ಮ ಹೇಡಿತನದ ಮನಃಸ್ಥಿತಿಯಲ್ಲಿ ಆ ವಿಷಯವನ್ನು ಬಿತ್ತಿದರು. ಅವರಿಗೆ ಪ್ರಪಂಚದ ಮೇಲೆ ಹಿಡಿತವನ್ನು ಹೊಂದಿದ್ದ ಸೂರ್ಯನೋಪಾದಿ ಕತ್ತಿಯ ಹೊಳಪು ಮತ್ತು ಅವರ ಬಾಣಗಳ ಮೊನೆಗಳ ಬೆಂಕಿಯು ಶಹಾಬ್ ನಕ್ಷತ್ರದಂತೆ ಪ್ರಕೃತಿಯ ಗುಣ–ಸಭಾವವನ್ನು ನೀಚತನದ ಕಡಾಯಿಯಲ್ಲಿ ಹಾಕಿ ಅಭಿಪ್ರಾಯವನ್ನು ರೂಪಿಸುವ ವ್ಯಕ್ತಿಗಳ ಪ್ರಜ್ಞಾವಂತಿಕೆಯು ಅಭಿಪ್ರಾಯಗಳನ್ನು ನೀಡುವ ಸಲುವಾಗಿ ಎಲ್ಲಾ ಸಂಕಷ್ಟಗಳ ಅಂಧಕಾರವನ್ನು ದೂರಗೊಳಿಸುವಂತಹದಾಗಿದೆ. ಅವರಿಗೆ ಈ ವಿಷಯವನ್ನು ತಲುಪಿಸಲಾಯಿತು. ನಾವು ಮುಖಸ್ತುತಿ ಮಾಡುವ ಮತ್ತು ಒಂದು ಮುಷ್ಟಿ ಧೂಳಿನಂತಹ ದುರುದ್ದೇಶಪೂರಿತ ಮತ್ತು ಉದ್ದೇಶಗಳ ಬಗ್ಗೆ ಅರಿವಿಲ್ಲದಂತಹವರಾಗಿದ್ದೇವೆ. ನಮ್ಮ ಯಾವುದೇ ಯೋಗ್ಯತೆಯು ಬುದ್ಧಿಹೀನ ವ್ಯಕ್ತಿತ್ವ ಮತ್ತು ರಹಸ್ಯದ ಪಾಠಗಳನ್ನು ಕಲಿಸುವಂತಹದಾಗಿದೆ. ಆ ಮೂಲಕ ಪ್ರತಿಯೊಂದು ವಸ್ತುವನ್ನು ಬಯಸುವವನನ್ನು ಮಹಾದಾನಿ ಎಂದು ಹೇಳಲಾಗುತ್ತದೆ ಮತ್ತು ಸಾಹಿತ್ಯದ ಸಹೃದಯತೆಯ ಪ್ರತಿಭೆ ಮತ್ತು ಮುತ್ತು ರತ್ನಗಳ ಉನ್ನತ ಚಿಂತನೆಯನ್ನು ಇಡುವಂತಹವರ ದೃಷ್ಟಿಯಲ್ಲಿ ಪ್ರತಿಷ್ಠಿತ ಹಾಗೂ ಬುದ್ಧಿವಂತಿಕೆಯ ವಜ್ರ ವೈಢೂರ್ಯಗಳು ಅತ್ಯಂತ ಅಗ್ಗ ಮತ್ತು ನಕಲಿಯಂತೆ ಕಂಡು ಬರುತ್ತವೆ. ನಾವು ಯಾವುದನ್ನು ಅತ್ಯಂತ ಅಮೂಲ್ಯವೆಂದು ತಿಳಿಯುತ್ತೇವೆಯೋ ಅದಕ್ಕೆ ಕೃತಜ್ಞರಾಗಿದ್ದೇವೆ. ಕೃತಜ್ಞತೆ ಮತ್ತು ಪ್ರವಾಹದ ಆರ್ಭಟವು ಮೂಕನಿಗೆ ಮಾತನಾಡುವ ಶಕ್ತಿಯನ್ನು ನೀಡುತ್ತಿದೆ. ನಾವು ಅಪ್ರಸ್ತುತ ಎಂದು ಭಾವಿಸುವುದಾದರೂ ನಾವು ಏನು ಹೇಳಬೇಕೆಂದು ತೋಚುವುದಿಲ್ಲ. ಏಕೆಂದರೆ ಪ್ರಾಣಾರ್ಪಣೆ ಮಾಡುವಂತಹ ಪ್ರೇಮದ ಆವೇಶ ಮತ್ತು ಬದ್ಧತೆಯು ಮೌನದ ಭಾಷೆಯು ಅನುಯಾಯಿಯನ್ನು ಮಾತನಾಡುವಂತೆ ಪ್ರೇರೇಪಿಸುತ್ತದೆ ಆದುದರಿಂದ ನಾನು ಬಯಸುವುದೇನೆಂದರೆ ಒಂದು ವೇಳೆ ಮಹಾರಾಜರ ದರಬಾರಿನಿಂದ ಸಾಹಿತ್ಯದ ರಸಾಸ್ವಾದನೆ ಮಾಡುವವರ ಬೀಳ್ಕೊಡುಗೆಯನ್ನು ಮಾಡುವುದಾದಲ್ಲಿ ಮತ್ತು ಮೌನಧಾರಣೆಯ ಮುದ್ರೆಯನ್ನು ಸೊಟ್ಟ ಮೂತಿಯವರು ಎತ್ತಿ ಹಿಡಿಯುವುದಾದಲ್ಲಿ ಕೆಲವು ಪೀಠಿಕೆಗಳು ಹೃದಯದಲ್ಲಿ ಮನೆ ಮಾಡಿರುವ ಕೆಲವು ಆತಂಕಗಳನ್ನು ಪ್ರಕಟ ಮಾಡಲಿ. ಇಂತಹ ಕರ್ತವ್ಯಗಳ ಬಗ್ಗೆ ನ್ಯಾಯಪರವಾದ ಮಾತನಾಡುವುದು ಹಾಗೂ ಸಾಹಿತ್ಯದ ಸೂಜಿಯಿಂದ ವಿಮರ್ಶೆ ಮಾಡುವುದು ಶ್ರೀಮಂತಿಕೆಯ ಹಸ್ತದಿಂದ ಒಳಿತನ್ನು ಬಯಸುವ ಉಡುಪನ್ನು ಹರಿದೊಗೆದಂತೆ ಆಗುತ್ತದೆ.

ಹಾಗೂ ಅತ್ಯಂತ ಸಭ್ಯ ಮತ್ತು ಶಿಷ್ಟ ಉಡುಪಾದ ನಿಲುವಂಗಿಯನ್ನು ಓರೆ ಹಾಗೂ ವಕ್ರವಾದ ಕತ್ತರಿಯಿಂದ ಕತ್ತರಿಸಿದಂತೆ ಆಗುತ್ತದೆ. ಈ ಆಧಾರದ ಮೇಲೆ ಸ್ವಸ್ಥ ಮತ್ತು ಜಾಗೃತ ಅಭಿಪ್ರಾಯದ ಕ್ಷೇತ್ರದಲ್ಲಿ ವೇಗದ ನಡಿಗೆಯ ಮಾನವನ್ನು ಆ ದುರ್ಬೀನಿನ ನೋಟದಿಂದ ಪ್ರಜ್ಞೆಯ ಕಾಡಿಗೆಯನ್ನು ಹಚ್ಚಿದಂತಾಗುತ್ತದೆ. ಲೋಕ ಕಲ್ಯಾಣದ ಅಭಿಪ್ರಾಯವನ್ನು ಮುಂದಿಟ್ಟಲ್ಲಿ ಒಂದು ವೇಳೆ ಅನಾಗರೀಕ ಸ್ವಬಾವದ ಪಾಪಿಷ್ಠ ಮತ್ತು ಕಪಟ ಬುದ್ಧಿಯವನು ಅವನ ಕ್ಷೇಮದ ದೋಣಿಯನ್ನು ನಾಶಮಾಡಿ ಅಲೆಗಳ ನಡುವೆ ಮುಳುಗುವಂತೆ ಮಾಡುವಂತಹ ಕ್ರಿಯೆಯ ಬಗ್ಗೆ ಅಲೋಚನೆ ಮಾಡುವುದಾದಲ್ಲಿ ಅವನ ಅಹಂಕಾರದ ಹೊತ್ತನ್ನು ದುಃಖ ಮತ್ತು ದುರ್ದಿನಗಳ ಕ್ಷೇತ್ರದಲ್ಲಿ ಹಾಕಿ ಅವನ ದೇಹವನ್ನು ಹರಿತವಾದ ಕತ್ತಿಯ ಏಟಿಗೆ ಸಮರ್ಪಣೆ ಮಾಡುವುದು. ಆತನು ಆ ಮೂಲಕ ಸಾವಿಗೆ ಆಹ್ವಾನವನ್ನು ನೀಡುವುದಾಗಿದೆ ಹಾಗೂ ಪರಲೋಕದ ಸಮುದ್ರದ ಮೀನುಗಳ ರಕ್ತಪಿಪಾಸುತನದ ತುತ್ತನ್ನಾಗಿ ಮಾಡಿದಲ್ಲಿ ಹಾಗೂ ಪ್ರಾಣವನ್ನು ಅರ್ಪಣೆ ಮಾಡುವ ಬಹಾದುರ್ ಸಿಪಾಯಿಗಳ ವಿಧೇಯತೆ ಮತ್ತು ಪ್ರಾಮಾಣಿಕತೆಯ ನಡತೆಯನ್ನು ಪರಾಕ್ರಮೀ ಸೈನ್ಯವು ಈ ಮಾತಿನ ಶಕ್ತಿ ಮತ್ತು ಪ್ರಕೃತಿಯನ್ನು ಹೊಂದಿ ಕಣ್ಣ ರೆಪ್ಪೆ ಮುಚ್ಚುವುದರಲ್ಲಿ ಖ್ಯಾತಿಯ ತುತ್ತತುದಿಯನ್ನು ತಲಪುವ ಆಕಾಶದ ಸುದ್ದಿಯನ್ನು ಕಿತ್ತೊಗೆದು ತೀವ್ರಗತಿಯಲ್ಲಿ ಚಲಿಸುವ ಕುದುರೆಗಳ ಕಾಲುಗಳ ಧೂಳನ್ನಾಗಿ ಪರಿವರ್ತಿಸಬಲ್ಲವು. ವೈಭೋಗ ಮತ್ತು ವೈಭವದ ಪರ್ವತದ ಮೇಲೆ ಪಾದಗಳನ್ನು ಇಡುವ ಕುದುರೆಗಳ ಹೆಜ್ಜೆಗಳ ಸುತ್ತಲಿನ ಧೂಳು ವಿಜಯಪ್ರಾಪ್ತಿಯನ್ನು ಪಡೆಯುತ್ತವೆ. ಹಾಗೂ ವಿರೋಧಿ ಮತ್ತು ಯುದ್ಧಾಕಾಂಕ್ಷಿಗಳ ವರ್ತುಲದಲ್ಲಿ ಉಳಿದಿರುವ ಪಾಪಿಷ್ಠ ರಕ್ತದಿಂದ ದುರ್ನಡತೆಯ ಮತ್ತು ಕಡುಗಪ್ಪು ಪಾಪಗಳಿಂದ ಕೂಡಿದ ದೇಶಗಳ ಗಲ್ಲಿಗಳಲ್ಲಿ ಅಲೆಯುವ ನದಿ ಕಾಲುವೆಗಳು ಅಮ್ಮಾನ್ ಸರೋವರದ ಮೇಲೆ ಹೊಟ್ಟೆಕಿಚ್ಚು ಪಟ್ಟು ತಮ್ಮದೇ ಬೆವರಿನಲ್ಲಿ ಮುಳುಗುತ್ತಾ ಲಜ್ಜಿತರಾಗುವಂತೆ ಮಾಡುವುದು. ಒಟ್ಟಾರೆ ಈ ಕ್ರಮದಿಂದ ಖಚಿತವಾಗುವುದೇನೆಂದರೆ ರಾಜ್ಯದ ವಿಶ್ವಾಸಘಾತುಕರು ಮತ್ತು ರಾಜ್ಯಾಡಳಿತದ ಭವಿಷ್ಯತ್ತಿನ ಬಗ್ಗೆ ಪರಿವೆ ಇಲ್ಲದ ವ್ಯಕ್ತಿಗಳು ಬಾದಶಹನ ಗೌರವಕ್ಕೆ ಚ್ಯುತಿ ಬರುವಂತೆ ಹಾಗೂ ಮರ್ಯಾದೆಗೆ ಕುಂದುಂಟಾಗುವಂತೆ ನೀಚತನದಿಂದ ಮತ್ತು ಅವಹೇಳನದ ಮಣ್ಣಿನ ಮೇಲೆ ಎಸೆಯಲು ಬಯಸುತ್ತಾರೆ ಹಾಗೂ ಸಮುದಾಯಗಳ ಬಾಂಧವ್ಯಗಳನ್ನು ಆ ಕೋಟೆಯ ಒಳ ಭಾಗದಲ್ಲಿ ಸಂರಕ್ಷಿಸಲಾಗಿದೆ. ಅವರನ್ನು ಸಾವಿನ ಅಂಚಿಗೆ ನೂಕಲಾಗುವುದು.

ಒಟ್ಟಾರೆ ಕೆಲವು ದಿನ ಯುದ್ಧದ ವಿಜಯ ಅಥವಾ ಪರಾಕ್ರಮಿಗಳು ತಮ್ಮ ವೃತ್ತಿ ಕೌಶಲ್ಯವನ್ನು ತೋರುವುದಾದಲ್ಲಿ ಶೈತಾನನ ಪಥಭ್ರಷ್ಟತೆಯ ಜಾಲದಲ್ಲಿ ಯಾರೆಲ್ಲಾ ಕೈದಿಗಳಾಗಿದ್ದಾರೋ ಅವರು ಉಪಯುಕ್ತ ಬುದ್ಧಿವಾದ ಮತ್ತು ನಂಬಿಕೆ ಹಾಗೂ ವಿಶ್ವಾಸದ ಬಗ್ಗೆ ಸೂಕ್ತವಾದ ಪ್ರವಚನದಿಂದ ಕೃತಘ್ನತೆಯ ಕಾರಾಗೃಹದಿಂದ ಬಿಡುಗಡೆ

ಹೊಂದಿ ಪ್ರೀತಿಯ ಹೊಸ್ತಿಲಿನ ಮೇಲೆ ನಿಲ್ಲುವಂತಹವರಾಗುತ್ತಾರೆ. ವಿಶೇಷ ಹಾಗೂ ವಿಶಿಷ್ಟ ಜನರ ರೀತಿಯಲ್ಲಿ ಗುಲಾಮಿತನದ ವರ್ತುಲದಲ್ಲಿ ದಾಖಲಾಗುತ್ತಾನೆ. ಅತ್ಯಂತ ಸೂಕ್ತ ಮತ್ತು ಯೋಗ್ಯ ಹಾಗೂ ಬುದ್ಧಿವಂತನಾಗಿದ್ದಾನೆ. ಈ ಉದ್ದೇಶ ಮತ್ತು ಅಪೇಕ್ಷೆಯ ಸ್ವರೂಪವು ನ್ಯಾಯ ನುಡಿಯುವ ಮತ್ತು ನ್ಯಾಯ ಪರಿಪಾಲನೆ ಮಾಡುವ ಆತ್ಮದ ಕನ್ನಡಿಯ ಉಪಕೃತ ಹಾಗೂ ಕರುಣೆಯ ಹೃದಯದ ಅಂಗೀಕಾರದ ಶಂಕೆಯಲ್ಲಿ ಹಜರತ್ ಬಾದಶಹ ಫಾಝಿಯ ನ್ಯಾಯದ ಕನ್ನಡಿಯಲ್ಲಿ ಕಂಡು ಬಂದಿತು. ನೆತ್ತರ ಹರಿಸುವ ಶತೃಗಳ ಮೇಲೆ ಹಲ್ಲೆಯನ್ನು ನಡೆಸುವ ಪೈಲ್ವಾನ್ ಮತ್ತು ವಿರೋಧಿಗಳ ಕೊಲೆ ಮಾಡುವ ಪರಾಕ್ರಮಿ ಬಹಾದುರ್‌ಗಳನ್ನು ಆಕಾಶದೆತ್ತರದ ಕಿರಣಗಳನ್ನು ತಲುಪಿಸುವ ಹುಕುಮ್ ಮತ್ತು ಬೆಳಕನ್ನು ಪಡೆದು ವ್ಯೂಹ ರಚನೆ ಮಾಡಿ ಕೋಟೆಯ ಸುತ್ತಲೂ ಅವರುಗಳನ್ನು ನಿಲ್ಲಿಸಿ ಆಗಮನದ ಹಾದಿಯನ್ನು ಎಲ್ಲಾ ಜನತೆಯ ಮೇಲೆ ಬಂದ್ ಮಾಡಿ ಕೋಟೆಯ ಸಂರಕ್ಷಣೆಯ ಬಾಬ್ತು ಕೈಗೊಳ್ಳಬೇಕಾದ ಎಲ್ಲಾ ಕ್ರಮವನ್ನು ಕೈಗೊಳ್ಳಲಾಯಿತು ಮತ್ತು ಅದೃಷ್ಟಹೀನ ಹಾಗೂ ನತದೃಷ್ಟ ಜನರು ವಿರೋಧದ ಕ್ಷೇತ್ರದಲ್ಲಿ ವಿರೋಧದ ಅಖಾಡದಲ್ಲಿ ಪ್ರಯತ್ನ ಮಾಡುವರು. ಅಂತಹವರ ತಲೆಯನ್ನು ಕತ್ತಿಯ ಹಿಡಿಯ ರೀತಿಯಲ್ಲಿ ಮಾಡಿ ವಿನಾಶದ ಗೂಟ ಹಾಗೂ ಗವಿಯಲ್ಲಿ ಅವನ ವಾಸ್ತವ್ಯವನ್ನು ಅವನ ಜೀವನದ ಉದ್ದೇಶವನ್ನಾಗಿ ಮಾಡಲಾಗುವುದು. ಶುಭಾಕಾಂಕ್ಷೆಯ ಯುದ್ಧದಲ್ಲಿ ಸ್ಥಿರವಾಗಿ ನಿಲ್ಲುವ ಮತ್ತು ನಂಬಿಕೆ ಹಾಗೂ ವಿಶ್ವಾಸದ ತಲೆಯ ಮೇಲೆ ಗೌರವಪೂರ್ವಕಬಾಗಿ ಕುಳಿತುಕೊಳ್ಳುವನು. ಅದ್ಭುತ ವೈಭವದ ವಿಷಯವನ್ನು ಆಜ್ಞಾಪಾಲನೆಯ ಭೂಮಿ ಮತ್ತು ಹೊಸ್ತಿಲ ಮೇಲೆ ಹಣೆಯನ್ನಿಟ್ಟು ನಮಸ್ಕರಿಸುವವರಾಗುತ್ತಾರೆ ಮತ್ತು ಕಪಟತನ ಹಾಗೂ ದ್ವೇಷದ ಕತ್ತಿಗೆ ಹೆಚ್ಚು ಬಲವನ್ನು ನೀಡಿ ಪ್ರತೀಕಾರದ ಬಿಲ್ಲನ್ನು ಹೆದೆಯೇರಿಸಿ ಯುದ್ಧದ ಮೈದಾನದಲ್ಲಿ ಸೆಟೆದುಕೊಂಡು ಒಳ ಬಂದರು. ಯುದ್ಧದಲ್ಲಿ ಅಂಧಕಾರದಿಂದ ಕೂಡಿದ ಮತ್ತು ನತದೃಷ್ಟ ಪಿತೂರಿಕೋರ ವ್ಯಕ್ತಿಗಳು ಕೃತಘ್ನತೆಯ ಜನರು ಈ ಪರಿಸ್ಥಿತಿಯ ನೋಟ ಮತ್ತು ವೀಕ್ಷಣೆಯಿಂದ ಹೀಗೆಂದು ಮಾತನಾಡಿದರು. ಈ ಹೊತ್ತು ಸ್ಥಿರ ಹೆಜ್ಜೆಗಳ ಮೈದಾನದಲ್ಲಿ ನಿಲ್ಲುವ ಪೈಲ್ವಾನರ ಜನಸಂದಣಿಯಿಂದ ಮತ್ತು ಅವರ ಇರುವಿಕೆಯಿಂದ ತುಂಬಿದೆ. ನಮ್ಮ ಗೌರವ ಮತ್ತು ಮರ್ಯಾದೆಯು

ಆತ್ಮಾಭಿಮಾನದ ಸರ್ವಸ್ವವೂ ಸೂರೆಯಾಗುವುದು ಮತ್ತು ಪರಾಕ್ರಮದ ಕ್ಷೇತ್ರದಲ್ಲಿ ಬಲಾಢ್ಯ ಶಕ್ತಿ ಮತ್ತು ಸ್ಥಾನವನ್ನು ಹೊಂದಿದ ಬಹಾದುರರ ಸದ್ಗುಣದ ಮುಷ್ಟಿಯಿಂದ ನಮ್ಮ ಪ್ರಾಣದ ಕಿರಣಗಳಲ್ಲಿ ಜೇಬಿನಿಂದ ಹಿಡಿದು ಸಾವಿನ ಸಾವಿರಾರು ಛಿದ್ರ ಚೂರುಗಳು ವ್ಯಕ್ತವಾಗಿವೆ. ಒಂದು ವೇಳೆ ಹುಡುಕಾಟ ಮತ್ತು ಪ್ರಯತ್ನದ ರೇಷಿಮೆ ಬಟ್ಟೆಯಿಂದ ಶಾಂತಿ ರಕ್ಷಣೆಯ ಜುಬ್ಬಾದ ನೆರವು ಮತ್ತು ಬೆಂಬಲದ ಹೊಲಿಗೆಯ

ಸೂಜಿಯಿಂದ ಸ್ವತಃ ತನ್ನ ದೇಹದ ಮೇಲೆ ಹೊಲಿದುಕೊಂಡರೂ ಕೂಡಾ ಖಂಡಿತವಾಗಿ ಪರಾಕ್ರಮದ ಉಡುಪಿನ ಮೇಲೆ ಸಧೃಢ ಬಾಹುಗಳನ್ನು ಹೊಂದಿದ ಬಹಾದುರರ ಹಂಗಿಸುವಿಕೆಯ ಧೂಳು ಹರಡುವುದಿಲ್ಲ. ಮತ್ತು ನಮ್ಮ ಯೋಗ್ಯತೆಗನುಸಾರವಾಗಿ ಸೂಕ್ತ ಉಡುಪನ್ನ ಮತ್ತು ನ್ಯಾಯವನ್ನು ಪಡೆಯುವ ಪೈಲ್ವಾನರ ಸಶಕ್ತತೆ ಮತ್ತು ತೇಜಸ್ಸಿನ ಹವೆಯಿಂದ ಕೂಡಿರುತ್ತದೆ. ಇಲ್ಲವಾದಲ್ಲಿ ಸಿಂಹದಂತಂಹ ಸ್ವಭಾವವನ್ನು ಹೊಂದಿರುವ ಮತ್ತು ಯುದ್ಧದ ಕ್ಷೇತ್ರದಲ್ಲಿ ನೈಸರ್ಗಿಕ ಹಸ್ತದಿಂದ ಹೊರತೆಗೆದು ಕರುಣೆಯನ್ನು ತ್ಯಜಿಸಿದ ಮುಷ್ಟಿಯಿಂದ ನಮ್ಮ ಬದುಕಿನ ಜೇಬಿಗೆ ಯಾವುದೇ ತಡೆ ಇಲ್ಲದೆ ನಿಷ್ಕರುಣೆಯಿಂದ ತುಂಡು ತುಂಡನ್ನಾಗಿ ಮಾಡುವರು ಮತ್ತು ನಮ್ಮ ಬದುಕಿನ ಸೆರಗನ್ನು ಭಯ ಮತ್ತು ರೌದ್ರಾವತಾರದ ಹಸ್ತದಿಂದ ಸಾವಿರಾರು ಸ್ಥಳಗಳಲ್ಲಿ ರಂಧ್ರಗಳನ್ನು ಮಾಡುವರು. ಆದುದರಿಂದ ವಾಗ್ದಾನ ಮತ್ತು ವಿಧೇಯತೆಯ ಬಾಂಧವ್ಯಕ್ಕೆ ಪರಸ್ಪರ ಶಕ್ತಿಯನ್ನು ನೀಡಿ ಸಿಂಹದ ರೀತಿಯಲ್ಲಿ ಉದ್ಘೋಷಣೆಯನ್ನು ಮಾಡುತ್ತಾ, ಸದರಿ ಘೋಷಣೆಯನ್ನು ತಾರಕಕ್ಕೇರಿಸುತ್ತಾ ಪರಾಕ್ರಮದ ಸಿಪಾಯಿಗಳ ಜೊತೆಯಲ್ಲಿ ಯುದ್ಧದ ಉದ್ದೇಶದಿಂದ ಸರಪಳಿಯನ್ನು ಕಟ್ಟಿ ಮತ್ತು ಗಾಳಿಸುದ್ದಿಗಳನ್ನು ತಡೆದು ಕೋಟೆಯ ಮುಂಭಾಗದ ಹಿಸ್ಸೆಯಿಂದ ಕೆಳಗಡೆ ಹಾರತೊಡಗಿದರು ಮತ್ತು ಒಂದು ತುಕಡಿಯು ಕೋಟೆಯ ಒಳ ಭಾಗದಲ್ಲಿ ವಿಶೇಷವಾಗಿ ನೇಮಿಸಲ್ಪಟ್ಟವರು ಬಂದೂಕಿನ ಮೂಲಕ ತುಪಾಕಿಯನ್ನು ಸಿಡಿಸತೊಡಗಿ ಧೂಮದ ಹೆಚ್ಚಳದಿಂದ ಟ್ಯಾಂಕಿನ ಜ್ವಾಲೆ ಮತ್ತು ತೋಪಿನ ಘರ್ಜನೆಯಿಂದ ಖದಂಕ್ ಬಾಣದ ಪ್ರಯೋಗದಿಂದ ಎಲ್ಲಾ ಹಿರಿಕಿರಿಯರ ದೃಷ್ಟಿಯಲ್ಲಿ ಅಂಧಕಾರದಿಂದ ಹೊರತಾದ ರಾತ್ರೆಯಲ್ಲಿ ಬೆಳಕಿನ ಪ್ರಕಾಶದಿಂದ ಪ್ರಜ್ಞೆಯನ್ನು ಹೊಂದಿದ ನೋಟವನ್ನು ಆಶ್ಚರ್ಯಚಕಿತರನ್ನಾಗಿ ಮಾಡುವರು ಮತ್ತು ಈ ಸಿಡಿಲಿನ ಪ್ರಭೆಯನ್ನು ಆವೇಶ, ಪ್ರತ್ಯಾವೇಶ ನೆಮ್ಮದಿ ಮತ್ತು ಸಂತುಲಿತ ಹೃದಯದ ಜನರ ಮನಸ್ಸಿನಲ್ಲಿ ಭಯಾನಕತೆ ಮತ್ತು ರೌದ್ರತೆಯನ್ನು ಉಂಟು ಮಾಡುವಂತಹದಾಗಿದೆ. ಭೂಮಿಯಲ್ಲಿ ಕ್ಷೋಭೆಯನ್ನು ಹರಡುವಂತಹ ಅಹಂಕಾರೀ ಶೈತಾನನಂತಹ ಜನರ ಕೃತ್ಯಗಳಿಗೆ

ಕಲ್ಲಿನಮಳೆಗರೆಯುವಂತಹದಾಗಿದೆ.
ಹೃದಯದಲ್ಲಿ ಬೆಂಕಿಯ ಜ್ವಾಲೆಯಂತಾಗುತ್ತದೆ.
ರಾತ್ರಿಯ ಹೊಗೆ ಮತ್ತು ತಾರೆಗಳಿಂದ ಕಿಡಿಗಳು
ಮೂಡುತ್ತವೆ.

ಶತ್ರು ಸಂಹಾರದ ಯುದ್ಧರಂಗದಲ್ಲಿ ಏಕಮೇವ ಆಧಿಪತ್ಯವನ್ನು ಸಾಧಿಸಿದ ಮತ್ತು ಪರಾಕ್ರಮದ ತುತ್ತ ತುದಿಯನ್ನು ಏರಿದಂತಹ ಕುದುರೆ ಸವಾರನು ಆರಂಭಿಸಿದ್ದೇನೆಂದರೆ ಗಾಯಗಳನ್ನು ಕತ್ತಿಯ ಗಾಯದ ರಂಧ್ರವನ್ನು ಮಾಡಿ ಸತ್ಕರ್ಮದ

ಕ್ರಿಯೆಯಿಂದ ಬಾಗಿಲನ್ನು ತೆರೆಯುವವನು ಆತ್ಮ ಸಮರ್ಪಣೆಯು ಅಧ್ಯಾಯವನ್ನು ಕೊನೆಗೊಳಿಸುವನೆಂದು ಅರಿತು ಭೂಮಿಯನ್ನು ಶತ್ರುಗಳ ರಕ್ತ ಪ್ರವಾಹದ ತೀವ್ರತೆಯ ಹಂತಕ್ಕೆ ತಲುಪಿಸಿದ. ಸಮುದ್ರದ ಮೇಲೆ ಆಚ್ಛಾದಿತ ಮೋಡಗಳ ಫಲದ ಭರವಸೆಯ ಚಾದರವನ್ನು ಭುಜದ ಮೇಲೆ ಹೊತ್ತು ಹಾಗೂ ಮುತ್ತು ಸೃಷ್ಟಿಯಾಗುವ ಮಳೆಯ ಹನಿಗಳನ್ನು ಲಾಲಸೆಯ ಕಿವಿಗಳಿಂದ ಕೆಳಗೆ ಎಸೆದು ಮತ್ತು ಹತಭಾಗ್ಯ ಹಾಗೂ ಬಹಿಷ್ಕೃತವಾದ ಗಣಿಯನ್ನು ಧಾನ್ಯದ ರಾಶಿಯನ್ನು ಸುಡುವುದರಲ್ಲಿ ಉದ್ಯುಕ್ತನಾದ ಮತ್ತು ಸ್ವತಃ ಜ್ವಾಲೆಯಿಂದ ಕೂಡಿದ ಕಿಡಿಗಳಿಂದ ಅಹಂಕಾರ ಮತ್ತು ಜಂಬದಿಂದ ಕೂಡಿದ ಪರಾಕ್ರಮದಿಂದ ಪ್ರತಿಷ್ಠಿತ ಅದೃಷ್ಟದಿಂದ ಕ್ರೋಧದ ಆವೇಶದಿಂದ ಹೊಗೆ ಮತ್ತು ಧೂಮದ ತೀವ್ರತೆಯಿಂದ ಕೋಟೆಯಿಂದ ಹೊರ ಬಂದ. ಒಣಗಿದ ಕಡ್ಡಿಯಂತೆ ಕೂಡಿದ ಕತ್ತಿಯ ಬೆಂಕಿಯ ಹಿಡಿಗಳಿಂದ ಯೋಧರಿಗೆ ಉತ್ತಮವಾದ ವಿಜಂಯು ಪ್ರಾಪ್ತಿಂಯಾಯಿತು ಮತ್ತು ಆ ಶರದೃತುವಿನ ಚಳಿಗಾಲದ ಎಲೆಯುದುರುವಂತಹ ಅದೃಷ್ಟವನ್ನು ಹೊಂದಿದ ವ್ಯಕ್ತಿಯ ಪ್ರತಿಷ್ಠೆ ಮತ್ತು ಖ್ಯಾತಿಯ ವಸಂತ ಋತುವಿನ ಪುಷ್ಪಗಳನ್ನು ಆಯುವ ಕರ್ತವ್ಯದಿಂದ ಕೋಟೆಯ ಮುಳ್ಳುಗಳಿಂದ ಆವೃತವಾದ ಕಂಟಿಗಳಿಂದ ತನ್ನ ಹೆಜ್ಜೆಗಳನ್ನು ಹೊರ ತೆಗೆದ. ಹೃದಯವನ್ನು ಸೀಳುವಂತಹ ಯೋಧರ ಬಾಣಗಳು ಮತ್ತು ಶತೃಗಳನ್ನು ಧ್ವಂಸಗೊಳಿಸುವ ಕತ್ತಿಗಳು ಅವನ ಜೀವವೃಕ್ಷದ ಮೈದಾನವನ್ನು ತುಂಡರಿಸಿ ಅವನ ಕೈಕಾಲುಗಳನ್ನು ರೆಂಬೆಗಳಂತೆ ಬೇರ್ಪಡಿಸಿ ಮರಣಶಯ್ಯೆಯ ಭೂಮಿಯ ಮೇಲೆ ಅವನನ್ನು ಕೆಡವಲಾಯಿತು. ಈ ಪರಿಸ್ಥಿತಿಯ ನಡುವೆ

ಭಯಾನಕತೆಯನ್ನು ಹೆಚ್ಚಿಸುವ ನೆಮ್ಮದಿಯನ್ನು ಕದಡುವಂತಹ ವಾತಾವರಣ ಮತ್ತು ದುಃಖದಿಂದ ಕೂಡಿದ ಭೀಕರತೆಯನ್ನು ಹೆಚ್ಚಿಸುವಂತಹ ಸನ್ನಿವೇಶ ಉಂಟಾಯಿತು. ಅವರ ಭಯಾನಕತೆಯಿಂದ ರೋಗಿಗಳ ಹೃದಯದ ನಾಡಿ ಮಿಡಿತದ ವಾರೀಸುದಾರರ ಹೃದಯಗಳು ಉದ್ವಿಗ್ನತೆ ಅಶಾಂತಿ ಹಾಗೂ ಗಾಬರಿಯಿಂದ ಕೂಡಿದ್ದು ಅವನ ದೇಹಾದ್ಯಂತ ಕಂಪನವು ಮೂಡಿತು. ಇದೇ ರೀತಿಯಲ್ಲಿ ನಾಲ್ಕು ಗೋಡೆಗಳಲ್ಲಿ ಭಯಾನಕತೆ ಮತ್ತು ರೌದ್ರತೆಯ ದೆಸೆಯಿಂದ ಸುತ್ತ ಮುತ್ತಲಿನ ಧೂಳಿನಂತೆ ಪಶ್ಚಾತ್ತಾಪದಿಂದ ಕೂಡಿದ ಮೋಡವು ಹೇಗೆ ಮೂಡಿ ಬಂದಿತೆಂದರೆ ಅದರ ಹನಿಗಳ ದೆಸೆಯಿಂದ ಧೃಡತೆಯನ್ನು ಹೊಂದಿದ ಪೈಲ್ವಾನರು ಕೂಡಾ ಬೆದರಿದರು. ಆ ಮಳೆಯ ದೆಸೆಯಿಂದ ಬಿಲ್ಲಿಗೆ ಹೆದೆಯೇರಿಸಿದಂತಹ ಬಾಣ ಬಿಡುವವರು ಮತ್ತು ಕರಾರುವಾಕ್ಕಾಗಿ ಗುರಿಯನ್ನು ತಲುಪುವವರು ಕಂಡು ಬಂದರು. ಅದರ ವಿದ್ಯುತ್ ದೃಷ್ಟಿಯಿಂದ ಉದ್ಯಾನವನದಲ್ಲಿ ಅವರ ಜೀವನವು ಕತ್ತಿಂಯ ಶಿಷ್ಯತ್ವದಿಂದ ಏಕದೇವತಾವಾದದ ಮೇಲೆ ಗರ್ವವನ್ನು ಪಡುವವರು ಮತ್ತು ಅವನ ಪಾಠಶಾಲೆಯಲ್ಲಿ

ಸರ್ಪರು ಅಗ್ನಿಯ ಜ್ವಾಲೆ ಮತ್ತು ಕಿಡಿಗಳ ವಿನಃ ರಕ್ತಸಿಕ್ತ ಅಧ್ಯಾಯದ ಸಿಡಿಲು ಮತ್ತು ಪರಾಕ್ರಮದ ಸಂಖ್ಯಾಶಾಸ್ತ್ರ ಹೇಗಿತ್ತೆಂದರೆ ಅವನ ಧ್ವನಿಯು ಪ್ರಳಯದ ದಿನಾಂಕದಂದು ಬಿರುಗಾಳಿಯನ್ನು ಬೀಸುವ ಹೊತ್ತಿನಲ್ಲಿ ಗಾಳಿಯು ಅಡರುವಂತೆ ಮತ್ತು ಯಾವಾತನಿಗೆ ಸಂತೋಷ ಹಾಗೂ ನೆಮ್ಮದಿಯ ಹೃದಯವನ್ನು ಹೊಂದಿದ ವ್ಯಕ್ತಿಗೆ ಗಾಬರಿ ಮತ್ತು ಭಯಾನಕತೆಯನ್ನು ಹೆಚ್ಚಿಸುವುದೆಂದು ಹೇಳಲಾಗುವುದು. ಒಟ್ಟಾರೆ ಡೇರೆಗಳು ಮತ್ತು ಅವರ ಆರಾಮದಾಯಕ ತಂಗುದಾಣಗಳು ಹರಿತ ಮತ್ತು ವೇಗದ ಪಿತೂರಿಯ ವಿದ್ರೋಹದಿಂದ ಹವಾಮಾನದಲ್ಲಿ ಕಾಗೆಗಳು ಮತ್ತು ಹದ್ದುಗಳು ಹಾರಾಡತೊಡಗಿದವು. ಕೆಲವು ಜನರಂತೂ ಅವಸಾನ ಮತ್ತು ವಿನಾಶದ ಬಗ್ಗೆ ರಾಜಿಯಾಗುವಂತಹ ಮತ್ತು ಸಂಕಷ್ಟಗಳ ಬಗ್ಗೆ ತೀವ್ರವಾದ ಸಹನೆಯನ್ನು ಹೊಂದಿದಂತಹ ಮತ್ತು ಕಳೆದು ಹೋದ ನೆಮ್ಮದಿಯ ಕಾಲದ ನೆನಪಿನಲ್ಲಿ ಸಹನೆಯನ್ನು ಹೊಂದಿದ್ದು ಅಮೂಲ್ಯ ಉಸಿರಾಟವನ್ನು ಕೇವಲ ನಿಟ್ಟುಸಿರುಬಿಡುವ ಸಲುವಾಗಿ ಬಳಸಿದರು. ಸತ್ಫಲದ ಪ್ರತಿಫಲದ ಪ್ರಾಪ್ತಿಯಲ್ಲಿ ತೊಡಗಿಕೊಂಡ ಜನರು ಆಗ ಉಭಯ ಸಂಕೇತಗಳ ನಷ್ಟ ಮತ್ತು ಉಭಯಲೋಕದ ನಷ್ಟಗಳ ವಿನಃ ಯಾವುದೇ ಫಲ ಅಥವಾ ಲಾಭವನ್ನು ಪಡೆಯಲಿಲ್ಲ. ಬಾಹ್ಯ ಸ್ವರೂಪದ ಬಗ್ಗೆ ಭರವಸೆಯನ್ನು ಇಡುವಂತಹ ಮತ್ತು ಬಾಹ್ಯ ವಸ್ತುಗಳ ಮೇಲೆ ನಂಬಿಕೆಯನ್ನು ಇಡುವ ರೋಗಿಯ ಚೆಹರೆಯಂತೆ ನಂಬಿಕೆಯನ್ನಿಟ್ಟು ದೃಷ್ಟಿಯನ್ನು ಜಿನ್ಸ್‌ಗಳು ಮತ್ತು ಯಾರಿಗೆ ವಾರೀಸುದಾರಿಕೆಯನ್ನು ನೀಡಲಾಗಿದೆಯೋ ಅಂತಹವರ ಮೇಲೆ ಭರವಸೆಯನ್ನು ಇಡದೆ ಇರುವವರು ಆಕ್ರಂದನದಲ್ಲಿ ತೊಡಗಿದ್ದು ಮೃಷ್ಟಾನ್ನ ಮತ್ತು ಅದ್ಭುತ ಕೊಡುಗೆಗಳನ್ನು ನೀಡಿದ

ಮತ್ತು ಕೊಡುಗೆಗಳನ್ನು ನೀಡಿ ಕ್ಷಮೆಯನ್ನು ಕರುಣಿಸುವ ಅಸ್ತಿತ್ವದ ಕರುಣೆ ಮತ್ತು ಕೊಡುಗೆಗಳ ಬಗ್ಗೆ ಅಡ್ಡಿಯನ್ನು ಉಂಟು ಮಾಡುವವರಂತಹವರಾದರು. ಆ ಸ್ಥಳದಿಂದ ದೇವ ಸಾಕ್ಷಾತ್ಕಾರದ ಬೆಳಕಿನಿಂದ ಹೃದಯವನ್ನು ಬೆಳಗುವವರು ಮತ್ತು ಉತ್ತಮ ಚಿಂತನೆಯ ಮುತ್ತುಗಳು ಮತ್ತು ಅಮೂಲ್ಯ ವಜ್ರ ವೈಢೂರ್ಯಗಳಿಂದ ಕೂಡಿದ ಹೃದಯವನ್ನು ಹೊಂದಿದ ವ್ಯಕ್ತಿಗಳು ಬಾದಶಹ ಗಾಝಿಯ ಈ ರೀತಿಯ ಆತಂಕದ ಪರಿಸ್ಥಿತಿಯಲ್ಲಿ ದೈವ ಪ್ರೀತಿಯ ಪಗಡಿಯನ್ನು ತಲೆಯ ಮೇಲೆ ಧರಿಸಿ ದೈವಾನುಗ್ರಹದ ಜುಬ್ಬಾವನ್ನು ದೇಹದ ಮೇಲೆ ಧರಿಸಿ ಬಾಹ್ಯ ವಸ್ತುಗಳಿಂದ ಹೃದಯವನ್ನು ಅಲಂಕರಿಸುತ್ತಾ ಸುಗಂಧಪೂರಿತ ಅಂಬರ್ ಮತ್ತು ಪುನುಗು ಹಾಗೂ ಕರುಣೆಯ ಸುಗಂಧವನ್ನು ಸಿಂಪಡಿಸಿ ಅವುಗಳ ಸ್ವಾಭಾವಿಕ ಗುಣಧರ್ಮದ ಸುವಾಸನಾಯುಕ್ತ ಅಲೆಯಿಂದ ನೆಮ್ಮದಿ ಮತ್ತು ಮೃದುತ್ವ ಹಾಗೂ ರಿಯಾಯತಿಯನ್ನು ಪಡೆಯುತ್ತಾ ಮುಗುಳುನಗೆಯನ್ನು ಬೀರುತ್ತಾ ಹಸನ್ಮುಖಿಯಾಗಿ ಪ್ರಕಟವಾಗುತ್ತಾ ಹುಕುಮನ್ನು

ನೀಡಿದರು. ಏನೆಂದರೆ ತಮ್ಮ ಜೀವನದ ಸರಿ ತಪ್ಪುಗಳ ಬಗ್ಗೆ ಕ್ಷಮೆಯನ್ನು ಕೋರುವ ಸಕಾಲ ಇದಾಗಿದೆ ಮತ್ತು ಅಲ್ಲಾಹನ ಸ್ತುತಿಯು ನಿಗದಿತವಾಗಿದೆ. ಹಚ್ಚ ಹಸಿರು ಮತ್ತು ತಾಜಾ ಪರಿಸ್ಥಿತಿಯಲ್ಲಿ ಕುರುಡುತನದಿಂದ ಸಂರಕ್ಷಣೆಯನ್ನು ಸಂಯಮ ಹಾಗೂ ವಿವೇಕ ಹಾಗೂ ಸ್ಥಿರ ಚಿತ್ತತೆಯನ್ನು ಹೊಂದಿದವನನ್ನಾಗಿ ಮಾಡಲಿ. ಒಟ್ಟಾರೆ ಇದೊಂದು ಪರೀಕ್ಷೆ ಮತ್ತು ಸಂಕಷ್ಟದ ವಿಷಯುಕ್ತ ಗಾಳಿಯಿಂದ ಜೀವನದ ಉದ್ಯಾನವನವು ವಿಧವಾ ರಾತ್ರೆಯಂತೆ ಯಾವ ರೀತಿಯಲ್ಲಿಯೂ ಕಡಿಮೆ ಇಲ್ಲ. ಈ ಹೊತ್ತಿನ ಅತ್ಯಂತ ಪ್ರಿಯ ಫಲ ಮತ್ತು ಸಸ್ಯಗಳನ್ನು ದೇವರ ಅತ್ಯಂತ ಅದ್ಭುತ ಕೊಡುಗೆ ಮತ್ತು ಕೃತಜ್ಞತೆಯ ಜಮೀನಿನ ಮೇಲೆ ಎಸೆಯಲಾಯಿತು. ಔನ್ನತ್ಯವನ್ನು ಏರುವ ಬಾದಶಹ ಫಾರ್ಖಿಯ ಶಕ್ತಿ ಸಾಮರ್ಥ್ಯದ ಮೇಲೆ ಹೆಮ್ಮೆ ಪಡುವವನಾಗುತ್ತೇನೆ. ಈ ಲೋಕದ ಅಂಧಕಾರದ ಪರಿಸ್ಥಿತಿಯನ್ನು ಬಾದಶಾಹೀ ಮತ್ತು ನ್ಯಾಯಪರತೆಯ ಧರ್ಮ ಹಾಗೂ ಬೆಳಕಿನಿಂದ ಉಜ್ವಲವನ್ನಾಗಿ ಮಾಡಿದ್ದು ಬಡತನ ಹಾಗೂ ಅಸಹಾಯಕತೆಯ ಹಾಸಿಗೆಯ ಮೇಲೆ ಬಿದ್ದಂತಹ ರೋಗಿಗಳ ಮೇಲೆ ಇನಾಮು ಮತ್ತು ಕೊಡುಗೆ ಹಾಗೂ ದಾನ ಧರ್ಮಗಳ ವಿಸ್ತಾರದಿಂದ ಆರೋಗ್ಯ ಮರುಕಳಿಸುವಂತೆ ಹಾಗೂ ಸದೃಡವಾಗುವಂತೆ ಮಾಡುವರು. ಹಿಂಸೆ ಮತ್ತು ಶೋಷಣೆಯ ಸೆರೆಮನೆಯ ಹಿಂಸೆಯಲ್ಲಿರುವ ಜನರಿಗೆ ನ್ಯಾಯ ಮತ್ತು ವಿವೇಚನೆಯ ಮೂಲಕ ಮುಕ್ತಿಯನ್ನು ನೀಡಿದ್ದಾರೆ. ಒಟ್ಟಾರೆ ಹಗಲು ರಾತ್ರೆ ಜನತೆಯ ಅಭ್ಯುದಯ ಮತ್ತು ಬಾಹ್ಯ ಸಂಗತಿಗಳ ಸುದಾರಣೆಯ ಬಜಾರನ್ನು ತೀವ್ರಗತಿಯಲ್ಲಿ ಜಾರಿಗೊಳಿಸಿ, ದುಃಖ, ಅಶಾಂತಿ ಹಾಗೂ ವಿದ್ರೋಹವನ್ನು ನಿರ್ನಾಮ ಮಾಡುವ ಸಲುವಾಗಿ

ಸಂಪೂರ್ಣ ವಿಸ್ತಾರವಾದ ನಗರಗಳಲ್ಲಿ ವಾಸಮಾಡುವ ಜನರನ್ನು ಭಾಷೆ ಮತ್ತು ನಷ್ಟದಿಂದ ಸಂಪೂರ್ಣವಾಗಿ ಕೃತಜ್ಞೆಯತ್ತ ಮುನ್ನಡೆಯುವವರು ಮತ್ತು ಪ್ರಯತ್ನಶೀಲರಾಗುವಂತೆ ಮಾಡಿದ್ದಾನೆ. ಅದೇ ರೀತಿಯಲ್ಲಿ ಮಾರ್ಗದರ್ಶನ ಮತ್ತು ಒಳಿತಿನ ವಾಸ್ತವ ದೀಪವನ್ನು ಪಡೆಯುವ ಸಲುವಾಗಿ ಅಂಧಕಾರದಿಂದ ಕೂಡಿದ ಹೃದಯವನ್ನು ಸ್ವಹಿತಾಸಕ್ತಿಯಿಂದ ಪಥಭ್ರಷ್ಟರಾಗಿರುವ ಜನರ ಮಾರ್ಗವನ್ನು ನಾಶ ಮಾಡುತ್ತಾನೆ. ಅಂದರೆ ಪ್ರಳಯದ ದಿನದಂದು ಹಾಗೂ ಅಂತಿಮ ತೀರ್ಮಾನದ ದಿನದಂದು ಕೆಂಪು ಬಣ್ಣದ ಬಟ್ಟೆಯನ್ನು ತೊಟ್ಟ ದೇಹದ ಜನರಿಗೆ ಅಂತಿಮ ನ್ಯಾಯ ತೀರ್ಮಾನದ ದಿನದಂದು ನಾಲ್ಕು ವಿಧದ ಉಡುಪುಗಳಿಂದ ಸನ್ಮಾರ್ಗದಿಂದ ಕೂಡಿದ ಸಭ್ಯ ಹಾಗೂ ಸುಧಾರಣೆಯ ರೇಷಿಮೆಯ ಉಡುಪನ್ನು ಮತ್ತು ದೇವ ಸಾಕ್ಷಾತ್ಕಾರದ ಪಗಡಿಯನ್ನು ಹೊಲಿಸಲಾಗುವುದು. ಅಭ್ಯುದಯ ಮತ್ತು ಸನ್ಮಾರ್ಗದ ಹಾದಿಯಲ್ಲಿ ವ್ಯಕ್ತಿಗಳಿಗೆ ಒಳಿತನ್ನು ಮಾಡುವ ಸಲುವಾಗಿ ಶ್ರದ್ಧೆ ಹಾಗೂ ವಿಶ್ವಾಸದ ವಿದ್ಯಾರ್ಥಿಗಳು ಫಲ ಪ್ರಾಪ್ತಿಯನ್ನು ಪಡೆಯುವಲ್ಲಿ ಒಂದೇ ಒಂದು ಕ್ಷಣವನ್ನು

ಕೂಡ ವ್ಯರ್ಥ ಮಾಡುವುದಿಲ್ಲ. ಅನಾದಿ ಮತ್ತಿ ಅಮರ ಫಲ ಪ್ರಾಪ್ತಿಯನ್ನು ಹೊಂದಿರುವ ವ್ಯಕ್ತಿಗಳಿಗೆ ಹೇಳುವುದೇನೆಂದರೆ ಯಾವ ಇಂದ್ರಿಯಗ್ರಾಹ್ಯ ಸಂತೋಷ ಮತ್ತು ಶೈತಾನನ ಕೊಡುಗೆಗಳಿಂದ ಮೋರೆಯನ್ನು ತಿರುವಿ ದೇವರನ್ನು ಸಂಪ್ರೀತಗೊಳಿಸುವಲ್ಲಿ ನಮಾಜ್ ಮಾಡುವ ಪಶ್ಚಿಮ ದಿಕ್ಕನ್ನು ತಮ್ಮ ಕ್ರಿಯೆ ಮತ್ತು ಪ್ರತಿಕ್ರಿಯೆ ಗಳ ಮೂಲಕ ಉತ್ತಮ ನಡವಳಿಕೆಯ ಸಾಷ್ಟಾಂಗದ ಸಜದಾದ ಸ್ಥಳವನ್ನಾಗಿ ಮಾಡಲಿ. ಅಂದರೆ ಪರಲೋಕ ಮತ್ತು ಈ ಲೋಕದಲ್ಲಿ ಕೆಡುಕಿನಿಂದ ಮತ್ತು ದುರದೃಷ್ಟದಿಂದ ಕೂಡಿದ ವ್ಯಕ್ತಿಗೆ ಹೆಸರನ್ನು ನೀಡಲಾಗುವುದು. ಯಾವಾತನು ಈ ಸಂತೋಷದ ಸುದ್ದಿಯ ಕಾಬಾದ ಪ್ರದಕ್ಷಿಣೆಯಿಂದ ವಂಚಿತನಾಗಿ ಇಂದ್ರಿಯಗ್ರಾಹ್ಯ ಲೋಲುಪತೆಯ ಹೊಸ್ತಿಲ ಧೂಳನ್ನು ಗುಡಿಸುವನು ಹಾಗೂ ಬಾಚುವವನಾಗುವನೊ ಆತನು ಲಾಲಸೆ ಹಾಗೂ ಆಸಂಭಾಷಣೆಯ ರೀತಿಯಲ್ಲಿ ನಿರಂತರವಾದ ಸಜೆ ಮತ್ತು ಪ್ರಕ್ಷುಬ್ದತೆಯ ಬೆಂಬಲಿಗ ಸಲಾಬತ್‌ಖಾನನು ವಿಫಲವಾದಂತಹ ಕುದುರೆಯ ಲಗಾಮನ್ನು ಬಿಸಿಯಾದ ಮೈದಾನದಲ್ಲಿ ಮತ್ತೊಮ್ಮೆ ಅಹವಾಲನ್ನು ಬರೆಯುವವನಾಗಿ ಮತ್ತೊಮ್ಮೆ ತನ್ನ ವೇಗದಿಂದ ಕೂಡಿದ ಕುದುರೆಗಳನ್ನು ಏರಲಿ. ಆ ದಿನಗಳಲ್ಲಿ ತೂರ್ ಕೋಟೆಯ ಸಂಪೂರ್ಣ ಮುತ್ತಿಗೆಯ ಸಂದರ್ಭದಲ್ಲಿ ಅವನು ಅವಿಧೇಯತೆ ಮತ್ತು ಲೋಪಗಳ ಕೊಚ್ಚೆಯಲ್ಲಿ ಕಾಲನ್ನಿಟ್ಟು ಕೃತಜ್ಞತೆ ಮತ್ತು ಉಪ್ಪುಂಡವನಿಗೆ ದ್ರೋಹ ಬಗೆಯುವಂತಹ ಅರಸೊತ್ತಿಗೆಯ ಹಕ್ಕುಗಳನ್ನು ತಿರಸ್ಕರಿಸುತ್ತಾ ಉಪಕಾರಗಳನ್ನು ಮರೆಯದೆ ಬಾಹ್ಯ ಹಾಗೂ ಆಂತರಿಕವಾದ ಅದ್ಭುತ ಕೊಡುಗೆಗಳು ಮತ್ತು ವೈಭವ ಹಾಗೂ ವೈಭೋಗದ ಸಂಪತ್ತು ಮತ್ತು ಇಡುಗಂಟನ್ನು ಕೇವಲ ಕೀಳೆಂದು ತಿಳಿದು

ಮೇಲೆ ಹೇಳಿದ ಬಾರೋತ್‌ಹೋ ಕೋಟೆಯ ಒಳಗಡೆ ರಕ್ಷಣೆಯನ್ನು ಪಡೆದು ಕೋಟೆಯ ಒಳಗೆ ವಾಸವಾಗಿದ್ದ ವ್ಯಕ್ತಿಗಳು ಮತ್ತು ಕೆಲವು ಅವಶ್ಯಕ ಹಾಗೂ ಅಗತ್ಯದ ಸಾಮಾಗ್ರಿಗಳನ್ನು ಪರ್ಗನ ಹರ್ನಬೀಲ್‌ನಲ್ಲಿ ಬೀಡು ಬಿಟ್ಟವರಿಗೆ ಹೊರೆಯನ್ನು ಹೊತ್ತು ತಲುಪಿಸಿದ. ತದನಂತರ ಒಳಿತನ್ನು ಬಯಸುವ ಕನ್ನಡಿಯನ್ನು ರಕ್ಷಿಸುವ ಸಲುವಾಗಿ ಬಾವುಟವನ್ನು ಏರಿಸಿ ಬಂಡಾಯದ ಕಲ್ಲಿನಿಂದ ಹಿಂಸೆ ಮತ್ತು ಭಯಾನಕತೆಯ ಕಾಡಿನ ನಿವಾಸಿಯಾಗಿದ್ದ ಆ ಕಟುಕನನ್ನು ಎದುರಿಸಿದ. ದುರಾಸೆ ಮತ್ತು ಲಾಲಸೆಯು ಆ ಭಯಂಕರ ಸ್ವರೂಪಿಯ ನಿರಂತರವಾದ ಕ್ರಿಯೆಯಾದ ನಂತರ ವಾಸ್ತವ ಸತ್ಯ ಘಟನೆಯನ್ನು ದಾಖಲಿಸಿದ ದರ್ಗಾ ಆಲಿ ಝಾ ಬಾದಶಹ ಗಾಝಿಯ ನಿಜದ ಸತ್ಯವನ್ನು ಅರಿತ ವ್ಯಕ್ತಿಗಳ ಕಡೆಯಿಂದ ಅನೇಕ ಕೋರಿಕೆಗಳನ್ನು ಪಡೆದು ಆ ಪಿತೂರಿಕೋರ ಗಲಭೆಕೋರ ವ್ಯಕ್ತಿಯ ಹೆಸರಿಗೆ ಹುಕುಮನ್ನು ಹೀಗೆಂದು ಆದೇಶ ಮಾಡಿದ. 'ಓ ಗೋಧಿಯ ರೂಪದ ಜವೆಯನ್ನು ಮಾರಾಟ ಮಾಡುವ ಮತ್ತು ನೆಪಗಳನ್ನು ಮುಂದೊಡ್ಡುವ ಕಪಟಿಯೇ ಭುಜದ ಮೇಲೆ ಜ್ವಾಲೆಯಂತಹ

ತಲೆಯನ್ನು ಹೊಂದಿದಲ್ಲಿ ಅಹಂಭಾವವನ್ನು ಉತ್ಪನ್ನ ಮಾಡುತ್ತದೆ ಹಾಗೂ ಚಿಕ್ಕ ನಾಲಿಗೆಯ ದೊಡ್ಡ ಮಾತುಗಳ ಸಲುವಾಗಿ ನಾಲಿಗೆಯು ಉದ್ದವಾಗುತ್ತದೆ. ಆದರೆ ಅವನ ಬದುಕಿನ ಬಿಸಿ ಶ್ವಾಸವು ಕಠಿಣ ಗಾಳಿಯ ಆಡುವಿಕೆಯಿಂದ ತಣ್ಣಗಾಗುತ್ತದೆ. ಅಹಂಕಾರ ಮತ್ತು ಸ್ವಪ್ರತಿಷ್ಠೆಯ ಧೂಳು ಮೇಲೆ ಎದ್ದರೂ ಕೂಡ ಆ ಧೂಳು ಹುಯ್ಯುವ ಮೋಡದ ಕೆಲವೇ ಹನಿಗಳಿಂದ ಅದು ನಾಶವಾಗಿ ಭೂಮಿಯ ಮೇಲೆ ಬಿದ್ದು ಮರೆಯಾಗುತ್ತದೆ. ಒಂದು ವೇಳೆ ನೀನು ಬಡವನ ಮನೆಗೆ ಬಿದ್ದ ಬೆಂಕಿಯಂತೆ ನಷ್ಟವನ್ನು ಉಂಟು ಮಾಡುವ ಬೆಂಕಿಯನ್ನು ಹೊತ್ತಿಸಬೇಡ. ನಿನ್ನ ಜೀವನ ಮತ್ತು ಅವನ ಜೀವನ ನಿರ್ವಹಣೆ ಮತ್ತು ಬದುಕಿನ ಹಾಸಿಗೆಯು ನಮ್ಮ ಕ್ರೋಧದ ಅಗ್ನಿಯ ಜ್ವಾಲೆಯಿಂದ ಸುಟ್ಟು ಹೋಗುವುದು. ಒಳಿತಿನ ಬಯಕೆ, ಸನ್ನಡತೆ ಹಾಗೂ ಒಳ್ಳೆಯ ಉದ್ದೇಶದ ರಕ್ಷಣೆಯನ್ನು ಹೊಂದುವ ಮನೆಗೆ ಆಗಮಿಸು. ಮೋಸ, ಪಿತೂರಿ ಹಾಗೂ ನೆಪಗಳನ್ನು ಹೂಡುವ ಹಿಡಿಯು ಬದುಕಿನ ಧಾನ್ಯದ ರಾಶಿಯನ್ನು ಸುಡುವುದಾಗಿದೆ. ಅದನ್ನು ಧ್ವಂಸ ಮತ್ತು ನಾಶದ ಪಾತ್ರೆಯ ಇದ್ದಿಲನ್ನಾಗಿ ಮಾಡು. ಇಲ್ಲವಾದಲ್ಲಿ ನೀನು ಬೆನ್ನಿನ ಮೇಲೆ ಬಿಂದಿಗೆಯನ್ನು ಹೊತ್ತು ಬೀಳುತ್ತಾ ಏಳುತ್ತಾ ದಾರಿ ಕ್ರಮಿಸುವ ವಯೋವೃದ್ಧನಂತೆ ಆಗುವೆ. ದ್ವೇಷ ಮತ್ತು ಅವಿಧೇಯತೆಯ ಹೊರೆಯಿಂದ ಸೊಂಟವನ್ನು ಸೊಟ್ಟಗಾಗಿಸಿ ವಿನಾಶ ನೀಚತನ ಮತ್ತು ಅಪಮಾನದ ಫಲಿತಾಂಶವನ್ನು ಮತ್ತು ವಿನಯವಂತಿಕೆ ಹಾಗೂ ಅವಮಾನಕಾರೀ ಘಟ್ಟಗಳಲ್ಲಿ

ಪ್ರತಿ ಕಿರಿಯ ಮತ್ತು ಹಿರಿಯರ ತಿರಸ್ಕಾರಪೂರ್ವಕ ಕಣ್ಣೋಟಕ್ಕೆ ಒದೆ ನೀಡಲ್ಪಟ್ಟ ಯುವಕ ಹಾಗೂ ವೃದ್ಧನು ಕಲ್ಲಿನಂತಾಗುವನು. ಆ ಹೊತ್ತಿನಲ್ಲಿ ಲಾಟೀನಿನ ರೀತಿಯಲ್ಲಿ ಗುಲಾಮಿತನದ ದಿರಿಸನ್ನು ಧರಿಸಿ ಉರಿಯುತ್ತಿರುವ ದೀಪದ ರೀತಿಯಲ್ಲಿ ಒಂಟಿ ಕಾಲಿನ ಮೇಲೆ ನಿಂತು ಸಾವಿರಾರು ಆರ್ತ ಪ್ರಾರ್ಥನೆಗಳನ್ನು ಭೂಮಿಯ ಉದ್ವೇಗ ಮತ್ತು ಕಳವಳವನ್ನು ತೋರಿದಲ್ಲಿ ಜ್ವಾಲೆಯಂತೆ ನೂರು ವಿಧಗಳ ಪರಾಕ್ರಮಿ ಮತ್ತು ಶಕ್ತಿವಂತ ಪೈಲ್ವಾನರು ಮತ್ತು ಯುದ್ಧರಂಗದ ಪರಾಕ್ರಮಿ ಜನರು ಕಪಟ, ದ್ವೇಷ ಮತ್ತು ಮರ್ಮಭೇದಕದ ತಲೆಯನ್ನು ಸುಡುವಿಕೆಯಲ್ಲಿ ನಿರತವಾದ ಮೇಣದ ಬತ್ತಿಯ ರೀತಿಯಲ್ಲಿ ಕತ್ತರಿಯಿಂದ ದೇಹವನ್ನು ಪ್ರತ್ಯೇಕ ಮಾಡಲು ಸಾಧ್ಯವಿಲ್ಲ. ಶೋಧನೆ ಮತ್ತು ಅನ್ವೇಷಣೆಯ ಹಸ್ತವು ಅಜಾಗರೂಕತೆ ಮತ್ತು ನಿರ್ಲಕ್ಷ್ಯದ ತೋಳು ಮತ್ತು ಬಾಹುವಿನಲ್ಲಿ ಖಂಡಿತವಾಗಿಯೂ ಧರಿಸಲು ಸಾಧ್ಯವಿಲ್ಲ.

ಕಡುಗಪ್ಪು ಪ್ರಕೃತಿ ಹೊಂದಿರುವ ಕಾಗೆಯ ಮೊಟ್ಟೆಯನ್ನು
ಸ್ವರ್ಗದ ಉದ್ಯಾನವನದ ನವಿಲಿನ ಒಡಲ ಕಾವಿಗೆ ಇಟ್ಟಲ್ಲಿ
ಆ ಮೊಟ್ಟೆಯ ಕಾವಿನ ಸಂದರ್ಭದಲ್ಲಿ
ಸ್ವರ್ಗದ ಅಂಜೂರದಿಂದ ಅದಕೆ ಗುಟುಕನ್ನು ನೀಡಿದಲ್ಲಿ

ಅದಕೆ ಸಲ್‌ಬೀಲ್‌ನ ಚಿಲುಮೆಯ ನೀರನ್ನು ನೀಡಿ
ಆಮೊಟ್ಟೆಯ ಮೇಲೆ ದೇವದೂತ ಜಿಬ್ರೀಲ್
ತಮ್ಮ ಜೀವ ಮಿಡಿಯುವ ಉಸಿರನ್ನು ನೀಡಿದರೂ
ಫಲಿತಾಂಶವೇನೆಂದರೆ ಕಾಗೆಯ ಮೊಟ್ಟೆಯಿಂದ
ಕಾಗೆಯೇ ಜನಿಸುವುದು.
ಸ್ವರ್ಗದುದ್ಯಾನದ ನವಿಲಿಗೆ ವೃಥಾ ಪರಿಶ್ರಮ ದಕ್ಕುವುದು.

ಈ ಮಾರ್ಗದರ್ಶನದ ಕಟ್ಟಡ ಮತ್ತು ಬುನಾದಿಯಿಂದ ಕೂಡಿದ ಪತ್ರವನ್ನು ಮಕ್ಕಳ ಅಧ್ಯಯನದ ಸಲುವಾಗಿ ಪುಸ್ತಕಗಳಲ್ಲಿ ಮತ್ತು ಜ್ಯೋತಿಷಿಗಳು ಹಾಗೂ ಭವವಿಷ್ಯವಾಣಿ ನುಡಿಯುವವರ ಹೊತ್ತಿಗೆಗಳ ರೀತಿಯಲ್ಲಿ ಮರೆಗುಳಿತನ ಮತ್ತು ಲೋಪದ ಸಣ್ಣ ಕಮಾನಿನ ಮೂಲಕ ಹಾಯಿಸಿ ಪುರಾತನ ಅಹಂಕಾರ ಮತ್ತು ದ್ರೋಹದ ಹವೆಯು ನೀಚತನ ಮತ್ತು ಅವಮಾನಕ್ಕೆ ಯೋಗ್ಯವಾಗಿದೆ. ಕೆಲವು ದಿನಗಳ ನಂತರ ಶೇಖ್ ಹತೀಮ್‌ನ ಮೂಲಕ ಕೆಲವು ಅಸಂಬದ್ಧ ಬೇಡಿಕೆ ಮತ್ತು ಸಂಪೂರ್ಣ ಕಷ್ಟಕರವಾದ ಮತ್ತು ತೀರಾ ವ್ಯರ್ಥ ವಸ್ತುಗಳ ಜೊತೆಯಲ್ಲಿ ದರಬಾರಿನ ಅಂಗೀಕಾರದಿಂದ ಕೃಪೆ ತೋರಲು ಸಾಧ್ಯವಾಗದಂತಹ ವಸ್ತುಗಳನ್ನು ಹಾಜರಿಸಿದ. ಆಗ ಅನೇಕ ಮಿತ್ರತ್ವದ ಒಳಿತನ್ನು ಬಯಸುವ ವ್ಯಕ್ತಿಗಳು ಮತ್ತು ಅರಸೊತ್ತಿಗೆಯ ವಿಶ್ವಾಸಿಗರು ನೆಪಗಳನ್ನು ಹೂಡುವ ಶೇಖ್ ಹತೀಮ್ ಮತ್ತು ಅವನ ಉದ್ದೇಶಗಳು ವ್ಯಕ್ತವಾದುದರಿಂದ ಆ ಕಪ್ಪು ಕೃತ್ಯಗಳ ಕಡುಗಪ್ಪು ವ್ಯಕ್ತಿತ್ವದ ಯುದ್ಧಕೋರನ ಪ್ರಸ್ತಾಪಕ್ಕೆ ಅಡ್ಡಿಯಾದರು. ಒಟ್ಟಾರೆ ಅವನ ಬಾಲಿಶತನ ಮತ್ತು ಸಿರಿತನದ ತೋರಿಕೆಯ ಉತ್ತಮ ಪೋಷಾಕು ಪರಾಕ್ರಮ ಮತ್ತು ಹಸ್ತದಿಂದ ಬಾದಶಹನ ಸೈನ್ಯದಿಂದ ಹೊಡೆದೋಡಿಸುವ ಅರ್ಹತೆಯನ್ನು ಹೊಂದಿತ್ತು ಮತ್ತು ಆ ಯುದ್ಧದ ವೃಕ್ಷವು ತಂಪಾದ ನೆಮ್ಮದಿಯ ಸಂತೋಷಕ್ಕೆ ಅರ್ಹರಾದ ಸೈನಿಕರ ಕ್ರೋಧಾವೇಶದ ಗಾಯಗಳಿಂದ ನಲುಗಲೇ ಬೇಕಿತ್ತು. ಅವನ ವಶದಲ್ಲಿದ್ದ ಕುದುರೆಯು ಶೆಹರಿಸ್ತಾನದತ್ತ ಸರಾಗವಾಗಿ ತಲಪುವುದು ದುಃಸ್ಸಾಧ್ಯವಾಗಿತ್ತು. ಮತ್ತು ಅವನ ಇಚ್ಛೆಯ ಬೆಳಗಿನ ಆಕಾಶದ ಪರಿಸರದಲ್ಲಿ ಗುಪ್ತವಾಗಿ ವಿನಯವಂತಿಕೆ ಮತ್ತು ಅದೃಷ್ಟದ ಆಕಾಶವು ಬೆಳಗಲಿಲ್ಲ ಮತ್ತು ಹಜರತ್ ಬಾದಶಹ ಗಾಝಿ ದುರ್ಬಿನಿನಿಂದ ನೋಟವನ್ನು ಹರಿಸುತ್ತಿದ್ದ ಆ ಸ್ಥಳವು ಭಗವಂತನ ಅತ್ಯಂತ ಅದ್ಭುತವಾದ ಕೊಡುಗೆಯಾಗಿತ್ತು.

ಶೇಖ್ ಹತೀಮ್‌ನ ದುರ್ವರ್ತನೆ ಮತ್ತು ಒರಟು ಮುಂಗೋಪಿತನ ಸ್ವಭಾವದಿಂದ ಖಂಡಿತವಾಗಿಯೂ ಕೃತಘ್ನತೆ ಮತ್ತು ಕೀಳು ಅದೃಷ್ಟದ ದೆಸೆಯಿಂದ ದುರಾಡಳಿತ ಮತ್ತು ಕೆಟ್ಟ ಶಕುನದ ನಕ್ಷತ್ರದವನಾಗಿದ್ದ ಎಂಬುದು ಸ್ಪಷ್ಟವಾಗಿತ್ತು. ಈ ವಿಷಯದಲ್ಲಿ ಸ್ಪಷ್ಟ ಪುರಾವೆಮತ್ತು ಸಂಕೇತವೆಂದು ತಿಳಿದು ದರಬಾರಿಗೆ ಸಂಬಂಧಪಟ್ಟ ಬುದ್ಧಿವಂತರು

ಮತ್ತು ಚಿಂತಕರು ಹಾಗೂ ಅಭಿಪ್ರಾಯವನ್ನು ನೀಡಿದವರನ್ನು ಕುರಿತು ಅಪ್ಪಣೆ ಕೊಡಿಸಿದ್ದೇನೆಂದರೆ, ಬಾಹ್ಯ ರೂಪದಲ್ಲಿ ಭಯಾನಕ ರೂಪವನ್ನು ಹೊಂದಿರುವವನ ಕೃತ್ಯಗಳು ಮತ್ತು ನಡವಳಿಕೆಯಿಂದ ಆತನ ಆಂತರ್ಯವು ಅಂಧಕಾರದಿಂದ ಕೂಡಿದೆ ಎಂದು ಅರಿವಾಗುವುದು. ಅವನ ಗೌರವ ಮತ್ತು ದರ್ಜೆಯ ಇಖಾಬ್ ಎಂಬ ಕಾಲ್ಪನಿಕ ಪಕ್ಷಿಯು ಎತ್ತರಕ್ಕೆ ಏರುವುದಾಗಿದೆ. ಅವನ ಮನಃಸ್ಥಿತಿಯ ಮೇರೆಗೆ ಇನ್ನೇನು ಬಾಕಿ ಇದೆ ಎಂಬುದು ವ್ಯಕ್ತವಾಗುತ್ತಿದೆ. ನಮ್ಮ ಬಾಣಗಳ ಕೋಪಾಗ್ನಿಯ ಮುಂದೆ ಅವನ ದೇಹದಿಂದ ರೋಮಗಳು ಮೇಲೆ ಹಾರಿ ಪರಲೋಕಕ್ಕೆ ಹೋಗಿ ಬೀಳುವವು. ಮತ್ತು ಅವನ ವಿಳಾಸ ಹಾಗೂ ಇಚ್ಛೆಯ ಆಕಾಶವು ಎತ್ತರವನ್ನು ತಲಪುವ ಅದೃಷ್ಟವು ಇಂದು ಭೂಮಿಯ ಮೇಲೆ ಬೀಳುವುದಾಗಿದೆ ಮತ್ತು ಮಣ್ಣು ಮುಕ್ಕುವುದಾಗಿದೆ. ನಮ್ಮ ಕೋಪದ ಕ್ಷೇತ್ರದಲ್ಲಿ ಸಂಗಿಸ್ತಾನಿನ ಪಾದಗಳು ವೇಗವಾಗಿ ಓಡುತ್ತವೆ ಮತ್ತು ನೆಗೆದು ಖುರಪುಟಗಳನ್ನು ಒಗೆದು ಪರಲೋಕದ ಹುಲ್ಲನ್ನು ಮೇಯುವವನಾಗುತ್ತಾನೆ. ಗೂಬೆಯ ಸ್ವರೂಪದ ರಣಹದ್ದು ಅಂದರೆ ಅಶುದ್ಧ ಶವಗಳನ್ನು ಭಕ್ಷಿಸುವ ರಣಹದ್ದಿನ ಸ್ವಭಾವವನ್ನು ಹೊಂದಿದ್ದಾನೆ. ಅವನ ಆಹಾರವು ಸತ್ತ ಪ್ರಾಣಿಯ ಅಶುದ್ಧ ಶವವನ್ನು ಭಕ್ಷಿಸುವುದೇ ಆಗಿದೆ. ಅವನ ಕೀಳು ಮತ್ತು ಕೇಡಿನ ಬುದ್ಧಿಯ ಉಗುರುಗಳಿಂದ ತನ್ನ ವೈಭವ ಮತ್ತು ಶ್ರೀಮಂತಿಕೆಯ ದೇಹಕ್ಕೆ ಗಾಯಗಳನ್ನು ಉಂಟು ಮಾಡಿಕೊಳ್ಳುವವನಾಗಿದ್ದಾನೆ. ಅವನ ಹೃದಯವನ್ನು ಪ್ರೇಮ ನಂಬಿಕೆ ಹಾಗೂ ವಿಶ್ವಾಸದ ಜಾಲದಲ್ಲಿ ಬಂಧಿಸುವ ಮತ್ತು ಅವನ ಜೀವಕ್ಕೆ ಪ್ರೇಮ ಹಾಗೂ ವಾತ್ಸಲ್ಯದ ಪಂಜರದಲ್ಲಿ ಸೆರೆಯಾಳನ್ನಾಗಿಸುವ ಕೆಲಸವು ಅಸಂಭವವಾಗಿದೆ. ಎತ್ತರಕ್ಕೆ ಹಾರಾಡುವ ಸೌಭಾಗ್ಯಶಾಲೀ ಗರುಡನನ್ನು ಸತ್ಯನಿಷ್ಠೆಯ ಚರ್ಮದ ಕೈಗವಸಿನ ಮೇಲೆ ಕೂರಿಸಿ ಸತ್ಯದ ತಲೆ ಕವಚವನ್ನು ಧರಿಸಿ ಸದಿಚ್ಛೆಯನ್ನು ಕಲಿಯುವವ ಸಂಭವ ಮತ್ತು ಜಹಾಂಪನಾರವರ ದರಬಾರಿನ ವಿಶಾಲ ರೆಕ್ಕೆಗಳನ್ನು ಹರಡಿರುವ ಪಕ್ಷಿಗಳ ವಿಶ್ರಾಂತಿ ಗೃಹವನ್ನಾಗಿಸುವ ಸೌಭಾಗ್ಯ ಮತ್ತು ಇಚ್ಛೆಯನುಸಾರ ಕೆಲಸ, ಸಿರಿವಂತಿಕೆ ಹಾಗೂ ಹಿರಿತನದ ಮನೆಯಲ್ಲಿ ವಾಸ ಮಾಡುವ ಪಾರಿವಾಳದ ಗೂಡಾಗಿದೆ. ಅದನ್ನು ತಮ್ಮ ಆರಾಮ ಮತ್ತು ನೆಮ್ಮದಿಯ ಮನೆಯನ್ನಾಗಿ ಮಾಡಲಿ. ಆದರೆ ಯುದ್ಧರಂಗದಲ್ಲಿ ಸೈನ್ಯದ ಪಂಕ್ತಿ ಮತ್ತು ಶತ್ರುವಿನ ವಿನಾಶದ ಪಾನಗೃಹದ

ಶರಾಬಿನಿಂದ ಶರಾಬನ್ನು ಸೇವಿಸುವವರ ವಕ್ರತೆ ಮತ್ತು ಶತೃತ್ವವನ್ನು ಶಿಕಾರಿ ಮಾಡುವ ಹಾಗೂ ಪ್ರಾಣಹತ್ಯೆ ಮಾಡುವ ಪಾನಗೃಹದಿಂದ ಮುಕ್ತವಾಗಿ ಆ ಅಮಲಿನಿಂದ ಕೂಡಿದ ಅಹಂಕಾರದ ಯುದ್ಧಕೋರತನದ ಶರಾಬಿನ ನಶೆಯಲ್ಲಿ ತೇಲಾಡುತ್ತಾ ಗಾಜಿನಂತಹ ದೇಹವು ಪಿತೂರಿಯಿಂದ ಆವರಿಸಿರುವ ದೇಹವನ್ನು ಛಿದ್ರ ಮಾಡಿ ಆ ಶುಭ್ರರಕ್ತದ ದ್ರಾಕ್ಷಾರಸವನ್ನು ಭೂಮಿಯ ನೆಲದ ಮೇಲೆ

ಹರಿಸದಿರುವುದು ಒಳ್ಳೆಯದು ಮತ್ತು ಅಹಂಕಾರದ ದ್ರವದ ತೀಕ್ಷ್ಣತೆ ಅಸ್ತಿತ್ವದ ಹೂಜಿಯನ್ನು ದ್ರಾಕ್ಷಿಯ ಸಿಹಿ ಮದಿರೆಯಿಂದ ಖಾಲಿಯಾಗಿಸಿದೆ. ವಿಧೇಯತೆ ಮತ್ತು ವಿನಯಶೀಲನನ್ನಾಗಿ ಆದೇಶದ ಒದೆಯನ್ನು ಕೊಟ್ಟು ಅವನ ಬದುಕಿನ ನೆಮ್ಮದಿಯನ್ನು ಮರಣದ ಮಣ್ಣಿನೊಂದಿಗೆ ಬೆರಸುವುದಿಲ್ಲ. ಲೋಕದ ಜನರ ಹೃದಯವು ಆನಂದ, ನೆಮ್ಮದಿ, ವೈಭೋಗ ಹಾಗೂ ಸುಖದ ಶಾಂತಿಯೊಂದಿಗೆ ಶ್ರೀಮಂತವಾಗುವುದಿಲ್ಲ ಮತ್ತು ಸಂತೋಷ ಆಮೋದ ಪ್ರಮೋದಗಳು ಇಡೀ ಲೋಕದ ಹೃದಯದ ನೆಮ್ಮದಿ ಮತ್ತು ಸಂತೋಷದ ಪಾನ ಪಾತ್ರೆಯು ಸ್ಥಿರವಾದ ನೀರಿನಿಂದ ಜಹಾಂಪನಾಹ್‌ರವರ ದರಬಾರಿನಿಂದ ಸಂಪರ್ಕ ಹೊಂದಿರುವ ಸದಿಚ್ಛೆಯ ವ್ಯಕ್ತಿಗಳು ಶುಭವನ್ನು ಬಯಸುವ ಉದ್ಯಾನವನದಲ್ಲಿ ಹಸನ್ಮುಖವನ್ನು ಹೊಂದಿರುವಂತಹ ಮುಗುಳುನಗೆಯನ್ನು ಬೀರುವವನಾಗಿರುವುದಿಲ್ಲ. ಮತ್ತು ಹಜರತ್ ಬಾದಶಹ ಫಾಝಿಯು ಆ ಕರಾರು ಮತ್ತು ನೆರವನ್ನು ದೇಶದ ಮತ್ತು ದೇಶದ ರಾಜಕೀಯದ ಸಲುವಾಗಿ ಅತ್ಯಂತ ಯೋಗ್ಯವೆಂದು ಪರಿಭಾವಿಸಿ ಝೀಖಾದ ಮಾಹೆಯ ಇಪ್ಪತ್ತನೆಯ ತಾರೀಕಿನಂದು ಶುಭಗಳಿಗೆಯಲ್ಲಿ ಪಿತೂರಿ ಮತ್ತು ದಂಗೆಯ ಕಟ್ಟಡಗಳನ್ನು ನೆಲಸಮ ಮಾಡುವ ಸಲುವಾಗಿ ಸೂಕ್ತ ಸಲಹೆ ಸೂಚನೆಗಳ ದರಬಾರಿನಿಂದ ಪಥಭ್ರಷ್ಟರಾಗಿರುವ ವ್ಯಕ್ತಿಗಳನ್ನು ಧ್ವಂಸ ಮಾಡುವ ಸಲುವಾಗಿ ಖಿಲ್ಲೇದಾರನ ಮುತ್ತಿಗೆಯ ಉದ್ದೇಶವನ್ನು ಹೊಂದಿ ಅಲ್ಲಿಂದ ಹೊರಟರು. ಮುಮುಲಕತ್ ಮದಾರ್ ಅಬ್ದುಲ್ ಮಜೀದ್ ಹಗಲು ರಾತ್ರೆ ತನ್ನ ಶುಭ ಶ್ವಾಸಗಳನ್ನು ಲೋಕದ ಗುಂಪುಗಳ ಶ್ರೇಯೋಭಿಲಾಷೆಗಾಗಿ ವಿನಿಯೋಗಿಸಿದ್ದು ತನ್ನ ಅಮೂಲ್ಯ ಕ್ಷಣಗಳನ್ನು ಹಗಲು ರಾತ್ರೆ ಮಾನವೀಯತೆಯ ಅನೇಕ ಸಮುದಾಯಗಳ ಮೇಲೆ ಉಪಕಾರವನ್ನು ಮಾಡುವಲ್ಲಿ ನಿರತರಾಗಿದ್ದರು. ಆ ಪರ್ವತದ ಇಲಾಖೆಯ ಪ್ರದೇಶದ ಸಂಪೂರ್ಣ ಅರಿವನ್ನು ಹೊಂದಿದ್ದು ಸಮತೋಲನವಿಲ್ಲದ ನೀಚತನ ಮತ್ತು ಮನನೋಯಿಸುವ ಎಲ್ಲ ವಿಷಯಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹೊಂದಿದ್ದರು. ಆದರೂ ಕೂಡ ಮತ್ತೊಮ್ಮೆ ವಿಶೇಷ ಅವಕಾಶವನ್ನು ನೀಡುವ ಧ್ವನಿಯಿಂದ ಕೂಡಿದ ಒಂದು ಪತ್ರವನ್ನು ಆ ಅಯೋಗ್ಯ ಸಲಾಬತ್‌ಗೆ ಉದ್ದೇಶಿಸಿ ಬರೆದರು.

ಓ ಪರಿಣಾಮಗಳ ಬಗ್ಗೆ ಅರಿವಿಲ್ಲದ ಕತ್ತೆಯೇ ಪ್ರಕೃತಿ ಸಹಜ ಸ್ವಭಾವದ ವಿರುದ್ಧ ವಕ್ರ ಅಭಿಪ್ರಾಯವನ್ನು ಹೊಂದಿರುವ ಶ್ರೇಷ್ಠತಮ ಕಂಬಕ್ಕೆ ರಭಸದ ಗಾಳಿಯು ಅಪ್ಪಳಿಸಿದಲ್ಲಿ ಯಾವ ನಷ್ಟ ಉಂಟಾಗುತ್ತದೆ ಮತ್ತು ಭಯಭೀತಿಯಿಂದ ಕೂಡಿದ ಪರ್ವತಕ್ಕೆ ಭೂಮಿಗೆ ಅಂಟಿಕೊಂಡು ನಡೆಯುವ ತೀವ್ರಗತಿಯ ಮಾರುತದ ಅಲೆಗಳಿಂದ ಯಾವ ಭಯ ಉಂಟಾಗುತ್ತದೆ ಸೀಮುರುಘ್ ಎಂಬ ಕಾಲ್ಪನಿಕ ಪಕ್ಷಿಯ ಶಿಕಾರಿಯ ಜಾಲದ ಶಿಕಾರಿಯನ್ನು ಮಾಡಲಾಗುವುದಿಲ್ಲ ಹಾಗೂ ಭಯಂಕರ ಸಿಂಹವನ್ನು ಯಾರೂ ಕೂಡ ಈವೊತ್ತಿನವರೆಗೂ ಭಯ ಮತ್ತು ನಿರಾಶೆಯ ಸರಪಳಿಯಲ್ಲಿ

ಬಂಧಿಸಿರುವುದಿಲ್ಲ. ಒಂದು ವೇಳೆ ಸಿಂಹದಂತಹ ಬಲವನ್ನು ಉಳ್ಳವನಾದಲ್ಲಿ ಬಾದಶಹನ ಗುಣ ಸ್ವಭಾವದ ಸೈನ್ಯವು ಯುದ್ಧ ರಂಗದಲ್ಲಿ ಆಕ್ರಮಣ ಮಾಡುವುದು. ಜಿಂಕೆಯಂತಹ ಸ್ವಭಾವದ ಸೈನಿಕರಿಗೆ ಪಲಾಯನ ಮಾಡುವುದರಿಂದ ಒಂದಿಷ್ಟು ಕ್ಷಮತೆ ಮತ್ತು ಯಾವುದೇ ಉಪಾಯಗಳು ಇರುವುದಿಲ್ಲ. ಒಂದು ವೇಳೆ ವಿಜಯ ಪ್ರಾಪ್ತಿಯಾದ ಭಾಗ್ಯಶಾಲಿಯು ಸಫಲತೆಯ ಸಮುದ್ರದ ಮೊಸಳೆಯಂತೆ ಸೈನ್ಯ ಮತ್ತು ಅಲೆಗಳನ್ನು ಅರಿಯುವವರ ರೀತಿಯಲ್ಲಿ ಇಳಿದು ಬಂದಲ್ಲಿ ನಿನ್ನ ಕಪ್ಪೆಯಂತಹ ಸೈನ್ಯವು ಏಡಿಯಂತಹ ಮುಖ ಮೋರೆಯನ್ನು ಹೊಂದಿರುವುದಾಗಿದೆ. ಅದು ಪಲಾಯನ ಮಾಡುವುದರ ಹೊರತು ಬೇರೆ ಯಾವ ಉಪಾಯಗಳು ಮತ್ತು ಮಾರ್ಗಗಳು ಮತ್ತು ಸುಳ್ಳಿನಿಂದ ಕೂಡಿದ ಅವಕಾಶಗಳು ಇರುವುದಿಲ್ಲ.. ಆದುದರಿಂದ ಸ್ವತಃ ತನ್ನನ್ನು ಸೂರ್ಯನ ಪ್ರಜ್ವಲಿಸುವ ಬೆಂಕಿಯ ಬೂದಿಯ ಕ್ಷುಲ್ಲಕ ಕಸಕಡ್ಡಿಯ ರೀತಿಯಲ್ಲಿ ಮಾಡಿಕೊಳ್ಳುವುದು ಬೇಡ. ಮತ್ತು ತನ್ನ ಪ್ಯಾದೆಯಂತಹ ಸೈನಿಕರ ಗುಂಪಿನ ನಡುವೆ ದ್ವೇಷ ಮತ್ತು ಪ್ರತ್ಯೇಕತೆಯ ಕಲ್ಲನ್ನು ಎತ್ತಿ ಹಾಕುವುದರ ಮೊದಲು ಹಜರತ್ ಬಾದಶಹ ಘಾಝಿಯ ಸಮತೆ ಮತ್ತು ಅಲಕ್ಷ್ಯತೆಯ ಚಿಕ್ಕ ಚೂರಿಯು ನಿನ್ನ ಎದೆಯನ್ನು ಲೇಖನಿಯ ರೀತಿಯಲ್ಲಿ ಕಿತ್ತೊಗೆದು ನಿನ್ನ ತಲೆಯನ್ನು ವಿನಾಶದ ಅಂಚಿಗೆ ತಳ್ಳುವರು. ಶ್ರೀಮಂತಿಕೆಯ ರೀತಿಯಲ್ಲಿ ಈ ಕರುಣೆ ಪ್ರಸಾದ ಮತ್ತು ಶಾಯಿಯನ್ನು ಪಡೆಯುವ ಉದ್ದೇಶದಿಂದ ಕೋರಿಕೆ ಮತ್ತು ವಿನಂತಿಯ ಬಾಯನ್ನು ತೆರೆದು ಭೋಗ ವಿಲಾಸದ ಎಲೆಗಳನ್ನು ಭಿನ್ನತೆಯ ಶಾಯಿಯ ರೀತಿಯಲ್ಲಿ ಸುತ್ತುವರೆದು ಆ ಕ್ರೋಧದ ಕತ್ತರಿಯಿಂದ ವಿನಯ ಮತ್ತು ದಾಸ್ಯಭಾವದ ಪುಸ್ತಕದ ಹಾಳೆಗಳನ್ನು ಚೂರುಚೂರನ್ನಾಗಿ ಮಾಡದಿದ್ದಲ್ಲಿ ತುಂಬಾ ಉತ್ತಮ ಕಾರ್ಯವಾಗುವುದು. ಆ ಅಯೋಗ್ಯ ಮತ್ತು ಅಧರ್ಮೀಯನಾದ ವ್ಯಕ್ತಿಯು ಆ ಪತ್ರವನ್ನು ವ್ಯರ್ಥ ಪ್ರಲಾಪವೆಂದು ಪರಿಗಣಿಸಿ ಮೂಕ ಮತ್ತು ಚಿಕ್ಕ ಕತ್ತೆಯನ್ನು ಅಮೂಲ್ಯ ಮತ್ತು ಅಪಾರ ಲಾಭ ತರುವ ಮುತ್ತಿನ ಮೇಲೆ ಪ್ರಾಮುಖ್ಯತೆ ಮತ್ತು ಮಾನ್ಯತೆಯನ್ನು ನೀಡಿ ಆ ನತದೃಷ್ಟ ಅವಲಕ್ಷಣದ ನಕ್ಷತ್ರದ ರೀತಿಯಲ್ಲಿ

ಎತ್ತರದ ಅದೃಷ್ಟಶಾಲೀ ನಕ್ಷತ್ರವನ್ನು ಹೊಂದಿರುವ ಲೋಕದ ಜನರು ಮತ್ತು ವ್ಯಕ್ತಿಗಳ ಸಲುವಾಗಿ ತಿರಸ್ಕಾರವನ್ನು ತೋರುವನು ಮತ್ತು ನಿಶ್ಶಕ್ತ ನರಿಯಂತೆ ಬಲಾಢ್ಯ ಘರುಖನ್‌ಫರ್ ಬಾಣವನ್ನು ಎದುರಿಸುವ ಹಸಿ ಆಸೆಯನ್ನು ಹೊಂದಿದ್ದು ಶತೃಸಂಹಾರದ ವೃತ್ತಿಯನ್ನು ಕೈಗೊಂಡು ತನ್ನ ಬಿಲದಿಂದ ಹೊರ ಹೊರಡುವುದು. ಕಾಲು ಮುರಿದಿರುವ ಆ ಬಿಳಿಯನ ರೀತಿಯಲ್ಲಿ ಯಾವಾತನು ಎತ್ತರದ ಹಾರಾಟವನ್ನು ಮಾಡುವ ಗರುಡನೊಂದಿಗೆ ಮುಖಾಮುಖಿಯಗುವ ವ್ಯರ್ಥ ಆಸೆಯನ್ನು ಮತ್ತು ಇಚ್ಛೆಯನ್ನು ಮಾಡಿ ಬಾದಶಹನ ಸೈನ್ಯದೊಂದಿಗೆ ಮುಖಾಬಿಲೆಯನ್ನು ಮಾಡುವ ಸಲುವಾಗಿ ಯುದ್ಧರಂಗದಲ್ಲಿ ಬರಲಿ. ಆತನು ಧೈರ್ಯದ ವೃತ್ತಿಯನ್ನು ತನ್ನ ಸೊಂಟಕ್ಕೆ ಕಟ್ಟಿ

ಸಾಮಾನ್ಯ ಜನತೆ ಹಾಗೂ ವಿಶೇಷ ಸಾಮಂತರ ಅನಿಷ್ಟಗಳನ್ನು ಸ್ವತಃ ತನ್ನ ತಲೆಯ ಮೇಲಿಟ್ಟು ಕೃತಘ್ನತೆಯ ಸಮಾರಂಭವನ್ನು ತನ್ನ ಹೃದಯದ ಮೇಲೆ ಇಟ್ಟು ಪರಗಣದಿಂದ ವಾಪಸ್ ಬಂದ. ಹಜರತ್ ಬಾದಶಹ ಗಾಝಿಯವರು ಅಲ್ಲಾಹನ ಶ್ರೇಷ್ಠತೆ ಮತ್ತು ಹಿರಿತನದ ಗುಣಗಳ ಕಾರ್ಯಶೀಲತೆಯ ವಿಚಿತ್ರ ಸೃಷ್ಟಿ ಮತ್ತು ಅನ್ವೇಷಣೆಗಳನ್ನು ಕಣ್ಣಾರೆ ವೀಕ್ಷಿಸಿದ. ಮತ್ತು ಅಲ್ಲಾಹನ ಸೃಷ್ಟಿಯ ವಿಚಿತ್ರ ವಿಲಾಸ ಮತ್ತು ಆಶ್ಚರ್ಯಜನಕ ಅನೇಕ ವೈಚಿತ್ರ್ಯಗಳನ್ನು ತವಾಕಲ್ ಕೋಟೆಯಿಂದ ಮೂರು ಹರದಾರಿ ದೂರದಲ್ಲಿರುವ ಮೌಜೆ ಬನಶಂಕರಿಯ ಉದ್ಯಾನವನದಲ್ಲಿ ಕಂಡ. ಮತ್ತು ದಿಗ್ವಿಜಯದ ಮುನ್ನೆಚ್ಚರಿಕೆಯ ಸೂಚನೆಯನ್ನು ನೀಡುವ ಸಿಪಾಯಿಗಳ ಮೇಲ್ವಿಚಾರಕನ ಹೇಳಿಕೆಯಂತೆ ಹವಾಮಾನವು ಮಧ್ಯಮವಾದ ಸಂತುಲಿತವಾಗಿದ್ದು ಚಳಿಗಾಲದ ಆಗಮನದಿಂದ ರಕ್ಷಣೆಯನ್ನು ಹೊಂದಿತ್ತು. ಚಿಲುಮೆಯ ಶುಭ್ರ ಹಾಗೂ ನಿರಭ್ರವಾದ ನೀರು ಸಿಹಿಯಾಗಿದ್ದು ಪ್ರಾಣಸಂಚಲನವನ್ನು ಮೂಡಿಸುವ ಅಮೃತವಾಗಿತ್ತು. ಆ ಸ್ಥಳದ ಒದ್ದೆ ಮಣ್ಣು ಸುಗಂಧಪೂರಿತವಾಗಿದ್ದು ಸ್ವರ್ಗದ ಉದ್ಯಾನವನದ ಸುಗಂಧದಂತಿತ್ತು. ಸುವಾಸನಾಯುಕ್ತವಾದ ಮಷ್ಕ್ ಎಲೆ ಕೂಡಾ ಪ್ರಾಮುಖ್ಯತೆಯನ್ನು ಹೊಂದಿತ್ತು. ಅಲ್ಲಿದ್ದ ಕಸ ಕಡ್ಡಿಯ ಒಣಹುಲ್ಲು ನೆಮ್ಮದಿ ಹಾಗೂ ಆರಾಮವನ್ನು ನೀಡುವ ಸಾಂಬ್ರಾಣಿ ಹಾಗೂ ಗಂಧಕ್ಕಿಂತಲೂ ಹೆಚ್ಚು ಆನಂದದಾಯಕ ಮತ್ತು ಸುವಾಸನಾಯುಕ್ತವಾಗಿತ್ತು. ಅದರ ವೃಕ್ಷಗಳು ಮನಮೋಹಕ ಹಾಗೂ ಸೌಂದರ್ಯದಲ್ಲಿ ಅತ್ಯಂತ ಎತ್ತರವಾಗಿದ್ದ ಸುಂದರಿಯರ ನಿಲುವಿಗಿಂತಲೂ ಆಕರ್ಷಕವಾಗಿತ್ತು. ಅವುಗಳ ಪುಷ್ಪಗಳು ತಾಜಾತನ ಮತ್ತು ಸೌಂದರ್ಯ ಹಾಗೂ ಮೋಹಕತೆಯಲ್ಲಿ ಚಂದ್ರನಂತಹ ಮೋರೆಯನ್ನು ಹೊಂದಿರುವ ಸುಗಂಧದಂತಹ ಲಾಸ್ಯವನ್ನು ಹೊಂದಿದ್ದ ಸುಂದರಿಯರಿಗಿಂತಲೂ ಹೆಚ್ಚು ಮೋಹಕವಾಗಿದ್ದವು.

ಹೂವುಗಳ ಕೆಂಪು ಪುಷ್ಪಗಳು ಸುಂದರಿಯರ ಕೆನ್ನೆಗಳಂತಿವೆ
ಮತ್ತು ಅವುಗಳ ಎಲೆಗಳು ಪ್ರಿಯತಮೆಯ ಮುಂಗುರುಳಿನಂತಿವೆ

ಪ್ರಿಯತಮೆಯಂತೆ ಬೆಳಗುವ ಮೋರೆ ಇದೆ
ಅವುಗಳ ಗೊಂಚಲು ಪುಟ್ಟ ಬಾಯಿಗಿಂತಲೂ ಪುಟ್ಟದಾಗಿವೆ

ಸ್ವರ್ಗದ ಉದ್ಯಾನವನದ ರೀತಿಯಲ್ಲಿ ಅದರ
ಹವೆ ಮತ್ತು ನೀರು ಉತ್ಕೃಷ್ಟವಾಗಿದೆ.
ಅದರ ನೀರು ಕ್ಷಾಮ ಮತ್ತು
ಅದರ ಮನಮೋಹಕತೆ ದುಃಖದಲ್ಲಿದೆ.

ಈ ನಡುವೆ ಶರವೇಗದ ಗೂಢಚಾರರು ಅತ್ಯಂತ ಶ್ರೇಷ್ಠ ದರಬಾರಿನ ಸಭಿಕರ ಸಮ್ಮುಖದಲ್ಲಿ ಸಂದೇಶವನ್ನು ತಲುಪಿಸಿದರು. ಅದೇನೆಂದರೆ ಆ ಅಯೋಗ್ಯ ಕಡುಗಪ್ಪು ದುರ್ವರ್ತನೆಯ ಉಪ್ಪಿಗೆ ದ್ರೋಹವನ್ನೆಸಗಿದ ದ್ರೋಹಿ ಹವಾಲ್ದಾರನು ಖಾವಂದರವರ ದಾನ ಮತ್ತು ಕೊಡುಗೆಗಳಿಗೆ ಶರಣಾಗಿದ್ದ ಮುದ್ಗಲ್ ಕೋಟೆಯನ್ನು ಒಳಿತನ್ನು ಬಯಸುವ ಶುಭಾಕಾಂಕ್ಷಿಗಳ ಲೋಕದಲ್ಲಿ ಪಯಣದ ಗುರಿ ಮತ್ತು ತಂಗುದಾಣವನ್ನು ಹೊಂದಿರುವಂತಹದು. ಅವರಿಬ್ಬರೂ ಕೂಡ ಒಂದು ಒಕ್ಕಣಿಕೆಯ ಪತ್ರವನ್ನು ಬರೆದಿರುತ್ತಾರೆ ಅದೇನೆಂದರೆ ಬಹಳಷ್ಟು ಸೈನ್ಯ ಮತ್ತು ಅಗಣಿತ ಸೈನಿಕರ ಜೊತೆಯಲ್ಲಿ ಗಾಳಿಯೊಡನೆ ಮಾತನಾಡುವ ಕುದುರೆಗಳ ಖುರಪುಟದ ದಮನಿತ ವೈಖರಿಯ ಅರಣ್ಯ ಮತ್ತು ಪರ್ವತಗಳು ತಮ್ಮ ಜಾಗದಿಂದ ಅದುರುತ್ತಿವೆ

ಭೂಮಿಯು ಆ ಕುದುರೆಗಳ ಸಂಚಲನೆಯಿಂದ ಪಾದರಸದಂತೆ ಕಂಪನ ಹಾಗೂ ಉದ್ವೇಗದಲ್ಲಿ ಕೂಡಿದೆ. ಒಂದು ವೇಳೆ ಭಯಾನಕತೆಯಿಂದ ಕೂಡಿದ ತವಾಕಲ್ ಕೋಟೆಯನ್ನು ದ್ವೇಷ ಮತ್ತು ಭಿನ್ನಾಭಿಪ್ರಾಯದ ಮೈದಾನದಲ್ಲಿ ಮತ್ತು ಬಾದಶಹನ ಗುಲಾಮರ ನಡುವೆ ಹೆಜ್ಜೆಯು ಸ್ಥಿರವಾದಲ್ಲಿ ಆಗ ಉದ್ದೇಶವು ವಧುವಿನ ರೀತಿಯಲ್ಲಿ ಅಗಲಿಕೆಯ ಸಲುವಾಗಿ ಅನೇಕಾನೇಕ ಶತಮಾನಗಾಳ ಕಾಲದ ಅಭಿಮಾನದಲ್ಲಿ ಕೂಡಿದ್ದಾರೆ. ರೂಢಿ ಸಂಪ್ರದಾಯ ಹಾಗು ಕಂದಾಚಾರದ ಸಂದೇಶಗಳಿಂದ ಹೃದಯವು ಅಪಾರ ಇಚ್ಛೆಯಿಂದ ಕೂಡಿದ್ದು ಅವಶ್ಯಕ ಹೃದಯವನ್ನು ಸಮೀಪವಾಗಿ ಮಾಡಿಕೊಳ್ಳಿ ಮತ್ತು ಒಂದು ವೇಳೆ ಚಿಂಗಾರಿಯಿಂದ ಜ್ವಾಲೆಯ ರೀತಿಯಲ್ಲಿ ಸತ್ಯನಿಷೇಧಿಗಳೊಡನೆ ಯುದ್ಧ ಮಾಡುವ ರೀತಿಯಲ್ಲಿ ಭಿನ್ನಾಭಿಪ್ರಾಯದ ಮೈದಾನದಲ್ಲಿ ಯುದ್ಧ ರಂಗದಲ್ಲಿ ನಿರತವಾಗುವುದಾದಲ್ಲಿ ನಿನ್ನ ದೇಹವನ್ನು ಬೆಂಕಿಯುಂಡೆಯ ಜ್ವಾಲೆಯಿಂದ ಮೇಣದಂತೆ ಕರಗಿಸುತ್ತೇವೆ. ಇದೇ ಅವಧಿಯಲ್ಲಿ ಕೆಲವು ದಿನಗಳ ಕಾಲ ಇದರಿಂದ ವ್ಯಕ್ತ ಮತ್ತು ಆಂತರ್ಯದ ಕಪ್ಪು ಕಪಟಿ ಮತ್ತು ಸ್ವಪ್ರತಿಷ್ಠೆಯ ವಿನಾಶಕಾರೀ ಪರಿಣಾಮದ ರೂವಾರಿಯ ಬಗ್ಗೆ ದರಬಾರಿನ ಜನಗಳ ಕಡೆಯಿಂದ ಮರವೆ ಮತ್ತು ನಿರ್ಲಕ್ಷ್ಯವು ವ್ಯಕ್ತವಾಯಿತು. ಆದುದರಿಂದ ಸ್ಥಿರತೆಯ ವೇದಿಕೆಯ ಮೇಲೆ ಆಸೀನರಾಗಿ ದುರ್ಮಾರ್ಗ ಮತ್ತು ನಿರ್ಲಕ್ಷ್ಯದ ತೂಪಾನಿನ ಆವೇಶದ ಆಗಮನದಿಂದ ಜಹಾಂಪನಾರವರ ದರಬಾರಿನ ಅನೇಕ ಅಭಿಮಾನಿಗಳು ಪ್ರಾಣಾರ್ಪಣೆ ಮಾಡುವ ಸಲುವಾಗಿ ಹಡಗನ್ನು ಈ ಲೋಕ ಮತ್ತು ಪರಲೋಕದ ವಿನಾಶದ ಸಮುದ್ರದಲ್ಲಿ ಮುಳುಗಿಸುವರು. ಆದುದರಿಂದ ನೆಪಗಳನ್ನು ಸೃಷ್ಟನೆ ಮಾಡಿ ಆ ಪ್ರವಾಹದಿಂದ ಪಿತೂರಿ ಮತ್ತು ಕಪಟತನದ ಚೆಹರೆಯನ್ನು ದರಬಾರಿನ ಕೃತಜ್ಞತೆಯ ಶುಭವನ್ನು ಬಯಸುವ ನಾಲ್ಕು ಗೋಡೆಗಳನ್ನು ಪಾದದಿಂದ ಎಸೆಯುವನು. ಈ ಭಯಾನಕ ಸುದ್ದಿಯನ್ನು ಅತ್ಯಂತ ತಾದ್ಯಾತ್ಮತೆಯಿಂದ ಕೇಳಿದ ನಂತರ ಹಜರತ್ ಬಾದಶಹ ತಮ್ಮ ಆರಾಮ, ನೆಮ್ಮದಿ, ಸಂತೋಷ ಹಾಗೂ ಶ್ರೀಮಂತಿಕೆಯ ಸ್ಥಳದಿಂದ

ನಿರ್ಗಮಿಸುವ ಸೂಚನೆಯನ್ನು ನೀಡಿದರು ಮತ್ತು ಒಂದು ಭಾರೀ ಸಂದೇಶವನ್ನು ಮುದ್ಗಲ್ಲಿನ ಕಿಲ್ಲೆದಾರನ ಹೆಸರಿಗೆ ಈ ಕೆಳಕಂಡ ವಿಷಯಗಳನ್ನು ಸೇರಿದಂತೆ ಬರೆದು ಕಳುಹಿಸಿದರು.

ನಾವು ಅಪ್ರತಿಮ ಅಲ್ಲಾಹನ ಉಪಕಾರದ ಸಮುದ್ರದಲ್ಲಿ ಈಜಾಡುವವರಾಗಿದೇವೆ. ಒಂದು ವೇಳೆ ನಿನ್ನ ಅದೃಷ್ಟದ ಉದ್ಯಾನವನದ ನಕ್ಷತ್ರವು ನೀರು ಮತ್ತು ಉಪಕಾರದ ಒಂದೇ ಒಂದು ಹನಿ ಅಂದರೆ ನಮ್ಮ ಉಪಕಾರದ ಪಾರದರ್ಶಕತೆಯ ಚಿಲುಮೆಯ ಆರ್ದ್ರತೆಯು ತಲುಪಿದಲ್ಲಿ ಕಣ್ಣೆವೆ ಮುಚ್ಚುವುದರೊಳಗಾಗಿ ಯಾವುದೇ ರೀತಿಯ ತೋಟಗಾರನ ತಲಾಶನ್ನು ಮಾಡುವ ಪ್ರಯತ್ನವನ್ನು ನಿನ್ನ ಭರವಸೆಯ ವೃಕ್ಷಗಳು ಮತ್ತು ರೆಂಬೆಗಳು ಹಚ್ಚಹಸಿರು ಮತ್ತು ತಾಜಾತನದಿಂದ ಕಂಗೊಳಿಸುವುವು. ಸಂತೋಷದ ಉದ್ದೇಶಿತ ಫಲ ಮತ್ತು ಸಂತಸದ ಮೃಷ್ಟಾನ್ನಗಳ ಫಲದಿಂದ ತುಂಬಿ ತೂಗುವುವು ಹಾಗೂ ಉದ್ದೇಶಗಳ ಗೊಂಚಲು ಮತ್ತು ಅಪೇಕ್ಷೆಗಳ ಹೂಗೊಂಚಲುಗಳು ಬೆಳಗಿನ ತಂಗಾಳಿಯ ಅಲೆಗಳ ಉದ್ದೇಶ ಮತ್ತು ಅಪೇಕ್ಷೆಗಳಿಂದ ವಂಚಿತವಾದಲ್ಲಿ ದೈವಕೃಪೆಯಿಂದ ಅರಳುವ ಮತ್ತು ಮುಗುಳುನಗೆಯೊಂದಿಗೆ ಇಡೀ ಪ್ರಪಂಚಕ್ಕೆ ತಮ್ಮ ಅಸ್ತಿತ್ವದ ಸುಗಂಧ ಹಾಗೂ ಮನಮೋಹಕ ಪುಷ್ಪಗಳ ಸುವಾಸನೆಯನ್ನು ಬೀರುವಂತೆ ಮಾಡುತ್ತವೆ. ಆದರೆ ನಾವು ಮುಳ್ಳಿನ ಕತ್ತಿ ಮತ್ತು ತುಂಡರಿಸುವ ಖಡ್ಗವಾಗಿದ್ದೇವೆ. ಭಯಾನಕತೆಯ ಮಾಲೀಕರು ಹಾಗೂ ಬಲಾಢ್ಯತೆಯ ಕಾರಖಾನೆಯ ಗುಂಪಿನ ಸುಳ್ಳಿನ ನೆರವನ್ನು ಕುಚೇಷ್ಟೆ ಯಿಂದ ಕೂಡಿದ ಕಪ್ಪನೆಯ ಪಿತೂರಿಕೋರ ಮತ್ತು ಕಪಟ ಸ್ವಭಾವದಲ್ಲಿ ಗುಪ್ತವಾಗಿದ್ದು ನಮ್ಮ ಮೇಲೆ ದೃಷ್ಟಿ ಹಾಯಿಸಿದಲ್ಲಿ ನಿನಗೆ ಖಾತರಿಯಾಗಬೇಕಾಗಿರುವುದೇನೆಂದರೆ ಕಣ್ಣೆವೆ ಮಿಟುಕಿಸುವುದರಲ್ಲಿ ನಿನ್ನ ದೇಹದ ತುಂಡುಗಳನ್ನು ಮಾಡಿ ಅರಣ್ಯದ ಅತಿ ಕಠಿಣ ಶಿಲೆಗಳಿಂದ ಆವೃತವಾದಲ್ಲಿ ಮತ್ತು ವಿನಾಶದ ಮರುಭೂಮಿಯಲ್ಲಿ ಮಣ್ಣಾಗುವುದು ಮತ್ತು ನಿನ್ನ ಪ್ರಾಣವು ತನ್ನ ಪಾದಗಳಲ್ಲಿ ನೀಚತನ, ಹಿಂಸೆ, ಸಿಟ್ಟು ಮತ್ತು ಕ್ರೋಧ ಹಾಗೂ ಯಾತನೆ, ಶೀಘ್ರವೇದನೆಯನ್ನು ಅನುಭವಿಸುತ್ತಿರುವ ಹಸುವಿನ ಹೆಜ್ಜೆಗಳಂತಾಗುವುದು ಹಾಗೂ ಬಲಿದಾನದ ಸರಪಳಿಯ ಕೈದಿಯಾಗುವೆ. ಶೀಘ್ರದಲ್ಲಿಯೇ ನೀನು ಬಲಿಯಾಗುವೆ.

ವಿಷಹಾರೀ ಪ್ರತ್ಯೌಷಧ ಮತ್ತು ವಿಷ ಇವೆರಡೂ
ಕೂಡ ನಮ್ಮ ಖಜಾನೆಯಲ್ಲಿ ಸಿದ್ಧವಾಗಿವೆ.
ಅದನ್ನು ಮಿತ್ರರಿಗೆ ನೀಡುವೆನು
ಮತ್ತು ಇದನ್ನು ಶತೃಗಳಿಗೆ

ಮೇಲೆ ಹೇಳಿದ ಕಿಲ್ಲೆದಾರನು ಗದ್ಯರೂಪದ ಸೂರ್ಯನ ಈ ಉತ್ತರದಲ್ಲಿ ಅದರ ಉದ್ದೇಶ ಮತ್ತು ಅರ್ಥವನ್ನು ಅರಿತು ಒಂದು ಕೋರಿಕೆಯ ಒಕ್ಕಣೆಯನ್ನು

ಲಿಖಿತರೂಪದಲ್ಲಿ ರವಾನೆ ಮಾಡಿದ. "ಸಭೆಯನ್ನು ಬೆಳಗುವ ದೀಪದ ಪಕ್ಕದಲ್ಲಿ ಪತಂಗಕ್ಕೆ ಸ್ಥಾನವನ್ನು ನೀಡುವುದು ಸಭ್ಯತೆಯ ಕ್ರಿಯೆಯಾಗಿದೆ. ಮತ್ತು ಸೂರ್ಯನ ಅಣುವನ್ನು ಗಾಳಿಯ ಹೊರತು ಉಳಿದ ಎಲ್ಲಾ ವಸ್ತುಗಳು ಕೂಡಾ ಪ್ರಾಣಾಂತಿಕವಾಗಿವೆ. ಚೀನಾರ್ ಮರವು ಮೋಡದ ಎದುರಿಗೆ ಅಂಗಲಾಚದಿದ್ದಲ್ಲಿ ತನ್ನ ಕೊಂಬೆರೆಂಬೆಗಳನ್ನು ಹರಡಲು ಸಾಧ್ಯವಿಲ್ಲ. ಈಗ ಏನು ಮಾಡುವುದು

ಒಂದು ವೇಳೆ ಸ್ವಾತಿ ಮಳೆಯ ಹನಿಗಳಿಗಾಗಿ ಚಿಪ್ಪು ಬಾಯಿ ತೆರೆಯದಿದ್ದಲ್ಲಿ ಏನಾಗಬಹುದು. ನಾವು ಬಾದಶಹ ಜಹಾಂಪನಾಹ್‌ರವರ ಮೇಲೆ ಅರ್ಪಣೆಯಾಗುವಂತಹ ಇಚ್ಛೆಯನ್ನು ಹೊಂದಿರುವ ಬಾನೆತ್ತರಕ್ಕೆ ಹಾರುವ ಪಕ್ಷಿಯಾಗಿದ್ದೇವೆ. ಈ ಚಿಕ್ಕಪುಟ್ಟ ಶಿಕಾರಿಯಲ್ಲಿ ಯಾವ ಶಕ್ತಿ ಸಾಮರ್ಥ್ಯಗಳಿವೆ. ಈ ವಿನಾಶಕಾರೀ ಮತ್ತು ಸ್ವತಃ ನಾಶವಾಗಿರುವ ವ್ಯಕ್ತಿಯ ಪಥಭ್ರಷ್ಟತೆಯಲ್ಲಿ ನಮಗೆ ದ್ರೋಹ ಬಗೆಯುವ ಕೃತಘ್ನತೆ ಮತ್ತು ದೌರ್ಬಲ್ಯದ ಬಾಂಧವುವು ಕಂಡು ಬರುತ್ತದೆ. ನಾವು ಈ ಅತ್ಯಂತ ಉನ್ನತ ಸಿಕಂದರ್ ಬಾದಶಹನ ಗುಣಗಳನ್ನುಹೊಂದಿರುವ ಬಾದಶಹ ಗಾಝಿಯವರ ಅರಮನೆಯ ಸಿಪಾಯಿ ಮತ್ತು ನೌಕರ ಎಂದು ತಿಳಿದು ವಿಶಾಲ ಸಮುದ್ರದ ಮೊಸಳೆ ಎಂದು ತಿಳಿಯಬೇಕು. ಈ ದುರದೃಷ್ಟಕರವಾದ ಕುಚೇಷ್ಟೆಯ ಸುಳ್ಳು ಮತ್ತು ವಂಚನೆಯ ಅಕ್ರಮ ಪ್ರೇರೇಪಣೆಯಿಂದ ನಮಗೆ ನತದೃಷ್ಟತೆ ಮತ್ತು ನೀಚ ನಕ್ಷತ್ರದ ಕಾಟವು ಆರಂಭವಾಗಿದೆ. ದುಃಖ ಮತ್ತು ಯಾತನೆಯ ರಾತ್ರೆಯನ್ನು ಹರಿದೊಗೆದು ಇಚ್ಛೆಯನ್ನು ಪೂರೈಸುವಂತಹ ಸ್ಥಳವನ್ನು ತಲುಪಬೇಕಿದೆ. ಅಲ್ಪ ಬುದ್ಧಿಯವನು ಮಣ್ಣಿನ ಹೆಂಟೆಯಿಂದ ಅಮೂಲ್ಯ ಮುತ್ತುಗಳನ್ನು ಬೇರ್ಪಡಿಸಿ ಆಯ್ಕೆ ಮಾಡಿಕೊಂಡಿದ್ದೇನೆ. ಹಜರತ್ ಬಾದಶಹ್ ಘಾಝಿಯವರು ಮೇಲೆ ಹೇಳಿದ ಕೋಟೆಯ ಸುತ್ತ ಮುತ್ತ ಸೈನ್ಯದ ಡೇರೆಗಳನ್ನು ಎಬ್ಬಿಸಿ ಆನಂದ ಮತ್ತು ಸುಖಮಯವಾದ ಸಂದರ್ಭದಲ್ಲಿ ನೆರವು ಮತ್ತು ಬೆಂಬಲದ ಸೈನಿಕರ ಆರಾಮುದಾಯಕ ತಂಗುದಾಣಗಳನ್ನು ನೋಡಿ ದುಃಖದ ಆಲಿಂಗನದಲ್ಲಿ ಮುಳುಗೇಳುತ್ತಿದ್ದೇನೆ.

ಮೇಲೆ ಹೇಳಿದ ಕಿಲ್ಲೇದಾರನು ಈ ಕೆಳ ಕಂಡ ಕವನದ ರೀತ್ಯಾ

ಕುದುರೆಯ ಜೀನಿನ ಕಡಿವಾಣ ಮತ್ತು ಲಗಾಮನ್ನು ತೊರೆದ.
ಸ್ವತಃ ಹಿಂದೆ ಬಿದ್ದ ಮತ್ತು ಭರವಸೆಯನ್ನು ಮುಂದೆ ನಿಲ್ಲಿಸಿದ
ಈ ಹಾದಿಯಲ್ಲಿ ಪ್ರತಿ ಹೆಜ್ಜೆಯು ಹೀಗೆ ಕ್ರಮಿಸಲಾಯಿತು
ಭರವಸೆಯು ಉದ್ದವಾಯಿತು ಮತ್ತು ಹಾದಿಯು ಕಿರಿದಾಯಿತು.

ಆಶ್ರಿತನು ಬೀಳುತ್ತಾ ಏಳುತ್ತಾ ಗುಲಾಮಿತನದ ಭೂಮಿಯ ಮೇಲೆ ಹಣೆಯನ್ನು ಇಟ್ಟು ಮತ್ತು ಶಿರವನ್ನು ವಿನಯ ಹಾಗೂ ಯಾಚನೆಯ ಹೊಸ್ತಿಲಿನ ಮೇಲೆ ಇಟ್ಟ, ಹಜರತ್ ಬಾದಶಹ ಫಾರ್ಖಿಯವರು ದಾನ ಧರ್ಮ ಕೊಡುಗೆ ಮತ್ತು ಕರುಣೆಯ ಮಳೆಯನ್ನು ಮತ್ತು ಇನಾಮುಗಳ ಉದ್ಯಾನವನ್ನು ಹಚ್ಚಹಸಿರು ಮತ್ತು ತಾಜಾತನದಿಂದ ಕೂಡಿದಂತೆ ಮಾಡಿದರು. ಒಟ್ಟಾರೆ ಈ ಯಾಚಕನ ಹೃದಯವನ್ನು ಕರುಣೆ ಮತ್ತು ದಾನಗಳ ಮುತ್ತು ಮತ್ತು ಕೊಡುಗೆ ಹಾಗೂ ಆತನ ಅಪೇಕ್ಷೆಯನ್ನು ಪೂರೈಸುವಂತಹ ಕೆಂಪುಹರಳುಗಳು ಮತ್ತು ವಜ್ರವೈಢೂರ್ಯಗಳಿಂದ ತೃಪ್ತನನ್ನಾಗಿ ಮಾಡಿ ಕೋಟೆಯನ್ನು ಅವನ ಶುಭ ಆಗಮನದ ಎಲ್ಲಾ ರೀತಿಯ ಸವಲತ್ತುಗಳ ತೊಟ್ಟಿಲನ್ನಾಗಿ ಮಾಡಿದರು ಮತ್ತು ಆ ಭೂಮಿಯು ಉದ್ವಿಗ್ನತೆ ಅಶಾಂತಿ ಮತ್ತು ಅಸಹಾಯಕತೆ ಹಾಗೂ ಕಳವಳದ ಭಾವಗಳಿಂದ ತುಂಬಿ ತುಳುಕುತ್ತಿತ್ತು. ಅದಕ್ಕೆ ಶಾಂತಿ ನೆಮ್ಮದಿಯನ್ನು ಕರುಣಿಸಿ ಅತ್ಯಂತ ಹೆಚ್ಚು ಸಾಮಗ್ರಿಗಳ ಗೋದಾಮನ್ನು ನಿರ್ಮಿಸಿ ವ್ಯವಸ್ಥೆ ಮಾಡಿದರು ಹಾಗೂ ಎರಡು ಹರದಾರಿಗಳ ದೂರವನ್ನು ಕ್ರಮಿಸಿದ ನಂತರ ನಹೂಸಾ ಕೋಟೆಯಿಂದ ಮೂರು ಹರದಾರಿ ದೂರದಲ್ಲಿದೆ. ಅಲ್ಲಿಗೆ ಬಲಾಢ್ಯ ಅರಸನು ತನ್ನ ಪಾದಾರ್ಪಣೆ ಮಾಡಿ ಮಾರನೆಯ ಬೆಳಗಿನಂದು ಸೂರ್ಯನ ಅರಳಿದ ಪುಷ್ಪದಂತೆ ತಾಜಾ ನಿರ್ಮಲ ಹೃದಯ ಮತ್ತು ಜಮ್‌ಶೀದ್ ಅರಸನ ಪಾನ ಪಾತ್ರೆಯಂತೆ ಮುಗುಳುನಗೆ ಬೀರುತ್ತಾ ಆನಂದವನ್ನು ಅನುಭವಿಸುತ್ತಾ ಶತೃತ್ವದ ಹಾಸಿಗೆಯಲ್ಲಿ ಪರಾಕ್ರಮ ಮತ್ತು ಬಲಾಢ್ಯತೆಯ ಶಂಕೆಯನ್ನು ಮುಂದುವರೆಸುತ್ತಾ ಕರುಣೆ ಮತ್ತು ದಯಾಳುತನದ ಒಡೆಯನ ವತಿಯಿಂದ ನೆರವಿನ ನಿರೀಕ್ಷೆಯನ್ನು ಮಾಡುತ್ತಾ ತನ್ನ ಗೌರವದ ದೃಷ್ಟಿಯನ್ನು ವಿಸ್ತರಿಸುತ್ತಾ ಸಿಪಾಯಿಗಳ ಸಂಖ್ಯೆಯನ್ನು ಕಡಿಮೆ ಇದ್ದಾಗ್ಯೂ ಅವಮಾನ ಮತ್ತು ಪರಾಜಯದ ಹಾಗೂ ಪಲಾಯನಕ್ಕೆ ಗುರಿಯಾಗುವ ಸೈನಿಕರ ಹೆಚ್ಚಳವನ್ನು ನರಿ ಮತ್ತು ಹೇಡಿತನದ ಸೈನ್ಯಕ್ಕಿಂತಲೂ ಕೀಳೆಂದು ತಿಳಿಯುತ್ತಾ ತನ್ನ ಹಾದಿಯಲ್ಲಿ ಜಯ ಮತ್ತು ಸಫಲತೆಯ ಕಲ್ಪನೆಯನ್ನು ಮಾಡುತ್ತಿದ್ದರು.

ವಸಾಖ ಮತ್ತು ಅಜೀಜ್ ಖಾನ್‌ರವರ ಪರಾಕ್ರಮ ಮತ್ತು ಸೈನ್ಯದ ಹಿಂಬಾಗದ ಹಿಸ್ಸೆಯ ಸೈನ್ಯ ಮತ್ತು ಬಲಾಢ್ಯ ಪರಾಕ್ರಮವನ್ನು ಹೊಂದಿದ್ದು ಅತ್ಯಂತ ಶಕ್ತಿ ಮತ್ತು ಬಲವನ್ನು ಪಡೆದಿದ್ದ ಸೈನ್ಯದ ಒಂದು ದೊಡ್ಡ ಗುಂಪು ಮೃಷ್ಟಾನ್ನ ಭೋಜನಗಳನ್ನು ಆಸ್ವಾದಿಸುತ್ತಾ ಅಹಂಕಾರ ಮತ್ತು ಗರ್ವದಲ್ಲಿ ಮುಳುಗಿ ಹೋಯಿತು.

ಕವನ

ಮೊಟ್ಟ ಮೊದಲಿಗೆ ಬಲಭಾಗದ ಸೈನ್ಯದ ಪಂಕ್ತಿಯನ್ನು ನೇರ
ಗೊಳಿಸಿದ ಮತ್ತು ಹೆಬ್ಬಾವಿನಂತಹ ಕತ್ತಿಯಿಂದ
ಅದರ ಬಾಯಿತೆರೆದ

ಎಡ ಭಾಗದ ಸೈನ್ಯದ ಪಂಕ್ತಿಯನ್ನು ಶೃಂಗರಿಸಿದ
ಲೋಹಕ್ಕಿಂತಲೂ ಕಠಿಣ ಪರ್ವತ ಎಂದು ಅನ್ನುವಿರಿ
ತನ್ನ ಇತರೆ ಮಾತುಗಳ ಸಮೇತ ಕತ್ತಿ ಮತ್ತು ಲೋಹವನ್ನು
ಶೃಂಗರಿಸಿದ ಹೇಗೆಂದರೆ ಕಪ್ಪು ಮೋಡದ ಕಂಬನಿಯನ್ನು
ಉದ್ಯಾನವನವು ಶೃಂಗರಿಸಿದಂತೆ

ಮುಂಭಾಗ ಮತ್ತು ಹಿಂಭಾಗದ ಹಿಸ್ಸೆಯನ್ನು
ಪರ್ವತದ ತುಂಡುಗಳಂತೆ ಸಪ್ತರ್ಷಿ ಮಂಡಲದ
ದೂರು ಮತ್ತು ಪರಾಕ್ರಮ ಹೊಂದಿದವರನು
ಮೇಲೆತ್ತಲಾಯಿತು

ಆಗ ಹಜರತ್ ಬಾದಶಹ ಘಾಝಿಯ ಜೊತೆಯಲ್ಲಿ ದೈವ ಸಹಾಯವು ಎಂದಿನಂತೆ ಮಿತ್ರನಂತೆ ಕಾಪಾಡಿತು. ಹಿರಿಯ ಗೌರವಾನ್ವಿತ ಮತ್ತು ಉನ್ನತವಾದ ಶಕ್ತಿ ಮತ್ತು ಪರಾಕ್ರಮವು ಎಲ್ಲೆಡೆಯಲ್ಲಿಯೂ ಗುರಾಣಿಯ ರೂಪದಲ್ಲಿ ಕಂಡುಬಂದಿತು. ಅಬ್ದುಲ್ ಹಮೀದ್ ಮತ್ತು ನವಾಬ್ ಅಬ್ದುಲ್ ರಹೀಮ್ ಬೆಹಲೂಲ್‌ಖಾನ್ ಪ್ರಾಣದ ಹಂಗನ್ನು ತೊರೆದು ಹೋರಾಡುವ ಸರದಾರರು ಮತ್ತು ಶತ್ರುವನ್ನು ವಿಫಲಗೊಳಿಸುವ ಸೈನಿಕರ ಜೊತೆಯಲ್ಲಿ ಒಂದು ಅದ್ಭುತವಾದ ಸೈನ್ಯದ ಜೊತೆಯಲ್ಲಿ ಆ ದುರದೃಷ್ಟಶಾಲಿ ಕಪ್ಪುಮೋರೆಯವನ ಸೈನ್ಯದ ಮುಂಭಾಗದಲ್ಲಿ ಸೇರಿಕೊಂಡಿದ್ದರು.

ಮತ್ತು ಮುಲ್ಲಾ ಅಹಮದ್ ಹಾಗೂ ಶರ್ಝಾ ಖಾನ್ ವಲಿ ಹೈಬತ್‌ಖಾನ್ ಅತ್ಯಂತ ಅನುಭವಶಾಲೀ ವೀರರು ಕೋಟೆಯನ್ನು ಎತ್ತುವ ಧೀರರ ಜೊತೆಯಲ್ಲಿ ಸಯ್ಯದಿ ಅಲಿಯ ಸೈನ್ಯದ ಮೇಲೆ ಯಶಸ್ಸು ಹಾಗೂ ಕೀರ್ತಿಶಾಲಿಗಳಾದ ಖ್ಯಾತ ಸರದಾರರು ಮತ್ತು ಸಫಲರಾದ ಶೂರರ ಜೊತೆಯಲ್ಲಿ ಆ ದುರಾಚಾರಿ ಮತ್ತು ಯುದ್ಧಕೋರನ ಸೈನ್ಯದ ಎಡಭಾಗದಲ್ಲಿ ಶಾಮೀಲಾಗಿದ್ದರು ಮತ್ತು ಮಾಲಿಖೋಲಿಯಾಯಿ ಎಂಬ ರೋಗವು ವ್ಯರ್ಥ ಆಲೋಚನೆಗಳು ಮತ್ತು ಇಂಗಿತದೊಂದಿಗೆ ಹುಚ್ಚು ಹಿಡಿದಂತೆ ಮತ್ತು ನಿರರ್ಥಕವಾದ ಶಂಕೆಗಳೊಡನೆ ಮನದಲ್ಲಿ ಆಲೋಚನೆಗಳು ಉತ್ಪನ್ನವಾದವು. ಆದರೆ ಅಕ್ರಮ, ಅನ್ಯಾಯ ಮತ್ತು ದೌರ್ಜನ್ಯವನ್ನು ಪೀಡನೆ ಮತ್ತು ಯಾತನೆಯನ್ನು ನೀಡುತ್ತಿದ್ದ ನೀಚ ಗುಲಾಮ ಅಫ್ರಸಯಾಬ್‌ಗೆ ಫಕೀರನಂತಹ ಸೇವಕನು ಅರ್ಪಣಾಭಾವದವನೆಂದು ಕರೆಯುತ್ತಿದ್ದರು ಮತ್ತು ದೊಡ್ಡದೊಡ್ಡ ಖಾನ್ ಝಾದ ಮೊಹಮ್ಮದ್ ಇಖ್‌ಲಾಸ್‌ಖಾನ್, ಖವಾಸ್ ಖಾನ್ ಮತ್ತು ಶಾ ಮೊಹಮ್ಮದ್ ಅಲಿ ಆಝುಮ್ ಖಾನ್ ಹಾಗೂ ಅತ್ಯಂತ ವಾತ್ಸಲ್ಯಮಯಿ ಮಸೂದ್‌ಖಾನ್‌ನ ಗುಂಪು ಮತ್ತು ಬೆಂಬಲಿಗರು ಸಯ್ಯದ್ ಬಶರ್ ಬುಖಾರಿ ಮತ್ತು ಮೊಹಮ್ಮದ್ ಯಾಖೂತ್ ಖಾನ್ ಮತ್ತು ಮುಹಿಬ್ಬೆ ಖಾನ್‌ನಂತಹ

ಅತ್ಯಂತ ಯೋಗ್ಯ ಜನರು ಬಲಭಾಗದ ಸೈನ್ಯದಲ್ಲಿ ಶಾಮೀಲಾಗಿದ್ದರು. ಆ ಜನರು ಯುದ್ಧರಂಗದಿಂದ ಕೊಲೆ ಮತ್ತು ಧ್ವಂಸ ಹಾಗೂ ಹತ್ಯೆಯ ಕ್ಷಣಗಳಲ್ಲಿ ಪರಾರಿಯಾಗಿ ಬೆನ್ನು ತಿರುಗಿಸುವುದು ಇಹಲೋಕ ಮತ್ತು ಪರಲೋಕಗಳಲ್ಲಿ ಶಿಕ್ಷಾರ್ಹವಾದ ಹಾಗೂ ಉಭಯಲೋಕಗಳಲ್ಲಿಯೂ ವಿಪತ್ತನ್ನು ತಂದೊಡ್ಡುವ ಅತ್ಯಂತ ದುರ್ದೆಸೆ ಎಂದು ಭಾವಿಸಿದ್ದರು. ಪಲಾಯನ ಮಾಡುತ್ತಿದ್ದ ಮುಹಬ್ಬೆಖಾನ್ ಹಾಗೂ ಮೊಹಮ್ಮದ್ ಯಾಖೂತ್‌ಖಾನನಿಗೆ ವಿದ್ಯುತ್ ವೇಗದ ಗುಣವನ್ನು ಹೊಂದಿದ ಕತ್ತಿಯ ಹುಲ್ಲನ್ನಾಗಿ ಮಾಡಲಾಯಿತು. ಕತ್ತಿಯ ಮೂಲಕ ಅಂಧಕಾರದ ಹಗಲನ್ನು ಕಾಣುವ ಹಾಗೂ ವಿರೋಧವನ್ನು ಮಾಡುವ ಶವಗಳ ಎದೆಯನ್ನು ಬಗೆಯುತ್ತಾ ಎಂತಹ ವೀರಾವೇಷದ ಕೂಗನ್ನು ಹಾಕುತ್ತಿದ್ದರೆಂದರೆ ಬರಹೋಗುವವರ ಹಾದಿಗಳು ಜನರ ಮೇಲೆ ಕಿರಿದಾದವು. ಸರ್ಪದಂತಹ ತಲೆ ಮತ್ತು ಹೆಬ್ಬಾವಿನಂತಹ ಸ್ವಭಾವವನ್ನು ಹೊಂದಿದ್ದಂತಹ ಈಟಿಯ ಮೂಲಕ ಆ ಕಪಟಿ ನೆಪಕೋರ ಮತ್ತು ಕಪ್ಪುಹೃದಯದ ಗುಂಪಿನ ಜನರ ಅಂಗಾಂಗ ಮತ್ತು ರಕ್ತನಾಳಗಳಿಂದ ಹೃದಯ ವಿದ್ರಾವಕವಾದ ಕೂಗಿನೊಂದಿಗೆ ಸಮುದ್ರದ ಪ್ರವಾಹದೋಪಾದಿಯಲ್ಲಿ ರಕ್ತದ ಚಿಲುಮೆಗಳು ಚಿಮ್ಮಲಾರಂಭಿಸಿದವು. ಪಿತೂರಿಕೋರ ಮತ್ತು ಮತ್ಸರಿಯ ಮೇಲೆ ಇಡೀ ಲೋಕದ ವಿಪತ್ತು ಹೇರಿಕೊಂಡಂತಾಗಿ ಆ ಸಂದರ್ಭದಲ್ಲಿ ಆತ ಅಸಹಾಯಕ ಮತ್ತು ಯಾಚಕನ ರೀತಿಯಲ್ಲಿ ಖಜಾನೆಯಲ್ಲಿ ಅವನ ಮನ ನಿಲ್ಲದಾಯಿತು.

ಮತ್ತು ಎದೆಯಲ್ಲಿ ಬೆಂಕಿಯ ನಿಟ್ಟುಸಿರನ್ನು ಬಿಡುವ ಸಾಮರ್ಥ್ಯವನ್ನು ಹೊಂದಿರಲಿಲ್ಲ ಮತ್ತು ಲೋಕವನ್ನು ಎದೆಯಿಂದ ಹೊರಟ ಹೊಗೆಯು ದುರ್ವ್ಯವಹಾರಗಳ ಕಪ್ಪು ಸ್ವಭಾವದ ವ್ಯಕ್ತಿಯ ರೀತಿಯಲ್ಲಿ ಸಂಪೂರ್ಣ ಕಪ್ಪನ್ನಾಗಿ ಮಾಡಿರುವಂತೆ ಮತ್ತು ನ್ಯಾಯಪರತೆಯನ್ನು ಪರಿಪಾಲಿಸದ ಹಸ್ತವು ಕೈಯ ತೋಳಿನಿಂದ ಹೊರಹೊರಟಂತೆ ಮನನೋಯಿಸುವ ಕಾಂತಿಹೀನವಾದ ಕಲ್ಲಿನಿಂದ ಯಾರದಾದರೂ ಗೌರವ ಮತ್ತು ಯಶಸ್ಸು ಹಾಗೂ ಕೀರ್ತಿಯ ಗಾಜನ್ನು ಚಚ್ಚಿ ಹಾಕಿದಂತೆ ಆವೇಶದಲ್ಲಿ ಪೀಡಕ ಪ್ರಿಯತಮನಿಗೆ ಎಲ್ಲೆಡೆಯಲ್ಲಿಯೂ ಕಠಿಣ ಸಂದರ್ಭ ಮತ್ತು ಕೋಪದಿಂದ ನೋಡುವಂತೆ ಅಹಂಭಾವ ಮತ್ತು ಜಂಭದ ವ್ಯಾಪಾರಿ ಕೇಡು ಬಯಸುವವನ ಅಸ್ತಿತ್ವದಿಂದ ಅಣು ಅಣುವೂ ಅಸ್ತವ್ಯಸ್ತವಾಗಿ ಕೃತಘ್ನರಾದ ಜನರ ಹೆಸರು ನಾಮಾವಶೇಷವಾಯಿತು ಮತ್ತು ಅರಣ್ಯದ ಧೂಳು ಹಾಗೂ ಧ್ವಂಸಕ್ಕೊಳಗಾದ ಮಣ್ಣಿನ ಗುಡ್ಡೆಯಂತಾಯಿತು ಹಾಗೂ ಬೆಂಕಿಯನ್ನು ಉಗುಳುವ ಪರಾಕ್ರಮಿ ಕತ್ತಿಯು ಸಮುದ್ರದ ಮೀನಿನಂತೆ ಬೆಂಕಿ ಮತ್ತು ನೀರಿನ ಅಭ್ಯಾಸವನ್ನು ತನ್ನ ಜೀವಹತ್ಯೆಯ ಸಮುದ್ರದಲ್ಲಿ ತನ್ನ ಗುರುತನ್ನಾಗಿ ಮಾಡಲಿಲ್ಲ. ಇನ್ನು ಯಾವುದೇ ವ್ಯಕ್ತಿಯ ಬದುಕನ್ನು ಧಾನ್ಯದ ರಾಶಿಗೆ ಬೆಂಕಿಯ ಕಿಡಿಗಳನ್ನು ಹಾಕಿ ಸುಡುವಂತೆ ಮಾಡಲಿಲ್ಲ. ಸಮುದ್ರದ

ಮೇಲೆ ಆಚ್ಛಾದಿತವಾದ ಮೋಡದ ರೀತಿಯಲ್ಲಿ ಮನೆಯ ಹೊರೆಯನ್ನು ಹೊರಗಡೆ ಎಸೆಯಲಾಯಿತು ಹಾಗೂ ಮೃದು ಹೃದಯದೊಂದಿಗೆ ಸಾಮಗ್ರಿಗಳನ್ನು ಒಟ್ಟುಗೂಡಿಸಿದ. ಸಿಂಹವನ್ನು ಶಿಕಾರಿ ಮಾಡುವ ಸಲುವಾಗಿ ಶಕ್ತಿ ಸಾಮರ್ಥ್ಯವನ್ನು ಪಡೆದುಕೊಳ್ಳಲು ಜನರು ಪರಾಕ್ರಮವನ್ನು ಹೊಂದಿದ ನರಿಯಂತೆ ಪರಲೋಕದ ಮೈದಾನದಲ್ಲಿ ಅವರನ್ನು ಮುಳುಗಿಸಲಾಯಿತು ಹಾಗೂ ಆಬೆಂಕಿಯಲ್ಲಿ ಅವರನ್ನು ನಾಶಮಾಡಿ ಪರಲೋಕಕ್ಕೆ ರವಾನೆ ಮಾಡಲಾಯಿತು.

ಸತ್ಯದಿಂದ ವಿಮುಖವಾದ ಮುಂದಿನ ಪರಿಣಾಮಗಳ ಬಗ್ಗೆ ಅರಿವಿಲ್ಲದ ವಕ್ರತೆಯಲ್ಲಿ ಸಿಲುಕಿದ ವಿನಾಶ ಮತ್ತು ಸಂಕಷ್ಟಗಳನ್ನು ಮೈ ಮೇಲೆ ಎಳೆದುಕೊಳ್ಳುವವನು ಸಾಬಿರ್‌ಬನದ ಸಧೃಡವಾದ ಲಾಠಿಯನ್ನು ನೀಡಲಿಲ್ಲ. ಬಿಲ್ಲಿನಿಂದ ಎಲ್ಲಿಯವರೆಗೆ ತೆಗೆಯಲಾಗುವುದಿಲ್ಲವೆಂದರೆ ಹೃದಯವನ್ನು ಭೇದಿಸುವ ಹರಿತವಾದ ಬಾಣಗಳ ಗುರಿಯು ಎದೆ ಮಾತ್ರವಾಗಿರಬೇಕು. ಡಕಾಯಿತರು ಮತ್ತು ದರೋಡೆಕೋರರ ರೀತಿಯಲ್ಲಿ ಮರಣವು ಹೇಗೆ ರವಾನೆಯಾಯಿತು. ಭೀಕರ ಯುದ್ಧಗಳ ವೀರರು ಯುದ್ಧರಂಗದ ಪರಾಕ್ರಮಿಗಳ ಸಂಬಂಧದಲ್ಲಿ ಆತ್ಮಪೂರ್ವಕವಾದ ಉಡುಪಿನಿಂದ ಅವರನ್ನು ವಿವಸ್ತ್ರಗೊಳಿಸಲಾಯಿತು. ಕೊರಳನ್ನು ಕೊಯ್ದಿರುವ ಕೋಳಿಯಂತೆ ಮರಣದ ದೆಸೆಯಿಂದ ಧೂಳು ಮತ್ತು ರಕ್ತದಲ್ಲಿ ಬೆರೆತು ಮಣ್ಣಾಗುತ್ತಿರುವಂತೆ ಜೀವವೃಕ್ಷದ ಸೆಲೆಯಾದ ಅಮೃತವನ್ನು ಕುಡಿಯುವುದರಿಂದ ವಂಚಿತರನ್ನಾಗಿ ಮಾಡಲಾಯಿತು ಹಾಗೂ ಹೃದಯಕ್ಕೆ ಗಾಯವನ್ನು ನೀಡಿದಂತಹ ಎದೆಯನ್ನು ಸೀಳಿದಂತಹ ಈಟಿಯು ಹಾಸಿಗೆಯ ಮೇಲೆ ಬಿದ್ದಂತಹ ರೋಗಿಯ ಕೈಯಲ್ಲಿ ಇರುವ ಕೋಲಿನಂತೆ ಅಂದರೆ ಯಾರಾದರೂ ತೊಂದರೆ ನೀಡಿದಲ್ಲಿ ರಕ್ಷಣೆಗಾಗಿ ಆ ಕೋಲನ್ನು ತನ್ನ ತಲೆದೆಸೆಯಿಂದ ಎತ್ತುವ ಶಕ್ತಿ ಸಾಮರ್ಥ್ಯವಿಲ್ಲ.

ಪುರಾತನವಾದ ರೋಗದ ದೆಸೆಯಿಂದ ಸೊಟ್ಟಗಾದ ಮತ್ತು ವಕ್ರವಾದ ಅಂಗಾಂಗಗಳ ದೆಸೆಯಿಂದ ಯುದ್ಧರಂಗಕ್ಕೆ ಹೋಗಿ ಯಾರನ್ನಾದರೂ ಹತ್ಯೆ ಮಾಡಲಾಗಲೀ ಅಥವಾ ರಕ್ತ ಹರಿಸಲಾಗಲೀ ಸಾಧ್ಯವಿಲ್ಲದಂತಹವನು. ಮೂಸಾ ಪೈಗಂಬರ್‌ರವರ ದಂಡದ ರೀತಿಯಲ್ಲಿ ಯಾವ ಕಡೆಯಿಂದ ಗಮನ ಹರಿಸಿದ್ದರೂ ಶತ್ರುವು ಅರಣ್ಯ ಮತ್ತು ಅಸಹನೆ ಹಾಗೂ ದ್ವೇಷದ ಕಪ್ಪು ಹೃದಯದ ಅಂಧಕಾರದ ಅದೃಷ್ಟದವನು. ಕಪ್ಪುಮೋರೆಯ ವ್ಯಕ್ತಿ ಹಿಂಸೆ ದೌರ್ಜನ್ಯದ ಹೆಚ್ಚಳದ ಮೈದಾನದಲ್ಲಿ ಸೇರಿದಂತಹ ಜನರನ್ನು ಮದಾಯಿನ್ ನಗರದ ಜಾದೂಗರ್‌ನ ರೀತಿಯಲ್ಲಿ ಶಿಷ್ಯತ್ವದ ವರ್ತುಲದಲ್ಲಿ ಶಾಮೀಲು ಮಾಡಿ ಮತ್ತು ವಿಧೇಯತೆ ಹಾಗೂ ಆಜ್ಞಾಪಾಲನೆಯ ಚಾದರವನ್ನು ಭುಜದ ಮೇಲೆ ಧರಿಸುವಂತೆ ಮಾಡಲಾಯಿತು. ಶತ್ರುವನ್ನು ಸೆರೆಯಾಳನ್ನಾಗಿಸಿದ ಕೊರಳು ಬಿಗಿಯು ಹಗ್ಗವು ಹರಿದಿದ್ದು ಆ ರೀತಿಯಲ್ಲಿ ತನ್ನ

ಶಿರವನ್ನು ಬಾಗಿಸಿ ಏಕಾಂಗಿಯಾಗಿ ಮತ್ತು ಅನಾಮಿಕತನದ ಮೈದಾನದಲ್ಲಿ ಬಿದ್ದಿದ್ದ ನೀಚ ಹಾಗೂ ಅಪಮಾನಕಾರೀ ರಂಗದಲ್ಲಿ ಧೂಳಿನಿಂದ ಆವೃತವಾಗಿ ಬಿದ್ದಿದ್ದ. ಪ್ರೇಮಭಾವವನ್ನು ಹೊಂದಿದ ಸುಂದರ ಮಹಿಳೆಯ ಮುಂಗುರುಳು ಮತ್ತು ತಲೆಗೂದಲನ್ನು ಒಂದೊಂದಾಗಿ ಶೃಂಗರಿಸುವಂತಹ ಗುಂಗುರು ಕೂದಲಿನ ರೀತಿಯಲ್ಲಿ ಎತ್ತ ನೋಡಿದರೂ ಬಾಂಧವ್ಯಗಳನ್ನು ದೀರ್ಘಗೊಳಿಸುತ್ತಾ ಯುದ್ಧ ರಂಗದಲ್ಲಿ ವಿದ್ರೋಹಿ ಮತ್ತು ಯುದ್ಧಕೋರ ಜನರು ವೀರರನ್ನು ನಶ್ವರವಾದ ಆಲೋಚನೆಗಳ ಲೋಕದಿಂದ ಸೆರೆಯಾಳನ್ನಾಗಿ ಮಾಡಲಾಯಿತು. ಆತ್ಮಾಭಿಮಾನದ ಕ್ಷೇತ್ರದ ಶೂರರು ಕ್ರೋಧದಿಂದ ಕೂಡಿದ ಸಿಂಹಗಳಂತೆ ತಮ್ಮ ಜಾಗದಿಂದ ನೆಗೆದು ಯುದ್ಧರಂಗದ ಬೆಂಕಿಯಲ್ಲಿ ಕಟ್ಟಿಗೆಯ ಹೊರೆಯಂತೆ ಯುದ್ಧಾಕಾಂಕ್ಷಿ ತಂಟೆಕೋರ ವ್ಯಕ್ತಿಗಳಿದ್ದಾರೆ. ಅಂತಹವರು ಸಂಪೂರ್ಣವಾಗಿ ಪಿತೂರಿಕೋರರಾಗಿದ್ದಾರೆ. ಅತ್ಯಂತ ಹೋರಾಟದ ಮನೋಭಾವದವರು ಎದೆಯಲ್ಲಿ ಹೃದಯ ಮತ್ತು ಯುದ್ಧದಲ್ಲಿ ಕುಟಿಲ ವ್ಯಕ್ತಿಗಳನ್ನು ಮೇಣದ ರೀತಿಯಲ್ಲಿ ಕರಗಿಸಿ ನಿರ್ನಾಮ ಮಾಡಿದರು ಹಾಗೂ ಬೆಹರಾಮ್‌ನಂತಹ ಪರಾಕ್ರಮಿಗಳು ವಿಜಯದ ಲಗಾಮನ್ನು ಪಡೆಯುವ ಜನರ ಪ್ರಾಣವನ್ನು ಹತ್ಯೆ ಮಾಡಿ ಪರಾಜಯ ಮತ್ತ ಪಲಾಯನ ಮಾಡುತ್ತಿದ್ದ ಜನರ ದೇಹದಲ್ಲಿ ತೀವ್ರವಾದ ರಂಧ್ರ ಹಾಗೂ ಗಾಯಗಳನ್ನುಂಟು ಮಾಡಿದರು. ಆ ಗಲಭೆ ಮತ್ತು ಗುಲ್ಲೆಬ್ಬಿಸುವ ಅಸಂಬದ್ಧ ಘರ್ಷಣೆಯ ಸಂದರ್ಭದಲ್ಲಿ ನೊಣಗಳು ಮತ್ತು ಇರುವೆಗಳಿಗೆ ಅತೀವ ಆನಂದವುಂಟಾಗುವ ಸಂದರ್ಭ ಒದಗಿತು.

ಹೃದಯನ್ನು ಸುಡುವ ಬಿಲ್ಲನ್ನು ಹೊಂದಿದವರು ವಿಜಯ ಮತ್ತು ಸಫಲತೆಯ ಬಾಣವನ್ನು ಹೂಡುವ ಜನರು ಹರಿತವಾದ ಈಟಿಯ ಮಳೆಯನ್ನು ಗರೆಯಲಾರಂಭಿಸಿದರು. ಕಪ್ಪು ಆಂತರ್ಯ ಕೇಡು ಮೋರೆಯ ನತದೃಷ್ಟ ಶತ್ರುಗಳ ಎದೆ ಮತ್ತು ಬೆನ್ನನ್ನು ಸೂಜಿ ಮತ್ತು ಬಟ್ಟೆಯಂತೆ ಪರಸ್ಪರ ಸೇರಿಸಿ ಹೊಲೆದಂತಾಯಿತು. ಯುದ್ಧರಂಗದ ಪಾನಗೃಹದಿಂದ ಶರಾಬನ್ನು ಸೇವಿಸುವವರು ಯುದ್ಧರಂಗದ ಪಾನಗೃಹದ ಯಾತನೆ ಮತ್ತು ನೋವನ್ನು ಅನುಭವಿಸುತ್ತಿದ್ದ ಶತ್ರುಗಳ ರಕ್ತವನ್ನು ಅತ್ಯಂತ ಪರಿಶುದ್ಧ ಶರಾಬಿಗಿಂತಲೂ ಹೆಚ್ಚು ನಶೆಯ ಅಮಲನ್ನು ಏರಿಸುವಂತೆ ಮತ್ತು ಅವರ ಹೃದಯ ಮತ್ತು ಶ್ವಾಸಕೋಶವನ್ನು ಕಬಾಬ್‌ಗಿಂತಲೂ ಹೆಚ್ಚು ಪ್ರಿಯವಾದ ಸ್ವಾದಿಷ್ಟವೆಂದು ಪರಿಭಾವಿಸುತ್ತಾ ಶೋಧದ ಸೂಜಿ ಮತ್ತು ಹುಡುಕಾಟದ ಪಾನಪಾತ್ರೆಯನ್ನು ಇನ್ನು ಏನು ಬಾಕಿ ಇದೆ ಎಂಬಂತೆ ಆ ಶರಾಬಿನಿಂದ ಶ್ರೀಮಂತಗೊಳಿಸಿದರು. ರಕ್ತಸಿಕ್ತ ತೋಪುಗಳ ಜ್ವಾಲೆಯ ಮೂಲಕ ಜನರಿಗೆ ಅತೀವ ಸಂಕಷ್ಟದಲ್ಲಿ ಸಿಲುಕಿಸುವಂತಹ ಗುಂಡುಗಳಿಂದ ಸಂಪೂರ್ಣವಾಗಿ ಕಪಟತನದಿಂದ ಕೂಡಿದ ಯುದ್ಧಕೋರ ಜನರ ದೃಷ್ಟಿಯಲ್ಲಿ ಬೆಂಕಿಯನ್ನು ಮೂಡಿತು. ಯಾವ ಶಾಖದಿಂದ ಭೂಮಿಯ ತಾಪವು ನೀರಾಗಿ ಹರಿದು ಲಜ್ಜಿತ ಸ್ವಭಾವವನ್ನು

ಹೊಂದಿದಂತಹ ನಾಚಿಕೆಯಲ್ಲಿ ಮುಳುಗಿದ ವ್ಯಕ್ತಿಯಂತೆ ಅರಣ್ಯ ಮತ್ತು ಮೈದಾನದಲ್ಲಿ ದೌರ್ಬಲ್ಯದ ಕ್ಷೀಣಿಸಿದ ನೀರನ್ನು ಪಡೆಯುವ ಸಲುವಾಗಿ ರಕ್ತದಾಹದ ಮೂಲಕ ಆ ಮೈದಾನದಲ್ಲಿ ಬಹಾದುರರು ಯುದ್ಧರಂಗದ ವೀರರ ಮೂಲಕ ವಿದ್ರೋಹದ ಉಡುಪಿನಿಂದ ವಿವಸ್ತ್ರಗೊಳಿಸಿದರು ಮತ್ತು ಕೆಂಪು ಉಡುಪನ್ನು ತೊಟ್ಟು ಬೆಂಕಿಯ ಜ್ವಾಲೆಗಳ ಸಂಘರ್ಷದ ಮೈದಾನದಲ್ಲಿ ಎದೆಯನ್ನು ಸೀಳುವ ಸೆರೆಯಾಳುಗಳನ್ನು ಆರ್ದ್ರಕಣ್ಣು ಮತ್ತು ಭಗ್ನಗೊಂಡ ಹೃದಯವನ್ನು ಇರುವಂತಹ ಗಾಯಾಳು ವ್ಯಕ್ತಿಗಳು ತಮ್ಮ ಚೀತ್ಕಾರ ಮತ್ತು ವಿನಾಶಕಾರೀ ಯುದ್ಧಕ್ಷೇತ್ರದಲ್ಲಿ ಎದೆ ನಡುಗಿಸುವಂತೆ ಸೆಟೆತುಕೊಂಡು ಮಂಜುಗಡ್ಡೆಯಂತೆ ಹಿಮಗಟ್ಟಿದರು.

ಅಪಾಯಕಾರೀ ಹಾಗೂ ಭಯಾನಕ ಮತ್ತು ನಾಮಾಂಕಿತ ವೀರಶೂರರು ಯುದ್ಧ ರಂಗದಿಂದ ತಮ್ಮ ಕುದುರೆಗಳನ್ನೇರಿ ಶತ್ರುಪಾಳಯದ ಮೇಲೆ ತೂಫಾನು ಆರಂಭವಾದಂತೆ ಅವರ ಮೇಲೆ ಆಕ್ರಮಣವನ್ನು ಮಾಡಿದರು.

ಕಬ್ಬಿಣ ಧರಿಸುವ ಜನರು ಕಪ್ಪುಮೋಡದಂತೆ
ಕಪ್ಪು ದೇಹವನು ಹೊಂದಿದವರು
ನೀವು ಹೇಳುವಿರಿ ಬರೀ
ಕತ್ತಿಗಳ ಮಳೆ ಸುರಿಯುವುದೆಂದು
ಬಾಣಗಳ ದೆಸೆಯಿಂದ ಯಾರೂ ಕೂಡ
ಕುತ್ತಿಗೆಯನ್ನು ಎತ್ತರಿಸುವಂತಿರಲಿಲ್ಲ ಭೀಕರ
ಚೀತ್ಕಾರವನ್ನು ಹೊರಡಿಸಿದ್ದರಿಂದ ಶ್ವಾಸವನ್ನು
ಹೊರಬಿಡುವ ಹಾದಿಯೇ ಕಾಣಲಿಲ್ಲ
ಸರಿಯಾದ ದಾರಿಯಲಲಿ ಸಾಗಿದ ಬಾಣಗಳು
ಮುಳ್ಳಿನ ಮೊನೆಯಂತೆ. ಉದ್ಯಾನವನವು
ಹೃದಯದಲ್ಲಿ ಗುರಾಣಿ ಹಿಡಿದಂತೆ
ಘನವಾಗಿ ಬಾಣಗಳ ಮಳೆ ಸುರಿಸುತ್ತಾ ಆವೇಶಭರಿತರಾದರು
ಮಳೆಯ ನೀರನ್ನು ತಮ್ಮ ಹೆಗಲಿನ ಮೇಲೆ ಸುರಿದುಕೊಂಡರು
ಹುಟ್ಟಿನಿಂದಲೇ ಬಿಲ್ಲಿಗೆ ಬಾಗುವಿಕೆ ದೊರಕಿತು
ವಕ್ರ ನಡಿಗೆಯ ದರ್ಪದಂತೆ ಬಾಣವು
ಹೆಬ್ಬಾವನ್ನು ನುಂಗಿತು.
ಬಾಣಗಳ ವರ್ತುಲಗಳು ಪರಸ್ಪರ ಆಲಂಗಿಸಿದವು
ಹೃದಯಕ್ಕೆ ತಿರುವು ನೀಡುವ ಎತ್ತರದ ಘೋಷಣೆಗಳು
ಎತ್ತರಕೇರತೊಡಗಿದವು

ಯುದ್ಧಭೂಮಿಯ ಸಮುದ್ರವು ಈ ರೀತಿಯಲಿ
ಉಕ್ಕೇರಿತು ಹೇಗೆಂದರೆ ಸಮುದ್ರದಂತೆ
ಭೂಮಿ ಊಳಿಡತೊಡಗಿತು.
ಯುದ್ಧರಂಗದಿಂದ ಸಿಂಹಗಳಂತೆ ಹೊರಬಂದರು
ಒಂದು ಕ್ಷಣ ಕಾಲದವರೆಗೂ ರಾಜಿಗೆ ಸಿದ್ಧರಿರಲಿಲ್ಲ.

ಒಟ್ಟಾರೆ ಹೇಳುವುದಾದಲ್ಲಿ ಸಯ್ಯದಿ ಅಲಿಯ ಸಂಪೂರ್ಣವಾಗಿ ನಾಶವಾಗಿ ನೆಲಕಚ್ಚಿದ ಸೈನ್ಯವು ಯುದ್ಧರಂಗದಲ್ಲಿ ನೆಲೆ ನಿಲ್ಲುವ ಮತ್ತು ಪಂಕ್ತಿಯನ್ನು ನೇರಗೊಳಿಸುವ ಶಕ್ತಿ ಸಾಮರ್ಥ್ಯವನ್ನು ಕಳೆದುಕೊಂಡ ನಂತರ ಉಭಯ ಲೋಕಗಳ ಅಪಮಾನ ಮತ್ತು ಉಭಯಲೋಕಗಳ ನಷ್ಟವನ್ನು ತಮ್ಮ ಜೊತೆಯಲ್ಲಿ ಪಡೆದರು. ಪರಾಕ್ರಮ ಮತ್ತು ಶೌರ್ಯದ ಸೆರಗನ್ನು ಅಧೈರ್ಯದ ಹಸ್ತದಿಂದ ಹರಿದು ಹಾಕಿದರು ಮತ್ತು ನೆರವಿನ ಮಣ್ಣನ್ನು ತಮ್ಮ ಉನ್ನತವಾದ ಹಣೆಯ ಮೇಲೆ ಹಾಕಿ ಜಿಂಕೆಗಳ ಹಿಂಡು ಕೋಪೋದ್ರಿಕ್ತ ಸಿಂಹಗಳ ಎದುರಿಗೆ ನಿಂತಂತೆ ಮತ್ತು ಹರಿದು ತಿನ್ನುವ ಮೃಗಗಳ ಭಯದಿಂದ ರೌದ್ರತೆಯ ಕ್ಷೇತ್ರದಲ್ಲಿ ನಿಲ್ಲಲು ಅಸಹಾಯರಾಗಿ ಅಪಾಯಕಾರಿ ಹಾದಿಗಳ ಕಣಿವೆ ಮತ್ತು ಕೊರಕಲುಗಳ ಬಗ್ಗೆ ಪರಿವೆ ಇಲ್ಲದೆ ಬೆನ್ನು ತಿರುಗಿಸಿ ಅರಣ್ಯದತ್ತ ಓಡುತ್ತಾ ಪಲಾಯನಗೈದರು. ಆದರೆ ಕೆಲವು ಸಾಮಂತರು ಮತ್ತು ಪ್ರಭಾವಿ ವ್ಯಕ್ತಿಗಳು ಆಕಾಶದ ವತಿಯಿಂದ ಉಪ್ಪುಂಡವರಿಗೆ ನಿಷ್ಠೆ ಮತ್ತು ನಂತರ ಆ ದುರದೃಷ್ಟಶಾಲಿ ಅಯೋಗ್ಯನ ಸೈನ್ಯದ ಮುಂಭಾಗದಲ್ಲಿ ಇದ್ದಂತಹವರು ಸ್ಪಷ್ಟ ರೀತಿಯಲ್ಲಿ ಅವರ ಶೋಧನೆ ಮತ್ತು ತಲಾಶಿನ ಸಲುವಾಗಿ ಹಾಗೂ ಸಫಲತೆಯ ನಡತೆಯ ಒಡೆಯರಾದ ಯೋಧರ ಸಶಕ್ತ ಖಡ್ಗಗಳಿಂದ ಹತರಾದರು ಮತ್ತು ಅವರುಗಳು ನೀಚ ಸಲಾಬತ್‌ಖಾನ್‌ನ ವಿಧ್ವಂಸಕ ಪರಿಣಾಮಗಳನ್ನು ಹೊಂದಿದಂತಹ ಕಪ್ಪು ಹೃದಯದ ಆ ವ್ಯಕ್ತಿಯು ನೆಮ್ಮದಿ ಮತ್ತು ಆರಾಮದಿಂದ ವಂಚಿತನಾಗಿದ್ದ. ಹಾಗೂ ಕೆಲವು ಸವಾರರುಗಳ ಜೊತೆಯಲ್ಲಿ ಆ ಶೈತಾನನಂತಹ ಶಹಾಬ್ ಸಾಖಿಬ್ ನಕ್ಷತ್ರದ ಕಲ್ಲು ಬೀರುವ ವೈಫಲ್ಯವನ್ನು ಪಡೆದ. ನಿಕೃಷ್ಟನಾದ ಇಬ್ಲೀಸ್‌ನ ರೀತಿಯಲ್ಲಿ ಅಲ್ಲಾಹನ ಹೊರತು ಬೇರೆ ಯಾರೂ ಆರಾಧ್ಯರಿಲ್ಲ ಹಾಗೂ ಆತನು ಮಹಾನ್ ಬಲಾಢ್ಯನು ಎನ್ನುವ ಉಕ್ತಿಯನು ಎದುರಿಸಲಾರದೆ ಓಡುತ್ತಾನೆ. ಕಪ್ಪು ಮೋರೆಯ ಮಣ್ಣು ಮತ್ತು ನೀಚತನದ ಧೂಳಿನಿಂದ ಆವೃತನಾಗಿದ್ದು ಅಪಮಾನದಿಂದ ಅಲ್ಲಿಂದ ಓಡಿ ಪಲಾಯನಗೈದ. ಸುಬಹಾನಲ್ಲಾ ಇದೆಂತಹ ಗೌರವ ಮತ್ತು ಔನ್ನತ್ಯ ಹಾಗೂ ಪರಾಕ್ರಮದ ಬುನಾದಿಯಾಗಿದೆ ಹಾಗೂ ಶೌರ್ಯ ಮತ್ತು ಧೈರ್ಯದ ದರ್ಜೆಯು ಹಜರತ್ ಬಾದಶಹ ಘಾಝಿಯ ಪಾಲಿಗೆ ಬಂದಿದೆ. ಈ ಯುದ್ಧದ ಪಂಕ್ತಿಗಳನ್ನು ಮುರಿಯುವ ಸಿಂಹಗಳಂತಹ ಶಕ್ತಿಯನ್ನು ಹೊಂದಿದ ಪುರುಷ ಸಿಂಹಗಳು ಆನೆಯಂತಹ ದುಃಖ

ಮತ್ತು ಯಾತನೆಯನ್ನು ನೀಡುವಂತಹ ದುರ್ಗುಣಗಳನ್ನು ಹೊಂದಿದಂತಹ ಶತೃಗಳನ್ನು ನಿರ್ನಾಮ ಮಾಡುವವರು ಕೋಟೆಯನ್ನು ತೆರೆಯುವವರು ಮತ್ತು ಶತ್ರುಸಂಹಾರದ ಕ್ಷೇತ್ರದಲ್ಲಿ ಪ್ರಾಣವನ್ನು ಪಣಕ್ಕೆ ಇಡುವವರು, ಬಳಕುತ್ತಾ ನಡೆಯುವವರು, ಅಭಿಮಾನದ ರಂಗದಲ್ಲಿ ಶತ್ರುವಿರೋಧಿ ಗುಂಪನ್ನು ಹುಟ್ಟು ಹಾಕುವವರು ಯಾಜೂಜ್ ಮಾಜೂಜ್‌ನ ಸೈನ್ಯದಿಂದ ಅಧಿಕವಾದ ಬೃಹತ್ ಗಾತ್ರದ ಮತ್ತು ಸ್ವಭಾವ ಹಾಗೂ ಧೃಡತೆಯಲ್ಲಿ ರುಸ್ತುಮ್ ಮತ್ತು ಔಜ್‌ಗಿಂತಲೂ ಹೆಚ್ಚು ವಿರೋಧಿಗಳ ಸೈನ್ಯದ ಶಕ್ತಿ ಸಾಮರ್ಥ್ಯವನ್ನು ಅರಿತು ಆ ಜೀವಕ್ಕೆ ಗಾಯಗಳನ್ನುಂಟು ಮಾಡುವ ಯುದ್ಧ ರಂಗದಲ್ಲಿ ಒಂದೇ ಕ್ಷಣವನ್ನೂ ಕೂಡಾ ಶೋಧನೆಯಲ್ಲಿ ವ್ಯರ್ಥವಾಗಿ ಕಳೆಯಲಿಲ್ಲ ಮತ್ತು ಸಂಘರ್ಷದ ಹೆಜ್ಜೆಯನ್ನು ಕೃತಜ್ಞತೆಯ ಸೆರಗಿನಿಂದ ಹೊರ ತೆಗೆಯಲಿಲ್ಲ. ಶೌರ್ಯದ ಶಕ್ತಿಯಿಂದ ಶತ್ರುಗಳ ಜೀವನಯಾತ್ರೆಯನ್ನು ಮುಖಾಮುಖಿಯಾಗಿಸಿ ಹಜರತ್ ಬಾದಶಹ ಘಾಝಿಯು ಅತ್ಯಂತ ಬುದ್ಧಿವಂತಿಕೆ ಮತ್ತು ದೂರದೃಷ್ಟಿಯ ಮೂಲಕ ಒಳ್ಳೆಯ ನಡೆಯನ್ನು ಕೈಗೊಂಡರು. ದೈವಸಹಾಯದ ಸಂಕೇತಗಳನ್ನು ಹೊಂದಿದವರು ಮತ್ತು ಹಣೆಯ ಮೇಲೆ ಸಫಲತೆ ಹಾಗೂ ವಿಜಯದ ಗುರುತಿನ ಒಡೆಯರಾದ ಸೈನಿಕರು ಸ್ತುತ್ಯರ್ಹ ಕಾರ್ಯವನ್ನು ಎಸಗಿದ್ದರು. ನಿರಂತರವಾದ ಗೆಲವು ಮತ್ತು ಪರಾಕ್ರಮದ ಕೋರಿಕೆ ಹಾಗೂ ಸೂರ್ಯನ ಬೆಳಕಿನ ಹೆಚ್ಚಳದ ಅಗಣಿತ ಬೆಂಬಲಗಳು ಮತ್ತು ನೆರವನ್ನು ಪಡೆದು ದಿಗ್ವಿಜಯವನು ಹೊಂದಿ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಎಚ್ಚರಿಕೆಯಿಂದ ನಡೆದು ಉತ್ತಮ ಗುಣಗಳ ಆಧಾರ ಪ್ರಮಾಣಗಳೊಂದಿಗೆ ಬಲಾಢ್ಯ ಕುದುರೆಗಳ ಸವಾರಿಯಿಂದ ಶತ್ರುಗಳ ಗುಂಪಿಗೆ ನಷ್ಟವನ್ನುಂಟು ಮಾಡಿ ಅಪಜಯ ಮತ್ತು ಪಲಾಯನದ ಪಾಠವನ್ನು ಕಲಿಸಿದರು. ನಕ್ಷತ್ರಗಳ ಅಪಶಕುನಗಳನ್ನು ಹೊಂದಿದ್ದ ಆ ದುರದೃಷ್ಟಕರ ಗುಂಪಿನ ಅಕ್ರಮ ಮಾರ್ಗಗಳ ಮತ್ತು ನತದೃಷ್ಟ ನಕ್ಷತ್ರದ ಉದಯವಾದದ್ದರಿಂದ ಲೋಕದ ಒಡೆಯನಾದ ಅಲ್ಲಾಹನ ಕಡೆಯಿಂದ ಒದಗಿ ಬಂದ ಬೆಂಬಲ ಮತ್ತು ನೆರವಿನ ಹಸ್ತದಿಂದ ರಾಜ್ಯವು ಸಲಹೆ ಮತ್ತು ಸುಧಾರಣೆಗಳಿಂದ ಮುನ್ನಡೆದು ಸ್ಥಿರವಾಯಿತು. ಅವರ ಕೋಪ ಮತ್ತು ಮುನಿಸಿನಿಂದ ಕೂಡಿದ ಹುಬ್ಬಿನ ಚಲನೆಯು ಕ್ಷಣಾರ್ಧದಲ್ಲಿ ಕತ್ತರಿಸಿ ಎಸೆಯುವ ಕತ್ತಿಯ ಚಲನೆ ಮತ್ತು ಹೊಳಪಿನಿಂದ

ಕೂಡಿದ ಕತ್ತಿಯ ನಿರ್ದಯತೆಯು ದೇಹಗಳನ್ನು ತುಂಡು ತುಂಡನ್ನಾಗಿ ಮಾಡಿದ ರಾಕ್ಷಸಾಕಾರದ ಶತ್ರುಗಳು ಮತ್ತು ವಿರೋಧಿಗಳ ಗುಂಪಿಗೆ ಇದು ಕೊಲೆ ಮತ್ತು ವಿನಾಶದ ವಿಧ್ವಂಸಕತೆ ಹಾಗೂ ಈ ಬಗ್ಗೆ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದ ಶತ್ರುಗಳನ್ನು ನಿರ್ನಾಮ ಮತ್ತು ವಿನಾಶದ ಕಂದಕದಲ್ಲಿ ಹಾಕಲಾಗುತ್ತದೆ ಮತ್ತು ಯುಕ್ತಿ, ಉಪಾಯ ಬುದ್ಧವಂತಿಕೆ ಹಾಗೂ ಸಂಯಮದಿಂದ ಕಾಡಿನ ಸಿಂಹಗಳ ಬೇಟೆಯಲ್ಲಿ ತರಲಾಗುತ್ತದೆ. ಹಿಂಸೆ ಮತ್ತು ದೌರ್ಜನ್ಯವನ್ನು ಎಸಗುವ ಶತ್ರುತ್ವ ಮತ್ತು

ದ್ವೇಷವನ್ನು ಹೊಂದಿದ ವ್ಯಕ್ತಿಯನ್ನು ಎಸೆಯಲಾಗುವುದು. ಅರ್ಥಾತ್ ಅವನ ಹೆಸರು ಮತ್ತು ಗುರುತಿನ ಮಾಂತ್ರಿಕತೆಯನ್ನು ಒಂದು ಕಠಿಣ ಹಾಗೂ ತೀವ್ರ ನೋಟದ ಮೂಲಕ ನಾಶಗೊಳಿಸುತ್ತಾರೆ.

ಅಲ್ಲಾಹನ ವೈಭವ ಮತ್ತು ಕರುಣೆಯ ಬಲದಿಂದ ಧರ್ಮವೇತ್ತ ಅದೃಷ್ಟಶಾಲೀ ಬಾದಶಹನಿದ್ದಾನೆ. ಆತನ ಕಾಲಾವಧಿಯಲ್ಲಿ ದುಃಖ ಮತ್ತು ಸಂಕಷ್ಟದ ಬುನಾದಿಯು ಜೇಡರ ಬಲೆಗಿಂತಲೂ ಹೆಚ್ಚು ಶಿಥಿಲವಾಗಿದೆ. ಪಿತೂರಿ ಮತ್ತು ದಂಗೆಯ ಬುನಾದಿಯು ಅವರ ಆಜ್ಞೆ ಮತ್ತು ಅಧಿಕಾರದ ದಿನಗಳಲ್ಲಿ ಅತ್ಯಂತ ದುರ್ಬಲ ಮತ್ತು ಹತ್ತಿಯ ಉಂಡೆಗಿಂತಲೂ ಹಗುರವಾಗಿತ್ತು. ದಾನ ಧರ್ಮದ ಉನ್ನತ ಕಟ್ಟಡವು ಸಂತೋಷ, ನೆಮ್ಮದಿ ಆನಂದದ ಕಟ್ಟಡ ಮತ್ತು ಭವ್ಯ ಮಹಲು ಅವರ ಕಾಲದಲ್ಲಿ ಶ್ವೇತ ಆಕಾಶದಂತೆ ಸುರಕ್ಷಿತ ಕೋಟೆಯಂತೆ ಹಚ್ಚಹಸಿರಿನಿಂದ ಕಂಗೊಳಿಸಿದ ಮತ್ತು ಶಾಂತಿ, ನೆಮ್ಮದಿ ನಿರಾಳತನದ ಮಹಲು ಅವರ ಕಾಲದಲ್ಲಿ ಸಿಕಂದರನ ಶಕೆಗಿಂತಲೂ ಹೆಚ್ಚು ಸಧೃಡವಾಗಿತ್ತು. ಅವರ ಆಜ್ಞಾಪಾಲನೆಯಲ್ಲಿ ಅಭಿಮಾನವನ್ನು ಇಟ್ಟ ಒಳಿತಿನ ಆಕಾಂಕ್ಷಿ ವ್ಯಕ್ತಿಗಳಿಗೆ ಸಫಲತೆ ಮತ್ತು ವಿಜಯದ ಮಹಲು ಮತ್ತು ದೇಶವನ್ನು ಕಟ್ಟುವವರಾದರು ಮತ್ತು ಅವರ ವಿರೋಧದಿಂದ ಪಿತೂರಿಯ ಆಲೋಚನೆಯನ್ನು ಹೊಂದಿದ ಬಂಡಾಯವನ್ನು ಪೋಷಿಸುವ ವ್ಯಕ್ತಿಗಳ ಕೇಡು ಮತ್ತು ನಾಶದ ಕ್ಷೇತ್ರವನ್ನಾಗಿ ಮಾಡಲಾಯಿತು ಮತ್ತು ಅವರ ಆಜ್ಞಾಪಾಲನೆಯ ದಿವ್ಯ ಔಷಧವು ಅವಿಧೇಯತೆಯ ನಷ್ಟದ ಅರಣ್ಯದಲ್ಲಿ ಸಿಲುಕಿದ ಕಪಟ ಜನರ ಸಲುವಾಗಿ ಅವರ ಹುಕುಮ್ ಮತ್ತು ತೀರ್ಮಾನದ ಉಲ್ಲಂಘನೆಯು ವಿಶ್ವಾಸಘಾತಕತನ ಮತ್ತು ದುರದೃಷ್ಟದ ಕ್ಷೇತ್ರ ಮತ್ತು ಅರಣ್ಯದಲ್ಲಿ ಅಲೆಮಾರಿಗಳಂತೆ ಅಲೆದಾಡುವ ಜನರ ಹಾದಿಯಲ್ಲಿ ಬೆಂಕಿಯನ್ನು ಉರಿಸುವಂತಹದಾಗಿದೆ. ಈ ನಕಾರಾತ್ಮಕತೆಯ ಅನುಮೋದಕರು ಮತ್ತು ಆ ಸಂಭಾಷಣೆಯ ಅನುಸಾರ ಸಲಾಬತ್‌ನ ಸಂಗತಿ ಮತ್ತು ವೃತ್ತಾಂತವಿದೆ. ಇದೇ ಆಧಾರದ ಮೇಲೆ ವೇಗವಾಗಿ ಪ್ರವಾಸ ಮಾಡುವ ಗರುಡ ಪಕ್ಷಿಯು ಹಾರಾಡುವ ಪರಿಸರದಲ್ಲಿ ಲೇಖನಿ ಮತ್ತು ಅದರ ಬರವಣಿಗೆಯು ಗರುಡನ ರೋಮ ಮತ್ತು ರೆಕ್ಕೆಗಳನ್ನು ಹರಡುತ್ತದೆ. ಆ ಕಪ್ಪು ಚೆಹರೆಯ ದೈತ್ಯ, ದುರುಳನು ಪರಾರಿಯಾಗಿ ಗರೇಜ್‌ನ ಮೈದಾನದಲ್ಲಿ ಶರಣಾದಾಗ ಅವನ ವಶದಲ್ಲಿ ರಾಯಚೂರಿನ ಕೋಟೆ ಇತ್ತು. ಅದೊಂದು ಸುರಕ್ಷಿತ ತಂಗುದಾಣವೆಂದು ನಂಬಿ ಅಲ್ಲಿ ಹೋಗಿ ತಲುಪಿದ ಮತ್ತು ಅಲ್ಲಿ ಕೆಲವು ಗಂಟೆಗಳ ಕಾಲ ಅತ್ಯಂತ ಭಯಗ್ರಸ್ತನಾಗಿದ್ದು ತನ್ನ ಸಮಚಿತ್ತತೆಯನ್ನು ಕಳೆದುಕೊಂಡ. ಅಲ್ಲಿ ನೆಲೆ ನಿಲ್ಲಲು ಸಾಧ್ಯವಾಗದೆ ಶತ್ರುವಿನ ಶಿಕಾರಿ ಮಾಡುವಲ್ಲಿ ಅಭೇದ್ಯ ಹಸ್ತವಾದ ಬಾದಶಹನ ಹೆದರಿಕೆಯಿಂದ ತುಂಗಭದ್ರ ನದಿಯನ್ನು ಪಾರು ಮಾಡುತ್ತಾ ಮೊಹಮ್ಮದ್‌ಪುರ ಕೋಟೆಯನ್ನು ತನ್ನ ಕೋಪ ಮತ್ತು ಭಯೋತ್ಪಾದನೆಯ

ಕ್ಷೇತ್ರವನ್ನಾಗಿ ಮಾಡಿ ತನ್ನ ಶೌರ್ಯ ಮತ್ತು ವಿಜಯದ ಬಗ್ಗೆ ಮುನ್ನೆಚ್ಚರಿಕೆಯನ್ನು ನೀಡಿದ. ಹಜರತ್ ಬಾದಶಹ ಘಾಝಿಯವರು ಯುದ್ಧರಂಗದಲ್ಲಿ ಭೂಮ್ಯಾಕಾಶಗಳ ಒಡೆಯನಾದ ಅಲ್ಲಾಹನ ಸನ್ನಿಧಿಯಲ್ಲಿ ವಂದನೆಗಳ ಸಜದಾವನ್ನು ಮಾಡಿ ನೆಮ್ಮದಿ ಮತ್ತು ಶಾಂತಿಯ ಮನೆಯ ಗೌರವದ ಶ್ರೀರಕ್ಷೆಯಾಗಿ ವಿಜಯ ಮತ್ತು ಸಫಲತೆಯ ನಗಾರಿ ಮತ್ತು ಸಂತೋಷ ಆನಂದ ಸಂಭ್ರಮದ ಡೋಲನ್ನು ಬಡಿದು ಉತ್ತಮೋತ್ತಮ ಅಪಾರ ಸಫಲತೆ ಮತ್ತು ಪರಾಕ್ರಮದ ಪತಾಕೆಗಳನ್ನು ರಾಯಚೂರು ಕೋಟೆಯತ್ತ ದುಃಖ ದುಗುಡವನ್ನು ಓಡಿಸುವ ವೃತ್ತಿಯವನಂತೆ ಆ ಧ್ವಜಗಳನ್ನು ಏರಿಸಿದರು. ಆ ಕೋಟೆಯ ಕಿಲ್ಲೇದಾರನು ಅಯೋಗ್ಯ ಮತ್ತು ಅನಿಷ್ಟ ಜನಗಳಲ್ಲಿ ಒಬ್ಬನಾಗಿದ್ದ. ಈ ಸಂತೋಷ ಮತ್ತು ಪ್ರಫುಲ್ಲತೆಯ ಸುದ್ದಿಯನ್ನು ಕೇಳಿದ ಮತ್ತು ಆ ನೆಮ್ಮದಿ ಹಾಗೂ ಸಂತಸದ ಸುದ್ದಿಯನ್ನು ಕೇಳಿ ಹೀಗೆಂದು ಆಂತರ್ಯದಲ್ಲಿ ಆಲೋಚನೆ ಮಾಡಿದ. ನತದೃಷ್ಟತೆಯ ಬೀಜವನ್ನು ಸ್ವತಃ ಅವನ ಹೊಲದಲ್ಲಿ ಬಿತ್ತಲಾಯಿತು. ವಿರೋಧ ಮತ್ತು ದ್ವೇಷದ ಕರ್ತವ್ಯ ಮತ್ತು ಕ್ಷೇತ್ರದ ಕಾಳನ್ನು ಪಡೆದ ಹಾಗೂ ಭಿನ್ನಾಭಿಪ್ರಾಯ ಮತ್ತು ವಿನಾಶದ ಹೊಲದಲ್ಲಿ ಬಾಕಿ ಉಳಿದುದನ್ನು ಬಾಚುವಂತಹವನಾದ.

ಕೋಟೆಯ ಸಂರಕ್ಷಕರಲ್ಲಿ ಒಬ್ಬನಾದ ಪದಾತಿದಳದ ಸರದಾರನಾಗಿದ್ದ ಒಬ್ಬ ಸರದಾರನು ಆ ನಿರ್ನಾಮ ಹಾಗೂ ನಾಶಗೊಂಡ ಆಲೋಚನೆ ಬಾಹ್ಯದಲ್ಲಿ ಕೆಡುಕು ಮತ್ತು ಆಂತರ್ಯದಲ್ಲಿ ವಿದ್ರೋಹವನ್ನು ಹೊಂದಿದ ಆ ಕಪ್ಪು ಹೃದಯದ ಕೇಡನ್ನು ಗ್ರಹಿಸಿದರು. ಸಧೃಡ ಚಿತ್ತದ ಸನ್ನಡತೆಯ ಬೆಂಬಲಿಗರನ್ನು ಅವಮಾನದ ಸರಪಳಿಯಲ್ಲಿ ಸೆರೆಯಾಳನಾಗಿ ಮಾಡುವ ಕಪಟಿ ಶೈತಾನನಂತೆ ಅವಮಾನ ಮತ್ತು ಅಗೌರವದ ಸೆರೆಮನೆಯಲ್ಲಿ ಆತನನ್ನು ಸೆರೆಯಾಳನ್ನಾಗಿಸಿದ ಮತ್ತು ಕೋಟೆಯವರನ್ನು ಎಳೆದು ಹಜರತ್ ಬಾದಶಹ ಘಾಝಿಯವರ ಪವಿತ್ರ ಮತ್ತು ಶುಭ ಆಗಮನೆ ದೆಸೆಯಿಂದ ಉಭಯ ಲೋಕಗಳ ಉದ್ದೇಶದ ವಧುವನ್ನು ತಮ್ಮ ಬಗಲಲ್ಲಿ ಎಳೆದು ತಂದಿದ್ದರು. ಹಜರತ್ ಬಾದಶಹ ಘಾಝಿ ಆ ಸ್ಥಳದಲ್ಲಿ ಅರ್ಪಣಾ ಬಾವವನ್ನು ಪೋಷಿಸಿ ಸಂಭ್ರಮ ಮತ್ತು ಸಭೆಗೆ ಶೋಭೆಯನ್ನು ನೀಡಿದ ಅದ್ಭುತ ಸಮಾರಂಭವನ್ನು ಆಯೋಜಿಸಿದರು ಹಾಗೂ ದರಬಾರಿನ ಪ್ರಮುಖ ಗುಲಾಮರಲ್ಲಿ ಒಬ್ಬನಾಗಿದ್ದ ಆಖಾ ಖುಸ್ರು ವಲಿಯನ್ನು ಆ ಸ್ಥಾನದಲ್ಲಿ ಖಿಲ್ಲೇದಾರನ ಸ್ಥಾನಮಾನವನ್ನು ನೀಡಿ ಉನ್ನತ ದರ್ಜೆಗೆ ಏರಿಸಿ ಪ್ರತಿಷ್ಠೆಯನ್ನು ಹೆಚ್ಚಿಸಿದರು ಮತ್ತು ಮಾರನೆಯ ದಿನ ತುಂಗಭದ್ರ ನದಿಯ ದಡದಲ್ಲಿ ಇರುವ ಮೌಜೆ ಪಚಾಲ್‌ಗೆ ಅತ್ಯಂತ ಸಂಭ್ರಮ ಸಂತೋಷ ಮತ್ತು ವೈಭವದಿಂದ ಯುದ್ಧರಂಗದ ವೀರರ ತಂಗುದಾಣವನ್ನಾಗಿ ಮಾಡಲಾಯಿತು. ಮೂಸಾಖಾನ್ ಎಂಬ ಆಫ್ಘನ್ ಸರದಾರನಿಗೆ ಮತ್ತು ಇನ್ನಿತರೆ ಆಪ್ತ ಸರದಾರರಿಗೆ ಪರಿಶುದ್ಧ ಶರಾಬುಖಾನೆಯ ಪಾನಪ್ರಿಯರಿಗೆ ಉನ್ನತ ಬಿರುದು ಬಾವಲಿಗಳಿಂದ

ಕೂಡಿದ ಸಜ್ಜನ ಮತ್ತು ನಂಬಿಕೆಗೆ ಅರ್ಹವಾದ ಹುಕುಮನ್ನು ಪ್ರಕಟ ಪಡಿಸಿ ಆ ನದಿಯ ನೀರಿನ ಮೇಲೆ ಕ್ರಮಿಸುತ್ತಾ ಆ ದಡವನ್ನು ಹೋಗಿ ತಲುಪಿದರು. ನಿರ್ಲಜ್ಜ ಶರಾಬುಖಾನೆಯ ಪಾನಪ್ರಿಯರು ಅಗೌರವ ಅವಮಾನ ಅವಲಕ್ಷಣ ನೀಚತನದ ಆಲೋಚನೆಗಳ ದೆಸೆಯಿಂದ ಅಪಮಾನದ ಭಿಕ್ಷೆಯನ್ನು ಪಡೆಯುವ ಸಲುವಾಗಿ ಸ್ಪರ್ಧೆಯಲ್ಲಿ ಬಂದಿದ್ದಲ್ಲಿ ಅವರ ಇಚ್ಛೆಯನ್ನು ಅಗೌರವದ ಶರಾಬಿನಿಂದ ತುಂಬಿ ಮತ್ತು ಅವರ ನಿರೀಕ್ಷೆಯ ಹೂಜಿಯನ್ನು ರಕ್ತ ಸಿಕ್ತ ಸಬಾ ಶರಾಬಿನಿಂದ ತುಂಬಿಸಿ ಅವರೆಲ್ಲರ ಬದುಕಿನ ಪಾನಪಾತ್ರೆಯನ್ನು ನಾಶ ಮತ್ತು ವಿನಾಶದ ಕಲ್ಲಿನಿಂದ ಧ್ವಂಸ ಮಾಡಿ ಅವರ ನತದೃಷ್ಟ ಮತ್ತು ದುರಾದೃಷ್ಟದ ಅಮಲಿನ ಜನರ ಆಲೋಚನೆಯಿಂದ ಬದುಕಿನ ನಶೆಯನ್ನು ಹೊರಗೆ ತೆಗೆಯಲಾಗುವುದು.

ಅವರ ಎಲ್ಲರ ಗುಂಡಿಗೆ ಮತ್ತು ಹೃದಯವನ್ನು ಕಬಾಬ್ ಮಾಡಿ ನರಿಗಳು ಮತ್ತು ನಾಯಿಗಳಿಗೆ ವರ್ಗಾಯಿಸಲಾಗುವುದು. ಸಿಂಹಗಳಂತಹ ಶೌರ್ಯವನ್ನು ಹೊಂದಿದ ನೆರವು ಮತ್ತು ಸಹಾಯದ ಯುದ್ಧಗಳಲ್ಲಿ ಹಾಗೂ ಬೆಂಬಲದ ಕ್ಷೇತ್ರದಲ್ಲಿ ಯುವ ಕುದುರೆಸವಾರ ವ್ಯಕ್ತಿಗಳು ಲೋಕದ ಒಡೆಯನ ಹೊಸ್ತಿಲು ಮತ್ತು ದರಬಾರಿನಲ್ಲಿ ಹಣೆಯನ್ನು ನೆಲಕ್ಕೆ ತಾಗಿಸಿ ಖುಬೂಲು ಮಾಡಿದರು ಮತ್ತು ಆ ನದಿಯ ದಡದಲ್ಲಿ ಆರಾಮವಾಗಿ ಸಫಲತೆ ಮತ್ತು ವಿಜಯದ ಠಿಕಾಣೆಯನ್ನಾಗಿ ಮಾಡಿಕೊಂಡು ತಮ್ಮ ಡೇರೆಗಳನ್ನು ನಿರ್ಮಿಸಿದರು. ಒಂದು ರಾತ್ರೆ ಸಯ್ಯದಿ ಮಸೂದ್ ಮೂರು ಸಾವಿರ ಶಸ್ತ್ರಸನ್ನದ್ಧರಾದ ಕುದುರೆ ಸವಾರ ಅನುಭವಿ ಸೈನಿಕರನ್ನು ಜತೆಯಲ್ಲಿ ಕರೆ ತಂದು ಈ ಪ್ರಾಣವನ್ನು ಬಲಿದಾನ ಮಾಡುವ ಅಭಿಮಾನೀ ಬಳಗದ ಮೇಲೆ ಆಕ್ರಮಣ ಮಾಡಿದ ಮತ್ತು ಮೂಸಾಖಾನ್ ಮತ್ತು ಶತ್ರುವಿರೋಧಿ ಯುದ್ಧಗಳಲ್ಲಿ ಕೈದಿಯಾಗಿದ್ದವರಿಗೆ ತಿಳುವಳಿಕೆ ಮತ್ತು ಎಚ್ಚರಿಕೆಯಿಂದ ಪ್ರಾಣ ಬಿಡುತ್ತಾ ಅನುಭವಿ ಬಹಾದುರರನ್ನು ಶತ್ರುಸಂಹಾರದ ಬೆರಳಿನಿಂದ ಕಣ್ಣೆವೆ ಮಿಟುಕಿಸುವುದರಲ್ಲಿ ಅಪಾರ ಹಾನಿಯನ್ನುಂಟು ಮಾಡಿದ ಮತ್ತು ಬದುಕಿನ ಈ ಹಂತದಲ್ಲಿ ಶತ್ರುಗಳ ಪಂಕ್ತಿಯನ್ನು ಮುರಿಯುವ ಬಾಹುಬಲದ ಶಕ್ತಿಯಿಂದ ಎದುರಿಸಿದರು ಹಾಗೂ ಕೇಡು ಸ್ವಭಾವದ ಪ್ರಸಿದ್ಧಿಯನ್ನು ಪಡೆದಿದ್ದ ಬಹಾದುರರ ಸೈನ್ಯವು ಅವಿದ್ಯಾವಂತರಿಂದ ಕೂಡಿದ್ದು ವೀರಾವೇಷದ ಸ್ವಭಾವವನ್ನು ಹೊಂದಿದ್ದ ಬಹಾದುರರ ಕತ್ತಿಯ ಏಟಿಗೆ ಪ್ರಾಣಗಳನ್ನು ಅರ್ಪಣೆ ಮಾಡಿದರು ಹಾಗೂ ದೇಹಗಳು ಅರಣ್ಯಗಳ ಮೃಗಪ್ರಾಣಿಗಳು ಮತ್ತು ಸುತ್ತಮುತ್ತಲಿನ ಶವಗಳನ್ನು ತಿನ್ನುವ ಪ್ರಾಣಿಗಳ ಸಲುವಾಗಿ ಔತಣಕೂಟವಾಯಿತು. ಉಳಿದ ಜನರು ಪಲಾಯನ ಮಾಡುವ ಶಕ್ತಿ ಮತ್ತು ಸಾರ್ಥ್ಯವನ್ನು ಹೊಂದಿದ್ದು ಪ್ರತೀಕಾರದ ಹಾದಿಯಲ್ಲಿದ್ದ ಕುದುರೆಗಳ ಭಯದಿಂದ ಪಿತೂರಿಯ ದೆಸೆಯಿಂದ ತಮ್ಮ ದೇಹಗಳ ರಕ್ಷಣೆಯ ಆಲೋಚನೆಯನ್ನು ಮಾಡುತ್ತಾ ಸಾವು ನೋವುಗಳನ್ನು

ಉಂಟುಮಾಡುವ ಯುದ್ಧರಂಗದಿಂದ ಅವಮಾನ ಅಗೌರವಕ್ಕೆ ಒಳಗಾಗಿ ಕ್ಷೇಮವನ್ನು ಬಯಸುತ್ತಾ ಅಲ್ಲಿಂದ ಓಡಿದರು. ಈ ಅವಧಿಯು ದೈವ ನಿರ್ಣಯ.

ಮತ್ತು ದೈವೇಚ್ಛೆಯ ಮಿತ್ರ ಮತ್ತು ಉನ್ನತವಾದ ಅಭಿಪ್ರಾಯವನ್ನು ಹೊಂದಿದ ಸಲಾಬತ್‌ಖಾನನ ಅವಮಾನ ಮತ್ತು ಅಗೌರವದ ಹೇಳಿಕೆಯನ್ನು ಹರಿದುಹಾಕಲಾಯಿತು. ತೀವ್ರ ವೇಗದಲ್ಲಿ ಆರ್ಭಟಿಸುತ್ತಿದ್ದ ಮಳೆ ಮತ್ತು ಅವನ ಪ್ರತಿಷ್ಠೆಯ ಅದೃಷ್ಟದ ನಕ್ಷತ್ರ ಮತ್ತು ಅವನ ಉನ್ನತ ಅದೃಷ್ಟದ ನಕ್ಷತ್ರವನ್ನು ಅನಿಷ್ಟವೆಂದು ಪರಿಗಣಿಸಲಾಯಿತು. ಪ್ರತಿ ದುಃಖ ಮತ್ತು ಯಾತನೆಯ ಉಗುರುಗಳಿಂದ ಅವನ ನೆಮ್ಮದಿ ಸಂತಸ ಮತ್ತು ಆನಂದದ ಮೋರೆಯನ್ನು ಗಾಯಗೊಳಿಸಲಾಯಿತು ಹಾಗೂ ದುಃಖ ಮತ್ತು ಕೋಪದ ಬಿಸಿ ಅಗ್ನಿಯ ರಾತ್ರೆ ಮತ್ತು ಹಗಲಿನಿಂದ ಅವನ ದೇಹವನ್ನು ಮೇಣದಂತೆ ಕರುಗಿಸಲಾಯಿತು. ಒಟ್ಟಾರೆ ಕಿಡಿಗಳು ಅವನ ಆರೋಗ್ಯದ ಕರ್ತವ್ಯವನ್ನು ಪರಲೋಕದ ಮೈದಾನದ ಗಾಳಿಯು ಇಜ್ಜಿಲನ್ನಾಗಿ ಪರಿವರ್ತಿಸಿತು ಹಾಗೂ ಅನಾರೋಗ್ಯದ ಡಕಾಯಿತನು ಅವನ ಆರೋಗ್ಯದ ಹಸ್ತಕ್ಕೆ ಲಗಾಮನ್ನು ಹಾಕಿತು. ನೆಮ್ಮದಿ ಮತ್ತು ಆನಂದದ ಅಮೂಲ್ಯ ಬಂಡವಾಳವನ್ನು ಅವನ ಕೈಯಿಂದ ಸೆಳೆಯಲಾಯಿತು. ಸಯ್ಯದಿ ಮಸೂದ್‌ನ ಅಪಜಯದ ಸುದ್ದಿಯು ದುಃಖ ಮತ್ತು ಯಾತನೆಯೊಂದಿಗೆ ಅವನಿಗೆ ತಲುಪಿತು. ಆ ಅಯೋಗ್ಯ ಮತ್ತು ದುರುಳ ಹಾಗೂ ಲಾಭದಿಂದ ವಂಚಿತ ಮತ್ತು ದುಷ್ಟನ ನಾಲಿಗೆಯು ಅಡಗಿ ಹೋಯಿತು. ಬದುಕಿನ ಇಚ್ಛೆಯ ಅಮೂಲ್ಯ ವಜ್ರ ವೈಢೂರ್ಯಗಳು ಹೃದಯದ ಶಕ್ತಿ ಮತ್ತು ಒಲವಿನಿಂದ ಕೆಳಗೆ ಜಾರಿ ಹೋದವು. ಆಎಲ್ಲಾ ಕಾರಣಗಳ ಆಧಾರದಿಂದ ಮರಣದ ಕರಿ ಮೋಡಗಳು ಅವನ ಬದುಕಿನ ಕಟ್ಟಡಗಳ ಮೇಲೆ ಆಚ್ಛಾದಿತವಾಯಿತು ಹಾಗೂ ಪ್ರಾಣವನ್ನು ಸಭೆಯ ಬಳುವಳಿ ಮತ್ತು ಅಮೂಲ್ಯ ವಸ್ತುಗಳು ಸ್ವಾದಿಷ್ಟತೆ ಮತ್ತು ಇಚ್ಛೆಯನ್ನು ನಾಶ ಮಾಡಲು ಕಾರಣೀಭೂತವಾಗಿದ್ದು ಅವುಗಳನ್ನು ಮುಂದೊಡ್ಡಿ ಸರ್ವರಿಗೂ ಸಾಮಾನ್ಯ ಮತ್ತು ವಿಶೇಷ ಜನರ ತಿರಸ್ಕಾರಕ್ಕೆ ಗುರಿಯಾದ ಮತ್ತು ಎಲ್ಲಾ ಸಂಕಷ್ಟ ಎಡರುತೊಡರು ಮತ್ತು ದುಃಖ ಯಾತನೆಗಳಿಂದ ಮುಕ್ತಿಯನ್ನು ಹೊಂದಿದ. ಆ ಬಾಯಾರಿದವನ ರೀತಿಯಲ್ಲಿ ಯಾವನ ವಿಸ್ತಾರವಾದ ಮೈದಾನವನ್ನು ತೋಡಿದರೂ ಕೂಡಾ ಅಲ್ಲಾಹನ ಕರುಣೆಯ ಮಳೆಯ ಒಂದು ಹನಿಯೂ ಆ ಕೆರೆಯಲ್ಲಿ ನೀರನ್ನು ಹನಿಸಲಿಲ್ಲ ಎಂಬಂತೆ ಅಪಾರ ನಷ್ಟಕ್ಕೆ ಒಳಗಾಗಿ ಅಸಹಾಯಕತೆಗೆ, ನಿರಾಶೆಗೆ ಬಲಿಯಾಗಿ ಲಜ್ಜಿತ ಮತ್ತು ಅವನತಮುಖಿಯಾಗಿ ಮಣ್ಣನ್ನು ತಲೆಯ ಮೇಲೆ ಹೊಯಿದುಕೊಂಡು ಈ ಲೋಕದಿಂದ ಪರಲೋಕದತ್ತ ಓಡಿದ. ಆ ಸಾವಿನ ಹಗ್ಗದ ಕೈದಿಯ ಮರಣದ ನಂತರ ಅವನ ಪುತ್ರನಾದ ಅಬ್ದುಲ್ ಅಜೀಜ್ ಮತ್ತು ಸಯ್ಯದಿ ಮಸೂದ್ ಮತ್ತು ಅನೇಕ ಜನರು ಸಲಾಬತ್‌ನೊಂದಿಗೆ ಸಂಬಂಧವನ್ನು ಹೊಂದಿದ್ದವರು ಮರವೆಯ

ಮತ್ತು ನಿರ್ಲಕ್ಷ್ಯದ ನಿದ್ರೆ ಹಾಗೂ ಅಹಂಕಾರ, ಗರ್ವದ ಕನಸಿನಿಂದ ಜಾಗೃತನಾಗಿ ಅಯೋಗ್ಯ ಅಸಮರ್ಥ ಮತ್ತು ನಾಪತ್ತೆಯಾದ ಸಲಾಬತ್‌ಖಾನನ ಶೋಧವನ್ನು ಮಾಡುವ ದೃಷ್ಟಿಯಿಂದ ಯಾವ ರೀತಿಯಲ್ಲಿ ಅಂಧನು ಕಲ್ಲು ಹರಳಿನಿಂದ ಅಮೂಲ್ಯ ಹರಳನ್ನು ಬೇರ್ಪಡಿಸಲು ಸಾಧ್ಯವಿಲ್ಲವೋ ಮತ್ತು ಹಗಲು ಬೆಳಕಿನಿಂದ ಅಂಧಕಾರದ ರಾತ್ರೆಯ ನಡುವಿನ ವ್ಯತ್ಯಾಸವನ್ನು ಕಾಣದ ಅಂಧನಂತೆ. ಹೀಗೆಂದು ಆಲೋಚಿಸುತ್ತಾ ಬಾನೆತ್ತರದ ದರಬಾರಿನಲ್ಲಿ ಯಾಚನೆಯ ಕೋರಿಕೆಯೊಂದಿಗೆ ಅಬ್ದುಲ್ ಹಮೀದ್ ಮುಮಲಿಕತ್‌ನ ಮತ್ತು ಮದಾರುಲ್ ಮುಲ್ಕ್ ನವಾಬ್ ಅಬ್ದುಲ್ ಹಮೀದ್ ಬೆಹಲೂಲ್‌ಖಾನ್‌ನ ಮೂಲಕ ಅರುಹಿದ್ದೇನೆಂದರೆ ಈಗ ಸಲಾಬತ್‌ಖಾನ್ ನೀಚ ಮತ್ತು ದೂರದೃಷ್ಟಿ ಇಲ್ಲದ ಕಾರಣ ದರಬಾರಿನ ಅತ್ಯಂತ ಉತ್ಕೃಷ್ಟ ಪೋಷಣೆಯ ವಿಶ್ವಾಸಘಾತುಕತನ ಮತ್ತು ವಿದ್ರೋಹದ ಕ್ಷೇತ್ರದಲ್ಲಿ ಪಲಾಯನ ಮಾಡುತ್ತಿರುವವ ಮತ್ತು ಕೃತಘ್ನತೆ ಹಾಗೂ ಅಕ್ರಮ ವೃಕ್ಷರಾಶಿಯ ಮೈದಾನದ ಅಲೆಮಾರಿತನ ಮತ್ತು ದುರ್ಬುದ್ಧಿಯಿಂದ ಕೂಡಿದವನಾಗಿದ್ದಾನೆ ಹಾಗೂ ತನ್ನ ಇಂದ್ರಿಯ ಗ್ರಾಹ್ಯ ದುರಾಶೆಗಳ ಪೂರೈಕೆಯ ಸಲುವಾಗಿ ಶೈತಾನನ ಪಥಭ್ರಷ್ಟತೆಯಲ್ಲಿ ಮುಳುಗಿ ಹೋಗಿದ್ದಾನೆ. ಆತನು ಮಾನವ ಸಮುದಾಯದ ಪುರಾತನ ಶತ್ರುವಾದ ಶೈತಾನನ ದುರ್ಬುದ್ಧಿಯ ಮಾರ್ಗದರ್ಶನದ ಮೇರೆಗೆ ಮೃಗೀಯ ಇಚ್ಛೆಗಳ ಮೇರೆಗೆ ಎಲ್ಲಾ ಶುಭಕಾರ್ಯಗಳ ಆಜೀವ ಶತ್ರುವಾಗಿದ್ದಾನೆ. ತನಗೆ ನೀಡಲಾದ ಎಲ್ಲಾ ಕೊಡುಗೆಗಳ ಪ್ರತಿಯಾಗಿ ವಿಶ್ವಾಸಪೂರ್ವ ನಡವಳಿಕೆಯು ದೇಶಾಭಿಮಾನಿ ಬಾದಶಹ ಘಾಝಿಯ ಅಧಿಕಾರವನ್ನು ತಿರಸ್ಕರಿಸುತ್ತಾ ಆತನು ಅಹಂಕಾರವನ್ನು ಪ್ರದರ್ಶಿಸುತ್ತಾ ಒಡೆಯನ ದರಬಾರಿನಲ್ಲಿ ಆತನ ಬಗ್ಗೆ ಅತೀವ ವಿಶ್ವಾಸವನ್ನು ಹೊಂದಿರುವವರು ಆತ್ಮೀಯರಾಗಿದ್ದಾರೆ ಮತ್ತು ವಿಶ್ವಾಸಘಾತುಕ ಜನಗಳು ಆತನ ಕ್ರೋಧಕ್ಕೆ ಕಾರಣಕರ್ತರಾಗಿದ್ದಾರೆ. ಈ ಒಂದು ಕವನದ ರೀತ್ಯಾ

ಮೃಷ್ಟಾನ್ನ ಮತ್ತು ಅತ್ಯಂತ ಉದಾರ ಕೊಡುಗೆಗಳನ್ನು
ಹೊಂದುವುದರಿಂದ ನೀನು ಹೊರತಾದಲ್ಲಿ ಶರಣಾಗಿ ಬರಬೇಕಾಗುತ್ತದೆ.
ನೀನು ಎಷ್ಟೇ ಎತ್ತರದಲ್ಲಿದ್ದರೂ ಕೂಡಾ

ಅವನ ದುರಾಶೆಯ ಮಹಲನ್ನು ಕಾಲಿನಿಂದ ಒದ್ದು ಕೆಡವಿ ಮತ್ತು ಅವನ ಭರವಸೆಯ ಕಟ್ಟಡಗಳನ್ನು ನೆಲಸಮ ಮಾಡುತ್ತಾ ಬದುಕು ಮತ್ತು ಆಯುಷ್ಯದ ಶರಾಬಿನಿಂದ ಅವನನ್ನು ವಂಚಿತನನ್ನಾಗಿ ಮಾಡಿ ವಿನಾಶದ ಲೋಕ ಮತ್ತು ಶರಾಬಿನಲ್ಲಿ ಅದ್ದಲಾಯಿತು.

ಪುರಾತನ ಕಾಲದಿಂದಲೂ ಸಮುದಾಯದ ಒಳಿತನ್ನು ಬಯಸುವ ಮುಖಂಡರ ನೇಮಕಾತಿಯು ಒಂದು ಸಂಪ್ರದಾಯವಾಗಿ ಪರಿಣಮಿಸಿದೆ. ಒಂದು ವೇಳೆ

ಭಿನ್ನಾಭಿಪ್ರಾಯವನ್ನು ಮತ್ತು ಉದ್ಧಟತನದ ಪ್ರಕೃತಿಯನ್ನು ಹೊಂದಿರುವ ವ್ಯಕ್ತಿಯು ಅಧಿಕಾರ ಮತ್ತು ರಾಜ್ಯದ ನಾಲ್ಕು ಗೋಡೆಗಳ ನಡುವಿನಿಂದ ಭಿನ್ನಗೊಳಿಸಿ ಪಿತೂರಿಯ ಹೆಬ್ಬಾಗಿಲನ್ನು ತೆರೆಯುವ ಪ್ರಯತ್ನವು ಅತ್ಯಂತ ದುಷ್ಟತನದಿಂದ ಕೂಡಿರುತ್ತದೆ ಮತ್ತು ಆ ಕೊಡುಗೆಗಳ ಮೂಲಕ ಪೋಷಣೆ ಮಾಡುವ ಬುನಾದಿಯನ್ನು ಕೆಡವಿ ಹಾಕುವ ಮತ್ತು ಕೇಡನ್ನು ವೃದ್ಧಿಸುವ ಬುನಾದಿಯುನ್ನು ಖಾಯುವಮ್ ಮಾಡುವಂತಾಗುತ್ತದೆ. ಒಟ್ಟಾರೆ ನ್ಯಾಯಪರ ಬಾದಶಹ ಮತ್ತು ಸಿಂಹಾಸನ ಹಾಗೂ ಕಿರೀಟದ ಒಡೆಯನಾದ ವ್ಯಕ್ತಿಯು ಆ ದೇಶದ ರಕ್ಷಣೆ ಮತ್ತು ಆಡಳಿತದ ಬುನಾದಿಯ ದೇಖ ರೇಖನ್ನು ಮಾಡುವ ಹಾಗೂ ಪಿತೂರಿಯನ್ನು ಆಧಾರ ಸಹಿತ ಕೆಡವಿ ಹಾಕುವ ಮತ್ತು ನ್ಯಾಯದ ಕ್ರಿಯೆಯಲ್ಲಿ ಸುಧಾರಣೆಯ ಉನ್ನತವಾದ ವೈಭವವನ್ನು ಖಾಯಮ್ ಮಾಡುವ ಹೊಣೆಗಾರಿಕೆಯನ್ನು ಹೊಂದಿರುತ್ತಾನೆ. ಈ ಲೋಕದ ಕ್ಷೇತ್ರದಲ್ಲಿ ಧೂಳು ಮತ್ತು ಕಸ ಕಡ್ಡಿಯ ದೆಸೆಯಿಂದ ಹವೆಯನ್ನು ಸ್ವಚ್ಛ ಮಾಡಿ ಆತನ ಅಸ್ತಿತ್ವದ ದೀಪವನ್ನು ಕ್ರೋಧದ ರಭಸದ ಮತ್ತು ಭೀಕರವಾದ ಗಾಳಿಯ ಮೂಲಕ ನಂದಿಸಲಿ. ಒಟ್ಟಾರೆ ಅವನ ಸಂತತಿ ಮತ್ತು ಅವನ ಹಿಂದೆ ಉಲಿಯುವ ಜನರು ನಿರ್ದೋಷಿಗಳಾಗಿದ್ದು ಜೇಬಿನಲ್ಲಿ ಏನನ್ನೂ ಇಡದ ಹಣೆಯನ್ನು ದಿರ್ಹಮ್ ದೀನಾರ್‌ನ ರೀತಿಯಲ್ಲಿ ಆಜ್ಞಾಪಾಲನೆ ಮತ್ತು ವಿಧೇಯತೆ ಹಾಗೂ ಒಡೆಯನ ಆಜ್ಞೆಯ ನಾಣ್ಯವನ್ನು ಹಣೆಯ ಮೇಲೆ ನಕಾಶೆಯಂತೆ ಮೂಡಿಸಿಕೊಳ್ಳುತ್ತಾರೆ. ಅವರಿಗೆ ನೀಚತನ ಮತ್ತು ಅಪಮಾನದ ಭಟ್ಟಿಯಲ್ಲಿ ಹಾಕಿ ಒಳಿತು ಮತ್ತು ಶ್ರೀಮಂತಿಕೆಯ ಮೌಲ್ಯಮಾಪನದಲ್ಲಿ ಪರೀಕ್ಷೆ ಮಾಡಿ ಶ್ರೇಯಸ್ಸಿನ ನಗರಗಳಲ್ಲಿ ವಿರಾಜಮಾನರನ್ನಾಗಿ ಮಾಡುವುದು. ಇದೇ ಆಧಾರದ ಮೇಲೆ ನಾವು ದುರ್ಬಲ ಧೂಳಿನ ಸಮಾನರಾದ ಈ ಮಾತಿನ ಮೇಲೆ ಭರವಸೆ ಮತ್ತು ನಂಬಿಕೆಯನ್ನು ಇಡುವುದೇನೆಂದರೆ ಭರವಸೆ ಮತ್ತು ಇಚ್ಛೆಯನ್ನು ಹೊಂದಿರುವ ವ್ಯಕ್ತಿಯ ಕುತ್ತಿಗೆಯ ಮೇಲೆ ಸ್ವಸ್ಥವಾಗಿರುವ ಮೋರೆಯ ಕಪಾಳಕ್ಕೆ ತಪರಾಕಿಯನ್ನು ಹೊಡೆಯಬಾರದು ಮತ್ತು ಎಲ್ಲಾ ಕೋಟೆಗಳ ಕೀಲಿಕೈಗಳು ನಮ್ಮ ಒಡೆತನದಲ್ಲಿ ನಾವು ನಮ್ಮ ಕೈಯಿಂದ ಪಡೆದುಕೊಂಡು ಎಲ್ಲಾ ನಗದು ಬೇಡಿಕೆ ಮತ್ತು ದಿನಸಿ ಮೊದಲಾದವುಗಳನ್ನು ಸರ್ಕಾರ್ ಜಹಾಂಪನಾಹ್‌ರವರ ಸನ್ನಿಧಿಯಲ್ಲಿ ಹಾಜರು ಮಾಡುವುದು. ಬಲಿದಾನದ ಹಗ್ಗ ನಮ್ಮ ಅಭಿಮಾನ ಮತ್ತು ಗೌರವದ ಉಡುಪಿನ ಕೊರಳಿನಿಂದ ಹೊರತೆಗೆಯಲಾಗದು. ಮತ್ತು ನಮ್ಮ ಲೋಕದಲ್ಲಿ ವಿಶ್ವಾಸಘಾತುಕತನದ ದುರ್ಗುಣಗಳ ಕಲೆಯು ಕುಪ್ರಸಿದ್ಧಿಯಿಂದ ಕೂಡಿದ್ದು ಗುರುತಿಸುವಂತಹದಾಗಲಿ ಹಾಗೂ ಕೇಡಿನ ಆಧಾರದ ಮೇಲೆ ಖ್ಯಾತನಾಮರಾಗುವಂತೆ ರವತು ಮತ್ತು ಗುರುತಾಗುವಂತೆ ಮಾಡಕೂಡದು.

ಜಾಗೃತ ಸ್ವಭಾವವನ್ನು ಹೊಂದಿದ ಮತ್ತು ಪರಿಶುದ್ಧ ರೀತಿಯಲ್ಲಿ ಪರೀಕ್ಷೆ ಮಾಡುವ ಸ್ವಭಾವವನ್ನು ಹೊಂದಿದ್ದ ಮದಾರ್ ಅಬ್ದುಲ್ ಹಮೀದ್ ಮತ್ತು ನವಾಬ್

ಬೆಹಲೂಲ್ ಆ ಕೊಡುಗೆಗಳು ಮತ್ತು ಇನಾಮುಗಳನ್ನು ಪಡೆಯುವ ಆಧಾರದ ಮೇಲೆ ಸಜೆ ಮತ್ತು ಕೊಡುಗೆಗಳ ದಿನಗಳಿಂದ ಅವಿದೇಯತೆಯನ್ನು ಪಾಪ ಕೃತ್ಯಗಳ ಹೊರೆಯ ಕೆಳಗಡೆ ಸೊಟ್ಟ ದೇಹವನ್ನು ಇಡುವವರ ರೀತಿಯಲ್ಲಿ ಬಾಗಿ ಮತ್ತು ಲಜ್ಜೆಯ ಬೆವರಿನಿಂದ ತಲೆಯಿಂದ ಹಿಡಿದು ಪಾದದವರೆಗೆ ಮುಳುಗಿರುತ್ತಾರೆ ಹಾಗೂ ನರಕದಲ್ಲಿ ಕಂಡು ಬರುವ ಸೂಕ್ತಿಗಳು ಅವರ ಹಣೆಯ ಮೇಲೆ ಕೆತ್ತಲಾಗುವುದು. ನರಕದ ಅಧ್ಯಕ್ಷನೆಂದರೂ ಆಗುವುದು ಮತ್ತು ನೀಚತನದ ಹಕ್ಕುದಾರರಾಗುವ ಎಲ್ಲಾ ಲಕ್ಷಣಗಳು ಅವರೆಲ್ಲರ ಹಣೆಯ ಹಾಳೆಯಿಂದ ವ್ಯಕ್ತವಾದವು ಮತ್ತು ಆ ಜನರು ಪ್ರವಾದಿಗಳು ಮತ್ತು ಸಂತರ ಬಿಡುಗಡೆಯ ಮುಕ್ತಿಯ ಹಾದಿಯಿಂದ ಅಂಗೀಕಾರದ ಪರದೆಯ ಮನೆಯ ಪಡಸಾಲೆಯಲ್ಲಿ ಹಾಜರಾತಿಯ ಸಭೆಯ ಸದಸ್ಯರು ಮತ್ತು ಬೆಂಬಲಿಗರಾಗಿದ್ದಂತಹವರು. ಮೋಶೆಸಿರಾದ ಯುದ್ಧದ ಹುದ್ದೆ ಮತ್ತು ವಿಜಯ ಪ್ರಾಪ್ತಿಯು ದೇಶದ ಒಡೆಯನ ಆಮೋದ ಮತ್ತು ಪ್ರಮೋದದಲ್ಲಿ ಶಾಮೀಲಾದಂತಹವರಿಗೆ ಆ ದರ್ಜೆಯನ್ನು ನೀಡಲಾಗುವುದು ಹಾಗೂ ಕೊಡುಗೆ ಮತ್ತು ಮಾನವೀಯ ಅವಶ್ಯಕತೆ ಮತ್ತು ಇಚ್ಛೆಯನುಸಾರ ಶುದ್ಧ ಕಣ್ಣೋಟದ ಶುಭ್ರ ನೀರನ್ನು ಹೊಂದಿದವರು ಮತ್ತು ಅವರೆಲ್ಲರ ನೆತ್ತಿಯನ್ನು ತಂಪಾಗಿಸುವುದು. ಒಟ್ಟಾರೆ ಹಜರತ್ ಬಾದಶಹ ಘಾಝಿಯು ಹಿರಿತನ ಪ್ರಬುದ್ಧತೆ ಮತ್ತು ಉನ್ನತ ಅಲ್ಲಾಹನ ರಕ್ಷಣೆ ಮತ್ತು ಅಲ್ಲಾಹನ ಆಶ್ರಯದಲ್ಲಿ ಇರುವಂತಹವರು. ಅವರ ಅಂಗೀಕಾರದೊಂದಿಗೆ ದರಬಾರಿನ ಹೊಸ್ತಿಲಲ್ಲಿ ಕಸ ಸ್ವಚ್ಛ ಮಾಡುವ ಕಾಲವನ್ನು ಹೆಮ್ಮೆ ಮತ್ತು ನಂಬಿಕೆಯ ಬಂಡವಾಳವನ್ನಾಗಿ ಹಾಗೂ ಆಪದ್ಧನವನ್ನಾಗಿ ಪರಿಗಣಿಸುವರು. ಆಕಾಶವು ಅವರ ಸೇವೆ ಮತ್ತು ದರಬಾರಿನ ಹೊಸ್ತಿಲಿಗೆ ನಮಿಸುವುದನ್ನು ಅಸಲು ಮಾಲು ಹಾಗೂ ಒಳಿತು ಮತ್ತು ಮುಕ್ತಿಯ ಕರ್ತವ್ಯವನ್ನಾಗಿ ಪರಿಗಣಿಸುತ್ತದೆ. ಒಂದು ವೇಳೆ ಈ ಲೋಕದ ಜೀವನವು ದೋಷ ಮತ್ತು ಸೆರೆಯಾಳಾದ ವ್ಯಕ್ತಿಗಳು ಮತ್ತು ಪಾಪಕೃತ್ಯಗಳ ಸೆರೆಮನೆಯಲ್ಲಿ ಬಂಧಿತರಾಗಿರುವ ಜನರನ್ನು ಕೊಲೆ ಮಾಡಿ ರಕ್ತ ಹರಿಸುವ ಸಲುವಾಗಿ ಅರ್ಹರೆಂದು ಮತ್ತು ಸಾವಿನ ಸಮುದ್ರದಲ್ಲಿ ಮುಳುಗಿಸುವ ಹಕ್ಕುದಾರನೆಂದಾದಲ್ಲಿ ಅವರಿಗೆ ನೀಚತನ ಮತ್ತು ಅಪಮಾನದ ಸಂಪೂರ್ಣ ತೊಂದರೆಯಿಂದ ಮುಕ್ತಿ ಮತ್ತು ಬಿಡುಗಡೆಯನ್ನು ನೀಡಿ ಅವರ ಅಮೂಲ್ಯ ಮತ್ತು ಅದ್ವಿತೀಯವಾದ ನೆಮ್ಮದಿ ನಿರಾಳತನದ ಕೊಡುಗೆ ಹಾಗೂ ಉನ್ನತವಾದ ಕೊಡುಗೆಗಳು ಪ್ರೇಮ ವಾತ್ಸಲ್ಯ ಹಾಗೂ ಶುಭಾಕಾಂಕ್ಷೆಗಳ ಉಡುಗೆಗಳಿಂದ ಅವರನ್ನು ಸತ್ಕರಿಸುತ್ತಾ ತಮ್ಮ ಸಮಕಾಲೀನ ಜನರ ಮತ್ತು ಬುಡಕಟ್ಟಿನವರ ಹಾಗೂ ಸಹೋದರರ ನಡುವೆ ತಾರತಮ್ಯ ಮತ್ತು ಬೇರ್ಪಡುವಿಕೆಯನ್ನು ನೀಡುವಂತಹದಾಗಿದೆ. ತಮ್ಮ ವೈಯಕ್ತಿಕ ಕೊಡುಗೆ ಹಾಗೂ ತಮ್ಮ ಸ್ವಾಭಾವಿಕ ಗೌರವ ಮರ್ಯಾದೆ ಹಾಗೂ ಸಭ್ಯತೆಯನ್ನು ನೀಡುವಂತಹದಾಗಲಿ. ಈ ಆಧಾರದ ಮೇಲೆ ಆ ಉಭಯ ಉತ್ತಮ ಗುಣಗಳನ್ನು ಹೊಂದಿದ ದೈವಭಕ್ತ

ಹಾಗೂ ಪ್ರಶಂಸೆಗೆ ಅರ್ಹರಾದ ಸ್ವಭಾವದ ಒಡೆಯ ಮತ್ತು ಆ ಸಮುದಾಯದಿಂದ ಶಿಫಾರಸನ್ನು ಪಡೆದಂತಹವರಾದರು. ಅಂದರೆ ದೋಷಗಳ ಪ್ರತಿಬಿಂಬವಾಗಿದ್ದರು. ಆ ಗುಂಪಿನ ಬೆಂಬಲಿಗರು ನೆರವನ್ನು ನೀಡುವವರಾದರು, ಬಾಯಾರಿದಂತಹವರಾಗಿದ್ದರು. ಅವರಿಗೆ ಶುಭ್ರವಾದ, ಮಧುರವಾದ ನೀರನ್ನು ನೀಡಲಾಯಿತು. ಆ ಜನರು ಮಾನ್ಯತೆ ಹೊಂದಿದ್ದ ದರಬಾರಿನಲ್ಲಿ ಕೋರಿಕೆಯನ್ನು ಸಲ್ಲಿಸಿದರು. ಯಾರಾದರೂ ಲಜ್ಜಿತ ಮತ್ತು ಅತ್ಯಂತ ಪಶ್ಚಾತ್ತಾಪದಿಂದ ಕೂಡಿದ ವ್ಯಕ್ತಿಯು ನಾಚಿಕೆಯ ಕಂಬನಿಯನ್ನು ತನ್ನ ಕೆನ್ನೆ ಮತ್ತು ಮೋರೆಯ ಮೇಲೆ ಜಾರಿ ಮಾಡಿದಲ್ಲಿ ಮತ್ತು ಕೈಗಳು ವಿನಯ ಮತ್ತು ವಿಧೇಯತೆಯ ಹಗ್ಗದಲ್ಲಿ ಬಿಗಿಯಾಗಿದ್ದಲ್ಲಿ ಹಜರತ್ ಸಯ್ಯದ್ ಅವ್ವಲೀನ್ ವಲ್ ಆಖರೀನ್ (ಆದಿ ಮತ್ತು ಅಂತ್ಯದ ಆದರಣೀಯ) ಮೊಹಮ್ಮದ್ ಪೈಗಂಬರ್‌ರವರು ಎಲ್ಲಾ ಪ್ರವಾದಿಗಳ ಮುಖಂಡತ್ವದಲ್ಲಿ ಕಂಡು ಬರುತ್ತಾರೆ. ತಾವು ಪ್ರವಾದಿ ಮೊಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಈ ಭರವಸೆ ಮತ್ತು ಇಚ್ಛೆಯ ಕಣ್ಣೋಟದಿಂದ ಬೇಡಿಕೆಯ ಸುರ್ಮಾವನ್ನು ಹಚ್ಚು ಬೆಳಕನ್ನು ಬೀರುವ ಹಾಗೂ ವೈಭವವನ್ನು ನೀಡುವವರಂತಹವರಾಗಲಿ. ಈ ಇಚ್ಛೆಯ ಚೆಹರೆಯುನ್ನು ಒರಟುತನ ಮತ್ತು ಕಠಿಣ ಸ್ವಭಾವದ ಉಗುರುಗಳಿಂದ ಗಾಯಗೊಳಿಸುವುದು ಬೇಡ. ಒಟ್ಟಾರೆ ಎದೆಯನ್ನು ಅವರ ಶತೃತ್ವದ ಮುಳ್ಳಿನಿಂದ ಶುಭ್ರ ಮತ್ತು ನಿರ್ಮಲಗೊಳಿಸಿ ಹಾಗೂ ಕರುಣೆಯ ವರ್ತನೆಯನ್ನು ಪ್ರಕಟಿಸಿ ಮಾರ್ಗದರ್ಶನ ಮತ್ತು ಇಸ್ಲಾಮಿನ ಹೆಮ್ಮೆಯ ಉಡುಪು ಮತು ಮಾರ್ಗದರ್ಶನ ಹಾಗೂ ಕರುಣೆಯಿಮದ ಕೆತ್ತಲಾದ ಉಡುಪನ್ನು ನೀಡಿ ಸಫಲತೆ ಮತ್ತು ವಿಜಯಪ್ರಾಪ್ತಿಯನ್ನು ಮಾಡಲಿ. ಒಂದು ವೇಳೆ ಫಾಖ್ರಿ ಬಾದಶಹರವರ ಧೈರ್ಯದ ಚಂದ್ರ ಪ್ರವಾದಿ ಮೊಹಮ್ಮದ್‌ರವರ ಸುನ್ನಾದ(ಆಚರಣೆಯ) ಪರಿಪಾಲನೆಯ ಬೆಳಕನ್ನು ಪಡೆಯುವಂತಾದಲ್ಲಿ ಅವರ ನೇರ ಸನ್ಮಾರ್ಗದ ದೀಪವು ಶರೀಯತ್ ಮತ್ತು ನಮಾಜ್ ಹಾಗೂ ಧರ್ಮ ಕಾರ್ಯಗಳ ಅನುಸರಣೆಯ ಮಶಾಲಿನಿಂದ ಪ್ರಕಾಶಮಯವಾಗಿದೆ. ಆ ಗುಂಪಿನ ಪಾಪಗಳು ಹಾಗೂ ಅಧರ್ಮವು ಬಹಳ ಗಂಭೀರವಾಗಿದೆ. ಅದನ್ನು ಕ್ಷಮೆ ಮತ್ತು ಮಾಫಿಯ ಹಸ್ತದ ಮೂಲಕ ಚೂರು ಚೂರನ್ನಾಗಿ ಮಾಡಲಿ ಹಾಗೂ ಈ ಅವಲಕ್ಷಣದ ದುರಾದೃಷ್ಟದ ಗುಂಪಿನ ಸಕಲ ತಪ್ಪುಗಳ ಹಾಳೆಗಳನ್ನು ಕ್ಷಮೆಯ ನೀರಿನ ಮೂಲಕ ಶುಭ್ರ ಹಾಗೂ ಪರಿಶುದ್ಧಗೊಳಿಸಲಿ.

ಸೂರ್ಯನಂತೆ ಖ್ಯಾತಿಯನ್ನು ಪಡೆದ ಮತ್ತು ಕೊಡುಗೆ ಮತ್ತು ಶ್ರೇಷ್ಠ ಸದ್ವರ್ತನೆಯ ಮೂಲಕ ವಿಶಿಷ್ಟ ಮತ್ತು ಶ್ರೇಯಸ್ಸನ್ನು ಹೊಂದಿದವರನ್ನಾಗಿ ಮಾಡಲಿ. ಬಾದಶಹ ಫಾಖ್ರಿಯು ಇಡೀ ಲೋಕವನ್ನು ಕ್ಷಮೆಯಿಂದ ಕೃತಾರ್ಥನ್ನಾಗಿ ಮಾಡುವವನಾಗಿದ್ದಾನೆ. ಸೂಕ್ತ ರೀತಿ ಮತ್ತು ದರ್ಜೆಯ ಹೆಚ್ಚಳದಿಂದ ಈ ಅಂಶವು ವ್ಯಕ್ತವಾಗುತ್ತದೆ. ಆ ಇಬ್ಬರು ತಮ್ಮ ಕೋರಿಕೆಯನ್ನು ರಾಜ್ಯದ ನಂಬಿಕಸ್ಥ ಹಾಗೂ ಬಾನೆತ್ತರದ ದರ್ಜೆ

ಮತ್ತು ಸ್ಥಾನ ಮಾನವನ್ನು ಹೊಂದಿದ ಮತ್ತು ದರಬಾರಿನಲ್ಲಿ ಖ್ಯಾತಿಯನ್ನು ಪಡೆದಿದ್ದು ಆಪ್ತರಾಗಿದ್ದಂತಹವರು. ಹಜರತ್ ಬಾದಶಹ ಫಾಖಿಯವರು ಅವರ ಕೋರಿಕೆಯನ್ನು ಅಂಗೀಕರಿಸುತ್ತಾ ಮತ್ತು ಒಪ್ಪಿಗೆಯ ಕಣ್ಣೋಟವನ್ನು ಹಾಯಿಸುತ್ತಾ ಕಿವಿಗಳ ಮೂಲಕ ಸರ್ವ ರೀತಿಯಲ್ಲಿ ಗಮನವಿಟ್ಟು ಆಲಿಸುತ್ತಾ, ಆ ಗುಂಪಿಗೆ ದರ್ಶನವನ್ನು ನೀಡುವ ಅಪ್ಪಣೆಯನ್ನು ಸಾದರಗೊಳಿಸಿದರು. ಯಾರು ನೀಚ ಮತ್ತು ದುರ್ಬಲರಾಗಿದ್ದರೋ ಅವರಿಗೆ ಆಶ್ರಯ ಮತ್ತು ಕ್ಷಮೆಯ ಇಡುಗಂಟನ್ನು ನೀಡಲಾಗಿದ್ದು ಮುಮಲಿಕತ್ ಮದಾರ್ ಅಬ್ದುಲ್ ಹಮೀದ್ ಮತ್ತು ನವಾಬ್ ಬೆಹಲೂಲ್ ಖಾನ್ ಆ ಜನರನ್ನು ಅಂದರೆ ವಿಪತ್ತು ಮತ್ತು ದುರಂತಗಳ ಕಲ್ಲಿನಿಂದ ಸೋತ ಹೃದಯ ಮತ್ತು ಅಪಾರ ಪ್ರಯಾಸದಿಂದ ಕೆಳಸ್ತರ ಮತ್ತು ಅಪಮಾನದ ಸರಪಳಿಗಳಿಂದ ಭಂಗಗೊಂಡಿದ್ದವರಿಗೆ ಬರೆದದ್ದೇನೆಂದರೆ, ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಯುದ್ಧರಂಗದಲ್ಲಿ ಬಾಯಾರಿದ ತುಟಿಗಳಿಂದ ಕೋರಿದ ಮತ್ತು ಸಂಕಷ್ಟ ಹಾಗೂ ದುರಂತಗಳ ಸರಮಾಲೆಯ ದೆಸೆಯಿಂದ ಅಪಾರ ಅಪೇಕ್ಷೆ ಮತ್ತು ಇಚ್ಛೆಯ ತಲಾಶಿನಲ್ಲಿ ಒಣಗಿದ ನಾಲಿಗೆಯನ್ನು ಹೊಂದಿದವರು ನಂಬಿಕೆಯ ಮಹಲನ್ನು ನಾಶಗೊಳಿಸಿದವರು ಹಾಗೂ ವಿದ್ರೋಹ ಮತ್ತು ಪಿತೂರಿಯ ಮೈದಾನದಲ್ಲಿ ಅಂಡಲೆಯುವ ಜನರಿಗೆ ಕ್ಷಮೆ ಮತ್ತು ದ್ರಾಕ್ಷಾರಸದ ಒಂದು ಹನಿಯನ್ನು ನೀಡುವುದು ಶುಭಾಕಾಂಕ್ಷೆಯ ಗಾಜನ್ನು ಒಡೆಯುವಂತಹದಾಗಿದೆ. ಎರಡನೆಯದಾಗಿ ಈ ಎಲ್ಲಾ ವಸ್ತುಗಳು ಕೂಡಾ ಕರುಣೆ ಮತ್ತು ಕೊಡುಗೆಗಳ ಪಾನಪಾತ್ರೆಯ ನಿರೀಕ್ಷಕನನ್ನಾಗಿ ಮಾಡುತ್ತದೆ. ಆದರೆ ಕದನಗಳು ಮತ್ತು ಪಿತೂರಿಗಳ ಸರ್ಪಗಳ ಕಡಿತಕ್ಕೆ ಒಳಗಾಗಿರುವುದರಿಂದ ಕಷ್ಟಗಳು ಮತ್ತು ಸಮಸ್ಯೆಗಳ ಚೇಳಿನ ಕುಟುಕುವಿಕೆಯಿಂದ ಕೊಡುಗೆಗಳು ಮತ್ತು ಕೋರಿಕೆಗಳ ಪ್ರತ್ಯೌಷಧದಿಂದ ಸಂಪೂರ್ಣವಾಗಿ ತೀರ್ಪನ್ನು ನೀಡುವಂತಹದಾಗಿದೆ. ಅಂದರೆ ಔಷಧೋಪಚಾರವನ್ನು ಪಡೆಯಕೂಡದು. ಇನಾಮುಗಳು, ಕೊಡುಗೆಗಳು ಮಂತ್ರ–ತಂತ್ರಗಳ ಆರೋಗ್ಯವನ್ನು ಒದಗಿಸಕೂಡದು. ಹಾಗಾಗಿ ವೃದ್ಧರನ್ನು ಪೋಷಿಸುವ ಕಾನೂನು ಮತ್ತು ದೌರ್ಬಲ್ಯರಿಗೆ ರಕ್ಷಣೆಯನ್ನು ಒದಗಿಸುವ ಕಾನೂನಿನಿಂದ ಹೊರತಾಗುತ್ತದೆ.

ಈ ಆಧಾರದ ಮೇಲೆ ಹಜರತ್ ಬಾದಶಹ ಫಾಖಿಯವರು ಆ ನೆಪಾಕಾಂಕ್ಷಿಗಳ ನಿರೀಕ್ಷಿತ ಉದ್ಯಾನವನದಲ್ಲಿ ಧೃಡ ಹೆಜ್ಜೆಯನ್ನು ಹೊಂದಿರುವ ಮತ್ತು ಪಾಪಕೃತ್ಯಗಳ ಕಳೆಯನ್ನು ಹೊರ ಕಿತ್ತೆಸೆದು ಅಪರಾಧಕ್ಕೆ ಕ್ಷಮೆ ನೀಡುವ ಅಪೂರ್ವ ಚಾದರವನ್ನು ಭುಜಗಳ ಮೇಲೆ ಹೊತ್ತು ವಿನೀತ ಮತ್ತು ಆರ್ತತೆಯ ದುರದೃಷ್ಟವನ್ನು ತೊಟ್ಟವರನ್ನು ಹೊರ ಹಾಕುತ್ತಾ ಆ ದರ್ಗಾದ ಹೊಸ್ತಿಲಿಗೆ ಶರಣಾಗುವುದರಿಂದ ಬಿಡುಗಡೆಯನ್ನು ನೀಡಿದರು. ಅರಣ್ಯದಲ್ಲಿ ಅಲೆಮಾರಿಗಳಾಗಿ ದಿಕ್ಕುದೆಸೆ ಇಲ್ಲದೆ ಅಂಡಲೆಯುವವರಿಗೆ ಇದರಿಂದ ಸುರಕ್ಷಿತ ತಾಣವು ಮತ್ತು ತಂಗುದಾಣ ಎಂಬುದು ಇರುವುದಿಲ್ಲ.

ಪ್ರೇಮಮಯಿ ಹೃದಯದ ಕ್ಷೇತ್ರದಲ್ಲಿ ಭಯ ಮತ್ತು ಆತಂಕದ ಬೀಜವನ್ನು ನೆಡದೆ ಅಯೋಗ್ಯನ ರೀತಿಯಲ್ಲಿ ದೊಡ್ಡ ದೊಡ್ಡ ವಿಪತ್ತುಗಳಿಂದ ಕೂಡಿದ ಪರ್ವತಗಳು ಮತ್ತು ಗುಹೆಗಳಲ್ಲಿ ಸಂಕಷ್ಟದ ಭಾರೀ ಬಂಡೆಗಳು ಮತ್ತು ಕಂದರಗಳಲ್ಲಿ ಬೀಳಕೂಡದು. ಒಟ್ಟಾರೆ ಅತ್ಯಂತ ತೀವ್ರ ಮತ್ತು ಶೀಘ್ರವಾದ ಕ್ರಿಯೆಗಳ ಮೂಲಕ ಆ ಇಚ್ಛೆಯ ಪಾಲನೆಯ ಮತ್ತು ಕೋರಿಕೆಯ ಸಲುವಾಗಿ ಔಷಧವು ದೊರಕದಂತಾಗಲಿ. ಗೌರವ ಮತ್ತು ಮರ್ಯಾದೆಯ ಹೆಚ್ಚಳದ ಸಲುವಾಗಿ ಒಂದು ಇಡುಗಂಟಾಗಿದೆ. ಈ ರೀತಿಯ ನೆಪಕೋರ ವ್ಯಕ್ತಿಗಳು ಮತ್ತು ಜನರಿಗೆ ದೋಷಗಳು ಮತ್ತು ಅಪರಾಧಗಳ ಪರದೆಯ ದರ್ಶನದ ಮೇಲೆ ಹೃದಯವನ್ನು ಅರ್ಪಣೆ ಮಾಡದೆ ಇರಲಿ. ಲೋಪಗಳು ಮತ್ತು ಅಪರಾಧಗಳ ಸೆರೆಮನೆಯಲ್ಲಿ ಸೆರೆಯಾಳುಗಳಿಗೆ ಈ ಪತ್ರವನ್ನು ಸಭೆಯ ಕಂಠಕಡಗ ಮತ್ತು ಸರಪಳಿಗಳಿಂದ ಮುಕ್ತಿ ಮತ್ತು ಲೋಪಗಳ ಹಸ್ತದಿಂದ ಬಿಡುಗಡೆಯ ಪತ್ರವೆಂದು ತಿಳಿದು ಬಾರಿ ಬಾರಿಗೂ ಬಾದಶಹನ ಹೊಸ್ತಿಲಿಗೆ ಶರಣಾಗುವುದು ಮತ್ತು ದರಬಾರಿನ ಹೊಸ್ತಿಲಿಗೆ ಮುತ್ತಿಕ್ಕಿ ಸಂತೋಷ ಮತ್ತು ನೆಮ್ಮದಿಯ ಟೋಪಿಯನ್ನು ಆಕಾಶದ ನೆತ್ತಿಯ ಮೇಲೆ ಹಾಕಲಾಯಿತು. ಹಜರತ್ ಬಾದಶಹ ಫಾಖಿಯು ತಮ್ಮ ಸ್ವಾಭಾವಿಕ ಮೃದುತ್ವ ಮತ್ತು ದಯಾಳುತನದ ಮೂಲಕ ಸಲಾಬತ್‌ಖಾನನಿಗೆ ಪಿತೂರಿಕೋರ ಮತ್ತು ಸಲಾಬತ್‌ಖಾನನ ಬಂಡಾಯದ ಕಾರಣದಿಂದ ಆಯತೆ ಕರೀಮಾ (ಸಂಕಷ್ಟ ಪರಿಹಾರದ ಸಲುವಾಗಿ ವಿಶೇಷ ಪ್ರಾರ್ಥನೆ) ದ ಮೂಲಕ ಅಲ್ಲಾಹನಲ್ಲಿ ಬೇಡಿಕೊಂಡರು. ಈ ಲೋಕದಲ್ಲಿ ಅವನಿಗೆ ಅಪಮಾನ ಮತ್ತು ಪರಲೋಕದಲ್ಲಿ ಬಹು ದೊಡ್ಡ ಹಿಂಸೆ ಇದೆ ಎಂದು ತರ್ಕಿಸಿದರು. ಇಂತಹ ವ್ಯಕ್ತಿಗಳ ಗುಂಪಿನ ಅಧ್ಯಕ್ಷನಾಗಿದ್ದ ಹಾಗೂ ನರಕದ ಆಳವಾದ ಕಂದಕದ ಇಂಧನವಾಗಿದ್ದಾರೆ. ಕ್ಷಮೆ ಮತ್ತು ಕರುಣೆಯ ಹೃದಯದ ನೆರವು ಮತ್ತು ವಾತ್ಸಲ್ಯ ಹಾಗೂ ಪ್ರೇಮದ ಪೌರುಷದ ಗುಣಗಳಿಂದ ನಂಬಿಕೆ ಮತ್ತು ವಿಶ್ವಾಸವನ್ನು ಹೊಂದಿದ ಆ ಜನರಿಗೆ ಸತ್ಕರ್ಮದ ಸಲುವಾಗಿ ಮತ್ತು ಅವರ ಆದರದ ಸಲುವಾಗಿ ಫಿರ್ದೋಸ್ ಸ್ವರ್ಗವಿದೆ ಎಂಬ ಉಕ್ತಿಯಂತೆ ಸ್ಥಳವನ್ನು ನೀಡಲಾಗಿದೆ ಮತ್ತು

ಅವರ ಸಂತತಿ ಮತ್ತು ಅವರ ಅನುಸರಣೆ ಮಾಡುವವರಿಗೆ ಅಪಾರ ಕೊಡುಗೆಗಳಿಂದ ಹಾಗೂ ಅಗಣಿತವಾದ ಕರುಣೆ ವಾತ್ಸಲ್ಯ ಹಾಗೂ ಧೃಡವಾದ ಸಂಕಲ್ಪದಿಂದ ಬೆಂಬಲಿಗರಾಗುವಂತೆ ಮಾಡಲಾಯಿತು. ಕರುಣೆ ಮತ್ತು ಕೊಡುಗೆ ಹಾಗೂ ಇನಾಮುಗಳ ಗೌರವ ಹಾಗೂ ಸಾಂತ್ವನ ಮತ್ತು ಸ್ವತಃ ತಮ್ಮತ್ತ ಕೇಂದ್ರೀಕರಿಸುವ ಉಡುಪುಗಳಿಂದ ಉಪಕೃತರನ್ನಾಗಿ ಮಾಡಲಾಯಿತು. ಸ್ವತಃ ಈ ಎಲ್ಲಾ ಸಮಸ್ಯೆಗಳ ಪರಿಹಾರ ರೂಪವಾಗಿ ರಾಯಚೂರಿನತ್ತ ಬೆಳಕಿನಿಂದ ಆವೃತವಾದ ರಾಜ್ಯದತ್ತ ಪಯಣವನ್ನು ಬೆಳಸಿದರು. ಅಖಂಡ ಲೋಕದ ನಿರೀಕ್ಷೆಯ ರಾತ್ರೆಯನ್ನು ನೌರೋಜ್‌ನ

ಸಂಭ್ರಮದ ರೀತಿಯಲ್ಲಿ ಈ ಲೋಕದ ಜನರಿಗೆ ನೆಮ್ಮದಿ ಮತ್ತು ಸಂತೋಷದ ಸಂಜೆಯನ್ನು ಮನಮೋಹಕ ಬೆಳಕಿನ ಬೆಳಗನ್ನಾಗಿ ಮಾಡಿದರು.

ಓ ದೇವರೇ ಎಲ್ಲಿಯವರೆಗೆ ಈ ಸಿಂಹಾಸನ
ಮತ್ತು ಬಾದಶಹನ ಕಿರೀಟ ಇರುವುದೋ
ಒಡೆಯನೇ ಅಲ್ಲಿಯವರೆಗೂ ದೇಶ ಮತ್ತು
ಭೂಖಂಡ ಉಳಿಯುವುದು

ಚಿರಕಾಲ ಚಿರಕಾಲ ಈ ಬಾದಶಹ ಇರಲಿ
ಈ ಸಿಂಹಾಸನ ಮತ್ತು ಕಿರೀಟ ಕೂಡಾ
ಆತನ ಮೋರೆಯು ಬೆಳಕಿನಿಂದ ಪ್ರಕಾಶಮಾನವಾಗಿದೆ
ಅದೃಷ್ಟದ ಪುಷ್ಪದಂತೆ

■

*

ಅಧ್ಯಾಯ-೧೧

ಮಲೆನಾಡು ವಿಜಯ

ಪ್ರಪಂಚವನ್ನು ಸೃಷ್ಟಿಸಿದ ಮತ್ತು ಪ್ರಾಣವನ್ನು ನೀಡುವ ಭಗವಂತನಿಗೆ ಇಚ್ಛೆಯುಂಟಾದಲ್ಲಿ ಯಾವುದೇ ದೇಶಕ್ಕೆ ಹರಡಿರುವ ವಿದ್ರೋಹಿ ಅಹಂಕಾರಿ ಯುದ್ಧಕೋರ ದುರುಳ ಜನರಂತೆ ಕಾಬೂಲಿನಿಂದ ಕಾಶ್ಮೀರದವರೆಗಿನ ಉದ್ಯಾನವನಗಳಂತೆ ಕ್ಷಮಾಶೀಲತೆಯ ಆಸರೆಯಾಗುವನು. ಸೂಕ್ಷ್ಮ ಒಳನೋಟದ ಹೃದಯವನ್ನು ಹೊಂದಿದ ಜನರಿಗೆ ಪರಿಚಿತ ಮತ್ತು ಜಾಗೃತ ನೋಟವನ್ನು ಹೊಂದಿದವರಿಗೆ ಹೊಳಪು ಮತ್ತು ಬೆಳಕಿನ ಮಾಧ್ಯಮವಾಗಿದೆ. ಆ ನತದೃಷ್ಟ ಮತ್ತು ದ್ವೇಷದಿಂದ ಕೂಡಿದ ಮಂದಹವೆಯ ಪ್ರೀತಿಯಲ್ಲಿ ಸಿಲುಕಿದ ದುರವಸ್ಥೆಯ ಪ್ರೇಮಿಗಳ ಮುಳ್ಳುಗಳ ಲೋಕದಿಂದಲೂ ಹೆಚ್ಚು ಕೆಡುಕು ಮತ್ತು ಖಿನ್ನ ಹೃದಯದ ಯಾತನೆಯಲ್ಲಿ ಸಿಲುಕಿದ ಜೀವನ ನಿರ್ವಹಣೆಯ ಕ್ಷೇತ್ರದಲ್ಲಿ ಅರಣ್ಯಕ್ಕಿಂತಲೂ ಹೆಚ್ಚು ಪಾಳು ಭೂಮಿಯನ್ನಾಗಿ ಮಾಡುವುದು. ಅದಕ್ಕೆ ಮತ್ತೊಮ್ಮೆ ದಾಸಾನುಗ್ರಹಿ ಇಂಗಿತದಿಂದ ಪ್ರಮಾಣಬದ್ಧ ದೇಹವನ್ನು ಹೊಂದಿದ ಪ್ರಿಯತಮೆಯ ಉದ್ದೀಪನಗೊಳಿಸುವ ಸೌಂದರ್ಯದ ಉದ್ಯಾನವನದಿಂದ ಹೆಚ್ಚು ಹಚ್ಚ ಹಸಿರು ಮತ್ತು ಬಳಕುವ ದೇಹದ ಜಾಜಿ ಮಲ್ಲಿಗೆ ಹೂವಿನಂತಹ ಸುಗಂಧವನ್ನು ಹೊಂದಿದ ಹೂವಿನಂತಹ ಮೃದು ಮತ್ತು ನಾಜೂಕು ದೇಹಕ್ಕಿಂತಲೂ ಹೆಚ್ಚು ಆಕರ್ಷಣೀಯವಾಗುತ್ತದೆ. ಮೊದಲಿಗೆ ಆ ನತದೃಷ್ಟ ದುರ್ನಡತೆಯವನಿಗೆ ಒಂದಿಷ್ಟು ಅವಧಿಯವರೆಗೆ ವಿಧ್ವಂಸಕತೆ ಮತ್ತು ಕುಚೇಷ್ಟೆ ಪ್ರೇರಿತ ಶಕ್ತಿಯನ್ನು ಒದಗಿಸಲಾಯಿತು. ಅದು ನೀಚತನದ ವೃತ್ತಾಂತ ಮತ್ತು ನಾಶವಾದ ಪಾಳುಬಿದ್ದ ಮನೆಯ ಪುಷ್ಪಗಳಂತೆ ಕಂಡು ಬರುತ್ತಿತ್ತು. ನಂತರ ಬುದ್ಧಿವಾದ ಮತ್ತು ದ್ವೇಷದಿಂದ ದೂರವುಳಿದ ಕ್ಷೇತ್ರದಲ್ಲಿ ಅಲೆದಾಡುವಂತಹ ವೇದಿಕೆಯ ಅಧ್ಯಕ್ಷ ಒಂದಿಷ್ಟು ಕಾಲದವರೆಗೆ ಲೋಪಗಳು ಮತ್ತು ದ್ವೇಷದಿಂದ

ಹೊರತಾದ ಅವಕಾಶವನ್ನು ಪಡೆಯಲಿಲ್ಲ. ಸೃಷ್ಟಿಯ ಹಂಗಿಸುವಿಕೆ ಹಾಗೂ ತಿರಸ್ಕಾರ ಮತ್ತು ಆಕ್ಷೇಪಗಳ ಬಾಣಗಳ ಗುರಿಯಾಗಿದ್ದು ಹಾಗೂ ಉಳಿದ ಸುಪ್ರಸಿದ್ಧ ಬಾದಶಹರು ಹಾಗೂ ಶ್ರೇಷ್ಠತೆಯನ್ನು ಹೊಂದಿದ ವ್ಯಕ್ತಿಗಳು ಸಿಂಹಾಸನ ಮತ್ತು ಅಧಿಕಾರಿಗಳಿಗೆ ಅವಹೇಳನದ ಕ್ಷೇತ್ರದಲ್ಲಿಆ ಫೇರೋನಂತಹ ವ್ಯಕ್ತಿತ್ವದ ಪಿತೂರಿಕೋರ ಹಾಗೂ ಅಹಂಕಾರಿಯ ಮೇಲೆ ವ್ಯಕ್ತಪಡಿಸಲಾಗುವುದು. ಏಕೆಂದರೆ, ಹರಿತವಾದ ಕತ್ತಿಯ ಬೆಂಕಿ ಮತ್ತು ಶತ್ರುವನ್ನು ಶಿಕಾರಿ ಮಾಡುವ ಹಿಸಾಮ್ ಖಡ್ಗದ ಬೇಟೆಯನ್ನಾಗಿಸಿ ಹಣ್ಣಿನಂತೆ ತೀವ್ರ ವೇಗದಿಂದ ಅವನ

ವಿದ್ರೋಹ ಮತ್ತು ದೌರ್ಜನ್ಯ ಹಾಗೂ ಹಿಂಸೆಯ ದಾನ್ಯದ ರಾಶಿಯನ್ನು ಸುಟ್ಟು ಪಶ್ಚಾತ್ತಾಪದ ಚಾದರವನ್ನು ಹೆಗಲ ಮೇಲೆ ಹಾಕಿ ದಾಸನ ದುಃಖ ಮತ್ತು ದುಃಖದಿಂದ ಲಜ್ಜಿತನಾಗಿ ಪಶ್ಚಾತ್ತಾಪವನ್ನು ಆಲಂಗಿಸಿ ನಾಚಿಕೆಯ ಬೆಂಬಲಿಗನನ್ನಾಗಿ ಮಾಡುವುದು. ಮೂರನೆಯದಾಗಿ ಭಗವಂತನ ಕರುಣೆಯ ಸಾಗರ ಮತ್ತು ಇನಾಮು ಕೊಡುಗೆಗಳ ಮನಃಸ್ಥಿತಿಯಲ್ಲಿ ತಂದು ಈ ಲೋಕದ ಹಸಿ ಬಿಸಿ ಮತ್ತು ಶುಷ್ಕತೆಯ ಪ್ರಕ್ರಿಯೆಗಳ ಗೆಳೆತನವಾಗಲಿ. ಏಕೆಂದರೆ ಆ ಪುರಾತನವಾದ ಹಗಲು ರಾತ್ರೆ ಮತ್ತು ಕಳೆದು ಹೋದ ವರ್ಷಗಳ ರೀತಿಯಲ್ಲಿ ತನ್ನ ಯೋಗ್ಯತೆಯ ಪಾನೀಯವನ್ನು ಆಡಳಿತದ ಸೆಹಬಾ ಶರಾಬಿನ ಹೆಚ್ಚಳದ ಪಾನೀಯ ಮತ್ತು ಉಪಕಾರದ ತೀವ್ರತೆಯಿಂದ ಕೂಡಿರುವುದು. ಒಟ್ಟಾರೆ ರಾಜಮಹಾರಾಜರು ಮತ್ತು ಸುಲ್ತಾನರುಗಳ ಆಜ್ಞಾಪಾಲನೆ ಮತ್ತು ವಿಧೇಯತೆ, ಸನ್ನಡತೆಯ ನೇರ ಮಾರ್ಗದಲ್ಲಿ ಇಚ್ಛೆಯುಳ್ಳವನಾಗಿ, ಅವರ ಸಂಪ್ರೀತಿಯ ದೃಡವಾದ ಹಗ್ಗವನ್ನು ಆರೋಗ್ಯಕರ ಮತ್ತು ನೇರ ಬಾದಶಹನಿಗೆ ಒಂದು ಕಡೆ ಬಿಟ್ಟು ಗರ್ವ ಅಹಂಕಾರದ ಕ್ಷೇತ್ರದಲ್ಲಿ ಮೂಡುವುದು ತನ್ನ ಅಹಂಕಾರ ಮತ್ತು ಸ್ವಪ್ರತಿಷ್ಠೆ ಕ್ಷೇತ್ರದಲ್ಲಿ ಅಲೆದಾಡುವವನ ಮಾತನ್ನು ಆಡುವುದು ಬೇಡ.

ಈ ಸಂವಾದದ ಅನುಸಾರ ಬೆಹದದ್ ಹೆಸರಿನ ಒಬ್ಬ ಜಮೀನುದಾರನ ವೃತ್ತಾಂತವಿದೆ. ಆತ ಅತ್ಯಂತ ಹೆಚ್ಚು ಚಾಲಾಕಿತನದಿಂದ ಕೂಡಿದ್ದು, ಸೂಕ್ಷ್ಮ ಉಪಾಯಗಳ ಮೂಲಕ ರಾಜ್ಯದ ನೆರೆಯವರು ಮತ್ತು ಸಮೀಪದಲ್ಲಿದ್ದವರ ಮೇಲೆ ಹಿಡಿತವನ್ನು ಹೊಂದಿದ್ದು ಪಿತೂರಿ ಮತ್ತು ವಿದ್ರೋಹದ ಆರಂಭವನ್ನು ಮಾಡಿದ. ಸಿರಿವಂತಿಕೆ ಮತ್ತು ಆಡಳಿತದ ಕರ್ತವ್ಯದ ಬಗ್ಗೆ ಕಿಡಿಯನ್ನು ಹೊತ್ತಿಸಿದಂತಾಯಿತು. ಒಟ್ಟಾರೆ ಗೌರವ ಮತ್ತು ಸಿರಿತನದ ಗೋಡೆಗಳ ಬುನಾದಿಯನ್ನು ಕೆಡವಿ ಹಾಕುವ ಮತ್ತು ಬೀಳಿಸುವ ಕ್ರಿಯೆಯಾಗಿದೆ. ಈ ಅಸಮರ್ಪಕ ವೃತ್ತಾಂತವನ್ನು ಗಂಭೀರವಾಗಿ ಆಲಿಸಿದ ನಂತರ ಕೋಪ ಹಾಗೂ ದುಃಖದಿಂದ ಸೂರ್ಯನಿಗೆ ಮಂಕು ಕವಿದಂತಾಯಿತು

ಅಲಿ ಆದಿಲ್ ಶಾಹನ ವಿಸ್ತಾರದ ರಾಜ್ಯವನ್ನು
ಹಿಡಿತಕ್ಕೆ ತೆಗೆದುಕೊಳ್ಳುವವನು

ಭೂಖಂಡದ ಪರಾಕ್ರಮಿಗಳಿಂದ
ದೇಶವನ್ನು ಪಡೆಯಲು

ಯಾವ ಭೂಮಿಯ ಸಲುವಾಗಿ ರಿಕಾಬಿನಲ್ಲಿ ಕಾಲಿಡುವನೋ
ಒಂಭತ್ತನೆಯ ಆಕಾಶದ ಎತ್ತರದವನನ್ನು
ತನ್ನ ಖಬ್ಜೆಯಲ್ಲಿ ಹೊಂದುವನು
ಶತ್ರು ಸೈನ್ಯದತ್ತ ಯಾವ ಹೊತ್ತಿನಲ್ಲಿ
ತನ್ನ ಸೇನೆಯನ್ನು ದೌಡಾಯಿಸುವನೋ
ಆ ಹೊತ್ತಿನಲ್ಲಿ ಮರ್ಯಾದೆಯ ಮೋರೆಯನ್ನು
ಕೆಂಪನ್ನಾಗಿಸುವನು
ಸಿಕಂದರ್ ಬಾದಶಹನಂತಹ ಸಿಂಹಾಸನವನ್ನು
ಹೊಂದಿದಾತ
ಬಾದಶಹನು ಎಲ್ಲಿ ರಿಕಾಣೆ ಹೂಡುವ
ಧೃಡ ನಿರ್ಧಾರ ಕೈಗೊಳ್ಳುವನೋ
ಜಯ ಮತ್ತು ಪರಾಕ್ರಮ ಅವನ ಮುಖ್ಯ ಕಾಳಜಿ
ಮತ್ತು ಹಿಸಾಮ್ ಖಡ್ಗದಿಂದ
ವಿಜಯದ ಬಾಗಿಲು ತೆರೆಯುವುದು
ಅವನ ಸೈನ್ಯದ ದೆಸೆಯಿಂದ ಭೂಮಿಯಲ್ಲಿ
ಧೂಳು ಮತ್ತು ಮಣ್ಣು ಮರಳುತ್ತದೆ
ಅವನ ಗುಂಡುಗಳ ಹೊಗೆಯಿಂದ
ಆಕಾಶವು ಧೂಮದಿಂದ ಆವೃತ
ಕಠಿಣ ಹೊತ್ತಿನಲ್ಲಿ ಮೃದು ಹೃದಯವನ್ನಿಡುವುದಿಲ್ಲ
ಅವನ ತೀವ್ರ ಆಕ್ರಮಣದಿಂದ
ಆಕಾಶವು ಬೀಳುವಂತಾಗುವುದು

ಪರಾಕ್ರಮದಂತಹ ಗುರುತನ್ನು ಹೊಂದುವ ಸಲುವಾಗಿ ಸಯ್ಯದ್ ಇಲಿಯಾಸ್‌ನಂತಹ ಶೇರ್ಜಾಖಾನ್‌ನನ್ನು ಸಂಬೋಧಿಸಲಾಗುತ್ತದೆ. ಅವನ ಪಂಕ್ತಿಯು ಬೆಂಬಲವನ್ನು ನೀಡುವ ಎಲ್ಲಾ ಮಂತ್ರಿಗಳು ಮತ್ತು ಪರಾಕ್ರಮ ಹಾಗೂ ವೀರಾವೇಷದಲ್ಲಿ ಅಪಾರ ವೈಶಿಷ್ಟ್ಯತೆ ಮತ್ತು ಶ್ರೇಷ್ಠತೆಯನ್ನು ಹೊಂದಿದವರ ಪೈಕಿ ಇತ್ತು. ಅವರ ಸಂಬಂಧವು ನೆರವಿನ ಶಕ್ತಿ ಮತ್ತು ದೈವ ಸಹಾಯದ ಹಸ್ತದಿಂದ ಕೂಡಿದ್ದು ರಾಜ ಪೋಷಾಕು ಹಾಗೂ ಬಾದಶಹನ ಇನಾಮು ಮತ್ತು ಕೊಡುಗೆಗಳ ಮೂಲಕ ಹೆಣೆಯಲಾಗಿತ್ತು ಹಾಗೂ ಹೆಮ್ಮೆ ಮತ್ತು ಗೌರವಾದರಗಳ ಸಂಕೇತವಾಗಿತ್ತು. ಆ

ದುರುಳ ಮತ್ತು ನತದೃಷ್ಟ ಮತ್ತು ಅದೃಷ್ಟಹೀನನಿಗೆ ಸುಧಾರಣೆ ಮತ್ತು ಎಚ್ಚರಿಕೆ ನೀಡುವ ಸಲುವಾಗಿ ರವಾನೆ ಮಾಡಿದರು. ನರಿಗಳ ಬೇಟೆಯಾಡುವ ಸಲುವಾಗಿ ಪೊದೆಗಳ ನಡುವಿನಿಂದ ಹೊರಡುವ ಸಿಂಹದಂತೆ, ಪಾರಿವಾಳದ ಬೇಟೆಯಾಡುವ ಸಲುವಾಗಿ ಎತ್ತರಕೆ ಹಾರಿ ಹೊಂಚು ಹಾಕುವ ಗರುಡನಂತೆ ಶರ್ಜಾಖಾನನು ಸುದೀರ್ಘ ಪ್ರಯಾಣವನ್ನು ಅಲ್ಪ ಅವಧಿಯಲ್ಲಿಯೇ ಕ್ರಮಿಸಿದ ಮತ್ತು ಜರಹ್ ಕೋಟೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ನೆರವು ಮತ್ತು ಬೆಂಬಲವನ್ನು ನೀಡುವ ಸೈನ್ಯದ ತಂಗುದಾಣವನ್ನಾಗಿ ಮಾಡಿದ.

ಅಹಂಕಾರದಿಂದ ತುಂಬಿ ತುಳುಕುತ್ತಿದ್ದ ಉದ್ಧಟ ನೀಚ ವ್ಯಕ್ತಿತ್ವದವನ ಕೋಟೆಯ ಒಳ ಭಾಗದಲ್ಲಿ ಚಂದ್ರನ ಸುತ್ತ ಕಕ್ಷೆಯಲ್ಲಿ ಸುತ್ತುವ ಗೋಳದಂತೆ ಅಪಾರ ಸೈನ್ಯವನ್ನು ಕೆಳಗೆ ಇಳಿಸಲಾಯಿತು.

ಅವನ ಸೈನ್ಯದ ದೆಸೆಯಿಂದ ಭೂಮಿಯ ಮೇಲೆ
ಧೂಳು ಹಾಗೂ ಅಂಧಕಾರವು ಮರಳುತ್ತದೆ.
ಅವನ ಗುಂಡುಗಳ ಧೂಮದಿಂದ
ಆಕಾಶವು ಹೊಗೆಯಿಂದ ಆವರಿಸುತ್ತದೆ.
ಕಠಿಣ ಹೊತ್ತಿನಲ್ಲಿ ಮೃದುಹೃದಯಿಯಾಗುವುದಿಲ್ಲ.
ಅವನ ತೀವ್ರ ಆಕ್ರಮಣದಿಂದ ಆಕಾಶವು
ಮಗುಚಿ ಬೀಳಿಸುವವನಾಗುತ್ತಾನೆ.

ಪರಾಕ್ರಮಿಂಯಂತಹ ನಿಶಾನೆಂಯನ್ನು ಉಳಿಸಲು ಸಂಯ್ಯದ್ ಇಲಿಯಾಸ್‌ಖಾನ್‌ನೊಡನೆ ಹೀಗೆಂದು ಸಂಬೋಧಿಸಲಾಗುತ್ತದೆ. ಅವನ ಬದಿಯಲ್ಲಿ ನೆರವು ನೀಡುವ ಎಲ್ಲಾ ಮಂತ್ರಿಗಳು ಹಾಗೂ ಶೌರ್ಯ ಮತ್ತು ಪರಾಕ್ರಮದಲ್ಲಿ ವಿಶೇಷ ಪರಿಣಿತಿಯನ್ನು ಹಾಗೂ ಪರಿಜ್ಞಾನವನ್ನು ಹೊಂದಿದವರು ಉಪಸ್ಥಿತರಿದ್ದರು. ರಾಜ ಪೋಷಾಕು ಮತ್ತು ಬಾದಶಹನ ಕೊಡುಗೆಗಳು ಮತ್ತು ಪುರಸ್ಕಾರಗಳ ಮೂಲಕ ಅಂದರೆ ಅದರ ಸಂಬಂಧವು ನೆರವಿನ ಶಕ್ತಿ ಹಾಗೂ ಅಲ್ಲಾಹನ ಬೆಂಬಲದ ಮೂಲಕ ಹೆಣಿಗೆ ಮಾಡಲಾಗಿತ್ತು ಆ ನತದೃಷ್ಟನ ತರಬೇತಿಯು ಅವಹೇಳನದ ದೆಸೆಯಿಂದ ಮಣ್ಣು ಮುಕ್ಕಿತ್ತು. ನರಿಗಳ ಬೇಟೆಗಾಗಿ ಗುಹೆಯಿಂದ ಹೊರಡುವ ಸಿಂಹದಂತೆ ಮತ್ತು ಪಾರಿವಾಳದ ಬೇಟೆಗಾಗಿ ತನ್ನ ಗೂಡಿನಿಂದ ಹೊರಬರುವ ಗರುಡನಂತೆ, ದೀರ್ಘ ಪ್ರಯಾಣವನ್ನು ಕಡಿಮೆ ಅವಧಿಯಲ್ಲಿ ಕ್ರಮಿಸಿದ ಶರ್ಜಖಾನ್ ಜರ್‍ರ ಕೋಟೆಯ ಸುತ್ತಮುತ್ತಲಿನ ಪ್ರದೇಶವನ್ನು, ನೆರವನ್ನು ನೀಡಲು ಸದಾ ಸನ್ನದ್ಧವಾದ ಸೈನ್ಯದ ತಂಗುದಾಣ ವನ್ನಾಗಿ ಮಾಡಿದ. ಅಹಂಕಾರಿ, ಗರ್ವಿಷ್ಠ ಹಾಗೂ ಜಂಭದ

ಸ್ವಭಾವದವನಿಗೆ ಶಿಕ್ಷಿಸುವ ಸಲುವಾಗಿ ಅಪಾರ ಸೈನ್ಯ ಮತ್ತು ಅಸಂಖ್ಯ ಸೈನಿಕರನ್ನು ಅರ್ಧಚಂದ್ರಾಕೃತಿಯ ಆಕಾರದಲ್ಲಿ ಕೋಟೆಯ ಒಳಗೆ ಇಳಿಸಲಾಯಿತು.

ಈ ಉದ್ದೇಶದ ಮಾಹಿತಿಯನ್ನು ಹೊಂದಿದ್ದು, ಯುದ್ಧಕ್ಕೆ ಅಗತ್ಯವಾದ ಗಟ್ಟಿ ಹೃದಯ ಮತ್ತು ಭಯಾನಕತೆಯಿಂದ ತುಂಬಿದ ವೀರರನ್ನು ಸೋಲಿಸುವ ಚೀತಾಗಳನ್ನು ಕಾಡಿನ ಜಿಂಕೆಗಳಂತೆ ಉರುಳಿನ ಸೆರೆಯಲ್ಲಿ ಬಂಧಿಸಲಾಯಿತು ಹಾಗೂ ಪಂಕ್ತಿಯನ್ನು ಭೇದಿಸುವ ಸಿಂಹಗಳನ್ನು ಕಾಡಿನ ಹನ್ನೆರಡು ಕೊಂಬುಗಳ ಜಿಂಕೆಗಳಂತೆ ತಮ್ಮ ಬಲೆಯ ಸೆರೆಯಲ್ಲಿ ಕೆಡವಲಾಯಿತು ಹಾಗೂ ಅವರುಗಳ ಮೇಲೆ ಆಕ್ರಮಣ ಮಾಡಲಾಯಿತು. ತೋಪು ಮತ್ತು ಬಂದೂಕುಗಳಿಂದ ಜ್ವಾಲೆಗಳ ಸುರಿಮಳೆಯಾಯಿತು. ಪಿತೂರಿ ಸಂಕಷ್ಟಗಳು ಮತ್ತು ಆಪತ್ತುಗಳ ಕ್ಷೇತ್ರದಲ್ಲಿ ಸಜ್ಜಾಗಿ ನಿಂತರು. ಯುದ್ಧದಲ್ಲಿ ನಿಷ್ಣಾತ ಅರಬಿ ಕುದುರೆಗಳನ್ನು ಬಳಸಿಕೊಂಡು ರಣರಂಗದಲ್ಲಿ ವ್ಯೂಹವನ್ನು ರಚಿಸಲಾಯಿತು ವಿರೋಧಿಗಳ ಜೀವಗಳು ಮರಣದ ಕಿಡಿಗಳಿಂದ ಸುಟ್ಟು ಕರಕಲಾದವು ಮತ್ತು ಅನೇಕರ ಜೀವವೃಕ್ಷಗಳನ್ನು ಮೃತ್ಯು ಹಾಗೂ ವಿನಾಶದ ಗರಗಸದಿಂದ ಕೊಯ್ಯಲಾಯಿತು. ಇನ್ನೊಂದು ಕಡೆಯೋಧರು ಮತ್ತು ವಿಜಯೀ ಪಹಲವಾನರು ಹರಿತವಾದ ಕತ್ತಿಗಳು ಹಾಗೂ ರಕ್ತ ಹರಿಸುವ ಯುದ್ಧದ ಸಲುವಾಗಿ ಸನ್ನದ್ಧರಾಗಿರುವ ಹಾಗೂ ಯುದ್ಧರಂಗದಲ್ಲಿ ಸೆಡ್ಡು ಹೊಡೆದು ನಿಲ್ಲುವ ಯೋಧರ ಪೈಕಿ ಅನೇಕರು ಯುದ್ಧದ ನಿರತರಾಗಲು ಕತ್ತಿಗಳ ಸೆಣೆಸಾಟ ಹಾಗೂ ಬಿಲ್ವಿದ್ಯೆಯಿಂದ ಈ ವ್ಯಾಜ್ಯ ಮತ್ತು ಅಗಲಿಕೆಯನ್ನು ಅಂಗೀಕರಿಸುವ ಗುಂಪಿನ ನಾಲ್ಕು ಗೋಡೆಗಳ ನಡುವೆ ಯುದ್ಧನಿರತ ವೀರರ ವಿರೋಧ ಮಾಡುವವರ ಜನರ ದೇಹಗಳಿಂದ ನೆತ್ತರು ಪ್ರವಾಹದೋಪಾದಿಯಲ್ಲಿ ಚಿಮ್ಮತೊಡಗಿತು. ಭೂಮಿಯ ಕ್ಷೇತ್ರವು ಸಂಪೂರ್ಣವಾಗಿ ಛಿದ್ರ ದೇಹದವರ ಹಾಗೂ ತೀವ್ರ ರೋಗಿಷ್ಠರಿಂದ ತುಂಬಿತು. ದುರದೃಷ್ಟಶಾಲಿಗಳು ಮತ್ತು ಕರಾಳ ಭವಿಷ್ಯವನ್ನು ಹೊಂದಿದವರ ಶವಗಳು, ಮೃಗಗಳು, ಕಾಡುಪ್ರಾಣಿಗಳು ಹಾಗೂ ಸರ್ಪಗಳ ಔತಣಕ್ಕೆ ಆಹಾರವಾದವು. ಅದೃಷ್ಟದ ಕತ್ತಿಯು ಶತ್ರುಗಳ ಅಪೇಕ್ಷೆಯ ದಿರಿಸಿನಂತೆ, ಛಿದ್ರವಾಗಿ ಹರಿದು ಚೂರಾಗುವುದರ ವಿನಃ ಬೇರೆ ಯಾವ ಉದ್ದೇಶವೂ ಈಡೇರಲಿಲ್ಲ ಹಾಗೂ ಕೇಡಿಗೆ ಈಡಾದ ದೇಹದಲ್ಲಿ ಬದುಕಿನ ಹೋರಾಟದಲ್ಲಿ ಗಲಭೆಯ ಪಗಡಿಯನ್ನು ರಾಜ್ಯದ ಶುಭಾಕಾಂಕ್ಷಿಗಳ ತಲೆಯ ಮೇಲೆ ಇರಿಸಿ.

ವೀರರು ಎಲ್ಲಾ ಕಡೆಯಿಂದಲೂ ಕೋಪೋದ್ರಿಕ್ತರಾದರು
ಮತ್ತು ಶತ್ರುಗಳ ಶಿರಗಳನ್ನು ಕಾಲಿನಡಿಯಲ್ಲಿ ಮಡಿಗೈದರು
ಶತ್ರುಗಳು ಬೇಟೆಯಾಡುವ ಬಾದಶಹನ ಆದೇಶದ ಮೇರೆಗೆ
ಯುದ್ಧ ಭೂಮಿಯಲ್ಲಿ ಬೆಂಕಿಯು ಪೂತ್ಕರಿಸಿತು.
ಅದರ ಹೊಗೆಯು ಆಕಾಶದ ಪ್ರಜ್ಞೆಯನ್ನು ತುಂಬಿತು

ಆ ಜ್ವಾಲೆಗಳಿಂದ ಭೂಮಿಯು ಆಕಾಶದ ಕಲೆಯಾಯಿತು
ಸಿಂಹಗಳನ್ನು ಸೋಲಿಸುವ ವೀರಾಗ್ರಣಿಗಳು ಎಲ್ಲಾ
ದಿಕ್ಕುಗಳಿಂದಲೂ ಕತ್ತಿ, ಬಾಣ ಗುರಾಣಿ ಹಾಗೂ ಭಲ್ಲೆಗಳಿಂದ
ಶತ್ರುವಿನ ಮೇಲೆ ಕಪಟದ ಹಾದಿಯನ್ನು ಬಂದ್
ಮಾಡಿದರು. ಮಿತಿ ಮೀರಿದ ಕೊಲೆ ಮತ್ತು ವಿನಾಶದಿಂದ
ಭೂಮಿಯು ರಕ್ತದ ಸಮುದ್ರವಾಯಿತು
ಕತ್ತಿವರಸೆಯ ಕರಾಮತ್ತನ್ನು ಹೇಗೆ ಪ್ರದರ್ಶಿಸಿದರೆಂದರೆ, ಅವರ
ಕೈಯಲ್ಲಿ ಕತ್ತಿಯು ಹೃದಯ ಭೇದಿಸುವ ಬಾಣದಂತಾಯಿತು.
ಹೋರಾಟದ ಮೈದಾನದಿಂದ ಎಷ್ಟೊಂದು ಧೂಳು ಹಾರಿತೆಂದರೆ,
ಕರಾಳ ರಾತ್ರಿಯಂತೆ ಉಜ್ವಲ ಹಗಲು ಅಂಧಃಕಾರಮಯವಾಯಿತು
ಪರಸ್ಪರರ ಹೃದಯಗಳು ಭರ್ಚಿಗಳೊಡನೆ ಮಾತನಾಡತೊಡಗಿದಾಗ
ನಾಲಿಗೆಯು ಒಣಹುಲ್ಲಿನಂತೆ ರೋಗಗ್ರಸ್ತವಾಯಿತು

ವಿದ್ರೋಹಿ ಮತ್ತು ವಿಧ್ವಂಸಕ ಜನರು ಧರ್ಮಯುದ್ಧದ ಭೂಮಿಯಲ್ಲಿ ಧರ್ಮಯೋಧರನ್ನು ಎದುರಿಸಿ, ತಮ್ಮ ಕಪಟ ಹಾಗೂ ಮೋಸದ ಹಾದಿಯನ್ನು ಸ್ತ್ರೀಯರ ಗುಂಪಿಗಿಂತಲೂ ಕಿರಿದಾಗಿಸಿಕೊಂಡು ಪರಸ್ಪರ ಹೇಳಿಕೊಂಡರು. ಉನ್ನತ ಹಾಗೂ ಗೌರವಪೂರ್ವಕ ಹಣೆಯನ್ನು ದುರ್ಬುದ್ಧಿ ಮತ್ತು ಹೇಡಿತನದಿಂದ ಕಳಂಕಿತವನ್ನಾಗಿ ಮಾಡಿ, ಮರ್ಯಾದೆ ಹಾಗೂ ಅಂತಸ್ತಿನ ಕೆನ್ನೆಯನ್ನು ನೀಚತನ ಮತ್ತು ಅಪಮಾನಕಾರೀ ವರ್ತನೆಗಳಿಂದ ನಡೆದುಕೊಂಡು ವೈಭವ, ಖ್ಯಾತಿ ಮತ್ತು ಅದೃಷ್ಟದ ಆಟವನ್ನು ಅಪಮಾನದ ಹಸ್ತದಿಂದ ಕಿತ್ತೆಸೆದೆವು.

ಹೆಸರು ಮತ್ತು ಸಭ್ಯತೆಯ ಯಶಸ್ಸನ್ನು ಅಪಮಾನದ ಕಲ್ಲಿನಿಂದ ಜಜ್ಜಿ ಪುಡಿ ಮಾಡಲಾಯಿತು ಹಾಗೂ ಆರಾಮ ಮತ್ತು ನೆಮ್ಮದಿಯ ಕಟ್ಟಡಗಳನ್ನು ಅವಶೇಷಗಳನ್ನಾಗಿ ಮಾಡಲಾಯಿತು. ಸಫಲತೆ ಮತ್ತು ವಿಜಯವನ್ನು ಗಳಿಸುವ ವೀರಯೋಧರು ಹಾಗೂ ನೆರವು ಮತ್ತು ಕೃತಜ್ಞತೆಯನ್ನು ಜೊತೆಯಾಗಿಸಿ, ಯುದ್ಧ ಮತ್ತು ಕತ್ತಿಯ ಗೆಳೆತನವನ್ನು ಸಾಧಿಸಿದವರು ಇಂದೇ ಆ ವಿದ್ರೋಹಿ ಗುಂಪಿನ ಸದಸ್ಯರ ಬೃಹತ್ ಕಾರ್ಯಗಳ ಹೊರೆಗೆ ಮುಕ್ತಿ ಕೊಡುವುದು ಮತ್ತು ಅವರ ಅಸ್ತಿತ್ವದ ಧೂಳು ಹಾಗೂ ಕಲ್ಮಶವನ್ನು ಕತ್ತಿಯ ನೀರಿನಿಂದ ಆರಿಸಿ ಅವರೆಲ್ಲರನ್ನು ನಾಮಾವಶೇಷ ಮಾಡುವುದು. ಕತ್ತರಿಸುವ ಮತ್ತು ಹೊಳೆಯುವ ಖಡ್ಗಗಳು ಶತ್ರುಗಳ ಎದೆಸೀಳುವ ಮತ್ತು ತಲೆ ಒಡೆಯುವ ವಿನಃ ಬೇರೆ ಯಾವ ಕೆಲಸವನ್ನು ಮಾಡುವುದಿಲ್ಲ. ಆಕಸ್ಮಿಕವಾಗಿ, ಯುದ್ಧರಂಗದ ಸಂದಿಗ್ಧದಲ್ಲಿ ಹಾಗೂ ಯುದ್ಧದ ಆಕ್ರಮಣಶೀಲತೆಯಲ್ಲಿ ಯಾವ ಕ್ಷೇತ್ರವೂ ರಕ್ಷಣೆ ಹೊಂದಲು ಸಾಧ್ಯವಿಲ್ಲ. ಹೃದಯವನ್ನು ಬೇಧಿಸುವ ಬಾಣಗಳು ಹಾಗೂ ಶತ್ರುಗಳನ್ನು

ಸುಡುವ ಭರ್ಚಿಗಳ ಉದ್ದೇಶವೇ ಕ್ರೂರಿಗಳ ಕ್ರೌರ್ಯದಿಂದ ಬಿಡುಗಡೆ ಪಡೆಯುವುದಾಗಿದೆ. ನೆಮ್ಮದಿಯ ಬತ್ತಳಿಕೆ ಮತ್ತು ಬಿಡುವಿನ ನೆಲೆಯಲ್ಲಿ ಉಳಿದಲ್ಲಿ ರಕ್ತಪಿಪಾಸು ಮತ್ತು ಪಿತೂರಿಕೋರ ಬಂದೂಕುಗಳು ಯುದ್ಧರಂಗದ ಬೀಭತ್ಸತೆಯನ್ನು ಹೆಚ್ಚಿಸುವಲ್ಲಿ ಸಕ್ರಿಯವಾಗುತ್ತವೆ. ತುಟಿಗಳ ಮೇಲೆ ಮೌನಮುದ್ರೆಯನ್ನು ಒತ್ತಿಕೊಂಡು, ಗುಪ್ತಸಖಿಯ ಇಲಾಖೆಯಲ್ಲಿ ಆಸೀನರಾಗುವುದು.

ಶರ್ಜಖಾನನು ತನ್ನ ಸೈನಿಕರಿಂದ ಪಡೆದ ಚಲನೆ ಸ್ಥಿರತೆ, ಸಂಕೇತಗಳು ಹಾಗೂ ಸೂಚನೆಗಳಿಂದ ಕೋಪೋದ್ರಿಕ್ತನಾಗಿ ತನ್ನ ಸೈನಿಕರನ್ನು ಉದ್ದೇಶಿಸಿ ಮಾತನಾಡಿದ.

ಯುದ್ಧರಂಗದಲ್ಲಿ ನವಸ್ಪರ್ಶದ ತಾಜಾ ಕುದುರೆಗಳನ್ನು ಓಡಿಸುವವರು, ಶೂರರು ಮತ್ತು ಗೌರವಾನ್ವಿತರು. ಅರೆಜೀವವಾಗಿರುವ ಕೋಳಿಯಂತೆ ಕೈಕಾಲುಗಳು ನಡುಗಿ ಗಾಬರಿಯಿಂದ ಭಯಾನಕತೆಯಲ್ಲಿ ಸಿಲುಕಿ ತಮ್ಮ ಬದುಕು ವಿನಾಶವಾಗುವತ್ತ ಹಾಗೂ ಸಂಕಷ್ಟದ ಸಾಗರದಲ್ಲಿ ಸಿಲುಕಿದೆ ಎಂದು ಭಾವಿಸುತ್ತಾರೆ. ನಾವಿಕನು ಎಲ್ಲಾ ಪ್ರಯತ್ನಪಟ್ಟಾಗ್ಯೂ ರಕ್ಷಿಸುವ ಮಾರ್ಗ ಕಾಣದಾದ. ಅದನ್ನು ಅತ್ಯಂತ ಸೂಕ್ಷ್ಮ ಮತ್ತು ಪ್ರೇಮಮಯಿ ಮಾರ್ಗಗಳ ಮೂಲಕ ದಡವನ್ನು ತಲುಪಿಸಬಹುದು. ಗಾಂಭೀರ್ಯ ಹಾಗೂ ಸಭ್ಯತೆಯ ಮರ್ಯಾದೆಯನ್ನು ನೀಚತನ ಮತ್ತು ನಿರ್ಲಜ್ಜತನದ ಮಣ್ಣಿನ ಮೇಲೆ ಹಾಯಿಸುವುದು. ಸರ್ಪದ ಭಯದಿಂದ ಬಿಲವನ್ನು ಸೇರುವ ಪ್ರಾಣಿಯಂತೆ ಹಾಗೂ ಜನರನ್ನು ಹರಿದು ತಿನ್ನುವ ತೋಳದಿಂದ ಹೆದರಿ ಅರಣ್ಯ ಮತ್ತು ಮರಳುಗಾಡಿನತ್ತ ಓಡುವ ಕುರಿಯಂತೆ, ಸಿಡಿಲಿನಂತಹ ತನ್ನ ಕರ್ತವ್ಯವನ್ನು ನಿಭಾಯಿಸುವ ನಮ್ಮ ಕತ್ತಿಯನ್ನು ಯುದ್ಧಕ್ಷೇತ್ರದಲ್ಲಿ ತಾಜಾ ಕುದುರೆಗಳನ್ನು ಓಡಿಸುವ ಮತ್ತು ಜೀವದ ಬಲಿಯನ್ನು ಅರ್ಪಿಸುವ ಹಾಗೂ ಪರಾಕ್ರಮದ ಕ್ಷೇತ್ರದಲ್ಲಿ ಹಿಡಿತವನ್ನು ಹೊಂದಿರುವ ಆ ಗುಂಪಿಗೆ ಯಾವ ಸೋಲು ಮತ್ತು ಶತ್ರುತ್ವವಿಲ್ಲದೆ, ಯಾವುದೇ ಸೌಕರ್ಯಗಳಿಲ್ಲದೆ ಎದ್ದೇಳುವುದಿಲ್ಲ. ಅರೆಜೀವವಾಗಿರುವ ಹುಂಜದ ರೀತಿಯಲ್ಲಿ ಕೈಕಾಲುಗಳು ರಕ್ತಸಿಕ್ತವಾಗಿದ್ದು ಧೂಳಿನಿಂದ ಆವೃತವಾಗಿದ್ದು ಕಳವಳ ಮತ್ತು ಉದ್ವೇಗದಿಂದ ಕೂಡಿದ್ದು ತಮ್ಮ ಜೀವನದ ದೋಣಿಯು ಸಾವು ಮತ್ತು ವಿನಾಶದಿಂದ ಎದುರಾದಾಗ ಮತ್ತು ಅಪಾಯಕ್ಕೆ ಒಡ್ಡುವ ಸಮುದ್ರವಾಗಿದೆ ಎಂದು ಅರಿವಾದಾಗ ತನ್ನ ಸರ್ವವಿಧದ ಪ್ರಯತ್ನಗಳಿಂದಲೂ ಮತ್ತು ಸಂಘರ್ಷವನ್ನು ಮಾಡಿದಾಗ್ಯೂ ನಾವಿಕನು ಅದನ್ನು ಪಾರು ಮಾಡಲು ಸಾಧ್ಯವಿಲ್ಲದೆ ಅಸಹಾಯಕ ಮತ್ತು ದುರ್ಬಲನಾಗಿದ್ದಾನೆ. ಅದನ್ನು ಅತ್ಯಂತ ಸೂಕ್ಷ್ಮ ಮತ್ತು ಪ್ರೇಮದ ಉಪಾಯಗಳ ಮೂಲಕ ದಡ ಸೇರಿಸುವುದು. ಹಿರಿತನ, ಮುತ್ಸದ್ದಿತನ ಮತ್ತು ಸಭ್ಯತೆ ಮರ್ಯಾದೆ ಗೌರವವನ್ನು ಕಟ್ಟುವ ಮತ್ತು ನೀಚತನ ಹಾಗೂ ಅಪಮಾನದ ಮಣ್ಣನ್ನು ಕತ್ತರಿಸುವ ವ್ಯವಸ್ಥೆಯಲ್ಲಿ ಸರ್ಪದ ಹೆದರಿಕೆಯಿಂದ ದ್ವೇಷ ಮತ್ತು ಅನಾಮಧೇಯತನದ ಬಿಲದಲ್ಲಿ

ಹುದುಗುವ ಪ್ರಾಣಿಯಂತೆ ಮತ್ತು ಹರಿದು ತಿನ್ನುವ ತೋಳದ ಭಯಾನಕತೆ ಮತ್ತು ಹೆದರಿಕೆಯಿಂದ ಭೀಕರ ಮರುಭೂಮಿ ಮತ್ತು ಅರಣ್ಯದತ್ತ ಓಡುವ ಕುರಿಮರಿಯಂತೆ ವಿದ್ಯುತ್‌ವೇಗದಿಂದ ಕೂಡಿದ ರಭಸದ ನಡವಳಿಕೆಯನ್ನ ಮೈಗೂಡಿಸಿಕೊಂಡ ನಮ್ಮ ಖಡ್ಗಕ್ಕೆ ಭಯ ಮತ್ತು ಭಯಾನಕತೆಯಿಂದ ಈ ನಾಸ್ತಿಕರು ಮತ್ತು ಕೇಡುಗಾಲದ ಗುಂಪಿನ ಅರಣ್ಯದಿಂದ ತಲೆ ಮರೆಸಿಕೊಂಡು ಹೋರಾಟ ಮತ್ತು ಯುದ್ಧದ ಮಾರುಕಟ್ಟೆಯನ್ನು ಗಲಭೆಕೋರರಿಂದ ರಣರಂಗವನ್ನಾಗಿಸಿ, ಯುದ್ಧ ಕೊಲೆ ಮತ್ತು ವಿನಾಶದ ಜ್ವಾಲೆಯನ್ನು ಉದ್ದೀಪನಗೊಳಿಸುವ ಉದ್ದೇಶದಿಂದ ಮಾರನೆಯ ದಿನ ಧೈರ್ಯದ ಜನರನ್ನು ಕೈಬಿಡುವರು. ಇನ್‌ಶಾಅಲ್ಲಾಹ್ ಮಿತ್ರರೇ ಅಲ್ಲಾಹನ ಬೆಂಬಲ ಮತ್ತು ನೆರವಿನಿಂದ ಬಲಿಷ್ಠ ನೆರವನ್ನು ಹೊಂದಿದ ಕೋಟೆ ಎಂದು ತಿಳಿದು ಕಣ್ಣವೆ ಮುಚ್ಚುವುದರೊಳಗೆ ಸೈನ್ಯದ ಎದುರಾಳಿಗಳನ್ನು ಜೀವಹತ್ಯೆ ಮಾಡುವ ಖಡ್ಗದಿಂದ ಭೂಮಿಯ ಸಮಮಾಡುವ ಖಡ್ಗಕ್ಕೆ ರಕ್ತಸಿಂಚನವನ್ನು ಮಾಡಲಾಗುವುದು. ಹೃದಯವನ್ನು ಚೂರುಚೂರನ್ನಾಗಿ ಮಾಡಲಾಗುವುದು. ಅಲ್ಲಾಹನ ಕೊಡುಗೆ, ಕರುಣೆ ರಕ್ಷಣೆಯ ಚಾದರದಲ್ಲಿ ಪಡೆದು ಕಣ್ಣವೆ ಮುಚ್ಚುವ ಅವಧಿಯೊಳಗೆ ಆ ಕಾಲದ ಕೇಡು ಬುದ್ಧಿಯವರನ್ನು ಗಾಳಿಯಂತಹ ರಭಸದ ವೇಗದಲ್ಲಿ

ಓಡುವ ಕುದುರೆಗಳ ಖುರಪುಟದ ಕೆಳಗಡೆ ಮತ್ತು ಪರ್ವತಗಳನ್ನು ಕಿತ್ತೆಸೆಯುವ ಪ್ರವಾಹದ ಗುರುತನ್ನಾಗಿ ಮಾಡಲಾಗುವ ಆನೆಗಳ ಹೆಜ್ಜೆಗಳಿಂದ ನಿರ್ನಾಮವಾದ ಕಾಡನ್ನಾಗಿ ಮಾಡಲಾಗುವುದು. ಒಟ್ಟಾರೆ ಜನರನ್ನು ವಿನಾಶದ ಹಾದಿಯ ಧೂಳನ್ನಾಗಿ ಮಾಡಲಾಗುವುದು. ಅದೃಷ್ಟಶಾಲಿಗಳಾದ ಪರಾಕ್ರಮಿ ಮತ್ತು ವೀರರ ಪಂಕ್ತಿಗಳನ್ನು ಮುರಿದು ಹಾಕುವ ಮರರ್ಝ್‌ಖಾನನು ಅರಣ್ಯದ ಶಕ್ತಿಶಾಲಿ ಒಡೆಯನಾಗಿದ್ದನು. ಅಪಮಾನ ಮತ್ತು ತಿರಸ್ಕಾರಗಳನ್ನು ಹೊಂದಿದ ಆ ಸೈನ್ಯದ ಪ್ರಾಣಭಿಕ್ಷೆಯ ಸಲುವಾಗಿ ಅತ್ಯಂತ ಹಾಸ್ಯಾಸ್ಪದವಾದ ಧೂಳಿನಿಂದ ಆವೃತನಾಗಿದ್ದು ಕೊನೆಗಾಲದ ಬದುಕನ್ನು, ವೃಕ್ಷವನ್ನು ಅದರ ಬೇರುಸಮೇತ ಕೀಳುವ ಮತ್ತು ಅವರ ಆಮೋದ ಪ್ರಮೋದ ಮತ್ತು ಅವರ ಜೀವನದ ಕಟ್ಟಡಗಳನ್ನು ನಾಶ ಮಾಡುವುದರಿಂದ ಅವನನ್ನು ತಡೆಯುವುದು. ಮಾರನೆಯ ದಿನ ಅಪಾರ ಶಕ್ತಿಯನ್ನು ಹೊಂದಿದ ಸೈನ್ಯದ ಹಿಂಡಿನಿಂದ ಮೋರೆಯನ್ನು ಭಯಾನಕವಾಗಿ ಪ್ರಕಟಪಡಿಸಲಿ. ಕೋಪಾವೇಶ ಮತ್ತು ಕ್ರೋಧದ ಗಣಿಯನ್ನು ಸುಟ್ಟುಹಾಕುವ ನಕ್ಷತ್ರದಿಂದ ಸುಡುವ ಜೀವವನ್ನು ಹತ್ಯೆ ಮಾಡುವ ಧ್ವಜವನ್ನು ನೀಲಿ ಆಕಾಶದಲ್ಲಿ ಅತ್ಯಂತ ಎತ್ತರಕ್ಕೆ ಏರಿಸಿದ ಮತ್ತು ಸಫಲತೆಯ ಲಕ್ಷಣಗಳನ್ನು ಹೊಂದಿದ ಸೈನ್ಯದ ಗುಂಪಿನಲ್ಲಿ ಅತ್ಯಂತ ಅಮೂಲ್ಯ ಮತ್ತು ಜಾಗೃತ ಹೃದಯ ಮನಸ್ಸುಗಳನ್ನು ಹೊಂದಿದ ಬುದ್ಧಿಮಾತನ್ನು ಆಲಿಸುವ ಸೈನಿಕರಿಗೆ ರಾತ್ರಿಯ ಸನ್ನೆಗಳನ್ನು ನಾಶ ಮಾಡುವ ಮತ್ತು ಎಲ್ಲಾ ವಿದ್ರೋಹಿ ಜನರಿಗೆ ಆನೆಯಂತೆ ಅಮಲೇರಿದವರಾಗಿ ಅಸಾಧ್ಯ ಶಕ್ತಿಯನ್ನು ಹೊಂದಿದ ರಕ್ತಪಿಪಾಸು ತಮ್ಮ ಪರಾಕ್ರಮ

ಮತ್ತು ಪೌರುಷದ ಗರ್ವದ ನಶೆ ಮತ್ತು ಧೈರ್ಯ ಹಾಗೂ ವೀರ ಪರಾಕ್ರಮವನ್ನು ಅವಗಣನೆ ಮಾಡಿ ಶತ್ರುವು ಬಲಾಢ್ಯ ಎಂದರಿತು ಅಲ್ಲಿಂದ ಹೊರಟು ಹೋದರು.

ಖಾನ್ ಮನ್ಸೂರುದ್ದೀನ್ ಮತ್ತು ಮುಝಫರುದ್ದೀನ್‌ರವರು ಆ ಸುದ್ದಿಯನ್ನು ಅತ್ಯಂತ ಗಂಭೀರವಾಗಿ ಆಲಿಸಿದ ನಂತರ ಸರಪಳಿಯನ್ನು ಮುರಿದುಹಾಕುವ ಸಿಂಹಗಳನ್ನು ಜೊತೆಯಲ್ಲಿ ಕರೆದುಕೊಂಡು ಅತ್ಯಂತ ಪರಾಕ್ರಮ ಮತ್ತು ಶೌರ್ಯದಿಂದ ಕೂಡಿ ಕೊಲೆ ಮಾಡಲು ಯೋಗ್ಯರೂ ಮತ್ತು ವಿನಾಶಕ್ಕೆ ಅರ್ಹರೂ ಆದ ಗುಂಪಿನೊಂದಿಗೆ ಯುದ್ಧ ಮತ್ತು ಕದನದ ಸಲುವಾಗಿ ಉದ್ಯುಕ್ತರಾಗಿ ಕಠಿಣ ಮತ್ತು ಕಹಿ ಪರಿಶ್ರಮವನ್ನು ಅತ್ಯಂತ ಮಧುರ ಹಾಗೂ ಸಕ್ಕರೆಗಿಂತಲೂ ಹೆಚ್ಚು ಸ್ವಾದಿಷ್ಟ ಮತ್ತು ಸಿಹಿ ಎಂದು ಭಾವಿಸುವ ವೀರರು ಪರ್ವತವನ್ನು ಕಿತ್ತೆಸೆಯುವ ಉದ್ದೇಶದಿಂದ ರಭಸವಾಗಿ ನಡೆದರು. ಆ ನತದೃಷ್ಟ ಗುಂಪು ಮತ್ತು ಕೇಡಿನ ಬುದ್ಧಿಯ ಹಾಗೂ ದುರ್ಗುಣದ ಅಶುದ್ಧ ಗುಂಪಿಗೆ ಸಜೆ ನೀಡುವ ಸಲುವಾಗಿ ಮತ್ತು ಸಜ್ಜನಿಕೆಯ ಗುಣಗಳನ್ನು ಕಲಿಸುವ ಸಲುವಾಗಿ ರಿಕಾಬಿನಲ್ಲಿ ಹೆಜ್ಜೆಗಳನ್ನು ಊರಿ ಸನ್ನದ್ಧರಾದರು.

ಮತ್ತೊಮ್ಮೆ ಸಿಂಹಜನರು ಆವೇಶಭರಿತರಾದರು ಮತ್ತು
ಶತ್ರು ಸಂಹಾರದ ಸಲುವಾಗಿ ಕರೆ ನೀಡತೊಡಗಿದರು
ಎಲ್ಲಾಕಡೆಯಿಂದಲೂ ಬಹಾದುರ್ ಜನರು ಪರಾಕ್ರಮದಿಂದ
ಕೂಡಿ ಶತ್ರುಗಳ ಹಾದಿಯನ್ನು ಎಲ್ಲಾ ಕಡೆಗಳಿಂದಲೂ ತಡೆದರು
ಯುದ್ಧ ನಿರತ ಪರಾಕ್ರಮಿಗಳು ಕತ್ತಿ, ಬಾಣ, ಖಡ್ಗವನ್ನು
ತೆಗೆದುಕೊಂಡು ಅಣವನ್ನು ಕೂಡ ಧರಿಸಿದರು
ಸಿಂಹಗಳಂತೆ ವೀರರು ಆಂತರಿಕ ಪ್ರಯತ್ನಗಳಿಂದ
ಎಲ್ಲೆಡೆ ರಕ್ತದ ಮಳೆಯನ್ನು ಕರೆದರು.
ದರಬಾರು ಮತ್ತು ಎಲ್ಲೆಡೆ ಬೆಂಕಿಯು ಹೀಗೆ ವ್ಯಾಪಿಸಿತು
ಇಸ್‌ಫಂದರಿಯಾದ ದೇಹದ ಮೇಲೆ ಧೂಳು ಎರಗಿತು
ರಣರಂಗದಿಂದ ಎಂತಹ ಧೂಳು ಅಡರಿತೆಂದರೆ
ಗೋರಿಯ ಚಾದರವು ತಲೆಯ ಮೇಲೆ ಬಿದ್ದಿತು
ಪ್ರತಿಯೊಂದು ಹರಿತ ಭಾಗದ ದೆಸೆಯಿಂದ ಗಾಳಿಯು
ಜೇಬಿನಲಿ ತುಂಬಿತು ಮತ್ತು ಸೆರಗಿನಲಿ ಕಿಡಿಗಳು
ಮುಳ್ಳಿನ ನಡುವಿನಿಂದ ಹಾದು ಹೋದರು ಕತ್ತಿಯ
ಹೆದರಿಕೆಯಿಂದ ಹೃದಯದ ಒಳಗೆ ಜೀವವು ಕಂಪಿಸಿತು

ಮುಳ್ಳಿನ ಹಾದಿಯ ನಡುವಿನಿಂದ ಕ್ರಮಿಸುವವರು ಖಡ್ಗದ ಭಯದಿಂದ ಹೃದಯದ ಒಳಗೆ ಗುಂಡಿಗೆಯು ಹರಿದು ಹೋಯಿತು. ಎಷ್ಟೆಂದರೆ ಈ ನಾಶವಾದ ಬದುಕನ್ನು

ಹೊಂದಿದವರು ಮತ್ತು ನತದೃಷ್ಟ ದಿನಗಳ ಒಡೆಯರು ಆನೆಯಂತಹ ಸಂಕಷ್ಟದಿಂದ ತೊಡಗಿಕೊಂಡ ಜನರು ಶಿಕಾರಿಯ ನಿರೀಕ್ಷೆಯಲ್ಲಿರುವ ಹಸಿದ ಸಿಂಹದಂತೆ ಮೈದಾನ ಮತ್ತು ಅರಣ್ಯಗಳಲ್ಲಿ ಅಲೆದಾಡುತ್ತಿದ್ದರು. ಶೋಧನೆ ಮತ್ತು ತಲಾಶಿನ ಸಲುವಾಗಿ ಕಾಡು ಮೇಡುಗಳಲ್ಲಿ ಓಡುತ್ತಿರುವಂತೆ ಧೈರ್ಯದ ರೀತಿಯಲ್ಲಿ ಒರೆಯಿಂದ ಹೊರತೆಗೆದು ಧೂಳು ಮತ್ತು ಕೆಸರನ್ನು ಪರಾಕ್ರಮ ಹಾಗೂ ವೀರಾವೇಶದ ವೈಯಾರದ ವಧುವಿನ ರಂಗಿನಂತೆ ಮತ್ತು ಸ್ಫುರದ್ರೂಪಿ ಉನ್ನತ ಕಾಯದಿಂದ ಕೂಡಿದ ಅಲಂಕೃತ ಅಪ್ಸರೆಯಂತಹ ಮೋರೆಯನ್ನು ಉಳ್ಳ ಸುಂದರಿಯ ಬಣ್ಣದ ಯೋಗ್ಯತೆಯಂತೆ ಸೂಕ್ತ ಅನ್ವೇಷಣೆ, ಶೋಧನೆ ಮತ್ತು ಅಪಾರ ಪ್ರಯತ್ನಗಳ ದೆಸೆಯಿಂದ ಕೆಲವು ಸವಾರರು ಮತ್ತು ಪದಾತಿ ದಳದವರು ಗಾಯ ಮತ್ತು ನೋವಿನ ರಕ್ತವನ್ನು ಮಣ್ಣಲ್ಲಿ ಬೆರಸಿ ಅರಣ್ಯ ಮತ್ತು ಮೈದಾನದ ಮರಳುಗಾಡಿನ ಪ್ರದೇಶ ಒತ್ತುವರಿಯಾಗಿ ಯುದ್ಧ ಮತ್ತು ಅಸೂಯೆ ಪಡುವಂತಹ ಶೌರ್ಯವನ್ನು ಹೊಂದಿದಂತಹ ಪರಾಕ್ರಮಿಗಳ ಕಣ್ಣಿನಲ್ಲಿ ಖ್ಯಾತಿಯನ್ನು ಹೊಂದಿದರು. ಒಟ್ಟಾರೆ ಈ ದೈವ ಪ್ರೀತಿ ಬೆಂಬಲದ ಸುಪ್ರಸಿದ್ಧ ವೀರರು ಬಲಾಢ್ಯ ಪರಾಕ್ರಮವನ್ನು ಹೊಂದಿದವರು ಶತ್ರುಗಳನ್ನು ನಾಶ ಮಾಡುವವರಿದ್ದರು. ರಾಜಮರ್ಯಾದೆಯ ಬೆಂಬಲಿಗರು ಮತ್ತು ಬಾದಶಹನ ಕಡೆಯಿಂದ ಪರಾಕ್ರಮದ ಗೌರವವನ್ನು ಪಡೆದಿದ್ದು ನಾಸ್ತಿಕರನ್ನು ಪಡೆದಿದ್ದು ಚಕೋರನನ್ನು ತನ್ನ ಹಿಡಿತಕ್ಕೆ ಪಡೆಯುವ ಸಲುವಾಗಿ ಎತ್ತರಕ್ಕೆ ಹಾರುವ ಗರುಡಪಕ್ಷಿಯಂತೆ ಓಡುತ್ತಾ ಬಾಣವನ್ನು ಬಿಡುತ್ತಾ ರಭಸದ ಗಾಳಿಯೊಂದಿಗೆ ಕತ್ತಿವರಸೆಯ ಚಮತ್ಕಾರವನ್ನು ತೋರುತ್ತಾ ನಾಸ್ತಿಕರು ಮತ್ತು ಯುದ್ಧಕೋರ ದುರುಳರ ಶಿರಗಳನ್ನು ಹಣ್ಣಿನೋಪಾದಿಯಲ್ಲಿ ಕತ್ತರಿಸುತ್ತಾ ಹೇಸಿಗೆಯೊಂದಿಗೆ ಕೂಡಿದ ದೇಹಗಳ ವೃಕ್ಷಗಳಿಂದ ರಭಸವಾದ ಬಿರುಗಾಳಿಯ ದೆಸೆಯಿಂದ ಕೆಳಗೆ ಬಿದ್ದ ಹಣ್ಣುಗಳ ರೀತಿಯಲ್ಲಿ ನೆಲದ ಮೇಲೆ ಬಿದ್ದು ಗುಡ್ಡೆಯಾಗಿದ್ದವು. ಸರ್ವನಾಶದ ಮಣ್ಣಿನ ಮೇಲೆ ಚಾಚಿದ್ದ ಆ ದೇಹಗಳು ಮತ್ತು ಮುರಿದ ಜನರು ಇಸ್ಲಾಮೀ ಯುದ್ಧದ ಸಾಂಕ್ರಾಮಿಕ ರೋಗದಿಂದ ಬಿಡುಗಡೆಯನ್ನು ಪಡೆದಿದ್ದರು. ಯುದ್ಧರಂಗದಿಂದ ಪರಾರಿಯಾಗುವ ಶಕ್ತತೆಯನ್ನು ಪಡೆದಿದ್ದರು. ಮರ್ಯಾದೆ ಮತ್ತು ಗೌರವದ ಮೋರೆಯನ್ನು ನೀಚತನ ಮತ್ತು ಅವಮರ್ಯಾದೆಯ ಮಣ್ಣಿನಿಂದ ಕಲುಷಿತವಾದ ನಿರ್ಲಜ್ಜ ಮತ್ತು ದುಃಖದ ಧೂಳನ್ನು ಬಳಿದುಕೊಂಡು ತಮ್ಮ ಅಸ್ತಿತ್ವವನ್ನು ಸ್ವತಃ ನಾಶ ಮಾಡಿಕೊಂಡು ವಾಗ್ದಾನ ಮತ್ತು ನಂಬಿಕೆಯ ಪಂಜರದಿಂದ ಪರಿಸರವನ್ನು ತ್ಯಜಿಸಿ, ಪರಾರಿಯಾಗಿ ಅನಾಮಧೇಯತೆಯ ತೆರೆಯನ್ನು ಎಳೆದರು. ಶರ್ಜಾಖಾನನು ಈ ವಿಜಯವನ್ನು ಸ್ಪಷ್ಟವಾದ ಹೊಳೆಯುವ ಮತ್ತು ರೌದ್ರತೆಯಿಂದ ಕೂಡಿದ ಸೂರ್ಯನಂತೆ ವ್ಯಕ್ತವಾದ. ಯುದ್ಧ ರಂಗದಲ್ಲಿ ವೀರರ ತಲಾಶು ಮತ್ತು ಯುದ್ಧ ರಂಗದಲ್ಲಿ ತೊಡಗಿದ್ದ ಧರ್ಮಯೋಧರ ಬಲಿಗಳನ್ನು ತಮ್ಮ ತಮ್ಮ ಮೂಲಗಳಲ್ಲಿ ಅಡಗಿಸಿಡಲು ಮತ್ತು ಅಪೇಕ್ಷಿತ ಪ್ರಿಯಕರನ ಆಗಮನದ

ವೀಕ್ಷಕರನ್ನಾಗಿ ಕಂಡ. ಹೀಗಾಗಿ ಬೆಂಬಲಿಗ ವೀರರಿಗೆ ಉತ್ತೇಜನವನ್ನು ನೀಡುವ ಸಲುವಾಗಿ ಅವರನ್ನು ಉದ್ದೇಶಿಸಿ ನುಡಿದ, ಅಕ್ಬರ್ ಬೇಗ್ ರಭಸದ ವೇಗದ ದಾರಿಯಲ್ಲಿ ವೇಗವಾಗಿ ಓಡುವ ಕುದುರೆಗಳನ್ನು ತೆಗೆದುಕೊಂಡು ಇಸ್ಲಾಮಿನ ಪ್ರವಚನಗಳು ಮತ್ತು ಧರ್ಮದ ನಿರ್ದೇಶನಗಳು ಹಜರತ್ ಮೊಹಮ್ಮದ್ ಮುಸ್ತಫಾ ಸಲ್ಲಲ್ಲಾಹುವ ಸಲ್ಲಮ್ ಅಂದರೆ ಪ್ರವಾದಿಗಳು ಆದೇಶಿಸಿ ಜಾರಿಗೊಳಿಸಿ ಮಲ್ನಾರ್‌ನ ಕೋಟೆಯನ್ನು ಔನ್ನತ್ಯಕ್ಕೆ ಏರಿಸಿದ. ಇದು ಪರಾಕ್ರಮ ಮತ್ತು ವೀರಾವೇಶ ಹಾಗೂ ವೈಭವದ ಒಡೆಯನಾಗಿದ್ದ ಯುದ್ಧಕೋರ ವೀರರು ಯುದ್ಧ ಹಾಗೂ ಪರಿಶ್ರಮ ಮತ್ತು ತಲಾಶು ಹಾಗೂ ಅನ್ವೇಷಣೆಯ ಕಣಿವೆಯಲ್ಲಿ ಸುತ್ತಾಡುತ್ತಾ ಬಹಾದುರ್ ವೀರರು ಝುಫರ್ ನಿಶಾನಿ ಖಾನನ ಆದೇಶಗಳ ಮೇರೆಗೆ ಆನಂದತುಂದಿಲರಾಗಿ ಅತ್ಯಂತ ಸಂತೋಷ ಮತ್ತು ನೆಮ್ಮದಿಯಿಂದ ವಿಜಯಿಗಳಾಗಿ ಆಕಾಶದಷ್ಟು ಎತ್ತರದ ಗೋಡೆಗಳನ್ನು ಹೊಂದಿದ ಕೋಟೆಯ ಗೋಡೆಗಳ ಮೇಲೆ ಸೈನಿಕರನ್ನು ಓಡಿಸಿದ. ಈ ಸಂದರ್ಭದ ನಡುವೆ ಆ ವಕ್ರ ನಡಿಗೆಯ ಮೋಸಗಾರ ಮತ್ತು ಕಪಟತನದ ಒಡೆಯನು ನೆಪಗಳನ್ನು ಸೃಷ್ಟಿಸಿದ. ಕ್ರೌರ್ಯಮತ್ತು ಹಿಂಸೆಯೇ ಅವನ ಕರ್ತವ್ಯವಾಗಿತ್ತು. ಅವನ ನಡತೆಯು ಇಡೀ ಯುದ್ಧರಂಗದ ಲೋಕದಲ್ಲಿ ದ್ವೇಷ ಮತ್ತು ಅಸೂಯೆಯನ್ನು ಹರಡುವುದಾಗಿತ್ತು.

ಅಂಧಃಕಾರ ಹರಡುವವನಂತೆ ಅವನು ಬಂದ ಎಂದು
ನೀವು ಅನ್ನುವಿರಿ ಭಾವಿಯಲ್ಲಿ ಬದಲಿಗೆ
ಹೆಬ್ಬಾವಿನ ಹೆಡೆಯಾಡುತ್ತಿತ್ತು
ಇಷ್ಟೊಂದು ಗಾಢ ಅಂಧಃಕಾರ ಮತ್ತು ಇಕ್ಕಟ್ಟಾದ
ಶಿಲೆಗಳಿಂದ ಆವೃತ ಎಂದರೆ ಹತ್ತಾರು ಹರದಾರಿ
ಗಳವರೆಗೂ ಸುತ್ತ ಮುತ್ತಲೂ ಜಾನುವಾರುಗಳೂ
ಕೂಡಾ ಸುಳಿಯುವುದಿಲ್ಲ
ಶಂಕೆಯ ಕಲ್ಪನೆಯ ದೂರವನ್ನು ಕ್ರಮಿಸುವ
ಜಾಗದಿಂದ ನಡೆಯುವುದು ಕಷ್ಟ ಸಾಧ್ಯ.
ಆಲೋಚನೆ ಮತ್ತು ಕಲ್ಪನೆಯ ಹೆಜ್ಜೆಯನ್ನು
ಕೊಚ್ಚೆಯಲ್ಲಿ ಹಾಕುವಂತಿತ್ತು

ಆ ಸ್ಥಳದಲಿ ಗುಮಾನಿ ಮತ್ತು ಕಲ್ಪನೆಯನ್ನು ಕ್ರಮಿಸುವುದು ಅತ್ಯಂತ ಕಠಿಣವಾದ ಕೆಲಸವಾಗಿತ್ತು. ಆದರೆ ಆಲೋಚನೆಗಳು ಮತ್ತು ಕಲ್ಪನೆಗಳ ಹೆಜ್ಜೆಗಳು ಕೊಚ್ಚೆಯಲ್ಲಿ ಹಾಕುವುದಂತಾಗಿತ್ತು. ವಿಜಯ ಮತ್ತು ಸಾಫಲ್ಯತೆಯನ್ನು ಜೊತೆಯಲ್ಲಿ ಇಡುವಂತಹ ಖಾನನು ನೆರವನ್ನು ತನ್ನ ಜೊತೆಯಲ್ಲಿಟ್ಟುಕೊಂಡು ಅಭಿಮಾನದ ಹೃದಯ ಮತ್ತು ಬುದ್ಧಿಯನ್ನು ಹೊಂದಿದವನಾಗಿದ್ದ. ಜೀವಹತ್ಯೆ ಮತ್ತು ಜೀವ ರಕ್ಷಣೆಯ ಜೊತೆಯಲ್ಲಿ

ವಿನಃ ಬೇರೆ ಯಾವ ಉದ್ದೇಶವನ್ನೂ ಹೊಂದಿರಲಿಲ್ಲ.ಭಗವಂತನ ಇಚ್ಛೆಯ ಅನುಸಾರ ಈ ನಿಟ್ಟಿನಲ್ಲಿ ಮುಂದುವರೆದ. ಆ ಅದ್ಭುತವಾದ ಮತ್ತು ಯಾತನಾಮಯ ಘಟನೆಯ ಕಾರಣದಿಂದ ಸೈನಿಕರ ನಡುವೆ ಒಂದು ದೊಡ್ಡ ಗಲಭೆ ಮತ್ತು ಗಲಾಟೆಯು ಮೂಡಿತ್ತು ಮತ್ತು ಅತೀವ ಭಯಾನಕ ಮತ್ತು ಕಳವಳದಿಂದ ಕೂಡಿದ ವಿಚಿತ್ರ ಪರಿಸ್ಥಿತಿಯು ಆ ಪರಿಸರವನ್ನು ಪ್ರಭಾವಿಸಿತ್ತು. ಸುಪ್ರಸಿದ್ಧ ಸೈನಿಕರು ಮತ್ತು ವೀರ ಶೂರ ಸರದಾರರು ಯುದ್ಧರಂಗದ ಕುದುರೆ ಸವಾರರು ಕೋಟೆಯನ್ನು ವಿಸ್ತರಿಸಿ ಪ್ರಾಣಾರ್ಪಣೆಯ ಕ್ಷೇತ್ರದಲ್ಲಿ ಶಿಸ್ತುಬದ್ಧವಾಗಿ ಹಾಜರಿದ್ದರು. ಆ ಕೋಟೆಯ ಸಂಪೂರ್ಣ ಗಮನವನ್ನು ಬೇರೆ ಕಡೆ ತಿರುಗಿಸಲಾಯಿತು ಮತ್ತು ಯುದ್ಧರಂಗದಲ್ಲಿ ಯುದ್ಧದ ಬೆಂಕಿಯನ್ನು ನಂದಿಸಿ ಆ ಪರ್ವತದ ಸುತ್ತಮುತ್ತಲೂ ಎಲ್ಲರೂ ಕೂಡಾ ಜಮೆ ಆದರು.

ಈ ವಿಷಯಗಳು ಮತ್ತು ಅದರ ಪರಿಣಾಮಗಳಿಂದ ಪ್ರಭಾವಿತರಾದ ವ್ಯಕ್ತಿಗಳಿಗೆ ವಿವಿಧ ರೀತಿಗಳಲ್ಲಿ ತಲಾಶು ಮಾಡಲಾಯಿತು ಹಾಗೂ ಅವರನ್ನು ಹುಡುಕಿ ಹೊರತೆಗೆದ ಈ ಹೃದಯವಿದ್ರಾವಕ ವಿಷಯವು ಭೂಮಿಯಲ್ಲಿ ವೇಗವಾಗಿ ಹರಡಿತು. ಪ್ರಪಂಚದ ಮೈದಾನವನ್ನು ತೀವ್ರ ವೇಗದಲ್ಲಿ ಕ್ರಮಿಸುವ ಸಂದೇಶವಾಹಕರು ನ್ಯಾಯಪರತೆ ಮತ್ತು ಸತ್ಯನಿಷ್ಠತೆಯಲ್ಲಿ ಅದ್ವಿತೀಯ ಸ್ಥಾನವನ್ನು ಪಡೆದಿದ್ದ ಹಜರತ್ ಬಾದಶಹ ಘಾಝಿಯವರ ಕಿವಿಗಳವರೆಗೆ ತಲುಪಿಸಿದರು. ವ್ಯವಸ್ಥೆಯಲ್ಲಿ ತೊಡಕನ್ನು ಉಂಟು ಮಾಡುವ ಈ ಸುದ್ದಿಯಿಂದ ಅಸಮಾನ್ಯವಾದ ರಾಜ್ಯಾಡಳಿತದ ಅಭಿಮಾನಿಗಳು ಮತ್ತು ಶುಭಾಕಾಂಕ್ಷಿಗಳು ಹಾಗೂ ಸಾವಿರಾರು ಮಂದಿ ಕರುಣೆ ಮತ್ತು ದಯಾಳುತನದ ಔದಾರ್ಯವನ್ನು ಪಡೆದು ರಾಜ್ಯಾಡಳಿತ ಮತ್ತು ವಿಜಯ ಪ್ರಾಪ್ತಿಯಲ್ಲಿ ಸಹಬಾಗಿಗಳಾದ ಅನೇಕರು ಯುದ್ಧರಂಗದಲ್ಲಿ ಧೃಡ ಹೆಜ್ಜೆಗಳನ್ನು ಊರಿದರು. ಅಂತಹ ಅನೇಕ ವಿಧದ ಕರುಣೆ ಮತ್ತು ಗೌರವದ ಮೂಲಕ ಪ್ರಶಂಸೆಯನ್ನು ಪಡೆದ ವಿವಿಧ ಜನರು ಸಮಾಲೋಚನೆಯ ಮೂಲಕ ಸೈನ್ಯದ ಗಾಳಿ ಸವಾರರ ವೇಗದ ಪ್ರಯಾಣ ಮತ್ತು ಗುರಿ ತಲಪುವ ಶರಾಬು ಖಾನೆಯ ಪಾಣಪ್ರಿಯ ಜನರಿಗೆ ಹುಕುಮ್ ನೀಡಿದ್ದೇನೆಂದರೆ ಶೀಘ್ರವಾಗಿ ವಿನಾಶವಾಗುವ ವೈಭವ ಮತ್ತು ವೈಭೋಗದ ರಸ್ತೆಯ ಅರ್ಹತೆಯ ವಿಪತ್ತು ಸಮೀಪವಾಗುತ್ತಿದೆ. ಮತ್ತು ದೈವ ಕೊಡುಗೆಯ ಬಾದಶಹರವರ ಪ್ರಕಾಶಮಯವಾದ ಅದೃಷ್ಟದ ನಕ್ಷತ್ರವು ಆ ನಿಟ್ಟಿನಲ್ಲಿ ಮುಂದುವರೆಯುವಂತೆ ಮಾಡಿ ವಿಶ್ವವಿಖ್ಯಾತ ಧ್ವಜವನ್ನು ಸಫಲತೆ ಮತ್ತು ವಿಜಯದ ಹೆಜ್ಜೆಗಳಲ್ಲಿ ಔನ್ನತ್ಯೆಗೆ ಏರುವಂತೆ ಮಾಡುವುದು. ಈ ನಂಬಿಕೆಯ ಫಲಿತಾಂಶವು ಒಳ್ಳೆಯ ರೀತಿಯಲ್ಲಿ ಆಗುವುದಿಲ್ಲವೆಂದರೆ ಯಾವುದೇ ಅರ್ಪಣಾ ಭಾವದಿಂದ ಬಲಿಯಾಗಲು ಸಿದ್ಧರಾಗಿರುವ ಮಂತ್ರಿಗಳು ಮತ್ತು ಫಲಾಪೇಕ್ಷೆ ಇಲ್ಲದ ಸರದಾರರು ಮುಂದೆ ಬರಲಿ. ರುಸ್ತುಮ್‌ನಂತಹ ಪೈಲ್ವಾನರನ್ನು ಮೈದಾನದಲ್ಲಿ ಸೋಲಿಸುವ ಆಲೋಚನೆಗಳಿಂದ ವಿಜಯ ಮತ್ತು

ಸಫಲತೆಯ ವಧುವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಸಜ್ಜನಿಕೆ ಮತ್ತು ಸಭ್ಯತೆಯ ಸೇವೆಯಲ್ಲಿ ಈ ಮಾತನ್ನು ತಲುಪಿಸುವುದೇನೆಂದರೆ ಒಂದು ವೇಳೆ ರಾಜ್ಯಾಡಳಿತವು ಸುಲ್ತಾನರ ರಾಜ್ಯಭಾರ ಮತ್ತು ಬಾದಶಹರವರ ಬೆಂಬಲಿಗರು ಮತ್ತು ಆಯಾ ಆಡಳಿತದ ಶುಭಾಕಾಂಕ್ಷಿಗಳು ಗುಲಾಮಿತನವನ್ನು ಒಪ್ಪುವುದಾದಲ್ಲಿ ಈ ಮಾತನ್ನು ಬೆಂಬಲಿಸುತ್ತಾರೆ. ಈ ಸಂಕಷ್ಟ ಮತ್ತು ಬಹುಮುಖ್ಯವಾದ ಕರ್ತವ್ಯದ ಸಮಸ್ಯೆಯನ್ನು ಪರಾಕ್ರಮದ ಹಸ್ತದಿಂದ ವಿಶಾಲವಾಗಿ ಮಾಡಲಿ. ಈ ಪರಿಸ್ಥಿತಿಯು ಅಸಂಭವವಾದ ಸಮಸ್ಯೆಯ ಬಾಗಿಲ ಬೀಗವನ್ನು ಹಿರಿತನ ಮತ್ತು ಮುತ್ಸದ್ದಿತನದ ಕೀಲಿಕೈಯಿಂದ ತೆರೆಯಲಿ ಮತ್ತು ಆ ಸೇವೆಗಳನ್ನು ತೋತಿಯಾದ ಸುರ್ಮಾದ ಅದೃಷ್ಟವಂತ ಹಾಗೂ ದಿವ್ಯ ವೈಭವದ ನೋಟವನ್ನು ಅತಿ ಹೆಚ್ಚು ಪ್ರಕಾಶಮಯವನ್ನಾಗಿ ಮಾಡಲಿ. ಒಟ್ಟಾರೆ ಈ ಸುಗಂಧಪೂರಿತ ಮಣ್ಣಿನ ದೈನ್ಯತೆಯ ಕಾರಣದಿಂದ ಅವರ ದರ್ಜೆಯ ಚಿನ್ಹೆಗಳನ್ನು ಚೆನ್ನಾಗಿ ಅಲಂಕೃತಗೊಳಿಸಿ ತಾಜಾತನದಿಂದ ಕಂಗೊಳಿಸುವಂತೆ ಮಾಡಲಿ.

ಖಂಡಿತವಾಗಿಯೂ ಅಸೂಯೆ ಮತ್ತು ಅಹಂಕಾರ ಹಾಗೂ ಗರ್ವದ ಆಲೋಚನೆಗಳನ್ನು ಹೊಂದಿದ ಮತ್ತು ಅನೇಕ ಜನರು ಪ್ರಾಣವನ್ನು ಬಲಿಯನ್ನಾಗಿ ಅರ್ಪಿಸುವ ಪುರಾತನ ಸೇವೆಯ ವ್ಯಕ್ತಿಗಳ ಅತ್ಯಾಕರ್ಷಕ ಪ್ರೌಢಿಮೆ, ಭವ್ಯತೆ ಹಾಗೂ ಎಲ್ಲಾ ಲಕ್ಷಣಗಳಿಂದ ಕೂಡಿದ ಅರಳಿದ ಮೋರೆಗಳನ್ನು ಹಂಗಿಸುವಿಕೆಯ ಉಗುರುಗಳಿಂದ ಗಾಯಗೊಳಿಸಲಿ. ಅಸೂಯೆ ಹಾಗೂ ಕಪಟತನವನ್ನು ಹೊಂದಿದ ಜನರು ಅಪಾರ ನಂಬಿಕೆಯ ಅರ್ಪಣಾ ಭಾವದವರ ಹೆಚ್ಚುಗಾರಿಕೆ ಮತ್ತು ವೈಭವದ ಅಮೂಲ್ಯ ಮುತ್ತುರತ್ನಗಳನ್ನು ಮತ್ತು ನಂಬಿಕೆಯ ಅಟ್ಟದ ಮೇಲೆ ಕೆಳಗೆ ಹಾಕಲಿ. ಒಟ್ಟಾರೆ ಹಜರತ್ ಬಾದಶಹ ಫಾಝಿಯವರು ಎಲ್ಲಾ ಹೃದಯಗಳ ಸೂರ್ಯನಂತೆ ಕೇಂದ್ರಬಿಂದುವಾಗಿದ್ದಾರೆ. ಜಿಹಾದ್ ಧರ್ಮ ಯುದ್ಧದ ಎಲ್ಲಾ ಸಲ್ಲಕ್ಷಣಗಳನ್ನು ಪಡೆಯುವ ಜನಾಬ್ ಖೈರುನ್ನೀಸಾರವರ ಪ್ರಮುಖ ಸುನ್ನ ಮತ್ತು ಕಡ್ಡಾಯ ಧಾರ್ಮಿಕ ಕಾರ್ಯಗಳ ಪೈಕಿ ಮುಖ್ಯವಾದ ಕರ್ತವ್ಯವಾಗಿದೆ. ಈ ಸಮುದಾಯದ ಇಚ್ಛೆಯ ವೃಕ್ಷವು ಸತ್ಯನಿಷ್ಠೆಯಿಂದ ಕೂಡಿದ ಅಂಗೀಕಾರದ ಉದ್ಯಾನವನದಲ್ಲಿ ದೊರಕುವ ಸ್ವತಃ ತನ್ನ ಸಿರಿವಂತಿಕೆ ಮತ್ತು ಮುತ್ಸದ್ದಿತನದಿಂದ ಶಾಬಾನುಲ್ ಮುವಜ್ಜಿಮ್ ಮಾಹೆಯ ಚಾಂದ್ರಮಾನ ದಿನಾಂಕ ಒಂದು ಸಾವಿರದ ಎಪ್ಪತ್ತಮೂರನೇ ಹಿಜರಿ ಶಕೆಯಂದು ಅಲ್ಲಾಹನ ಬೆಂಬಲ ಮತ್ತು ನೆರವಿನಿಂದ ಮುತ್ತು ರತ್ನಗಳಿಂದ ಕೂಡಿದ ಜವಾಹಿರ್ ಸುರ್ಮಾವನ್ನು ಕಣ್ಣಿಗೆ ಹಚ್ಚಿ ಕಾಂತಿಯುಕ್ತ ಮತ್ತು ಪ್ರಕಾಶಮಯವನ್ನಾಗಿ ಮಾಡಿಕೊಂಡರು. ರಾಜ್ಯಭಾರದ ಉನ್ನತವಾದ ಧೈರ್ಯ, ರಾಜ್ಯಾಡಳಿತದ ಬಿಗಿಯಾದ ಭದ್ರತೆಯನ್ನು ಎತ್ತರದ ಧೈರ್ಯದ ರೆಕ್ಕೆ ಮತ್ತು ರೋಮದ ಕೆಳಗಡೆ ಇಟ್ಟು ಆಕಾಶದ ಉದ್ದಗಲಕ್ಕೂ ದೌಡಾಯಿಸುವ ಸೂರ್ಯನು ಅಂದರೆ ಪ್ರತಿ ಬೆಳಗಿನಂದು ಪೂರ್ವದಿಂದ ಉದಯಿಸಿ ಜನತೆಗೆ ಬೆಳಕು ಮತ್ತು ಪ್ರಕಾಶವನ್ನು ನೀಡಲು ಹಾಜರಾಗುತ್ತಾನೆ.

ಆಕಾಶದ ಉದ್ದಗಲಕ್ಕೂ ಪರಿಭ್ರಮಣವನ್ನು ಮಾಡುವ ಚಂದ್ರನಂತೆ ಅಂದರೆ ಒಂದು ಹಂತದಿಂದ ವಿಶ್ವದ ಜನತೆಗೆ ತೇಜಸ್ವೀ ಕಿರಣಗಳನ್ನು ನೀಡುವ ಸಲುವಾಗಿ ನಿರಂತರ ಚಲನೆಯಲ್ಲಿರುತ್ತಾನೆ.

ಪ್ರಕೃತಿಯ ಅಪಾರ ಶಕ್ತಿಯ ರೂವಾರಿಯಾದ ಆ ದೇವನು ವಿಜಯ ಮತ್ತು ಸಫಲತೆಯ ಪ್ರಾಪ್ತಿಯನ್ನು ಹೊಂದಿದ ಅಲೆಗ್ಸಾಂಡರ್ ಬಾದಶಹನಂತಹ ಸಿಂಹಾಸನವನ್ನು ಹೊಂದಿದ ಅರಿಸ್ಟಾಟಲ್‌ನಂತಹ ಚಿಂತನೆಯ ಮಾಲೀಕನು ದುಃಖ ಮತ್ತು ಆಪತ್ತಿನಿಂದ ಮುಕ್ತನಾಗಿ ಅಧಿಕಾರದ ಮೇಲೆ ನಿಯಂತ್ರಣವನ್ನು ಸಾಧಿಸಲಿ. ಯುದ್ಧಭೂಮಿಯಲ್ಲಿ ಸ್ಥಿರ ಹೆಜ್ಜೆಗಳನ್ನು ಹೊಂದಿದವರ ಹೆಸರು ಮತ್ತು ವಿಶ್ವವಿಖ್ಯಾತ ಬಾದಶಹನ ವಿರುದ್ಧ ಯುದ್ಧಭೂಮಿಯಲ್ಲಿ ಹೋರಾಟ ಮಾಡುವವರತ್ತ ಬರೆದ ವಿಶ್ವದ ಪ್ರಭುವಿನ ವಿಜಯ ಪ್ರಾಪ್ತಿ ಮತ್ತು ಸಫಲತೆಯ ಬೀಜವನ್ನು ಆಕಾಶದ ಎತ್ತರಕ್ಕೆ ಏರಿಸುವ ಆಡಳಿತದ ಮೇಲೆ ಹಿಡಿತವನ್ನು ಹೊಂದಿದ ವೀರ ಪರಾಕ್ರಮಿಗಳ ಸಲುವಾಗಿ ಕ್ರೋಧ, ಕ್ಲೇಷ ಮತ್ತು ಅವಮಾನದ ಬೀಜಗಳನ್ನು ಬಿತ್ತಲು ಆ ದೈವ ಬೆಂಬಲದಿಂದ ದಿಗ್ವಿಜಯ ಮತ್ತು ಸಾಫಲ್ಯತೆಯ ಕ್ಷೇತ್ರವನ್ನು ಹೊಂದಿದವರಿಂದ ಸಾಧ್ಯವಾಗಲಿಲ್ಲ. ಆಕರ್ಷಕ ಘಟನೆಗಳಿಂದ ಭೂಮಿಯ ನಗ್ನ ಕ್ಷೇತ್ರವನ್ನು ವಸಂತದ ಆಗಮನದಿಂದ ಹಚ್ಚಹಸಿರಿನಿಂದ ಶೃಂಗರಿಸುತ್ತಾ ಬೆಳಗಿನ ತಂಗಾಳಿಯ ಶೃಂಗರಿಸುವ ಮಹಿಳೆಯು ವೃಕ್ಷಗಳ ಮೇಲೆ ಹಬ್ಬಿದ ಬಳ್ಳಿಗಳನ್ನು ಮಂಜಿನ ಹನಿಗಳಿಂದ ಮತ್ತು ಮುತ್ತಿನಂತೆ ಹೊಳೆಯುವ ಇಬ್ಬನಿಯಿಂದ ಶೋಭಾಯಮಾನವಾಗಿ ಮಾಡಿತು. ಕೊಂಬೆ ರೆಂಬೆಗಳು ಪರಸ್ಪರ ಮಿಳಿತವಾಗಿ ಆಲಿಂಗನವನ್ನು ಮಾಡುತ್ತಾ ಪ್ರಿಯತಮೆಯಂತೆ ಅಮಲೇರಿಸಿ ಆ ಅವಸ್ಥೆಯಲ್ಲಿ ಮುಂದುವರೆಸಿತು. ಕೊಂಬೆ ರೆಂಬೆಗಳು ಒಂದರೊಡನೆ ಒಂದು ಜೋಡಿಗಳಾಗಿ ಪ್ರೇಮಿಗಳಂತೆ ನಿರಂತರವಾಗಿ ಶೋಭೆ ಮತ್ತು ಅಲಂಕಾರದಿಂದ ಕಂಗೊಳಿಸುತ್ತಾ ಆ ಮೂರ್ಖ ರಾಜನ ರಾಜ್ಯವನ್ನು ಬುಡ ಸಮೇತ ಕೀಳುವ ಸಲುವಾಗಿ ಅತ್ಯಂತ ಕೋಪಾವಿಷ್ಟರಾಗಿ ಬಂಕಾಪುರದ ಕೋಟೆಯ ಕಡೆಯಿಂದ ಉನ್ನತವಾದ ಧ್ವಜಗಳನ್ನು ಮೇಲಕ್ಕೆ ಹಾರಿಸಿದರು. ಶರ್ಜಖಾನನು ಆ ಸುದ್ದಿಯನ್ನು ಕೇಳಿ ಆರೋಗ್ಯವಂತ ವಿಶಿಷ್ಟ ಮನಃಸ್ಥಿತಿಯ ಆಗಮನದಿಂದ ಆನಂದ ಮತ್ತು ನೆಮ್ಮದಿಯ ಇಡುಗಂಟು ಎಂದು ತಿಳಿದು ಅನಾರೋಗ್ಯ ಮತ್ತು ದುಃಖದ ಮಣ್ಣು ಮತ್ತು ವೃದ್ಧಾಪ್ಯದ ಕೊಚ್ಚೆಯಲ್ಲಿ ಮುಳುಗಿ ಹೋಗಿದ್ದ ಆರೋಗ್ಯದ ನೀರು ಮತ್ತು ಆರೋಗ್ಯದ ಸಾಬೂನಿನಿಂದ ಶುಭ್ರಗೊಳಿಸಿದ.

ಆಕಸ್ಮಿಕವಾಗಿ ಎರಗುವ ಸಿಡಿಲು ಮತ್ತು ಧ್ವಂಸಗೊಳಿಸುವ ಬಿರುಗಾಳಿಯಂತೆ ಸೋಂದಾ ಕೋಟೆಯ ಗೋಡೆಗಳನ್ನು ಶರಣಾಗಿಸಿ ವಿಜಯವನ್ನು ಪಡೆಯುವ ಉದ್ದೇಶದಿಂದ ವಿಶಾಲವಾದ ರಾಜ್ಯವನ್ನು ಸಂಪದ್ಭರಿತವಾದ ನಗರಗಳಿಂದ ಕೂಡಿದ್ದ

ವಿಶಾಲವಾದ ರಾಜ್ಯದತ್ತ ಕಣ್ಣು ಹಾಯಿಸಿದ. ಆ ದೇಶದ ಪರ್ವತಗಳು ಮತ್ತು ಅರಣ್ಯಗಳು ಸರ್ವವೂ ಬೆಳ್ಳಿ ಮತ್ತು ಬಂಗಾರದ ಗಣಿಗಳಾಗಿವೆ ಹಾಗೂ ಅದರ ಉದ್ಯಾನವನಗಳು ಯುದ್ಧಭೂಮಿಯ ತೋಟಗಳಂತಿವೆ. ಸರ್ಪದಂತಹ ಸ್ವಭಾವವನ್ನು ಹೊಂದಿದ ಚೇಳಿನಂತಹ ನಡತೆಯನ್ನು ಹೊಂದಿದ ಕಟುಕನಂತಹ ಸ್ವಭಾವವನ್ನು ಹೊಂದಿದ ಕ್ರೂರ ಮತ್ತು ಶೋಷಕ, ವಂಚಕನ ಕಡೆಯಿಂದ ಯುದ್ಧದ ಸಾಮಗ್ರಿಗಳ ತಯಾರಿಯ ಸಲುವಾಗಿ ನಾಯಕರು ಆ ಕೋಟೆಯ ಒಳಬಾಗದಲ್ಲಿ ಸೇರಿಕೊಂಡಿದ್ದರು. ಆ ಘಟನೆಯ ಸನ್ನಿವೇಶದ ಮೇಲೆ ಕಣ್ಣಾಡಿಸುತ್ತಾ ನರಿ ಮತ್ತು ಬಾಲ ಮುದುರಿ ಓಡುವ ಹೇಡಿಯಂತೆ ಹರಿದು ಮುಕ್ಕುವ ತೋಳದ ಭಯಾನಕ ಬೆದರಿಕೆಯ ದೆಸೆಯಿಂದ ದುಃಖದ ಹೆಸರಿನ ಬಿಲದಿಂದ ಹೊರ ಬರುವುದಿಲ್ಲ. ಅಂತಹ ತೀವ್ರವಾದ ಭಯವು ಆವರಿಸಿದಂತೆ ಆ ಕೋಟೆಯ ಆವರಣದಲ್ಲಿ ಸ್ಥಿರವಾದ ಮತ್ತು ಧೃಡವಾದ ನಿಲುವನ್ನು ಹೊಂದಿದ ಪ್ರಖ್ಯಾತ ಯೋಧರ ಮೇಲೆ ಅಪರಿಮಿತವಾದ ಮುತ್ತು ರತ್ನಗಳು ಹಾಗೂ ಸುಗಂಧ ದ್ರವ್ಯಗಳ ಮಳೆ ಕರೆದ. ಅತ್ಯಂತ ವೀರಾವೇಷದಿಂದ ಕೂಡಿ ಪಿತೂರಿ ಮತ್ತು ಅಗ್ನಿಯನ್ನು ತಂಪಾಗಿಸಿ ಅಶುದ್ಧ ಶತ್ರುವಿನ ಹಣೆಯನ್ನು ವಿನಾಶದ ಮಣ್ಣಿನಲ್ಲಿ ಬೆರಸುವ ಕ್ರಿಯೆಯಲ್ಲಿ ನೆರವು ಮತ್ತು ಬೆಂಬಲವನ್ನು ಪಡೆದ ಸೈನ್ಯವು ಹುತಾತ್ಮರು ಎಂಬ ಶರಬತ್ತಿನಿಂದ ಒಣತುಟಿಗಳನ್ನು ಹೊಂದಿದ. ಆ ಒಣ ತುಟಿಗಳನ್ನು ಒದ್ದೆಯಾಗಿಸುತ್ತಾ ಇಡೀ ವಿಶ್ವದ ಜನತೆಯ ಸಾದಾ ಮತ್ತು ಉತ್ತಮ ಜೊತೆಗಾರರು ಹಾಗೂ ವಿಶ್ವದ ಪ್ರಭುವಿನ ಕರುಣೆಯನ್ನು ಪ್ರತಿ ಗುಂಪಿನಲ್ಲಿ ಹಂಚಿ ಚಿರಂತನವಾದ ಸ್ವರ್ಗದತ್ತ ಮೆಲು ನಡಿಗೆಯಲ್ಲಿ ನಡೆದರು. ಶರ್ಜಾಖಾನನನ್ನು ತಮ್ಮೊಡನೆ ಕಂಡ ಯೋಧರು ಮತ್ತು ಪರಾಕ್ರಮಿಗಳಾದ ಶೂರರ ಜೊತೆಯಲ್ಲಿ ಪೊದೆಗಳ ನಡುವೆ ವಾಸ ಮಾಡುವ ಸಿಂಹದಂತೆ ಘರ್ಜನೆ ಮಾಡುತ್ತಾ ತೋಪು ಮತ್ತು ಬಂದೂಕುಗಳ ತುಪಾಕಿಯಿಂದ ಕೋಟೆಯ ಗೋಡೆಗಳನ್ನು ನೆಲಸಮ ಮಾಡಿದರು.

ಸಿಡಿಲಿನೋಪಾದಿಯಲ್ಲಿ ಕಂಡು ಬಂದ ಮೋಡದಿಂದ ರಕ್ತದ ಮಳೆಯು ಸುರಿದು ಭೂಮಿಯು ಕೊಚ್ಚೆಯಲ್ಲಿ ನೆನೆಯಿತು. ಹಾಗೂ ದುರ್ಗುಣದಿಂದ ಕೂಡಿದ ಪಿತೂರಿಕೋರರ ದೇಹಗಳಿಂದ ಶಿರಗಳನ್ನು ಬೇರ್ಪಡಿಸಿ ಕಲ್ಲು ಮತ್ತು ಇಟ್ಟಿಗೆಗಳ ನಡುವೆ ನೆಡಲಾಯಿತು ಮತ್ತು ಹೊಸ ಪ್ರಯತ್ನವಾಗಿ ಆ ಕೋಟೆಯ ಬುರುಜು ಮತ್ತು ಗೋಡೆಗಳನ್ನು ಅಸೂಯೆ ಪಡುವಂತೆ ಧೃಡವಾಗಿ ನಿರ್ಮಾಣ ಮಾಡಲಾಯಿತು. ದುಃಖ ಮತ್ತು ಆತಂಕದ ಆಲೋಚನೆಗಳನ್ನು ಕೊನೆ ಇಲ್ಲದ ದುಃಖದೊಡನೆ ಸಮಾಧಿ ಮಾಡಲಾಯಿತು. ಜೀರ್ಣವಾದ ರೆಂಬೆಗಳು ಸ್ವತಃ ಮುರಿದು ಬೀಳುವಂತೆ

ಸಿಂಹವನ್ನು ಆಕ್ರಮಿಸುವ ಮತ್ತು ಸಿಂಹವನ್ನು ಬೀಳಿಸುವ
ಯುವಜನರು ಕೋಟೆಯತ್ತ ಬಾಣದಂತೆ ಓಡಿದರು
ತೋಪು ಮತ್ತು ತೀವ್ರಗತಿಯ ಬಂದೂಕುಗಳು ಮಳೆಯಿಂದ
ಕೂಡಿ ಅಂಧಕಾರದ ರಾತ್ರಿಯು ಬೆಳಕಿನ ಹಗಲಿನಂತಾಯಿತು

ತೋಪಿನ ಮೂಲಕ ಅಗ್ನಿಯಂತೆ ಕಳವಳ ಮೂಡಿತು.
ಆಕಾಶದ ನವಮಿ ಮೈದಾನದಲ್ಲಿ ಬೆಂಕಿ ಹೊತ್ತಿಸಿದರು
ಸ್ವಭಾವತಃ ರುಸ್ತುಮ್‌ನಂತಹ ಪರಾಕ್ರಮಶಾಲಿ ಯೋಧರು
ಕೋಟೆಯತ್ತ ಬಿರುಗಾಳಿಯಂತೆ ಮುನ್ನುಗ್ಗಿದರು
ಕೋಟೆಯ ಒಳಗಡೆ ಹೆಬ್ಬಾವಿನಂತೆ ಪರಾಕ್ರಮವನ್ನು ಹೊಂದಿದವರು
ಶತ್ರುಜೀವಗಳ ಮೇಲೆ ಬೆಂಕಿಯ ಜ್ವಾಲೆಗಳಂತೆ ಎಗರಿ ಬಿದ್ದರು
ಬಾಣ ಮತ್ತು ಕತ್ತಿವರಸೆಯ ಮೂಲಕ ಎಷ್ಟೊಂದು ರಭಸವಾಗಿ
ಮುನ್ನುಗ್ಗಿದರೆಂದರೆ ಅವರ ರಕ್ತದಿಂದ ಮಣ್ಣು
ಸಿಂಹವನ್ನು ಹಿಡಿತಕ್ಕೆ ತೆಗೆದುಕೊಂಡಿತು

ಹಜರತ್ ಬಾದಶಹ ಫಾಝಿಯು ವೌಜೆ ಸತ್‌ಗಿರಾದಿಂದ ಕೆಲವು ಯೋಜನಗಳವರೆಗೆ ಕ್ರಮಿಸಿದ ನಂತರ ಅತಿ ಬುದ್ಧಿವಂತ ಮತ್ತು ಚಿಂತಕನಾಗಿದ್ದ ಖಾನ್ ಮಾಲಿ ಶಾನ್ ಖವಾಸ್‌ಖಾನನಿಂದ ಸಂಪ್ರೀತರಾಗಿದ್ದರು ಮತ್ತು ಪರಾಕ್ರಮ ಹಾಗೂ ಶೌರ್ಯದಿಂದ ಕೂಡಿದ್ದು ರಾಜಧಾನಿಯತ್ತ ರವಾನೆಯಾಗುವ ಜೋಡಿಗಳ ಶ್ರೇಯೋಭಿಲಾಷೆ ಮತ್ತು ಹೆಮ್ಮೆಯ ದರ್ಜೆಯನ್ನು ಹೊಂದಿದ್ದವನನ್ನು ಕರೆದು ಹೀಗೆಂದು ಹುಕುಮನ್ನು ನೀಡಿದರು. ನಗರದ ರಕ್ಷಣೆ ಮತ್ತು ಮೇಲ್ವಿಚಾರಣೆಯ ಉದ್ದೇಶ ಮತ್ತು ಅಗತ್ಯತೆಯ ಸಲುವಾಗಿ ಶಾಹ್ ಬೈತ್ ಕವನಗಳ ರಾಜ ಮತ್ತು ರುಬಾಯಿಗಳ ರಚನೆಕಾರನ ನಾಲ್ಕು ಚರಣಗಳ ಬಗ್ಗೆ ಅರಿವನ್ನು ಹೊಂದಿದ್ದು ಆ ಕೋಟೆಯ ಹವಾಲ್ದಾರನಾದ ಶಾಹ್ ಹಜರತ್‌ನ ನೆರವು ಮತ್ತು ಬೆಂಬಲವನ್ನು ಅಂಗೀಕರಿಸಿದ ಒಲವಿನಿಂದ ಕೂಡಿದ ಪ್ರಿಯತಮೆಯ ಮುಖದ ಮೇಲೆ ಇರುವ ಒಪ್ಪಿಗೆಯ ಮುದ್ರೆಯಂತೆ ಮತ್ತು ಅದೃಷ್ಟದ ನೋಟದ ಒಲವಿನ ಧಾರೆಯನ್ನು ಗಮನಿಸುತ್ತಾ ಎಲ್ಲಾ ಸಂದರ್ಭಗಳಲ್ಲಿಯೂ ತಮ್ಮ ಎಲ್ಲಾ ವೇಳೆಯನ್ನು ಅಸ್ತಿತ್ವಕ್ಕಿಂತಲೂ ಹೆಚ್ಚಿನ ಪರ್ವತದಂತೆ ಇರುವ ತಮ್ಮ ಅಸ್ತಿತ್ವವನ್ನು ದೇಶದ ರಕ್ಷಣೆಯ ಸಲುವಾಗಿ ವ್ಯಯ ಮಾಡಲಿ. ಅರ್ಥಾತ್ ಒಂದೇ ಒಂದು ಕ್ಷಣವನ್ನೂ ಕೂಡ ಆನಂದ ಮತ್ತು ವಿಲಾಸದಲ್ಲಿ ತೊಡಗಿಸಿಕೊಳ್ಳುವುದು ಬೇಡ. ಇದು ಮುಂದಿನ ಪರಿಣಾಮಗಳ ಬಗ್ಗೆ ಅರಿವಿಲ್ಲದ ಜನರ ಕ್ರಿಯೆಯಾಗಿದೆ. ಪ್ರತಿ ಶ್ರೇಷ್ಠತೆಯಿಂದ ಶ್ರೇಷ್ಠವಾದ ವಸ್ತುವಿನಿಂದ ಅರಿವನ್ನು ಪಡೆದು ಮಧ್ಯಮ ಮಾರ್ಗದಿಂದ ಹವಾಗುಣದ ಬದಲಾವಣೆಯ

ಕಾರಣದಿಂದ ಜ್ವರದ ಅನಾರೋಗ್ಯಕ್ಕೆ ತುತ್ತಾದರು. ವಾಸ್ತವತೆಯ ಅರಿವನ್ನು ಪಡೆದ ಮತ್ತು ಇಚ್ಛೆಯ ಪೂರೈಕೆಯನ್ನು ಹೊಂದಿದ ವ್ಯಕ್ತಿಗಳು ಮುಕ್ತಿಯ ಮಾರ್ಗದ ಸಂಕೇತಗಳಿಂದ ಅರಿವನ್ನು ಹೊಂದಿದ ಜನರು ಅಲ್ಲಾಹನ ವತಿಯಿಂದ ಸರ್ವವಸ್ತುಗಳ ಒಡೆಯನ ಕರುಣೆ ಮತ್ತು ದಯೆಯ ವೃಕ್ಷದ ಹಣ್ಣು ಮತ್ತು ಬಾಗಿಲು ಎಂದು ತಿಳಿದು ಸಾವಿರಾರು ಮಾರ್ಗದಿಂದ ಶೋಧನೆಯ ಮೂಲಕ ಅದರ ಅಂತರಂಗದಲ್ಲಿ ಮಿಳಿತವಾಗುತ್ತಾರೆ ಮತ್ತು ನಾಲಿಗೆಯ ಶಕ್ತಿಯನ್ನು ಆ ಸಂದರ್ಭದಲ್ಲಿ ಅಪರಿಮಿತ ಅಸಾಧಾರಣ ಸಾಟಿ ಇಲ್ಲದ ಭಗವಂತನ ಪ್ರಶಂಸೆಯಲ್ಲಿ ಮತ್ತು ಬಂಗಾರದ ಹೃದಯದ ಪರಿಣಾಮವನ್ನು ಭಗವಂತನ ವಂದನೆಗಳನ್ನು ಸಲ್ಲಿಸುವ ಸಲುವಾಗಿ ಅಪರಿಮಿತ ಮತ್ತು ಅಮೂಲ್ಯ ಇಡುಗಂಟನ್ನಾಗಿ ಮಾಡುತ್ತಾರೆ. ಬಹಿರಂಗದಲ್ಲಿ ಕಾಣುವ ಮುಕ್ತ ವ್ಯಕ್ತಿಗೆ ಹಾಗೂ ಬುದ್ಧಿಗೇಡಿ ವ್ಯಕ್ತಿಗಳಿಗೆ ಈ ವಿಷಯವು ಪ್ರಕಟವಾದಲ್ಲಿ ಆನಂದದಿಂದ ಕೂಡಿದ ನೆಮ್ಮದಿಯ ಮೋರೆಯನ್ನು ದುಃಖ ಮತ್ತು ಯಾತನೆಯ ಉಗುರುಗಳಿಂದ ಕೀಳುತ್ತಾರೆ ಮತ್ತು ದುಃಖ ಹಾಗೂ ಯಾತನೆಯ ನೀರಿನಿಂದ ದೇಹದ ಮೇಲೆ ಸಂತೋಷ ಮತ್ತು ಆನಂದದ ಸಂದರ್ಭದ ಪನ್ನೀರನ್ನು ಚಿಮುಕಿಸುವಂತೆ ಪ್ರೋಕ್ಷಿಸುತ್ತಾರೆ.

ಹಜರತ್ ಬಾದಶಹ ಘಾಝಿಯವರ ಶುಭ್ರ ಪ್ರಫುಲ್ಲಿತ ವ್ಯಕ್ತಿತ್ವದ ಮೇಲೆ ಪ್ರಕಟವಾಗಿ ಆ ಯಾತನೆಯ ದೆಸೆಯಿಂದ ವಾಸ್ತವವಾಗಿ ಅನಾರೋಗ್ಯದ ವಿವಿಧ ಹಂತಗಳನ್ನು ಪಾರು ಮಾಡುತ್ತ ಹಾಗೂ ಅನೇಕ ಹಂತದ ಪಯಣವನ್ನು ಮುಂದುವರೆಸಿ ಪವಿತ್ರ ರಂಝಾನ್ ತಿಂಗಳ ಮೊದಲನೆಯ ಚಾಂದ್ರಮಾನ ದಿನಾಂಕದಂದು ಬಂಕಾಪುರ ಕೋಟೆಯನ್ನು ಸೂರ್ಯನ ಸಂಭ್ರಮದ ಉದಯದ ಸಂದರ್ಭದಲ್ಲಿ ನೆಮ್ಮದಿ ಆನಂದದಿಂದ ಕೂಡಿದ ಮತ್ತು ಪ್ರಕಾಶಮಯ ಬೆಳಕಿನಿಂದ ಪ್ರಕಟವಾದ ಸ್ಥಳದಲ್ಲಿ ಮತ್ತು ನೆಮ್ಮದಿ ಹಾಗೂ ಸಂತಸದ ಅನೇಕ ಕಿರಣಗಳನ್ನು ವ್ಯಕ್ತವಾಗುವಂತೆ ಮಾಡಿದ. ಆ ಭೂಮಿಯಲ್ಲಿ ವಾಸವಾಗಿರುವ ಜನರ ಆಂತರ್ಯದ ಇಚ್ಛೆ ಮತ್ತು ಉದ್ದೇಶದ ಶಿಕಾರಿಯನ್ನು ಪ್ರಮುಖ ಅಂಶವನ್ನಾಗಿ ಹಾಗೂ ಇನ್ನಿತರೆ ಉದ್ದೇಶಗಳ ಪಾನಪಾತ್ರೆಯನ್ನು ಒಡೆದು ಚಿರಂತನವಾಗಿ ಸಂತೋಷ ಮತ್ತು ಆನಂದದಲ್ಲಿ ಮುಳುಗಿದರು. ಚಿಕ್ಕ ಮತ್ತು ದೊಡ್ಡ ಕಷ್ಟಗಳು ಮತ್ತು ಅನಾರೋಗ್ಯದಿಂದ ಮುಕ್ತಿ ನೀಡುವ ಭಗವಂತನು ತನ್ನ ಕರುಣೆಯ ಯಂತ್ರದ ಮೂಲಕ ತಮ್ಮ ಶ್ರೀಮಂತ ದೇಹವನ್ನು ಪುಷ್ಟಿಗೊಳಿಸಿದ ಮತ್ತು ಆರೋಗ್ಯ ಹಾಗೂ ಕ್ಷೇಮದ ಜೋಡಿಯಿಂದ ತಮ್ಮ ದೇಹಶ್ರೀಯನ್ನು ಸುಪುಷ್ಟಗೊಳಿಸಿದ ಮತ್ತು ಆರೋಗ್ಯ ಹಾಗೂ ಕ್ಷೇಮದ ಜೋಡಿ ವೈಭವವನ್ನು ಕರುಣಿಸಿದ. ದುಃಖ ಮತ್ತು ಸಂಕಷ್ಟಗಳನ್ನು ನಗರದಿಂದ ಓಡಿ ಪಲಾಯನಗೈಯುವ ಗುಲಾಮನ ರೀತಿಯಲ್ಲಿ ಸಾಮಾನ್ಯ ಪ್ರಜೆಗಳು ಮತ್ತು ಅಧಿಕಾರಸ್ಥರ

ಹೃದಯದ ನಗರದಿಂದ ಪರಾರಿಯ ದಾರಿಯನ್ನು ಕಂಡುಕೊಂಡಿತು. ಹಜರತ್ ಬಾದಶಹ ಫಾಖಿ ಅನೇಕ ಸಂದರ್ಭಗಳಲ್ಲಿ ಆ ಸಾಟಿ ಇಲ್ಲದ ಭೂಮಿಯ ಉದ್ಯಾನವನಗಳಲ್ಲಿ ವಿಶೇಷವಾಗಿ ಆ ಕಸಬಾದ ತೋಟಗಳಲ್ಲಿ ಸುತ್ತಾಡಿ ವಿರಮಿಸುತ್ತಿದ್ದರು. ಅಲ್ಲಿನ ಮಧುರವಾದ ಸಿಹಿ ನೀರು ಮತ್ತು ಶುಭ್ರತೆಯಲ್ಲಿ ಅಮೃತಕ್ಕಿಂತಲೂ ಹೆಚ್ಚು ಚೇತೋಹಾರಿಯಾಗಿತ್ತು ಮತ್ತು ಪ್ರತಿಯೊಬ್ಬ ಜೀವಿಯ ಪ್ರತಿಬಿಂಬವು ಅದರೊಳಗೆ ಪ್ರತಿಫಲಿಸುತ್ತಿತ್ತು ಹಾಗೂ ಜೀವದ ಅಮೂಲ್ಯ ಜೀವವು ಕಂಡು ಬರುತ್ತಿತ್ತು. ಆ ಸುಂದರ ನೋಟ ಮತ್ತು ಸುತ್ತಾಡುವಲ್ಲಿ ಭಗವಂತನನ್ನು ಕಾಣುವ ನೋಟವನ್ನು ಅದ್ಭುತವಾದ ಮುತ್ತು ರತ್ನಗಳ ಸುರ್ಮಾಲೇಪಿತ ಕಂಗಳ ಮೂಲಕ ಅಲ್ಲಾಹನ ಸೃಷ್ಟಿ ಮತ್ತು ಅದರ ವೀಕ್ಷಣೆಯಿಂದ ಅತ್ಯಂತ ಉಲ್ಲಾಸ ಹಾಗೂ ಉತ್ಸಾಹವನ್ನು ಪಡೆದರು. ಆ ಜಾಗದಿಂದ ಅಂದರೆ ಖವಾಸ್ ಖಾನನು ನಿತ್ಯ ಪ್ರತಿನಿತ್ಯ ವಸಂತೋತ್ಸವದ ಉದ್ಯಾನವನಗಳ ಮೂಲಕ ಔದಾರ್ಯದ ಶಿಶಿರ ಋತುವಿನ ದಾಳಿಯಿಂದ ವಿಶೇಷ ರಕ್ಷಣೆಯನ್ನು ನೀಡಿದ್ದು ಛಳಿಗಾಲದ ಆಗಮನ ಮತ್ತು ಅದರ ದಾಳಿಯು ಆ ತೋಟಕ್ಕೆ ಯಾವುದೇ ಹಾನಿಯನ್ನು ಮಾಡದಂತೆ ಪೋಷಿಸಿದ್ದ.

ಬಾದಶಹ ಫಾಖಿಯವರು ಆ ಆನಂದಮಯ ಮತ್ತು ಶೋಭಾಯಮಾನವಾದ ನೋಟವನ್ನು ಕಾಣುತ್ತ ಮತ್ತು ಆ ಭೂಭಾಗದ ತೋಟಗಳ ವೀಕ್ಷಣೆಯನ್ನು ಮಾಡುವ ಸಲುವಾಗಿ ಆನಂದ ಮತ್ತು ನೆಮ್ಮದಿಯ ಮಧುರವಾದ ಝರಿಗಳ ಪ್ರವಹಿಸುವಿಕೆಯನ್ನು ಆನಂದಿಸುತ್ತಿದ್ದರು. ತದನಂತರ ರಾಜಧಾನಿಯತ್ತ ಅವರ ಚಿತ್ತ ಹರಿಯಿತು. ರಾಹಿಮ್ ಮತ್ತುಮಕಾರಿಮ್‌ನಿಂದ ಪ್ರೇರಿತವಾದ ಹುಜೂರ್ ಜಾಯದ್ ನೂರ್ ಮತ್ತು ಫರ್ಮಾನ್ ಇನಾಯತ್‌ಗೆ ಮತ್ತು ರಾಜನ ಹುಕುಮಿನಿಂದ ಕೂಡಿದ ವಿಷಯದ ಮೇಲೆ ಆಧಾರಿತವಾಗಿತ್ತು. ನವಾಬ್ ಮುಸ್ತತಾಬ್‌ನ ಹೆಸರಿಗೆ ಆಸಿಫ್ ನಿಶಾನ್ ಅಬ್ದುಲ್ ರಹೀಮ್ ಬೆಹಲೂಲ್ ಖಾನ್‌ನ ಕರ್ನಾಟಕ ಪ್ರದೇಶದ ಯುದ್ಧಕೋರ ಕುತ್ತಿಗೆಯನ್ನು ಎತ್ತರಿಸುವ ವಿದ್ರೋಹಿ ಎಚ್ಚರಿಕೆ ಮತ್ತು ಆ ಬಂಡಾಯದ ಸಲುವಾಗಿ ರಾಜಾಜ್ಞೆಯನ್ನು ಸಾದರಪಡಿಸಿದರು.

ಕನಸುಮನಸಿನಲ್ಲಿಯೂ ಅರ್ಪಣಾಭಾವದ ಚೆಹರೆ ಮತ್ತು ನಂಬಿಕೆಯ ಹೃದಯ ತನ್ನ ಕಣ್ಣೆದುರಿಗೆ ಇಟ್ಟರೂ ಕೂಡ ಅಹಂಕಾರ ಮತ್ತು ಗರ್ವದ ಎಷ್ಟೊಂದು ಅವಕಾಶಗಳನ್ನು ಹೊಂದಿದ್ದ. ಒಟ್ಟಾರೆ ಮಿತ್ರತ್ವದ ಸ್ನೇಹ ಮತ್ತು ಆದೇಶ ಪಾಲನೆಯ ಹೊರತು ಬೇರೆ ಯಾವ ಅಂಶವೂ ಕೂಡ ಕಂಡು ಬರಲಿಲ್ಲ. ಆ ಆಜ್ಞಾಪಾಲನೆಯ ಸಂದೇಶವನ್ನು ಪಡೆದ ನಂತರ ಆಜ್ಞಾಪಾಲನೆಯನ್ನು ಮಾಡಬೇಕಾದ ಬಾದಶಹರವರ ಸಮ್ಮುಖದಲ್ಲಿ ವಿದ್ರೋಹದ ಮನಸ್ಸಿನ ವ್ಯಕ್ತಿಯಂತೆ ಆ ಶಿಷ್ಯನಂತೆ ಅವನ ಗುರು ಒಂದು ಸನ್ನೆ ಮಾಡಿದೊಡನೆಯೇ ಪ್ರಯಾಣದ ಸಂಕಷ್ಟಗಳು ಮತ್ತು ಆಯಾಸವನ್ನು

ಹುಜೂರ್ ಬಾದಶಹರವರ ವಿಶ್ರಾಂತಿಯ ನೆಮ್ಮದಿಗಿಂತಲೂ ಹೆಚ್ಚು ಉತ್ತಮ ಎಂದು ತಿಳಿಯುವನು ಮತ್ತು ಒಂದು ಕ್ಷಣವೂ ಕೂಡಾ ವಿರಮಿಸುವುದನ್ನು ಕೂಡಾ ಅತ್ಯಂತ ಘೋರ ಅಪರಾಧ ಮತ್ತು ಅತ್ಯಂತ ಕೀಳು ಹಾಗೂ ಘೋರ ಪಾತಕವೆಂದು ತಿಳಿಯುವನು ಹಾಗೂ ಭಾರೀ ದ್ರೋಹ ಮತ್ತು ಲೋಪವೆಂದು ಪರಿಗಣಿಸಿ ಅವನ ಮನೋಇಚ್ಛೆಯ ಹಾದಿಯಲ್ಲಿ ತಲೆಯನ್ನು ಕಾಲುಗಳನ್ನಾಗಿ ಮಾಡಿಕೊಂಡು ಶಿರಸಾವಹಿಸಿ ಪಾಲನೆಗೆ ಉದ್ಯುಕ್ತನಾಗುವನು. ಒಟ್ಟಾರೆ ಶರಣಾಗತಿಯ ವಿಷಯದಲ್ಲಿ ತನ್ನ ವೈಯಕ್ತಿಕ ಆತಂಕಗಳನ್ನು ಮುತ್ತಿಕ್ಕುವ ನೀಚ ಇಚ್ಛೆಯಿಂದ ಹೊಸ್ತಿಲಿಗೆ ನಮಿಸುವ ಸಲುವಾಗಿ ಗಾಢಾಂಧಕಾರದ ನಡುವಿನ ಹಿಸ್ಸೆಯನ್ನು ಪ್ರಖರವಾದ ಬೆಳಕಿಗಿಂತಲೂ ಹೆಚ್ಚು ಸ್ಪಷ್ಟ ಮತ್ತು ಉತ್ತಮ ಬೆಳಕನ್ನು ಬೀರುವ ಮತ್ತು ಹೊಳೆಯುವುದಾಗಿ ಕಂಡು ಪ್ರಕಾಶಮಯ ಸುಲ್ತಾನನಿಗಿಂತಲೂ ಹೆಚ್ಚು ಆಹ್ಲಾದ ಮತ್ತು ವೈಭವದ ಆನಂದವೆಂದು ಪರಿಗಣಿಸಿ ಬಾದಶಹಜೀ ರಾಜಾ ಮತ್ತು ಇನ್ನಿತರೆ ಅನೇಕ ಸರದಾರರು ಆಕಾಶದಂತಹ ದರಬಾರನ್ನು ಹೊಂದಲು ಹೊಸ್ತಿಲ ಕಡೆ ಗಮನವನ್ನು ಹರಿಸಿದ. ಆ ನಡುವೆ ಅದೃಷ್ಟದ ಆಟದ ಬುನಾದಿಯ ಮೇರೆಗೆ ಅವರ ತೀವ್ರ ಜ್ವರದ ಬೆಂಕಿಯ ಶಾಖದಿಂದ ದೇಹವನ್ನು ಮೇಣದಂತೆ ಕರಗಿಸಿತು ಮತ್ತು ಅಂಗಾಂಗಗಳಲ್ಲಿ ತೀವ್ರ ತಾಪದ ದೆಸೆಯಿಂದ ಕ್ಷೀಣವಾದ ದೇಹವನ್ನು ಪಡೆದಂತಾಯಿತು. ನವಾಬ್‌ನ ಮೇಲೆ ಪ್ರಾಶಸ್ತ್ಯವನ್ನು ಪಡೆದು ಆರೋಗ್ಯದ ವಸಂತದ ಹವೆಯನ್ನು ಛಳಿಗಾಲದ ಹವಾಮಾನವನ್ನಾಗಿ ಬದಲಾವಣೆಯನ್ನು ಮಾಡಿ ಅವರ ಆಹ್ಲಾದದ ಇಡುಗಂಟನ್ನು ಒಂದೇ ಏಟಿಗೆ ಲೂಟಿಯನ್ನು ಆರಂಭಿಸಿ ಅವರ ಮಿಡಿಯುವ ಹೃದಯದಿಂದ ಆನಂದ ಮತ್ತು ನೆಮ್ಮದಿಯನ್ನು ಕೊನೆಗೊಳಿಸಲಾಯಿತು. ತಮ್ಮ ಜೊತೆಯಲ್ಲಿ ಸಹವರ್ತಿಗಳಾಗಿದ್ದ ಮಂತ್ರಿಗಳು ದರಬಾರಿಗಳು ಕೆಲ ಕಾಲ ಉಳಿದು ದುಃಖದ ಆ ವೇಗದ ಧೂಳನ್ನು ಹೊತ್ತು ಆರೋಗ್ಯದ ಮತ್ತು ಆರಾಮದ ಶುಭ್ರನೀರಿನಿಂದ ಚೇತೋಹಾರಿಯಾಗಿ ಜಹಾಂಪನಾಹ್‌ರವರ ದರಬಾರಿನತ್ತ ತಲಪುವ ಇರಾದೆಯನ್ನು ಹೊಂದಲಿ.

ಒಟ್ಟಾರೆ ನವಾಬ್‌ರವರು ಈ ಸರ್ವರ್‌ನನ್ನು ಎಚ್ಚರಿಸುವ ನಿರೀಕ್ಷೆಯಲ್ಲಿ ಜೀವ ಮತ್ತು ದೇಹದ ರಕ್ಷಣೆಯ ಸಲುವಾಗಿ ಯಂತ್ರ ಮತ್ತು ಗುರುಕುಲದ ಹೊಸ್ತಿಲ ಧೂಳನ್ನು ಆರೋಗ್ಯ ಮತ್ತು ಬದುಕಿನ ಔಷಧ ಮತ್ತು ಅಹಂಕಾರಮುಕ್ತ ಶರಣಾಗತಿ ಹಾಗೂ ಉದಾರತೆಯ ಔಷಧ ಎಂದು ತಿಳಿದರು ಹಾಗೂ ಈ ಸುವ್ಯಕ್ತ ಸ್ವರೂಪವನ್ನು ಹೊಂದಿದ ಸಮುದಾಯದ ಮಾತನ್ನು ನಂಬಿಕೆ ಹಾಗೂ ಸದುದ್ದೇಶದ ದೃಷ್ಟಿಯಿಂದ ವ್ಯರ್ಥ ಆಲೋಚನೆಗಳಿಗಿಂತ ಹೆಚ್ಚು ಸ್ವತಃ ಸಾಕ್ಷೀಕರಿಸುತ್ತಾ ಸಾನತ್ ಬಯೀದ್‌ನ ಇತ್ಯರ್ಥಗೊಳಿಸುವಲ್ಲಿ ಮಗ್ನರಾದರು. ಮಳೆಗಾಲದ ತೀವ್ರತೆ ಮತ್ತು ಅಪಾರ ಕೊಚ್ಚೆ ಹಾಗೂ ಆರ್ದ್ರತೆಯಿಂದ ಕೂಡಿದ್ದರೂ ಒಂದು ಕ್ಷಣವನ್ನು ಕೂಡಾ ವ್ಯರ್ಥ ಮಾಡಲಿಲ್ಲ.

ಅವರ ಅವಸರದ ತೀರ್ಮಾನಕ್ಕೆ ದೊಡ್ಡ ಆತಂಕವನ್ನು ಸೃಷ್ಟಿಸಿದ್ದ ಮಳೆಗಾಲವು ವಯಸ್ಸು ಹಾಗೂ ಯೌವನದ ಬಲಾಢ್ಯತೆ ಮತ್ತು ವಾಯುವೇಗದ ಬಿಸಿರಕ್ತಕ್ಕಿಂತಲೂ ಹೆಚ್ಚು ತೀವ್ರವಾಯಿತು

ಸೂಕ್ಷ್ಮದೃಷ್ಟಿಗಿಂತಲೂ ಹೆಚ್ಚು ವೇಗವಾಗಿ ಆಕಾಶದೆತ್ತರವನ್ನು ಪಡೆದಿದ್ದ ದರಬಾರಿನ ಹೊಸ್ತಿಲಿಗೆ ನಮಿಸುವ ಸಲುವಾಗಿ ಆ ಹೊಸ್ತಿಲಿನ ನೆಮ್ಮದಿ ಮತ್ತು ಸಂತಸಕ್ಕೆ ಪೂರಕವಾದ ಕಾಶ್ಮೀರದ ಉದ್ಯಾನವನಗಳ ದರ್ಜೆಗಿಂತಲೂ ಹೆಚ್ಚಿನ ಆಸಕ್ತಿಯಿಂದ ಬೆಹಲೂಲ್‌ಖಾನ್ ಬಸ್ರಿಯು ಆಗಮಿಸುತ್ತಿರುವನೆಂಬ ಸುದ್ದಿಯು ತಲುಪಿತು. ಹಜರತ್ ಬಾದಶಹ ಘಾಝಿ ಆ ಸೂರ್ಯನಂತಹ ತೇಜಸ್ಸನ್ನು ಹೊಂದಿದ್ದು ಒಂದು ಬುರುಜಿನಿಂದ ಇನ್ನೊಂದು ಬುರುಜಿಗೆ ಸ್ಥಳಾಂತರಗೊಳ್ಳುತ್ತಿದ್ದರು. ಬಂಕಾಪುರದ ಸಭೆಯನ್ನು ಬರಖಾಸ್ತುಗೊಳಿಸಿ ಮೂರು ನಾಲ್ಕು ದಿನಗಳವರೆಗೆ ಪರಗಣ ಲಖೀಮ್‌ಪುರದ ಕಟ್ಟಡ ಮತ್ತು ಉದ್ಯಾನವನಗಳ ವೀಕ್ಷಣೆಯಲ್ಲಿ ತೊಡಗಿದರು. ಆ ಸೂಕ್ತ ಹವಾಮಾನದ ಸಂತುಲಿತ ಪರಿಸರದಿಂದ ಮತ್ತು ಹಣ್ಣುಗಳ ಅಪಾರ ಫಲಪ್ರಾಪ್ತಿಯಿಂದ ನದಿಗಳು ಮತ್ತು ಖುಷ್ಕಿಯ ಅನೇಕ ವೈಚಿತ್ರ್ಯಗಳನ್ನು ಕಣ್ಣಾರೆ ಕಾಣುವವರಿಗೆ ಸೂಕ್ತ ಉದಾಹರಣೆಯಾಗಿದೆ. ಮೌಜೆ ಬೀದರ್‌ಹಳ್ಳಿಯು ತುಂಗಭದ್ರ ನದಿಯ ದಡದಲ್ಲಿ ನೆಲೆಯಾಗಿದೆ. ಅದಕ್ಕೆ ಅತ್ಯಂತ ಪರಾಕ್ರಮಶಾಲಿ ಸೈನಿಕರ ಗುರುತಿನಿಂದ ಬೆಂಬಲ ಮತ್ತು ನೆರವು ನೀಡುವ ಸೈನಿಕರ ತಂಗುದಾಣವನ್ನಾಗಿ ಮಾಡಿದ ಮತ್ತು ನವಾಬ್ ಬೆಹಲೂಲ್ ಖಾನ್ ಅದೇ ದಿನದಂದು ಆ ಹೊಸ್ತಿಲಿಗೆ ಮರ್ಯಾದೆಯನ್ನು ಸಲ್ಲಿಸುವ ಸಲುವಾಗಿ ಹಾಜರಾಗುವ ಅಪ್ಪಣೆಯನ್ನು ಪಡೆದು ರಾಜನ ಕರುಣೆಯ ಮತ್ತು ಅವನ ಆಪ್ತ ವಲಯದಲ್ಲಿ ಸೇರುವವನಾದ.

ಖವಾಸ್‌ಖಾನನಿಗೆ ಆ ಸ್ಥಳದಿಂದ ಮನೆಯತ್ತ ಹೋಗುವ ಸಲುವಾಗಿ ಸಹೋದರನಾದ ಮೊಹಮ್ಮದ್ ಇಖ್ಲಾಸ್‌ಖಾನನಿಗೆ ರುಸ್ತುಮ್‌ಖಾನನ ಮಗಳೊಡನೆ ವಿವಾಹವಾಯಿತು. ಪರಗಣ ಹಕೀರಿಯತ್ತ ಸುಲಭವಾಗಿ ಬೀಳ್ಕೊಡಲಾಯಿತು. ಎಲ್ಲಾ ಕರ್ತವ್ಯಗಳಲ್ಲಿ ಹಜರತ್ ಸಯ್ಯದುಲ್ ಅನಾಮ್ ಅಲೈಹ ಸಲ್ಲಲ್ಲಾಹು ಅಲೈಹಿವ ಸಲ್ಲಮ್ (ಪ್ರವಾದಿಯವರ) ಅನುಸರಣೆ ಹಜರತ್ ಬಾದಶಹ ಘಾಝಿಯವರ ಹಾದಿಯ ಮಾರ್ಗದರ್ಶನವನ್ನು ಮಾಡುತ್ತಿತ್ತು. ಪ್ರವಾದಿಯವರ ಅನುಸರಣೆಯ ಮಾರ್ಗ ಮತ್ತು ಶುಭ ಅನುಯಾಯಿ ಹೆಜ್ಜೆಯನ್ನು ಇಡುವ ಅತ್ಯಂತ ಪುಣ್ಯಾ ದಸ್ತಗಾಹ್ ರಾಜ ಸಿಂಹಾಸನಗಳ ರಹಸ್ಯಗಳನ್ನು ಅರಿಯುವ ಮತ್ತು ದೈವಜ್ಞಾನದ ರಹಸ್ಯಗಳನ್ನು ಅರಿತ ಮುಲ್ಲಾ ಖುರ್ರಮ್‌ನನ್ನು ಆಪ್ತ ವಲಯಕ್ಕೆ ಸೇರಿಸಿಕೊಂಡು ಆ ಸಮಕಾಲೀನ ಸಂದರ್ಭದ ಅತ್ಯಂತ ಮೇಧಾವಿ ವ್ಯಕ್ತಿಯನ್ನು ಅಭಿಮಾನದ ದೃಷ್ಟಿಯಲ್ಲಿ ಕಂಡು ಇನಾಮು ಕೊಡುಗೆ ಮತ್ತು ಕರುಣೆಯಿಂದ ಸನ್ಮಾನವನ್ನು ಮಾಡಲಾಯಿತು.

ಆ ವಿನಾಶದ ಕ್ಷೇತ್ರದಲ್ಲಿ ಏಕಾಏಕೀ ಓಡಾಡಬಲ್ಲ ರಾಜನ ಮಾರ್ಗದರ್ಶನದ ಸಲುವಾಗಿ ಅತ್ಯಂತ ಪವಿತ್ರವಾದ ಸಮೃದ್ಧ ಹಾಗೂ ಮಾರ್ಗದರ್ಶನದ ಆಜ್ಞೆಗಳನ್ನು ಶಾಮೀಲು ಮಾಡಿ ಸಮುದಾಯದ ಜನತೆಗೆ ಅತ್ಯಂತ ಉತ್ತಮವಾದ ಪವಾಡಗಳ ಪರಿಚಯ ಮಾಡಿಸಲಾಯಿತು. ಅರ್ಥಾತ್ ವಿದ್ರೋಹದ ಜ್ವಾಲೆಯು ಒಮ್ಮೆಲೇ ಭುಗಿಲೆದ್ದು ಮೇಲೆ ಏರಿದರೂ ಕೂಡಾ ಕೂಡಲೇ ನಂದಿ ಹೋಗುತ್ತದೆ. ದೈತ್ಯಾಕಾರದ ವ್ಯಕ್ತಿಯು ಬಲಾಢ್ಯನಾಗಿ ಕಂಡುಬಂದರೂ ಐಕ್ಯತೆ ಮತ್ತು ಏಕತೆಯಲ್ಲಿ ಕೊರತೆ ಇರುತ್ತೆ ಹಾಗೂ ಜೇಡವು ಹೆಣೆಯುವ ಬಲೆಯಿಂದ ಅಂಖಾ ಎಂಬ ಕಾಲ್ಪನಿಕ ಪಕ್ಷಿಯ ಶಿಕಾರಿಯನ್ನು ಮಾಡಲಾಗುವುದಿಲ್ಲ. ಒಟ್ಟಾರೆ ನರಿಯ ಮೋಸಗಾರಿಕೆಯ ವಾಸ್ತವತೆ ಮತ್ತು ಸೂಕ್ಷ್ಮತೆಗಳಿಂದ ಪುರುಷ ಸಿಂಹದ ಜೊತೆಯಲ್ಲಿ ವಿರೋಧ ಮತ್ತು ವೈರತ್ವದ ಬಲವನ್ನು ಪರೀಕ್ಷಿಸುವುದಿಲ್ಲ. ಒಂದು ವೇಳೆ ನಮ್ಮ ಈ ಕ್ಷೇತ್ರದಲ್ಲಿ ದಾಖಲಾಗುವುದು ಹಗಲಿನ ಬೆಳಕಿನಂತೆ ವ್ಯಕ್ತವಾಗುವ ಅಂಧಕಾರದ ಹೃದಯವನ್ನು ಹೊಂದಿದವರಿಗೆ ಬೆಳಕನ್ನು ನೀಡುವಂತಹದಾಗಿದೆ. ದುಃಖ ಹಾಗೂ ಸಂಕಷ್ಟಗಳ ಸಂಜೆಯಲ್ಲಿ ಸಿಲುಕಿಕೊಂಡವರಿಗೆ ಬೆಳಕಿನ ಹಗಲಿನ ರೀತಿಯಲ್ಲಿ ಅದರ ಜ್ವಾಲೆಯಂತಹ ಬೆಳಕು ಅಂಧಕಾರದ ರಾತ್ರಿಯ ಕತ್ತಲಿನಲ್ಲಿ ಅಡಗಿ ಕೂರುವಂತಹದಾಗಿದೆ. ದುಃಖ ಮತ್ತು ಯಾತನೆಯಿಂದ ಕೂಡಿದುದಾಗಿದೆ. ಅಹಂಕಾರ ಮತ್ತು ಅಸೂಯೆಯ ಕನಸಿನಿಂದ ಎಚ್ಚರವಾಗು. ನಾಸ್ತಿಕತೆ ಹಾಗು ಬಹು ದೇವಾರಾಧನೆಯ ತುಕ್ಕನ್ನು ಏಕ ದೇವತಾರಾಧನೆಯ ಪವಿತ್ರ ಕಲಿಮಾವನ್ನು ಪಠಿಸುವುದರ ಮೂಲಕ ತುಕ್ಕನ್ನು ದೂರಗೊಳಿಸು.

ಆಜ್ಞಾಪಾಲನೆ ಮತ್ತು ವಿಧೇಯತೆಯು ಇಡೀ ವಿಶ್ವದ ಲಾಭದ ಬಂಡವಾಳ ಮತ್ತು ಭಕ್ತಿ ಮಾರ್ಗವಾಗಿದೆ. ಅದನ್ನು ಖಾಯಮ್ಮಾಗಿ ಅನುಸರಿಸಿದಲ್ಲಿ ಅತ್ಯಂತ ಎತ್ತರವಾದ ಹಡಗು ಮತ್ತು ನಿನ್ನ ಶ್ರೀಮಂತಿಕೆಯ ನಾವೆಯು ರಾಜನ ಕ್ರೋಧದ ಸಮುದ್ರದ ಅಲೆಗಳ ತಳಮಳ ಮತ್ತು ಅಭಿಶಾಪದ ತೂಫಾನಿನ ವಿದ್ರೋಹದಿಂದ ಮುಕ್ತಿಗೊಳಿಸುತ್ತಾ ರಕ್ಷಣೆ ಮತ್ತು ಭದ್ರತೆಯ ಸಾಕ್ಷಿಯಾಗಿ ಶಾಂತಿ ಮತ್ತು ಸುರಕ್ಷತೆಯ ಸಮುದ್ರದ ದಡವನ್ನು ತಲುಪಿಸುತ್ತದೆ. ಇಲ್ಲವಾದಲ್ಲಿ ಕೂಡಲೇ ಆ ವಿಷಮವಾದ ಸಮುದ್ರದಲ್ಲಿ ಪ್ರಾರ್ಥನೆಯನ್ನು ಆಲಿಸುವವರು ಕೂಡಾ ಯಾರೂ ಇಲ್ಲದೆ ಜಲಚರಗಳ ಆಹಾರ ಮತ್ತು ಅಂಗಲಾಚುವಿಕೆಯ ಮೀನುಗಳ ಆಹಾರವಾಗುವರು. ಮುಸ್ಲಿಮ್ ನಂಬಿಕೆ ಮತ್ತು ಅಖಂಡ ಪ್ರಯತ್ನದ ಆಶಯವೇನೆಂದರೆ ಪರಸ್ಪರ ಒಬ್ಬರಿಗೊಬ್ಬರು ವಿರೋಧಿಗಳಾಗುತ್ತ ಭವ್ಯ ಮತ್ತು ಪವಿತ್ರ ಹೊಸ್ತಿಲಿನ ಮೇಲೆ ಕೊಚ್ಚೆಯಿಂದ ಕೂಡಿದ ಕಾಲುಗಳನ್ನಿಟ್ಟು ಆಶ್ಚರ್ಯದ ದಡವನ್ನು ತಲುವುದು. ಬೀಳ್ಕೊಡುಗೆಯನ್ನು ನೀಡಲಾಯಿತು. ಆ ಹುಶಾರು ಬುದ್ಧಿಯವ ಮತ್ತು ಜಾಗೃತ ಮೆದುಳಿನ ವಿವಿಧ

ರೀತಿಯ ತಲಾಶು ಮತ್ತು ಅನ್ವೇಷಣೆಯ ಮೂಲಕ ಯಾವ ರೀತಿಯಲ್ಲಿ ಪ್ರತಿ ಹಕೀಮನಂತೆ ಅದರ ಕಹಿ ಗುಟುಕುಗಳನು ನೀಡುವಂತಹ ಸ್ವಭಾವದ ಅವನ ಪ್ರಖ್ಯಾತ ರುಚಿಯನ್ನು ಬದಲಾಯಿಸುವಂತೆ ಮಾಡಲಾಗಿದೆ. ಆರೋಗ್ಯವನ್ನು ದಯಪಾಲಿಸುವ ಬುದ್ಧಿವಾದದ ಶರಬತ್ತಿನ ಮೇರೆಗೆ ನಂಬಿಕೆಯನ್ನಿಟ್ಟು ಬುದ್ಧಿವಾದದ ನೆರಿಗೆಯನ್ನು ಹಣೆಯ ಮೇಲಿನಿಂದ ನಾಶ ಮಾಡಲಿ ಮತ್ತು ಆ ಕೇಡಿನ ಅನಾರೋಗ್ಯದ ದೇಹವನ್ನು ಉಳ್ಳವನಿಗೆ ಮನಮೋಹಕವಾದ ಬುದ್ಧಿ ಮಾತು ವ್ಯರ್ಥವಾಗುತ್ತದೆ. ಲಾಭದಾಯಕ ಮಾರ್ಗದರ್ಶನದ ಮೂಲಕ ಒಳ್ಳೆಯ ಆರೋಗ್ಯವನ್ನು ನೀಡುವವನಾಗಲಿ. ಆದರೆ ಆ ಭಗವಂತನ ತೀರ್ಮಾನ ಮತ್ತು ದೇವರ ಇರಾದೆಯ ಹೊರತು ಆ ನತದೃಷ್ಟ ಮೈದಾನದಲ್ಲಿ ಅಲೆದಾಡುವ ವ್ಯಕ್ತಿಯು ದುರುದ್ದೇಶವನ್ನು ಹೊಂದಿದ್ದು ನೀಚ ಸ್ವಭಾವವನ್ನು ಹೊಂದುವುದರಿಂದ ಸದ್ವಿಚಾರಗಳ ಪಾನಪಾತ್ರೆಯನ್ನು ನೀಚತನದ ಕಲ್ಲಿನಿಂದ ನುಚ್ಚು ನೂರನ್ನಾಗಿಸಿದ ಹಾಗೂ ವೈಭವ ಮತ್ತು ಪರಾಕ್ರಮದ ವೃಕ್ಷದ ಬೀಜವನ್ನು ಅವಮಾನಕಾರಿಯಾದ ಗರಗಸದಿಂದ ಕೊಯಿದು ಹಾಕಲಾಯಿತು. ಅವನ ಕಣ್ಣ ರೆಪ್ಪೆಯ ಮೂಲೆಯ ಮೇಲೆ ಮೂಡಿದ ಕನಸು ಆ ಬೆಳಗುವ ಸೂರ್ಯನಿಗಿಂತ ಹೆಚ್ಚು ಸ್ಪಷ್ಟ ಮತ್ತು ಜಾಗೃತವಾದ ಬುದ್ಧಿವಾದದಿಂದ ಎಚ್ಚರಗೊಳ್ಳಲಿಲ್ಲ ಮತ್ತು ಅವನ ಮೋಸ ಮತ್ತು ಕಪಟತನವನ್ನು ಆಲಿಸಿದ ಕಿವಿಗಳು ಸದ್ವಿಚಾರಗಳಿಂದ ಕೂಡಿದ ಬುದ್ಧಿವಾದದ ಮೋಡದ ಮಳೆಹನಿಯ ಸ್ವಭಾವದಿಂದ ಮುತ್ತುಗಳಾಗಿ ರೂಪುಗೊಳ್ಳಲಿಲ್ಲ.

ಈ ಎಲ್ಲಾ ವಿಚಾರಗಳನ್ನು ಆಲಿಸಿದ ನಂತರ ಹಜರತ್ ಬಾದಶಹ ಘಾಝಿಯವರ ಹುಬ್ಬುಗಳ ಮೇಲೆ ಕಳವಳ ಮತ್ತು ಭೀತಿಯಿಂದ ಸುಕ್ಕುಗಳು ಮೂಡಿದವು ಹಾಗೂ ಮೌಜೆ ಮಾಸನೂರ್‌ನಿಂದ ಎರಡು ಮೂರು ಹರದಾರಿ ಪಯಣವನ್ನು ಮುಂದುವರೆಸಿ ಕ್ಷೇಮ ಶುಭವಾಗಿ ಆಗಮಿಸಿದರು ಮತ್ತು ಎಲ್ಲಾ ಸರದಾರರು ಮತ್ತು ಮಂತ್ರಿಗಳನ್ನು ಸಮಾಲೋಚನೆಯ ಶರಾಬುಖಾನೆಯ ಪಾನಪ್ರಿಯ ಮತ್ತು ವಾತ್ಸಲ್ಯ ಹಾಗೂ ಪ್ರೇಮದ ಶರಾಬುಖಾನೆಯ ಪಾನಪ್ರಿಯರಾಗಿದ್ದವರನ್ನು ಸೂಕ್ತ ಇನಾಮುಗಳಿಂದ ಸನ್ಮಾನ ನೀಡಿ ಔತಣಕೂಟವನ್ನು ಏರ್ಪಡಿಸಿದರು. ಆ ಅಯೋಗ್ಯ ಕಾಫರನ ಸ್ಥಿತಿ ಮತ್ತು ಕಾರ್ಯ ವೈಖರಿ, ನೀಚತನ ಮತ್ತು ಅಪಮಾನ ಮತ್ತು ವಿನಾಶದ ಕ್ಷೇತ್ರದಲ್ಲಿ ಅಡೆತಡೆ ಇಲ್ಲದೆ ಸುತ್ತಾ ಅಲೆದಾಡುವ ವ್ಯಕ್ತಿಯು ಮೂರ್ಖತನ ಮತ್ತು ಅಯೋಗ್ಯತನದ ಜೇಬಿನಲ್ಲಿ ಯಾವುದೇ ನಗದನ್ನು ಇಡುವುದಿಲ್ಲ ಮತ್ತು ಅವನ ಅದೃಷ್ಟದ ಅಂಗಡಿಯಲ್ಲಿ ನಷ್ಟ ಮತ್ತು ಅನಾಚಾರದ ಹೊರತು ಇನ್ನು ಯಾವ ಹಣ ಅಥವಾ ಸಾಮಾನು ಕೂಡಾ ಇರಲಿಲ್ಲ. ಅವರಿಗೆ ಕೆಲವೇ ದಿನಗಳಲ್ಲಿ ರಾಜನ ಕ್ರೋಧಪೂರಿತ ಯಾವುದೇ ಅಡೆ ತಡೆ ಇಲ್ಲದ ಕತ್ತಿಯ ಮೂಲಕ ಮರ್ಯಾದೆ ಮತ್ತು ವೈಭವದಿಂದ ಕಳೆಯುತ್ತಿರುವ

ಬದುಕು ಮತ್ತು ಯೋಗಕ್ಷೇಮ ಹಾಗೂ ನೆಮ್ಮದಿಯ ಡೇರೆಯು ಖಂಡಿತವಾಗಿಯೂ ಕೊನೆಗೊಳ್ಳುವುದು. ಒಟ್ಟಾರೆ ಬಾದಶಹರವರ ಕರುಣೆಯ ಕೊರತೆ ಮತ್ತು ಶಿಹಾಬ್ ನಕ್ಷತ್ರದಂತಹ ಪರಿಣಾಮವನ್ನು ಹೊಂದಿದಂತಹ ಬಾಣವು ಆ ನತದೃಷ್ಟನ ಅದೃಷ್ಟಹೀನ ದುರ್ಗುಣದ ಅಭಿವೃದ್ಧಿಹೀನ ದರ್ಜೆಗಳಲ್ಲಿ ಕೊರತೆಯನ್ನು ಹೊಂದಿದಂತಹ ಆಕಾಶದ ಎತ್ತರವನ್ನು ಏರುವುದರಲ್ಲಿ ತೊಡಕು ಉಂಟಾಗುವುದು. ಒಟ್ಟಾರೆ ಇಡೀ ವಿಶ್ವದಲ್ಲಿ ಆಜ್ಞಾಪಾಲನೆಗೆ ಬದ್ಧರಾಗುವಂತಹ ವಿಶ್ವವಿಖ್ಯಾತ ಮಹಾರಾಜರ ಹುಕುಮನ್ನು ಅಂಗೀಕರಿಸುತ್ತಿದ್ದಾರೆ. ಈ ಎಲ್ಲಾ ಜನರು ಏಕಾಭಿಪ್ರಾಯ ಮತ್ತು ಏಕಜೀವವವಾಗಿ ದ್ವೇಷ ಮತ್ತು ಕಪಟತನದ ಕಲ್ಲುಹರಳುಗಳನ್ನು ಮರೆತು ಗುಡಿಸಿ ಎಸೆದು ಐಕ್ಯತೆ ಮತ್ತು ಬೆಂಬಲದ ದಿರಿಸನ್ನು ಮೈ ಮೇಲೆ ಹೊದ್ದು ತಲಾಶು ಮಾಡಲು ಆರಂಭಿಸಲಿ. ಆ ಪಾಳು ಇಲಾಖೆಯಲ್ಲಿ ವಾಸ ಮಾಡುತ್ತಿರುವ ದುರವಸ್ಥೆ ಮತ್ತು ಪಾಪಕೃತ್ಯಗಳಲ್ಲಿ ತೊಡಗಿರುವ ವ್ಯಕ್ತಿಯ ರಾಜ್ಯಕೋಶ ಮತ್ತು ಆಜ್ಞೆಯ ಲಕ್ಷಣಗಳು ಮತ್ತು ರಾಜಾಜ್ಞೆಯ ಹೆಸರು ಮತ್ತು ದೈವಭಾಗಿದಾರಿಕೆಯ ಅನ್‌ಖಾ ಎಂಬ ಕಾಲ್ಪನಿಕ ಪಕ್ಷಿಯ ಬೆನ್ನೇರಿ ಕುಳಿತವನಾಗುತ್ತಾನೆ. ಇದೇ ಹೊತ್ತಿನಲ್ಲಿ ರಾಜರ ಸಮ್ಮುಖದಲ್ಲಿ ಒಬ್ಬ ಜಮೀನುದಾರನು ಒಂದು ವಿನಂತಿಯನ್ನು ಸಲ್ಲಿಸಿದನು. ಅಂದರೆ ಬಿದನೂರು ತಾಲ್ಲೂಕಿನ ಅಬ್‌ತಕೋಲ್ ಕೋಟೆಯ ಒಂದು ಬಾವಿಯ ರಸ್ತೆಯ ರಾಜನ ಆವಾಸ ಸ್ಥಾನವು ಹುಜೂರ್‌ರವರ ಕೃಪಾಕಟಾಕ್ಷದ ಆಶ್ರಿತನಾಗಿದ್ದಾನೆ.

ಆತನು ಬಹಳ ಸಮೀಪದಲ್ಲಿದ್ದಾನೆ. ಆದರೆ ಆ ಆಶ್ರಿತನು ಕೆಲವು ಕಠಿಣ ಮತ್ತು ಧೃಡವಾದ ಗೋಡೆಗಳನ್ನು ಪ್ರತಿಯೊಂದು ತಿರುವಿನಲ್ಲಿಯೂ ನಿರ್ಮಾಣ ಮಾಡಿದ್ದಾನೆ ಮತ್ತು ಈ ಬಗ್ಗೆ ಮಾಹಿತಿಯುಳ್ಳ ಪುರುಷ ಸವಾರರು ಮತ್ತು ಕಾಲ್ನಡಿಗೆಯಲ್ಲಿ ನಡೆಯುವ ಬಹಾದುರ್ ಮತ್ತು ಚಾಣಾಕ್ಷರು ಮೇಲೆ ಹೇಳಿದ ಬಾವಿಯ ಮೇಲ್ವಿಚಾರಣೆ ಮತ್ತು ರಕ್ಷಣೆಯನ್ನು ಮಾಡುತ್ತಿದ್ದು, ಅಲ್ಲಿಗೆ ತಲಪುವ ಹಾದಿಯನ್ನು ಅತ್ಯಂತ ಕಠಿಣ ಮತ್ತು ಅಸಂಭವವನ್ನಾಗಿ ಮಾಡಿದ್ದಾರೆ. ಏಕೆಂದರೆ ವಿಶ್ವವನ್ನು ನಿಯಂತ್ರಣದಲ್ಲಿರಿಸುವ ಮತ್ತು ಜಯಿಸುವ ಜನರಿಗೆ ಊಹೆ ಮತ್ತು ಗುಮಾನಿಯ ಮೋರೆಯಿಂದ ಮೋಸ ಹೋಗಕೂಡದು ಮತ್ತು ಅವನ ಬೇಡಿಕೆಗಳು ಹಾಗೂ ಇಚ್ಛೆ ಮತ್ತು ದುರಾಶೆಯಲ್ಲಿ ಭಯ ಮತ್ತು ನಿರೀಕ್ಷೆಗಳ ಚೆಹರೆಯ ಮೇಲೆ ಜಿಪುಣರ ಥೈಲಿಯ ರೀತಿಯಲ್ಲಿ ತೆರೆಯುವುದು ಬೇಡ. ಒಂದು ವೇಳೆ ಬೆಂಬಲ ಮತ್ತು ನೆರವನ್ನು ನೀಡುವ ಸೈನ್ಯವು ಹಾಗೂ ವೀರಯೋಧರಿಂದ ಕೂಡಿದ ಸೈನ್ಯವು ಒಟ್ಟುಗೂಡಿ ಹೋರಾಟದ ಕ್ಷೇತ್ರದಲ್ಲಿ ತೊಡಗಿದ್ದಲ್ಲಿ ಮತ್ತು ಧೈರ್ಯ ಹಾಗೂ ಪರಾಕ್ರಮದ ಹಸ್ತವನ್ನು ಕಠಿಣವಾಗಿ ತಮ್ಮ ತೋಳಿನಿಂದ ಹೊರಚಾಚಿ ಸಿಂಹದ ಪರಾಕ್ರಮ ಮತ್ತು ಚಿರತೆಯ ಕ್ರೋಧ ಹಾಗೂ ಹೆಬ್ಬುಲಿಯ ಬಲ ಮತ್ತು ಮೊಸಳೆಯ ಪರಾಕ್ರಮದ

ಮೂಲಕ ಬಾವಿಯ ನಾಕಾಬಂದಿಯ ಮೂಲಕ ಆ ರಸ್ತೆಯಲ್ಲಿ ಮುನ್ನಡೆದಲ್ಲಿ ಉತ್ತಮ ಮತ್ತು ಶ್ಲಾಘನೀಯ ಕಾರ್ಯವಾಗುತ್ತದೆ. ಹಜರತ್ ಬಾದಶಹ ಫಾಝಿಯವರು ಅವನ ಅಂತರಾರ್ಥ ಮತ್ತು ಇಂಗಿತಗಳಿಂದ ಕೂಡಿದ ಸಲಹೆಯನ್ನು ಅಂಗೀಕರಿಸಿ, ನಾವು ಪರಾಕ್ರಮ ಧೈರ್ಯ ಹಾಗೂ ಮುತ್ಸದ್ದಿತನದ ಸಿರಿವಂತಿಕೆಯನ್ನು ಇಡುವಂತಹ ವಿಶೇಷ ವ್ಯಕ್ತಿ ನವಾಬ್ ಬೆಹಲೂಲ್ ಖಾನ್ ಮತ್ತು ಶಾಜಿಯ ಸೈನ್ಯದೊಡನೆ ಬನ್‌ಲಕೋಲ್‌ನ ಮಾರ್ಗದ ಮೂಲಕ ಆಗಮಿಸುತ್ತಿದ್ದೇವೆ ಹಾಗೂ ಎಲ್ಲಾ ಮಂತ್ರಿಗಳು ನಂದಿನಗರದ ಮಾರ್ಗವಾಗಿ ಬರಲಿ. ಅಲ್ಲಾಹನ ಕರುಣೆಯು ಹಜರತ್ ಬಾದಶಹ ಫಾಝಿಗೆ ಕ್ಷಮೆಯ ಪಾಠ ಮತ್ತು ಲೋಪಗಳನ್ನು ಕ್ಷಮಿಸುವ ಪಾಠವನ್ನು ಕಲಿಸಿದ್ದು ಹಾಗೂ ಭಗವಂತನ ಕರುಣೆಯ ದರ್ಜೆಯು ಕೃತಜ್ಞತೆಯ ಮತ್ತು ಸಹನಾಶಕ್ತಿಯ ಉಡುಪನ್ನು ಅವನೆತ್ತರದ ಆಕೃತಿಯ ಮೇಲೆ ಹೊದಿಸಿಬಿಟ್ಟಿದ್ದ. ಹೀಗಾಗಿ ಶರ್ಜಖಾನನ ಅಯೋಗ್ಯ ಕೃತ್ಯಗಳು ಮತ್ತು ಅವನ ಅನುಚಿತವಾದ ಕ್ರಿಯೆಗಳು ಆ ಕಿರಿತನದ ಮತ್ತು ಹಿರಿತನದ ಸಭೆಯಲ್ಲಿ ಅನೇಕ ಸರದಾರರ ಬೆಂಬಲ ಮತ್ತು ನೆರವನ್ನು ನಿರೀಕ್ಷಿಸುತ್ತಿದ್ದವು. ಒಟ್ಟಾರೆ ಹಜರತ್ ಬಾದಶಹ ಫಾಝಿಯ ಇಚ್ಛೆಯ ನೋಟವನ್ನು ಅರಿತ ಆ ಮೂಲಕ ಮೊದಲನೆಯ ದಿನದಿಂದಲೇ ಚಿಂತಕ ಮತ್ತು ಬುದ್ಧಿವಂತ ಬಂಧುಗಳ ಅದೃಷ್ಟ ಖುಲಾಯಿಸಿತು.

ಈ ಮಾತುಗಳನ್ನು ಕೇಳಿ ತಕರಾರು ಮತ್ತು ಕೋಪದ ಬೀಜಗಳ ಅಭಿವ್ಯಕ್ತಿ ಮತ್ತು ಘೋಷಣೆಯ ಹೊಲದಲ್ಲಿ ಬೀಜವನ್ನು ಊರಲಿಲ್ಲ ಮತ್ತು ಈ ಗುಂಪು ನ್ಯಾಯಪರ ಮತ್ತು ಐಕ್ಯತೆಯ ಜಬರ್‌ದಸ್ತ್ ಬೆಂಬಲಿಗರು ಅಭಿಮಾನದ ಸೆರಗನ್ನು ಹಿಡಿದವರಾಗಿದ್ದರು ಹಾಗೂ ಕೃತಜ್ಞತೆಯ ಚೆಹರೆಯನ್ನು ಮನನೋಯಿಸುವ ಹಾಗೂ ದುಃಖದಿಂದ ಕೂಡಿ ಆಮಿಷಗಳ ಹುಕುಮನ್ನು ಆದೇಶ ಪಾಲನೆಯ ಅತ್ಯಂತ ಅಮೂಲ್ಯವಾದ ಹುಕುಮನ್ನು ಅತ್ಯಂತ ವಿಧೇಯತೆಯಿಂದ ಪಾಲಿಸುವವರಾಗಿ ಪೇಟಾವನ್ನು ಕಿರೀಟದಂತೆ ಮಾಡುವುದು. ಮಾರನೆಯ ದಿನ ಹಜರತ್ ಬಾದಶಹ ಫಾಝಿಯವರು ರಾಜಪೋಷಾಕನ್ನು ಧರಿಸಿ ಮತ್ತು ಅತ್ಯಂತ ಗಂಭೀರವಾಗಿ ಮಿಂಚಿನ ವೇಗದಿಂದ ಓಡುವ ಮತ್ತು ಗಾಳಿಯೊಡನೆ ಮಾತನಾಡುವ ವಿಜಯೀ ರಿಕಾಬಿನ ಮೇಲೆ ಆಸೀನರಾದರು. ಆ ನಾಸ್ತಿಕ ಮತ್ತು ನೀಚ ಗರ್ವಿಷ್ಟ ಮತ್ತು ಅಹಂಕಾರಿಯ ಮಹಲನ್ನು ಧ್ವಂಸಗೊಳಿಸುವ ಮತ್ತು ಅಗೌರವದ ಕಟ್ಟಡಗಳನ್ನು ನಾಶಮಾಡುವ ಧೃಡ ಖಡಾಖಂಡಿತವಾದ ಇರಾದೆಯೊಂದಿಗೆ ಆ ದುರುಳನ ಕಡೆಗೆ ನಡೆದರು ಮತ್ತು ಮೇದರ್ ಕೊಳದ ದಡದಲ್ಲಿ ವಿಜಯ ಮತ್ತು ಸಫಲತೆಯ ಡೇರೆಯನ್ನು ಹಾಕಲಾಯಿತು ಹಾಗೂ ಬೆಂಬಲ ಮತ್ತು ಸಹಕಾರದ ಹೆಗ್ಗುರುತುಗಳನ್ನು ಹೊಂದಿದ್ದ ಸೈನಿಕರ ತಂಗುದಾಣವನ್ನಾಗಿ ಆ ಸೌಕರ್ಯದ ಸಲುವಾಗಿ ಕೇಂದ್ರ ಸ್ಥಾನವನ್ನಾಗಿ ಮಾಡಲಾಯಿತು. ಆ ಸ್ಥಳದಿಂದ ಮಾರನೆಯ ಅಂದರೆ ದಿನ ರಬಿಯುಸ್ಸಾನಿ

ತಿಂಗಳ ನಾಲ್ಕನೆಯ ತಾರೀಕಾಗಿತ್ತು. ಯುದ್ಧರಂಗದ ಪಂಕ್ತಿಗಳನ್ನು ಹಾಗೂ ವಿಜಯಪ್ರಾಪ್ತಿಯ ಸಲುವಾಗಿ ಪೈಲ್ವಾನರುಗಳ ಕೊಲೆ ಮಾಡಿ ರಕ್ತವನ್ನು ಹೀರುವ ಕತ್ತಿಗಳ ವೇಗದ ಸನ್ನಿವೇಶದಲ್ಲಿ ಯಾಕೂತ್ ಹೆಸರಿನ ಕೆಂಪು ಮತ್ತು ಬಾಯಾರಿದ ತುಟಿಗಳಿಂದ ಕೂಡಿದ ಸುಂದರವಾದ ಬಂಗಾರದ ಹಿಡಿಗಳಿಂದ ಕೂಡಿದ್ದ ಕತ್ತಿಯನ್ನು ಆಯ್ಕೆ ಮಾಡಿ ಅವರತ್ತ ಗಮನವನ್ನು ಹರಿಸಲಿ ಮತ್ತು ಒಂದು ವೇಳೆ ದ್ವೇಷದ ಮೈದಾನದಲ್ಲಿ ಅಲೆದಾಡುವ ಹಾಗೂ ಯುದ್ಧರಂಗದಲ್ಲಿ ಕಾಲು ಇಡುವವರು ಕಂಡು ಬಂದಲ್ಲಿ ಕೆಂಪಿನಿಂದ ಹೊಳೆಯುವ ಕೆಂಪು ಕೆನ್ನೆಗಳನ್ನು ಉಳ್ಳ ಪ್ರಿಯತಮೆಯರನ್ನು ಯುದ್ಧದ ಸಾಮಗ್ರಿ ಎಂದು ತಿಳಿಯುತ್ತಾ ಆಲಿಂಗನ ಮಾಡುವ ಶಪಥವನ್ನು ಮಾಡಲಿ. ಒಂದು ವೇಳೆ ಲೋಹದ ಅಣುಗಳಿಂದ ಮಾಡಲ್ಪಟ್ಟ ಕಬ್ಬಿಣದ ಕವಚದಿಂದ ಆವೃತವಾದ ಈಜಿಪ್ಟಿನ ದೊರೆ ಫೇರೋವಿನಂತಹ ಗುಣಗಳನ್ನು ಹೊಂದಿದ ಶತ್ರುಗಳ ದೇಹದ ಮೇಲೆ ಮೂಡಿದಲ್ಲಿ ಸುರ್ಮಾ ಹಚ್ಚಿದ ಕಣ್ಣುಗಳು ಎಂದು ಭಾವಿಸುತ್ತಾ ದೃಷ್ಟಿ ಯುದ್ಧವನ್ನು ಮಾಡಿ ತಮ್ಮ ವಶದಲ್ಲಿ ಪಡೆದುಕೊಳ್ಳಲಿ. ಒಂದು ವೇಳೆ ಪಶ್ಚಾತ್ತಾಪಪಟ್ಟಲ್ಲಿ ಯುದ್ಧರಂಗದಲ್ಲಿ ಯುದ್ಧವನ್ನು ಎಲ್ಲ ಸಂಕಷ್ಟಗಳನ್ನು ಎದುರಿಸಿದ ಮತ್ತು ಹೃದಯ ಭೇದಕವಾದ ಯುದ್ಧವನ್ನು ಮುಂದುವರೆಸಿ ಅಭಿಮಾನ ಪೂರ್ವಕವಾಗಿ ಅಂಗೀಕರಿಸುವ ಗುಂಪಿನ ನೋಟವನ್ನು ದುರಸ್ತು ಮಾಡಲಿ.

ಆ ರಕ್ತ ಪಿಪಾಸು ನಿರ್ಭಯ ವ್ಯಕ್ತಿಯ ಜೀವನದ ಹಡಗನ್ನು ಮೃತ್ಯುವಿನ ಸಮುದ್ರದಲ್ಲಿ ಮುಳುಗಿಸಿದಲ್ಲಿ ಸೂಕ್ತವಾಗುತ್ತದೆ. ಸಿಂಹವನ್ನು ಸೆರೆ ಹಿಡಿಯುವ ಶಿಕಾರಿಯಂತೆ ಹಜರತ್ ಬಾದಶಹ ಘಾಝಿಯು ಈ ಅತ್ಯಂತ ಸ್ತುತ್ಯರ್ಹ ಹಾಗೂ ಅದ್ಭುತವಾದ ಮೌಲ್ಯಯುತವಾದ ಮುತ್ತುಗಳಿಂದ ತುಂಬಿದ ಸಹಸ್ರಾರು ಸ್ವರೂಪದ ಶಕ್ತಿ ಸಾಮರ್ಥ್ಯವನ್ನು ಹೊಂದುವಂತಹ ಮಾತನ್ನು ಬೆಳಕಿನಿಂದ ಹೆಣಿಗೆ ಮಾಡಿದ ನಂತರ ಪವಿತ್ರ ಸೆರಗು ಮತ್ತು ಶೋಧನೆಯ ಜೇಬಿನಲ್ಲಿ ಹಾಕಿದರು. ಈ ಆಧಾರದ ಮೇಲೆ ಬೆಳಗಿನ ಹೊತ್ತಿನ ಮುಂಬೆಳಕು ಮೂಡುವ ಹೊತ್ತಿನಲ್ಲಿ ಝುಫರ್ ಮೌವೂದ್‌ಗೆ ಸೇರಿದ ಸೈನ್ಯವು ಅದೃಷ್ಟಶಾಲಿಯಾಗಿದ್ದು ಅಪಜಯವನ್ನು ಹೊಂದುವ ಸೈನಿಕರ ಪರಿಸ್ಥಿತಿಯನ್ನು ಅಂಧಕಾರಮಯವನ್ನಾಗಿ ಮಾಡಿದರು. ಶರ್ಜಖಾನನು ಹೋರಾಟದ ಗುಂಪು ಮತ್ತು ಶತ್ರುಗಳ ಮೇಲೆ ಗೆಲುವನ್ನು ಹೊಂದುವ ಬಲಶಾಲಿಯಾದ ಉಪಾಯವನ್ನು ತನ್ನ ಆಪ್ತಮಿತ್ರರ ಬಳಿ ಹೇಳಿಕೊಂಡಿದ್ದು ಹಸಿದ ಸಿಂಹದಂತೆ ಸಲಾಬತ್‌ಖಾನನ ರಕ್ತ ಸಿಕ್ತ ಸಂಕಲ್ಪವನ್ನು ಗಟ್ಟಿಮಾಡಿ ಆಕ್ರಮಣವನ್ನು ಮಾಡುವುದು ಮತ್ತು ಐದು ದಿನಗಳ ಪಯಣವನ್ನು ಎರಡು ದಿನಗಳೊಳಗಾಗಿ ತುಂಡರಿಸಿ ಹೀಗೆಂದು ಸಂದೇಶವನ್ನು ಕಳಿಸಿದ. ಈಗ ನಮಗೆ ನೆರವನ್ನು ನೀಡುವ ಸೈನ್ಯದ ಶತ್ರುಗಳನ್ನು ಸೋಲಿಸುವ ಘನ ಉದ್ದೇಶದ ಸೈನ್ಯದ ಮತ್ತು ಶತ್ರುಗಳಿಗೆ ಅಪಜಯವನ್ನು ಉಣಿಸುವ

ಬಹಾದುರರ ಜೊತೆಯಲ್ಲಿ ನಾನು ಬಂದಿದ್ದೇನೆ. ಏಕೆಂದರೆ ಆ ವ್ಯಕ್ತಿಯು ಮೋಸ ಮತ್ತು ದಗಾಕೋರ ಶರಾಬನ್ನು ಸೇವಿಸಿ ಪ್ರಜ್ಞಾಶೂನ್ಯನಾಗಿದ್ದು, ದುರುಳನಾಗಿದ್ದಾನೆ. ಆತನ ಅಸ್ತಿತ್ವದ ಗುರುತನ್ನು ಶತ್ರುವು ಎಷ್ಟೊಂದು ತೀವ್ರವಾದ ಪರಾಕ್ರಮದ ಕಲ್ಲಿನಿಂದ ಜಜ್ಜಿ ಹಾಕುತ್ತಾ ಸಾವಿನ ಶಿಲುಬೆಯನ್ನು ಆತನ ಬದುಕಿನ ಗಂಟಲಿನಲ್ಲಿ ಇಳಿಸುವೆನು ಮತ್ತು ಆ ವ್ಯಕ್ತಿಯು ಅಂದರೆ ಯಾವನು ಅಹಂಕಾರದ ಶರಾಬಿನಿಂದ ಅಮಲೇರಿದವನಾಗಿದ್ದಾನೆಯೋ ಆ ವ್ಯಕ್ತಿಯ ಬದುಕಿನ ಜೇನನ್ನು ಸಾವು ಮತ್ತು ವಿನಾಶದ ಕಾಡಿನ ಹಣ್ಣನ್ನಾಗಿ ಮಾಡುತ್ತೇನೆ.

ಅವನಿಗೆ ಶತ್ರುವಿನ ಕತ್ತಿಯಿಂದ ಎಂತಹ ಸಜೆಯನ್ನು ನೀಡುವೆನೆಂದರೆ
ಸಾವಿನ ಸಮ್ಮುಖದಲ್ಲಿಯೂ ತನ್ನ ಕಾಲುಗಳಿಂದ ಓಡಲಾರಂಭಿಸುವನು.
ನಾನು ಎಲ್ಲೆಲ್ಲಿ ಸೈನ್ಯದ ಧ್ವಜವನ್ನು ಎತ್ತರಕ್ಕೆ ಹಾರಿಸಿದ್ದೇನೆಯೋ
ಅಲ್ಲಿ ಶತ್ರು ಪ್ರಪಂಚವನ್ನು ನನ್ನ ವಶದಲ್ಲಿ ಪಡೆದುಕೊಂಡಿದ್ದೇನೆ.
ನಾನು ಎಲ್ಲೆಲ್ಲಿ ದೀಪವನ್ನು ಬೆಳಗಿದ್ದೇನೆಯೋ ಕೇಡು
ಬುದ್ಧಿಯವರನ್ನು ಪತಂಗದಂತೆ ಸುಟ್ಟು ಹಾಕಿರುವೆನು
ಅವನಿಗೆ ಶತ್ರುವಿನ ಕತ್ತಿಯಿಂದ ಎಂತಹ ಸಜೆ ನೀಡುವೆನೆಂದರೆ
ಎತ್ತರದ ಆಕಾಶವು ನುಡಿಯುವುದು ಒಳ್ಳೆಯದು ಮಾಡಿದೆ ಎಂದು
ನಮ್ಮ ಖಡ್ಗದ ಒರೆಯು ಸೂರ್ಯನಾಗುತ್ತಾನೆ ಮತ್ತು ಅವನ
ಉದಯವು ಸೌಭಾಗ್ಯವಂತ ಬೆಳಗು ಆಗಿರುವುದು.
ಯುದ್ಧರಂಗದಲ್ಲಿ ನಾನು ಬಾಣವನ್ನು ಹೆದೆಯೇರಿಸಿದಾಗ
ನಿನ್ನ ಬಾಣವು ಆಕಾಶದತ್ತ ಗುರಿ ಇಡುವುದು.
ದುರ್ಜನರಂತೆ ನಾನು ಪಬ್ರಸ್‌ನ ಒಂಟೆಯಾಗಿದ್ದೇನೆ. ಯಾವ
ಶತ್ರುವಿನ ಹೃದಯವು ಎತ್ತರದಿಂದ ಕೆಳಗೆ ಬೀಳುವುದಾಗಿದೆ
ನನ್ನ ನಿನ್ನ ನಡುವೆ ಅದಾಗುವುದು; ಯಾವುದೆಂದರೆ
ವೀರಾಗ್ರಣಿಗಳನು ಬೀಳಿಸುವುದಾಗಿದೆ
ಎಷ್ಟು ದುರಸ್ತಾಗಿದೆ ಎಂದರೆ ಶತ್ರುಗಳ
ತಲೆಯು ಮಳೆಯ ರಕ್ಷಣೆಯಾಗಿದೆ

ಈ ಅವಧಿಯಲ್ಲಿ ಶರ್ಜಖಾನ್ ಮತ್ತು ಸರ್‌ಫರಾಝ್‌ಖಾನನಿಗೆ ಅಪಾಯದ ತೀವ್ರತೆಯ ಅರಿವಾಯಿತು ಮತ್ತು ಅವರ ಪರಿಸ್ಥಿತಿಯು ಅಂಧಕಾರದ ಮಣ್ಣಿನಲ್ಲಿ ಹಣ್ಣಾಗಿಸಿತ್ತು ಹಾಗೂ ಅವನ ಬದುಕಿನ ಸಿಹಿದ್ರವವನ್ನು ಪರಲೋಕದತ್ತ ರವಾನೆ ಮಾಡಲಾಗಿತ್ತು. ಸಲಾಬತ್‌ಖಾನ್ ಮತ್ತು ಹಿಂದುಸ್ಥಾನದ ಎಲ್ಲಾ ಖ್ಯಾತ ಸರದಾರರಿಗೆ ಶರ್ಜಾಖಾನನು ಸಿಂಹಗಳನ್ನು ಎತ್ತಿ ಒಗೆಯುವವನು ಎಂಬ ಮಾತು ಖಾತರಿಯಾಗಿತ್ತು.

ಅವನ ಧೃಡವಾದ ಸಿಂಹದ ಪಂಜುಗಳಂತಹ ಖಡ್ಗವು ಆಕಾಶದ ಸಿಂಹವು ಭೂಮಿಯಲ್ಲಿ ಒರಗಿದ ಹಸುವಿನಂತೆ ಭಯಾನಕತೆಯಲ್ಲಿ ಆಕ್ರಂದನಗೈಯುವಂತಾಗಿದೆ. ಅಲ್ ವಂದ ಅಲ್ ಬರಝ್‌ನ ಪರ್ವತಗಳು ಅವನ ಹಗಲು ಮತ್ತು ರಾತ್ರಿಯನ್ನು ವೇಗವಾಗಿ ಅಪ್ಪಳಿಸುವ ದುರಂತದ ಛಾಯೆಯಂತೆ ಬೆತ್ತದ ಶಾಖೆಯಂತೆ ಕಂಪಿಸುತ್ತಾ ತರತರಗುಡುವುದಾಗಿದೆ, ಒಂದು ವೇಳೆ ಅವನ ಕೋಪದ ಅಗ್ನಿಯ ಕಿಡಿಗಳು ತಾಮ್ರ ಮತ್ತು ಇನ್ನಿತರೆ ಲೋಹಗಳ ಗಣಿಯ ಮೇಲೆ ಬಿದ್ದಲ್ಲಿ ಕಣ್ಣೆವೆ ಮಿಟುಕಿಸುವುದರಲ್ಲಿ ಅದು ನೀರಾಗಿ ಹರಿದು ಸಮುದ್ರದಂತೆ ಪ್ರವಾಹವನ್ನು ಉಕ್ಕಿಸುವುದು. ಅವನ ಕ್ರೌರ್ಯದಿಂದ ಕೂಡಿದ ಕತ್ತಿಯ ಹರಿತ ಹವೆಯು ಕೋಹೆ ಖಾಫ್ ಪರ್ವತದ ಮೇಲೆ ಬಿದ್ದಲ್ಲಿ ತತ್‌ಕ್ಷಣದಲ್ಲಿ ರಾತ್ರಿ ಮತ್ತು ಹಗಲಿನ ಇಬ್ಬಗೆಯ ಸ್ವರೂಪವನ್ನು ಪಡೆದು ಅದು ಚೂರು ಚೂರಾಗುತ್ತದೆ.

ಈ ಎಲ್ಲಾ ಮಾತುಗಳ ಹೊರತಾಗಿಯೂ ಅಹಂಕಾರ ಮತ್ತು ಗರ್ವದ ಅರಣ್ಯದಲ್ಲಿ ಆಳವಾಗಿ ಬೇರು ಬಿಟ್ಟ ವೃಕ್ಷದಂತೆ ಸಲಾಬತ್‌ಖಾನನ ತಲೆಯಲ್ಲಿ ಅವಮಾನ ಮತ್ತು ಆತಂಕದ ಬೆವರು ಹರಿಯುತ್ತಿತ್ತು ಮತ್ತು ಅದೃಷ್ಟಹೀನತೆಯ ರಕ್ತವು ಅವನ ಏರು ಅದೃಷ್ಟದಲ್ಲಿ ತೊಡರುಗಾಲನ್ನು ಹಾಕಿ ಆವೇಶವನ್ನು ಉಕ್ಕಿಸುತ್ತಿತ್ತು. ಜ್ಯೋತಿಷ್ಯ ಶಾಸ್ತ್ರವನ್ನು ಮೇಲೆ ಹೇಳಿದ ಆಧಾರ ಪ್ರಮಾಣಗಳ ಮತ್ತು ಸಂಕೇತ ಹಾಗೂ ಸನ್ನೆಗಳ ಮೂಲಕ ಅವನು ನಂಬಿದ್ದು ಮುಕ್ತ ಮನಸ್ಸಿನ ಮೇಲೆ ಸ್ಪಷ್ಟವಾಗಿ ಗುರುತಾಗುತ್ತಿತ್ತು. ಅದನ್ನು ಗುಮಾನಿ ಎಂದು ಪರಿಭಾವಿಸಿದ. ಅತ್ಯಂತ ಸಂಕುಚಿತ ನೋಟ ಮತ್ತು ಕೀಳುಬುದ್ಧಿಯ ಆಧಾರದ ಮೇಲೆ ಕಾಯಿಲೆಗಳನ್ನು ಪ್ರಕೃತಿಯ ಪ್ರಭುವು ಪೋಷಿಸಿದ ಹೃದಯದ ಹಾಳೆಯ ಮೇಲೆ ಸ್ಪಷ್ಟವಾಗಿ ವ್ಯಕ್ತಪಡಿಸಿದ. ಅದನ್ನು ಸುಳ್ಳು ಎಂದು ತಿಳಿದು ಯುದ್ಧಕ್ಷೇತ್ರದಲ್ಲಿ ಧೃಡವಾದ ಹೆಜ್ಜೆಯ ಪಾದಗಳನ್ನು ಊರಿ ಶರ್ಜಾಖಾನನ ಜೊತೆಯಲ್ಲಿ ಲೋಪ ಮತ್ತು ತಳಮಳದ ಉದ್ದನೆಯ ಹಸ್ತದಿಂದ ಸಂಪೂರ್ಣವಾಗಿ ರಕ್ಷಿತನಾಗಿದ್ದ ಹಾಗೂ ತನ್ನ ಜೀವದ ರಕ್ಷಣೆಯನ್ನು ಗೌರವ ಮತ್ತು ಖ್ಯಾತಿಯ ದೀಪದ ಮೇಣದಬತ್ತಿ ಎಂದು ತಿಳಿದು ಬೃಹತ್ತಾದ ದೇಹವನ್ನು ಮತ್ತು ಕಬ್ಬಿಣದಂತಹ ದೇಹವನ್ನು ಉಂಡೆಯಂತೆ ಮಾಡಿಕೊಂಡು ಸೈನ್ಯದ ಕಲೆ ಮತ್ತು ಭಾಷೆಯನ್ನು ಪ್ರಭಾವಯುತವಾಗಿ ಬಳಸುತ್ತಾ ಆನಂದತುಂದಿಲನಾಗಿ ದಾನಧರ್ಮಗಳನ್ನು ಮಾಡುತ್ತಾ ತನ್ನ ಹೆಸರಿನ ಬಲದ ಮೇರೆಗೆ ಶಹಬಾಸ್‌ಗಿರಿಯನ್ನು ಪಡೆಯುತ್ತಾ ಸಿಂಹಾಸನದ ಮೇಲೆ ಆಸೀನನಾದ.

ಹೊಗಳುಭಟ್ಟರು ಹೊಗಳಿಕೆಯನ್ನು ಉದ್ಘೋಷಣೆ ಮಾಡುತ್ತಿದ್ದಂತೆಯೇ ಈಜಿಪ್ಟಿನ ದೊರೆ ಫೆರೋವಿನಂತೆ ಪ್ರಭಾವವನ್ನು ಹೊಂದಿದ ಮತ್ತು ಮದಾಯಿನ್‌ನ ಮಾಂತ್ರಿಕರಂತೆ ಭಿನ್ನಾಭಿಪ್ರಾಯವನ್ನು ವ್ಯಕ್ತಮಾಡಿ ವಿದ್ರೋಹದ ಪ್ರಾಣವನ್ನು ತೆಗೆಯುವಂತೆ ತಮ್ಮ

ಮಂತ್ರಶಕ್ತಿಯಿಂದ ಮೂಸಾರವರ ದಂಡವನ್ನು ಹೆಬ್ಬಾವನ್ನಾಗಿ ಮಾಡಲಾಯಿತು. ಲಜ್ಜೆ ಮತ್ತು ನಾಚಿಕೆಯ ಹಣೆಯನ್ನು ಅತಿ ಅವಮಾನ ಮತ್ತು ಆತಂಕಗಳಿಂದ ಕೂಡಿ ಆಜ್ಞಾಪಾಲನೆಯ ಭೂಮಿಯ ಮೇಲೆ ತಲೆಯನ್ನು ಶರಣಾಗಿಸಲಿ. ಸಲಾಬತ್‌ಖಾನನು ಬಿಲ್ಲು ಬಾಣವನ್ನು ತನ್ನ ದರಬಾರಿನಿಂದ ಹೊರದೆಗೆದು ಮತ್ತು ತನ್ನ ಚಮತ್ಕಾರಿಕ ಹಾಘೂ ಅತ್ಯಂತ ಶೃಂಗಾರ ಭರಿತವಾಗಿದ್ದ ಸಹಸ್ರಾರು ಕಬ್ಬಿಣದ ಬಾಣಗಳ ಮೊನೆಯಿಂದ ನೀಲಿ ಬಣ್ಣದ ಆಕಾಶದ ಎತ್ತರದ ಉದ್ದಕ್ಕೂ ಬಾಣಗಳ ಮಳೆಯನು ಕರೆದು ಕೈಕಾಲುಗಳ ರೀತಿಯಲ್ಲಿ ಅನ್ವೇಷಣೆ ಮತ್ತು ಶೋಧನೆಗಳ ಮೈದಾನದಲ್ಲಿ ಬಾಣಗಳನ್ನು ಬಿಟ್ಟ, ಕೆಲವು ಧಾರ್ಮಿಕರಾದ ಯೋಧರು ಬೆಳಕಿನಂತಹ ಬುದ್ಧಿವಂತ ಮತ್ತು ಶಕ್ತಿ ಸಾಮರ್ಥ್ಯದ ಸಂರಕ್ಷಕರಾಗಿದ್ದಂತಹ ಬಹಾದುರರ ಮೇಲೆ ಬಾಣವು ಬಿದ್ದು ಸುಡುತ್ತಾ ಕೆಳಗೆ ಬಿತ್ತು ಮತ್ತು ಆ ಸ್ವಭಾವದಿಂದ ಕಣ್ಣಿಗೆ ಶೋಭೆ ಮತ್ತು ಶೃಂಗಾರದ ಕಾರಣದಿಂದ ನೋಡುಗರಿಗೆ ಭವ್ಯವಾಗಿ ಕಂಡು ಬರುತ್ತಿತ್ತು. ವಧುವಿನ ಶಯ್ಯಾಗೃಹದಿಂದ ಹೊರದೂಡಲ್ಪಟ್ಟ ಕೆಲವು ವ್ಯಕ್ತಿಗಳು ಕೃತಜ್ಞತೆ ಮಾಡುವ ಬೆಂಬಲ ಮತ್ತು ವಿಜಯದ ಪಾತ್ರವನ್ನು ವಹಿಸುತ್ತಿದ್ದ ಶುಭಾಕಾಂಕ್ಷಿ ಜನರು ಈ ರಕ್ತಪಾತಕ್ಕೆ ಬಲಿಯಾದರು. ರಕ್ತದೋಕುಳಿಯಾಡುತ್ತಿದ್ದ ಬಾಣಗಳ ಹಾದಿಗುಂಟ ಫಿರ್ದೋಸ್ ಸ್ವರ್ಗದ ಶರಾಬುಖಾನೆಯ ಹೊರತು ಹುತಾತ್ಮರ ಶರಾಬುಖಾನೆಯಲ್ಲಿ ಪಾನಪ್ರಿಯರಾದರು. ಯುದ್ಧರಂಗದ ಪರಿಸರದಲ್ಲಿ ಹಾರಾಡುತ್ತಿದ್ದ ಗರುಡಪಕ್ಷಿಗಳ ಬಾಗಿದ ನಖಗಳ ಆಹಾರವಾದ ಸೈನಿಕರು ಚೀತ್ಕಾರವನ್ನು ಹೊರಡಿಸುತ್ತಿದ್ದರು ಮತ್ತು ಬಾಣಗಳು ಜೀವಗಳನ್ನು ಬೇಟೆಯಾಡುತ್ತಾ ರಕ್ತದೋಕುಳಿಯ ತೀವ್ರತೆಯಿಂದ ಇಕಾಬ್ ಪಕ್ಷಿಗಳಂತೆ ನಿಶ್ಚೇಷ್ಟಿತವಾದವು. ಶರ್ಜಾಖಾನನು ಅತ್ಯಂತ ಪರಾಕ್ರಮ ಮತ್ತು ವೀರಾವೇಷದೊಂದಿಗೆ ಸ್ಥಿರವಾದ ಹೆಜ್ಜೆ ಮತ್ತು ಧೃಡ ನಿಶ್ಚಯದೊಂದಿಗೆ ಹೋರಾಟ ಮಾಡಿದ. ಯುದ್ಧಕೋರ ಸಿಪಾಯಿಗಳು ಮತ್ತು ವೇಗದ ಕುದುರೆಗಳ ಜೊತೆಯಲ್ಲಿ ವೇಗದ ಗಾಳಿಯೊಂದಿಗೆ ಸ್ಪರ್ಧಿಸುತ್ತಾ ರಿಕಾಬಿನಲ್ಲಿ ಹೆಜ್ಜೆಗಳನ್ನು ಊರಿ ಗಾಳಿಯನ್ನು ಸೀಳುತ್ತಾ ಪಿತೂರಿಯಿಂದ ಕೂಡಿ ಯುದ್ಧರಂಗದಲ್ಲಿ ಜ್ವಾಲೆಗಳನ್ನು ಉಗುಳುತ್ತಾ ರಕ್ತದೋಕುಳಿಯನ್ನು ಹರಿಸುತ್ತಾ ನವ ವಸಂತದಂತೆ ರಕ್ತದ ಮಳೆಗರಿಸುತ್ತಾ ಕೇಕೆ ಹಾಕುತ್ತ ಭಾವಪೂರ್ಣವಾಗಿ ಎತ್ತರದ ಧ್ವನಿಯಲ್ಲಿ ಘರ್ಜಿಸುತ್ತಾ ಸಫಲತೆಯನ್ನು ಮತ್ತು ವಿಜಯವನ್ನು ಪ್ರದರ್ಶಿಸುವ ಧ್ವಜಗಳನ್ನು ವಿಜಯಪ್ರಾಪ್ತಿ ಮತ್ತು ನೆರವಿನ ಉದ್ಯಾನವನವನ್ನಾಗಿಸಿದರು. ಅವುಗಳನ್ನು ಎತ್ತರಕ್ಕೆ ಹಾರಿಸುತ್ತ ಬೆಂಕಿಯನ್ನು ಉಗುಳುತ್ತಾ ಕತ್ತಿಯ ಧಾಳಿಯಿಂದ ಅಲೆಗಳನ್ನು ಹುರಿದುಂಬಿಸುತ್ತಾ ಆಕಾಶದ ಎತ್ತರದ ಸಂಗಾತಿಯನ್ನು ಆಯ್ಕೆ ಮಾಡಿಕೊಂಡ. ಆಕ್ರಮಣದ ಗಾಢ ಪರಿಸರದಿಂದ ಭೂಮಿಯನ್ನು ಆಕಾಶದಂತೆ ಚಲನೆ ಮತ್ತು ಕಳವಳದಲ್ಲಿ ಕೂಡುವಂತೆ ಮಾಡಿದ

ಬಹಾದುರ್ ಸಿಂಹದಂತೆ ಯುದ್ಧರಂಗದಲ್ಲಿ ಪ್ರವೇಶಿಸಿದ ಮತ್ತು
ಭೂಮಿಯ ತಲೆ ಮತ್ತು ಕೊಂಬೆಗಳನ್ನು ಕತ್ತರಿಸಿ ಎಸೆದ
ಅವನ ಜೊತೆಯಲ್ಲಿ ಸೈನಿಕರು ಎಲ್ಲರೂ, ಎಲ್ಲಾ
ಸೈನಿಕರೂ ಆವೇಶ ಭರಿತರಾಗಿದ್ದರು ಕಬ್ಬಿಣದಲ್ಲಿ
ಅಗ್ನಿಯಿಂದ ಹೇಗೆ ಶಾಖ ಉತ್ಪತ್ತಿಯಾಗುವುದೋ ಅಂತೆ

ಸುರಯ್ಯಾನ ಕರಾರಿನಂತೆ ಅವು ಪರಸ್ಪರ ಮಿಳಿತಗೊಂಡಿದ್ದವು. ಯುದ್ಧರಂಗದಲ್ಲಿ ಘೋರ ಕದನವು ಆರಂಭವಾದಾಗ ಅವರು ಪರಸ್ಪರ ಏಕಮನದಿಂದ ಕೂಡಿದ್ದರು. ಸಲಾಬತ್‌ಖಾನ್ ಮತ್ತು ಅವನ ಎಲ್ಲಾ ಸಂಗಾತಿಗಳು ಈ ರೀತಿಯ ನೋಟವನ್ನು ಕಂಡು ಬಿಲ್ಲು ಮತ್ತು ಬಾಣವನ್ನು ಮಕ್ಕಳಾಟಿಕೆಯ ಬಿಲ್ಲು ಬಾಣದಂತೆ ಮಕ್ಕಳು ಆಟವಾಡಲು ಬಿದಿರಿನ ಬಿಲ್ಲುಬಾಣವನ್ನು ತಯಾರಿಸಿ ಕೆಲವೇ ಹೊತ್ತಿನ ನಂತರ ಮುರಿದು ಬಿಸಾಡುತ್ತಾರೆ. ಕೈಯಿಂದ ಕೆಳಗೆ ಬಿಸಾಡಿ ಕತ್ತಿಗಳನ್ನು ಒರೆಯಿಂದ ಹೊರತೆಗೆಯಲು ಮತ್ತು ಆ ನಡುವೆ ಯುದ್ಧ ಮತ್ತು ಕದನದ ಬೆಂಕಿಯು ಅಗ್ನಿಯ ಜ್ವಾಲೆಯಂತೆ ಹೊತ್ತಿಕೊಂಡಿತು. ಸಲಾಬತ್ ಖಾನ್ ಮತ್ತು ಎಲ್ಲಾ ಕೇಡುಬುದ್ಧಿಯ ವಿರೋಧಿಗಳು ಮತ್ತು ಮೋಸಗಾರ ಶತ್ರುಗಳು ಬೆಂಕಿಯನ್ನು ಉಗುಳುವ ಕತ್ತಿಯ ಪಿತೂರಿಯ ಕ್ರೌರ್ಯವನ್ನು ಎರಗುವ ಶತ್ರುಗಳನ್ನು ನಿರ್ನಾಮ ಮಾಡುವ ಶರ್ಜಾಖಾನನು ಯಾವ ರೀತಿಯಲ್ಲಿ ಕುದುರೆಗಳ ಮೇಲೆ ಚಿಪಕಾಯಿಸಿದ್ದರೆಂದರೆ ವಿನಾಶಕಾರೀ ಕೃತ್ಯಗಳಲ್ಲಿ ನಿರತರಾಗಿದ್ದರು. ಎಲ್ಲರೂ ಒಳ ಬಂದರು ಮತ್ತು ಹರಿತವಾದ ಕತ್ತಿಯ ಸಿಡಿಲಿನಂತಹ ಹೊಳೆಯುತ್ತಿತ್ತು. ಅದರ ಮೂಲಕ ಆ ದುರ್ಗುಣ ಪ್ರೇರಿತ ದುರದೃಷ್ಟದ ಲಕ್ಷಣಗಳಿಂದ ಕೂಡಿದ್ದ ವಿದ್ರೋಹಿ ಮತ್ತು ನತದೃಷ್ಟ ಹಾಗೂ ಅಯೋಗ್ಯತನವನ್ನು ಅರಿತು ಈಜಿಪ್ಟಿನ ದೊರೆ ಫೇರೋವಿನ ಗುಣಸ್ವಭಾವದ ಬೆಂಬಲಿಗ ಖಾನನನ್ನು ಅನಾಮಿಕತೆಯ ಮತ್ತು ಮರಣದ ಸಮುದ್ರದಲ್ಲಿ ಮುಳುಗಿಸಿದರು. ತೋಪುಗಳು ಮತ್ತು ಬಂದೂಕುಗಳ ಹೊಗೆ ಮತ್ತು ಕಪ್ಪು ಧೂಮವು ಯುದ್ಧರಂಗದಲ್ಲಿ ವಾಯುವೇಗದಿಂದ ಬೀಸುತ್ತಿರುವಲ್ಲಿ ಆ ಯುದ್ಧಭೂಮಿಯಲ್ಲಿ ಎದ್ದು ಹಾಯುತ್ತಿದ್ದ ಧೂಳು ಬೆಳೆಯುವ ಹಗಲನ್ನು ಅಂಧಕಾರದಿಂದ ಕೂಡಿದ ಕತ್ತಲು ಎಂದು ಚಿಂತಕ ಬೆಂಬಲಿಗರು ಮತ್ತು ಬುದ್ಧಿವಂತ ಮೇಧಾವಿಗಳು ಭಾವಿಸತೊಡಗಿದರು ಮತ್ತು ಚಿಂತಕ ಬುದ್ಧಿವಂತರು ಎಂದಿಗೂ ಗೆಲುವನ್ನು ಪಡೆಯುವ ಶತ್ರುಗಳನ್ನು ಸುಟ್ಟುಹಾಕುವ ಮತ್ತು ಬೆಂಬಲಿಗರ ಕತ್ತಿಗಳ ಜ್ವಾಲೆಯಂತಹ ಕತ್ತಿ ವರಸೆಯಿಂದ ದುರದೃಷ್ಟ ವಿರೋಧಿಗಳ ಪ್ರಾಣ ಹತ್ಯೆ ಮಾಡುವ ಸಂದರ್ಭವನ್ನು ಬೆಳಗುವ ಹೊಳೆಯುವ ಮುಂಜಾವಿಗಿಂತಲೂ ಹೆಚ್ಚು ಪ್ರಕಾಶಮಯವಾಗಿದೆ ಎಂದು ಅಂದುಕೊಂಡರು ಮತ್ತು ಆ ಅನ್ಯಾಯದ ಗುಂಪಿನಿಂದ ಕೆಲವು ಜನರು ಆ ದೇಶದ ದೈವಭಕ್ತ ಜನತೆಯ ಸನ್ನಡತೆ ಮತ್ತು

ಅದೃಷ್ಟವನ್ನು ನೈಜವಾದ ನೋಟದಿಂದ ಕಂಡರು. ರಾತ್ರಿಯ ಅಂಧಕಾರದ ಕತ್ತಲಿನ ರೀತಿಯಲ್ಲಿ ಸೈನ್ಯವು ಬಿಳಿಯ ಬೆಳಗುವ ಚೆಹರೆಯನ್ನು ಹೊಂದಿದ ಪೂರ್ಣಚಂದ್ರ ಮತ್ತು ನಕ್ಷತ್ರಗಳ ನಡುವೆ ಕಂಗೊಳಿಸುತ್ತಿದ್ದ ಸೂರ್ಯ ಉದಯವಾಗುವುದನ್ನು ಕಾಯುತ್ತಿದ್ದರು. ಅವರು ಈ ರೀತಿಯಲ್ಲಿ ಕತ್ತಿಯಿಂದ ಹೊತ್ತಿದ ಜ್ವಾಲೆಯ ಬೆಂಕಿಯಿಂದ ಅಪಜಯದ ಕ್ಷೇತ್ರದಲ್ಲಿ ಪಲಾಯನ ಮಾಡುವವರಾದರು.

■

*

ಅಧ್ಯಾಯ-೧೨

ಕುತುಬಶಾಹನೊಂದಿಗೆ ಸ್ನೇಹ ಮೊಗಲರೊಂದಿಗೆ ಯುದ್ಧ

ಆ ಸಂದರ್ಭದಲ್ಲಿ ಸಫಲತೆಯನ್ನು ಸಾಧಿಸಿದ ಅವಳಿ ಖಾನ್‌ದಾನ್‌ಗಳಾದ ಆದಿಲ್‌ಶಾಹಿ ಮತ್ತು ಹಿರಿತನ, ಪ್ರೌಢಿಮೆ ಮತ್ತು ಮೇಧಾವಿತನವನ್ನು ಹೊಂದಿದ ಖುತುಬ್‌ಶಾಹಿ ಕುಟುಂಬದ ಜನರು ಬಾಹ್ಯ ಸ್ವರೂಪದಲ್ಲಿ ಭಿನ್ನವಾಗಿದ್ದರು ಮತ್ತು ಆಂತರಿಕವಾಗಿ ಒಂದೇ ಆಗಿದ್ದರು. ಪರೀಕ್ಷೆ ಮಾಡುವ ಪರೀಕ್ಷಕ ದೃಷ್ಟಿಯನ್ನು ಹೊಂದಿದ ಈ ಎರಡು ಆಕಾಶದೆತ್ತರದ ಅಧಿಕಾರವನ್ನು ಹೊಂದಿದ್ದ ನೋಟದ ನಂಬಿಕಸ್ಥ ದೃಷ್ಟಿಯಿಂದ ಒಂದೇ ಆಗಿದ್ದರು. ಆ ಸಂತೋಷ ಮತ್ತು ನಂಬಿಕೆಗೆ ಅರ್ಹವಾದ ಸುದ್ದಿಯನ್ನು ಆಲಿಸಿದ ನಂತರ ರಾಜ್ಯದ ಅನೇಕ ಭಾಗಗಳಲ್ಲಿ ಸಂತೋಷ ಮತ್ತು ನೆಮ್ಮದಿ ಮೂಡಿತು. ಸುಲ್ತಾನ್ ಅಬ್ದುಲ್ಲಾ ಖುತುಬ್ ಶಾ ಮುಮಲಿಕತ್ ಮದಾರ್ ಅಬ್ದುಲ್ ಮೊಹಮ್ಮದ್‌ನ ಸಲುವಾಗಿ ಹಜರತ್ ಬಾದಶಹ ಫಾಝಿಯ ದರಬಾರಿನಲ್ಲಿ ಒಂದು ಗೆಳೆತನದ ಪತ್ರವನ್ನು ಬರೆದರು. ಸೌಭಾಗ್ಯವಂತ ಖಾನನ ಜೊತೆಯಲ್ಲಿ ಅತೀವ ಒಳ್ಳೆಯ ಹೆಸರು ಆಕಾಶದಷ್ಟು ಎತ್ತರ ಮತ್ತು ಔನ್ನತ್ಯಹೊಂದಿದ ದರಬಾರಿನ ಪ್ರಖ್ಯಾತ ಹೆಸರಿನ ಖಾನ್ ನಾನು ಸಫಲತೆಯ ಜೊತೆ ಜೊತೆಯಲ್ಲಿ ನಡೆಯುವ ಸರದಾರರ ಅನುಸರಣೆ ಮತ್ತು ಪರಾಕ್ರಮವನ್ನು ಜೊತೆಯಲ್ಲಿ ಇರುವಂತಹ ಮಂತ್ರಿಗಳು ಲೋಕದಲ್ಲಿ ವಿದ್ರೋಹದ ಸಂಚನ್ನು ನಡೆಸುವ ಜನರನ್ನು ಅವರ ಶತ್ರುಗಳ ದೇಹಗಳನ್ನು ಅಗ್ನಿಗೆ ಅರ್ಪಿಸುವ ಭಯ ಮತ್ತು ಹೃದಯವನ್ನು ಭೇದಿಸುವ ಬಾಣಗಳ ಹೆದರಿಕೆಯಿಂದ ರಕ್ಷಣೆಯ ಹೊರೆಯನ್ನು ಬೆನ್ನಿನ ಮೇಲೆ ಹೊತ್ತಿರುತ್ತಾರೆ ಮತ್ತು ಆಜ್ಞಾಪಾಲನೆ ಹಾಗೂ ವಿಧೇಯತೆಯ ಕರ್ತವ್ಯಗಳನ್ನು ಕುತ್ತಿಗೆಗೆ ಕಟ್ಟುವ ಯಂತ್ರದ ರೀತಿಯಲ್ಲಿ ಹೃದಯಸ್ಥರಾಗಿದ್ದಾರೆ.

ಅರಮನೆಯ ಸೇವೆಯಲ್ಲಿ ಇರುವವರಂತೆ ವಿನಯವಂತಿಕೆಯ ಗಣಿಯಿಂದ ಬಂಗಾರವನ್ನು ಹೆಕ್ಕುವವರು ಮತ್ತು ಗೌರವದ ಮರುಭೂಮಿಯಲ್ಲಿ ಹುಡುಕಾಡುತಿದ್ದರು. ಶತ್ರುಸಂಹಾರದ ಸಲುವಾಗಿ ನೆರವನ್ನು ಪಡೆಯುವ ಕ್ಷೇತ್ರದಲ್ಲಿ ಯುದ್ಧರಂಗದಲ್ಲಿ ಶತ್ರುಗಳ ನಿರ್ನಾಮ ಮಾಡುವಲ್ಲಿ ಎಲ್ಲಾ ಯುವಕರು ಮತ್ತು ಸಿಂಹವನ್ನು ಹರಿದು ಎಸೆಯುವ ಪರಾಕ್ರಮಿಗಳ ಶೌರ್ಯದ ದೆಸೆಯಿಂದ ಕೃತಜ್ಞತೆ ಮತ್ತು ಸಿರಿವಂತಿಕೆಯ ಘಂಟೆಯನ್ನು ಹೆಗಲ ಮೇಲೆ ಹೊತ್ತು ಮದೀನಾದ ಹಸಿರು ಗೊಮ್ಮಟದಲ್ಲಿ ಎತ್ತರದ ಆವೇಶಭರಿತ ಘರ್ಜನೆಯನ್ನು ಮಾಡುವವನಾಗಿ ಮಾಡಿದರು. ಒಟ್ಟಾರೆ ಉಭಯ ಲೋಕಗಳ ಖ್ಯಾತಿ ಮತ್ತು ಸಂತೋಷ ಮತ್ತು ನೆಮ್ಮದಿಯ ಮೋರೆಯು ಶತ್ರುಗಳ ಹೃದಯವನ್ನು ಸೀಳುವ ಮತ್ತು ಅವರ ಎದೆಯ ಕನ್ನಡಿಯಲ್ಲಿ ಪ್ರತಿಬಿಂಬವು ಹೊಳೆಯುವಂತೆ ಮಾಡಲಿ. ಉಭಯಲೋಕದ ಸಂತೋಷವು ನತದೃಷ್ಟ ಹಾಗೂ ಅದೃಷ್ಟಹೀನನ ರಕ್ತವನ್ನು ಬೆವರೆಂದು ಪರಿಗಣಿಸುತ್ತಾ ಆ ದುರುಳ ಮತ್ತು ದುರ್ಗುಣಗಳ ಕಳವಳ ಮತ್ತು ಆತಂಕದ ಮೈದಾನದಲ್ಲಿ ಬೆಂಕಿಯನ್ನು ಉರಿಸುವವನ ಬದುಕಿನ ಗಣಿಯನ್ನು ಸುಟ್ಟು ಹಾಕುವಂತಾಗಲಿ. ಬೆಹ್ರಾಮ್‌ಶಾಹ್‌ನಂತಹ ಪರಾಕ್ರಮವನ್ನು ಹೊಂದಿದ ಬಾದಶಹ ನೀಡಿದ ಹಣವನ್ನು ಸೂರ್ಯನಂತೆ ಬೆಳಗುವ ಅತ್ಯಂತ ಉನ್ನತ ವಂಶಸ್ಥರೂ ಪರಾಕ್ರಮಿಯೂ ಆದ ಉನ್ನತ ಹುದ್ದೆಯನ್ನು ಹೊಂದಿದ ಪ್ರವಾದಿಯವರ ಅನುಯಾಯಿಗಳು ಹೊಂದಿದ್ದಂತಹ ಸದ್ಗುಣಗಳು ಮತ್ತು ವ್ಯಕ್ತಿತ್ವ ಹಾಗೂ ಈ ಎಲ್ಲಾ ತಗಾದೆಗಳನ್ನು ಅಂಗೀಕಾರದ ಪರಿಕ್ರಮದಲ್ಲಿ ನಂಬಿಕೆ ಹುಟ್ಟುವಂತೆ ಮಾಡಿದಲ್ಲಿ ಮತ್ತು ಆ ಇಚ್ಛೆಯನ್ನು ಸ್ವೀಕರಿಸದೆ ಇರುವಂತೆ ಮಾಡಿದಲ್ಲಿ ಖಚಿತವಾಗಿಯೂ ಚೇಳಿನಂತಹ ಸ್ವಭಾವವನ್ನು ಹೊಂದಿದ ಶತ್ರುವಿನ ಪಿತೂರಿಯ ಬಾಲ ಮತ್ತು ಸರ್ಪದಂತಹ ಸ್ವಬಾವವನ್ನು ಹೊಂದಿದ ದುರ್ಬುದ್ಧಿಯ ಎದುರುದಾರನ ತಲೆಯನ್ನು ಭಯ ಮತ್ತು ನಿರಾಶೆಯ ಕಲ್ಲಿನಿಂದ ಕುಟ್ಟಿ ಗಾಯಗೊಳಿಸಿ ಮತ್ತು ಭರವಸೆ ಇಲ್ಲದಂತಹ ನಿರಾಶೆಯ ಕಲ್ಲಿನಿಂದ ಜಜ್ಜಿ ಗಾಯಗೊಳ್ಳುವನು. ದುರ್ವ್ಯವಹಾರಗಳ ವಿಶ್ವಾಸಘಾತಕ ದ್ರೋಹಿ ಮತ್ತು ವಂಚಕನ ಹಸ್ತ ನಮ್ಮ ಉನ್ನತ ವೈಭವದ ದರ್ಜೆಯ ಉಭಯ ವಂಶಾವಳಿಗಳು ಕೆಡುಕಿನಿಂದ ಭಯ ಮತ್ತು ಅಪಾಯದ ತೋಳಿನಲ್ಲಿ ಹಾಕಿ ದುಃಖ ಮತ್ತು ಆತಂಕದಲ್ಲಿ ಮುಳುಗಿ ಸೀಮಿತವಾದ ಮೂಲೆಯಲ್ಲಿ ವಿಶ್ರಮಿಸಲಿ.

ಬುದ್ಧಿವಂತ ಮತ್ತು ಚಾಲಾಕಿತನದ ಸುಂದರ ಪುಷ್ಪಗಳಂತಹ ಜನರು ಮತ್ತು ತೋರಿಕೆಯ ಕೃತಕ ಪುಷ್ಪಗಳ ನಕಲಿ ಅನುಸರಣೆಯನ್ನು ಮಾಡುವುದು ಮುಚ್ಚುಮರೆಯಾಗಿಲ್ಲ, ಅದೆಂದರೆ ಪುರಾತನ ಕಾಲದಿಂದಲೂ ಖುತುಬ್‌ಶಾಹಿ ವಂಶಾವಳಿಯು ಆದಿಲ್‌ಶಾಹಿ ವಂಶಾವಳಿಯ ಪರಸ್ಪರ ಪ್ರೇಮ ವಾತ್ಸಲ್ಯದ ತೋಟದ ಮಾಲಿಯಂತಹ ತರಬೇತಿಯಿಂದ ಪ್ರಕಟವಾಗಿದ್ದು ತಾಜಾತನದಿಂದ ಕೂಡಿ ಇಡೀ

ವಿಶ್ವವನ್ನು ತಮ್ಮ ಬೆಂಬಲ ಮತ್ತು ಲೋಕಕ್ಕೆ ನೆಮ್ಮದಿಯ ನೆರಳಿನಲ್ಲಿ ಆರಾಮ ಮತ್ತು ಶಾಂತಿಯನ್ನು ಕೊಡುಗೆಯಾಗಿ ನೀಡಿದರು ಮತ್ತು ವಿಶ್ವಕ್ಕೆ ಕಷ್ಟ ಸಹಿಷ್ಣು ಮತ್ತು ಅಸಹಾಯಕತೆಯ ಬಿಸಿ ಹಾಗೂ ಯಾತನೆಯಿಂದ ಉತ್ತಮವಾದ ನೆರಳಿನಲ್ಲಿ ಮುಕ್ತಿ ಮತ್ತು ಬಿಡುಗಡೆಯನ್ನು ನೀಡಿದ. ಆ ಅವಧಿಯಲ್ಲಿ ಸಿರಿವಂತಿಕೆ ಮತ್ತು ಸಮೃದ್ಧಿ ಹಾಗೂ ವಸಂತದ ಸಂಭ್ರಮವನ್ನು ಹೆಚ್ಚಳ ಮಾಡಿದರು ಹಾಗೂ ದೇಶದ ಉದ್ಯಾನವನಗಳಿಗೆ ಶೋಭೆಯನ್ನು ನೀಡುವವರಾದರು. ನಾವು ಶ್ರೇಷ್ಠತೆಯ ಬೆಳಗಿನ ತಂಗಾಳಿಯ ಮತ್ತು ನಿಷ್ಕಪಟ ಪಾರಮಾರ್ಥಿಕತೆಯ ಐಕ್ಯತೆಯ ಮೋಡದ ಹನಿ ಉದುರುವಿಕೆಯಿಂದ ಹಜರತ್ ಜನ್ನತ್ ಮಕಾನಿ ಫಿರ್ದೋಸ್ ಆಶಿಯಾನಿ ಮತ್ತು ರಾಜ್ಯಭಾರದ ಸಿಂಹಾನದ ಮೇಲೆ ಆಸೀನರಾಗುವ ಮತ್ತು ಆಡಳಿತದ ದೇಶದ ಅಧಿಕಾರಸ್ಥರಿಂದ ಆ ವೃಕ್ಷದ ಫಲ ಪಡೆಯುವವರನ್ನಾಗಿ ಮಾಡಿ ಚಳಿಗಾಲದ ಎಲೆ ಉದುರುವ ಆಪತ್ತಿನಿಂದ ರೆಂಬೆಗಳು ಮತ್ತು ಎಲೆಗಳನ್ನು ಸಂರಕ್ಷಿಸಿ ಸೃಷ್ಟಿಯನ್ನು ಜನರನ್ನು ದಾನ ಧರ್ಮದ ಅಭಯದಿಂದ ಕ್ರಿಯಾಶೀಲರನ್ನಾಗಿ ಮಾಡಿ ಗಂಟಲಿಗೆ ಮಧುರದ್ರವದಿಂದ ಸಿಹಿಗೊಳಿಸಿ ಬಡತನದ ದುಃಖ ಮತ್ತು ಕಹಿಯನ್ನು ದೂರಗೊಳಿಸುವವರಾಗಿದ್ದೇವೆ. ಈ ಹೊತ್ತು ಕುತಂತ್ರಿ ಮೋಸಗಾರ ನೆಪಕೋರ ದುರುಳ ನಾಸ್ತಿಕನ ಕೈಯಿಂದ ನ್ಯಾಯ ಪರತೆಯ ತಕ್ಕಡಿಯ ಗರುಡ ಪಕ್ಷಿಯು ಹಾರಿ ಹೋಯಿತು. ಏಡಿಯಂತೆ ವಕ್ರ ನಡಿಗೆ ಮತ್ತು ಸಿಂಹದಂತೆ ರಕ್ತಪಿಪಾಸುತನವನ್ನು ತೋರಿದ್ದಾನೆ. ನಮ್ಮ ಬಲಿಷ್ಠ, ಬಲಾಢ್ಯ ವೈಭವಪೂರಿತ ಆಕಾಶದಲ್ಲಿ ಬೆಳಗುವ ಚಂದ್ರನಿಗೆ ರುಚಿ ಮತ್ತು ಕರುಣೆಯ ಬೆಳಕಿನ ಸೂರ್ಯಕಿರಣವನ್ನು ಪಡೆಯುವುದರಿಂದ ಅಡ್ಡಿಯಾಗುವನು ಮತ್ತು ಈ ಧರ್ಮ ರಕ್ಷಕ ಬಾದಶಹನ ಪ್ರೀತಿ ವಾತ್ಸಲ್ಯದಿಂದ ಎಲ್ಲರ ಹೆದರಿಕೆಯ ಅಂಧಕಾರದ ಸೆರೆಮನೆಯ ಕೈದಿಯನ್ನಾಗಿ ಮಾಡಲಿ ಮತ್ತು ವಕ್ರ ನಡತೆ ಹಾಗೂ ಕೀಳು ನಡವಳಿಕೆಯಿಂದ ಕೂಡಿದ ಜನರು ದ್ವೇಷದಿಂದ ಕೂಡಿ ಮತ್ತು ಭೀತಿಯಿಂದ ನಮ್ಮ ಪೂರ್ವಿಕರು ಹಾಗೂ ಎತ್ತರದ ಗೆಳೆತನದ ದಿನ ನಿತ್ಯತೆಯನ್ನು ಹೊಳೆಯುವ ಅಂತಿಮ ಎತ್ತರಕ್ಕೆ ತಲುಪಿಸಿ ಹೊಳೆಯುತ್ತಿದ್ದಾರೆ. ನಷ್ಟದ ಮನೆಯಲ್ಲಿ ಹಾಕಲಿ ಕಪಟದ ಶನಿಗ್ರಹವನ್ನು ಮತ್ತು ದೌರ್ಜನ್ಯದ ಮಂಗಳ ಗ್ರಹವನ್ನು ಆ ಪ್ರದೇಶದಲ್ಲಿ ವಾಸ ಮಾಡುವವರಿಗೆ ಬೇರ್ಪಡುವಂತಹ ವಿರಹದ ನೆರಳನ್ನು ಹರಡಲಿ. ಚಿಂತಕರ ನಿರ್ಮಲ ಹೃದಯವನ್ನು ಭೇದ ಮತ್ತು ಭಿನ್ನಾಭಿಪ್ರಾಯದ ದುಃಖದ ಬಾವಿಯಲ್ಲಿ ಹಾಕಿ ನಮ್ಮ ಆರಾಮ ಶಾಂತಿ ಮತ್ತು ನೆಮ್ಮದಿಯು ಹಜರತ್ ಸಿತಾರಾರವರಿಗೆ ದುಃಖ ಮತ್ತು ಯಾತನೆಯ ಕಲ್ಲನ್ನು ಎತ್ತಿದವರು ಆತಂಕದ ಪರಿಸ್ಥಿತಿಯನ್ನು ನಿರ್ಮಿಸಲಿ. ಒಟ್ಟಾರೆ ನಾವು ಪ್ರವಾದಿ ಯೇಸುವಿಗೆ ಇದ್ದಂತಹ ಜೀವಂತಗೊಳಿಸುವ ಶಕ್ತಿಯಂತೆ ವಿಶೇಷ ಸಾಮರ್ಥ್ಯವನ್ನು ಹೊಂದಿದದವರ ಮುಂದೆ ಇದನ್ನು ಸಲ್ಲಿಸುತ್ತಿದ್ದು ಎಲ್ಲಾ ಪ್ರಾಣವನ್ನು ಅರ್ಪಿಸುವ ಮತ್ತು ಬಲಿದಾನ ನೀಡುವ

ಲಕ್ಷಣಗಳನ್ನು ಹೊಂದಿರುವ ಸೈನಿಕರ ಆ ಸ್ಥಳದಿಂದ ಹಜರತ್ ಬಾದಶಹ ಘಾಜಿಯವರು ಗೆಳೆತನ ಮತ್ತು ಪ್ರೀತಿಯ ಶರಾಬು ಖಾನೆಯಲ್ಲಿ ಪಾನಪ್ರಿಯರಾದವರ ನಿರೀಕ್ಷೆಯ ಪಾನಪಾತ್ರೆಯನ್ನು ಮತ್ತು ಸತ್ಯ ಹಾಗೂ ನಿಷ್ಕಪಟತನ ಮತ್ತು ನ್ಯಾಯದ ಪಾನಪಾತ್ರೆಯಿಂದ ಶರಾಬಿನ ಅಮಲಿನಲ್ಲಿ ಮುಳುಗಿರುವ ಜನರನ್ನು ನಿರಂತರವಾಗಿ ಅವರಿಷ್ಟದ ದ್ರಾಕ್ಷಾರಸದಿಂದ ಎಂದೆಂದಿಗೂ ಶ್ರೀಮಂತಗೊಳಿಸಿದ ಮತ್ತು ಪುರಾತನ ವಾತ್ಸಲ್ಯದ ಶರಾಬುಖಾನೆಯ ಪಾನಪ್ರಿಯ ಜನರ ಇಚ್ಛೆ ಮತ್ತು ವಿಶೇಷತೆಯ ಶರಾಬನ್ನು ಸೇವಿಸುವ ಜನರ ಉದ್ದೇಶ ಮತ್ತು ಇಷ್ಟಾನಿಷ್ಟದ ಸಾಧನೆಯಿಂದ ಪೂರ್ಣಗೊಳಿಸಿದ. ಆಕಾಶದ ನಕ್ಷತ್ರಗಳ ಎತ್ತರದವರೆಗೂ ತಲಪುವ ಧ್ವಜಗಳ ಇಚ್ಛೆಯನ್ನು ಅಂಗೀಕಾರದ ದೃಷ್ಟಿಯಿಂದ ತುಂಬಾ ಗಮನದಿಂದ ಆಲಿಸಿದ. ಪ್ರೇಮ ತುಂಬಿದ ಆ ಪತ್ರವನ್ನು ಕೇವಲ ಪ್ರೇಮವನ್ನು ಬರವಣಿಗೆಯಲ್ಲಿ ದಾಖಲಿಸುವ ಚಿರಂತನವಾದ ಹೃದಯಕ್ಕೆ ಅಮಲನ್ನು ಬರಿಸುವ ಮತ್ತು ಹಸನ್‌ನ ಆನಂದದಿಂದ ತುಂಬಿದ ಹೃದಯದ ಧನದ ರೀತಿಯಲ್ಲಿ ವಿಶೇಷ ಶಬ್ದಗಳಿಂದ ತುಂಬಿಸಿದ ಬರವಣಿಗೆಯಿಂದ ವಿಶಿಷ್ಟಗೊಳಿಸಿದ.

ಅಲ್‌ಹಮ್‌ದುಲಿಲ್ಲಾಹ್ (ಸರ್ವ ಸ್ತುತಿಗಳು ಅಲ್ಲಾಹನಿಗೆ ಮೀಸಲು)ಆ ವಿಧ್ವಂಸಕನ ಅಜ್ಞಾನವು ಪಿತೂರಿ ಮತ್ತು ದಂಗೆಯ ಉದ್ದೇಶದಿಂದ ತಲೆ ಎತ್ತಿರುವುದೋ ಮತ್ತು ಮಣ್ಣಿನ ಬಿಂದಿಗೆಯಂತೆ ನಮ್ಮ ಆದೇಶಗಳನ್ನು ವಕ್ರವಾಗಿಸಿಲ್ಲವೋ ದಯಾನಿಧಿ ಹೂಜಿಯಂತೆ ಅಲ್ಲಾಹನ ಪ್ರೀತ್ಯರ್ಥದ ಮೂಲಕ ಬಾಯಾರಿಕೆಯನ್ನು ತಣಿಸುವವ ಈ ಉನ್ನತವಾದ ಕುತ್ತಿಗೆಯವನ ಗರ್ವವನ್ನು ನಮ್ಮ ಶುಭ ಅಭಿಲಾಷೆ ಮತ್ತು ಸಿರಿವಂತಿಕೆಯ ಪಾನಪ್ರಿಯ ವ್ಯಕ್ತಿಗಳ ಮುಂದೆ ಇಷ್ಟೊಂದು ಕೀಳನ್ನಾಗಿ ಮಾಡಿದ ಎಂದರೆ ಗಾಜಿನಂತೆ ಯಾಚನೆಯ ಮೋರೆಯನ್ನು ತೆರೆದು ಆಜ್ಞಾಧಾರಣೆ ಮತ್ತು ಸೇವೆಯನ್ನು ಅಂಗೀಕರಿಸದವನಂತಾದ. ಒಂದು ವೇಳೆ ಸಫಲತೆಯನ್ನು ಜೊತೆಯಲ್ಲಿ ಇಡುವ ಮತ್ತು ನಿರಂತರ ಪರಾಕ್ರಮವನ್ನು ತೋರುವವ ನಮ್ಮ ಇಂದಿನ ಬೆಂಬಲ ಮತ್ತು ಸಹಾಯವನ್ನು ಈಜಿಪ್ಟಿನ ದೊರೆ ಫೇರೋವಿನ ಸ್ವಬಾವ ಮತ್ತು ಗುಣವನ್ನು ಹೊಂದಿದಂತಹ ಅಹಂಕಾರಿ ಹಾಗೂ ಗರ್ವಿಷ್ಠ ಕ್ರಮಗಳನ್ನು ಅನುಸರಿಸಿದ ಜನರಿಗೆ ಎಚ್ಚರಿಕೆಯನ್ನು ನೀಡಿದಾಗ್ಯೂ ಎಲ್ಲ ಸಂಕಷ್ಟಗಳನ್ನು ಎದುರಿಸಿದಾಗ್ಯೂ ಬೇರೆಯವರ ನೆರವಿನ ಅವಶ್ಯಕತೆ ಇರುವುದಿಲ್ಲ. ಆದರೆ ಲೋಕಪಾಲನೆಯ ದೃಷ್ಟಿಯಿಂದ ಅಧಿಕಾರಸ್ಥ ಪೂರ್ವಿಕರ ಪೂರ್ವ ನಿದರ್ಶನಗಳ ಮೇರೆಗೆ ಪ್ರಖ್ಯಾತ ಬಾದಶಹನು ನಿರಂತರವಾಗಿ ಸಫಲತೆಯನ್ನು ಹೊಂದಿದ ಪರಾಕ್ರಮಶಾಲಿಯಾಗಿದ್ದಾನೆ. ಅವನ ಅನುರೂಪತೆ ಮತ್ತು ಸಾದೃಶ್ಯತೆಯ ಗಣಿಯು ನ್ಯಾಯಪರತೆಯ ಸಲ್ಲಕ್ಷಣವನ್ನು ಹೊಂದಿದ ಸುಲ್ತಾನರು ಮತ್ತು ಎತ್ತರ ಹಾಗೂ ಬಲಾಢ್ಯತೆ ಬಲಿಷ್ಠತೆಯನ್ನು ಹೊಂದಿದ ಬುನಾದಿಯಿಂದ ಕೂಡಿದ ರಾಜಕಾರಣವನ್ನು ಹೊಂದಿದ ರಾಜಮಹಾರಾಜರುಗಳಿಂದ ಕೂಡಿದ್ದು ಆ

ಎತ್ತರದ ವಂಶಾವಳಿಯ ಬೇರು ಧೃಢವಾಗಿದೆ ಮತ್ತು ಮಹಾನತೆಯು ಆಕಾಶದೆತ್ತರಕ್ಕೆ ಇದೆ ಎಂದು ಅರ್ಥಾನ್ವಯವಾಗುತ್ತದೆ. ಲಾಭ ಮತ್ತು ಅಭ್ಯುದಯದ ಪಾಲನ್ನು ಪಡೆಯುವ ಸಲುವಾಗಿ ಪ್ರೇಮ ಮತ್ತು ಸದಿಚ್ಛೆಯ ಸಂತತಿ ನಾಶವು ಮಹಾನತೆಯ ಮಹಿಮೆಯ ಗುರುತು ಮತ್ತು ಉನ್ನತಿಯನ್ನು ಹೊಂದಿದವರು ನಮ್ಮ ಅಧಿಕಾರಸ್ಥರ ಕೃಷಿಯಲ್ಲಿ ಬೇರೆ ಯಾವ ವಸ್ತುವನ್ನು ಸೇರ್ಪಡೆ ಮಾಡುವುದಿಲ್ಲ. ಒಟ್ಟಾರೆ ಅವರೆಲ್ಲರ ಇಚ್ಛೆಯ ಉದ್ಯಾನವನವು ಆ ಆಕಾಶದಷ್ಟು ಎತ್ತರವನ್ನು ಹೊಂದಿರುವ ಬಾದಶಹ ಮತ್ತು ಇನಾಮು ಮತ್ತು ಕೊಡುಗೆಗಳ ಹೂದೋಟವನ್ನು ಅಂಗೀಕರಿಸಿದ ಸಿಹಿ ದ್ರವದ ಪೋಷಣೆ ಮತ್ತು ತಾಜಾತನದಿಂದ ಹಾಗೂ ಆ ಸದ್ವರ್ತನೆಯ ಒಡೆಯನ ಇಚ್ಛೆಯ ತೋಟವನ್ನು ಅಂಗೀಕಾರದ ಶುಭ್ರ ಮತ್ತು ಬಂಗಾರದ ಪನ್ನೀರಿನಿಂದ ಕೊಡುಗೆ ಮತ್ತು ಕಾಣಿಕೆಗಳಿಂದ ಸಂತುಷ್ಟ ಮತ್ತು ಉಲ್ಲಾಸದಿಂದ ಕೂಡಿ ತಾಜಾತನವನ್ನು ಅನುಗ್ರಹಿಸಿದನು. ಆ ಪ್ರಪಂಚವನ್ನು ಬೆಳಗುವ ಸೂರ್ಯನ ಆದೇಶವನ್ನು ಪರಿಪಾಲಿಸುವ ಸೂರ್ಯನು ಬೆಳಗುವ ಆಕಾಶವು ಮತ್ತು ಬೆಳಕನ್ನು ಬೀರುವ ಚಂದ್ರನ ವಿಜಯ ಪರಾಕ್ರಮದ ನಕ್ಷತ್ರವು ಪ್ರಸಿದ್ಧಿಯನ್ನು ಪಡೆದ ಖಾನ್ ಮೊದಲಾದವರ ಜೊತೆಯಲ್ಲಿ ಎಲ್ಲಾ ನಂಬಿಕಸ್ಥ ಮತ್ತು ಸದಾಚಾರವನ್ನು ಹೊಂದಿದ ನಮ್ಮ ಸೈನಿಕರ ಜೊತೆಯಲ್ಲಿ ಆಕಾಶದಂತಹ ದರ್ಜೆಯನ್ನು ಹೊಂದಿದ ಸಮುದ್ರದಲ್ಲಿ ಕಳುಹಿಸಿ ಹಗಲು ಮತ್ತು ರಾತ್ರಿಯಲ್ಲಿ ಉನ್ನತವಾದ ಪ್ರೇಮದ ಧೃಢವಾದ ಹಗ್ಗದಿಂದ ಗಂಟನ್ನು ಹಾಕಿ ಬಿಗಿಯಾಗಿ ಹಿಡಿದು ಹಾಗೂ ಸಾವಿನ ಹಬ್ಲೆ ಮತೀನ್ ಎಂಬ ಬೆಟ್ಟವನ್ನು ಹಿಡಿದು ನಿಲ್ಲುವವರಾಗುತ್ತಾರೆ. ಆ ಪ್ರೇಮ ಮತ್ತು ಸಮಯೋಚಿತವಾದ ರಾಜಾಜ್ಞೆಯ ಅವಲೋಕನ ಮತ್ತು ಸದಿಚ್ಛೆ ಹಾಗೂ ವಾತ್ಸಲ್ಯದಿಂದ ಕೂಡಿದ ಫರ್ಮಾನನ್ನು ವೀಕ್ಷಿಸಿದ ನಂತರ ಖುತುಬ್‌ಶಾಹ್ ವತಿಯಿಂದ ಬಂದಿದ್ದ ಆ ಪತ್ರವನ್ನು ಓದಿದ ನಂತರ ರುಸ್ತುಮ್‌ನಂತಹ ಸಲ್ಲಕ್ಷಣಗಳನ್ನು ಹೊಂದಿದ್ದ ಸೈನ್ಯದ ಸರದಾರರು ಮತ್ತು ಖ್ಯಾತ ಖಾನ್ ಸೈನ್ಯಾಧಿಕಾರಿಗಳನ್ನು ಹನ್ನೆರಡು ಸಾವಿರ ವಿಜಯಿ ಪರಾಕ್ರಮಿ ಸೈನಿಕರೊಂದಿಗೆ ಮತ್ತು ನಲವತ್ತು ಸಾವಿರ ರೂಪಾಯಿ ಹಣವನ್ನು ಯುದ್ಧದ ನಿಷ್ಣಾತರಾಗಿದ್ದ ಸೈನಿಕರೊಂದಿಗೆ ಆಕಾಶದೆತ್ತರಕ್ಕೆ ಅನುಸಾರವಾಗಿ ಅತ್ಯಂತ ಯೋಗ್ಯತೆ ಮತ್ತು ಹಿರಿತನ ಮತ್ತು ಬಲಾಢ್ಯತೆಯನ್ನು ಹೊಂದಿದ್ದ ದರಬಾರಿನಿಂದ ನಂಬಿಕೆ ಮತ್ತು ಸತ್ಯ ವಿಶ್ವಾಸದ ಶ್ರದ್ಧೆಯ ಲೇಖನಿಯೊಂದಿಗೆ ಕರಾರನ್ನು ಶಾಂತಿ ಮತ್ತು ರಕ್ಷಣೆಯ ಅದೃಷ್ಟದ ಹಾಳೆಯ ಮೇಲೆ ಸಹಿ ಹಾಕುವವರಿದ್ದರು. ಸದರಿ ವಿಷಯವನ್ನು ಅಲ್ಲಿ ವಾಸ್ತವ್ಯ ಹೂಡುವ ಜನರ ಹೆಸರಿನಲ್ಲಿ ಬರೆಲಾಗಿದೆ ಮತ್ತು ಪುರಾತನ ಮನೆಯ ನಗಾರಿಖಾನೆಯ ಕೆತ್ತಿದ ಚಿತ್ರಣದಲ್ಲಿ ಅಲ್ಲಿ ವಾಸ್ತವ್ಯ ಹೂಡಿದ ಜನರಿಗೆ ಆನಂದ ಮತ್ತು ಸಂತೋಷದ ಲೇಖನಿಯ ಮೊನೆಯಿಂದ ರಂಗುಭರಿತ ವೈಭವ ಹಾಗೂ ವಿಶಿಷ್ಟತೆಗಳನ್ನು ನೀಡಿ ಅಲ್ಲಿಂದ ಬೀಳ್ಕೊಡುಗೆ ಮಾಡಲಾಯಿತು.

ಹಜರತ್ ಬಾದಶಹ ಘಾಝಿ ಆ ಶ್ರೇಷ್ಠ ಖಾನ್‌ರವರ ಆಗಮನದಿಂದ ಸಾವಿರಾರು ಪುಷ್ಪಗಳು ಮತ್ತು ಸುಗಂಧಪೂರಿತ ಆಹ್ಲಾದಕರ ಸುಮಗಳ ಜೊತೆಯಲ್ಲಿ ಚೈತನ್ಯ ಮತ್ತು ಔನ್ನತ್ಯವನ್ನು ಹೊಂದಿದ ಆ ಎತ್ತರದ ಮತ್ತು ರಾಜಕಾರಣದ ವಿಶೇಷ ಜ್ಞಾನವನ್ನು ಹೊಂದಿದ ಖುತುಬ್‌ನ ಜೇಬಿನಲ್ಲಿ ಹಾಕುತ್ತ ಅವನ ವೀರ ಪರಾಕ್ರಮಿ ಸೂರ್ಯನೋಪಾದಿಯಲ್ಲಿ ಉದಯವಾಗುವ ಬೆಳಕನ್ನು ಮತ್ತಷ್ಟು ಪ್ರಖರಗೊಳಿಸುತ್ತ ಬಲಾಢ್ಯತೆ ಮತ್ತು ಗೆಳೆತನದ ವೈಭವಪೂರ್ಣ ನಡವಳಿಕೆಯ ಮೂಲಕ ಉತ್ತಮ ಶಿಷ್ಟಾಚಾರ ಮತ್ತು ಆದರಪೂರ್ವಕ ನಡವಳಿಕೆಯಿಂದ ಪ್ರತಿನಿತ್ಯದ ದಿರಿಸನ್ನು ತಮ್ಮ ಅಳತೆಗೆ ತಕ್ಕಂತೆ ಹೊಲಿಸಿದರು. ರಸೂಲ್‌ಪುರ ಕಸಬಾವನ್ನು ತಮ್ಮ ಶುಭ ಆಗಮನ ಮತ್ತು ಇಚ್ಛೆಯ ಸೂರ್ಯನ ಶ್ರೇಷ್ಠತೆಯೊಂದಿಗೆ ಉದಯದ ಮೂಲಕ ಮುತ್ತು ರತ್ನಗಳ ಹೊಳೆಯುವ ಮತ್ತು ಅಲಂಕೃತಗೊಳಿಸುವ ಅಬ್ದುಲ್ ಮೊಹಮ್ಮದ್‌ನನ್ನು ಪ್ರಪಂಚದಲ್ಲಿ ಆಜ್ಞಾಪಾಲನೆ ಮಾಡುವ ಹುಕುಮನ್ನು ಆದೇಶ ನೀಡಿದರು ಮತ್ತು ಎಲ್ಲ ಆ ರುಸ್ತುಮ್ ಬಾದಶಹನಂತಹ ಗುಣಲಕ್ಷಣಗಳನ್ನು ಉಳ್ಳ ಸರದಾರರು ಮತ್ತು ಸುಪ್ರಸಿದ್ಧ ಖಾನನ್ ಹೆಮ್ಮೆ ಮತ್ತು ಪುರಸ್ಕಾರದ ಉದ್ಯಾನವನದ ಸುಗಂಧಪೂರಿತ ಮತ್ತು ಶರಾಬುಖಾನೆಯ ಪಾನಪ್ರಿಯ ಪ್ರತಿಷ್ಠಿತ ವ್ಯಕ್ತಿಗಳ ಕೂಟವನ್ನಾಗಿ ಮಾಡಲಿ. ಆ ಸುಪ್ರಸಿದ್ಧ ಖಾನ್ ಮತ್ತು ಅವನ ಸೈನ್ಯವು ಸರದಾರರು ತಮ್ಮ ನೋಟಗಳನ್ನು ರಾಜನ ಹೊಸ್ತಿಲಿನ ಧೂಳಿನಿಂದ ಮುತ್ತು ರತ್ನಗಳಿಂದ ಮೂಡಿದ ಸುರ್ಮಾದಂತೆ ಅತ್ಯಂತ ಪ್ರಜ್ವಲಿತ ಮತ್ತು ಕಿರಣಗಳ ದೆಸೆಯಿಂದ ಶುಭ್ರ ಮತ್ತು ಹೊಳೆಯುವ ಸೂರ್ಯನ ಕನ್ನಡಿಯಂತೆ ಅಸೂಯೆಪಡುವಂತಹ ಜಮ್‌ಶೀದ್ ಬಾದಶಹನ ಪಾನಪಾತ್ರೆಯ ಅಭಿಮಾನದ ಸಾಮಗ್ರಿಯನ್ನಾಗಿ ಮಾಡಿದರು. ಹಜರತ್ ಬಾದಶಹ ಘಾಝಿ ಅವರ ನಿರಿಕ್ಷೆ ಮತ್ತು ಇಚ್ಛೆಯ ಹಸಿರು ನಿರೀಕ್ಷೆಗಳನ್ನು ಕೊಡುಗೆ ಮತ್ತು ಕರುಣೆಯ ರಭಸದ ತಂಗಾಳಿಯೊಡನೆ ಮತ್ತು ಉಪಕಾರ ಹಾಗೂ ಇನಾಮುಗಳ ಮಳೆಯ ಹನಿಗಳಿಂದ ಎಲ್ಲಾ ಸಂಬಂಧಪಟ್ಟವರಿಗೆ ಸಂತೋಷ ಮತ್ತು ಸಂಭ್ರಮದ ಹೃದಯದ ಉದ್ಯಾನವನಕ್ಕಿಂತಲೂ ಹೆಚ್ಚು ತಾಜಾತನ ಮತ್ತು ಹಚ್ಚಹಸುರಿನ ಕೊಡುಗೆಗಳಿಂದ ಸನ್ಮಾನಿಸಿ ಈ ರೀತಿ ಆದೇಶ ನೀಡಿದರು.

ಶರ್ಜಖಾನ್ ಮತ್ತು ಖವಾಸ್ ಖಾನ್ ಹಾಗೂ ಅಬ್ದುಲ್ ಮೊಹಮ್ಮದ್‌ನ ಸ್ನೇಹ ಸಹವಾಸದಲ್ಲಿ ಅನೇಕ ಹಂತಗಳನ್ನು ದಾಟಿದ ಮತ್ತು ಮರಾಜಿಲ್‌ವರೆಗೆ ತಲಪುವ ಉದ್ದೇಶದಿಂದ ಧೈರ್ಯದಿಂದ ಕೂಡಿದ ಹೆಜ್ಜೆಯ ಮೂಲಕ ವೇಗವಾಗಿ ರಸ್ತೆಯನ್ನು ಕ್ರಮಿಸುವಂತಾಗಲಿ. ಯುದ್ಧರಂಗದ ಗಲಭೆ ಮತ್ತು ಕ್ಷೋಭೆಯಲ್ಲಿ ಪಾಲುಗೊಳ್ಳಲಿ ಹಾಗೂ ಶತ್ರುಗಳ ಕಡೆಯಿಂದ ಮೂಡಿ ಬರುವ ಗುಂಡಿನ ಅಗ್ನಿಯ ಲೀಲೆಯನ್ನು ಕೆಂಪು ಕೆನ್ನೆಯನ್ನು ಹೊಂದಿದಂತಹ ರೂಪವತಿಯಾದ ಸುಂದರಿಯ

ವಿಲಾಸ ಮತ್ತು ಭೋಗದ ಹೂ ಮುಡಿಸುವ ಶಾಸ್ತ್ರವೆಂದು ತಿಳಿಯುತ್ತಾ ಕತ್ತಿಯನ್ನು ಛಕಾಛಕ್ ಎಂದು ಕೂಗಿ ಉದ್ಘೋಷಿಸುತ್ತಾ ಮತ್ತು ಬಾಣದ ಕಿರುಗುಟ್ಟುವಿಕೆಯನ್ನು ಕುರುಡು ಪ್ರಜ್ಞೆಯನ್ನು ಹೊಂದಿದ ಶತ್ರುಗಳ ಕಿವಿಗಳ ಪರದೆಯನ್ನು ಪುಟ್ಟ ಕಾಗದದ ಚೂರಿನಂತೆ ಹರಿದುಹಾಕಿದ. ಗಂಧರ್ವಕನ್ಯೆಯರಂತೆ ಕಂಗೊಳಿಸುತ್ತಿರುವ ಕುದುರೆಗಳ ಅತಿ ವೇಗದ ಗೊರಸಿನ ಲಾಳದ ಘರ್ಷಣೆಯಿಂದ ಹೊರ ಹೊಮ್ಮುವ ಬೆಂಕಿಯು ಅತಿ ದೊಡ್ಡ ಭೂತವೊ ಅಥವಾ ಹೆಬ್ಬಾವಿನ ಸ್ವರೂಪವನ್ನು ಹೊಂದಿದಂತಹ ವಿಷವೋ ಎಂಬಂತೆ ಶತ್ರುಗಳ ಹೃದಯದ ನಡವಳಿಕೆಯ ಬೆಂಕಿಯನ್ನು ತಾಮ್ರ ಮತ್ತು ಕಬ್ಬಿಣದಂತೆ ಮಾಡಿದ. ಮತ್ತು ಹಿರಿತನವನ್ನು ಅಧಿಕಗೊಳಿಸುವ ಯುದ್ಧದ ದೀಪಗಳನ್ನು ಬೆಳಗಿದರು. ಆ ಶಾಖದಿಂದ ಆನೆಯಂತಹ ಶಕ್ತಿವಂತ ಪೈಲ್ವಾನರು ಜಬರ್‌ದಸ್ತ್ ಪರಾಕ್ರಮವನ್ನು ಹೊಂದಿದವರು ಕೋಟೆಯಿಂದ ಕೆಳಗೆ ಬಿದ್ದ ವೀರರ ಮಸ್ತಿಷ್ಕಗಳು ಮಂಜುಗಡ್ಡೆಯಂತೆ ಆಗಿದ್ದವು. ನತದೃಷ್ಟತೆಯ ಮಣ್ಣಿನ ಮೇಲೆ ಹರಿದು ಮತ್ತು ನೀರು ಕತ್ತಿಯ ಸಮುದ್ರದಿಂದ ಹಣೆಯ ದ್ರವದ ರೀತಿಯಲ್ಲಿ ಬಿಸಿಯಾಗಿ ಹರಿಯುತ್ತದೆ ಮತ್ತು ಯುದ್ಧಕೋರ ಅರಣ್ಯದ ಭೂಮಿಯ ಮೇಲೆ ತೊಟ್ಟಿಕ್ಕುತ್ತದೆ. ಕಾಲು ಇಟ್ಟಲ್ಲಿ ಭೂಮಿಯ ವಿಶಾಲ ಮತ್ತು ಉದ್ದಗಲದ ಮೈದಾನವು ಪದಾತಿ ಅಥವ ಸೈನಿಕರ ಅಪಾರ ಗುಂಪು ಮತ್ತು ಬೆಂಬಲದ ಕುದುರೆ ಸವಾರ ಸೈನಿಕರು ಬಹಿರಂಗವಾಗಿ ರಾಜನ ಗೌರವ ಮತು ವೈಭವ ಹಾಗೂ ಖ್ಯಾತಿಯ ಕುದುರೆಯನ್ನು ಪರಾಕ್ರಮದ ಕತ್ತಿಯಿಂದ ಹೊಡೆದು ಉರುಳಿಸಲಿ. ಆ ನಾಸ್ತಿಕ ದುರುಳನ ವೈಭವದ ಗುರುತುಗಳು ಮತ್ತು ಅಹಂಕಾರ ಹಾಗೂ ಉನ್ನತಿಯ ಪ್ರವಾಸದ ಗರುಡನು ಶತ್ರುಸಂಹಾರದ ಹಸ್ತದಿಂದ ರೋಮ ಮತ್ತು ರೆಕ್ಕೆಗಳನ್ನು ಕಿತ್ತೊಗೆದು ದುರ್ಘಟನೆಗಳು ಮತ್ತು ಪಿತೂರಿಯ ಬಿಂದಿಗೆಯಲ್ಲಿ ಹಾಗೂ ಸಂಕಷ್ಟಗಳು ಮತ್ತು ಎಡರು ತೊಡರುಗಳನ್ನು ಎದುರಿಸಿ ಹರಿತವಾದ ಬಾಣಗಳ ಎದೆ ಸೀಳುವ ಮತ್ತು ಬೆಂಕಿ ಉಗುಳುವ ಈಟಿಗಳ ಮುಲಕ ಪಿತೂರಿಯ ಯುದ್ಧದಲ್ಲಿ ಸ್ಥಿರವಾಗಿ ಧೃಡವಾಗಿ ನಿಲ್ಲುವ ಸಲುವಾಗಿ ಮತ್ತು ಅಲ್ಲಿ ಪರಿಸರದ ಗಲಭೆಗಳಿಂದ ಧೈರ್ಯದ ಹೃದಯವನ್ನು ಹೊಂದುವ ನವಿಲುಗಳು ನಾಚುವಂತಾಗಲಿ. ನಾಸ್ತಿಕತೆ ಮತ್ತು ಸುಳ್ಳು ಹೇಳಿಕೆಗಳ ಕೆಡುಕಿನ ಆ ಪಾನಪ್ರಿಯರು ಮತ್ತು ಆ ಮಕ್ಕಳಂತಹ ಉಪಾಯಗಳನ್ನು ಹೂಡಿದಂತಹ ವೃದ್ಧನು ಅವನ ಕಿವಿಗಳು ಬುದ್ಧಿವಾದ ಮತ್ತು ನೆಮ್ಮದಿಯ ಗಿತೆಗಳನ್ನು ಆಲಿಸುವುದನ್ನು ದ್ವೇಷಿಸುವ ಮತ್ತು ಆ ಕಣ್ಣಿಗೆ ಮಾರ್ಗದರ್ಶನ ಮತ್ತು ಸನ್ಮಾರ್ಗದ ಪ್ರವಚನದಿಂದ ಚೆಹರೆಯ ದರ್ಶನದಿಂದ ಅತೀವ ಬೆದರಿಕೆ ಮತ್ತು ಭಯ ಉಂಟಾಗುತ್ತದೆ. ಈ ಸುದ್ದಿಯನ್ನು ಕೇಳುವುದರಿಂದ ಗಲಭೆಯ ನಡುವೆ ಹುಚ್ಚೆದ್ದು ಓಡುವ ಆನೆಯಂತೆ ತನ್ನ ಪರಾಕ್ರಮ ಮತ್ತು ಶೌರ್ಯದ ಮೇಲೆ ನಂಬಿಕೆ ಇಟ್ಟು ಮತ್ತೆ ಮರಳುವಂತೆ ಹಾಗೂ ಅಜ್ಞಾನ ಮತ್ತು ಮೂರ್ಖತನದ ಬುನಾದಿಯ ಮೇಲೆ ಸೈನ್ಯ ಮತ್ತು ಮುಂದಾಳತ್ವದಲ್ಲಿ ಸ್ವತಃ ತನ್ನನ್ನು ಮುಂದಿಕ್ಕಿ

ಹೊರೆ ಮತ್ತು ವಿಪತ್ತಿನ ಸಾಮಾಗ್ರಿಗಳಲ್ಲಿ ತೊಡಗಿಕೊಂಡು ಯಾರು ಒದ್ದಾಡುವನೋ ! ಇದರ ಅರ್ಥ ಯುದ್ಧ ಮತ್ತು ಸಂಘರ್ಷವಾಗಿದೆ. ಉನ್ನತ ಅದೃಷ್ಟವನ್ನು ಹೊಂದಿದ ಸೈನಿಕರ ಧೈರ್ಯದ ಕ್ಷಣಗಳ ಮೇಲೆ ಪ್ರಾಣಾರ್ಪಣೆ ಮತ್ತು ಪರಾಕ್ರಮ ಹಾಗೂ ಧೈರ್ಯದ ಯುದ್ಧಗಳಲ್ಲಿ ಕುದುರೆ ಸವಾರರು ಆ ಉದ್ದೇಶಿತ ಹೃದಯದ ಸೆರಗನ್ನು ಸಂತೋಷದಿಂದ ಕೂಡಿದ ಶೋಭಾಯಮಾನವಾದ ಮುತ್ತು ರತ್ನಗಳಂತೆ ಒಬ್ಬರಿಗೊಬ್ಬರು ನುಡಿಯುತ್ತಾರೆ ಇನ್‌ಶಾ ಅಲ್ಲಾಹ್ ಸಮುದ್ರಗಳ ಆಳದಲ್ಲಿ ಮುಳುಗುವವರ ತಲಾಶು ಮತ್ತು ಉಪಾಯದಿಂದ ಸಫಲತೆ ಮತ್ತು ನೆರವಿನ ಅಮೂಲ್ಯ ಮುತ್ತುಗಳು ಸಾವಿರಾರು ಸಂಖ್ಯೆಯಲ್ಲಿ ನಾಚಿಕೆ ಮತ್ತು ಅಪಕೀರ್ತಿಯ ಮಾರುಕಟ್ಟೆಯ ಸಂಬಂಧದಲ್ಲಿ ಆ ಶರಾಬಿನ ಮೂಲಕ ಪ್ರತಿನಿತ್ಯದ ಸಂಪ್ರದಾಯ ಮತ್ತು ವೈಭವ ಹಾಗೂ ಣೀವಿಯ ಅಂಗಡಿಯನ್ನು ಅವನ ಶ್ರೀಮಂತಿಕೆ ಮತ್ತು ಅಧಿಕಾರವು ಉಭಯ ಲೋಕಗಳ ಲಾಭ ಮತ್ತು ಹೆಚ್ಚಳವಾಗುವುದು.

ಕಡಿಮೆ ಅವಧಿಯಲ್ಲಿ ದೇವರ ಕರುಣೆಯ ಸಮುದ್ರದಿಂದ ಕೈಯಲ್ಲಿ ಪಡೆದುಕೊಳ್ಳುವರು ಮತ್ತು ಆ ದೌರ್ಜನ್ಯ ಎಸಗುವ ಕೋಮು ಮತ್ತು ಪಿತೂರಿಕೋರ ಗುಂಪಿಗೆ ಕಲ್ಲು ಮತ್ತು ದುರ್ಬಲ ಕತ್ತೆಗಿಂತಲೂ ಹೆಚ್ಚು ನಂಬಿಕಸ್ಥನನ್ನಾಗಿ ಮಾಡುವರು. ಪ್ರಶಂಸೆಯ ದರಬಾರಿನಲ್ಲಿ ಚಿಂತಕರು ಮತ್ತು ಪರಿಣಿತ ಜನರ ಅಭಿಮಾನದ ದರಬಾರಿನಿಂದ ತಿರಸ್ಕರಿಸಲ್ಪಟ್ಟ ಮತ್ತು ದೋಷ ಹಾಗೂ ದ್ವೇಷದ ಮರುಭೂಮಿಯಲ್ಲಿ ಒಳ ನೋಟಗಳು ಪರೀಕ್ಷಕರ ವತಿಯಿಂದ ಎಸೆಯುವಂತೆ ಆಗುತ್ತದೆ. ಈ ಸಂಭಾಷಣೆಯ ನಡುವೆ ವೇಗದ ಬೇಹುಗಾರರು ವೇಗದ ಮೈದಾನದಲ್ಲಿ ನೀವು ಹೇಳುವಿರಿ ಪಕ್ಷಿಗಳನ್ನು ಕೂಡ ಹಿಂದೆ ಬಿಟ್ಟು ಸ್ಪರ್ಧೆಯಲ್ಲಿ ಈ ಸುದ್ದಿಯನ್ನು ತಂದರು. ಅದೇನೆಂದರೆ ಆ ದುರದೃಷ್ಟಶಾಲಿ ನಾಸ್ತಿಕನ ಗುಣಗಳನ್ನು ಹೊಂದಿದ ದುರುಳ ರಾಜನು ಗರ್ವದ ಶರಾಬಿನಲ್ಲಿ ಅಮಲೇರಿದವನಾಗಿದ್ದಾನೆ. ಮತ್ತು ಚಿಕ್ಕ ಯುದ್ಧದ ಮೈದಾನವನ್ನು ಹೆಚ್ಚು ಬಿಸಿಯಾಗಿಸಿದ್ದಾನೆ. ಒಟ್ಟಾರೆ ದುಷ್ಟ ನಮ್ರೂದ್‌ನಂತಹ ಪ್ರಕೃತಿಯನ್ನು ಮತ್ತು ಈಜಿಪ್ಟಿನ ದೊರೆ ಫೆರೋನಂತಹ ಪರಾಕ್ರಮವನ್ನು ಉಳ್ಳ ಹತ್ತು ಸಾವಿರ ಕುದುರೆ ಸವಾರರನ್ನು ಹುಲ್ಲು ಮತ್ತು ಆಹಾರವನ್ನು ತರುವ ಉದ್ದೇಶದಿಂದ ಮತ್ತು ಇನ್ನಿತರೆ ಯುದ್ಧ ಸಾಮಗ್ರಿಗಳನ್ನು ಸಂಗ್ರಹಿಸುವ ದೃಷ್ಟಿಯಿಂದ ಜಾದವರಾವ್ ಮತ್ತು ಕೇರ್ಸಿಂಗ್‌ನ ಜೊತೆಯಲ್ಲಿ ಹಾಗೂ ಕೆಲವು ಸಿಂಹದಂತಹ ಪ್ರಕೃತಿಯನ್ನು ಹೊಂದಿದಂತಹ ಸರದಾರರನ್ನು ಜೊತೆಯಲ್ಲಿ ಕರೆದುಕೊಂಡು ಅವರ ಪೈಕಿ ಕಾರ್ಯಕ್ ಪಂಚ್ ಹಜಾರಿ ಐದು ಸಾವಿರ ಕುದುರೆ ಸವಾರರ ಮುಖ್ಯಸ್ಥನನ್ನಾಗಿ ಮಾಡಿ ಕುದುರೆ ಸವಾರಿಯಲ್ಲಿ ಪದವಿಯನ್ನು ನೀಡಿ ರವಾನೆ ಮಾಡಲಾಗಿದೆ. ಈ ದುರ್ಬುದ್ಧಿಯ ಕೇಡಿನ ದುರುಳ ಜನರು ಪಾನ ಪಾತ್ರೆಯ ನತದೃಷ್ಟ ಗುಣ ಸ್ವಭಾವವನ್ನು ಹೊಂದಿದವರು

ಶರಾಬನ್ನು ಅವರ ಬದುಕಿನ ದೇವರು ಎಂದು ಪರಿಗಣಿಸುತ್ತಾರೆ. ಅವರುಗಳು ಅತೀವ ವಿನಾಶಕಾರೀ ಕ್ರಿಯೆಗಳ ಬೆಂಬಲಿಗರಾಗಿದ್ದಾರೆ. ಗರ್ವ ಮತ್ತು ಅಹಂಕಾರದಿಂದ ಕೂಡಿದ್ದು ಒಳ್ಳೆಯ ಅದೃಷ್ಟದ ಮುತ್ತು ರತ್ನಗಳು ಕೈಯಿಂದ ಜಾರಿ ಕೆಳಗೆ ಬಿದ್ದಲ್ಲಿ ಜನರು ದುರ್ಘಟನೆಗಳಿಗೆ ಬಲಿಯಾಗಿ ಅಸಹಾಯಕ ಕತ್ತೆಯ ತಲಾಶಿನಲ್ಲಿ ತೀವ್ರ ಕಳವಳಕ್ಕೆ ಈಡಾಗಿ ವಿನಾಶ ಮತ್ತು ನಷ್ಟದ ಅರಣ್ಯಗಳಲ್ಲಿ ಅಲೆದಾಡುವವರಾಗಿ ಮತ್ತು ಸಾವು ನೋವಿನ ನಷ್ಟದ ಮೈದಾನದಲ್ಲಿ ಅಲೆಮಾರಿಗಳಾಗಿ ಸುತ್ತಾಡುವವರಾಗಿದ್ದಾರೆ.

ಖವಾಸ್‌ಖಾನ್ ಮತ್ತು ಶರ್ಜಾಖಾನನು ಈ ಸುದ್ದಿಯನ್ನು ಕೇಳಿದ ನಂತರ ಧೃಡವಾದ ಬಾಹುಗಳನ್ನು ಮತ್ತು ಧೈರ್ಯದ ಹೃದಯವನ್ನು ಕಬ್ಬಿಣದಂತಹ ಕಾಯವನ್ನು ಸಫಲತೆ ಮತ್ತು ಶಕ್ತಿಯನ್ನು ಹೊಂದಿದ ಹಸಿದ ಹೆಬ್ಬುಲಿಯು ಶಿಕಾರಿಯ ಸಲುವಾಗಿ ಪೊದೆಗಳಿಂದ ಹೊರ ಬರುವಂತೆ ಅಜ್ಞಾನ ಮತ್ತು ದುಮಾರ್ಗದ ಅರಣ್ಯದ ಶರದೃತುವಿನ ಎಲೆಯುದುರಿದ ಚಳಿಗಾಲದ ಜನರ ಅಸ್ತಿತ್ವವನ್ನು ಬದುಕನ್ನು ಉಳ್ಳವರ ದೇಹಗಳನ್ನು ಹರಿದು ಒಗೆಯುವ ಗಟ್ಟಿ ನಿರ್ಧಾರವನ್ನು ಮಾಡಿ ಹಾದಿ ತಪ್ಪಿದ ಕಣಿವೆಯಲ್ಲಿ ಹುಚ್ಚು ಹಂದಿಯು ಆನೆಯಂತೆ ಸರಪಳಿಗಳನ್ನು ಕಿತ್ತೊಗೆದು ಪಿತೂರಿ ಮತ್ತು ಮನೆಯನ್ನು ಧ್ವಂಸಗೊಳಿಸುವ ಉದ್ದೇಶದಿಂದ ರವಾನೆಯಾದರು. ಈ ಎಲ್ಲಾ ದೌರ್ಜನ್ಯ ಮತ್ತು ಕ್ರೌರ್ಯದ ಪ್ರಕೃತಿಯನ್ನು ಹೊಂದಿದ ನತದೃಷ್ಟ ಕಪ್ಪುಹೃದಯದ ಜನರು ಕಟ್ಟಡಗಳನ್ನು ಧ್ವಂಸ ಮಾಡುವ ಮತ್ತು ಅದರ ಬುನಾದಿಯನ್ನು ನೆಲಸಮ ಮಾಡುವ ಉದ್ದೇಶದಿಂದ ಯುದ್ಧದ ಮೈದಾನದ ಕಡೆ ಗಮನವನ್ನು ಹರಿಸಿ ಕತ್ತಿಯ ಹೊಳಪನ್ನು ತಿಕ್ಕಿ ತೀಡಿ ಅಗ್ನಿಯನ್ನು ಉಗುಳುವಂತಹ ಹೊಳಪನ್ನು ನೀಡಿದರು.

ಕಣ್ಣೆವೆ ಮಿಟುಕಿಸುವುದರೊಳಗೆ ಅದೃಷ್ಟಹೀನರು ಹಾಗೂ ನೀಚ ಮತ್ತು ಅಪಮಾನಕಾರೀ ಜನರ ಆತ್ಮಗಳು ಅವರ ರಸಹೀನ ದೇಹದಂತೆ ಹೆಸರಿಲ್ಲದಂತೆ ನಾಶವಾದರು. ಅಪಾರ ವೇಗದ ಬಾಣಗಳು ಮತ್ತು ವಿಜಯ ಪ್ರಾಪ್ತಿಯು ಕರಗತವಾಗಿರುವ ಯೋಧರ ಅಪಾರ ಕೌಶಲ್ಯವು ನತದೃಷ್ಟ ಎದುರುದಾರರ ದೇಹಗಳನ್ನು ಭಯ ಮತ್ತು ಅಪಾಯದ ಅರಣ್ಯದಿಂದ ಹೃದಯ ಮತ್ತು ಎದೆಯ ಧೂಪದಿಂದ ಎರಡು ವಿಧದ ಹೊಗೆಯನ್ನು ಎತ್ತರಕ್ಕೆ ಏರಿಸುವ ಅಗ್ಗಿಷ್ಟಿಕೆಯಂತೆ ಮಾಡಿತು. ಧೃಡವಾದ ಸಫಲತೆಯನ್ನು ಪಡೆಯುವ ಕತ್ತಿಯು ಹೆಬ್ಬಾವಿನಂತೆ ಸಫಲತೆಯನ್ನು ಪಡೆದು ಸಹಾಯವನ್ನು ಕೋರುವ ನಾಚಿಕೆ ಮತ್ತು ಪಶ್ಚಾತ್ತಪ ಹಾಗೂ ದುಃಖವನ್ನು ಹೊಂದಿದ ಶತ್ರುಗಳ ಎದೆಯ ಮೇಲೆ ಚುರುಕುತನ ಮತ್ತು ವೇಗದ ಹೊಳೆಯಂತೆ ನೀಲ್ ನದಿಯ ಜೊತೆಯಲ್ಲಿ ಸೇರಿ ಚೆನ್ನಾಟವಾಡುವ ಮೀನಿನಂತೆ ಮಾಡಿತು.

ವಿದ್ರೋಹಿ ಸೈನ್ಯವು ಸೀಳುವ ಉದ್ದೇಶದಿಂದ ಎಲ್ಲಾ ವೀರರನ್ನು ಸದೆ ಬಡಿದು ಯುದ್ಧ ಕ್ಷೇತ್ರದಲ್ಲಿ ಬೆಂಕಿಯಂತೆ ಗರ್ವ ಮತ್ತು ಅಹಂಕಾರವನ್ನು ಹೊಂದಿದ ಶತ್ರುಗಳ ದೇಹಗಳನ್ನು ಅಣು ಅಣುವಾಗಿ ಅಂಗಾಂಗಗಳನ್ನು ಛಿದ್ರ ಮಾಡಿ ಎಸೆದರು. ಧೈರ್ಯವನ್ನು ಹೊಂದಿದ ಧರ್ಮಭೀರು ಜನರು ಸಂಪೂರ್ಣವಾಗಿ ನಿರಂತರ ಸಂಕಷ್ಟಗಳನ್ನು ತಂದೊಡ್ಡಿ ಹಗ್ಗದ ಕುಣಿಕೆಯಂತೆ ಅಜ್ಞಾನವನ್ನು ಬಯಸಿದ ಜನರ ಯುದ್ಧಕೋರ ಶತ್ರುಗಳ ಕೊರಳುಗಳನ್ನು ಭೂಖಂಡದ ಪ್ರಮುಖ ಸುಂದರಿಯರ ಮೊಣಕಾಲಿನಂತೆ ನೀಚತನ ಮತ್ತು ಅಪಮಾನದ ಮೂಲಕ ಸೆರೆಯಾಳುಗಳನ್ನಾಗಿ ಮಾಡಿದರು .

ಉತ್ಸಾಹದಿಂದ ಹೊಳೆಯುವ ಕತ್ತಿ ಹರಿಯುತ್ತಿತ್ತು ಹೊಳೆಯುವ
ಕುದುರೆಯು ಕಪ್ಪು ಮೋಡದಂತೆ ಕಂಡು ಬರುತ್ತಿತ್ತು

ಶತ್ರುತ್ವವನ್ನು ಸಾಧಿಸುವ ಕತ್ತಿಯ ರಕ್ತದಿಂದ ಕೆಂಪು ಹೊಳೆಯು ಹರಿಯಿತು
ಎಂತಹ ಕತ್ತಿಯದು ಅದರಿಂದ ರಕ್ತದ ವಾಸನೆ ಕಂಡು ಬಂದಿತು
ಕನ್ಯೆಯ ಕತ್ತಿಯ ಮೊನೆಯಿಂದ ಎಲ್ಲವೂ ಮತ್ತು ಎಲ್ಲವೂ
ಉತ್ತಮ ತಳಿಯ ಗುಲಾಬಿ ಬಣ್ಣದ ಕುದುರೆಯಾಯಿತು

ಪ್ರೇಮಿಗಳ ರೆಪ್ಪೆಯಂತೆ ನೆತ್ತರು ಕಂಡು ಬಂದಿತು
ಕಬ್ಬಿಣದಿಂದ ಕೂಡಿದ ಭೂಮಿಯು ಜ್ವಾಲಾಮುಖಿಯಂತೆ
ಕಬ್ಬಿಣದ ಟೋಪಿಗಳು ಸೈನಿಕರ ಮೇಲೆ ರಾಚುತ್ತಿದ್ದವು
ದುರ್ಬೀನಿನಿಂದ ಮತ್ತು ಬುದ್ಧಿಮತ್ತೆಯ ಟೋಪಿಯನ್ನು
ತಲೆಯ ಮೇಲೆ ಇಡುತ್ತಿರಲಿಲ್ಲ.

ಸೈನ್ಯದ ಬಗ್ಗೆ ಸೂಕ್ಷ್ಮ ನೋಟದ ಉತ್ಸಾಹವನ್ನು ಕೂಡ ಹೊಂದಿರಲಿಲ್ಲ. ಆ ಅತ್ಯಂತ ವಿಪತ್ಕಾರಿಯಾದ ಸುದ್ದಿಯನ್ನು ಕೇಳಿದ ನಂತರ ಭೋಗ ವಿಲಾಸ ಮತ್ತು ಯೋಗಕ್ಷೇಮದ ಚೆಹರೆಯು ದುಃಖ ಮತ್ತು ಯಾತನೆಯ ಉಗುರುಗಳಿಂದ ಗಾಯಗೊಳಿಸಿದ. ಸಂತೋಷ ಮತ್ತು ಆನಂದದ ಕುರ್ತಿಯನ್ನು ಜುಬ್ಬಾದ ಕೊರಳಬಂದಿಯನ್ನಾಗಿ ಮಾಡಿದ ಮತ್ತು ಸಂತೋಷದ ದಿರಿಸನ್ನು ಆಯಾಸದ ಹಸ್ತದಿಂದ ಚಿಂದಿ ಚಿಂದಿಯನ್ನಾಗಿ ಮಾಡಿದ. ಸೋಲಿನ ಹಂತದಲ್ಲಿದ್ದ ನೆಪಕೋರ ಯುದ್ಧದ ಮೋಸಗಾರ ದುರುಳ ಸರದಾರರೊಡನೆ ಹೇಳಿದ, ಡೆಕ್ಕನ್ನಿನ ಸೈನ್ಯವು ಹಿಂದೂಸ್ಥಾನದ ಸೈನ್ಯದ ಹೆಸರಾಂತ ಮತ್ತು ಪವಿತ್ರ ಹಾಗೂ ಗೌರವದ ನೌಕೆಯಲ್ಲಿ ಪಂಕ್ತಿಯನ್ನು ಭೇದಿಸುವ ಸಮುದ್ರದ ತೂಫಾನಿನಂತಹ ಉತ್ಸಾಹ ಮತ್ತು ಆಕ್ರೋಶದಿಂದ ಅಗೌರವದ ಸುಳಿಯಲ್ಲಿ ಮತ್ತು ದೆಹಲಿಯ ಸೈನ್ಯದ ವೈಭವ ಮತ್ತು ಬಲಾಢ್ಯತೆಯ

ಹಾಳೆಯಿಂದ ಶತ್ರುಗಳ ವತಿಯಿಂದ ಧಾಳಿಯ ಬಗ್ಗೆ ನಿರ್ಲಕ್ಷ್ಯತೆಯ ಮೈದಾನದಲ್ಲಿ ಕಲೆ ಹಾಕಿರುತ್ತಾರೆ. ಆ ರುಸ್ತುಮ್ ಪೈಲ್ವಾನರು ಸಹ ಗುರುತನ್ನು ಹೊಂದಿರುವ ಕಪಟತನದಿಂದ ಕೂಡಿದ ರಕ್ತ ಸೇಂಚನ ಮಾಡುವ ಹರಿತವಾದ ಕತ್ತಿಗಳನ್ನು ಶೋಧನೆ ಮತ್ತು ತಲಾಶಿನ ಸಮುದ್ರದಲ್ಲಿ ಗುರುತು ಮಾಡುವ ಮತ್ತು ತೋರಿಸುವ ಉದ್ದೇಶದಿಂದ ಹಾಜರುಪಡಿಸಿ. ಹಿಂದ್ ಭೂಖಂಡದ ಸಂಪೂರ್ಣ ಯುದ್ಧದ ಆಲೋಚನೆಯಲ್ಲಿ ಮೀನಿನಂತೆ ಸೆರೆಯಾಳುಗಳನ್ನಾಗಿ ಮಾಡಲಿ. ಒಂದು ವೇಳೆ ಅಪಾರ ಪರಾಕ್ರಮವನ್ನು ಹೊಂದಿದ ನಮ್ಮ ಸೈನ್ಯವು ಅಂದಾಜನ್ನು ಹೊಂದದೆ ಯುದ್ಧ ಮತ್ತು ಕಠಿಣ ಪರಿಶ್ರಮದಿಂದ ಕೂಡಿದ ತೀವ್ರವಾದ ಗಾಳಿಯಿಂದ ಬದುಕಿನ ಆಯಸ್ಸನ್ನು ಸಾಕು ಎಂದು ತಿಳಿಯುವ ನೀಚ ಹುಲ್ಲಿನ ರೀತಿಯಲ್ಲಿ ಸಾವು ಮತ್ತು ವಿನಾಶದ ದಡದ ಮೇಲೆ ತಲುಪಿದಲ್ಲಿ ಖಂಡಿತವಾಗಿಯೂ ಪಂಕ್ತಿಯನ್ನು ರೂಪಿಸುವ ಮತ್ತು ಧೃಡವಾದ ಹೆಜ್ಜೆಗಳ ಸುಳಿಯಲ್ಲಿ ಮುಳುಗುತ್ತಿರುವ ವ್ಯಕ್ತಿಗಳ ಬಹುಮಾನ ಮತ್ತು ವೈಭವದ ಅಮೂಲ್ಯ ಮತ್ತು ಸಾವಿರಾರು ಮುತ್ತು ಮತ್ತು ಕೆಂಪು ವಜ್ರ ವೈಢೂರ್ಯ ಪರಾಕ್ರಮ ಮತ್ತು ಧೈರ್ಯದ ತಲೆಯ ಮೇಲೆ ನಿವಾಳಿಸಿ ಎಸೆಯುವರು. ಹಿಂದೂಸ್ಥಾನದ ಸರದಾರರು ಮತ್ತು ಉನ್ನತ ಹುದ್ದೆಯನ್ನು ಹೊಂದಿದವರು ಪ್ರಜ್ಞೆ ಮತ್ತು ಬುದ್ಧಿವಂತಿಕೆಯ ಬೆಳಕನ್ನು ಪಡೆಯುವ ಸಲುವಾಗಿ ಸೂಕ್ಷ್ಮ ದೃಷ್ಟಿಯ ಗಣಿಗಳಿಂದ ಉಳಿದುದನ್ನು ಹೆಕ್ಕುವವರಾಗಿದ್ದರು. ಆ ಕಪ್ಪು ಕೃತ್ಯಗಳನ್ನು ಎಸಗುವ ಮತ್ತು ಸರ್ಪದಂತಹ ಗುಣವನ್ನು ಹೊಂದಿದ ಚೇಳಿನ ವರ್ತನೆಯನ್ನು ತನ್ನದಾಗಿಸಿ ಕೊಂಡಿರುವ ದುರುಳರಾಜನು ನುಡಿದ; ಈ ಹೊತ್ತಿನಲ್ಲಿ ದಖನ್ನಿನ ಬಾದಶಹನು ಪ್ರೇಮ ವಾತ್ಸಲ್ಯ ಮತ್ತು ವಾಸ್ತವ ದೃಷ್ಟಿಯ ಬಹಾದುರ್ ಸೈನಿಕರ ನಂಬಿಕೆ ಮತ್ತು ದುರ್ಬಿನಿನಂತಹ ನಾಲ್ಕು ದಿಕ್ಕಿನಿಂದ ಕಂಡು ಬರುವ ರಸ್ತೆಗಳನ್ನು ನಮ್ಮ ಗೌರವದ ಪರ್ವತದ ಸೈನಿಕರ ಮೇಲೆ ಕಟ್ಟಿಹಾಕಿದ್ದಾನೆ. ಅದು ಹೇಗೆಂದರೆ ಇರುವೆಗಳಿಗೂ ಕೂಡ ಭೂಮಿಯಲ್ಲಿ ಕಾಳನ್ನು ಪಡೆಯುವ ಸಾಧ್ಯತೆ ಇಲ್ಲ ಮತ್ತು ಹಿರಿಯರು ಮತ್ತು ಕಿರಿಯರು ಹಗಲು ರಾತ್ರಿ ಬೆಂಕಿಯ ಉರಿಯಲ್ಲಿ ವೃದ್ಧ ಮಹಿಳೆಯರಂತೆ ಅಸಹಾಯಕರಾಗಿದ್ದಾರೆ.. ನಾವು ಆ ರುಸ್ತುಮ್‌ನಂತೆ ಉಪಾಯವನ್ನು ಹುಡುಕಿದ ಪರಾಕ್ರಮಿಗಳು ಮತ್ತು ಸಿಂಹದ ಮೇಲೆ ನಿಯಂತ್ರಣವನ್ನು ಹೊಂದಿದ ವೀರರೊಂದಿಗೆ ಯುದ್ಧ ಮಾಡುವ ಮತ್ತು ಅವರನ್ನು ಮಣಿಸುವ ಧೈರ್ಯ ನಮಗೆ ಎಲ್ಲಿದೆ. ಈ ಎಲ್ಲಾ ಪ್ರದರ್ಶನ ಮತ್ತು ಪರಾಕ್ರಮದ ತಕ್ಕಡಿಯು ಬೆಂಬಲ ಮತ್ತು ಸಫಲತೆಯತ್ತ ವಾಲಿರುತ್ತದೆ. ಒಂದು ವೇಳೆ ಇಂದು ಈ ತಲಾಶು ಮತ್ತು ಶೋಧನೆಯ ಕೀಲಿ ಕೈಯ ಹಲ್ಲುಗಳು ಮೊಂಡಾಗಿದ್ದಲ್ಲಿ ಹೃದಯದ ಕನ್ನಡಿಯಲ್ಲಿ ದುಷ್ಟ ಆಲೋಚನೆಗಳ ತುಕ್ಕನ್ನು ದೂರದೃಷ್ಟಿಯ ತುಕ್ಕು ನಿರೋಧಕದಿಂದ ದೀಪದ ಕಾಡಿಗೆ ಮತ್ತು ಬದುಕಿನ ತಾಳ್ಮೆ ಮತ್ತು ಸಹನೆಯ ಕನ್ನಡಿಯಲ್ಲಿ ನೋಡಿ ಒಂದು ಅವಧಿಯವರೆಗೆ ತಮ್ಮ ಸೈನಿಕರನ್ನು

ಧೃಡಚಿತ್ತ ಮತ್ತು ಧೃಡಕಾಯದ ಔತಣಕೂಟದಲ್ಲಿ ತುಣುಕುಗಳನ್ನು ಹೆಕ್ಕಿ ತೆಗೆಯುವವರನ್ನಾಗಿ ಮಾಡಿ ಕೊಲೆ ಮತ್ತು ಯುದ್ಧದ ಕಣಿವೆಯ ಪಯಣವನ್ನು ಮುಂದುವರೆಸುವ ಇರಾದೆಯನ್ನು ಮಾಡಲಿಲ್ಲ. ಯುದ್ಧ ಹಾಗೂ ಕದನದ ಬಾಗಿಲನ್ನು ವಿಜಯಪ್ರಾಪ್ತಿಯ ಸಲುವಾಗಿ ಹೋರಾಟವನ್ನು ಮುಂದುವರೆಸಲಿಲ್ಲ. ತನ್ನ ಸರಹದ್ದಿನ ಪ್ರದರ್ಶನದ ರೀತಿಯಲ್ಲಿ ರಾಜಿಗೆ ಮುಂದಾದ. ಇದು ಸಮಯೋಚಿತ ಮತ್ತು ಸೂಕ್ತ ಎಂದು ನಿರ್ಧರಿಸಿದ. ಇಲ್ಲವಾದಲ್ಲಿ ದಖನ್ನಿನ ದೇಶದ ದರೋಡೆಕೋರ ಮತ್ತು ಪರಿಣಿತ ಚೋರರು ಆ ಹೊತ್ತಿನಲ್ಲಿ ನಮ್ಮ ಕಣ್ಣಲ್ಲಿ ನೀರು ಮತ್ತು ಹೃದಯದಲ್ಲಿ ಉಸಿರನ್ನು ಕೂಡಾ ಬಿಡುವುದಿಲ್ಲ. ಹೀಗಾಗಿ ಪರಾರಿಯ ಸಮುದ್ರದಲ್ಲಿ ಹೆಜ್ಜೆಯನ್ನು ಇಡುವುದು ಯುದ್ಧದ ಮೈದಾನದಲ್ಲಿ ಧೃಡ ಹೆಜ್ಜೆಗಳಿಗಿಂತ ಹೆಚ್ಚು ಕಷ್ಟಕರವಾಗಿದೆ. ವಿಜಯಪ್ರಾಪ್ತಿಯ ಸಂದರ್ಭದಲ್ಲಿ ವಿರುದ್ಧ ದಿಕ್ಕಿನ ಗಾಳಿಯ ಸಂದೇಶವನ್ನು ಸದರಿ ರಾಜನು ಅರ್ಥ ಮಾಡಿಕೊಂಡ ಮತ್ತು ತನ್ನ ಅದೃಷ್ಟವನ್ನು ಹಳಿದುಕೊಂಡು ಭರವಸೆ ಮತ್ತು ಆಸೆಯ ಕೃಷಿಯಲ್ಲಿ ಅವಮಾನ ಮತ್ತು ನೀಚತನದ ಬೀಜದ ಬಿತ್ತನೆಯ ವಿನಃ ಇನ್ನು ಯಾವ ಕೃಷಿಯೂ ಕೂಡ ಕೈ ಹತ್ತುವುದಿಲ್ಲವೆಂದು ಅರಿತ

ಯಾವ ವ್ಯಕ್ತಿಯ ಬುದ್ಧಿಯು ಮೂರ್ಖತನದಿಂದ ಕೂಡಿದೆಯೋ ಅವನು
ಲೋಕದ ಬದಲಾವಣೆಯಿಂದ ಮನುಷ್ಯನಾಗುವುದಿಲ್ಲ
ನಾಯಿಯನ್ನು ಒಂದು ವೇಳೆ ಜೇನುನೊಣದೊಡನೆ ಹೃದಯಸ್ಥವನ್ನಾಗಿ
ಮಾಡಿದಲ್ಲಿ ಅಂದರೆ ಆ ದೇಶದ ಹೃದಯದಿಂದ ಜೇನು ನೊಣ ಹೋಗುವುದಿಲ್ಲ

ಹೃದಯಭೇದಕವಾದ ಗಲಭೆ ಮತ್ತು ಗಲಾಟೆಯನ್ನು ಪ್ರಪಂಚದಲ್ಲಿ ದೊಡ್ಡದನ್ನಾಗಿ ಬಿಂಬಿಸಿ ಹಿಂದೆ ನಡೆದ ಪಿತೂರಿಯನ್ನು ಮತ್ತೊಮ್ಮೆ ಉತ್ಪನ್ನ ಮಾಡಿ ದಂಗೆಯ ಸಂಬಂಧದಲ್ಲಿ ಮರವೆಯ ಬೆರಳಿನಿಂದ ಸುತ್ತಿದ ಉದ್ದನೆಯ ಶತ್ರುತ್ವದ ಹತ್ತಿಯನ್ನು ಬೆಂಕಿಯ ಕಾವಿನಲ್ಲಿ ಮತ್ತು ನಂಬಿಕೆಯ ಕತ್ತಿ ಹಾಗೂ ಪಿತೂರಿಯ ರಕ್ತಸಿಕ್ತ ಕತ್ತಿಯನ್ನು ವಿಧ್ವಂಸಕರ ಹಸ್ತದಿಂದ ಹೊರ ತೆಗೆದು ದೌರ್ಜನ್ಯದ ಬಿಲ್ಲು ಮತ್ತು ಬಾಣವನ್ನು ವಿಧ್ವಂಸಕ ಕ್ರಿಯೆಗಳ ಮೂಲಕ ಬಲಿಯನ್ನು ಪಡೆದು ಬಾಣದಿಂದ ಹೊರಹಾಕಿ ಗಲಭೆ ಮತ್ತು ವಿಶೇಷತೆಯ ಮರುಭೂಮಿ ಮತ್ತು ಅರಣ್ಯದಲ್ಲಿ ಇಕ್ಕಟ್ಟಿಗೆ ಸಿಲುಕಿಸುವುದು ಎಂದು ಅವನು ಯೋಜನೆಯನ್ನು ರೂಪಿಸಿದ. ಹೃದಯದ ಪಾತ್ರೆಯು ಗರ್ವ ಮತ್ತು ಯುದ್ಧದ ಅಶುದ್ಧ ಶವದಿಂದ ಕೂಡಿದೆ. ಅಸೂಯೆ ಮತ್ತು ಹೊಟ್ಟೆಕಿಚ್ಚಿನ ಬೆಂಕಿಯ ಮತ್ತು ಪಿತೂರಿ ಹಾಗೂ ದಂಗೆಯ ಬೆಂಕಿಯನ್ನು ಪ್ರಜ್ವಲಿಸುವಂತೆ ಮಾಡಿ ತಮಗೆ ದೊರಕದೆ ಇರುವ ಇಚ್ಛೆಯನ್ನು ಪೂರೈಸಿಕೊಳ್ಳುವ ಉತ್ಸಾಹ ಮತ್ತು ಆವೇಶದಿಂದ ಕೂಡಿ ದುರಾಸೆ ಮತ್ತು ಭಗ್ನ ಹೃದಯಿಗಳಾಗಿ ಅಶುದ್ಧ ಶವಗಳನ್ನು ಭಕ್ಷಿಸುವಂತೆ ತೀವ್ರ ಕಾರ್ಯಾಚರಣೆಯನ್ನು ನಡೆಸುವುದು ಮತ್ತು ಭಯಂಕರವಾದ

ಸಿಂಹವು ಕುಂಟು ನರಿಯು ಹಾರುವುದರಿಂದ ಮತ್ತು ಏಳುವುದರಿಂದ ಯಾವ ರೀತಿಯಲ್ಲಿ ಹೆದರುವುದು? ಅಪಾಯ ಹಾಗೂ ರಕ್ತಪಿಪಾಸು ಪಾದಕ್ಕೆ ಮೀನಿನ ಚಾಲಾಕಿತನದಿಂದ ಯಾವ ನಷ್ಟ ಉಂಟಾಗುವುದು. ಖವಾಸ್‌ಖಾನ್ ಮತ್ತು ಬೆಹಲೂಲ್ ಖಾನ್ ಹಾಗೂ ಬಕೋಚಿ ಮತ್ತು ಇನ್ನಿತರೆ ಸರದಾರರು ಆ ಆದಿಲ್‌ಶಾಹಿ ಮತ್ತು ಖುತುಬ್‌ಶಾಹಿ ದಾಳಿಯಿಂದ ಎದುರಾದ ವಿಪತ್ತು ಮತ್ತು ಅಪಜಯದ ದೆಸೆಯಿಂದ ಅತ್ಯಂತ ಕ್ರೋಧದಿಂದ ಕೂಡಿ ಪರಸ್ಪರ ಸಮಾಲೋಚನೆಯನ್ನು ನಡೆಸಿ ತಮ್ಮ ಖಡ್ಗಗಳ ಚಮತ್ತಾರವನ್ನು ವಿಷಯುಕ್ತ ಕ್ರೋಧದಿಂದ ಹರಿತಗೊಳಿಸಿ ಅಲ್ಲಿಂದ ರವಾನೆಯಾದರು ಮತ್ತು ಭೂಮಿಯನ್ನು ಜಯದ ಮೂಲಕ ಆಕ್ರಮಿಸಿಕೊಳ್ಳುವುದು ವೀರರ ರವಾನೆಯ ದೆಸೆಯಿಂದ ಮತ್ತು ಬೆಂಕಿಯಂತೆ ಬೆಳಗುವ ಪೈಲ್ವಾನರ ನಿರಂತರ ಓಟವು ಪ್ರೇಮಿಗಳ ಹೃದಯದ ರೀತಿಯಲ್ಲಿ ಮರ್ಮಭೇದಕವಾದ ಕಳವಳ ಮತ್ತು ಕಂಪನದಿಂದ ಕೂಡಿತ್ತು. ಆನೆಯು ದೇಹದ ರೀತಿಯುಲ್ಲಿ ಮೈದಾನದ ಯುದ್ಧಭೂಮಿಯಲ್ಲಿ ಎದುರುಬದುರಾದರು. ಲೋಕವನ್ನು ಬೆಳಗುವ ಸೂರ್ಯನು ಕತ್ತಿಯ ಹೆಚ್ಚಳದಿಂದ ಬೆಳಕು ಮತ್ತು ಹೊಳಪಿನ ಕಿರಣಗಳ ನೋಟದಿಂದ ಕಾಂತಿಹೀನನಾದ. ಸೂರ್ಯಗ್ರಹಣದ ಹೊತ್ತಿನಲ್ಲಿ ಸೂರ್ಯನು ತೀಕ್ಷ್ಣತೆಯನ್ನು ಕಳೆದುಕೊಳ್ಳುವಂತೆ ರಕ್ತಪಿಪಾಸು ಈಟಿಗಳ ಖಣಖಣ ಸದ್ದಿನಿಂದ ಮತ್ತು ಹೆಬ್ಬಾವಿನಂತಹ ಸ್ವಭಾವದ ದೇಹಗಳು ಯುದ್ಧಭೂಮಿಯಲ್ಲಿ ಬುದ್ಧಿವಂತರ ದೃಷ್ಟಿಯಲ್ಲಿ ವರ್ತುಲದ ಸ್ವರೂಪದಲ್ಲಿ ಅತ್ಯಂತ ಭಯಾನಕ ಸ್ವರೂಪದ ಪಾಳು ಬಿದ್ದ ಹೊಲಕ್ಕಿಂತಲೂ ಹೆಚ್ಚು ಭೀಕರವಾಗಿತ್ತು. ಈಜಿಪ್ಟಿನ ದೊರೆ ಫೇರೋವಿನ ನಡವಳಿಕೆ ಮತ್ತು ವಿದ್ರೋಹಿ ರಾಜನಾದ ನಮ್ರೂದ್‌ನಂಹ ಹೋಲಿಕೆಯನ್ನು ಹೊಂದಿದವರು ಪ್ರಾಣವನ್ನು ಪಣಕ್ಕೆ ಇಡುವ ಯುದ್ಧದಲ್ಲಿ ಯಾವುದೇ ಅವಕಾಶವು ಕೈತಪ್ಪಿ ಹೋಗದಂತೆ ನೋಡಿಕೊಂಡರು ಮತ್ತು ಕಪ್ಪನೆಯ ಹೃದಯ, ದ್ವೇಷ ಮತ್ತು ಕುರುಡುಬುದ್ಧಿಯ ಗರ್ವ ಮತ್ತು ಅಹಂಕಾರದಿಂದ ತುಂಬಿದ ವ್ಯಕ್ತಿಗಳು ನಿರ್ದಯವಾದ ಯುದ್ಧರಂಗದಲ್ಲಿ ಸ್ವಲ್ಪವೂ ಕೊರತೆಯನ್ನು ಮಾಡಲಿಲ್ಲ. ಆದರೆ ಹಜರತ್ ಬಾದಶಹ ಘಾಝಿಯ ಉಪ್ಪು ತಿಂದವರು ಮತ್ತು ಉನ್ನತ ಧೈರ್ಯವನ್ನು ಹೊಂದಿದ್ದ ಹೆಸರುವಾಸಿ ಜನರು ಆ ಪರಿಸ್ಥಿತಿಯನ್ನು ನೋಡಿ ಬೆಂಕಿಯುಗುಳುವ ಕತ್ತಿಯಿಂದ ಭೂಮಿ ಮತ್ತು ಆಕಾಶವು ಕಬ್ಬಿಣವನ್ನು ಎತ್ತಿಹಿಡಿಯುವ ಕಲ್ಲುಗಳನ್ನು ಅವುಗಳ ವಿಶೇಷತೆ ಅಯಸ್ಕಾಂತೀಯ ಶಕ್ತಿಯಿಂದ ಗುರುತಿಸಿದರು. ಶತ್ರುತ್ವದ ಸ್ವಭಾವವನ್ನು ಉಳ್ಳ ವಿದ್ರೋಹಿ ವ್ಯಕ್ತಿಗಳು ಪಿತೂರಿಗಾರ ಮತ್ತು ಮೋಸದ ನಡತೆಯನ್ನು ಹೊಂದಿರುವ ಜನರು ಲೋಹಕ್ಕಿಂತಲೂ ಹೆಚ್ಚು ಕಠಿಣವಾಗಿದ್ದಾರೆ. ಇಡೀ ಲೋಕದ ದಡದಲ್ಲಿ ತಮ್ಮ ಕಡೆ ಎಳೆದುಕೊಳ್ಳುತ್ತಾರೆ. ಕಾಲ್ಪನಿಕ ಚುಕ್ಕೆಯಂತೆ ಆ ನೀಚ ಜನಾಂಗದ ದೇಹವು ಜನಜನಿತವಾಗಿದೆ. ಎಲ್ಲಾ ರೀತಿಯ ಸಂಪ್ರದಾಯಗಳನ್ನು ಧ್ವಂಸ ಮಾಡಿ ಎಲ್ಲಾ ಅವಶ್ಯಕ ಕ್ರಿಯೆಗಳನ್ನು ನಿರ್ಲಕ್ಷ್ಯ

ಮಾಡಿ ಪೈಶಾಚಿಕ ಕೃತ್ಯಗಳ ಕಿಸೆಯಿಂದ ಆ ಅನಿಷ್ಟ ಪುರುಷರ ನೀಚ ಕ್ರಿಯೆಗಳಿಂದ ರಕ್ಷಣೆಯನ್ನು ನೀಡಲಾಯಿತು. ಎಲ್ಲಾ ನಾಲ್ಕು ದಿಕ್ಕುಗಳಿಂದಲೂ ಆಕ್ರಮಣ ಮಾಡುತ್ತಾ ಆ ಕತ್ತಿಗಳಿಂದ ಜ್ವಾಲೆಯು ಹೊರಡುತ್ತಾ ಇದ್ದಾಗ ಯಾವುದೇ ಹುಲ್ಲು ಭೂಮಿಯಿಂದ ಹೊರ ಕಾಣಿಸಿಕೊಂಡಲ್ಲಿ ಶತ್ರುಗಳ ಆಯಸ್ಸಿನ ಗಣಿಯಲ್ಲಿ ಸಹಸ್ರಾರು ಹೊಳೆಯುವ ಸಿಡಿಲಿನಂತಹ ಖಡ್ಗಗಳು ಹೊಳೆಯುತ್ತಿದ್ದವು ಮತ್ತು ಇಡೀ ಪರಿಸರದಲ್ಲಿ ಹಾರಾಡುವ ಪಕ್ಷಿಗಳು ತಮ್ಮ ಹಾರಾಟದ ಸಂದರ್ಭದಲ್ಲಿ ಸುಟ್ಟು ಬಿದ್ದು ಕರಕಲಾದ ಹಸಿವಿನ ನೋಟ ಬೀರುವ ಹಸಿದವರು ಉಪವಾಸಿಗರ ಕರುಳಿನ ಆಸರೆಯಾಗುತ್ತಿದ್ದರು ಮತ್ತು ಅದರ ಶಾಖದಿಂದ ತೀವ್ರವಾಗಿ ಕರುಣೆಯ ಗೋಳವು ಅಂದರೆ ಆಕಾಶದ ತಂಪಾದ ಭಾಗವು ಬಾಕಿ ಉಳಿಯಲಿಲ್ಲ ಮತ್ತು ಪರಿಸರದ ಮೇಣದ ಗೋಳದಂತೆ ಕರಗಿ ಬೀಳಲಾರಂಭಿಸಿತು. ಮತ್ತು ಆ ನೀರಿನಿಂದ ಕೂಡಿದ ಆ ಗೋಳವು ರಭಸವಾಗಿ ಹರಿದು ಹಳ್ಳದಲ್ಲಿ ಬಿದ್ದು ಹರಿಯಿತು. ಕತ್ತಿಯ ನೀರಿನ ದರ್ಜೆಯಿಂದ ಹಝುರತ್ ಮೊಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರವರ ಧರ್ಮದ ದೀಪದ ಎಣ್ಣೆ ಮತ್ತು ಅಂತಿಮ ವಿಚಾರಣೆಯ ದಿನದ ಕರುಣೆಯ ಆಸರೆಯನ್ನು ನೀಡುವ ನಾಯಕರಾದ ಹಝುರತ್ ಮೊಹಮ್ಮದ್ ಸಲ್ಲಾಹು ಅಲೈಹಿವ ಸಲ್ಲಮ್‌ರವರ ಶರಿಯತ್‌ನ ಉಚ್ಚ ಇಂಧನವಾಗಿದೆ.

ಅದರಿಂದ ಕೆನ್ನೆಗೆ ಅಪ್ಪಳಿಸಿದಂತೆ ಆ ಜ್ವಾಲೆಯು ಮಂಜುಗಡ್ಡೆಯಂತೆ ವಿಶಾದಮಯವಾಯಿತು. ಮತ್ತು ವಿನಾಶದ ಅಂಚಿನಲ್ಲಿದ್ದ ಶತ್ರುಗಳ ಪೈಕಿ ಅನೇಕ ಜನರ ಆತ್ಮಗಳು ಕಾಳುಗಳಂತೆ ಲೋಕದಲ್ಲಿ ಹೇಳ ಹೆಸರಿಲ್ಲದಂತೆ ಕಾಣೆಯಾದವು ಮತ್ತು ವಿನಾಶದ ಪಟ್ಟಿಯಲ್ಲಿ ಸೇರಿ ನಷ್ಟದ ಸಮುದ್ರದಲ್ಲಿ ಮುಳುಗಿ ನಾಪತ್ತೆಯಾದರು ಹಾಗೂ ದೈವಭಕ್ತರಾಗಿದ್ದಂತಹ ವ್ಯಕ್ತಿಗಳು ಬದುಕಿನ ಆಧಾರದ ವಿಸ್ತಾರದ ಠಿಕಾಣೆಯನ್ನು ಆ ಪ್ರಾಣಕ್ಕೆ ಪಣವನ್ನು ಇಡುವ ಕ್ಷೇತ್ರದ ಯೋಧರ ಮೇಲೆ ಅತ್ಯಂತ ಕಠಿಣವಾಗಿಸಿದರು ಮತ್ತು ಅಗತ್ಯ ಬಿದ್ದಲ್ಲಿ ಅಗ್ನಿ ಮತ್ತು ನೀರು ಯಾವುದೇ ಕತ್ತಿಯ ಹೊಳೆಯುವ ಅಣುವಿನ ಮತ್ತು ಬಾಣ ಹಾಗೂ ಹೃದಯಭೇದಕ ಕಣ್ಣೋಟದ ವಿಸ್ತಾರದಲ್ಲಿ ಇನ್ನುಯಾವ ಸ್ಥಳವೂ ಕೂಡ ಕಂಡು ಬರಲಿಲ್ಲ. ಪಶ್ಚಾತ್ತಾಪದ ಖವಾಸ್‌ಖಾನನು ಸಿಡಿಲಿನೋಪಾದಿಯಲ್ಲಿ ಹೆಬ್ಬಾವಿನ ಹೆಡೆಯ ಗುಣ ಲಕ್ಷಣಗಳನ್ನು ಹೊಂದಿದ್ದ ತನ್ನ ಕತ್ತಿಯನ್ನು ಒರೆಯಿಂದ ತೆಗೆದು ಆ ಮೂಲಕ ಭಯೋತ್ಪಾದನೆ ಮತ್ತು ಭಿನ್ನಾಭಿಪ್ರಾಯವನ್ನು ಹೊಂದಿದ್ದ ಜನರ ಶಿರಗಳನ್ನು ಕತ್ತರಿಸುತ್ತಾ ಮುನ್ನಡೆದ. ಅದರ ಭಯ ಮತ್ತು ವಿದ್ರೋಹ ಹಾಗೂ ಉಲ್ಲಂಘನೆ ಮಾಡುವ ಸಲುವಾಗಿ ಸಂಪೂರ್ಣ ಸಂಕಷ್ಟಗಳನ್ನು ತಂದೊಡ್ಡಿದ ಜನರ ಹೃದಯವು ಅದರ ಹಗ್ಗದ ಕುಣಿಕೆಯು ಕೊರಳಿಗೆ ಉರುಳಾಗುವಂತಹ ಜನರ ಪ್ರಾಣಗಳನ್ನು ಸೆರೆಯಾಳುಗಳನ್ನಾಗಿ

ಮಾಡುವುದು. ಶನಿಗ್ರಹದಂತಹ ಪ್ರಭಾವವನ್ನು ಹೊಂದಿದ ಬಾಣದ ಪರಾಕ್ರಮವು ಶತ್ರುತ್ವವನ್ನು ಹೊಂದಿದ ವಿದ್ರೋಹಿಗಳ ಹೃದಯವನ್ನು ಚೇಳಿನ ಮನೆಯನ್ನಾಗಿ ಮಾಡಿ ಕೈ ಬೆರಳಿನ ಸನ್ನೆಯಿಂದ ನೇರ ನಡವಳಿಕೆಯ ಹಾಗೂ ಈಟಿಯ ಮೂಲಕ ಅರಣ್ಯದಲ್ಲಿ ವಕ್ರ ನಡಿಗೆಯನ್ನು ನಡೆಯುವ ಜನರ ಎದೆ ಮತ್ತು ಹೃದಯಗಳನ್ನು ಚಂದ್ರನಂತೆ ಸೀಳಿ ಹಾಕುವಂತಿದೆ. ಈ ಯುದ್ಧಕೋರ ಗಲಭೆಯ ಸಂದರ್ಭದಲ್ಲಿ ಆ ಸ್ಥಳದಲ್ಲಿ ರಾಜನು ಅಂತಿಮವಾಗಿ ಧೃಡವಾಗಿ ನಿಂತಿದ್ದ. ಅದೃಷ್ಟದ ಜೊತೆಯನ್ನು ಹೊಂದಿದ ಅಪಾರ ಯಶಸ್ಸನ್ನು ಪಡೆಯುವ ಅರಣ್ಯದ ಯುದ್ಧದಲ್ಲಿ ಸ್ಥಿರವಾದ ಹೆಜ್ಜೆಯನ್ನು ಹೊಂದಿದ್ದು ಎಷ್ಟೊಂದು ಪ್ರಯತ್ನವನ್ನು ಮಾಡಿ ಬೆಂಕಿಯ ಮೂಲಗಳಿಂದ ಭೂಮಿಯಲ್ಲಿ ಚಿಲುಮೆಗಳನ್ನು ಚಿಮ್ಮಿಸಿ ನೀರಿನ ಬದಲಿಗೆ ರಕ್ತದ ಬುಗ್ಗೆ ಏಳುವಂತೆ ಮಾಡಿದ,

ಯಾಖೂತ್ ರಬ್ಬಾನಿ ಮತ್ತು ಸೆಹಲ್ ಬದ್‌ಖಷಾನಿಯ ವಿನಃ
ಚಿನ್ನ –ಬೆಳ್ಳಿಯ ಗಣಿಯಿಂದ ಮತ್ತು ಸಮುದ್ರಗಳ ನಡುವಿನಿಂದ ಹಾಗೂ
ಶೂನ್ಯತೆಯ ಬಸಿರಿನಿಂದ ಇನ್ನು ಯಾವುದೇ ಅಮೂಲ್ಯ ಧಾತುವು ಹೊರ ಬರಲಿಲ್ಲ.
ಬೆಂಕಿಯನ್ನು ಉಜ್ವಲವಾಗಿ ಉರಿಸುವ ದೀಪದಂತೆ ಬಂದೂಕುಗಳು
ಕಂಡು ಬರುತ್ತಿದ್ದವು ದೌರ್ಭಾಗ್ಯವಶಾತ್ ಅಂದು ಈದ್
ಮತ್ತು ನೌರೋಜ್‌ನ ಸಂಭ್ರಮದ ದಿನವಾಗಿತ್ತು
ಜಗತ್ತಿನ ಕಲ್ಲು ಹೃದಯದ ಜನರಂತೆ ಬಂದೂಕುಗಳಿದ್ದವು
ಶಾಂತಿ ಸುವ್ಯವಸ್ಥೆಯ ಕರ್ತವ್ಯದಲ್ಲಿ ಅಡ್ಡಿ ಆತಂಕವನ್ನು ಒಡ್ಡುತ್ತಿದ್ದವು
ಹಗ್ಗದ ಕುಣಿಕೆಯ ವರ್ತುಲದೊಳಗೆ ಸಿಲುಕಿತ್ತು
ಸುಂದರಿಯರ ಮುಂಗುರುಳಿನ ವಿನಾಸದಂತೆ
ಖಂಡಿತವಾಗಿಯೂ ಮರದ ಕಾಂಡದ ಮತ್ತು ವೃಕ್ಷದ
ಹೃದಯದಲ್ಲಿ ಅಂತರ್ಗತವಾಗಿತ್ತು ಅವನ ಕಾಲಮಾನವು
ಕಾಲದ ರಕ್ತಸಿಕ್ತ ಹೃದಯದ ವಾಸಸ್ಥಳವಾಗಿದೆ
ಕಪಟದ ಅಗ್ನಿಯನ್ನು ಎಡ ಮತ್ತು ಬಲದ ತೆಕ್ಕೆಯಲ್ಲಿ ತೆಗೆದುಕೊಂಡು
ನೂಹ್ ಪ್ರವಾದಿಯ ಪ್ರವಾಹವನ್ನು ವ್ಯಕ್ತ ಪಡಿಸಲಾಯಿತು
ಯಾರ ಗುಬ್ಬಚ್ಚಿಗಲು ಬಿಲ್ಲಿನಿಂದ ಹೊರಗೆ ಚಿಮ್ಮಿದವೋ ಮತ್ತು
ಶಿಕಾರಿಯು ಯಾತನೆಯ ಆಕಾಶವನ್ನೇರಿದ
ಕತ್ತೆಗಳ ವಂಶ ಮತ್ತು ಅದರ ಸವಾರರ ಎದೆ ಗುಂಡಿಗೆಯು
ಶೂನ್ಯ ಕಿಡಿಗಳಿಂದ ಆವೃತವಾಯಿತು ಮತ್ತು ಆಕಾಶವು ಧೂಳಿನಿಂದ

ಈ ವಿನಾಶಕಾರಿ ರಾಜನ ಸಮ್ಮುಖದಲ್ಲಿ ದುರಾದೃಷ್ಟ ಮತ್ತು ಸಂಕಷ್ಟದ ಮಾರುತದ ದ್ವಾರ ಭೂಮ್ಯಾಕಾಶಗಳ ಒಡೆಯನು ವಿಸ್ತಾರಗೊಳಿಸಿದ ಮತ್ತು ವಿಜಯ ಹಾಗೂ ಸಂಭ್ರಮದ ಗುರಿಯ ಹಾದಿಯು ಅವನ ದೃಷ್ಟಿಯಲ್ಲಿ ದೂರ ಅತಿ ದೂರವಿದೆ ಎಂದು ಅರಿವಾದಾಗ ತನ್ನ ಶಕ್ತಿ ಮತ್ತು ಬಲಿದಾನ ನೀಡುವ ಸೈನಿಕರೊಂದಿಗೆ ಹೀಗೆಂದು ನುಡಿದ. ಯುದ್ಧರಂಗದಲ್ಲಿ ದೌರ್ಜನ್ಯ ಮತ್ತು ಹಿಂಸೆಯನ್ನು ಮಾಡುವವರು ಆ ಹೊತ್ತಿನಲ್ಲಿ ರುಸ್ತುಮ್‌ನಂತಹ ಸ್ವಭಾವವನ್ನು ಹೊಂದಿದ ಎಲ್ಲಾ ಹೆಸರುವಾಸಿ ಜೀವಗಳ ಕೊರಳಿನ ನರಗಳನ್ನು ಪರಾಕ್ರಮದ ಚಾಕುವಿನಿಂದ ಕತ್ತರಿಸಿ ಭೂಮಿಯ ಶೂನ್ಯತೆಯ ಮೇಲೆ ಹರಿಸದಿದ್ದಲ್ಲಿ ಖಂಡಿತವಾಗಿಯೂ ಹೃದಯ ಭೇದಕ ಸಂಬಂಧಿತ ಆ ನತದೃಷ್ಟತೆಯ ಅರಣ್ಯದಲ್ಲಿ ತಿರಸ್ಕರಿಸಲ್ಪಟ್ಟು ಅಲೆಮಾರಿಗಳಾಗಿ ಸುತ್ತುವ ಜನರ ಕೆಡುಕಿನಿಂದ ಕೂಡಿದ ಮನೆಗಳನ್ನು ಕ್ಷಮೆ ಮತ್ತು ರಾಜಿಯ ಹಸ್ತದಿಂದ ದಿಗ್ಬಂಧನವನ್ನು ಹಾಕದಿದ್ದಲ್ಲಿ ಅತ್ಯಂತ ಪರಾಕ್ರಮದ ಪ್ರಕೃತಿಯನ್ನು ಮತ್ತು ಸಿಂಹದಂತಹ ಶೌರ್ಯವನ್ನು ಹೊಂದಿದ ಸೈನಿಕರ ಹೃದಯಗಳು ನಿರೀಕ್ಷೆ ಮತ್ತು ಅಪೇಕ್ಷೆಯ ದೃಷ್ಟಿಯಿಂದ ಹೊರಗುಳಿಯುವುವು. ಒಂದು ಅವಧಿ ಮತ್ತು ಅದರಲ್ಲಿ ತೊಡಗುವ ಮನಸ್ಸುಳ್ಳ ಜನರ ನೆರವಿನಿಂದ ಹೆಚ್ಚು ಭೋಗ ವಿಲಾಸವನ್ನು ವೃದ್ಧಿಸುವ ಮತ್ತು ವೈಭವವನ್ನು ಆಶ್ಚರ್ಯದಿಂದ ಮಿಳಿತಗೊಂಡ ಗಲಭೆಯಿಂದ ಕೂಡಿದ ದುಃಖಿತ ಪರಿಸ್ಥಿತಿಯಾಗಿದೆ. ಯಾರಾದರೂ ಸಫಲತೆ ಮತ್ತು ಪರಾಕ್ರಮದ ನಂತರ ಸಂತೋಷವನ್ನು ಪಡೆಯುತ್ತಾರೆ. ಅದಕ್ಕಿಂತ ಹೆಚ್ಚು ದುಃಖವನ್ನು ಪಡೆಯುತ್ತಾರೆ ಮತ್ತು ಪಾಪಿಷ್ಠರು ಉಲ್ಲಂಘನೆ ಮತ್ತು ಅವಿಧೇಯತೆ ಮತ್ತು ಶೈತಾನನ ಪಥಭ್ರಷ್ಟತೆಯ ವರ್ತುಲದಲ್ಲಿ ಸಿಲುಕಿರುವವರು ಆರ್ತ ಪ್ರಾರ್ಥನೆಯೊಂದಿಗೆ ಅರಣ್ಯದಲ್ಲಿ ಪರಾರಿಯಾಗಿ ಹಾಗೂ ತಲೆ ಮರೆಸಿಕೊಳ್ಳಿ.

ಯಾವನು ರಾಜ್ಯಾಡಳಿತದೊಂದಿಗೆ ದ್ರೋಹವನ್ನು ಬಗೆಯುತ್ತಾನೆಯೋ
ಅವನ ಸಜೆ ಹೀಗಿರುತ್ತದೆ ಜಗತ್ತನ್ನು ಯಾರು ಹಿಂಸೆಗೆ ಗುರಿ
ಪಡಿಸುತ್ತಾನೆಯೊ ಅವನ ಸಜೆ ಹಾಗೆಯೇ ಆಗುತ್ತದೆ

ಅವಿಧೇಯತೆ ಮತ್ತು ವಿದ್ರೋಹದ ಹಸ್ತವು ಅಪಾರ ಕಷ್ಟ-ನಷ್ಟ ಮತ್ತು ಕುಚೇಷ್ಟೆಯ ಸಂದರ್ಭಕ್ಕೆ ಚಾಲನೆಯನ್ನು ನೀಡಿ, ಅದನ್ನು ಸುದೀರ್ಘವನ್ನಾಗಿಸುತ್ತದೆ. ಕಳವಳ ಮತ್ತು ಅಸ್ತವ್ಯಸ್ತತೆಯ ಬೆಂಕಿಯ ಹೃದಯಭೇದಕ ಮತ್ತು ಭಿನ್ನಾಭಿಪ್ರಾಯದ ಅಗ್ನಿಯ ಆರಾಮ ಮತ್ತು ಹೃದಯವೈಶಾಲ್ಯದ ಗಣಿಯಲ್ಲಿ ಶ್ರೇಷ್ಠ ಮನುಕುಲದ ಜೀವಿಯಾಗಿದ್ದಾನೆ. ಪ್ರತಿ ನತದೃಷ್ಟತನದ ಉಪಾಯವನ್ನು ಕೈಗೊಳ್ಳುವವನಿಗೆ ಜೀವಂತ ವ್ಯಕ್ತಿಗಳು ಸಂತೋಷ ಮತ್ತು ನೆಮ್ಮದಿಯ ಚೆಹರೆಗಳನ್ನು ಹಿಂಸೆ ಮತ್ತು ದೌರ್ಜನ್ಯದ ಉಗುರುಗಳಿಂದ ಗಾಯಗೊಳಿಸಿ ಸಂಕಷ್ಟ ಮತ್ತು ದೌರ್ಭಾಗ್ಯದ ದ್ವಾರಗಳನ್ನು ಕಪಟ ಮತ್ತು ಕ್ಷೋಭೆಯ ಕೈ ಬೆರಳಿನಿಂದ ಹಾಗೂ ದುಃಖ ಮತ್ತು ಯಾತನೆಯ ಚಿಂತನೆ ಮತ್ತು ಉಪಾಯದ

ಸೂಕ್ಷ್ಮತೆಯೊಂದಿಗೆ ಅವರ ಚೆಹರೆಗಳ ಮುಂದೆ ತೆರೆಯುವನು. ಸಾಟಿ ಇಲ್ಲದ ಅಪೂರ್ವ ಭಗವಂತನು ಆ ಕಪಟಿಗಳು ಮತ್ತು ಕೇಡು ಬುದ್ಧಿಯವರ ರಾಜ್ಯಾಡಳಿತದ ಮೌಲ್ಯವನ್ನು ಕಲ್ಲುಗಳಿಂದ ಆಕಾಶವನ್ನು ಹೊಂದುವಂತಹ ಸೈನಿಕರ ತಲಾಶಿನಿಂದ ಅಧಃಪತನ ಮತ್ತು ಕ್ಷುದ್ರ ಮಣ್ಣಿನೊಂದಿಗೆ ಸರಿಸಮನಾಗಿ ಮಾಡುವನು ಮತ್ತು ಆ ನತದೃಷ್ಟ ದರ್ಗದ ಗೌರವದ ಮಹಲುಗಳ ಬುನಾದಿಯನ್ನು ನೀರಿನ ಪ್ರವಾಹದಿಂದ ಜಮ್‌ಶೀದ್ ರಾಜನಂತಹ ಸಲ್ಲಕ್ಷಣಗಳನ್ನು ಹೊಂದಿದ ರಾಜನ ಸೈನಿಕರ ಬಿಡಾರಗಳನ್ನು ಕಣ್ಣೆವೆ ಮುಚ್ಚುವುದರೊಳಗೆ ಧ್ವಂಸ ಮಾಡಿ ಸಂಭ್ರಮದ ಅಂಬರ್ ಸುಗಂಧವನ್ನು ಬೆಳಗಿನ ತಂಗಾಳಿ ಮತ್ತು ಸಿರಿವಂತಿಕೆ ಹಾಗೂ ಶೋಭಾಯಮಾನವಾದ ಸುಗಂಧಪೂರಿತ ಅಂಬರ್‌ನ ಮೂಲಕ ಭರವಸೆಯ ಪುಷ್ಪಗಳ ತಾಜಾತನವನ್ನು ಮತ್ತು ಇಡೀ ಪ್ರಪಂಚದ ಭರವಸೆಯ ಸುಗಂಧ ಮತ್ತು ಪುಷ್ಪಗಳನ್ನು ಅರಳಿಸುವನು. ಈ ಪರಿಸ್ಥಿತಿಯ ಮೇರೆಗೆ ಶಾಹ್ ದರ್ಗ್ ಕೋಟೆಯ ನಾಯಕ ದರ್ಬಾನನ ಪಥಭ್ರಷ್ಟತೆಯ ದೌರ್ಜನ್ಯದ ಕಥನವಿದೆ. ಆಕಾಶದಂತಹ ನಡತೆಯನ್ನು ಹೊಂದಿದ ದರೋಡೆಕೋರ ಹಾಗೂ ದುಷ್ಟ, ದುರ್ಜನ ಜೇಬುಗಳ್ಳ ಮತ್ತು ಉಪ್ಪು ತಿಂದ ಋಣವನ್ನು ತೀರಿಸದೆ ಬದುಕಿನ ಅಂಗಡಿಯ ಬಂಡವಾಳವನ್ನಾಗಿಸಿದ ವಿದ್ರೋಹಿ ವೃತ್ತಾಂತವಿದೆ. ವಿನಾಶ ಮತ್ತು ಧ್ವಂಸದ ಮೂಲಕ ಕೊಂಡು ಹೊದ ಮತ್ತು ದುರಾಸೆಯನ್ನು ಉಳ್ಳ ಕಳ್ಳ ಮತ್ತು ಅಹಂಕಾರಿ ಅಸೂಯೆಕೋರನು ಅವರೆಲ್ಲರನ್ನೂ ಗಾಳಿಸೇವನೆ ಮತ್ತು ಬದುಕಿನ ಆಧಾರವಾದ ಸಾಮಗ್ರಿಗಳನ್ನು ತನ್ನ ವಶದಲ್ಲಿ ಪಡೆದು ವಿನಾಶದ ಅರಣ್ಯದಲ್ಲಿ ಮತ್ತು ನತದೃಷ್ಟತೆಯ ಸುತ್ತಲೂ ಅಲೆಮಾರಿಯಾಗಿ ಅಲೆದಾಡುವವನಂತೆ ಮಾಡಿದ.

ಆಗ ಹತ್ತು ಸಾವಿರ ಪದಾತಿ ಸೈನ್ಯ ಮತ್ತು ಎರಡು ಸಾವಿರ ಬಹಾದುರ್ ಸಿಪಾಯಿಗಳನ್ನು ಕಳಿಸಿ ಬಂದಗಾನ್ ಶಾಹಿಯ ಆಜ್ಞೆ ಮತ್ತು ಆದೇಶಗಳ ಸಂಬಂಧವನ್ನು ಬುದ್ಧಿಹೀನನ ಕೈಯಿಂದ ಸೆಳೆದು ಆ ಸ್ಥಳದಲ್ಲಿ ವಾಸ ಮಾಡುತ್ತಿದ್ದ ಜನರ ಹೃದಯಗಳ ಸಂತೋಷ ಮತ್ತು ಆನಂದವನ್ನು ಯಾತನೆ ಮತ್ತು ಸಂಕಷ್ಟದ ಕಲ್ಲಿನಿಂದ ಜಜ್ಜಿ ಹಾಕಿದರು. ಆ ಸರಹದ್ದಿನ ಒಳಗೆ ವಾಸಿಸುವ ಜನರ ಸಂತೋಷ ನೆಮ್ಮದಿ ಹಾಗೂ ಸಂಭ್ರಮದ ವೃಕ್ಷದ ಬೇರನ್ನು ಹಿಂಸೆಯ ದೃಢವಾದ ಹಸ್ತದಿಂದ ಆ ಸ್ಥಳದಿಂದ ಎತ್ತಂಗಡಿ ಮಾಡಲಾಯಿತು. ಅವರ ಕ್ಷೇಮದ ಫಲಗಳನ್ನು ನಷ್ಟದ ಜಮೀನಿನ ಮೇಲೆ ಹಾಕಲಾಯಿತು. ಯಾವ ಹೊತ್ತಿನಲ್ಲಿ ಆ ಅನಿಷ್ಟವಾದ ಸಂಗತಿಯ ಆಲಿಕೆಯಿಂದ ಬಾದಶಾಹಿ ಕ್ರೋಧದ ಜ್ವಾಲೆಯು ಪ್ರಜ್ವಲಿಸತೊಡಗಿತೋ ಮತ್ತು ಜಹಾಂಪನಾಹ್‌ರವರ ಕ್ರೋಧದ ಸಮುದ್ರವು ಅಪ್ಪಳಿಸುವ ಅಲೆಗಳ ತೂಫಾನಿನಿಂದ ಆ ವಿದ್ರೋಹದ ಸಂಗತಿಯನ್ನು ಆಲಿಸಿ, ಆವೇಶ ಮತ್ತು ಕ್ರೋಧದಿಂದ ಕೂಡಿದರು. ಯಾವನು ಮಹಾಪ್ರಭುಗಳ ಅಪ್ಪಣೆಯ ದಾಸನಾಗುವನೋ ಆತನ ಸಫಲತೆಯ ಟೋಪಿಯನ್ನು ಚಂದ್ರನ ಔನ್ನತ್ಯೆಯ ಮೇಲೆ ಏರಿಸಲಾಗುವನು ಮತ್ತು ಯಾವನು ಅವರ ಆಜ್ಞಾಪಾಲನೆ

ಮತ್ತು ಅಂಗೀಕಾರದ ರಾಜನೀತಿಯ ಉಲ್ಲಂಘನೆಯನ್ನು ಮಾಡುವನೋ ಅವನು ತನ್ನ ಶಿರವನ್ನು ವಿನಾಶದ ಹಾದಿಯಲ್ಲಿ ಹಾಕುವನು. ಖಾನ್ ಆಲಿ ಶಾನ್ ಖಿಝುರ್‌ಖಾನನಿಗೆ ಎಂದಿನಿಂದಲೂ ಸೈತಾನನಂತಹ ಸ್ವಭಾವವನ್ನು ಮತ್ತು ಪೈಶಾಚಿಕ ಭಿನ್ನಾಭಿಪ್ರಾಯ,ವಿರೋಧ ಮತ್ತು ಬಂಡಾಯದ ಪ್ರವೃತ್ತಿಯನ್ನು ಹೊಂದಿದ ಸೈತಾನನಿಗೆ ನೀಚತನ ಮತ್ತು ವಿನಾಶದ ಕನ್ನಡಿಯಲ್ಲಿ ಧೈರ್ಯ ಪರಾಕ್ರಮದ ದೃಢವಾದ ನಿಶ್ಚಯ ಮತ್ತು ಪರಾಕ್ರಮದ ಎಚ್ಚರದ ಹಸ್ತದಿಂದ ತೆರೆಯನ್ನಾಗಿಸುತ್ತಾನೆ ಮತ್ತು ಎಂದೆಂದಿಗೂ ತಜ್ಞ ಹಕೀಮನಂತೆ ವಿದ್ರೋಹ, ಸಂಘರ್ಷ ಹಾಗೂ ಅಪಮಾನದ ಕಾಯಿಲೆಯಲ್ಲಿ ನರಳುವ ಜನರ ಮತ್ತು ಪಿತೂರಿ ಹಾಗೂ ನಷ್ಟದ ರೋಗದಲ್ಲಿ ನಿರತರಾದ ಜನರನ್ನು ತಜ್ಞವೈದ್ಯರ ಕೊಲೆ ಮತ್ತು ರಕ್ತಪಾತದ ಆರೋಗ್ಯದ ಗೃಹದಲ್ಲಿ ದೈವಸೃಷ್ಟಿಯ ಜನತೆಯ ಸಂಕಷ್ಟ ಮತ್ತು ವಿದ್ರೋಹ ಹಾಗೂ ಯಾತನೆಯ ದುಃಖದಿಂದ ಮುಕ್ತಿ ಮತ್ತು ಬಿಡುಗಡೆ ಕೊಡಿಸಿದ.

ಪಾನಪ್ರಿಯರ ಹಾಳೆ ಮತ್ತು ಪಿತೂರಿಯ ಹಿನ್ನೆಲೆಯ ದ್ವೀಪದಲ್ಲಿ ಪ್ರಮಾಣ ಮಾಡುವ ಜನರ ಬದುಕನ್ನು ಮತ್ತು ಅಸ್ತಿತ್ವದಿಂದ ಹಾಗೂ ಹಿಂಸೆ ಮತ್ತು ಪಿತೂರಿಯ ಸಮುದ್ರದ ಪಯಣಿಗರನ್ನು ಅಪಾಯಕಾರೀ ಅಲೆಗಳ ಅಪ್ಪಳಿಸುವಿಕೆಯಿಂದ ಮತ್ತು ಸಭ್ಯ ತಲಾಶಿನಿಂದ ರಭಸದ ಹಾಗೂ ಕಠಿಣತೆಯಿಂದ ದುಃಖದ ಮಾರುತದಿಂದ ಅತ್ಯಂತ ಸೂಕ್ತ ಮತ್ತು ಯೋಗ್ಯ ಪ್ರಯತ್ನಗಳ ಮೂಲಕ ವಿನಾಶದ ಕ್ಷೇತ್ರ ಮತ್ತು ಶೂನ್ಯದ ಸುಳಿಯಲ್ಲಿ ಎಸೆಯಲಾಯಿತು. ಹಗಲು ಮತ್ತು ರಾತ್ರಿ ಕ್ರೋಧ ಹಾಗೂ ಕಪಟತನದ ದುಃಖದಿಂದ ಕೂಡಿದ ಕತ್ತಿಯನ್ನು ಸಂಘರ್ಷದ ಸವಾಲಿನ ಮೂಲಕ ಹರಿತವನ್ನಾಗಿಸಿ ಕ್ರೋಧ ಮತ್ತು ಯಾತನೆಯ ಹೃದಯವನ್ನು ಕತ್ತಿಗಳ ಮೊನೆಯನ್ನು ತಲಾಶು ಮತ್ತು ಹರಿತಗೊಳಿಸುವ ನೀರಿನಿಂದ ಹರಿತಗೊಳಿಸಿ ಹಿಂಸೆಯ ಸ್ವಭಾವವನ್ನುಳ್ಳ ಪಥಭ್ರಷ್ಟರ ಹೆಸರನ್ನು ಈಜಿಪ್ಟಿನ ದೊರೆ ಫೆರೋವಿನ ಪ್ರವೃತ್ತಿಯ ಜನರು ಮತ್ತು ಅಹಂಕಾರದಿಂದ ಕೂಡಿದ ನತದೃಷ್ಟ ವ್ಯಕ್ತಿಗಳ ಹೆಸರು ಮತ್ತು ಲಕ್ಷಣಗಳನ್ನು ನಮ್ರೂದ್‌ನಂತಹ ನಡವಳಿಕೆಯನ್ನುಳ್ಳ ಭೂಮಿಯ ಮೇಲೆ ಹಗುರವನ್ನಾಗಿಸಿದ. ಈ ಅತ್ಯಂತ ಪ್ರತಿಷ್ಠಿತ ಮತ್ತು ಗೌರವಾನ್ವಿತ ಹುಕುಮನ್ನು ಪ್ರಕಟಗೊಳಿಸಿ ಮುಂದಿನ ಪರಿಣಾಮಗಳ ಬಗ್ಗೆ ಅರಿವಿಲ್ಲದ ಮತ್ತು ದುರುಳ ಜನರ ಬದುಕಿನ ಶರಾಬನ್ನು ಮತ್ತು ಅವರ ಕಪ್ಪು ಹೃದಯದ ಬುದ್ಧಿಹೀನ ಜನರನ್ನು ವಿನಾಶದ ಭೂಮಿಯ ಮೇಲೆ ಎತ್ತಿ ಹಾಕಿ ಅವರೆಲ್ಲರ ಗೌರವ ಮತ್ತು ಹೆಸರಿನ ಗಾಜನ್ನು ಅನಾಮಧೇಯತೆಯ ಕಲ್ಲಿನಿಂದ ಜಜ್ಜಿ ಹಾಕುವುದು ಹಾಗೂ ಹೇಡಿತನದ ಅರಣ್ಯದ ಮುಳ್ಳುಗಳು ಮತ್ತು ಹುಲ್ಲಿನ ಅರ್ಹತೆಯನ್ನು ಹೊಂದಿದ ಕುರಿಯಂತೆ ಪುಷ್ಪ ಮತ್ತು ನತದೃಷ್ಟತೆಯ ಅರಣ್ಯದಲ್ಲಿ ಅಲೆಮಾರಿಯಾಗಿ ಅಲೆದಾಡುವವನಿಗೆ ವಿನಾಶದ ರಭಸದ ಭಯಾನಕ

ಮಾರುತದಿಂದ ಹೆಚ್ಚಳವಾದ ತೀವ್ರ ಶಾಖದಿಂದ ಕೂಡಿದ ಗಾಳಿಯಿಂದ ಕರ್ಬಲಾದ ಮೈದಾನದಲ್ಲಿ ಕಂಬನಿಯನ್ನಾಗಿ ಮಾಡಲಿ. ನವಾಬ್ ಖಿಝುರ್‌ಖಾನನಿಗೆ ಈ ಆಜ್ಞೆಯ ರುಮಾಲಿನ ಪೇಟಾದಿಂದ ಶಿರವನ್ನು ಶೋಭಾಯಮಾನವನ್ನಾಗಿ ಮಾಡಿ ಮತ್ತು ನಂಬಿಕೆಯ ಜುಬ್ಬಾವನ್ನು ತೊಡಿಸಿದ. ಅಪಾರ ಅಭಿಮಾನದ ಗೌರವಾದರದ ಹುಕುಮನ್ನು ಪ್ರತಿಷ್ಠೆಯ ಶೋಭಾಯಮಾನವಾದ ಸಿರಿವಂತಿಕೆಯ ಶ್ರೇಯಸ್ಸಿನಿಂದ ಹೆಚ್ಚಳವಾಗಿದ್ದು ದರ್ಜೆಯಲ್ಲಿ ಸೂಕ್ತ ಅಭಿವೃದ್ಧಿ ಮತ್ತು ಗೌರವದ ದೀಪದ ಜ್ಯೋತಿಯು ಪ್ರಕಾಶಮಯವಾಗಿದೆ. ಸಫಲತೆ ಮತ್ತು ಪರಾಕ್ರಮದ ಸಮುದ್ರದ ಸಿಂಹಗಳು ಮತ್ತು ಶೌರ್ಯ ಹಾಗೂ ಹರ್ಝ್ ಕೋಟೆಯ ಚಿರತೆಯಂತಹ ಶುಕ್ರ ಮತ್ತು ಮಂಗಳ ಗ್ರಹಗಳು ಪರಾಕ್ರಮ ಮತ್ತು ಶೌರ್ಯದಿಂದ ಕೂಡಿವೆ. ರುಸ್ತುಮ್ ಮತ್ತು ಅಫ್ರಾ ಸಯಾಬ್‌ರವರ ಶತ್ರು ಶಿಕಾರಿ ಮತ್ತು ಶೌರ್ಯವು ಊಟಕ್ಕೆ ಹಾಸಿದ ಬಟ್ಟೆಯ ಮೇಲಿನಿಂದ ಚೂರುಪಾರನ್ನು ಹೆಕ್ಕುವವರಾಗಿದ್ದಾರೆ. ಬಾದಶಾಹಿ ಅದೃಷ್ಟವನ್ನು ಚಂದ್ರನ ಉಕ್ಕಿನಂತಹ ತೀವ್ರ ವೇಗದ ಕುದುರೆಯನ್ನು ಸಿಪಾಯಿಗಳ ಮುಂಭಾಗದಲ್ಲಿ ಕೂರಿಸಿ ಆ ವಿಶೇಷ ದಿನದಂದು ಮತ್ತು ಕೆಲವು ವೈಶಿಷ್ಟ್ಯತೆಗಳಿಂದ ಕೂಡಿದ ಸ್ವಭಾವದ ಬೆಂಬಲಿಗ ಜನರಿಗೆ ಎಚ್ಚರಿಕೆ ನೀಡುವ ಸಲುವಾಗಿ ಗೌರವ ಮತ್ತು ಶಿಸ್ತನ್ನು ತಮ್ಮದಾಗಿಸಿಕೊಂಡರು. ಕುದುರೆ ಮತ್ತು ಸಂಪತ್ತಿನಿಂದ ಕೂಡಿ ವಿಜಯವಂತ ಶಿರವನ್ನು ಉಳ್ಳವನ ಕೋಟಿನ ಒಳಗೆ ಸಫಲತೆ ಮತ್ತು ಪರಾಕ್ರಮವು ಸಹಾಯಕನ ಹಿಂದೆ ಮುಂದೆ ಇದೆ ಹಾಗೂ ಭಗವಂತನ ನೆರವು ದಾರಿದೀಪವಾಗಿದೆ ಎಂಬ ಉಕ್ತಿಯಂತೆ ಅಲ್ಪ ಅವಧಿಯಲ್ಲಿ ವಿದ್ಯುತ್‌ವೇಗದಲ್ಲಿ ಸಂಚರಿಸುವ ಕತ್ತಿಯ ನೀರಿನಿಂದ ವಿದ್ರೋಹಿ ಪೌರಾಣಿಕ ದೊರೆ ನಮ್ರೂದ್‌ನ ಬೆಂಕಿ ಮತ್ತು ಅವನ ವಿದ್ರೋಹವನ್ನು ನಷ್ಟದಿಂದ ಕೂಡಿದ ಗುರುತನ್ನು ಹೊಂದಿದವರನ್ನು ನಿರ್ವೀರ್ಯರನ್ನಾಗಿಸಲಿ ಮತ್ತು ಎಲ್ಲಾ ಖೊಟ್ಟಿ ಹುಲ್ಲು ಹಾಗೂ ಕಸ ಕಡ್ಡಿಯು ದೇಹದ ಮೇಲೆ ಉಳಿದಿದ್ದರೆ ಅವಿಧೇಯತೆ ಮತ್ತು ಪಿತೂರಿ ಹಾಗೂ ರಕ್ತಪಾತವನ್ನು ತಮ್ಮ ಅಹಂಕಾರದ ವರ್ತುಲದಲ್ಲಿ ವಿಶ್ಲೇಷಿಸಿ ಸಮಸ್ಯೆಯನ್ನು ಬಗೆಹರಿಸುವಂತಾಗಲಿ ಮತ್ತು ಆ ಸ್ಥಳದಿಂದ ಎಲ್ಲಿ ವೃತ್ತಿಯಲ್ಲಿ ಮರೆಮಾಚುವವರಿದ್ದಾರೆಯೋ ಅಂತಹ ಪಿತೂರಿಕೋರರ ಸ್ಥಳ ಮತ್ತು ವಾಸ್ತವ್ಯವನ್ನು ಹೂಡುವಂತಹ ಆ ಸಮುದಾಯದ ಪ್ರಾಪ್ತಿಯ ವಿನಃ ಬೇರೆಯಾವ ವಸ್ತುವೂ ಇರಲಿಲ್ಲ ಮತ್ತು ಅದರ ಅಪೇಕ್ಷೆಯನ್ನು ಹೊಂದಿದ್ದೇನೆಂದರೆ ಪ್ರೇಮ ವಾತ್ಸಲ್ಯದ ಪರೀಕ್ಷೆಯಲ್ಲಿ ವ್ಯಾಸಂಗ ಮಾಡುವ ಅಕ್ಕಸಾಲಿಗನ ಮಾನವೀಯತೆಯನ್ನು ಹೊಂದಿದವನಂತಾಗಲಿ. ಒಟ್ಟಾರೆ ಹಿತನುಡಿಯನ್ನು ಬುದ್ಧಿ ಮತ್ತು ಸನ್ನೆಯ ತೊಟ್ಟಿಲಲ್ಲಿ ವಿದ್ರೋಹಿಯನ್ನಾಗಿ ಮಾಡುವುದಿಲ್ಲ. ಬಂಡೆದ್ದ ಗೋವು ತನ್ನ ಕ್ರೂರ ಕೋಡುಗಳಿಂದ ತಿವಿದು ಯುದ್ಧದ ಕ್ಷೇತ್ರದಲ್ಲಿ ಹೃದಯಭೇದಕ ಕಲಹ ಹಾಗೂ ಅನುಚಿತ ಮತ್ತು ಕಳವಳವನ್ನು ಉಂಟು ಮಾಡುವುದೇ ತಮ್ಮ ಮೂಲ ಸ್ವಬಾವವೆಂದು

ಗುರುತಿಸಿಕೊಂಡವರಿದ್ದಾರೆ. ಆಜ್ಞಾಪಾಲನೆಯ ವಿಶೇಷತೆ ಮತ್ತು ಅನುಸರಣೆಯ ಕಾಡಿಗೆಯಿಂದ ಪ್ರಜ್ಞಾವಂತಿಕೆಯ ಸುರ್ಮಾದಾನ್‌ನಿಂದ ಹೃದಯದ ನೋಟದಲ್ಲಿ ಹಾಕಲಾಗುವುದಿಲ್ಲ ಮತ್ತು ಬಿಂಬವನ್ನು ನೋಡುವ ಕನ್ನಡಿಯನ್ನು ಸ್ವಭಾವದ ಸೌಜನ್ಯ ಮತ್ತು ಚಿಂತನೆಯ ಹೊಳಪಿನಿಂದ ಸುಟ್ಟು ಹಾಕಲಾಗುವುದಿಲ್ಲ. ಆ ವಿರೋಧ ಮತ್ತು ಕೊಲೆಗಳ ಮುಂದುವರಿಕೆಯನ್ನು ಚಾಲನೆ ನೀಡುವವರಂತಾಗಲಿ. ಯಾವ ರೀತಿಯಲ್ಲಿ ಎಂದರೆ ಶವಗಳನ್ನು ತಿನ್ನುವ ನಾಯಿಯು ಯುದ್ಧ ಮತ್ತು ಹೋರಾಟ ಮಾಡುವ ಸಲುವಾಗಿ ತಯಾರಾದಂತೆ ನವಾಬ್ ಖಿಝರ್‌ಖಾನನು ಆ ಕೋಟೆಯ ಸುತ್ತಲಿನಿಂದಲೂ ತಜ್ಞ ಆಕ್ರಮಣಶೀಲ ಯುದ್ಧದ ಸಿಂಹಗಳ ಆಕ್ರಮಣಭೂಮಿಯನ್ನಾಗಿ ಮಾಡಿದನು. ಅವರಿಗೆ ಸಮುದ್ರದಂತಹ ಆವೇಶ ಮತ್ತು ರೌದ್ರತೆಯನ್ನು ಹೊಂದುವ ಮತ್ತು ವಿದ್ಯುತ್ತಿನಂತಹ ಕಠೋರ ನಿಲುವನ್ನು ಹೊಂದಿದ ಲಷ್ಕರಿಗಳೆಂದು ಕರೆಯಲಾಗುತ್ತಿತ್ತು. ರುಸ್ತುಮ್ ಪಹೆಲ್ವಾನನಂತಹ ಧೈರ್ಯ ಮತ್ತು ಸಮುದ್ರದ ಆಲಿಂಗನದಲ್ಲಿ ಇರುವ ಹುಕುಮನ್ನು ನೀಡಿದ್ದು ಕೋಟೆಯ ಗೋಡೆಯ ಮುತ್ತಿಗೆಯನ್ನು ಮಾಡತಕ್ಕದ್ದೆಂತಲೂ ಮತ್ತು ಮುತ್ತಿಗೆಯ ಸಲುವಾಗಿ ಅದರ ಸುತ್ತಲಿನ ಪ್ರದೇಶವನ್ನು ನಿಗಾವಣೆಯಲ್ಲಿಟ್ಟು ಕೂರಬೇಕೆಂತಲೂ ಹಾಗೂ ಆಳವಾದ ಕಂದಕವನ್ನು ಖುಲ್‌ಝುಮ್ ಸಾಗರದಂತೆ ಮತ್ತು ಅಮಾನ್ ಸಮುದ್ರದಂತೆ ಅದರ ಎಲ್ಲಾ ಗುಲಾಮರನ್ನು ಸ್ವತಂತ್ರರನ್ನಾಗಿ ಹೇ ಹೋನ್ ಸಮುದ್ರ ಮತ್ತು ಯಹೂನ್‌ನ ನಿಗಾವಣೆಯನ್ನು ಮಾಡಬೇಕೆಂಬ ಆದೇಶ ಮತ್ತು ಅದರ ಅನುಸರಣೆಯಲ್ಲಿ ನಿಷ್ಠಾವಂತಿಕೆಯನ್ನು ಹೊಂದಿರುತ್ತಾರೆ. ಜಖೂಮ್ ಎಂಬ ಮರ ಮತ್ತು ಮಣ್ಣಿನಿಂದ ಸೇತುವೆಯನ್ನು ನಿರ್ಮಿಸಲಿ ಮತ್ತು ಹಗಲಿನ ವೃಕ್ಷಗಳನ್ನು ಆನಂದ ಮತ್ತು ಸಂಭ್ರಮದ ನೀರಿನಿಂದ ತಾಜಾವನ್ನಾಗಿ ಮಾಡದೆ ಇರಲಿ. ರಾತ್ರಿಯ ಪಾಳಿಯನ್ನು ಸಂತೋಷ ಮತ್ತು ಸಂಭ್ರಮದ ಫಲದಿಂದ ಕೂಡಿದ ಪೊದೆಗಳ ಮೂಲಕ ಫಲಪ್ರಾಪ್ತಿಯನ್ನಾಗಿ ಮಾಡಲಿ. ಕೋಟೆಯ ಸುರಂಗಗಳನ್ನು ಶತ್ರುಗಳ ಶಿರಗಳಂತೆ ಲಜ್ಜಿತರನ್ನಾಗಿ ಕೆಳಗೆ ಹಾಕುವಂತೆ ಆಗಲಿ ಮತ್ತು ಅವರ ಎತ್ತರದ ಗೋಡೆಗಳನ್ನು ಶತ್ರುಗಳ ದೇಹದ ರೀತಿಯಲ್ಲಿ ಬೆಂಕಿಯನ್ನು ಉಗುಳುವಂತಹ ತೋಪುಗಳ ಮೂಲಕ ತುಂಡರಿಸಿ ನಾಶ ಮಾಡಲಿ ಮತ್ತು ಪಿತೂರಿಯನ್ನು ಮಣ್ಣಿನೊಳಗೆ ಎಸೆಯುವಂತಾಗಲಿ. ನವಾಬ್ ಆಲಿ ಶಾನ್‌ನ ಹುಕುಮಿನ ಮೇರೆಗೆ ಬೆಂಬಲ ಮತ್ತು ನೆರವನ್ನು ಸತತವಾಗಿ ಮುಂದುವರೆಸುವಂತಹ ಯೋಧರು ನಾಲ್ಕೂ ದಿಕ್ಕಿನಿಂದ ಮೋಡಗಳಂತೆ ಆವರಿಸಿ ಉತ್ಸಾಹದಿಂದ ಕೂಡಿ ಸಮುದ್ರದಂತೆ ಅಪ್ಪಳಿಸುತ್ತಾ ಯುದ್ಧರಂಗದಲ್ಲಿ ಪ್ರವೇಶಿಸಿ ಕೋಟೆಯ ಆಕ್ರಮಣದ ಸಾಮಗ್ರಿಯನ್ನು ಒಟ್ಟುಗೂಡಿಸುವಲ್ಲಿ ನಿರತರಾದರು ಮತ್ತು ಕೋಟೆಯ ಮುತ್ತಿಗೆಯನ್ನು ಪಾನಪ್ರಿಯತೆ ಮತ್ತು ಮದಿರೆಯ ನಶೆಗಿಂತಲೂ ಹೆಚ್ಚು ಸುಲಭವೆಂದು ತಿಳಿದು ಸನ್ನಡತೆಯ ಮತ್ತು ಸಮೃದ್ಧತೆಯ ಲಕ್ಷಣವನ್ನು ಹೊಂದಿದ ಸಭೆಯಲ್ಲಿ

ಲವಲವಿಕೆಯಿಂದ ಕೂಡಿ ಸೂರ್ಯನಂತಹ ಮೋರೆಯನ್ನು ಮತ್ತು ಚಂದ್ರನಂತಹ
ದೇಹವನ್ನು ಹೊಂದಿದ್ದ ಸುಂದರಿಯ ಸಖ್ಯದ ಸಮಾರಂಭದ ಸನ್ನಿವೇಶವು
ತಯಾರಾಗಿರುವಂತೆ ಮಾಡಲಾಯಿತು. ಒಂದು ಕ್ಷಣವೂ ಕೂಡಾ ಯಾವುದೇ
ರೀತಿಯ ವ್ಯರ್ಥ ಕೆಲಸಗಳಲ್ಲಿ ಕಳೆಯದಂತೆ ಮಾಡಲಾಯಿತು ಹಾಗೂ ವಿನಾಶಕಾರೀ
ಹಿಂಸಾತ್ಮಕ ನಡತೆಯನ್ನು ಹೊಂದಿದ ಕೋಟೆಯ ಗೋಡೆಯ ಮೇಲಿನ
ಪಿತೂರಿಕೋರರು ತೋಪು ಮತ್ತು ಬಂದೂಕಗಳು ಹಾಗೂ ಸಹಸ್ರಾರು ಸಂಖ್ಯೆಯ
ಯುದ್ಧ ಸಾಮಗ್ರಿಗಳಿಂದ ಕೂಡಿ ಬೆಂಕಿಯ ಪ್ರವಾಹವನ್ನು ಸೃಷ್ಟನೆ ಮಾಡಲು
ನೆರವು ಮತ್ತು ಬೆಂಬಲವನ್ನು ಶಾಮೀಲು ಮಾಡುವ ಮತ್ತು ಸಫಲತೆಯ
ಜೊತೆಯೊಂದಿಗೆ ಹೆಜ್ಜೆ ಹಾಕುವ ಬಹಾದುರ್ ಫೌಜಿಗಳನ್ನು ಅಮೂಲ್ಯವಾದ ಮತ್ತು
ಶುಭ್ರವಾದ ಹೊಳೆಯುವ ಮುತ್ತು ಅಪಾರ ಮೌಲ್ಯದ ಮುತ್ತುರತ್ನಗಳೆಂದು ತಿಳಿದು
ನೌರೋಜ್‌ನ ದಿನದಂದು ಅಳಿಯನ ತಲೆಯ ಮೇಲಿನಿಂದ ನಿವಾಳಿಸುತ್ತಾರೆ. ಪ್ರಯತ್ನದ
ಬೆವರು ಯುಕ್ತಿಯ ಹಣೆಯ ಮೇಲಿನಿಂದ ಕೋಟೆಯ ಆಕ್ರಮಣದ ಭೂಮಿಯ
ಮೇಲೆ ಹರಿಸಿದರು ಮತ್ತು ಆ ಹೊತ್ತಿನಲ್ಲಿ ಆ ನತದೃಷ್ಟ ಗುಂಪಿನಲ್ಲಿ ಯಾರೋ
ಅಧೈರ್ಯದಿಂದ ಕೂಡಿದ ಬುದ್ಧಿಗೇಡಿತನದಿಂದ ಕೋಟೆಯ ಹೊರಗಡೆ ಬಂದರು.
ಅವರಿಗೆ ಸಂಪೂರ್ಣ ಪರಾಕ್ರಮ ಮತ್ತು ಧೈರ್ಯದಿಂದ ಎದುರಿಸಿ ಕೈ ಮತ್ತು
ಕಾಲುಗಳನ್ನು ಆ ವೃಕ್ಷಗಳ ರೆಂಬೆಗಳ ರೀತಿಯಲ್ಲಿ ರಭಸದ ಮಾರುತದಿಂದ ವಸಂತದ
ಸಂದರ್ಭದಲ್ಲಿ ಕ್ರಿಯಾಶೀಲರಾದಂತಹ ಶೋಭೆಯಲ್ಲಿ ಸ್ವತಃ ತನ್ನನ್ನು ಪ್ರಜ್ಞಾವಂತಿಕೆಯ
ಉದ್ಯಾನವನದ ಮಾಲಿಯ ದೃಷ್ಟಿಯಲ್ಲಿ ಮತ್ತು ಮುಳ್ಳುಗಳಿಂದ ಆವೃತವಾದ ವೃಕ್ಷದ
ರೀತಿಯಲ್ಲಿ ನಂಬಿಕೆಯ ಮೂಲಕ ಬಟ್ಟೆ ಹಾಗೂ ದೇಹವನ್ನು ಛಿದ್ರ ಛಿದ್ರಗೊಳಿಸಲಿ.
ಆ ಮೂಲಕ ತಮ್ಮ ದೃಢವಾದ ಹೆಜ್ಜೆಗಳನ್ನು ಬಹಾದುರ್ ಸೈನಿಕರು ತೋರಲಿ
ಮತ್ತು ತಮ್ಮ ಕ್ರೋಧಾವೇಶದ ಬೇರು ಮತ್ತು ಧೈರ್ಯದಿಂದ ಕ್ರೋಧದ ಕತ್ತಿ ಮತ್ತು
ಪ್ರತೀಕಾರದ ಬಾಣದಿಂದ ಕತ್ತರಿಸುತ್ತಾ ಅವರೆಲ್ಲರ ದೇಹಗಳನ್ನು ಛಳಿಗಾಲದ ಮಾರುತದ
ದೆಸೆಯಿಂದ ಭೂಮಿಯ ಮೇಲೆ ಉದುರುವ ಎಲೆಗಳಂತೆ ಮಾಡಲಿ ಮತ್ತು ಅವರ
ಅಪಮಾನಕಾರೀ ಹಾಗೂ ವಿನಾಶಕಾರೀ ಪ್ರಯತ್ನಗಳನ್ನು ಮಣ್ಣುಗೂಡಿಸಲಾಯಿತು
ಮತ್ತು ಆ ಪ್ರತಿಕ್ಷಣವೂ ಆ ವಿದ್ರೋಹ, ಪಥಭ್ರಷ್ಟತೆ ಮತ್ತು ಗುರಿಯ ವಿನಾಶವನ್ನು
ಹೊಂದಿದ ಜನರ ಕಡೆಯಿಂದ ಕೂಗಾಟ ಚೀರಾಟವನ್ನು ಮಾಡಿ ಕೋಟೆಯ
ವರ್ತುಲದಿಂದ ತಮ್ಮ ಹೆಜ್ಜೆಗಳನ್ನು ಹೊರತೆಗೆದಲ್ಲಿ ವೃತ್ತದಂತೆ ಹಾಗೂ ಚುಕ್ಕೆಯಂತೆ
ಸ್ಥಿರವಾದ ಹೆಜ್ಜೆಯನ್ನು ಹೊಂದಿದ್ದು ದೃಢತೆಯೊಂದಿಗೆ ನೀವು ಹೇಳುವಿರಿ ಯುದ್ಧದ
ಕ್ಷೇತ್ರದಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಯುದ್ಧ ರಂಗದಲ್ಲಿ ವಾಸ್ತವವಾಗಿ ತೀವ್ರತೆಯಿಂದ
ಮತ್ತು ದೃಢತೆಯಿಂದ ಧೈರ್ಯ, ಶಕ್ತಿ ಮತ್ತು ಪರಾಕ್ರಮಗಳನ್ನು ದೃಢವಾಗಿ ಹೊಂದಿದ್ದು
ದೇಹದ ಮಾಲೀಕನು ಕಬ್ಬಿಣದ ಸ್ವಭಾವದಂತೆ ಒಲೆಯಿಂದ ಹೊರಡುವ ಬೆಂಕಿಯಂತೆ

ಸ್ಥಿರವಾಗಿರಲಿ. ಯುದ್ಧರಂಗದಲ್ಲಿ ಹಬ್ಬಿದ ಮತ್ತು ಮುತ್ತಿಗೆಯ ಸಂದರ್ಭದಲ್ಲಿ ಎದುರಾಳಿಗಳ ದೇಹವನ್ನು ಇಂಥವನ್ನಾಗಿ ಮಾಡಿ ಎಲ್ಲವೂ ಮತ್ತು ಎಲ್ಲಾ ರೀತಿಯಲ್ಲಿಯೂ ವಿನಾಶದ ಸಲುವಾಗಿ ಯುದ್ಧದ ರಭಸವನ್ನು ತೀವ್ರಗೊಳಿಸಲಿ.

ಅದರ ತೀವ್ರತೆಯಿಂದ ಬಿಸಿಯೇರಿ ಕತ್ತಿಯು ಬಾಣಗಳ ಮೋಡದಿಂದ ಮಳೆಯಂತೆ ನೀರನ್ನು ಮತ್ತು ಶುದ್ಧ ಮದಿರೆಯ ಹೂಜಿಯಿಂದ ನೀರು ಕೆಳಗೆ ಹನಿಯಲಿ. ಯಾವ ಕ್ಷಣದಿಂದ ದೃಢ ಮತ್ತು ಶಕ್ತಿಯ ಬೆಂಬಲವನ್ನು ಪಡೆದ ವ್ಯಕ್ತಿಗಳು ಕಪಟ ಹಾಗೂ ಪ್ರತೀಕಾರದಿಂದ ಸಾವಿಗೆ ಈಡಾಗಿ ಕಾಳುಗಳು ಮುಳುಗಿ ಬಹಾದುರ್ ಜನರು ಸಿಡಿಲಿನ ನಡವಳಿಕೆಯಂತೆ ತೋಪುಗಳ ಘನ ಘರ್ಜನೆ ಮತ್ತು ಪಿತೂರಿಯಿಂದ ಕೂಡಿದ ತಡತಡ ಎಂಬ ಶಬ್ದವನ್ನು ಹೊಂದಿದ ಕಡಕ್ ಶಬ್ದದ ರೀತಿಯಲ್ಲಿ ಕಪಟ ಮೋಸವನ್ನು ಉಳ್ಳ ಸೈನಿಕರ ಕಿವಿಗಳ ಪರದೆಗಳು ಮೋಸಗಾರಿಕೆಯಿಂದ ಕೂಡಿದ್ದ ನೆಪಕೋರರಾಗಿದ್ದರು. ಹಳೆಯ ಬಟ್ಟೆಯಂತೆ ಸೀಳುತ್ತಾ ಆ ರಾತ್ರಿಯ ಮಡಿಲನ್ನು ಪರ್ವತಗಳ ಮೇಲಿನಿಂದ ಮಂಜಿನ ರೀತಿಯಂತೆ ಇದ್ದ ಪರ್ವತಗಳ ನೆತ್ತಿಯಿಂದ ಅರಣ್ಯ ಮತ್ತು ವಿಸ್ತಾರವಾದ ಮೈದಾನದಲ್ಲಿ ಎಸೆಯುವುದು. ಭೂಮಿಯ ಮೇಲೆ ಹಾಕಲಾಗುವುದು ಮತ್ತು ಯಾವುದೇ ರೀತಿ ನೀತಿ ಇಲ್ಲದ ಆಕಾಶವು ಅವರೆಲ್ಲರ ಅಸಹಾಯಕತೆ ಮತ್ತು ಯಾತನೆಯ ಬಗ್ಗೆ ಕರುಣೆಯಿಂದ ಕೂಡಿ ಮಳೆಯ ಹನಿಗಳ ಮೂಲಕ ಹನಿಸಿ ಸಾವಿರಾರು ಕಣ್ನೋಟಗಳ ಅಸೂಯೆಯ ಕಂಬನಿ, ನಿರಾಶೆ ಮತ್ತು ಆಶ್ಚರ್ಯದಿಂದ ಕೂಡಿದ ಭೂಮಿಯ ಮೇಲೆ ಹರಿಸಿತು. ಹಿಂಸೆಯ ಸ್ವಭಾವವನ್ನು ಹೊಂದಿದ ಜಗತ್ತು ಅವರೆಲ್ಲರ ಸಂಕಷ್ಟಗಳನ್ನು ಕಂಡು ತನ್ನ ಕಠಿಣ ಹೃದಯವನ್ನು ಮೃದುವನ್ನಾಗಿ ಮಾಡುತ್ತ ರಭಸದ ತೀವ್ರ ಮಾರುತಗಳ ಮೂಲಕ ಸಹಸ್ರಾರು ಅಸಹಾಯಕ ಹಸಿರು ಎಲೆಗಳನ್ನು ಹೊರತೆಗೆದು ಆ ಹೊತ್ತಿನಲ್ಲಿ ದಿಗ್ವಿಜಯವನ್ನು ಪಡೆದ ಆಕ್ರಮಣಶೀಲ ವ್ಯಕ್ತಿಗಳು ಹಾಗೂ ಕತ್ತಿ ಹಿಡಿದ ವ್ಯಕ್ತಿಗಳ ಬಿಲ್ಲು ಬಾಣವನ್ನು ಹೊಂದಿದವರ ಶಕ್ತಿ ಮತ್ತು ವೃತ್ತ ಹಾಗೂ ತೀವ್ರ ಕ್ರೋಧದ ಕತ್ತಿ ಮತ್ತು ಕೋಪದ ಮೊನಚಾದ ಝುರಿಗಳು ನೆತ್ತರನ್ನು ಹರಿಸುತ್ತಾ ಹೃದಯವನ್ನು ಬೇಧಿಸುವ ಬಾಣಗಳ ಮೊನೆಗಳ ಆಕ್ರಮಣದಿಂದ ಆ ಗುಂಪಿನ ನತದೃಷ್ಟ ಮತ್ತು ಕಪ್ಪು ಹೃದಯವನ್ನು ಹೊಂದಿದ ಅವನ ಆಯುಷ್ಯ ಮತ್ತು ಬದುಕಿನ ದೇಹಗಳ ಕೊಳಗಳನ್ನು ತೆರೆಯುವ ಮತ್ತು ಬಾಣಗಳ ಮೊನೆಗಳ ಕೀಲಿಕೈಗಳಿಂದ ಬೀಗಗಳನ್ನು ನಾಶ ಮತ್ತು ವಿನಾಶದ ಮೂಲಕ ಆ ಅಧೈರ್ಯದ ಶುಭಾಕಾಂಕ್ಷೆಯನ್ನು ಹೊಂದಿ ಚೂರುಚೂರನ್ನಾಗಿ ಮಾಡಿ ಶೂನ್ಯ ಲೋಕದಲ್ಲಿ ಬಂದ. ಆಕಾಶ ಮತ್ತು ಭೂಮಿಯ ದೇವಚರರು ಮತ್ತು ಪರ್ವತ ಹಾಗೂ ಅರಣ್ಯಗಳು ಮತ್ತು ನಗರ ಪ್ರದೇಶದಲ್ಲಿ ವಾಸ್ತವ್ಯವನ್ನು ಹೂಡಿದ ಜನರು ಆ ಸಿಂಹದಂತಹ ಸ್ವಭಾವದ ಮತ್ತು ಪರಾಕ್ರಮಶಾಲೀ ಯುವಕರ

ಹಸ್ತದ ಮೇಲೆ ಆನೆಯಂತಹ ಶೌರ್ಯ ಮತ್ತು ಧೈರ್ಯವನ್ನು ಉಳ್ಳ ಕೃತಜ್ಞತೆಯನ್ನು ಹೊಂದಿದ ಪರಾಕ್ರಮಿಗಳ ಮೇಲೆ ಅಸಂಖ್ಯ ಮತ್ತು ಅಗಣಿತ ಪ್ರಶಂಸೆಯನ್ನು ಮತ್ತು ಉತ್ತೇಜನ ಹಾಗೂ ಪುರಸ್ಕರಿಸುವ ನುಡಿಗಳನ್ನು ಆಡಿದರು. ಯುವಕರ ಹಸ್ತದ ಮೇಲೆ ಆನೆಯಂತಹ ಶೌರ್ಯ ಮತ್ತು ಧೈರ್ಯವನ್ನು ಉಳ್ಳ ಕೃತಜ್ಞತೆಯನ್ನು ಹೊಂದಿದ ಪರಾಕ್ರಮಿಗಳ ಮೇಲೆ ಅಸಂಖ್ಯ ಮತ್ತು ಅಗಣಿತ ಶಹಬಾಸ್‌ಗಿರಿಯನ್ನು ಮತ್ತು ಉತ್ತೇಜನ ಹಾಗೂ ಪುರಸ್ಕಾರವನ್ನು ನೀಡುವ ನುಡಿಗಳನ್ನು ಆಡಿದರು.

ವಿನಾಯಕ್ ವಾರಿಯರ್ ಕೋಟೆಯ ನಿರಾಶ್ರಿತ ಜನರು ನಿರ್ವಿವಾದವಾಗಿ ಈ ವಿಷಯವನ್ನು ಅರಿತುಕೊಂಡರು. ಅದೇನೆಂದರೆ ನವಾಬ್ ಮುಸ್ತಫಾಬ್ ಮತ್ತು ತಾಯೀದ್ ಮೌವೂದ್‌ರವರು ವಿಜಯವನ್ನು ಪಡೆದ ಸೈನ್ಯ ಎಲ್ಲ ಸಂದರ್ಭಗಳಲ್ಲಿಯೂ ಮತ್ತು ಎಲ್ಲ ಸ್ಥಳಗಳಲ್ಲಿಯೂ ತಮ್ಮ ಪ್ರಿಯವಾದ ಜೀವವನ್ನು ಹಝರತ್ ಬಾದಶಹ ಘಾಝಿಯವರ ಹುಕುಮನ್ನು ಪ್ರಮುಖವೆಂದು ತಿಳಿಯುತ್ತಾರೆ ಹಾಗೂ ಈ ಸಂತೋಷ ಮತ್ತು ಪರ್ವತವನ್ನು ಸುಲಿಯುವುದರಲ್ಲಿ ಸ್ವಲ್ಪ ಕೂಡಾ ಕಾಲಾವಕಾಶವನ್ನು ನೀಡದೆ ಸವಾರಿಯ ಮೇಲೆ ಸವಾರರು ಮತ್ತು ಪದಾತಿ ಸೈನಿಕರ ಜೀವಯಾನವನ್ನು ನೀಡಿದಲ್ಲಿ ಅಡಗಿ ಕೂರುವ ಕಲ್ಲುಕುಟಿಗನಂತೆ ವರ್ತಿಸುತ್ತಾರೆ. ಶತ್ರು ಸಂಹಾರದ ಹೊಣೆಗಾರಿಕೆಯ ಕರ್ತವ್ಯದಿಂದ ಆ ಯುದ್ಧಾನುಭವಿ ಜನರು ಸಫಲತೆಯನ್ನು ನಿರಂತರವಾಗಿ ಪಡೆಯುತ್ತಾರೆ ಹಾಗೂ ಬೆಂಬಲ ಮತ್ತು ನೆರವನ್ನು ಜೊತೆಯಲ್ಲಿ ಇಟ್ಟುಕೊಂಡಿರುವ ಜನರ ಆದೇಶದ ಅನುಸಾರ ಸಾವಿನ ಕಣಿವೆಯಲ್ಲಿ ಬೀಳುತ್ತಾರೆ ಹಾಗೂ ಅತಿ ಹೆಚ್ಚು ಆಯಸ್ಸಿನ ಗಣಿಯನ್ನು ಸೈನಿಕರು ಮತ್ತು ಫೌಜಿಗಳಿಂದ ರೊಟ್ಟಿಯಂತೆ ಬೆಂಕಿಯ ಅರ್ಧ ಕಿಡಿಯಿಂದ ಸುಟ್ಟ ಇಜ್ಜಿಲಾಗಿ ಬದಲಾವಣೆಯಾದಂತೆ ಮತ್ತು ಶತ್ರು ವಿನಾಶದ ಬೆಂಕಿಯ ಜ್ವಾಲೆಯಿಂದ ಈ ಮುಖಾಬಿಲೆ ಮಾಡುವ ಪರಾಕ್ರಮದ ಸನ್ನಿವೇಶವನ್ನು ನಿಭಾಯಿಸುವ ಹಾಗೂ ಯುದ್ಧದ ಅಹಂಕಾರದ ಸಲುವಾಗಿ ಯುದ್ಧ ಮತ್ತು ಜಿಹಾದ್ ಮಾಡುವವರು ಸಾವಿನ ಮೈದಾನದಲ್ಲಿ ಮುನ್ನುಗ್ಗಿ ಇಜ್ಜಿಲಂತೆ ಆದರು. ಅಸಹಾಯಕ ಮತ್ತು ನಿರ್ಗತಿಕ ವೃದ್ಧ ಮಹಿಳೆಯರ ದುರವಸ್ಥೆಯಂತೆ ನಿರ್ವೀರ್ಯರಾದರು. ಕೋಟೆಯ ಒಳಗಡೆ ರಕ್ಷಣೆ ಪಡೆದಂತಹ ಸೈನಿಕರ ನಾಲಿಗೆಯು ಅಲ್ ಅಮಾನ್ ಅಂದರೆ ಶರಣಾಗತಿ ಶರಣಾಗತಿ ಎಂದು ಪಠಿಸತೊಡಗಿತು. ಕುಂದಣದ ಕೆತ್ತನೆಯ ಶೋಭೆ ಪಡೆದಂತೆ ಹಾಗೂ ಕತ್ತಲ ರಾಜ್ಯದ ದರ್ಶನದಿಂದ ತಮ್ಮ ಕೃತ್ಯಗಳಿಂದ ಲಜ್ಜಿತರಾಗಿ ಮತ್ತು ಕಳವಳದಿಂದ ಕೂಡಿದ್ದು ನಾಲಿಗೆಯ ದೀಪವನ್ನು ವಿನಯವಂತಿಕೆಯ ತೈಲದಿಂದ ಬೆಳಗಿದರು.

ಅಪರಾಧಕ್ಕೆ ಕ್ಷಮೆ ಹಾಗೂ ತಪ್ಪಿತಸ್ಥರಿಗೆ ಕ್ಷಮೆ ನೀಡುವ ಅಧಿಕಾರ ದಂಡದ ಮೇಲೆ ಹಸ್ತವನ್ನು ಇರಿಸಿದ ನವಾಬ್ ಮುಸ್ತಫಾಬ್ ಕರುಣೆಯ ಅಪಾರ ಸಾಗರದ

ಅಲೆಗಳ ಮೇಲೆ ದೃಢವಾಗಿ ಒರಗಿ ಕ್ಷಮೆಯ ವಿಶೇಷ ಸಾಮರ್ಥ್ಯವನ್ನು ಹೊಂದಿದ್ದರು. ಯಾರು ಕೊಲೆ ಮಾಡಲ್ಪಡಲು ಯೋಗ್ಯವಾಗಿದ್ದರೋ ಆ ಸಮುದಾಯ ಮತ್ತು ಇನ್ನೊಂದು ಗುಂಪಿನ ವಿದ್ರೋಹದ ಅಗ್ನಿಯನ್ನು ಕರುಣೆ ಮತ್ತು ಕ್ಷಮೆಯ ನೀರಿನಿಂದ ತಂಪಾಗಿಸಿದರು. ಅವಿಧೇಯ ಪುಷ್ಪವನ್ನು ಚೂರುಚೂರನ್ನಾಗಿ ಮಾಡಿದಂತೆ ಮತ್ತು ಬಾದಶಾಹೀ ಗುಲಾಮಿಯ ಶೋಕಿ ಮತ್ತು ಸಂತಸದ ಮನೆಯನ್ನು ತಮ್ಮ ಆಶ್ರಿತ ತಾಣವನ್ನಾಗಿ ಮಾಡಿದಂತಹವರು ಹಾಗೂ ಬಾದಶಾಹೀ ಹುಕುಮನ್ನು ಅಂಗೀಕರಿಸುವಲ್ಲಿ ಸಂತೋಷ ಮತ್ತು ನೆಮ್ಮದಿಯ ಆಶ್ರಯ ತಾಣವನ್ನಾಗಿ ಮಾಡಿದವರು ಯಾವುದೇ ರಕ್ಷಣೆಯನ್ನು ಹೊಂದಿರಲಿಲ್ಲ. ಮತ್ತು ಕೆಳಕಂಡ ಕವನದ ರೀತ್ಯಾ

ಬಾದಶಾಹೀ ಕ್ಷಮೆ ಮತ್ತು ಮೃದುತ್ವದೊಂದಿಗೆ ಶತ್ರುವಿನ
ತಪ್ಪು ಏನೆಂದು ಪರಿಗಣಿಸಬೇಕು ಧೂಳನ್ನೆರಚುವ ಮಾರುತದ
ದೆಸೆಯಿಂದ ಸಮುದ್ರವು ಎಲ್ಲಿಯವರೆಗೆ ಕಪ್ಪು ಮಸಿಯಾಗಿರುವುದು

ಜೀವದ ರಕ್ಷಣೆಯು ಎಲ್ಲರ ಅಂತಿಮ ಗುರಿಯಾಗಿತ್ತು. ಆಕಾಶದ ಹೊಳೆಯುವ ಮತ್ತು ಸಫಲತೆ ಹಾಗೂ ಸಂಭ್ರಮದ ನಕ್ಷತ್ರ ಮತ್ತು ಆಶ್ಚರ್ಯದಿಂದ ಕೂಡಿದ ಕಳವಳ ತುಂಬಿದ ಅಂಧಕಾರದ ರಾತ್ರಿಯಲ್ಲಿ ಬೆಳಕನ್ನು ನೀಡುವ ದೀಪವೆಂದು ಅವರನ್ನು ಕರೆಯಲಾಗುವುದು. ಅವರಿಗೆ ಸಾಂತ್ವನದ ಮುಲಾಮಿನ ಮೂಲಕ ನೋವನ್ನು ಮಾಯಿಸಿ ಅವರೆಲ್ಲರ ದುಃಖಿತ ಮತ್ತು ಕಳವಳದ ಹೃದಯದ ಗಾಯಗಳಿಗೆ ಕರುಣೆಯ ಕೊಡುಗೆಯಿಂದ ಜೋಡಿಸಿ, ಕರುಣೆ ಹಾಗೂ ಮೃದುತ್ವದ ಲೇಹ್ಯದಿಂದ ಅವರೆಲ್ಲರ ದುಃಖಿತ ಮತ್ತು ರೋಗಿಷ್ಠ ಹೃದಯದ ಕಾಯಿಲೆಯನ್ನು ನಿರ್ಮೂಲಗೊಳಿಸಿದ. ಕೋಟೆಯಲ್ಲಿ ಎಲ್ಲಾ ರೀತಿಯ ತಯಾರಿಯನ್ನು ಮಾಡಿ ಸಾಮಗ್ರಿಯನ್ನು ಮತ್ತೆ ಒಟ್ಟುಗೂಡಿಸಿ ಎಲ್ಲಾ ಬೆಂಬಲಿಗರು ಮತ್ತು ಜಾಗೃತ ಆತ್ಮದ ವ್ಯಕ್ತಿಗಳನ್ನು ತಮ್ಮೊಡನೆ ನೆರಳಿನೋಪಾದಿಯಲ್ಲಿ ಜೊತೆಯಲ್ಲಿರಿಸಿಕೊಂಡು ಆಕಾಶದ ಎತ್ತರ ಹಾಗೂ ಮಹಾನತೆಯನ್ನು ಹೊಂದಿದ ಸಾಗರದ ಹೊಸ್ತಿಲಿಗೆ ನಮಿಸುವತ್ತ ಗಮನವನ್ನು ಹರಿಸಿದ ಹಾಗೂ ಬಾದಶಾಹೀ ಕೊಡುಗೆಗಳು ಮತ್ತು ಉಪಕಾರಗಳನ್ನು ಶಾಮೀಲು ಮಾಡುತ್ತ ರಾಜ ಮರ್ಯಾದೆ ಮತ್ತು ಸತ್ಕಾರಗಳ ಆದರಗಳಿಂದ ಪ್ರಭಾವಿತನಾಗಿ ಅದರತ್ತ ಗಮನಹರಿಸಿದ.

ಭಗವಂತನ ಇಚ್ಛೆ ಇದ್ದಲ್ಲಿ ಹಡಗಿನ ಒಳಗಡೆ ವಾಸ ಮಾಡುವ ಜನರ ಹೃದಯದ ಸಂತೋಷ ಮತ್ತು ನಂಬಿಕೆಯ ದೋಣಿಗಳನ್ನು ಕಪಟತನ ಮತ್ತು ದ್ವೇಷದ ಆಕಾಶದ ಒಳಗೆ ತಲುಪಲು ಮತ್ತು ರಭಸವಾಗಿ ಬೀಸುವ ಗಾಳಿಯ ಕಾಠಿಣ್ಯದ ಸಂಕಷ್ಟಗಳಿಂದ ತುಂಬಿದ ಅಲೆಗಳ ಮೇಲೆ ಸಂಘರ್ಷ ಮಾಡಲು ಹಾಕಿದ ಹಾಗೂ ನಾವಿಕರು ಮತ್ತು ಒಳಿತಿನ ವ್ಯಕ್ತಿಗಳು ಮತ್ತು ಅರಿವು ಹಾಗೂ ಜ್ಞಾನ ಸಂಪನ್ನರ ಪ್ರಯತ್ನಗಳಿಂದ

ಶಿಕ್ಷಕರನ್ನು ಸಹಸ್ರ ಸಹಸ್ರ ಕಲೆಗಳ ಜ್ಞಾನಿಯನ್ನು ಮತ್ತು ಹಾಗೂ ಯುಕ್ತಿ ಮತ್ತು ಉಪಾಯಗಳ ಮಾಲೀಕನು ಆ ದೋಣಿಗಳನ್ನು ಅವರ ಮೇಲೆ ಕಳವಳಕಾರೀ ಅಲೆಗಳಿಂದ ಹೊರ ತರುವಲ್ಲಿ ಹೃದಯವಂತಿಕೆ ಮತ್ತು ವಿಫಲತೆಯನ್ನು ಹೊಂದುವ ಕಾರಣವನ್ನಾಗಿ ಮಾಡಿದ್ದಾನೆ. ಅವನಿಗೆ ಪ್ರೇಮ ವಾತ್ಸಲ್ಯ ಮತ್ತು ಕರುಣೆಯ ಪರಿಸ್ಥಿತಿಯ ಮೂಲಕ ನೆಮ್ಮದಿ ಮತ್ತು ರಕ್ಷಣೆಯ ದಡವನ್ನು ಸಮುದ್ರದ ಮೇಲೆ ತಲುಪಿಸಿ ಸಂಶೋಧನೆಯ ಬಜಾರನ್ನು ಉದ್ದೇಶ, ಗುರಿ ಮತ್ತು ಅಪೇಕ್ಷಿತ ಮುತ್ತುಗಳ ಕ್ರಯವಿಕ್ರಯ ಮೌಲ್ಯದ ಮೂಲಕ ಹಾಗೂ ನಿರಾಶೆಯ ನಗದಿನ ಮೂಲಕ ಪ್ರಜ್ಞಾಹೀನರಾಗಿರುವ ವ್ಯಕ್ತಿಗಳು ಮತ್ತು ನಾಮಧಾರೀ ಮೊಬಲಗಿಗೆ ಶೋಭೆಯನ್ನು ಮತ್ತು ಮೆರಗನ್ನು ಕರುಣಿಸಿದ್ದಾನೆ ಹಾಗೂ ಹೃದಯದ ಆನಂದ ಮತ್ತು ಸಂಭ್ರಮದ ಅಂಗಡಿಗಳನ್ನು ಅಸ್ತಿತ್ವದ ದೇಶದಲ್ಲಿ ಖಾಯಮ್ ಮಾಡುತ್ತಾನೆ ಹಾಗೂ ಬೆಳಕಿನ ವೇದಿಕೆಯ ಮೇಲೆ ಅಧ್ಯಕ್ಷನಾಗುವವನಿಗೆ ನಷ್ಟ ಮತ್ತು ಸಂಕಷ್ಟಗಳ ಹೊರೆಯಿಂದ ಲಾಭ ಮತ್ತು ಫಲದಾಯಕ ಸಾಮಗ್ರಿಯಾಗುತ್ತದೆ. ದುಷ್ಟತನದಿಂದ ಕೂಡಿದ ದೇಶದಲ್ಲಿ ಸಂಘರ್ಷಕೋರ ಜನರ ದುರ್ವ್ಯಸನಗಳು ಮತ್ತು ಪಿತೂರಿಯ ಒಳಸುಳಿಗಳನ್ನು ಸೃಷ್ಟಿಸುವ ಮತ್ತು ಭಯ ಹಾಗೂ ವಿನಾಶವು ಮಾನವರಲ್ಲಿ ವ್ಯಾಪಿಸಿದ್ದು ನಷ್ಟದ ವ್ಯೂಹದಲ್ಲಿ ಹಗಲು ರಾತ್ರಿಗಳು ಸಿಲುಕಿವೆ ಹಾಗೂ ಪ್ರಜ್ಞಾವಂತಿಕೆಯ ಜನರು ಜಾಗೃತ ಹೃದಯದಿಂದ ತಮ್ಮ ಯೋಗ್ಯತೆ ಹಾಗೂ ಫೌಜುದಾರಿಯ ರಹಸ್ಯಗಳನ್ನು ಅರಿತಿದ್ದರೂ ಕೂಡಾ ವಿಜಯ ಪ್ರಾಪ್ತಿಯಲ್ಲಿ ಸೂಕ್ತ ಪಾತ್ರವನ್ನು ನಿರ್ವಹಿಸದ ಕಾರಣದಿಂದ ಭಾರವಾದ ಹೃದಯದಿಂದ ಕೂಡಿ ಸಂತಸಹೀನರಾಗಿದ್ದಾರೆ. ಕರುಣೆ ಮತ್ತು ನೆಮ್ಮದಿಯ ಕೀಲಿಕೈಯಿಂದ ಆ ಬೀಜವನ್ನು ವಿಶಾಲವನ್ನಾಗಿಸಿ ನಿರಾಶೆಯ ಗೃಹದಲ್ಲಿ ಆಶ್ರಯ ಪಡೆದಿರುವವರಿಗೆ ಮುತ್ತು ಮಾಣಿಕ್ಯಗಳಿಂದ ಅಮೂಲ್ಯ ಲೋಹಗಳು ಮತ್ತು ಹರಳುಗಳ ಪ್ರಾಪಿಯ ಉದ್ದೇಶ ಮತ್ತು ಗುರಿಯನ್ನು ಅಸಹಾಯಕ ಮತ್ತು ದೀನವ್ಯಕ್ತಿಗಳ ವಿನಯವಂತಿಕೆಯ ಪ್ರಾರ್ಥನೆಯನ್ನು ಹೊಂದಿದ ಜನರಿಗೆ ಸಂಪ್ರದಾಯ ಮತ್ತು ಶೋಭೆಯ ಬಜಾರಿನಲ್ಲಿ ಶೋಭೆಯನ್ನು ನೀಡಿ ದಾನ ಧರ್ಮವನ್ನು ತನ್ನ ಪ್ರಮುಖ ಕಾರ್ಯವನ್ನಾಗಿ ಕೈಗೊಳ್ಳುವ ಬಾದಶಹರವರು ಇನಾಮು ಮತ್ತು ಕರುಣೆಯ ಮಾಲೀಕರಾಗಿದ್ದು ಬಾದಶಹರವರ ಕ್ಷಮೆ ಮತ್ತು ಕೊಡುಗೈಯ ಒಳಸಂಚಿನ ಆತಂಕ ಮತ್ತು ಅಪಾಯವನ್ನು ಒಂದು ಅದ್ಭುತವಾದ ಸಮಾರಂಭವಾದ ಆಯೋಜನೆಯ ನಿರೀಕ್ಷಕನನ್ನಾಗಿ ಮಾಡಿದ. ಆ ಸಮಾರಂಭದ ಮೂಲಕ ಇಡೀ ಜನಸ್ತೋಮದ ಇಚ್ಛೆ ಮತ್ತು ಅಪೇಕ್ಷೆಯ ಸೆರಗನ್ನು ಸಂತೃಪ್ತಿ ಮತ್ತು ನಿರಪೇಕ್ಷೆಯ ಸುಂದರವಾದ ಪುಷ್ಪಗಳ ಮೂಲಕ ಇಡೀ ಲೋಕದ ದುರಾಸೆಯ ಥೈಲಿಯನ್ನು ನಿರಪೇಕ್ಷೆಯ ದಿರ್ಹಮ್ ಮತ್ತು ದಿನಾರುಗಳಿಂದ ಭರ್ತಿ ಮಾಡಿದ.

ದುರವಸ್ಥೆ ಮತ್ತು ಬಡತನದ ಸಂಪ್ರದಾಯ ಮತ್ತು ಹೆಸರಿನ ಮೂಲಕ ಆ ವ್ಯವಸ್ಥೆಯನ್ನು ಅಳಿಸಿ ಹಾಕುವುದು. ಈ ಸಂಭಾಷಣೆಯು ಹಜತರ್ ಬಾದಶಹ ಗಾಝಿಯವರ ಹುಟ್ಟುಹಬ್ಬದ ಸಮಾರಂಭದ ಹಿನ್ನೆಲೆಯಿಂದ ಮೂಡಿದುದಾಗಿದೆ. ಉಪಕಾರಗಳ ಬುನಾದಿಗಳು ಸಂತೋಷ ಮತ್ತು ಸಂಭ್ರಮದ ಅರಮನೆಗಳನ್ನು ಅರಣ್ಯದಲ್ಲಿ ಆಶ್ರಿತರಾಗಿರುವ ದುರ್ಬಲ ವ್ಯಕ್ತಿಗಳ ಹೃದಯದ ಭೂಮಿಯಲ್ಲಿ ದುಃಖ ಮತ್ತು ಯಾತನೆಯ ಅರಣ್ಯಗಳಲ್ಲಿ ಬಿದ್ದಿದ್ದರು. ಆ ಮೂಲಕ ದೃಢವಾದ ನೆಮ್ಮದಿಯನ್ನು ನೀಡಿದ್ದು, ಏನಾದರೂ ಕ್ರೌರ್ಯವನ್ನು ನಡೆಸುವ ಎತ್ತರದ ಆಕಾಶವು ಮನುಷ್ಯ ಪ್ರೇರಿತ ಕಪಟವನ್ನು ಬೆಳೆಸುವುದಾದಲ್ಲಿ ಆ ಮೂಲಕ ಯಾವುದೇ ಪ್ರಯೋಜನ ಮತ್ತು ನೆಮ್ಮದಿಯನ್ನು ಧ್ವಂಸ ಮಾಡುವುದಾಗಿದೆ. ಜಗತ್ತಿನ ಜನರು ಮತ್ತು ವ್ಯಕ್ತಿಗಳಿಗೆ ಈ ಪರಿಸ್ಥಿತಿಯ ತೀವ್ರತೆಯ ಅವಧಿಯವರೆಗೆ ಅವರನ್ನು ಧ್ವಂಸಗೊಳಿಸುವ ಇರಾದೆಯನ್ನು ಮಾಡಲಿ. ಅವರ ಮರ್ಯಾದೆ ಮತ್ತು ಗುರಿಯ ಎತ್ತರದ ಇಟ್ಟಿಗೆಯ ಪಕ್ಕದಲ್ಲಿ ಯಾವುದೇ ಕೃತ್ಯವನ್ನು ಎಸಗದೇ ಇರಲಿ. ಅವರ ದೃಢವಾದ ಕರುಣೆ, ಸಂತೋಷ ಮತ್ತು ನೆಮ್ಮದಿಯ ವೃಕ್ಷಗಳನ್ನು ಸುಂದರವಾದ ಹಾದಿಗಳ ರಸ್ತೆಗಳಲ್ಲಿ ಅರೆಜೀವ ಹೃದಯಗಳನ್ನು ಹೊಂದಿದ್ದಾರೆ ಮತ್ತು ನಿರಾಶೆ ಹಾಗೂ ಯಾಚನೆಯ ಅರಣ್ಯದಲ್ಲಿ ಅತೀವ ಸೂಕ್ತವಾದ ಮತ್ತು ಸರಿಯಾದ ಮಾರ್ಗದಲ್ಲಿ ಅವರನ್ನು ತೊಡಗಿಸಿ. ಒಂದು ವೇಳೆ ಅರಣ್ಯದ ಹಾದಿಗುಂಟ ನಡೆಯುವ ಆಕಾಶವು ಸಂಪೂರ್ಣವಾಗಿ ಕೆಡುಕಿನಿಂದ ಕೂಡಿದ್ದಲ್ಲಿ ಮತ್ತು ವೈಭವ ಹಾಗೂ ಸಂತೋಷದ ರೆಂಬೆಗಳನ್ನು ಕತ್ತರಿಸುವವನಾಗಿದ್ದಲ್ಲಿ ಯಾವ ಹೊತ್ತಿನಲ್ಲಿಯೂ ಕೂಡಾ ಆ ರಭಸದ ಗಾಳಿಯು ಆ ವಸಂತ ಋತುವಿನ ರೆಂಬೆಗಳನ್ನು ಕತ್ತರಿಸುವ ಇರಾದೆಯನ್ನು ಹೊಂದಿದ್ದಲ್ಲಿ ವಿದ್ರೋಹ ಮತ್ತು ಕಠಿಣ ಹಸ್ತದ ಛಳಿಗಾಲದ ಶರದೃತುವಿನ ಋತುಮಾನದ ಎಲೆಗಳ ರೀತಿಯಲ್ಲಿ ಸಹಜವಾಗಿ ಕೈಯಿಂದ ಕೆಳಗೆ ಬೀಳಿಸಲಿ ಮತ್ತು ಜನರಿಗೆ ಕ್ಷಮೆ ನೀಡುವ ಧೈರ್ಯದ ದೃಷ್ಟಿಯ ಸಾಗರವು ಅತೀವ ನಂಬಿಕೆಗೆ ಅರ್ಹವಾಗಿಲ್ಲದಿದ್ದಲ್ಲಿ ಮತ್ತು ಅಹಂಕಾರದ ನೋಟದಲ್ಲಿ ಸೂರ್ಯನು ಮೌಲ್ಯವನ್ನು ಕಳೆದುಕೊಂಡಂತೆ ಅದರ ತರಬೇತಿಯ ನೋಟದಲ್ಲಿ ನಷ್ಟದ ಔಷಧವು ಮತ್ತು ನಷ್ಟದ ಜುಬ್ಬಾದಲ್ಲಿ ಬಿದ್ದಿರುವ ತಾಮ್ರವನ್ನು ಸಂಪೂರ್ಣವಾದ ಬಂಗಾರದ ಗುಡ್ಡೆಯನ್ನಾಗಿ ಮಾಡಲಿ. ಅವರ ಮೇಲೆ ಹೇಳಿದ ಸಂಪತ್ತಿನಿಂದ ರಾಜಧಾನಿಯು ಸಂಪದ್ಭರಿತ ಮತ್ತು ಸಂಪನ್ನ ಸರದಾರರುಗಳ ರೀತಿಯಲ್ಲಿ ಸಂಪದ್ಭರಿತವನ್ನಾಗಿ ಮಾಡಲಿ. ಅವರ ಪ್ರೀತಿಯ ಶುಭ ನಾಣ್ಯದ ಟಂಕಿಸುವಿಕೆಯನ್ನು ಆಕಾಶ ಮತ್ತು ಭೂಮಿಯ ನಿವಾಸಿಗಳ ಬಳಕೆಯ ಬಜಾರಿನಲ್ಲಿ ಜಾರಿ ಮಾಡಿ ಅವರ ಪ್ರಾಣಾರ್ಪಣೆಯನ್ನು ಮಾಡುವ ಸೂರ್ಯನ ಉದಯವಾಗುವ ವಿಶ್ವವನ್ನು ಬೆಳಗುವ ಮುಂಜಾವಿನ ರೀತಿಯಲ್ಲಿ ಪ್ರಕಾಶವನ್ನು ಪ್ರಸರಿಸುವಂತಾಗಲಿ. ಅದರಿಂದ ಅವರು ವಿಶಾಲವಾದ ಹಣೆ ಮತ್ತು ವಿಶಾಲ

ಮೋರೆಯನ್ನು ಹೊಂದಲಿ ಹಾಗೂ ಅವರ ಕ್ರೋಧವು ದೌರ್ಭಾಗ್ಯದ ನತದೃಷ್ಟ ಜನರು ಯಾತನೆಗಳ ಸುಳಿಯಲ್ಲಿ ಪಾದಗಳನ್ನು ಸಿಲುಕಿಸಿಕೊಂಡವರಿಗೆ ರಕ್ಷಣೆಯನ್ನು ನೀಡುವಂತಾಗಲಿ. ಲೋಕದೃಷ್ಟಿಯಲ್ಲಿ ಅವರನ್ನು ಮೇಲೆ ಎತ್ತಲು ಸಾಧ್ಯವಿಲ್ಲ ಮತ್ತು ಅವರ ಸಹವಾಸ ಎಲ್ಲಾ ಜೀವಂತ ಮತ್ತು ಜಾಗೃತ ಅದೃಷ್ಟವನ್ನು ಹೊಂದಿದವರಿಗೆ ಮರ್ಯಾದೆ ಮತ್ತು ಖ್ಯಾತಿಯ ಸಿಂಹಾಸನದ ಮೇಲೆ ಆಸೀನರಾಗುವಂತೆ ಆಕಾಶದ ನೆಪಕೋರತನ ಮತ್ತು ಅಪಮಾನ ಹಾಗೂ ಅಗೌರವದ ಸುಳಿಯಲ್ಲಿ ಹಾಕುವುದಿಲ್ಲ. ಚಿಂತನೆಯನ್ನು ಹೊಂದಿದ ಹೃದಯವು ಹುಡುಕಾಟದ ನೋಟ ಮತ್ತು ದೃಷ್ಟಿಯಲ್ಲಿ ಸಂರಕ್ಷಣೆಯ ವ್ಯೂಹದಂತೆ ದೈವರಕ್ಷಣೆಯ ತಾಯಿತದಂತೆ ಜಗತ್ತಿನ ಜನರು ಅಲ್ಲಾಹನ ತೊಂಭತ್ತೊಂಬತ್ತು ಹೆಸರುಗಳ ಪ್ರಭಾವದ ಮದಿರೆಯ ನಶೆಯಿಂದ ಹಗಲು ಮತ್ತು ರಾತ್ರಿ ಮುಳುಗೇಳುತ್ತಿರುತ್ತಾರೆ.

ಇಲಾಹಿ (ಅಲ್ಲಾಹನೇ) ರಹಸ್ಯವು ಅವರ ಹೃದಯದ ಗೀತೆಯಾಗಿದೆ
ಮತ್ತು ರಾಜ ಪ್ರವಚನವು ಅವರ ಹಣೆಯ ಗೆರೆಯಾಗಿದೆ.
ರಹಸ್ಯಗಳ ಜಗತ್ತು ಅವರ ಹೃದಯದಲ್ಲಿ ರಹಸ್ಯವಾಗಿ ಅಡಕವಾಗಿದೆ
ಮತ್ತು ದೈವ ಜ್ಞಾನವು ಅವರ ಆತ್ಮದಲ್ಲಿ ಅಡಗಿದೆ.
ಚಿಂತನೆ ಮತ್ತು ಆಲೋಚನೆಯ ಜೊತೆಗೆ ಇನ್ನು ಯಾವ
ವಸ್ತುವು ದೊರಕುವುದೋ ಅದು ಕಲಾತ್ಮಕತೆಯಾಗಿದೆ ಮತ್ತು
ಬುದ್ಧಿಯ ಇಚ್ಚೆಯ ಅನುಸಾರ ಜುನೂನ್ ಆಗಿದೆ.
ಮುತ್ತು ರತ್ನಗಳಿಲ್ಲವಾದಲ್ಲಿ ಸಮುದ್ರವು ಬಂಜೆ ಎಂದು ಕರೆಯಲ್ಪಡುತ್ತದೆ
ಮತ್ತು ಚಿಂತನೆ ಹಾಗು ಸೂಕ್ಷ್ಮದೃಷ್ಟಿಯ ವಿನಃ ನೋಟವು
ಅನಾರೋಗ್ಯಪೀಡಿತವಾಗಿರುತ್ತದೆ

ಸೌಂದರ್ಯ ಮತ್ತು ಕಲಾತ್ಮಕತೆಯ ಉದ್ಯಾನವನದ ವ್ಯಕ್ತಿಗಳು ಎಲ್ಲರ ಹೃದಯಕ್ಕೆ ಸಂತೋಷವನ್ನು ನೀಡಿ ಮತ್ತು ತಮ್ಮ ಶೋಭೆ ಮತ್ತು ಒಳಿತಿನ ಉದ್ಯಾನವನವಾಗಿದ್ದು, ದುಃಖಿತ ವ್ಯಕ್ತಿಗಳ ನೋಟಕ್ಕೆ ಹೊಳಪನ್ನು ಬೀರುವಂತಹದಾಯಿತು ಮತ್ತು ತಮ್ಮ ಅಪಾರ ಕೃಪೆಯು ಫಕೀರರು ಮತ್ತು ಬಡತನದಲ್ಲಿ ಮುಳುಗಿದ್ದವರ ಸೋತ ಹೃದಯದ ಜನರ ಸಲುವಾಗಿ ಮೇಣದಂತೆ ಮತ್ತು ಅವರ ಮೇಲಿನ ಕರುಣೆ, ಭಯ ಮತ್ತು ನಿರಾಶೆಯ ಅರಣ್ಯದಲ್ಲಿ ಅಲೆದಾಡುವ ಜನರಿಗೆ ನೆಮ್ಮದಿ ಹಾಗೂ ಆರಾಮದ ಮೂಲವಾಗಲಿ. ತಮ್ಮ ಬೆಂಕಿಯುಗುಳುವ ಕತ್ತಿಯು ಅಹಂಕಾರೀ ವಿದ್ರೋಹಿ ವ್ಯಕ್ತಿಗಳಿಗೆ ಮರ್ಯಾದೆಗೇಡಿಗಳನ್ನಾಗಿ ಮಾಡುವುದಾಗಿದೆ ಮತ್ತು ತಮ್ಮ ಕತ್ತಿಯ ನೀರು ಕಪಟವನ್ನು ಪೋಷಿಸುವ ವೈಯಕ್ತಿಕ ವಿದ್ರೋಹ ಮತ್ತು ವಿಧ್ವಂಸಕತೆಯ ಅಗ್ನಿಯನ್ನು ತಂಪನ್ನಾಗಿಸುವುದಾಗಿದೆ. ಈ ರೀತಿಯಲ್ಲಿ ಒಂದು ವೇಳೆ ಪ್ರಕಾಶಮಯವಾದ

ಪ್ರಫುಲ್ಲತೆಯನ್ನು ನೀಡುವ ಸಭೆಯಲ್ಲಿ ನೆಮ್ಮದಿಯ ಹೃದಯದ ಗುರಿಯ ಉದ್ಯಾನವನದಲ್ಲಿ ವಿಹರಿಸಿದಲ್ಲಿ ತಮ್ಮ ಎಲ್ಲಾ ಅನಿಸಿಕೆಗಳ ತಂಗಾಳಿಯಿಂದ ಉಪಕಾರದ ಗಣಿಯು ಸೌಂದರ್ಯದ ವೃತ್ತಾಂತದ ಪ್ರದರ್ಶನದ ತುಳಸಿಯಂತಹ ಮೂಲಿಕೆಯ ಮೂಲಕ ಹಾಗೂ ಯಾತನೆ ಮತ್ತು ತಡೆಯುವ ನಾಲಿಗೆಯನ್ನು ಕೆನ್ನೆಯ ಮೇಲಿರುವ ಮಚ್ಚೆಯ ಸೊಬಗಿನಿಂದ ಮತ್ತು ಗೀತಗಾಯನದಲ್ಲಿ ತೊಡಗುವುದು ಹಾಗೂ ಕುರುಡನ ನೋಟವು ಸೂರ್ಯನ ಚೆಹರೆಯಂತೆ ನರ್ಗಿಸ್ ಹೂವಿನಂತೆ ಅರಳುವುದು ಮತ್ತು ಒಂದು ವೇಳೆ ಅವರ ಸಂಭ್ರಮದ ದಿನದಂದು ಆತ್ಮ ಮತ್ತು ದೇಹವು ಅವರ ಶುಭ ಮತ್ತು ಖ್ಯಾತಿವೆತ್ತ ಹೆಸರಿನ ತಾಯಿತ ಮತ್ತು ಗಂಟನ್ನು ಹಾಕಿದಲ್ಲಿ ಮತ್ತು ಕೊರಳಲ್ಲಿ ತಾಯಿತವನ್ನು ಕಟ್ಟಿದಲ್ಲಿ ಪ್ರಳಯದ ದಿನದವರೆಗೂ ಕಾಯಿಲೆ ಮತ್ತು ರೋಗಿಯ ವಿದ್ರೋಹಿ ದೆವ್ವದ ಆಕ್ರಮಣದಿಂದ ರಕ್ಷಣೆಯನ್ನು ಪಡೆಯುವಂತಾಗುತ್ತದೆ ಹಾಗೂ ಅಂತಿಮ ಕ್ಷಣದ ಹಸ್ತದ ಶಕ್ತಿಯು ಸ್ಥಿರ ಪರ್ವತವಾದ ಹಬ್ಲೆಮತೀನ್‌ನ ಹೃದಯಶೂನ್ಯ ಆತ್ಮಗಳು ಮತ್ತು ದೇಹಗಳ ಕೊನೆಗಾಲದ ಆಸೆಯನ್ನು ಪೂರೈಸುವುದಾಗಿದೆ.

■

*

ಅಧ್ಯಾಯ–೧೩

ಅಲಿ ಆದಿಲಶಹನ ಸದ್ಗುಣಗಳು

ಅವನು ಉನ್ನತ ಸಿಂಹಾಸನದ ಮಾಲೀಕ ಅಂದರೆ ಯುದ್ಧದ ವ್ಯೂಹಗಳನ್ನು
ಮುರಿಯುವವ ಕತ್ತಿಯ ಕಲಾತ್ಮಕತೆಯನ್ನು ಅರಿತವ ಮತ್ತು ದೇಶಗಳ
ಮೇಲೆ ಆಕ್ರಮಣ ಮಾಡುವವನಾಗಿದ್ದಾನೆ
ದೇವರ ಸೃಷ್ಟಿ ಸಂಕುಲವು ಭಾರೀ ಫಲ ಕೊಡುವ ಕಾರಣದಿಂದ
ಹಗುರವಾದ ಹೃದಯದವರಾಗಿದ್ದಾರೆ ಮತ್ತು ಕಪಟವನ್ನು
ಹೊಂದಿದ ಜನರು ಸಂತೋಷದ ಪಾನಪಾತ್ರೆಯನ್ನು ಹಿಡಿದ
ಅವರ ಹಸ್ತವು ಮುತ್ತುಗಳನ್ನು ಹರಡುವುದಾಗಿದೆ
ಮತ್ತು ಕತ್ತಿಯ ರಾಜಕಾರಣವು ವೇಗ ಮತ್ತು ರಭಸದ ನೋಟವನ್ನು ಹೊಂದಿದೆ.
ಸಿಂಹ ಹೃದಯ ಹೊಂದಿದ ಸಿಂಹವನು ಪಳಗಿಸುವ ಸಿಂಹವನು
ನಿರ್ನಾಮ ಮಾಡುವ ವೇಗವಾಗಿ ನಡೆಯುವ ಶೀಘ್ರವಾಗಿ
ತಲಪುವ ವಿಳಂಬವಾಗಿ ಸೆರೆ ಹಿಡಿಯುವವರಾಗಿದ್ದಾರೆ
ಧೈರ್ಯದ ಸೈನ್ಯವನ್ನು ಮುರಿಯುವುದು ಅವರ ಸ್ವಭಾವವಾಗಿದೆ.
ಅವರ ಕಣ್ಣು ರೆಪ್ಪೆಗಳು ಸಂಕೇತದ ನಿರೀಕ್ಷೆಯಲ್ಲಿವೆ.
ನೆರವು ಮತ್ತು ಬೆಂಬಲವು ಯಾರ ಅಭಿಪ್ರಾಯವಾಗಿದೆಯೋ
ದೇಶವು ಖಾಯಮ್ಮಾಯಿತು ಕತ್ತಿಯ ಉಸಿರಿನಿಂದ
ಅವನ ದೌರ್ಜನ್ಯವನ್ನು ಕೊನೆಗೊಳಿಸಲಾಯಿತು .
ಯುದ್ಧಕೋರ ವ್ಯಕ್ತಿಗಳ ಯುದ್ಧತಂತ್ರಗಳನ್ನು ಮುರಿದೆಸೆಯಲಾಯಿತು .
ಒಂಟಿಯಾಗಿಯೇ ಸಹಸ್ರಾರು ಮಂದಿಯನ್ನು ಸೋಲಿಸಲಾಯಿತು

ಅವರ ರಹಸ್ಯಮಯವಾದ ಸ್ವಭಾವದಲ್ಲಿ ಈ ಇಚ್ಛೆಯು ಮೂಡಿತು ಅಂದರೆ ಶಂಕೆ ಮತ್ತು ಅನ್ಯರಿಂದ ಆವೃತ ಲೇಖನಿಯ ಲಗಾಮನ್ನು ಆ ಕುದುರೆ ಸವಾರರನ್ನು ಹಿಂಬಾಲಿಸಿ ಮತ್ತು ಸಭ್ಯತೆಯ ಬರವಣಿಗೆಯ ಮೈದಾನದಲ್ಲಿ ಉನ್ನತವಾದ ನಡವಳಿಕೆಯ ಕುದುರೆ ಸವಾರನು ಸಂತೋಷ ಮತ್ತು ನೆಮ್ಮದಿಯಿಂದ ಇರುವನು ಹಾಗೂ ನೇರವಾಗಿ ನೆಪದ ಮೈದಾನ ಮತ್ತು ಇಲಾಖೆಯಲ್ಲಿ ಮುಂದಿಟ್ಟು ತಮ್ಮ ಇಚ್ಛೆಯನ್ನು ಒಡೆಯುವವರ ನೋಟದಲ್ಲಿ ಇಚ್ಛಾಪ್ರಾಪ್ತಿಯನ್ನು ಹೊಂದುತ್ತಾರೆ. ಚಿಂತಕರ ನೋಟದಲ್ಲಿ ಹೆಮ್ಮೆ ಪಡುವಂತಹದಾಗಿದೆ ಹಾಗೂ ದೂರ ದೂರದವರೆಗೂ ನೋಟವನ್ನು ಬೀರಿದರೂ ಹೃದಯದ ಇಚ್ಛೆಯು ಏನಿತ್ತೆಂದರೆ ಎತ್ತರದ ಹಾರಾಟವನ್ನು ಮಾಡುವ ಸಂಭಾಷಣೆಯನ್ನು ನಡೆಸುವ ನಾಲಿಗೆಯ ಎತ್ತರದ ಹಾರಾಟವನ್ನು ಮಾಡುವ ಅನ್‌ಕಾ ಎಂಬ ಕಾಲ್ಪನಿಕ ಪಕ್ಷಿಯ ಉತ್ತಮವಾದ ಸ್ವಭಾವಗಳನ್ನು ಸಾಬೀತು ಮಾಡುವ ಸನ್ನಿವೇಶದಲ್ಲಿ ಮತ್ತು ಬಯಸುವ ನಡವಳಿಕೆಯ ವೃತ್ತಾಂತಗಳಲ್ಲಿ ದೇಶಗಳಲ್ಲಿ ಆ ಬಾದಶಹನ ಅಂದರೆ ವಿಶ್ವಮಾನ್ಯ ಆಜ್ಞೆ ನೀಡುವ ಹಾಗೂ ನ್ಯಾಯಪರತೆಯನ್ನು ಜನತೆಯವರೆಗೂ ತಲುಪಿಸುವ ಜಗತ್ತಿನಲ್ಲಿ ಎತ್ತರದ ಹಾರಾಟದ ಮೈದಾನದಲ್ಲಿ ಹಾರಾಡುವ ಹಾಗೂ ಹೊಗಳಿಕೆಯ ಸಭೆಯ ಕುರ್ಚಿಯಲ್ಲಿ ಆಸೀನರಾಗಿ ಮುಖ್ಯಸ್ಥನ ದರ್ಜೆಯ ಮೇಲೆ ಕೂರುವವನನ್ನಾಗಿ ಮಾಡಲಿ. ಸತ್ಯದಿಂದ ಕುಡಿದ ಅದ್ವಿತೀಯವಾದ ಸಭೆಯಲ್ಲಿ ಆಸೀನರಾದರೂ ತಿಳುವಳಿಕೆಯ ಮಟ್ಟ ದೈವ ಕೊಡುಗೆಯಾಗಿದೆ. ಒಂದು ಹನಿಯೂ ಕೂಡ ಅದರ ವಿವರಣೆಯ ಎಲ್ಲೆಯಿಂದ ಹಗುರವಾಗಿದೆ ಮತ್ತು ಅದ್ವಿತೀಯವಾದ ಮುತ್ತುಗಳನ್ನು ಅಮಾನ್ ಸಮುದ್ರದ ಒಳಗೆ ಮುಳುಗಿಸಿ ಹಾಗೂ ಅಣುವನ್ನು ವಿವರಣೆಯ ಸ್ವಾಭಾವಿಕತೆಗಿಂತಲೂ ಹೆಚ್ಚು ಕೀಳನ್ನಾಗಿ ಮಾಡಲಿ.

ಅಂದರೆ ವಾದ ವಿವಾದಗಳ ಸೆರಗಿನಲ್ಲಿ ಬೆಳಕನ್ನು ಬೀರುವ ಸೂರ್ಯನು ತೂಗು ಬೀಳಲಿ. ಇದರಿಂದ ಮಾತನಾಡುವ ಶಕ್ತಿಯ ಮೇಲೆ ಮೌನದ ಮೊಹರನ್ನು ಒತ್ತಿ ಹಸ್ತ ಮತ್ತು ನಾಲಿಗೆಯ ಕೈಯನ್ನು ಮುಖದ ತೋಳಿನಲ್ಲಿ ಒಳಗೆ ಸೇರಿಸುತ್ತಾ ಅದರಯಾತನೆಯನ್ನು ಕಡಿಮೆಗೊಳಿಸಿ. ಯಾವ ಮಿತಿಯವರೆಗೆ ಅತಿ ಹೆಚ್ಚು ಅರಿವನ್ನು ಹೊಂದಿರುತ್ತಾನೆಯೋ ಅವನು ಆ ಕೃತ್ಯವನ್ನು ಎಸಗುತ್ತಾನೆ. ಅಂದರೆ ಯಾವ ಹೊತ್ತಿನಲ್ಲಿ ಹಜರತ್ ಬಾದಶಹ ಘಾಝಿಯವರ ಕರುಣೆಯ ಮಾಲಿಯು ದಂಗೆಯ ಪರಿಸ್ಥಿತಿಯ ಓಣಿಯನ್ನು ದಾನಧರ್ಮದ ವೃಕ್ಷದ ಗುರುತನ್ನಾಗಿ ಮಾಡುವನೋ ಆಗ ನೆಮ್ಮದಿ ಆವರಿಸುತ್ತದೆ. ದಾನ ಧರ್ಮ ಮತ್ತು ಕ್ಷಮೆಯ ಮೋಡಗಳಿಂದ ಹನಿದ ಮಳೆಯ ಗೆರೆಯಲ್ಲಿ ಋತುಮಾನ ಹೊರತು ಪಡಿಸಿದ ಶರದೃತುವಿನ ಛಳಿಗಾಲವನ್ನು ನೋಡದ ವಸಂತ ಋತು ಹಾಗೂ ಉದ್ಯಾನವನ ನಿರಂತರವಾಗಿ

ನೆಮ್ಮದಿ ಮತ್ತು ಸುರಕ್ಷೆಯ ವಸಂತ ಋತುವನ್ನು ಶಾಮೀಲು ಮಾಡಿಕೊಂಡಿರುವಂತೆ ಮಾಡಲಿ. ಮತ್ತು ತಮ್ಮ ಮೇಧಾವಿತನ ಮತ್ತು ಹಿರಿತನದ ಗುರುತುಗಳಿಂದ ಇರಾದೆಯನ್ನು ಮಾಡಿದ್ದೇನೆಂದರೆ ಅನ್ವೇಷಣೆ ಮತ್ತು ಸಂಶೋಧನೆಯ ಲೋಕದಲ್ಲಿ ಬಾಹ್ಯಲೋಕವನ್ನು ನೆಮ್ಮದಿ ಮತ್ತು ಸಂತೋಷದ ಸ್ವರೂಪದ ಕೆತ್ತನೆಯಿಂದ ಕೊಡುಗೆ ಮತ್ತು ಕರುಣೆಯ ಚಿತ್ರಗಳನ್ನು ಬರೆದು ನೆಮ್ಮದಿಯ ನೋಟದ ಗೃಹದಲ್ಲಿ ಮತ್ತು ಅಸೂಯೆಯನ್ನು ಹುಟ್ಟಿಸುವಷ್ಟು ಆರೋಗ್ಯವಂತವಾಗಲಿ. ಆಕ್ಷರಗಳನ್ನು ಪಾಲಿಸುವ ಹಾಗೂ ವಿಶ್ವವಿಖ್ಯಾತ ಬಾದಶಹನ ಆದೇಶದ ಹವೆಯನ್ನು ಇಂತಹ ಸಂದರ್ಭದಲ್ಲಿ ವಸಂತ ಋತುವಿನ ತಂಗಾಳಿಯಿಂದ ನವ ವಧುವಿನಂತಹ ಪುಷ್ಪಕ್ಕೆ ಶಕ್ತಿಯು ಪ್ರಕಟವಾಗುವಂತಹ ಪರ್ದಾಧಾರಿಣಿ ವೃಕ್ಷಗಳ ಮೊಹಲ್ಲಾದ ವಧುವಿನಂತೆ ಮರೆಮಾಚಲಾಗಿದೆ.

ಅತೀವ ಸುಂದರ ಕೆಂಪು ಉಡುಪು ಮತ್ತು ಅತೀವ ಹೊಳಪಿನಿಂದ ಕೂಡಿದ ಕಣ್ಣು ಕುಕ್ಕುವ ಒಡವೆಗಳಿಂದ ಶೃಂಗಾರ ಹೊಂದಿರುವ ಅಮೂಲ್ಯ ಮತ್ತು ತಾಜಾ ರೆಂಬೆಗಳ ಮೇಲೆ ಕೂರಿಸಿ ಅಂತಹ ಜನರ ಸಲುವಾಗಿ ಅಂದರೆ ನಿರಂತರ ಪ್ರೇಮಿಯ ಸೆರಗನ್ನು ಪ್ರತೀಕ್ಷೆ ಮತ್ತು ಶೋಧನೆಯಲ್ಲಿ ಕಳವಳದಿಂದ ಕೂಡಿರುವಂತಹವರಾಗಿದ್ದಾರೆ. ಅವರಿಗೆ ದರ್ಶನವನ್ನು ನೀಡಲಿ ಏಕೆಂದರೆ ಅವರ ಸೌಂದರ್ಯದ ನೋಟದಿಂದ ದೃಷ್ಟಿಯನ್ನು ಬೆಳಗಿ ಎದೆಯಾಳದಲ್ಲಿ ಸಂತೋಷ ಮತ್ತು ನೆಮ್ಮದಿಯಿಂದ ಆವೃತವಾಗುವಂತೆ ಮಾಡಲಿ. ದೈವ ಅಸ್ತಿತ್ವದ ಗ್ರಹಿಕೆಯ ಉದ್ಯಾನವನದಲ್ಲಿ ನಿರತರಾಗಿರುವ ದೈವಭಕ್ತರ ಹೂದೋಟದಲ್ಲಿ ಪುಷ್ಪಗಳನ್ನು ಆಯ್ದುಕೊಳ್ಳುವವರಂತಾಗಲಿ ಮತ್ತು ನೌರೋಝ್‌ನ ಮೋಡಗಳ ಮಳೆಯು ಭೂಮಿಯ ಓಣಿಯಲ್ಲಿ ಸಂಕಷ್ಟ ಮತ್ತು ತೊಂದರೆಗಳ ಅಗಸಗಿತ್ತಿಯ ಕೊಳೆ ಮತ್ತು ಧೂಳನ್ನು ಕಳೆದು ಶುಭ್ರಗೊಳಿಸಲಿ. ಇನಾಮು ಮತ್ತು ಉಪಕಾರದ ಮಳೆಯಿಂದ ತಾಜಾ ಮತ್ತು ಶುಷ್ಕತೆಯಿಂದ ಮುಕ್ತಿ ಹೊಂದುವಂತೆ ನಿಶ್ಚಿತ ಗುರಿಯನ್ನು ಹೊಂದಿದ ವ್ಯಕ್ತಿಗಳ ಹೃದಯವನ್ನು ಶುಭ್ರ ಮತ್ತು ಸಂತೋಷವನ್ನು ತಲುಪಿಸುವಂತಹ ಮತ್ತು ವಿಶೇಷ ಅನುಭವವನ್ನು ಹೊಂದಿದಂತಹ ಹೃದಯಗಳನ್ನು ದುಃಖಿತರನ್ನಾಗಿ ಮಾಡಲಿ. ಏಕೆಂದರೆ ಚಿಂತಕರು ಮತ್ತು ದೈವಜ್ಞಾನದ ಉದ್ಯಾನವನದ ವಾರೀಸುದಾರರು ಸ್ತುತಿ ಮತ್ತು ಕೃತಜ್ಞತೆಯ ಕೊಳಲಿನಿಂದ ತಾಳ ಲಯದ ಜ್ಞಾನವಿಲ್ಲದಂತೆ ಮತ್ತು ಸಂಬೋಧನೆ ಮಾಡುತ್ತಾ ಕೆತ್ತಿದ ಸಂಖ್ಯೆಯನ್ನು ನೋಟ ಮತ್ತು ಹೃದಯದ ಚರಫ್‌ನಲ್ಲಿ ಅದನ್ನು ಸುತ್ತಿಡದೆ ಇರಲಿ. ಆ ಸಂದರ್ಭದಲ್ಲಿ ವಸಂತದ ಆಗಮನದಿಂದ ಜನರು ವೃಕ್ಷಗಳ ನಡುವೆ ಹುಚ್ಚರಂತೆ ಶಿರವಸ್ತ್ರವನ್ನು ಧರಿಸದಂತೆ ಬರಿ ತಲೆಯೊಡನೆ ತೋಟದಲ್ಲಿ ಅಲೆದಾಡುತ್ತಿದ್ದರು. ಜನ್ನತುಲ್ ಮಾವ ಎಂಬ ವಿಶೇಷ ಸ್ವರ್ಗದಲ್ಲಿ ವಾಸಿಸುವ ಜನರಂತೆ ಶೋಭೆ ಮತ್ತು ಅಲಂಕಾರದ ಹೊಸ ತಾಜಾ ಉಡುಪಿನ ಮೂಲಕ ರಸವನ್ನು ಅನುಗ್ರಹಿಸಲಿ ಮತ್ತು

ನೌರೋಝ್‌ನ ಮೋಡದ ಅಮೂಲ್ಯತೆಯು ಕಿವಿ ಮತ್ತು ಕೊರಳಿನ ತೋಟದ ಕೊಂಡಿಗಳ ಮಂಜಿನಂತಹ ಮುತ್ತಿನ ಮೂಲಕ ಶೋಭೆಯನ್ನು ಹೆಚ್ಚಿಸಲಿ. ವೃಕ್ಷಗಳ ಹರಿದ್ವರ್ಣದ ಎಲೆಗಳ ಪಚ್ಚೆಯ ಹೋಲಿಕೆಯಿಂದ ದುಃಖದ ಸರ್ಪದ ನೋಟವು ನರ್ಗಿಸ್‌ನ ನೋಟದಂತೆ ಕುರುಡು ತೋಟದ ಶೋಭೆಯನ್ನು ಸಾಕ್ಷೀಕರಿಸಿ ಉದ್ಯಾನವನ್ನು ನೋಡಿ ಕೆಂಪು ಮಾಣಿಕ್ಯದಂತೆ ಅವರ ಮೇಲೆ ಅಪೇಕ್ಷೆಯ ಕಲೆಯನ್ನು ಇಡುವಂತಾಗಲಿ. ಮತ್ತು ವಿವಿಧ ರೀತಿಯ ಫಲಗಳ ಹೆಚ್ಚಳದಿಂದ ತಮ್ಮ ಜಮೀನನ್ನು ಸ್ವರ್ಗದೋಪಾದಿಯಂತೆ ತಿಳಿದು ಮತ್ತು ಪ್ರತಿ ಸುಂದರವಾದ ಚಿಪ್ಪನ್ನು ದೀರ್ಘವಾದ ನೀಳ ಕಾಯವನ್ನು ಹೊಂದಿದಂತಹ ಭತ್ತವು ಕನ್ಯೆಯರ ಗದ್ದದಂತೆ ಇತ್ತು. ಕುಳ್ಳಗಿನ ದೇಹ ರಚನೆಯವರು ಬಾದಾಮಿಯಂತೆ ಮತ್ತು ಮುಟ್ಟಿದೊಡನೆಯೇ ನಸ್ರೀನ್ ಪುಷ್ಪದಂತಹ ನೋಟವನ್ನುಳ್ಳ ಮಹಿಳೆ ಮತ್ತು ಪುರುಷರ ದೃಷ್ಟಿಯಲ್ಲಿ ದಾಳಿಂಬೆ ಹಾಗೂ ಮಾದಳದ ಕಲ್ಪನೆಯಿಂದ ಯಾತನೆ ಮತ್ತು ದುಃಖದ ಗುರುತನ್ನು ಹೊಂದಿದವರ ಅನಾರೋಗ್ಯಕರ ಹೃದಯವನ್ನು ಉಳ್ಳವರ ಹೃದಯದಿಂದ ಔಷಧೋಪಚಾರ ಮತ್ತು ಅನ್ವೇಷಣೆಯ ನಂತರ ಅಳಿಸಿ ಹಾಕುವಂತಾಗಲಿ. ಹಾಗೂ ದ್ರಾಕ್ಷಿ ಮತ್ತು ಕಲ್ಲಂಗಡಿಯ ನೆನಪಿನಿಂದ ದುರ್ಬಲವಾಗಿದ್ದು ಬಲಹೀನವಾಗಿದ್ದಂತಹ ಜನರ ದೇಹದಲ್ಲಿ ತೆಳುವಾಗಿದ್ದರೂ ಅವರಲ್ಲಿ ರಕ್ತಹೀನತೆಯ ನೀರಿನಂತೆ ಆವೇಶ ಮತ್ತು ಶಕ್ತಿಯು ತುಂಬಿ ಬರಲಿ ಹಾಗೂ ಆ ಅಂಜೀರಿನ ಮಾಧುರ್ಯದಂತೆ ಚಂದ್ರನಂತಹ ಮೋರೆಯನ್ನು ಹೊಂದಿದ ಕನ್ಯೆಯರ ತುಟಿಗಳ ಮೇಲೆ ಸುಮಧುರವಾದ ಶರಬತ್ತಿಗಿಂತಲೂ ಹೆಚ್ಚು ಮಧುರತೆ ಉಂಟಾಗಲಿ. ಆ ದಾಳಿಂಬೆಯ ದುಃಖ ಮತ್ತು ಸಂಕಷ್ಟದ ಜೀವವನ್ನು ಹೈರಾಣಗೊಳಿಸುವಂತಹ ಬೆಂಕಿಯ ದೆಸೆಯಿಂದ ಶಿಖೆಯಿಂದ ಆವೃತರಾಗಿದ್ದ ಜನರಿಗೆ ತಂಪು ಮತ್ತು ನೆಮ್ಮದಿ ಹಾಗೂ ಸಂತಸವನ್ನು ನೀಡಲಾಯಿತು. ಪುಷ್ಪಗಳ ಸ್ಪರ್ಶದ ಮೃದುತ್ವ ಮತ್ತು ಪ್ರೇಮಮಯಿ ಸ್ಪರ್ಶದಿಂದ ತೀವ್ರ ನಾಜೂಕು ಮತ್ತು ಮೃದುವಾಗಿದ್ದು ಮಂಜಿನ ದೆಸೆಯಿಂದ ಅದರಲ್ಲಿ ಆರ್ದ್ರತೆ ಕೂಡಿದ್ದು ಅದರ ಕಠಿಣ ನೋಟದ ಕತ್ತಿಯಿಂದ ಸಹಸ್ರ ಸಹಸ್ರ ವೃಕ್ಷಗಳ ಎದೆಯಲ್ಲಿ ಅತೀವ ಸಂಕಷ್ಟವನ್ನು ತಲುಪಿಸುವಂತಹ ಗಾಯಗಳು ಸ್ಪಷ್ಟವಾಗಿ ಕಂಡು ಬರತೊಡಗಿದವು ಮತ್ತು ತಂಗಾಳಿಯ ಅಲೆಗಳು ಎಳೆ ಗೊಂಚಲುಗಳ ವಧುದಕ್ಷಿಣೆಯಂತಹ ಗುಲಾಬಿಯಿಂದ ತೋಯಿಸಲ್ಪಟ್ಟು ಕನಸಿನ ಹೆಮ್ಮೆಯೊಂದಿಗೆ ಸೃಷ್ಟಿಯಾದವು.

ಬೆಂಕಿಯ ಅಲೆಗಳು ತಮ್ಮ ಆರಾಮದಾಯಕವಾದ ವೃಕ್ಷಗಳನ್ನು ಬಂದ್ ಮಾಡಲಿಲ್ಲ ಮತ್ತು ಬುಲ್‌ಬುಲ್ ಹಕ್ಕಿಯ ಆಲಾಪನೆಯಿಂದ ಗಮನವಿಟ್ಟು ಆಲಿಸಿದ ಕಾರಣದಿಂದ ಇಡೀ ವಾತಾವರಣದಲ್ಲಿ ಅತೀವ ಭೋಗ ವಿಲಾಸ ಮತ್ತು ಸಂತಸ ಉಂಟಾದ ಕಾರಣದಿಂದ ರೋಮ ಮತ್ತು ರೆಕ್ಕೆಯನ್ನು ಹರಡಿದ ಪಕ್ಷಿಯಂತೆ ಹಾರಾಡುವಂತಹ

ಇಚ್ಛೆಯಿಂದ ಕೂಡಿತು. ಮತ್ತು ಒಮ್ಮೆ ಎಲ್ಲಾದರೂ ಆಕಾಶಕ್ಕೆ ವಿಷಯುಕ್ತ ಗಾಳಿಯು ಮತ್ತು ಕಪಟವನ್ನು ಪೋಷಿಸುವ ಮುಂಬೆಳಗಿನ ಆವರ್ತನೆಯು ವೃಕ್ಷಗಳು ಮತ್ತು ಫಲಗಳನ್ನು ಅರೆಜೀವವನ್ನಾಗಿ ಮಾಡಿತ್ತು. ಆದರೆ ಅಂಬರ್ ಸುಗಂಧ ಮತ್ತು ಮಂಜಿನ ತಂಪು ತಂಗಾಳಿಯು ಉದ್ಯಾನವನದ ವಸಂತದ ಋತುವನ್ನು ಹರಿದ್ವರ್ಣದ ತಾಜಾತನದಿಂದ ತುಂಬಿ ಮೆರಗನ್ನು ನೀಡಿತು. ಮತ್ತೊಮ್ಮೆ ಶರದೃತುವಿನ ಛಳಿಗಾಳಿಯ ವಿನಾಶಕಾರೀ ಶಕ್ತಿ ಮತ್ತು ಗೌರವಾನ್ವಿತ ವಂಶಾವಳಿಗಳ ಉಡುಪುಗಳು ಮತ್ತು ಸೆರಗಿನಲ್ಲಿ ಅವರ ಉನ್ನತವಾದ ದೇಶದಲ್ಲಿ ಮತ್ತೊಮ್ಮೆ ತಲುಪಲಿಲ್ಲ ಮತ್ತು ಜೀವ ಉಳಿಸುವ ಪನ್ನೀರಿನಿಂದ ತೀವ್ರವಾದ ಬಾಯಾರಿಕೆಯಿಂದ ತ್ರಸ್ತವಾಗಿರುವ ತುಟಿಗಳು ತಮ್ಮ ಶುಷ್ಕತೆಯನ್ನು ನೀಗಿಸಿಕೊಂಡವು. ಅವರು ವಿಲಾಸ ಮತ್ತು ಸಂತೋಷದ ಸಲುವಾಗಿ ಸುಂದರವಾದ ಫಲಗಳನ್ನು ಅಮೃತಕ್ಕೆ ಸಮಾನ ಮತ್ತು ದೈಹಿಕವಾಗಿ ಅನಾರೋಗ್ಯಪೀಡಿತರಾಗಿದ್ದ ವ್ಯಕ್ತಿಗಳ ಸಲುವಾಗಿ ಅವರ ಜೀರ್ಣಾಂಗದ ಆಯಸ್ಸು ವೃದ್ಧಿಯಾಗುವ ಸಲುವಾಗಿ ರೆಂಬೆಗಳನ್ನು ಗಂಧರ್ವ ಕನ್ಯೆಯಂತಹ ಸ್ವಬಾವವನ್ನು ಮತ್ತು ಗುಣಲಕ್ಷಣಗಳನ್ನು ಹೊಂದಿದ ಚಂದ್ರನಂತಹ ಮೋರೆಯ ಮಾಲೀಕರು ಸುಂದರ ಮತ್ತು ಬೆಚ್ಚಗಿನ ಆಲಿಂಗನ ಮತ್ತು ವೃಕ್ಷಗಳ ಎಲೆಗಳ ರೀತಿಯಲ್ಲಿ ಮೌನ ಬಾಷೆಯವರ ಸಲುವಾಗಿ ಬುಲ್ ಬುಲ್ ಮತ್ತು ಖಮರಿ ಪಕ್ಷಿಗಳೊಂದಿಗೆ ಮೆಲು ಧ್ವನಿಯಲ್ಲಿ ಸಂಭಾಷಣೆಯಲ್ಲಿ ತೊಡಗಿದ್ದ ವ್ಯಕ್ತಿಗಳು ಗೆಳೆಯರಂತೆ ಹಗಲು ಮತ್ತು ರಾತ್ರಿ ಯುದ್ಧ ಮತ್ತು ಕಲಹ ಹಾಗೂ ನವಿಲು ಪಕ್ಷಿಯ ಅತ್ಯಂತ ಸುಂದರ ಪ್ರೇಮಮಯಿ ಸ್ವರೂಪವನ್ನು ಕಂಡವರಂತೆ ಸಂತೋಷದಿಂದ ನೃತ್ಯದಲ್ಲಿ ತೊಡಗಿ ಉತ್ತಮ ಉದಾಹರಣೆಯನ್ನು ನೀಡಿರುತ್ತಾರೆ.

ವಸಂತದ ಮಾರುತದಿಂದ ಪರಿಸರವು ಮಶ್ಕನ ಸುಗಂಧದಿಂದ
ಸುವಾಸನಾಭರಿತವಾಯಿತು.ಮತ್ತು ಉದ್ಯಾನವನದ
ವಧುವು ಪನ್ನೀರಿನಿಂದ ಮೋರೆ ತೊಳೆಯಿತು.
ಪುಷ್ಪವು ಹಸಿರೆಲೆಯ ರತ್ನಗಂಬಳಿಯಂತೆ ಅರಳಿತುಮತ್ತು
ದೀಪವು ಹೂವಿನ ತಂಗಾಳಿಯ ಅಲೆಯಿಂದ ಪ್ರಜ್ವಲಿಸಿತು
ಕೆಳಗೆ ಮಶಕ್‌ನ ಸುಗಂಧ ವ್ಯಾಪಿಸಿತು ಹೇಗೆಂದರೆ ಗೆಳೆಯನ ಕೈಯಲಿ
ಮಶಕ್‌ನ ಸುಗಂಧ ಸುವಾಸನಾಯುಕ್ತವಾಯಿತು
ಹೊಳೆಯುವ ಸ್ವರ ಮತ್ತು ಚೆಲುವಿನ ನೃತ್ಯದ ದೆಸೆಯಿಂದ
ಸರೊಪರಿಂದ ಎಂಬ ಪಕ್ಷಿಯು ಕಾಲನೆತ್ತಿ ಮಾಡಿದ
ನೃತ್ಯವು ಸಪ್ಪೆಯಾಗಿ ಕಂಡು ಬಂದಿತು.
ಪ್ರತಿ ಚಿಲುಮೆಯ ಬಳಿ ನೀರಿನಿಂದ ಆವೃತವಾದ ವಿಗ್ರಹದಂತೆ ಪಕ್ಷಿಯ

ಕೊಕ್ಕು ಹಸಿರು ಕತ್ತರಿಯಂತೆ ಕಂಡು ಬಂದಿತು ರೇಷಿಮೆಯನ್ನು ಕತ್ತರಿಸುತ್ತಾ
ಉದ್ಯಾನವನವು ಸ್ವರ್ಗವಾಯಿತು ಮತ್ತು ಹಾಲಿನ
ಸಮುದ್ರವು ಸುಂದರ ಅಲೆಗಳ ಬಿಂಬದಂತೆ
ಪರಿಶುದ್ಧ ಪಾರದರ್ಶಕ ನೀರಿನಂತಾಯಿತು

ದೂರಗಾಮೀ ವಿವೇಚನೆಯುಳ್ಳ ಸನ್ಮಾನ್ಯರು ಮತ್ತು ಬಾದಶಾಹೀ ಕರ್ತವ್ಯಗಳ ಬಗ್ಗೆ ಅರಿವನ್ನು ಹೊಂದಿದ್ದ ಮತ್ತು ಪ್ರಜ್ಞಾವಂತಿಕೆಯನ್ನು ಹೊಂದಿದ್ದ ಬಾದಶಹರವರ ಬಳಗಕ್ಕೆ ಈ ಹುಕುಮನ್ನು ಅಪ್ಪಣೆ ಮಾಡಲಾಯಿತು. ಏನೆಂದರೆ ಆಸೀನ್ ಬಂದಿಯ ಮೂಲಕ ಜಗತ್ತನ್ನು ಕನ್ನಡಿಯಂತೆ ಗೌರವಾನ್ವಿತ ಆಕಾಶದಂತೆ ಎತ್ತರದ ಉನ್ನತಿಯನ್ನು ಹೊಂದುವಂತೆ ಮಾಡಲಿ ಮತ್ತು ಭೂಮಿಯನ್ನು ಪುಷ್ಪಗಳಿಂದ ಮತ್ತು ಉದ್ಯಾನವನವನ್ನು ಕಾಬೂಲ್ ಮತ್ತು ಕಾಶ್ಮೀರದಲ್ಲಿ ದೊರಕುವುದಕ್ಕಿಂತ ಇನ್ನೂ ಹೆಚ್ಚು ರಂಗು ರಂಗಿನ ನೆಲಹಾಸನ್ನಾಗಿ ಮಾಡಲಿ ಮತ್ತು ಆಜ್ಞಾಪಾಲನೆಯ ಗುಣವು ಪ್ರಮುಖರು ಮತ್ತು ಸನ್ಮಾನ್ಯ ಶುಭಾಕಾಂಕ್ಷಿಗಳ ಎತ್ತರಕ್ಕೆ ಏರಿರುವ ವ್ಯಕ್ತಿಗಳು ಅನುಸರಣೆ ಮತ್ತು ಅಂಗಿಕಾರದ ಶವವನ್ನು ತಲೆಯ ಮೇಲೆ ಆಜ್ಞಾಪಾಲನೆಯ ಸಲುವಾಗಿ ಹಾಗು ಅಭಿಮಾನದ ನಿಟ್ಟಿನಲ್ಲಿ ಅಂಗಿಕಾರ ಮತ್ತು ರಾಜಿಯ ಸುರ್ಮವನ್ನು ಹಚ್ಚಿ ಶೀಘ್ರ ಪ್ರಕಾಶವನ್ನು ಬೀರುವಂತಹವರಾಗಲಿ. ಇದೇ ರೀತಿಯಲ್ಲಿ ಎತ್ತರದ ಡೇರೆಗಳು ಮತ್ತು ಉನ್ನತವಾದ ಶಾಮಿಯಾನಗಳನ್ನು ನಿರ್ಮಿಸಲಿ. ಭೂಖಂಡದ ಜಗತ್ತಿನಲ್ಲಿ ಅನ್ವೇಷಣೆಯ ಮೂಲಕ ಇಂದಿನವರೆಗೂ ಜೀವಹರಣ ಮಾಡುವ ಸೂರ್ಯನ ಸ್ಥಾನದಿಂದ ವಿಶ್ವವನ್ನು ಬೆಳಗುವ ಮತ್ತು ಪ್ರಾಣದ ಬಳಿ ಸುಳಿಯುವ ಅದರ ಉನ್ನತ ದರ್ಜೆಯ ನೆರಳಿನ ಮೌಲ್ಯದಿಂದ ಮುಕ್ತಿ ಮತ್ತು ಬಿಡುಗಡೆಯು ದೊರಕಲಿ. ಎಲ್ಲಾ ವಿಧದ ಸೂರ್ಯನ ಶಾಖ ಮತ್ತು ತೊಂದರೆಗಳು ಹಾಗೂ ಸಂಕಷ್ಟಗಳಿಂದ ಮತ್ತು ಕಪಟ ಹಾಗೂ ಪುರಾತನ ಆಕಾಶದ ಗ್ರಹಗಳ ಹಣೆಬರಹ ಮತ್ತು ಭವಿಷ್ಯ ವಾಣಿಯನ್ನು ಹೇಳುವ ಸನ್ಮಾನ್ಯರು ಮತ್ತು ಈ ರೀತಿಯ ನೆರಳಿನ ಅಡಿಯಲ್ಲಿ ಶಾಮಿಯಾನದಲ್ಲಿ ಆತ್ಮದ ಅಂತರಂಗದಲ್ಲಿ ನೆರಳಿನಲ್ಲಿ ಆಸೀನರಾಗುವರು ಮತ್ತು ಅಸಮಾನ್ಯ ಹಾಗೂ ಅಸಾದೃಶ್ಯ ಪುಷ್ಪ ಮತ್ತು ಫಲಗಳಂತೆ ಸೌಧರ್ಯವನ್ನು ಹೊಂದಿದ ಶಾಮಿಯಾನಗಳಲ್ಲಿ ಎತ್ತರದ ಆಕಾಶದ ಸ್ಥಳವನ್ನು ಆಕ್ರಮಿಸಿಕೊಳ್ಳುವ ಶಾಮಿಯಾನಗಳಲ್ಲಿ ನಿಯತ್ತು ಮತ್ತು ವಿದ್ಯೆ ಹಾಗೂ ನಂಬಿಕೆಯ ವಿದ್ಯೆ ಹಾಗೂ ದೌರ್ಜನ್ಯದ ಕಪಟತನವನ್ನು ಎಂದಿಗೂ ಕೈಗೊಳ್ಳದೆ ಇರಲಿ ಮತ್ತು ಜಗತ್ತಿನಲ್ಲಿ ವಾಸವಾಗಿರುವ ವ್ಯಕ್ತಿಗಳ ಜೊತೆಯಲ್ಲಿ ವಿನಯವಂತಿಕೆ ಹಾಗೂ ಸತ್ಯದ ಹೊರತು ಬೇರೆ ಇನ್ನು ಯಾವ ಕ್ರಮದಲ್ಲಿಯೂ ವರ್ತಿಸದಿರಲಿ.

ರೇಷಿಮೆಯ ಹಗ್ಗಗಳ ಮೂಲಕ ಒಂದು ದರಬಾರನ್ನು ನಿರ್ಮಾಣ ಮಾಡು
ಆಕಾಸದ ಔನ್ನತ್ಯದಂತೆ ಸೂರ್ಯನಂತೆ
ಉನ್ನತ ಸಭ್ಯತೆಯ ಮಾಲೀಕರಾದ ಬಾದಶಹರವರ
ಘಸಲಿನಿಂದ ಎಂತಹಾ ಸಭೆ ಆಯೋಜನೆಯಾಯಿತೆಂದರೆ
ಅದು ಸ್ವರ್ಗದ ಉದ್ಯಾನವನದಂತಿತ್ತು
ಎಲ್ಲಾ ಮೊಹಲ್ಲಾ ಮತ್ತು ಬಜಾರುಗಳು ಬಣ್ಣದ ಸ್ವರ್ಗದ
ಉದ್ಯಾನವನದಂತೆ ರೇಷಿಮೆಯಿಂದ ಅಲಂಕೃತಗೊಂಡವು
ನಿರ್ವಿವಾದವಾಗಿಯೂ ಅವು ಅಂಬರ್ ಸುಗಂಧದಿಂದ
ಆವೃತವಾಗಿದ್ದು ರೇಷಿಮೆಯಿಂದ ಅಲಂಕೃತಗೊಂಡ
ಭೂಮಿಯಿಂದ ಕೂಡಿದ್ದು ಸ್ವರ್ಗಕ್ಕೆ ಸವಾಲನ್ನು ಎಸದವು

ಪ್ರತಿ ಡೇರೆ ಮತ್ತು ಶಾಮಿಯಾನಾದ ಒಳಗಡೆ ಉತ್ತಮ ಪರಿಕರಗಳು ಹಾಗೂ ಅತ್ತರ್ ಸುಗಂಧದಂತೆ ಸಂಗಿತಗಾರ್ತಿ ಕನ್ಯೆಯರು ಸೌಂದರ್ಯದಿಂದ ಕೂಡಿ ಮಾಣಿಕ್ಯದಂತೆ ಹೊಳೆಯುತ್ತಿದ್ದರು. ಅವರ ಪ್ರಿಯ ಕೆನ್ನೆಗಳ ವಿರಹದಿಂದ ಮಿಲನದ ವಿಶಾಲ ಕಂಗಳು ಪ್ರಕಾಶಮಯವಾಗಿ ಹೊಳೆಯುತ್ತಾ ಬೆಳಗುತ್ತಿದ್ದವು ಮತ್ತು ಅವರ ಮುಂಗುರುಳು ಪ್ರೇಮಿಯ ವಿರಹದ ದೆಸೆಯಿಂದ ಕಗ್ಗತ್ತಲಿನ ರಾತ್ರಿಯಂತೆ ಕಡುಗಪ್ಪು ಮತ್ತು ಸುಶ್ರಾವ್ಯ ಕಂಠದಿಂದ ಹಾಡುವಂತಹ ಮತ್ತು ಗಂಧರ್ವ ಲೋಕವನ್ನು ನಿರ್ಮಿಸುತ್ತಾ ಗಝಲ್ ಹಾಡುವ ಸನ್ಯಾಸ್ಯರ ಸೂರ್ಯ ಉದಯವಾಗುವ ಸಂದರ್ಭದ ಹೊಳಪು ಮತ್ತು ಬೆಳಕು ಕೂಡ ಅವರ ಚೆಹರೆಗಳ ಮೇಲೆ ಸ್ಪಷ್ಟವಾಗಿ ಕಂಡು ಬರುವ ಬೆಳಕು ಮತ್ತು ಹೊಳಪಿನೆದುರು ನಿಲ್ಲಲಿಲ್ಲ. ಅತ್ತರಿನಿಂದ ಕೂಡಿದ ದೇಹವು ಅವರೆಲ್ಲರ ಮಶಕ್‌ನಂತಹ ಸುಗಂಧ ಮತ್ತು ಮೋರೆಗೆ ಹಚ್ಚುವ ಬಣ್ಣವನ್ನು ಹೊಂದಿದವರ ರೀತಿಯಲ್ಲಿ ಸುವಾಸನಾಯುಕ್ತ ಬಜಾರಿನಲ್ಲಿ ನಿಶ್ಚಿತವಾಗಿಯೂ ಕಂಡು ಬರಲಿಲ್ಲ. ವಿಲಾಸವನ್ನು ಹೆಚ್ಚಿಸುವ ಗೀತೆಗಳಿಂದ ಆಕಾಶದ ಮೇಲೆ ಬದುಕುವಂತಹ ಜನಗಳು ಭೂಮಿಯ ಮೇಲೆ ನೆಲಸುವ ವ್ಯಕ್ತಿಗಳಂತೆ ನೃತ್ಯ ಮತ್ತು ಚಲನಶೀಲತೆಯನ್ನು ಪಡೆದರು ಹಾಗೂ ಅತ್ಯಾಕರ್ಷಕ ಪಕ್ಷಿಗಳ ಸುಶ್ರಾವ್ಯ ಕಂಠದ ಜಾಲದಲಿ ವಾತ್ಸಲ್ಯ ಮತ್ತು ಪ್ರೇಮದ ಆಶ್ರಯದಲ್ಲಿ ಹಾರಾಡುವ ಪಕ್ಷಿಗಳನ್ನು ಸೆರೆಹಿಡಿದರು. ನೃತ್ಯ ಮಾಡುವ ಪ್ರೇಯಸಿಯರು ಬಗಲಲ್ಲಿ ಪಿತೂರಿ ಮತ್ತು ಶುಕ್ರಗ್ರಹದಂತೆ ಹೊಳಪನ್ನು ಹೊಂದಿದಂತಹ ಪ್ರೇಮ ವಿಕ್ರಯದ ಸಲುವಾಗಿ ಅರೆತೆರೆದ ನೇತ್ರದಿಂದ ಅತೀವ ಮಾಂತ್ರಿಕ ಲೋಕವನ್ನು ಸೃಷ್ಟಿಸಿದರು. ಅತೀವ ಬುದ್ಧಿ ಮತ್ತು ಪ್ರಜ್ಞೆಯ ಮಾಲೀಕರಾಗಿದ್ದಂತಹ ನೋಡುಗರ ಹೃದಯಗಳು ಹೂವಿನ ಲಡಿಯಂತೆ ಕೈಯನ್ನು ಜೋಡಿಸಿದವು. ಒಟ್ಟಾರೆ ಯುದ್ಧದ ಧ್ವನಿ ಮೆಲ್ಲ ಮೆಲ್ಲನೆ ಕ್ಷೀಣಿಸಿ ದೇಹ ಪ್ರವೃತ್ತಿ ಮತ್ತು ದೇಹದ ಕಾಮನೆಗಳ ಕ್ಷೇತ್ರದಲ್ಲಿ

ನಡೆಯುವಂತಹ ವ್ಯಕ್ತಿಗಳಿಗೆ ಉತ್ತೇಜನವನ್ನು ನೀಡುವ ಮದಿರೆಯ ನಶೆಯಲ್ಲಿ ಮುಳುಗಿಸಿ ಅವರನ್ನು ಅರೆ ಹುಚ್ಚರನ್ನಾಗಿ ಮಾಡಿದರು ಹಾಗೂ ದೇವರ ಇಚ್ಛೆಯನುಸಾರ ದೈವಭಕ್ತಿಯನ್ನುಳ್ಳವರಿಗೆ ಬೃಹತ್ತಾದ ಅರಣ್ಯಗಳು ಮತ್ತು ಗುಹೆಗಳಲ್ಲಿ ಓಡಾಡುವ ವ್ಯಕ್ತಿಗಳು ಕೊಳಲು ಮತ್ತು ಸಂಗೀತ ವಾದ್ಯಗಳ ಧ್ವನಿಯನ್ನು ಆಲಿಸಿ ಪರಮಾತ್ಮನ ಪ್ರೇಮದ ಕುದುರೆಯ ಮೇಲೆ ಸವಾರರಾದರು ಮತ್ತು ಅಂತಿಮ ಗುರಿಯನ್ನು ತಲುಪಿಸಿದರು. ಎಲ್ಲಾ ಹೊತ್ತಿನಲ್ಲಿಯೂ ಪಿತೂರಿಕೋರ ಹಾಗೂ ಶೋಕಿ ಹಾಗೂ ಆಮೋದ ಪ್ರಮೋದದ ವಿವಿಧ ರೀತಿಯ ಮೆಲು ಧ್ವನಿಯ ಕಲೆಗಾರರು ತಮ್ಮತಮ್ಮ ಕಲೆಗಳ ಪ್ರದರ್ಶನ ಮತ್ತು ಕಲೆಗಾರಿಕೆಯ ಸಲುವಾಗಿ ಹೂಜಿಯಂತೆ ಉನ್ನತವಾದ ಕಿರಣಗಳು, ಚಿಂತನೆ ಮತ್ತು ಬುದ್ಧಿಮತ್ತೆಯ ಕ್ಷೇತ್ರದಲ್ಲಿ ಬಳಕುತ್ತಾ ವೈಯಾರದ ನಡಿಗೆಯ ಮೂಲಕ ಸಕ್ರಿಯರಾದರು. ವೇಗದ ಜನರು ಮೊದಲ ಹಿಸ್ಸೆಯಂತೆ ಸನ್ನದ್ಧರಾಗಿ ಪ್ರಜ್ಞಾಶೂನ್ಯರಂತೆ ಮೈಮರೆತರು ಮತ್ತು ಯಾವ ಹೊತ್ತಿನಲ್ಲಿ ಪ್ರಾಣವನ್ನು ಪಡೆಯುವ ಬಹಾದುರ್ ಜನರು ಹೆಜ್ಜೆ ಹೆಜ್ಜೆಯನ್ನು ಜೋಡಿಸುತ್ತಾ ಹೆದ್ದಾರಿಯಲ್ಲಿ ನರ್ತಿಸುವವರಂತಾದರು ಮತ್ತು ಮಹಿಳೆಯರ ಕೈಗಳು ನಡುಗಿ ಚಲಿಸತೊಡಗಿದವು. ಸಂಕಷ್ಟಗಳನ್ನು ಆಸೆ ಪಡುವ ನೋಡುಗ ಸನ್ಮಾನ್ಯರು ರೇಷಿಮೆಯನ್ನು ಆಯ್ದು ಕೊಳ್ಳುವವರಂತೆ ಸಂಪೂರ್ಣ ದೇಹದ ಮೇಲೆ ಹೊದ್ದುಕೊಂಡು ಆಶ್ಚರ್ಯಭರಿತರಾಗಿ ಅತ್ಯಂತ ನೆಮ್ಮದಿಯನ್ನು ವ್ಯಕ್ತಪಡಿಸಿದರು.

ಮೋರೆ ಬೆಂಕಿಯಂತೆ ಕೆನ್ನೆ ನೀರಿನಂತೆ ಪ್ರಕಾಶಮಯವಾಗಿ
ಹೊಳೆಯುತ್ತಿತ್ತು ಚಂದ್ರ ಮತ್ತು ಸೂರ್ಯನಿಗಿಂತಲೂ ಹೆಚ್ಚು
ಹುಬ್ಬನ್ನು ಬಿಲ್ಲನ್ನಾಗಿಸಿ ಕಣ್ಸನ್ನೆಯನ್ನು ಬಾಣವನ್ನಾಗಿಸಿದ ಮತ್ತು
ಬಿಲ್ಲು ಬಾಣಗಳ ಮೂಲಕ ಸಹಸ್ರಾರು ಜನರನ್ನು ಕೈದಿಗಳನ್ನಾಗಿ ಮಾಡಿದ

ಇಡೀ ರಾತ್ರಿ ದೀಪಗಳು ಮತ್ತು ಮಶಾಲುಗಳು ರಾತ್ರಿಯ ಸಭೆಯ ಗೌರವವನ್ನು ಉಳಿಸುವಂತಹದಾಗಿದೆ. ಆ ಸಬೆಯಲ್ಲಿ ಆರಾಮ ಮತು ನೆಮ್ಮದಿಯ ಕ್ರಿಯೆಯನ್ನು ಈ ರೀತಿಯಲ್ಲಿ ಪ್ರಜ್ವಲಿಸುವಂತೆ ಮಾಡಲಿ. ಅಂದರೆ ಸೂಕ್ಷ್ಮ ನೋಟವನ್ನು ಹೊಂದಿರುವವರು ಕತ್ತಲ ಹೃದಯದ ಜನರ ನೋಟವನ್ನು ಅಮೂಲ್ಯ ಮುತ್ತುರತ್ನಗಳಿಂದ ತಯಾರಿಸಿದ ಶುಭ ಕಾಡಿಗೆಯ ಸೂರ್ಯನಂತೆ ಪ್ರಕಾಶವನ್ನು ಬೇಡುವ ಪ್ರತಿಬಿಂಬ ಮತ್ತು ನೆರಳಾಗಿ ಅರೆ ಬೆಳಕನ್ನು ನೀಡುವ ಹಗಲಿನಂತಾಯಿತು. ದುರ್ಬಲ ಇರುವೆಯ ಚಟುವಟಿಕೆಗಳು ಮತ್ತು ನೆಮ್ಮದಿ ಹಾಗೂ ನಿಕೃಷ್ಟ ನೊಣವು ಅರಣ್ಯದ ಕಂದಕಗಳು ಮತ್ತು ಗುಹೆಯು ಅಂಧಕಾರದ ರಾತ್ರಿಯಲ್ಲಿ ನೋಡಲಾರಂಭಿಸಿದವು. ಒಂದು ವೇಳೆ ಅವರ ದಾಸಿಯರ ಬಳಕುವಿಕೆಯ ಸವಾರರು ಚಿಂತಕ ವ್ಯಕ್ತಿಗಳ ಮೌಲ್ಯವನ್ನು ಉಳಿಸುವ ವ್ಯಕ್ತಿಗಳ ನೋಟದ ಜ್ಞಾನವನ್ನು ಕಾಗದದ

ಮೇಲೆ ದಾಖಲು ಮಾಡಿದಲ್ಲಿ ಬಾಲ್ಯದ ಬೋಧರಾಹಿತ್ಯ ಸ್ವಭಾವವನ್ನು ಹೊಂದಿದ ಜನರು ಕಣ್ಣೆವೆ ಮಿಟುಕಿಸುವುದರೊಳಗಾಗಿ ಅಜ್ಞಾನಿಗಳಂತೆ ಯಾವುದೇ ಗಮನ ಮತ್ತು ಚಿಂತನೆ ಇಲ್ಲದೆ ಈ ವಾಸ್ತವತೆಯವರೆಗೆ ಪ್ರವೇಶಾವಕಾಶವನ್ನು ಪಡೆಯುವಲ್ಲಿ ಚಂದ್ರನು ಅವರ ದೀಪಗಳ ಬೆಳಕಿನ ಎದುರಿನಲ್ಲಿ ಬೆದರಿದಂತೆ ಸೂರ್ಯನ ಕಿರಣಗಳ ಮುಂದೆ ಕಂಡು ಬಂದ. ಸೂರ್ಯನ ನೋಟವು ಅವರ ಮಶಾಲುಗಳ ಬೆಳಕಿನ ಪರಿವೀಕ್ಷಣೆಯನ್ನು ಮಾಡಿದ. ಜನತೆಯ ನೋಟವು ಸೂರ್ಯನ ಕಿರಣಗಳನ್ನು ನೋಡುವುದರಿಂದ ಹೈರಾಣಾಗಿ ಹೋಗುವಂತೆ ಮತ್ತು ಪ್ರತಿ ಹಗಲು ಮತ್ತು ರಾತ್ರಿ ವಿಶೇಷ ಪ್ರಾರ್ಥನೆಯ ಮೂಲಕ ಜನರು ಸೃಷ್ಟಿಯ ಮತ್ತು ಪ್ರತೀಕಾರದ ದಸ್ತರ್‌ಕಾನ್ (ಊಟದ ಸಲುವಾಗಿ ಹಾಸುವ ಬಟ್ಟೆ)ಯಿಂದ ಆಯ್ದು ಕೊಂಡರು. ದಾನಧರ್ಮದ ವಿವಿಧ ಸ್ವಾದದ ಮೂಲಕ ಏನಾದರೂ ಭಿನ್ನ ಕಲಾತ್ಮಕ ಪ್ರಬೇಧಗಳ ತಜ್ಞ ವ್ಯಕ್ತಿಗಳ ಲೇಖನಿಯು ಅವರ ದಿನ ನಿತ್ಯದ ಮತ್ತು ಶುಭ್ರವಾದ ಬರವಣಿಗೆಯನ್ನು ಮಾಡುವ ಇರಾದೆಯನ್ನು ಮಾಡಿದಲ್ಲಿ ಅವನ ಈ ರೀತಿಯ ಸುಂದರ ಅಕ್ಷರಗಳು ಅವನ ನಾಲಿಗೆಯಿಂದ ಹೊರಚಾಚಿ ಆ ಅವಧಿಯಲ್ಲಿ ಸೂಕ್ಷ್ಮ ಸಂವಹನ ಮಾಡುವಂತಹ ತಜ್ಞರ ಹೃದಯವು ನೊಣದ ರೀತಿಯಲ್ಲಿ ಹಗಲು ರಾತ್ರಿ ದಸ್ತರ್‌ಖ್ವಾನಿನ ಸುತ್ತಮುತ್ತಲೂ ಅದರ ಲಾಭವನ್ನು ಪಡೆಯುವತ್ತ ನಿರತರಾಗುವರು ಮತ್ತು ಸಂಪತ್ತಿನ ಮೂಲದಿಂದ ಈ ರೀತಿಯಲ್ಲಿ ಯೋಗ್ಯತೆಯನುಸಾರ ಶಾಯಿಯು ಹತ್ತುವುದು ಏನೆಂದರೆ ಅಮೃತಕ್ಕಿಂತಲು ಹೆಚ್ಚು ಸಂತಸಮಯವನ್ನಾಗಿ ಮಾಡಲಾಗುವುದು. ಹೊರ ನೋಟದಲ್ಲಿ ಬರೆಯಲಾರಂಭಿಸಿದುದು ಪರಿಶ್ರಮದಲ್ಲಿ ಮುಳುಗಿದ ವ್ಯಕ್ತಿಯು ಅದರ ಒಂದು ಹನಿಯನ್ನೇನಾದರೂ ಭೂಮಿಯ ಮೇಲೆ ಹನಿಸಿದಲ್ಲಿ ಪ್ರಳಯದ ದಿನದವರೆಗು ಫಲ ತುಂಬಿದ ವೃಕ್ಷ ಮತ್ತು ಸ್ವಾದಿಷ್ಟ ವಸ್ತುಗಳ ಹೊರತು ಇನ್ನು ಯಾವ ವಸ್ತುವೂ ಕೂಡಾ ಬೆಳೆಯುವುದಿಲ್ಲ. ಮತ್ತು ಒಂದು ವೇಳೆ ಅದರ ಒಂದು ಗುಟುಕು ಉಪ್ಪಿನ ಸಮುದ್ರದ ಒಳಗೆ ಬಿದ್ದಲ್ಲಿ ಆ ನೀರು ಫರಾತ್ ಸಮುದ್ರದ ಶುಭ್ರ ಮತ್ತು ಪಾರದರ್ಶಕ ನೀರಿನಿಂದ ಹೆಚ್ಚು ಸ್ವಾದಿಷ್ಟ ಮತ್ತು ನೀಲ್ ನದಿಯಂತೆ ಮಧುರವಾಗುವುದು ಹಾಗೂ ಒಂದು ವೇಳೆ ಅವನ ದಸ್ತರ್‌ಖ್ವಾನ್‌ನ ಮೇಲೆ ಬಡಿಸಲಾಗಿರುವ ಉಪ್ಪಿನ ಸ್ವಾದದ ಆಹಾರದಿಂದ ಒಂದು ಅಣುವು ಸೌಂದರ್ಯವತಿಯಾದ ಸುಂದರಿಯ ಮೇಲೆ ಬಿದ್ದಲ್ಲಿ ಕೃಶಕಾಯದ ಪ್ರೇಯಸಿಯರ ದಂಡು ಭೂಮಿ ಮತ್ತು ಆಕಾಶದ ಅದೃಷ್ಟವಾಗುತ್ತಾರೆ ಮತ್ತು ತಮ್ಮ ಇಡೀ ಆಯುಷ್ಯ ಅವರ ಸೌಂದರ್ಯ ಮತ್ತು ಅವರ ಮೃದು ಭಾಷೆಯಿಂದ ಕೂಡಿದ ಕರ್ತವ್ಯವನ್ನು ಸುವಾಸನಾಯುಕ್ತ ಸಮುದ್ರ ಮತ್ತು ಪ್ರಚುರ ಪಡಿಸಿದ ಮುತ್ತುಗಳ ವೈಭವವು ನಿಶ್ಚಯವಾಗಿಯೂ ಬೇರೆಬೇರೆಯಾಗುವುದಿಲ್ಲ. ದುರಾಶೆಯಿಂದ ಕೂಡಿದವನ ನೋಟ ಮತ್ತು ಹಸಿದವನ ಜೀರ್ಣಾಂಗವನ್ನು ಮೃಷ್ಟಾನ್ನಗಳಿಂದ ತುಂಬಿಸಿ ಸಂತೃಪ್ತನನ್ನಾಗಿ ಮಾಡಲಾಯಿತು

ಹಾಗೂ ಆ ಸಂದರ್ಭದಲ್ಲಿ ಆನಂದದಿಂದ ಕೂಡಿದ ಸುವಾಸನಾಯುಕ್ತ ಸಾಂಭ್ರಾಣಿಯ ಹೊಗೆ ಸ್ವರ್ಗದೋಪಾದಿಯಲ್ಲಿದ್ದ ಉತ್ತಮವಾದ ಸಬೆಯ ಧೂಮವು ಹೊರ ಬೀಳುತ್ತಾ ನ್ಯಾಯಪರ ಸೂಕ್ಷ್ಮ ಮತ್ತು ಪ್ರಜ್ಞಾವಂತಿಕೆಯ ಸಭ್ಯರು ಅದನ್ನು ಅಂಬರೀನ್ ಮತ್ತು ಮಶಕ್‌ನ ಮುಂಗುರುಳಿನ ಮೊಗ್ಗುಗಳಿಂದ ಗಂಧರ್ವ ಕನ್ಯೆಯರ ಹಣೆಯನ್ನು ಹೊಂದಿದ ಸೌಂದರ್ಯದಿಂದ ಕೂಡಿದ ಸುಂದರಿಯರಿಗಿಂತಲೂ ಹೆಚ್ಚು ಆನಂದತುಂದಿಲರಾಗಿ ಕಂಡು ಬರುತ್ತಿದ್ದರು ನೀವು ಹೇಳಬಹುದು ಇಡೀ ಪರಿಸರವೇ ತುಳಸಿಯಂತಹ ಸುಗಂದಪೂರಿತ ಮೂಲಿಕೆಯ ನೆಮ್ಮದಿಯ ಹೆಚ್ಚಳದಿಂದ ಬಖರಾತ್ ಮತ್ತು ಸಂಬಲ್ ಎಂಬ ಹೆಸರನ್ನು ಕೊಡಲಾಗುವುದು.

ಸಂಭಾವ್ಯ ಜಗತ್ತಿನೆಲ್ಲಾ ದಿಕ್ಕುಗಳಲ್ಲಿಯೂ ಈ ಸಂತಸ ಮತ್ತು ನೆಮ್ಮದಿಯಿಂದ ಕೂಡಿದ ಸಭೆಯ ಒಳಗೆ ಕೊಡುಗೆಗಳ ಮತ್ತು ಅತ್ತರಿನ ಅತಿ ಹೆಚ್ಚು ಬಳಕೆಯಿಂದ ಮತ್ತು ಒಟ್ಟಾರೆ ಸದಿಚ್ಛೆಯು ಸಭೆಯಲ್ಲಿ ಕಂಡು ಬರುತ್ತವೆ. ಮತ್ತು ಪರಿಸರವು ಎಷ್ಟೊಂದು ಸುವಾಸನೆಯಿಮದ ಕೂಡಿತ್ತೆಂದರೆ ನಿಖತ್ ಪುಷ್ಪದ ಪಾಲನೆ ಪೋಷಣೆಯ ಪ್ರಭಾವದಿಂದ ಪ್ರತಿ ಮುಳ್ಳು ಮತ್ತು ಒಣ ಹುಲ್ಲು ಭೂಮಿಯ ಕಿಟಕಿಯಿಂದ ತಲೆಯನ್ನು ಹೊರ ಹಾಕಿ ಒಟ್ಟಾರೆ ಅತ್ತರಿನ ಸುವಾಸನೆಯಂತೆ ದುಃಖಿತ ಮತ್ತು ನಿರಾಶೆಯ ಹೃದಯಗಳಿಗೆ ವೈಭವ ಮತ್ತು ಸಂತಸ ಹಾಗೂ ನೆಮ್ಮದಿಯನ್ನು ಕೊಡ ಮಾಡಿದರು. ನಾವು ವಿಶೇಷತಃ ರಭಸವಾಗಿ ಬೀಸುವ ಗಾಳಿಯ ಶುಭ ಸ್ಪರ್ಷದಿಂದ ಮಶಕ್‌ನ ಮಣ್ಣಿನಿಂದ ಕೂಡಾ ಹೆಚ್ಚು ಸುವಾಸನಾಭರಿತ ಮತ್ತು ಉತ್ತಮವಾಗಿರುವುದು ಹಾಗೂ ಅಂಬರ್ ಮತ್ತು ಅಶಿಯತ್‌ನ ಕಲ್ಲಿನಿಂದ ಕೂಡ ಹೆಚ್ಚು ತಲೆಯನ್ನು ಮೇಲಕ್ಕೆತ್ತಿ ಮತ್ತಷ್ಟು ಎತ್ತರವಾದೆವು. ಒಟ್ಟಾರೆ ಚಿಂತಕ ಮಹಾನುಭಾವರು ಮತ್ತು ಆಪ್ತರು ಬುದ್ಧಿಮತ್ತೆ ಮತ್ತು ಸೂಕ್ಷ್ಮ ಒಳನೋಟಗಳನ್ನು ಹೊಂದಿ ದೃಷ್ಟಿಯ ಮೂಲಕ ಯಾವುದೇ ರಹಸ್ಯ ಅಥವಾ ಮರೆಮಾಚುವಿಕೆ ಇಲ್ಲವಾಗಿದೆ. ಸೂಕ್ಷ್ಮತೆಯನ್ನು ಹೊಂದುವಂತಹ ದೂರದೃಷ್ಟಿಯುಳ್ಳ ವ್ಯಕ್ತಿಗಳು ಮತ್ತು ಅಪೇಕ್ಷೆ ಹಾಗೂ ಇಂದ್ರಿಯಗಳ ಬುನಾದಿಯನ್ನು ಧ್ವಂಸಗೊಳಿಸುವ ಮತ್ತು ಎಚ್ಚರಿಕೆಯ ದ್ರವ್ಯವನ್ನು ಹೃದಯವಂತ ಪರಿಚಿತ ಸದ್ಗೃಹಸ್ಥರ ಮತ್ತು ಬುದ್ಧಿಮತ್ತೆಯ ಗುರಿಯ ಬುನಾದಿಯನ್ನು ಹೊಂದಿದ ಜನರು ಇದೇ ರೀತಿಯಲ್ಲಿ ಜಗತ್ತಿನ ಸ್ವಾದಿಷ್ಟತೆ ಮತ್ತು ಸಿರಿವಂತಿಕೆಯನ್ನು ಪಡೆಯುವಲ್ಲಿ ನಿರತರಾಗಿದ್ದಾರೆ. ಅವರಲ್ಲಿ ಭಗವಂತನ ಔನ್ನತ್ಯದ ಇನಾಮುಗಳು ಮತ್ತು ಕೊಡುಗೆಗಳ ಪೈಕಿ ಒಂದು ವಿಶೇಷವಾಗಿರುವುದು .ಝುಕಾತ್ ಎಂಬುದು. ಅವರು ಅದನ್ನು ಕಡ್ಡಾಯವೆಂದು ಪರಿಗಣಿಸುತ್ತಾರೆ. ಇದೇ ರೀತಿಯಲ್ಲಿ ದೇಹದ ಎಲ್ಲಾ ಅಂಗಾಂಗಳಲ್ಲಿ ಘನತೆವೆತ್ತ ಅಲ್ಲಾಹನ ಬಲಿಷ್ಠ ಮತ್ತು ಶುಭ ಇನಾಮುಗಳು ಮತ್ತು ಬಳುವಳಿಗಳು ಅಲ್ಲಾಹನ ಅಂದರೆ ಪ್ರಾಣವನ್ನು ಸೃಷ್ಟಿ ಮಾಡುವ ಒಡೆಯನ ಕೊಡುಗೆಯಾಗಿದೆ.

ಭೂಮಿ ಮತ್ತು ಆಕಾಸದ ದೇಶಗಳ ವಾಸ್ತವ ಹುಕುಮನ್ನು ಆದೇಶ ಮಾಡುವ ಝುಕಾತನ್ನು ಕಡ್ಡಾಯವಾಗಿ ಪರಿಗಣಿಸುತ್ತಾರೆ ಮತ್ತು ಅದನ್ನು ಪಾವತಿಸುವ ಕ್ರಮ ಯಾವುದೆಂದರೆ ದೈವಪ್ರೀತಿ ಮತ್ತು ಅನ್ವೇಷಣೆಯ ಕ್ಷೇತ್ರದಲ್ಲಿ ಕುದುರೆ ಸವಾರರಾಗಿರುವ ವ್ಯಕ್ತಿಗಳು ಅರಬಿನ ಪ್ರವಾದಿ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರವರ ಆಜ್ಞಾಪಾಲನೆಯ ನಂತರ ಅವರ ಕುದುರೆ ಸವಾರ ವ್ಯಕ್ತಿಗಳ ಸಫಲತೆಯನ್ನು ಪಡೆಯುವಂತಹ ಸೈನ್ಯಾಧಿಕಾರಿ ಹಾಗೂ ಬೆಂಬಲ ಮತ್ತು ನೆವವನ್ನು ಪಡೆದು ಅಲ್ಲಾಹನ ವಾಗ್ದಾನ ಮಾಡಲ್ಪಟ್ಟಂತಹ ವ್ಯಕ್ತಿಗಳು ಹಾಗೂ ಕೀಳು ಮತ್ತು ಅಪಮಾನಕಾರೀ ಶಾಮೀಲು ಮಾಡುವ ಸೈತಾನನ ದುರ್ಗುಣಗಳ ಬೆಂಬಲಿಗರು ಮತ್ತು ನಷ್ಟವನ್ನು ಭರಿಸುವಂತಹ ಸೈನಿಕರು ಸ್ವಭಾವತಃ ಅಮಾನವೀಯತೆಗೆ ಬಲಿಯಾಗಿದ್ದಾರೆ. ಅವರಿಗೆ ಸಂಪೂರ್ಣ ಅಪಜಯವು ದೊರಕಿತು. ಒಟ್ಟಾರೆ ಬಲಾಢ್ಯತೆ ಮತ್ತು ಸ್ವೋಪಜ್ಞೆಯ ಕ್ಷೇತ್ರದಲ್ಲಿ ಲಗಾಮನ್ನು ಬಿಗಿ ಹಿಡಿದು ನಡೆಯುವಂತಹ ಜನರು ದೇಹದ ಎಲ್ಲಾ ಎಲ್ಲಾ ಪ್ರಾಪ್ತಿಯನ್ನು ರಾಜಧಾನಿಯ ಕಡೆಗೆ ಒಟ್ಟುಗೂಡಿಸಿದರು. ಅವರ ಉದ್ದೇಶವು ಅಲ್ಲಾಹನ ಆದೇಶಗಳನ್ನು ಪೂರ್ಣಗೊಳಿಸುವಂತಾಗಲಿ. ಅಂದರೆ ಅಲ್ಲಾಹನೆಂಬ ಒಡೆಯನ ಆಡಳಿತವು ಸಂಪೂರ್ಣವಾಗಿ ಜನರ ಆಜ್ಞಾಪಾಲನೆ ಹಾಗೂ ಶುಭ ಕರ್ತವ್ಯಗಳೆಂಬ ಕಡ್ಡಾಯಗಳಗಿದ್ದು ಜನತೆಯು ಉಭಯ ಲೋಕಗಳ ಸಾಫಲ್ಯತೆ ಮತ್ತು ಜಯ ದಲ್ಲಿ ನಿರತರಾಗಿದ್ದಾರೆ. ಒಂದು ಕ್ಷಣ ಕೂಡ ಆ ಕಡೆ ಹೆಜ್ಜೆಯನ್ನು ಮುಂದಿಟ್ಟು ಅತಿಕ್ರಮಿಸುವುದಿಲ್ಲ. ಯಾವುದೆಂದರೆ ಅಲ್ಲಾಹ್ ಮತ್ತು ಅವನ ಪ್ರವಾದಿಯವರು ಯಾವುದನ್ನು ನಿಷೇಧಿಸಿದ್ದಾರೋ ಅಂತಹದನ್ನು ಎಸಗುವುದು ನಷ್ಟದ ಕ್ರಿಯೆಯಾಗಿದೆ. ಕೆಲವರ ಎದೆಯು ಗೂಬೆಯ ವಿಶ್ರಾಂತಿ ಸ್ಥಳವಾಗಿದೆ. ಕೆಲವರು ನೋಟವನ್ನು ಅತ್ತಿತ್ತ ಹರಿಸಕೂಡದು. ಆ ಸುಂದರವಾದ ವಂಶಾವಳಿಯು ಸಫಲತೆಯ ಅದೃಷ್ಟ ಮತ್ತು ಆತ್ಮ ವಿಶ್ವಾಸದ ಎಲ್ಲಾ ದೇಶಗಳಲ್ಲಿ ಆಡಳಿತವನ್ನು ಮಾಡುವ ಸಲುವಾಗಿ ಈ ಜಗತ್ತು ಮತ್ತು ಅಂತಿಮ ಪ್ರಳಯಕಾಲದ ಏಳಿಗೆಯಿಂದ ಉಪಕೃತರಾಗುವಂತಹ ಸಫಲತೆ ಮತ್ತು ವಿಜಯ ಪ್ರಾಪ್ತಿಯನ್ನು ಪಡೆಯಲಿ. ಒಟ್ಟಾರೆ ಮುಕ್ತಿಯ ಸಭೆಯಲ್ಲಿ ಸ್ವರ್ಗಪ್ರಾಪ್ತಿಯ ಗುರಿ ಮತ್ತು ಪ್ರಸನ್ನತೆ ಮತ್ತು ಸಂತೋಷದ ಸನ್ನದಿನ ಮೂಲಕ ಸಿಂಹಾಸನದ ಮೇಲೆ ಪೀಠಾಧ್ಯಕ್ಷರಾಗಿ ಇಹಲೋಕ ಮತ್ತು ಪರಲೋಕದಲ್ಲಿ ಗೌರವಾನ್ವಿತ ಅಧಿನಾಯಕರಾಗಲಿ.

ಘನತೆವೆತ್ತ ಅಲ್ಲಾಹನಿಗೆ ಸರ್ವ ಸ್ತುತಿಗಳು ಮೀಸಲು ಮತ್ತು ಅವನ ಉಪಕಾರವೇನೆಂದರೆ ಹಝುರತ್ ಬಾದಶಹ ಫಾಝಿಯವರು ಉಭಯ ರೀತಿಯ ಶುಭ ಕಡ್ಡಾಯ ಝುಕಾತ್ ಮುಂತಾದವುಗಳನ್ನು ಪಾವತಿ ಮಾಡಿ ಭೂಮಿ ಆಕಾಶದ ಕರುಣೆ ಮತ್ತು ಕೊಡುಗೆಗಳ ದೇಶಗಳ ಒಡೆಯರಾಗಿದ್ದರು. ಅವರ ಇಚ್ಛೆ ಏನಾಗಿತ್ತೆಂದರೆ

ಪ್ರತಿ ದಿನ ಹಗಲು ಮತ್ತು ರಾತ್ರಿಯ ಒಳಗೆ ಎಸಗಲಾದ ಕರ್ತವ್ಯಗಳು ಮತ್ತು ಕ್ರಿಯೆಗಳ ಮೌಲ್ಯ ಮಾಪನವಾಗಲಿ ಮತ್ತು ತಮ್ಮ ವೈಯುಕ್ತಿಕ ಕೃತ್ಯಗಳ ವಿಶ್ಲೇಷಣೆಯ ಹಾದಿಯು ದೈವಹಸ್ತದ ನೆರವಿನಿಂದ ನಿಶ್ಚಿತವಾಗಿಯೂ ದೂರ ಹೋಗದೆ ಇರಲಿ. ತಖ್ವಾ ದೈವ ಸಾಕ್ಷಾತ್ಕಾರದ ಮತ್ತು ಸುಧಾರಣೆಯ ರಾಜ್ಯದ ಕಿರೀಟಸ್ಥರು ಮತ್ತು ಒಳಿತಿನ ಹಾಗೂ ಕೆಡುಕಿನ ನಿರಾಕರಣೆಯ ದೇಶಗಳ ಮತ್ತು ದುರ್ಗುಣಗಳನ್ನು ವರ್ಜಿಸುವ ದೇಶಗಳ ಸಿಂಹಾಸನದವರಾಗಿ ಆಗಲಿ ಆ ಕ್ರಮದಲ್ಲಿ ಸಭ್ಯ ಮತ್ತು ತಮ್ಮ ಅಂಗಾಂಗಗಳು ಪ್ರೇಮಪೂರ್ವಕವಾಗಿ ಸಂಪತ್ತು ಮತ್ತು ಅಮೂಲ್ಯ ವಸ್ತುಗಳು ಹಾಗೂ ಸೂರ್ಯನಂತಹ ಪ್ರಕಾಶವನ್ನು ಹೊಂದಿದಂತಹ ಅಮೂಲ್ಯ ಮುತ್ತು ರತ್ನಗಳು ಮತ್ತು ಹೆಚ್ಚು ಬೆಲೆಬಾಳುವ ನಾಣ್ಯಗಳ ಮೂಲಕ ತೂಕ ಮಾಡಿ ಸಂಪೂರ್ಣ ದೇಹದ ಅಂಗಾಂಗಗಳ ದಾನ ಧರ್ಮವನ್ನು ನಿರ್ಗತಿಕರಲ್ಲಿ ಹಂಚಿ ಪಾವತಿ ಮಾಡಿದರು. ಮತ್ತು ಆಯತೆ ಕರೀಮ ಎಂಬ ಕುರಾನಿನ ಸೂಕ್ತಿಯನ್ನು ನಿರಂತರವಗಿ ಪಠಿಸಿದರು. ಅದರ ಅರ್ಥ ಸಾರಾಂಶವೇನೆಂದರೆ, ನೀನು ಆ ಹೊತ್ತಿನವರೆಗೂ ಪುಣ್ಯ ಪ್ರಾಪ್ತಿಯನ್ನು ಪಡೆಯಲಾರೆ ಎಲ್ಲಿಯವರೆಗೆ ನೀನು ನಿನಗೆ ವಿಶೇಷವಾಗಿ ಪ್ರಿಯವಾದ ವಸ್ತುಗಳನ್ನು ಇತರೆಯವರೊಡನೆ ಹಂಚಿಕೊಳ್ಳದಿದ್ದಲ್ಲಿ. ಈ ಎಲ್ಲಾ ವಸ್ತುಗಳು ವಿಶೇಷ ಜನರು ಮತ್ತು ಸಾಮಾನ್ಯ ಜನರ ಪ್ರೇಮ ಮತ್ತು ಇಡೀ ಸೃಷ್ಟಿ ಸಂಕುಲದ ವಿವಿಧ ಪ್ರಬೇಧಗಳು ಮತ್ತು ಸಮುದಾಯದ ಪ್ರಬಾವ ಮತ್ತು ಪ್ರಕೃತಿಯ ಸಲುವಾಗಿ ಅತೀ ಹೆಚ್ಚು ಇಷ್ಟವಾದ ಅಂಗೀಕೃತವಾದ ವಸ್ತುಗಳಾಗಿದ್ದವು. ಫಕೀರರು ಮತ್ತು ಬಡವರ ಮೇಲೆ ಅದನ್ನು ಬಟವಾಡೆ ಮಾಡಲಾಯಿತು. ಏಕೆಂದರೆ ಪ್ರಳಯದ ದಿನದಂದು ಖ್ಯಾತಿಯ ವೇದಿಕೆಯ ಮೇಲೆ ಭೂಮ್ಯಾಕಾಶಗಳ ಒಡೆಯನ ವತಿಯಿಂದ ಪುರಸ್ಕಾರಗಳನ್ನು ಪಡೆಯುವಂತಹವರು ಮೇಲೆ ಹೇಳಿದ ವಿಷಯದಲ್ಲಿ ಶಾಮೀಲಾಗಲಿ. ಒಟ್ಟಾರೆ ಇಡೀ ರಾಜ್ಯಾಡಳಿತವು ಆನಂದ ಪ್ರಮೋದ ಮತ್ತು ನೆಮ್ಮದಿಯ ದೇಶದ ಆಡಳಿತಾಧಿಕಾರಿ ಮತ್ತು ನಿರಂತರವಾಗಿ ಕುಶಲ ಕ್ಷೇಮ ಮತ್ತು ನೆಮ್ಮದಿಯಿಂದ ಆವೃತವಾಗಿದ್ದ ರಾಜ್ಯದ ಮೇಲೆ ಸಂಪೂರ್ಣವಾಗಿ ಒಡೆಯನಾಗಿ ರಾಜನಾಗಿದ್ದು, ನಲವತ್ತು ದಿನಗಳ ಕಾಲ ಸಂಭ್ರಮ ಮತ್ತು ವಿಜಯದ ಆಚರಣೆಯಲ್ಲಿ ಕಳೆದು ಹೋಯಿತು. ನಲವತ್ತನೆಯ ದಿನ ರಬಿಯುಸ್ಸಾನಿ ಮಾಹೆಯ ಇಪ್ಪತ್ತೊಂದನೆಯ ತಾರೀಕು ಬುಧವಾರದ ದಿನಾಂಕವಾಗಿತ್ತು ಮತ್ತು ಆ ಹೊತ್ತಿನಲ್ಲಿ ಬಂಗಾರದ ಮಳೆ ಕರೆಯಯುವಂತಹ ಮಳೆಯ ಕಣ್ಣಿನಿಂದ ಹಝರತ್ ಬಾದಶಹರವರು ಜಗತ್ತನ್ನು ತಮ್ಮ ಅಧೀನದಲ್ಲಿ ನೀಡಲ್ಪಡುವರಾಗಿದ್ದರು. ಇಡೀ ವಿಶ್ವದ ಜನತೆಯ ಅಭೀಪ್ಸೆಗಳ ಉದ್ಯಾನವನಗಳು ಇಚ್ಛೆಯ ಗೊಂಚಲು ಮತ್ತು ಅಲ್ಲಿ ಹಾಜರಿದ್ದ ವ್ಯಕ್ತಿಗಳಿಗೆ ಶಕ್ತಿ ಮತ್ತು ತಾಜಾತನವನ್ನು ನೀಡುವಂತಹದಾಗಲಿ ಹಾಗೂ ನಿರ್ಮಲವಾದ ಹಸ್ತದಿಂದ ಕ್ಷಮೆಯ ಎಲ್ಲಾ ಜನತೆಯ

ಅವಶ್ಯಕತೆಗಳ ಸೆರಗನ್ನು ಮತ್ತು ಜನ ಸಾಮಾನ್ಯರಿಗೆ ಅಮೂಲ್ಯ ವಜ್ರ ವೈಢೂರ್ಯಗಳು ಹಾಗೂ ಅವರ ಅಭಿಲಾಷೆಯ ಸಮುದ್ರದ ಅಲೆಗಳಿಂದ ತುಂಬಾ ತುಂಬಾ ತುಂಬಿಸಲಾಯಿತು ಮತ್ತು ಆ ಹೊತ್ತಿನಲ್ಲಿ ವಿಶ್ವ ಪರ್ಯಟನೆಯನ್ನು ಮಾಡುವ ಬೆಳಗಿನ ಬಾಲ ಸೂರ್ಯನ ಹೊಳಪಿನ ಕಿರಣಗಳಿಂದ ಇಡೀ ವಿಶ್ವವನ್ನು ಪ್ರದಕ್ಷಿಣೆ ಮಾಡುವ ಸೂರ್ಯನ ರೀತಿಯಲ್ಲಿ ಬೆಳಕಿನಿಂದ ಮತ್ತು ಪ್ರಜ್ವಲಿಸುವ ಪಾನ ಪಾತ್ರೆಯನ್ನು ಕೈಯಲ್ಲಿ ಹಿಡಿದು ಆಗಮಿಸಿದನು. ಇಡೀ ಜಗತ್ತು ಸಂಭ್ರಮ ಮತ್ತು ಸಂತೋಷದ ದಿನದ ಪ್ರಕಟವಾದದ್ದರಿಂದ ಮಳೆಯ ಹನಿಗಳಿಂದ ಹೆಚ್ಚು ನಿರಾಳ ಮತ್ತು ಸಂತೋಷವನ್ನು ನೀಡಿದಂತೆ ಮಾಡಿದ ಮತ್ತು ಇಡೀ ವಿಶ್ವವನ್ನು ಸಂತೋಷ ಮತ್ತು ದುಃಖದ ಅಂಧಕಾರದ ರಾತ್ರಿಗಳ ದೌರ್ಜನ್ಯ ಮತ್ತು ಅಂಧಕಾರದಿಂದ ಮುಕ್ತಿಯನ್ನು ನೀಡಿದ ಅಭಿಮಾನೀ ಬಳಗ ಮತ್ತು ಶುಭಾಕಾಂಕ್ಷಿ ಹಾಗೂ ಬಲಿದಾನವನ್ನು ನೀಡುವಂತಹ ಜನರು ಆ ಮಾತಿನ ಮೇಲೆ ಅಂದರೆ ವಿವಿಧ ಪ್ರಬೇಧಗಳ ಪೂರ್ವಸೂಚನೆ ಮತ್ತು ಶುಭ ಸುದ್ದಿಯು ಶಾಮೀಲಾಗಿತ್ತು. ಎಂತಹ ಕ್ಷಣದಲ್ಲಿ ಚಿಂತಕರು ಮತ್ತು ಮೇಧಾವಿಗಳ ಕ್ಷಣಗಳಲ್ಲಿ ಪಾರಮಾರ್ಥಿಕ ಚಿಂತನೆಯನ್ನು ಹೊಂದಿದ ಮತ್ತು ಗ್ರಹಗತಿಗಳ ಚಲನೆಯ ಅರಿವನ್ನು ಹೊಂದಿದ್ದಂತಹವರು ಆ ಹೊತ್ತಿನಲ್ಲಿ ಇಡೀ ವಿಶ್ವ ಮತ್ತು ಭೂಮಿಯ ಮೇಲಿನಿಂದ ಸಹಸ್ರ ಸಹಸ್ರ ದರ್ಜೆಯ ಸಂತೋಷದಿಂದ ಸುತ್ತುವರೆದಿದ್ದು ವರ್ಷ ಮತ್ತು ತಿಂಗಳು ಎಂದು ತಿಳಿಯುತ್ತಾರೆ ಮತ್ತು ಆ ಕಾಲದಲ್ಲಿ ಅನಿಷ್ಟ ಜನರು ತಮ್ಮ ದುಷ್ಟ ನೆರಳನ್ನು ಹರಡುವರು ಮತ್ತು ಇಡೀ ಬುದ್ಧಿವಂತ ಮತ್ತು ಚಿಂತನಾಶೀಲ ಮೇಧಾವಿ ಆಡಳಿತದಲ್ಲಿ ಪರಿಣಿತರಾಗಿದ್ದಂತಹವರು ಒಂದು ವೃತ್ತದ ರಚನೆಯನ್ನು ಮಾಡಿಕೊಳ್ಳುತ್ತಾರೆ ಮತ್ತು ಪಿತೂರಿಯಂತಹ ಸ್ವಭಾವವನ್ನು ಹೊಂದಿದ ದಂಗೆ ಏಳುವ ಮತ್ತು ಹಗೆತನವನ್ನು ತೊರೆದು ಜನರ ಸದ್ವರ್ತನೆ ಮತ್ತು ಸುದಾರಣೆಯ ಹೊರತು ತಮಗಾಗಿ ಊಳಿಗದ ಕೃತಜ್ಞತೆಯನ್ನು ಆಜ್ಞಾಪರಿಪಾಲನೆಯ ವಿನಃ ಹೃದಯದಲ್ಲಿ ಬೇರೆ ವಿಷಯಕ್ಕೆ ಆಸ್ಪದ ಕೊಡುವುದಿಲ್ಲ. ಬಣ್ಣ ಬಣ್ಣದ ಸುಂದರವಾದ ರತ್ನಗಂಬಳಿಯ ಮೂಲಕ ಕೂಡಲೇ ಸಮತಟ್ಟಾಗಿ ಮಾಡುವುದು. ಅರಣ್ಯ ಮತ್ತು ಮರುಭೂಮಿಯನ್ನು ಮಕಮಲ್ಲಿನಂತಹ ನೆಲ ಹಾಸು ಮತ್ತು ಭಾರೀ ಮೌಲ್ಯದ ಸುಂದರವಾದ ಹೊಂಬಣ್ಣದ ಬಟ್ಟೆಗಳ ಮೂಲಕ ಸ್ವರ್ಗದ ಉದ್ಯಾನವನದ ರೀತಿಯಲ್ಲಿ ನೋಟಕ್ಕೆ ಹೊಳಪನ್ನು ನೀಡಲಾಯಿತು.

ಹಝುರತ್ ಬಾದಶಹ ಘಾಝಿ ಆ ಶುಭ ಗಳಿಗೆ ಮತ್ತು ಅಪೇಕ್ಷಿತ ಹೊತ್ತಿನಲ್ಲಿ ಸಫಲತೆಯ ಸೂರ್ಯ ಉದಯವಾಗುವುದನ್ನು ಮತ್ತು ಸೂರ್ಯನು ಶುಭ ಅದೃಷ್ಟವನ್ನು ಹೊತ್ತು ತರುವ ಹೊತ್ತಾಗಿತ್ತು. ಆಕಾಶದ ತಕ್ಕಡಿಗಿಂತಲೂ ಹೆಚ್ಚು ಕಲಾತ್ಮಕ ಮತ್ತು ಪ್ರಜ್ಞಾವಂತವಾಗಿದ್ದ ಆತಕ್ಕಡಿಯನ್ನು ಜನ ಹಾಗೂ ಬೆಂಬಲಿಗರು

ದಿಟ್ಟಿಸಿದರು. ಆ ವಜ್ರದ ತಕ್ಕಡಿಯು ನ್ಯಾಯದಿಂದ ಹೆಚ್ಚು ಉತ್ತಮ ಮತ್ತು ಅಂದವಾಗಿದೆ. ಸೂರ್ಯನಂತೆ ಬ್ರಿಜ್ ಮಹಲಿನಲ್ಲಿ ಚಂದ್ರನ ರೀತಿಯಲ್ಲಿ ಅವರು ತಕ್ಕಡಿಯಲ್ಲಿ ಆಸೀನರಾದರು. ನಿರಂತರತೆಯನ್ನು ಪಡೆಯುವಂತಹ ರಾಜ್ಯದ ಬಹು ಮುಖ್ಯ ಕರ್ತವ್ಯದ ರೀತಿಯಲ್ಲಿ ಪ್ರತಿನಿತ್ಯದ ರಾಜ್ಯಭಾರಗಳ ಕರ್ತವ್ಯಗಳ ನಿರ್ವಹಣೆಯನ್ನು ಬಾದಶಾಹೀ ಸಂಗತಿಗಳಲ್ಲಿ ಸಂಕಷ್ಟಗಳನ್ನು ಮತ್ತು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಎತ್ತಿದ ಕೈ ಮತ್ತು ಅಪೂರ್ವ ಸಾಮರ್ಥ್ಯವನ್ನು ಹೊಂದಿದವರಾಗಿದ್ದರು. ಅವರ ಬುದ್ಧಿಮತ್ತೆಯು ಇಡೀ ದೇಶದ ಒಳಿತಿನ ಕ್ರಿಯೆಗಳನ್ನು ನೋಡುವುದರಲ್ಲಿ ಅಸೀಮ ಮತ್ತು ಅಪೂರ್ವ ದೃಷ್ಟಿಯನ್ನು ಹೊಂದಿದ ಅಸಮಾನ್ಯ ಉದಾಹರಣೆಯಾಗಿದೆ.

ಕರುಣೆ ಮತ್ತು ಕೊಡುಗೆಗಳನ್ನು ಶಾಮೀಲು ಮಾಡಿ ಎಂತಹ ಬಾದಶಹನ ಪೈಕಿ ವಿಶೇಷ ಮತ್ತು ಅಸಮಾನ್ಯ ಕರ್ತವ್ಯಶೀಲನಾದ ಒಡೆಯ ಜಮ್‌ಶೀದ್ ಬಾದಶಹನಂತಹ ಸ್ವಬಾವ ಮತ್ತು ಸಂಕೇತಗಳ ಬೆಂಬಲಿಗ ಪರಿಶುದ್ಧ ನಾಮದ ಖಾನ್ ಆಗಿದ್ದಾನೆ ಮತ್ತು ಖುತುಬ್‌ಶಾಹಿಯ ಎಲ್ಲಾ ಮಂತ್ರಿಗಳು ಮತ್ತು ನೌಕರರು ಹಝರತ್ ಝಿಲ್ಲೆ ಇಲಾಹಿಯ (ಬಾದಶಾಹ್ ಫಾರೂಖಿ)ಸಲುವಾಗಿ ಪ್ರಾಣಾರ್ಪಣೆ ಮಾಡುವಂತಹ ಹೃದಯದ ಕೆಂಪು ಮಾಣಿಕ್ಯದಂತೆ ಇದ್ದರು. ಆದೇಶಗಳನ್ನು ಪಾಲನೆಮಾಡುವುದರಲ್ಲಿ ಮತ್ತು ಸುಸಂಸ್ಕೃತವಾದ ನಡವಳಿಕೆಯ ಉದ್ಯಾನವನದಲ್ಲಿ ಸರೋಪರಿಂದ ಪಕ್ಷಿಯಂತೆ ನಿಂತಿದ್ದಾನೆ. ನೆಮ್ಮದಿಯನ್ನು ಹೊಂದಿದ ವ್ಯಕ್ತಿಗಳು ಪುಷ್ಪಗಳ ನೋಟ ಮತ್ತು ಜಗತ್ತಿನ ಹೊಳೆಯುವ ಸಂಭ್ರಮದ ಉದ್ಯಾನವನವನ್ನಾಗಿ ಮಾಡಿದ್ದಾರೆ. ಅದರಲ್ಲಿ ನೋಟವನ್ನು ಪ್ರಕಾಶಮಯವನ್ನಾಗಿ ಮತ್ತು ಹೃದಯವನ್ನು ಪರಿಶುದ್ಧ ಹೊತ್ತಿನಲ್ಲಿ ಕೊಡುಗೆಯಾಗಿ ನೀಡುತ್ತಾ ಹಝರತ್ ಬಾದಶಹ ಫಾರೂಖಿಯ ಶ್ರೇಯೋಭಿಲಾಷೆ ಮತ್ತು ಕರುಣೆಯ ಪುಷ್ಪಗಳ ಸುವಾಸನೆಯಿಂದ ಯಾಚನೆಯನ್ನು ಹೊಂದಿದ್ದವರ ಮೆದುಳು ಮತ್ತು ಅಪೇಕ್ಷೆಯ ಹೃದಯಕ್ಕೆ ತಾಜಾ ಸಂತಸದಿಂದ ನಲಿಯುವಂತೆ ಮಾಡಿದರು ಹಾಗೂ ಎಲ್ಲಾ ಸೃಷ್ಟಿ ಸಂಕುಲದ ಚಳಿಗಾಲದ ಶರದೃತುವಿನಲ್ಲಿ ವೃಕ್ಷಗಳ ಎಲೆಗಳು ಬೀಳುವಂತೆ ಸಂತಸ ಮತ್ತು ಸಫಲತೆಯ ಉಡುಪಿನಿಂದ ನಗ್ನರಾಗಿದ್ದವರಿಗೆ ಉತ್ತಮ ಪೋಷಾಕನ್ನು ನೀಡಿದರು. ವಸಂತದ ಋತುವಿನಲ್ಲಿ ಸಂತೋಷ ಮತ್ತು ಭೋಗದ ಪೋಷಾಕಿನಂತೆ ಕಂಡು ಬರುವ ಪುಷ್ಪಗಳ ರೀತಿಯ ಆರಾಮ ಮತ್ತು ನೆಮ್ಮದಿಯನ್ನು ಪಡೆದು ಹೆಮ್ಮೆ ಮತ್ತು ಸಂತೋಷ ಹಾಗೂ ಶ್ರೇಯಸ್ಸನ್ನು ಹೊಂದಿದವರಂತಾದರು ಮತ್ತು ಎಲ್ಲಾ ಜೀವಂತ ವ್ಯಕ್ತಿಗಳು ಅಪಘಾತ ಮತ್ತು ಪಿತೂರಿಗಳ ನಿರ್ನಾಮ ಮತ್ತು ವಿನಾಶದ ಕಾರಣದಿಂದ ದುಃಖ ಮತ್ತು ಯಾತನೆಗಳ ದೆಸೆಯಿಂದ ಕಳವಳ ಮತ್ತು ಸಂಕಷ್ಟಗಳ ಅರಣ್ಯದಲ್ಲಿ ಅಲೆದಾಡುವಂತಹ ರೀತಿಯಲ್ಲಿ ಮತ್ತು ಅತೀವ ಕಳವಳದಿಂದ ಕೂಡಿದವರಾಗಿದ್ದರು. ಸ್ಥಿರವಾದ ಹೆಜ್ಜೆಗಳನ್ನು

ಹೊಂದಿದ ಖುತುಬ್‌ರವರಂತೆ ಪ್ರಸನ್ನವದನ ಹಾಗೂ ಸಂತಸಚಿತ್ತ ಮತ್ತು ಶೋಭೆಯ ಸ್ಥಾನದಲ್ಲಿ ತಮ್ಮ ಹೆಜ್ಜೆಯನ್ನು ಸ್ಥಿರವಾಗಿ ಹೂಡಿದರು. ಮತ್ತು ಹಝರತ್ ಬಾದಶಹ ಗಾಝಿಯವರ ಕ್ಷಮೆ ಮತ್ತು ದಾನ ಧರ್ಮದ ಮಳೆಯು ಎಲ್ಲಾ ಬೇಡುವವರ ಅಭಿಲಾಷೆಯ ತೋಟದ ಮೇಲೆ ಎಷ್ಟು ತೀವ್ರವಾಗಿ ಸುರಿಯಿತೆಂದರೆ ಬಾಯಾರಿದ ಜನರು ಶ್ರೇಯಸ್ಸು ಮತ್ತು ಕರುಣೆಯ ದೆಸೆಯಿಂದ ಸಂಪತ್ತಿನ ಮಳೆಯಲ್ಲಿ ತೋಯ್ದವರಂತಾಗಿ ವಿಜಯ ಮತ್ತು ಒಳ್ಳೆಯ ಅದೃಷ್ಟದ ರೆಂಬೆ ಮತ್ತು ಭರವಸೆ ಮತ್ತು ಅಪೇಕ್ಷೆಯ ವೃಕ್ಷದ ತಾಜಾತನ ಮತ್ತು ಹರಿದ್ವರ್ಣದಿಂದ ಕೂಡಿದಂತಾಗಿ ಫಲದಿಂದ ಸಂತುಷ್ಟರಾದರು. ಆ ಉನ್ನತ ಪರಾಕ್ರಮದ ಖುಸ್ರುವಿನ ಕೊಡುಗೆ ಮತ್ತು ಕರುಣೆಯ ಜಗವನ್ನು ಬೆಳಗುವ ಸೂರ್ಯನ ಬೆಳಕಿನಂತೆ ದುಃಖಿತ ಮತ್ತು ಯಾತನೆಯಲ್ಲಿ ಸಿಲುಕಿದ್ದ ವ್ಯಕ್ತಿಗಳ ಹಾಗು ಹೃದಯಗಳ ಮೇಲೆ ತಂಪೆರದಂತಾಗಿ ಆ ಜನರ ನೆಮ್ಮದಿಗೋಸ್ಕರ ಕೊಡುಗೆ ಮತ್ತು ಇನಾಮುಗಳನ್ನು ಎಷ್ಟೊಂದು ಹರಡಿದರೆಂದರೆ ಅವರ ಪಾಲನೆ ಪೋಷಣೆ ಮತ್ತು ಸಂಪತ್ತಿನ ಸಹಸ್ರ ಸಹಸ್ರ ಅಮೂಲ್ಯ ಮುತ್ತುಗಳು ನಿರಂತರ ನಿರಂತರವಾಗಿ ನೆಮ್ಮದಿ ಮತ್ತು ಸಂತೋಷವನ್ನು ಶಾಮೀಲು ಮಾಡಿ ಪ್ರತಿ ನಿತ್ಯ ವೈಭವ ನೆಮ್ಮದಿಯನ್ನು ಪಡೆಯುವ ಕೆಂಬಣ್ಣದ ಮಾಣಿಕ್ಯದಂತೆ ವ್ಯಕ್ತವಾಯಿತು. ಆ ಶೋಭೆಯನ್ನು ನೀಡಿದ ಮತ್ತು ಅವಶ್ಯಕತೆಗಳನ್ನು ಕೊಡುಗೆಯಾಗಿ ನೀಡಿದ ಪ್ರೇಯಸಿಯ ಅಪೇಕ್ಷೆಗಳನ್ನು ಪೂರ್ಣಗೊಳಿಸಲಿ. ಮೃಷ್ಟಾನ್ನ ಮತ್ತು ಅಮೂಲ್ಯವಾದ ಕೊಡುಗೆಗಳ ಪುರಸ್ಕಾರದ ಕಮಾನಿನಿಂದ ಹೊರಟ ಬಾಣದಿಂದ ದುಃಖ ಮತ್ತು ಸಂಕಷ್ಟದಲ್ಲಿ ಆವೃತರಾಗಿದ್ದ ಎದೆಯ ತಿದಿಯನ್ನು ರಂಧ್ರವನ್ನಾಗಿ ಮಾಡಿ ಸಂತೋಷ ಮತ್ತು ನೆಮ್ಮದಿಯ ದೇಶವನ್ನು ಅಪಘಾತ ಮತ್ತು ಸಂಕಷ್ಟಗಳ ಒಣ ಹುಲ್ಲು ಮತ್ತು ಹುಲ್ಲುಕಂಟಿಗಳನ್ನು ಕುಚೇಷ್ಟೆಗಳಿಂದ ಶುಭ್ರಗೊಳಿಸಲಾಯಿತು. ಕೊಳಲಿನ ಸಂತೋಷದ ವೃತ್ತಾಂತಗಳಾಗಿ ಗಝಲ್‌ನ ಆಲಾಪಗಳಿಂದ ಕೂಡಿ ಸಂತೋಷ ನೆಮ್ಮದಿಯ ಸಭೆಗಳಾಗಿ ಮತ್ತು ಆಸಭೆಗಳಲ್ಲಿ ಆಕ್ತಿಯಿಂದ ಎಲ್ಲರೂ ಶರೀಕಾದರು. ಒಟ್ಟಾರೆ ದೈವಭೀತಿಯ ಖಜಾನೆಗಳ ರಹಸ್ಯ ಮತ್ತು ದೈವಕೃಪೆಯ ಪ್ರಾಪ್ತಿಯ ಪರದೆಯ ರಹಸ್ಯಗಳನ್ನು ಸ್ಪಷ್ಟವಾಗಿ ಮತ್ತು ಕಂಡು ಬರುವಂತೆ ಮಾಡಲಾಯಿತು. ಹಾಗೂ ಕೈಗಳಲ್ಲಿ ಸಂತೋಷ ಮತ್ತು ಸಂಭ್ರಮದ ಮುತ್ತು ರತ್ನಗಳ ಪ್ರಜ್ಞಾವಂತಿಕೆ ಮತ್ತು ಬುದ್ಧಿ ಮತ್ತೆಯ ಶುಭಾಕಾಂಕ್ಷಿ ಜನರ ಗಮನವಿಟ್ಟು ಆಲಿಸುವ ಜನತೆಯ ಕಿವಿಗಳ ಅಂಚಿನವರೆಗೂ ತಲುಪುತ್ತಿತ್ತು ಹಾಗು ಕಾಲ್ಗೆಜ್ಜೆಯ ಮೆಲುದನಿ ಮತ್ತು ಮೆಲುಹೆಜ್ಜೆಯ ಭೂತವು ಹೃದಯಭೇದಕ ಮತ್ತು ಸಂಕಷ್ಟವನ್ನು ನೀಡುವ ದೇಶದಲ್ಲಿ ಸಂಪೂರ್ಣ ಪರಿಣಿತಿಯನ್ನು ಹೊಂದಿದ್ದ ಹೃದಯಗಳ ಕೆಳಗೆ ಬೀಳಿಸಿದ ಮತ್ತು ಅದು ಬಾಗಿಲ ಬಳಿ ಇದ್ದ ಸಂತ್ರಸ್ತ ಆತ್ಮದ ಸ್ವರ ಆಲಾಪನೆಯ ಜನರ ಗೀತ ಗಾಯನದ ಮದಿರೆಯ ನಶೆಯಲ್ಲಿ ತುಂಬಿತುಳುಕುತ್ತಿತ್ತು. ಮತ್ತು ಅದರ

ಅಂತರಾರ್ಥವೇನೆಂದರೆ ಜನರ ಶೋಕಿ ಮತ್ತು ಹವ್ಯಾಸಗಳ ನಿರಂತರತೆಯು ಚಲನಶಿಲವಾಗಿತ್ತು. ದುಃಖದ ದಾರವನ್ನು ಹರಿಯುವಂತಹ ಚಲನೆಯ ಗುಟುಕಿನಿಂದ ಉಲ್ಲಸಿತವಾದ ಹೃದಯವನ್ನು ಹೊಂದಿದ ಜನರಿಗೆ ಪ್ರಜ್ಞೆಯನ್ನು ಬರಿಸುವ ಶರಾಬು ಮತ್ತು ಸಂತೃಪ್ತಿಯ ನೀರಿನಿಂದ ಅಮಲೇರಿದವರಂತಾಗಿ ಪರಮಾತ್ಮನ ದರಬಾರಿನಲ್ಲಿ ಹಾಜರಿ ನೀಡುವವನಾಗಿ ಮಾಡಿದ. ಅವನ ಧ್ವನಿಯು ಸಂಕಷ್ಟ ಮತ್ತು ವಿಷಾದದಲ್ಲಿ ಸಿಲುಕಿದ್ದ ಹೃದಯಗಳ ಅಪೇಕ್ಷೆಯ ಭಂಡಾರವಾಗಿದೆ. ಇಂದ್ರಿಯ ಗ್ರಾಹ್ಯ ಅಪೇಕ್ಷೆಗಳು ಮತ್ತು ಪೈಶಾಚಿಕ ಸೈತಾನನನ್ನು ಪರಲೋಕದ ಸೆರೆಮನೆಯಲ್ಲಿ ಸೆರೆಯಾಳನ್ನಾಗಿ ಮಾಡಿದರು. ದೈವಸಂಪ್ರೀತಿಯ ಗಾಳಿ ಸವಾರಿಯೊಡನೆ ತಾದ್ಯಾತ್ಮತೆಯನ್ನು ಹೊಂದಿದ್ದ, ಪರಮಾತ್ಮನ ಸನ್ನಿಧಿಯಲ್ಲಿ ಸುತ್ತುವರೆದಿದ್ದಂತಹ ಜನರ ಗುರಿಯನ್ನು ಹೊಂದಿದಂತಹವರು ರೆಪ್ಪೆ ಮಿಟುಕಿಸುವುದರೊಳಗೆ ಉದ್ದೇಶದ ಗುರಿಯನ್ನು ತಲುಪಿದರು. ಪಖಾವಜ್‌ನ ಎದೆಯಾಳದ ಕಲಹ ಮತ್ತು ನೀಚತನದ ನಕಾಶೆಗಳಿಂದ ಖಾಲಿ ಮತ್ತು ಅವನ ದೇಹ ಆಕಸ್ಮಿಕವಾದ ದಾರದಿಂದ ಕಟ್ಟಲಾಗಿದೆ. ಬೃಹತ್ತಾದ ಆಕಸ್ಮಿಕಗಳ ಕಲ್ಲುಗಳನ್ನು ಎದುರಿಸಿದ ನಂತರ ಆತನ ಹೃದಯವು ಜೀರ್ಣವಾಗಲಿಲ್ಲ. ಅತೀವ ಸಂಕಷ್ಟ ತಲುಪಿಸುವಂತಹ ಹಿಂಸೆ ಮತ್ತು ದೌರ್ಜನ್ಯದ ಕೈಯಲ್ಲಿ ನಲುಗಿಯೂ ಕೂಡಾ ದುಃಖ ಮತ್ತು ಯಾತನೆಯ ತೀವ್ರತೆಯಲ್ಲಿ ಮುಳುಗಲಿಲ್ಲ. ನಿರಂತರವಾದ ಶೋಕಿಯನ್ನು ಮತ್ತು ಅಸಮಾನ್ಯವಾದ ದಸ್ತರ್‌ಖಾನ್ (ಊಟಕ್ಕೆ ಹಾಸುವ ಬಟ್ಟೆ) ಮೇಲೆ ಸೃಷ್ಟಿ ಸಂಕುಲದ ಫಲಾಪೇಕ್ಷೆಯನ್ನು ಈಡೇರಿಸಿದ ಹಾಗೂ ನೀಚ ಕಾಲಮಾನದ ದಟ್ಟ ಅರಣ್ಯವನ್ನು ಹಗಲು ರಾತ್ರಿ ಕಾಯುವ ಆಕಾಶದ ರೀತಿಯಲ್ಲಿ ಅವರ ಮೇಲೆ ಆವರಿಸಿದ. ನೆಮ್ಮದಿಯನ್ನು ಹೆಚ್ಚಿಸುವ ಗೀತೆಗಳ ಮೂಲಕ ಇಚ್ಛಿತ ಹೃದಯಗಳು ಮತ್ತು ಜೀವವನ್ನು ಹರಣ ಮಾಡುವ ಸಂಕಷ್ಟಗಳ ತುಕ್ಕಿನಿಂದ ಶುಭ್ರ ಮತ್ತು ನಿರ್ಮಲಗೊಳಿಸಿದ. ಕರುಣಾಳು ಪ್ರಭುವಿನ ಸೂರ್ಯನಂತಹ ಪ್ರಫುಲ್ಲಿತ ಕಿರಣಗಳ ಮೂಲಕ ನೆರಳನ್ನು ನೀಡುವಂತೆ ಮಾಡಿದ ಮತ್ತು ವೃದ್ಧೆಯ ದುಃಖದ ಸೈತಾನರನ್ನು ನೀಚರನ್ನಾಗಿ ತೋರುವಂತೆ ಆಕಸ್ಮಿಕವಾದ ಕಡೆಯಲ್ಲಿ ಫಲವತ್ತು ಭೂಮಿಯ ನಿಂತಂತಹ ಪರಿಸ್ಥಿತಿಯಲ್ಲಿ ಹೆಬ್ಬಾವಿನ ರೀತಿಯಲ್ಲಿ ಬಾಯನ್ನು ತೆರೆದಿರುತ್ತಾರೆ. ದುಃಖಿತ ಹೃದಯ ಮತ್ತು ಯಾತನೆಯ ಮೂಲ ಕಾರಣಗಳು ಅವಶ್ಯಕ ಮತ್ತು ಬಯಸಿದ ಬೇಡಿಕೆಯ ಜನರಿಗೆ ಸಂಭ್ರಮ ಮತು ಸಂತೋಷದ ಧ್ವನಿಯು ಅವರ ಕಿವಿಗಳವರೆಗೆ ತಲುಪಿಸಲಾಯಿತು. ಒಟ್ಟಾರೆ ಸಂತೋಷ ಮತ್ತು ಸಂಭ್ರಮದ ಮದಿರೆಯ ಪಾನಪಾತ್ರೆಯು ಜನತೆಯ ದುಃಖದ ದೆಸೆಯಿಂದ ವಕ್ರವಾಗಿದ್ದು ಬಾಗಿದ್ದವು. ಆ ಕಾರಣದಿಂದ ದುಃಖದಿಂದ ಬೇರ್ಪಡಲು ಅತೀವ ಸವಾಲುಗಳನ್ನು ಎದುರಿಸಬೇಕಾಗಿದ್ದು ಅದನ್ನು ಕೊನೆಗಾಣಿಸುವ ಸಲುವಾಗಿ ಮಾನವರು ಅಸಂಭಾವ್ಯ ಎಂದು ತಿಳಿದಿದ್ದರು. ಅವರಿಗೆ ಹೇಳಲಾಯಿತು, ಈ ಜಗತ್ತಿನಲ್ಲಿ ಆರಾಮದ ಸ್ಥಳದಲ್ಲಿ ಇರುವಂತಹ ಜನರ ದೃಷ್ಟಿ

ಮತ್ತು ನೋಟದ ಅಪೇಕ್ಷೆಯನ್ನು ಮುತ್ತು ರತ್ನಗಳ ಕಾಡಿಗೆಯ ಮೂಲಕ ಸೂರ್ಯನಿಗಿಂತಲೂ ಹೆಚ್ಚು ಪ್ರಕಾಶಮಯವನ್ನಾಗಿ ಮಾಡಿದ. ದ್ರಾಕ್ಷಿಯ ಶರಾಬಿನ ಪಾನಪಾತ್ರೆಯು ಹೃದಯದ ನೋಟಕ್ಕೆ ಹೊಳಪನ್ನು ಮತ್ತು ಮೆರಗನ್ನು ನೀಡಿ ಪುಷ್ಪದ ಪಾನಪಾತ್ರೆಗಿಂತಲೂ ಹೆಚ್ಚು ಸಂತಸಮಯ ನೋಟದಲ್ಲಿ ಕಂಗೊಳಿಸಿದ. ಅತೀವ ಸಂಭ್ರಮದಿಂದ ಆ ಶರಾಬನ್ನು ಆಬೆ ಖೈವಾನ್‌ನಂತೆ ಅವನ ಖಾಯಮ್ ಆಶ್ರಯ ತಾಣವನ್ನಾಗಿ ಮಾಡಿದ. ಮಾನವ ಜೀವಿಯ ಉದ್ದೇಶ ಮತ್ತು ಗುರಿಯ ನವ ವಧುವಿನ ವಿರಹದ ಮೈದಾನದಲ್ಲಿ ಗಂಧರ್ವ ಕನ್ಯೆಯಂತಹ ಮೋರೆಯನ್ನು ಹೊಂದಿದ ಸುಂದರಿಯರಂತೆ ಬಂದು ತಲುಪಿದರು. ಅನ್ವೇಷಣೆ ಮತ್ತು ಅಪೇಕ್ಷೆಯ ಮಶಾತ (ಮಹಿಳೆಯರನ್ನು ಅಲಂಕರಿಸುವ ದಾಸಿ)ಳ ಸೇವೆಯ ಅಗತ್ಯವಿಲ್ಲದೆ ಅತ್ಯಂತ ಸುಂದರವಾಗಿ ಸನ್ನದ್ಧಳಾದಳು ಮತ್ತು ವಾಸ್ತವವಾಗಿ ಎಂತಹ ಸಮಾರಂಭವೆಂದರೆ ಅದರ ಮೂಲೆ ಮೂಲೆಯಲ್ಲಿಯೂ ಸುಗಂಧಭರಿತವಾಗಿ ನಾಜೂಕಾಗಿ ಇಳಿ ಬಿದ್ದಿದ್ದ ನೀಳವಾದ ತಲೆಗೂದಲನ್ನು ಹೊಂದಿದ್ದ ಮತ್ತು ಸೂರ್ಯನಂತಹ ಮೋರೆಯನ್ನು ಹೊಂದಿದ್ದಂತಹ ಹೃದಯವನ್ನು ಅಂಬರೀನ್ ಸುವಾಸನೆಯ ಸುಗಂಧಪೂರಿತ ಮುಂಗುರುಳಿನ ಮಾಲೀಕನು ಸೂರ್ಯನ ಕಿರಣಗಳಂತಹ ಗೊಂದಲವನ್ನು ಉಂಟುಮಾಡಿದ ಹೃದಯಗಳನ್ನು ಚಂದ್ರನಂತಹ ಚೆಹರೆಯನ್ನು ಹೊಂದಿದ ನೀಳ ಕೂದಲಿನ ವೈಯಾರದಿಂದ ಬಳಕುವ ದಾರಗಳಿಂದ ಸೆರೆಮನೆಯಲ್ಲಿ ನಿರತರಾಗಿದ್ದರು. ಅವರಿಗೆ ಮುಕ್ತಿ ಮತ್ತು ಬಿಡುಗಡೆಯನ್ನು ನೀಡಲಾಯಿತು ಮತ್ತು ಅವರಿಗೆ ಆ ಕಾಲದಲ್ಲಿ ಎಷ್ಟು ನಿರೀಕ್ಷೆಯ ರಭಸದ ಗಾಳಿಯು ಅಮಾನ್ ಸಮುದ್ರದ ಸುಳಿಯ ದೌರ್ಜನ್ಯದ ಶಿಕಾರಿಯಾಗಿದ್ದರು ಮತ್ತು ದುಃಖ ಹಾಗೂ ಯಾತನೆಯ ಸುಳಿಯಲ್ಲಿ ಸಿಕ್ಕಿ ಬಿದ್ದಿದ್ದರು. ಅವರಿಗೆ ನೆಮ್ಮದಿ ಮತ್ತು ಸಂತಸದ ಶಿಕ್ಷಣ ಮತ್ತು ಸಂತೋಷ ನೀಡಿದ್ದು ನೆಮ್ಮದಿಯ ನಾವಿಕನಾಗಿದ್ದಾನೆ, ಅವರಿಗೆ ಸಮುದ್ರದ ಕಿನಾರೆಯಲ್ಲಿ ಆರಾಮದಿಂದ ತೊಡಗಿಸಲಾಯಿತು. ನ್ಯಾಯದ ಮೇಲ್ವಿಚಾರಕ ಮತ್ತು ಮಾರ್ಗದರ್ಶಕನ ಕಾನೂನು ಮತ್ತು ತಿಳುವಳಿಕೆಯ ಮೇರೆಗೆ ಮೂಲೆ ಮೂಲೆಯಲ್ಲಿ ಕಟ್ಟಪ್ಪಣೆಯನ್ನು ಜಾರಿ ಮಾಡಲಾಯಿತು. ಅದೇನೆಂದರೆ ಪಿತೂರಿಕೋರ ಮತ್ತು ರಕ್ತಪಾತವನ್ನು ಎಸಗುವವರಿಗೆ ಸಾವು ಕಟ್ಟಿಟ್ಟ ಬುತ್ತಿ. ಆ ಮೂಲಕ ದಂಗೆ ಮತ್ತು ಪಿತೂರಿಯ ಮನೆಯನ್ನು ಕುಲಗೆಡಿಸುವುದು ವಿನಾಶಕಾರಿಯಾದುದರ ಹೊರತು ಬೇರೆನೂ ಅಲ್ಲ. ಹಿಂಸೆಯ ಹೆಚ್ಚಳದಿಂದ ಮತ್ತು ದೌರ್ಜನ್ಯದ ದೆಸೆಯಿಂದ ಈ ಪ್ರಪಂಚದಲ್ಲಿ ಈ ರೀತಿಯಲ್ಲಿ ಬಿಸಿಬಿಸಿ ಚರ್ಚೆಗೆ ಅವಕಾಶವಾಗಿ ಶಾಂತವಾಯಿತು ಹಾಗೂ ಹಿಂಸೆ ಮತ್ತು ದೌರ್ಜನ್ಯದ ಹಸ್ತ ಹಾಗೂ ವಿದ್ರೋಹದ ಶರದೃತುವಿನ ಕಾಲವು ಉದ್ಯಾನವನಗಳ ವಸಂತದ ಸೆರಗನ್ನು ಮುಟ್ಟಲಿಲ್ಲ ಮತ್ತು ಆ ಪರಿಸ್ಥಿತಿಯಲ್ಲಿ ಆ ವಿಶ್ವವಿಖ್ಯಾತ ಸಮಾರಂಭದ ದಿನವನ್ನು ಸೂರ್ಯನ ಉದಯದ ಭರವಸೆಯ ಮೇರೆಗೆ ದಿನಾಂಕವನ್ನು

ಸುರ್ಯೋದಯದ ಹೊತ್ತು ಎಂದು ನಿಗದಿ ಪಡಿಸಲಾಯಿತು. ಆ ಹೊತ್ತು ಪರಮಾತ್ಮನ ಕೊಡುಗೆಗಳ ಪ್ರದರ್ಶನವಾಗುವ ಮೂಲಕ ಮತ್ತು ಭರವಸೆ ಹಾಗೂ ಅಪೇಕ್ಷೆಯ ಉದ್ಯಾನವನದ ಮುಗುಳು ನಗೆಯ ವಾತ್ಸಲ್ಯವು ಪರಮಾತ್ಮನ ಮುಂಜಾವಿನ ಬೆಳಕಿನಿಂದ ಕೂಡಿದೆ.

■

*

ಅಧ್ಯಾಯ-೧೪

ಅಲಿ ಆದಿಲಶಹನ ಕವಿತೆಗಳು

ಹಝರತ್ ಬಾದಶಹ ಘಾಝಿಯವರು ಸಾಹಿತ್ಯಕ್ಷೇತ್ರದಲ್ಲಿ ಸಹೃದಯರಾಗಿದ್ದು, ಅದೃಷ್ಟದ ಗ್ರಹಗತಿಯ ಪರಿಣಿತ, ಗಣಿತ ಶಾಸ್ತ್ರಜ್ಞ ಮತ್ತು ಅರ್ಹತೆಯನ್ನು ಗುರುತಿಸುವವರು ಮತ್ತು ಪ್ರಶಂಸೆಯ ಗುಣವನ್ನು ಹೊಂದಿದ್ದು ಜೀವ ಮತ್ತು ಗಳಿಗೆಗಳ ರಹಸ್ಯವನ್ನು ಅರಿತವರಾಗಿದ್ದು ಸೂರ್ಯನ ವಿಕಾಸದ ಪಥದಲ್ಲಿ ತಲುಪಿಸುವ ಜ್ಯೋತಿಷ್ಯ ಶಾಸ್ತ್ರದ ವಿದ್ಯೆ ಮತ್ತು ಚಿಂತನೆ ಹಾಗೂ ಆಲೋಚನೆಯ ಮಾನಸಿಕ ಸಂಘರ್ಷದ ಕ್ಷೇತ್ರದಲ್ಲಿ ಅರಿತವರಾಗಿದ್ದು ಚಲನಶೀಲತೆಯ ಅಣುವಿನ ರೀತಿಯಲ್ಲಿ ಬುದ್ಧಿ ಮತ್ತು ಚಿಂತನೆಯ ಜಗತ್ತಿನಲ್ಲಿ ತೊಡಗಿಸಿಕೊಂಡವರು. ಸೂಕ್ಷ್ಮ ದೃಷ್ಟಿಯ ಲೆಕ್ಕ ಪರಿಶೋಧಕ ವ್ಯಕ್ತಿಗಳು ಪಾರಮಾರ್ಥಿಕ ದೃಷ್ಟಿಯ ಎತ್ತರದ ಅರಿವನ್ನು ಮತ್ತು ಚುಕ್ಕಿಯಿಂದ ಚುಕ್ಕಿಯವರೆಗಿನ ಪಯಣದ ತಿಳುವಳಿಕೆ ಮತ್ತು ಮುನ್ನಡೆಯ ಹಾದಿಯಲ್ಲಿ ನವಜಾತ ಶಿಶುವಿನಂತೆ ಅಸಹಾಯಕರು ಮತ್ತು ದುರ್ಬಲರಾಗಿದ್ದಾರೆ. ಚಿಂತನೆ ಮತ್ತು ಬುದ್ಧಿಮತ್ತೆಯ ಮುನ್ನಡೆಯಲ್ಲಿ ಪ್ರಮಾದ ಮತ್ತು ಮರವೆಯನ್ನು ತಂದೊಡ್ಡುತ್ತಾರೆ ಹಾಗೂ ರಹಸ್ಯದ ಸೂಕ್ಷ್ಮ ಒಳನೋಟಗಳನ್ನು ನೀಡುವಂತಹ ಮತ್ತು ಪರಮಾತ್ಮನ ದೈವ ಪ್ರೇರಣೆಯನ್ನು ಮುಂದಿಡುವ ಅಂತರ್ಜ್ಞಾನವನ್ನು ಹೊಂದಿದ ಸಂಕೇತಗಳ ಮೂಲಕ ಪಂಕ್ತಿಗಳು ಮತ್ತು ಸಾಲುಗಳಿಂದ ಪ್ರವಚನ ಮತ್ತು ಲಿಖಿತ ಸಂಬಂಧದಲ್ಲಿ ಚಿತ್ರಭಂಜನವನ್ನು ಮಾಡಿರುತ್ತಾರೆ.

ತಕ್ಕಡಿಯ ತಟ್ಟೆಗಳು ಚಂದ್ರ ಮತ್ತು ಸೂರ್ಯನಂತಾದವು
ನಿನ್ನ ತೂಕದ ನಂತರ ನ್ಯಾಯದ ಮಹಲಿನ ಬಾಗಿಲಿನಂತೆ
ಹೃದಯದ ಚರಿತ್ರೆಯ ಸಂತುಲಿತ ಆರೋಗ್ಯದಿಂದ ಮುತ್ತುಗಳನ್ನ
ಪಡೆದುಕೊಂಡು ನ್ಯಾಯದ ತಕ್ಕಡಿಯ ಮೇಲೆ ಬೆಳಕನ್ನು ಬೀರಿದ

ಇಂತಹ ಪವಿತ್ರ ಮತ್ತು ಸೂಕ್ಷ್ಮ ಹೊತ್ತಿನಲ್ಲಿ ಜಹಾಂಪನಾಹ್‌ರವರು ಸಭ್ಯತೆ ಮತ್ತು ವಿದ್ವತ್ತು ಹಾಗೂ ನಿಪುಣತೆಯಿಂದ ಸ್ಪಷ್ಟವಾದ ಶಬ್ದಗಳ ಮೂಲಕ ಶಾಹ್ ಅಬುಲ್ ಮಾಲಿಯವರ ದರಬಾರಿನಲ್ಲಿ ಗದ್ಯ ಮತ್ತು ಪದ್ಯದ ಆಯ್ದ ಮುತ್ತುಗಳನ್ನು ವಿಜಯ ಮತ್ತು ಚಿಂತನೆಯ ನಿಪುಣ ಮುತ್ತುಗಳ ಪ್ರಾಪ್ತಿಗಿಂತಲೂ ಹೆಚ್ಚು ಉತ್ತಮ ಎಂದು ತಿಳಿದು ಆ ಮುತ್ತುಗಳು ಯಾವುದೆಂದರೆ ರಾತ್ರಿಯಲ್ಲಿ ನಕ್ಷತ್ರಗಳಿಂದ ಸತ್ಯವಾಗಿದೆ ಎಂದು ಪ್ರಮಾಣ ಪತ್ರ ಪಡೆದು ನಗದಿನ ಮೂಲಕ ಕ್ರಯ ಮಾಡಲಿ ಮತ್ತು ಸ್ವಾಭಾವಿಕ ಪ್ರೇಮ, ವಾತ್ಸಲ್ಯ ಹಾಗೂ ಪ್ರಾಣಾರ್ಪಣೆಯ ಮೂಲಕ ಅವಶ್ಯಕತೆಯನ್ನು ಪಡೆಯುವ ಹಝುರತ್ ಬಾದಶಹ ಘಾಝಿಯವರ ಕವನಗಳನ್ನು ಒಟ್ಟುಗೂಡಿಸುವುದರಲ್ಲಿ ತೊಡಗಲಿ ಮತ್ತು ಅವರ ಪ್ರತಿಯೊಂದು ಕವನವೂ ಕೂಡ ಬೆಳಗಿನ ಮುಂಜಾವಿನಂತಹ ಅರ್ಥ ಮತ್ತು ಬೆಳಗಿನ ಸೂರ್ಯನ ಕಿರಣಗಳಂತಿದೆ. ಮತ್ತು ಅವರ ಪ್ರತಿ ಶಬ್ದವು ಮಧುರ ಚಿಲುಮೆಯೋಪಾದಿಯಲ್ಲಿ ಮತ್ತು ಪ್ರಾಣಪ್ರಿಯ ಸಂಕೇತಗಳನ್ನು ಹೊಂದಿದೆ. ಮತ್ತು ಅವರ ಕಾವ್ಯದ ಪ್ರತಿಯೊಂದು ಚರಣವು ಎಂತಹ ಶರಾಬೆಂದರೆ ಅದರ ಅಂತರಾರ್ಥವು ಉತ್ತಮವಾದ ನಶೆಯೇರಿಸುವ ಶರಾಬಿಗಿಂತಲೂ ತುಂಬಿ ತುಳುಕುತ್ತಿದೆ.

ಅವರ ಕವನವು ಎಂತಹ ಉದ್ಯಾನವನವೆಂದರೆ ಅತ್ಯಂತ ಸುಂದರವಾದ ಮತ್ತು ಅತ್ಯಾಕರ್ಷಕವಾದ ವಿಷಯ ವಸ್ತುವಿನಿಂದ ಕೂಡಿದ್ದು ಸುಗಂಧಪೂರಿತ ಗಾಳಿಯಲೆಗಳಿಂದ ಆವೃತವಾಗಿದೆ. ಅವರ ಪ್ರತಿ ಘಝುಲ್ ಪರಿಯಂತಹ (ಗಂಧರ್ವ ಕನ್ಯೆಯಂತಹ) ಮೋರೆಯನ್ನು ಹೊಂದಿದ ಪ್ರೇಯಸಿಯಂತಿದ್ದಾಳೆ. ಅಲ್ಲಿ ಸಹೃದಯತೆಯ ಎಲ್ಲಾ ಚಮತ್ಕಾರಗಳು ಮತ್ತು ಕೇಂದ್ರವನ್ನು ಹೊಂದಿದ ಜನರ ಹೃದಯವನ್ನು ಆಕರ್ಷಿಸಲು ಮತ್ತು ಗಾಯನದ ಕಲಾತ್ಮಕತೆಯ ಚತುರತೆ ಮತ್ತು ಪರೀಕ್ಷೆಯಲ್ಲಿ ತೊಡಗಿಸಲಿ ಮತ್ತು ಅವರ ಕವನದ ಪ್ರತಿ ಶಬ್ದವು ಉದ್ಯಾನವನದ ವೃಕ್ಷಗಳ ಮುತ್ತು ರತ್ನಗಳಾಗಿವೆ. ಅಂತರಾರ್ಥದ ಸೂರ್ಯ ಕಿರಣಗಳು ಮತ್ತು ಗದ್ಯಬರವಣಿಗೆಯ ಶಾಯಿಯಿಂದ ಕಗ್ಗತ್ತಲ ಹೃದಯ ಮತ್ತು ಭಾರವಾದ ಹೃದಯವನ್ನು ಹೊಂದಿದ ಜನರಿಗೆ ಅತ್ಯಂತ ಪ್ರಕಾಶಮಯ ಮತ್ತು ವರ್ಣ ರಂಜಿತವನ್ನಾಗಿ ಮಾಡಲಿ. ಅವರ ಕವನದ ಪ್ರತಿ ಚರಣವೂ ಕೂಡ ಜೀವಂತವಾಗಿ ಮಿಡಿಯುವಂತಿದೆ ಹಾಗೂ ಅನಾರೋಗ್ಯದಿಂದ ನರಳುತ್ತಾ ಹಾಸಿಗೆ ಹಿಡಿದಿರುವ ರೋಗಗ್ರಸ್ತ ಜನರಿಗೆ ಸಾಂತ್ವನವನ್ನು ನೀಡುವ ಮತ್ತು ಆರೋಗ್ಯ ಸಂಪನ್ನತೆಯನ್ನು ದೊರಕಿಸಿಕೊಡುವಂತಹದಾಗಿದೆ. ಅವರ ಕಾವ್ಯದ ಪ್ರತಿ ವ್ಯಕ್ತಿಯು ಅಮಾನ್ ಸಮುದ್ರದ ಸಶಕ್ತ ಸಂಪತ್ತಿನ ಆಳದಲ್ಲಿ ಮುಳುಗುವವನಾಗಿದ್ದು ಪ್ರತಿ ಸಾರಿ ಮುಳುಗಿದಾಗಲೂ ಅತೀವ ಹೊಳಪಿನ ಮೆರಗನ್ನು ನೀಡುವ ಮುತ್ತನ್ನು ಪಡೆಯುವವನಾಗುತ್ತಾನೆ. ಅವುಗಳು ದರ್ಜೆ ಮತ್ತು ವಿಸ್ತಾರದಲ್ಲಿ ನೂರು ಕೆಂಪು ಮಾಣಿಕ್ಯಕ್ಕಿಂತಲೂ ಶ್ರೇಷ್ಠ ಮತ್ತು ಉತ್ಕೃಷ್ಟವಾದುದಾಗಿವೆ. ಅವುಗಳು

ಅತೀವ ಸುಮಧುರ ಮೋರೆಯ ಮತ್ತು ವಿಜಯಪ್ರಾಪ್ತಿಯನ್ನು ಹೊಂದಿದವುಗಳಾಗಿವೆ. ಅವರ ಕಾವ್ಯದ ಪ್ರತಿ ರುಬಾಯಿಯು ಕಲ್ಲಿನ ಅಮೃತವಾಗಿದೆ ಮತ್ತು ಧೂಳಿನ ಗುಡ್ಡದಲ್ಲಿ ಸೋತ ಹೃದಯವನ್ನು ಹೊಂದಿದ ಜನರಿಗೆ ಪ್ರತಿಕ್ಷಣವೂ ಹೊಸ ಬದುಕನ್ನು ನೀಡುವಂತಹದಾಗಿದೆ. ಮತ್ತು ನಿರಂತರವಾಗಿ ಶಾಶ್ವತ ಹಾಗೂ ಅನಂತತೆಯನ್ನು ನೀಡುವಂತಹದಾಗಿದೆ. ಅದು ಸಹೃದಯತೆ ಮತ್ತು ಸಂಭಾಷಣೆಯಲ್ಲಿ ಚಿರಪರಿಚಿತವಾಗಿದ್ದು ಪಾರಮಾರ್ಥಿಕ ಆಯಾಮವನ್ನು ಕೂಡ ಹೊಂದಿದೆ. ಅವರ ಕಾವ್ಯದ ಪ್ರತಿಯೊಂದು ಆದ್ಯತೆಯು ದುಃಖಿತ ಹೃದಯಕ್ಕೆ ಆಹ್ಲಾದತೆಯನ್ನು ಕರುಣಿಸುವುದಾಗಿದೆ.

ಅವರ ಕಾವ್ಯದ ಸಂಯೋಜನೆಯು ರುಬಾಯಿಯ ಮಿಡಿಯುವ ಜೀವ ಮತ್ತು ಆತ್ಮ ಪ್ರತ್ಯಯದ ಮೂಲಕ ತಮ್ಮ ಸಮಕಾಲೀನರು ಮತ್ತು ಸಮಭಾವದ ಖ್ಯಾತಿಯನ್ನು ಹೊಂದಿದ್ದು ಅತ್ಯಂತ ಶ್ರೇಷ್ಠ ಅದ್ವಿತೀಯ ಹಾಗು ವಿಶಿಷ್ಟ ಮತ್ತು ಮೇಲ್ದರ್ಜೆಯದಾಗಿದೆ. ಆ ಸಂಭ್ರಮವನ್ನು ತಲಪುವಂತಹ ಸಂತೋಷವನ್ನು ನೀಡುವ ಶುಭಗುಣದ ಸ್ತುತಿ ಮತ್ತು ಪ್ರಶಂಸೆಯ ಗೀತೆಯನ್ನು ಅದರಲ್ಲಿ ಕವಿತೆಗಳು ನಗರ ಮತ್ತು ಸೈನ್ಯಕ್ಕಿಂತಲೂ ಹೆಚ್ಚು ಹಾಗೂ ಅಂಬರ್ ಮತ್ತು ಮಶಕ್‌ನಿಂದಲು ಹೆಚ್ಚು ಸುಗಂಧಪೂರಿತ ಮತ್ತು ಅಶ್ವಹೃದಯದ ಪರಿಣಿತರ ಸಲುವಾಗಿ ಹೆಚ್ಚು ಮಹತ್ವಪೂರ್ಣ ಪವಿತ್ರ ಹಾಗೂ ಸಭ್ಯ ಕಿವಿಗಳಲ್ಲಿ ತಲುಪಿಸಿದಾಗ ಸಹಸ್ರ ಸಹಸ್ರ ಹೊಗಳಿಕೆಗಳು ಹಾಗೂ ಪ್ರಶಂಸೆಗಳಿಂದ ಕೂಡಿದ ಅದ್ವತೀಯವಾದ ಸಾಹಿತ್ಯ ಕೃಷಿಯು ವಿದ್ವತ್ ಜನರ ನಡುವೆ ಅಸೂಯೆ ಪಡುವಂತೆ ಆಯಿತು.

■

*

ಅಧ್ಯಾಯ–೧೫

ಅಲಿ ಆದಿಲಶಹನ ಆಣತಿಯಂತೆ ಬರೆದ ಕಸೀದಾ (ಚರಿತ್ರ ಕತನ ಕವಿತೆ)

ಆ ಪಾಲನ್ನು ಪಡೆದಿರುವ ಹಝರತ್ ಬಾದಶಹರವರು ಅಪ್ಪಳಿಸುವ ಬೆಳಕಿನ ಸಹಾಯವನ್ನು ಪಡೆದವರಾಗಿದ್ದಾರೆ. ಈ ಗೀತೆಯನ್ನು ಬರೆಯುವಂತೆ ನನಗೆ ಆದೇಶವನ್ನು ನೀಡಲಾಗಿದೆ. ಏಕೆಂದರೆ ಅವು ಅತೀವ ಸಂತೋಷ ಮತ್ತು ವಿರಾಮ ಹಾಗು ಸಂಭ್ರಮ ಮತ್ತು ಅನಂದದ ಮೂಲ ಕಾರಣವಾಗಿವೆ. ಇದನ್ನು ತಾರೀಖ್–ಎ– ಖುರ್ಷೀದ್‌ನಲ್ಲಿ ಪ್ರಕಟ ಪಡಿಸಲಾಗಿದೆ.

ಕಪಟದ ಬಾಚಣಿಗೆಯು ಮುಂಗುರುಳಿನ ಉಭಯ ಗಂಟನ್ನು ಬಿಚ್ಚಿತು.
ಕಸ್ತೂರಿಯ ಚೀಲವು ಹೃದಯದಿಂದ ಹೊಳೆಯುವ ಗಂಟಿನಂತೆ ಕಂಡು ಬಂದಿತು
ನಾನು ಅವನಿಗೆ ಹೇಳಿದೆ ಹುಬ್ಬಿನಿಂದ ಗಂಟನ್ನು ಬಿಚ್ಚು . ಅವ ಹೇಳಿದ ಕತ್ತಿಯ

ಅಮೂಲ್ಯ ಹಿಡಿಯಿಂದ ಗಂಟನ್ನು ಹೊರ ತೆಗೆಯಲಾಗುವುದಿಲ್ಲ
ಗಂಟನ್ನು ಹಾಕು ಪ್ರೀತಿಯ ಮೂಲಕ ಹೃದಯದ ಬಾಂಧವ್ಯದಲ್ಲಿ
ಆದ್ದರಿಂದ ಕಡಿಮೆ ವೇದನೆಯಾಗುವುದು ದಾರದಲಿ ಗಂಟು ಬಿದ್ದಲ್ಲಿ
ರೆಪ್ಪೆಯ ಅಂಚಿನಿಂದ ನಾನು ಕಂಬನಿಯ ಗಂಟನ್ನು ಸಡಲಿಸಿದ್ದೇನೆ
ಯಾವ ಕೌಶಲ್ಯದಿಂದ ಮುಳ್ಳಿನ ಮೊನೆಯಿಂದ ಗಂಟು ತೆರೆಯುವುದೋ ಅಂತೆ
ವಿರಹದ ದುಃಖಿತ ಹೃದಯದಿಂದ ಗೊಂಚಲಿನ ಸ್ವಭಾವದ ಹಾಸಿಗೆಯಾದಲ್ಲಿ
ಅದರಿಂದ ನಾನು ಸಂತಸದಿಂದಿದ್ದೇನೆ, ಏಕೆಂದರೆ ಮತ್ತೊಮ್ಮೆ

ಬೆಳಗಿನ ತಂಗಾಳಿಯು ಗಂಟನ್ನು ತೆರೆಯುವುದು
ಕೊಡುಗೈಯ ಗಗನದ ಧರ್ಮಪೋಷಕ
ಬಾದಶಹನು ಬಂಗಾರವನ್ನು ಸಿಂಗರಿಸಲು
ಗಂಟಿನ ಮೇಲೆ ಕೈಯನ್ನಿಡುವುದಿಲ್ಲ
ಅಲಿ ಆದಿಲ್ ಶಾಹರು ರಾಜ್ಯಗಳ ಒಡೆತನ ಹೊಂದಿರುವವರು
ಹೊಂದಿರುವ ಕರುಣೆಯು ಗಂಟುಗಳನ್ನು ವಿಸ್ತರಿಸುತ್ತದೆ.
ಆನಂದ ಮತ್ತು ಸಮೃದ್ಧಿಯ ದಿನಗಳಲ್ಲಿ ತಕ್ಕಡಿಯಲ್ಲಿ ಸ್ವತಃ ಆಸೀನನಾದ
ಆಗ ಅವನ ನೆರಳಿನ ಬಾಂಧವ್ಯದಿಂದ ಸ್ಮರಣಾರ್ಹ ಗಂಟು ಮೂಡಿ ಬಂದಿತು
ಗಗನವು ಶುಕ್ರಗ್ರಹದಂತೆ ಆನಂದತುಂದಿಲವಾಗಿ ಆರಾಮದಿಂದ ನರ್ತಿಸತೊಡಗಿತು
ದೇವಚರ ಫರಿಶ್ತೆ ನುಡಿದ ಉತ್ತಮ ಚೆಲುವಿನ ಹೆಚ್ಚಳವಾಗಲಿ ಗಂಟಿನೊಳಗೆ
ಎಂತಹ ಬಾದಶಹನೆಂದರೆ ಸುಶ್ರಾವ್ಯ ಕಂಠದ ಹಿರಿತನವು
ವಿಸ್ತರಿಸುತ್ತದೆ ರಹಸ್ಯದಿಂದ ಉಪಕಾರವನು ಅದೆಂದರೆ
ಸಹಸ್ರ ಗಂಟುಗಳ ಜಗದ ಕೆಲಸಗಳಲ್ಲಿ ತೊಡಗಿದ್ದರೂ
ಆ ಪ್ರತಿಯೊಬ್ಬ ವ್ಯಕ್ತಿಯು ಹೃದಯದಾಳದಿಂದ ಹೃದಯದ ಮೇಲೆ
ಗಂಟು ಹಾಕಿದ್ದ ಬಾದಶಹನ ಕರುಣೆಯಿಂದ ವಿನೀತ ವ್ಯಕ್ತಿಯ
ಹೃದಯದಿಂದ ಗಂಟು ಸಡಿಲವಾಯಿತು
ಹುಟ್ಟು ಹಬ್ಬದ ಬಗ್ಗೆ ಎಂತಹ ನಂಬಿಕೆ ಜಗದಲಿ ಉಂಟಾಯಿತೆಂದರೆ
ಬೆಣ್ಣೆಯ ಜಾಗದಲ್ಲಿ ನಂಬಿಕೆಯಲ್ಲಿ ಗಂಟು ಬಿದ್ದಿತು
ಬಾದಶಹನು ಸಿಂಹಾಸನದಲಿ ಆಸೀನನಾದಾಗ ಆ ಹೊತ್ತಿನಲಿ
ಎಲ್ಲಾ ವಿಧಗಳಿಂದಲೂ ಎಲ್ಲಾ ಕೆಲಸಗಳಿಂದಲೂ ಗಂಟು ತೆರೆಯಿತು
ಗಗನವನ್ನು ಸೆರಗಿನಿಂದ ಕಿವಿಯನ್ನು ಹೃದಯದಿಂದ ಮತ್ತು
ಮುತ್ತನ್ನು ತುಟಿಯಿಂದ ತರೆಯಲಾಗಿದೆ
ಗಂಟನ್ನು ನಿವಾಳಿಸಿದ ನಂತರ ಅಪೇಕ್ಷೆಯ ಮೂಲಕ
ಲೋಕಪಾಲಕ ಬಾದಶಹ ಚಕ್ರವರ್ತಿಯು ಗಂಟು ಹಾಕಿದ
ಸಂವತ್ಸರದಿಂದ ತುಂಬಾ ತುಂಬಾ ಖ್ಯಾತಿಯ ಪಡೆದ
ಮೋಡದ ಗೆಳೆತನದಿಂದ ನಿನ್ನ ಕೈ ಕಟ್ಟಿ ಹಾಕಿದಂತಾಗುವುದು
ತಮ್ಮ ಅಂತರಂಗದ ಒಲವಿಗಾಗಿ ಸುರಿಯುತಿದೆ ಮಳೆಯ ಗಂಟು
ನಿನ್ನ ಅವಧಿಯಲಿ ಬಾಚಣಿಗೆಯ ವಿನಃ ಯಾವ ವ್ಯಕ್ತಿಯೂ
ಕೂಡ ದುಃಖಿತನಾಗುವುದಿಲ್ಲ. ಅಸಂಖ್ಯ ಮುಂಗುರುಳುಗಳನ್ನು
ಸುರುಳಿಯನ್ನಾಗಿಸಿ ಗಂಟು ಹಾಕಲಾಗಿದೆ
ಯಾವ ವ್ಯಕ್ತಿಯೂ ಕೂಡಾ ದಾನ ಧರ್ಮ ಮತ್ತು

ಮಹಾನತೆಯ ಪಾರಿತೋಷಕವನು ಪರಿಗಣಿಸಲಿಲ್ಲ ಜಪಮಾಲೆಯ
ದಾರದ ಮೇಲೆ ಸಾವಿರಾರು ಗಂಟನ್ನು ಹಾಕಿದಾಗ್ಯೂ
ಗೊಂಚಲಿನ ಗಂಟನ್ನು ಉಪಕಾರದ ಮಂಜಿನ
ಹನಿಯಿಂದ ತೆರೆಯಲಾದಾಗ ಹೃದಯದ ಮೇಲಿನ
ಧೂಳಿನ ಗಂಟಿನಿಂದ ಗಾಳಿಯಾಡಿಸಿದರು
ಬಾಲ್ಯ ಮತ್ತು ವಾರ್ಧಕ್ಯದ ಹೊರತು ನನ್ನ ದೇಶದ

ಶತ್ರುಗಳ ಒಡೆಯನು ಯಾವ ವ್ಯಕ್ತಿಯು ನೀಲವರ್ಣದ
ಗಗನಕ್ಕೆ ಬೆಲೂನಿನ ಗಂಟಿನ ನಂಟನ್ನು ಮಾಡಿರುವನು
ಕ್ಷಮೆ ಮತ್ತು ಕೊಡುಗೆಯ ನಂತರ ಮುತ್ತುಗಳ ಮೇಲೆ
ಎಂದೆಂದಿಗೂ ಗಂಟನ್ನು ಹಾಕಲಿಲ್ಲ ಆದರೆ
ತನ್ನ ಮುಂಗುರುಳಿನಿಂದ ಗಂಟನ್ನು ನೇರಗೊಳಿಸಿದ
ಯಾವ ಹೊತ್ತಿನಲ್ಲಿಯೂ ಪ್ರೇಮಿಗಳ ಹೃದಯವು
ಕೆಳಗೆ ಬೀಳದೆ ಇರಲಿ ಗಳಿಗೆ ಗಳಿಗೆಯಲ್ಲಿಯೂ ಹೆಚ್ಚಿಸಲಾಯಿತು
ಪ್ರತಿ ತಂತಿ ಮತ್ತು ತಂತಿಯ ಗಂಟಿಗೆ
ನಿರಂತರ ನಿರಂತರವಾಗಿ ತಂತಿಯ ಮುಂಗುರುಳು

ಗೋಜಲು ಗೋಜಲಾಗಿರುವುದಿಲ್ಲ ಎಲ್ಲಿಯವರೆಗೆ
ಮುಂಗುರುಳಿನ ಗಂಟು ದೃಢವಾಗಿರುವುದೋ
ಶೆಹನ್‌ಶಾಹನ ಶತ್ರುವಿನ ಹೃದಯವು ಅಂಟಿಕೊಂಡಿರಲಿ

ದೃಢವಾದ ಗಂಟಿನಂತೆ ಹೂ ಗೊಂಚಲಿನ ಚಿತ್ರಪಟದಂತೆ
ನಿನ್ನ ಸಂಭ್ರಮದ ಸಲುವಾಗಿ ಒಡವೆ ಮತ್ತು ಶೋಭೆಯು
ಕಟ್ಟಿಹಾಕಲಿ ಜಗದ ಬಾದಶಹನನ್ನು
ಸೇವೆಯ ಸಲುವಾಗಿ ಕೈಕಟ್ಟಿ ನಿಂತಿರಲಿ
ಈ ವರ್ಷ ಗಂಟಿನ ಕರಾರು ಬಾಂಧವ್ಯವನ್ನು ಮೂಡಿಸಿದೆ
ಎಂತಹ ಗಂಟು ಎಂದರೆ ವಧುವಿನೊಂದಿಗೆ
ಶ್ರೀಮಂತಿಕೆಯನ್ನು ಕಟ್ಟಿ ಹಾಕಿದಂತೆ
ಅಲ್ಲಾಹನೇ ಯಾರ ಹೆಸರು ಮುರ್ತಜಾ ಎಂದು
ಕರೆದರೋ ಇಹಲೋಕ ಪರಲೋಕದ ಬಾದಶಹನವನು
ಮತ್ತು ಭಗವಂತನು ಅವನ ಕಡೆಗೆ ಇರುವನು
ಈಗ ಬಾದಶಹನು ಜನ ಜನಾಂಗದ ಲೋಕಪಾಲಕನಾಗಿದ್ದು
ದುರ್ಬಲರ ಸಂರಕ್ಷಕ ಮತ್ತು ಯಾಚಕರಿಗೆ ಪ್ರಾಣ ಭಿಕ್ಷೆ ನೀಡುವವನು

ಪೂರ್ವದಿಂದ ಪಶ್ಚಿಮದವರೆಗೆ ನಾಸ್ತಿಕನು ಆಜ್ಞಾಪಾಲಕನಾಗಿದ್ದಾನೆ
ಮತ್ತು ಬಲಾಢ್ಯತೆ ಹಾಗೂ ಯುದ್ಧದಿಂದ ಜಗತ್ತಿನಲ್ಲಿ ಸಂಚರಿಸುವವನಾಗಿದ್ದಾನೆ.
ಅವನ ಕತ್ತಿಯ ಕವಚವು ಶತ್ರುವಿನ ಹೃದಯವನ್ನು ತುಕ್ಕಿನಿಂದ
ಹೊರ ತೆಗೆಯುವುದು ದ್ವೇಷದ ಕನ್ನಡಿಯಿಂದ
ಅವನ ಪುಣ್ಯದಿಂದ ಜಗವು ಉದ್ಯಾನವನದಂತೆ ಬಣ್ಣಗಳಿಂದ
ಕಂಗೊಳಿಸುವುದು ಮತ್ತು ಮದಿರೆಯ ಪಾನದಿಂದ
ಮುಗುಳುನಗೆಯಿಂದ ಕೂಡಿದ ಪುಷ್ಪವು ತಲೆದೂಗಿತು.
ಈ ರೀತಿಯಲ್ಲಿ ನೀನು ಅಭಯದ ಆಶ್ರಯದೊಳಗೆ ಇಡುತ್ತೀಯಾ
ಯಾವ ರೀತಿಯಲ್ಲಿ ನೀನು ಶೂರ ಮತ್ತು ಖ್ಯಾತಿವಂತನಾಗುವಿಯೋ
ಈ ಜಗವೂ ಉಳಿಯುವುದಿಲ್ಲ ಮತ್ತು ಈ ಜಗದ ಜನರೂ ಕೂಡಾ
ಜಗತ್ತು ಅವನ ಪುಣ್ಯದಿಂದ ಪುಷ್ಪಗಳ ಉದ್ಯಾನವನವಾಗುವುದು
ಈ ಉದ್ಯಾನವನದಲ್ಲಿ ಜನರ ದೇಹಗಳ ಸಲುವಾಗಿ
ಪುರುಸೊತ್ತು ಮತ್ತು ಭೋಗವಿಲಾಸ ಬೀರುವುದು ಎಲ್ಲಿಯವರೆಗೆ
ಅಂದರೆ ಎಲ್ಲಿಯವರೆಗೆ ಅವನ ಜೀವ ಬಾಕಿ ಇರುವುದೋ ಅಲ್ಲಿಯವರೆಗೆ
ಅವನ ದರ್ಜೆಯ ವರ್ತುಲವನ್ನು ನಾಶವಾಗುವ
ಕಲೆ ಎಂದು ಭಾವಿಸು ಏಕೆಂದರೆ ದೈವ
ಸಾಕ್ಷಾತ್ಕಾರದ ಛಾಯೆಯ ಅಸ್ತಿತ್ವವು ಬಾಕಿ ಇರುವುದು
ಕಿರೀಟ ಮತ್ತು ಸಿಂಹಾಸನವನ್ನು ಶ್ರೇಷ್ಠವೆಂದು ತಿಳಿ
ಹುದ್ದೆ ಹಾಗೂ ವಂಶಾವಳಿಯನ್ನು ಶ್ರೇಷ್ಠ ಮತ್ತು ಪ್ರಿಯವೆಂದು ತಿಳಿ
ಗಗನವು ಹೃದಯವನ್ನು ಹೀಗೆಂದು ಬೇಡಿದೆ
ಪ್ರಾಮಾಣಿಕ ದೇಶವೇ ಈ ಪ್ರಾರ್ಥನೆಗೆ ಅಸ್ತು ಎಂದು ನುಡಿ

ತಾರೀಖೆ ಅಲಿ ಆದಿಲ್ ಶಾ (ಅಲಿ ಆದಿಲ್ ಶಾ ಚರಿತ್ರೆಯು) ಸಂಪೂರ್ಣಗೊಂಡಿತು ಅದು ಸ್ವರ್ಗವಾಸಿ ಸಯ್ಯದ್ ನೂರುಲ್ಲಾ ನೂರುಲ್ಲಾ ಮರ್ಥದ ಮಸ್ಜದರವರ ಸೃಜನಶೀಲ ಕೃತಿಯಾಗಿದ್ದು ಕಪ್ಪು ಬಿಳುಪಿನಲ್ಲಿ ದಾಖಲಾಗಿದೆ. ಬರಹಗಾರನಿಗೆ ನಾಳೆಯ ಭರವಸೆಯೂ ಇಲ್ಲವಾಗಿದೆ. ಓ ಅಲ್ಲಾಹನೇ ನೀನು ಮುಕ್ತಿಯನ್ನು ನೀಡು ಆ ಮೂವರಿಗೆ ಅಂದರೆ ಸೃಷ್ಟಿಸುವವನಿಗೆ ಮತ್ತು ಬರೆಹಗಾರನಿಗೆ ಮತ್ತು ಓದುಗನಿಗೆ. ಈ ಗ್ರಂಥವು ಸಯ್ಯದ್‌ಕರೀಮ್‌ನ ಹಸ್ತ ೧೧೪೩ನೇ ಇಸವಿಯ ರಮ್‌ಝಾನ್ ತಿಂಗಳ ೨೭ನೇ ತಾರೀಕಿನ ಗುರುವಾರದಂದು ಮಧ್ಯಾಹ್ನದ ಹೊತ್ತಿನಲ್ಲಿ ಬರೆಯಲಾಗಿದೆ ಮತ್ತು ಸಂಪೂರ್ಣಗೊಂಡಿದೆ ಹಾಗೂ ನನ್ನ ಕೆಲಸವೂ ಸುಸಂಬದ್ಧವಾಗಿ ಪೂರ್ಣಗೊಂಡಿತು.

■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ|| ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಡಾ. ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ವಿಜಯಪುರ

ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359